ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭಾಷಾಭಿವೃದ್ಧಿ ಯೋಜನೆ

ಸಂಪುಟ ೪

ಚೆನ್ನಬಸವಣ್ಣ

ಸಂಪಾದಕರು

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್



ಕನ್ನಡ ಅಧ್ಯಯನ ಸಂಸ್ಥೆ

ಗುಲಬರ್ಗಾ ವಿಶ್ವವಿದ್ಯಾಲಯ

ಗುಲಬರ್ಗಾ - ೫೮೫ ೧೦೬

ಕನ್ನಡ ಭಾಷಾಭಿವೃದ್ಧಿಯೋಜನೆ

ಸಂಪುಟ
೪

ಕರ್ನಾಟಕ ಸರಕಾರ

ಚೆನ್ನಬಸವಣ್ಣ

3

ಪ್ರಧಾನ ಸಂಪಾದಕರು
ಡಾ. ಎಚ್.ಟಿ. ಪೋತೆ

ಸಂಪಾದಕರು
ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

CHENNA BASAVANNA SAMPUTA : A Collection of selected articles of Chenna Basavanna, Edited by: Prof. Mallepuram G. Venktesh, Vice Chanellor, Karnataka Samskrut University, Bangalore, Principal Investigator: Dr. H.T. Pote, Professor of Kannada, Gulbarga University, Gulbarga. Published by Kannada Adhyana Samsthe, Gulbarga University, Gulbarga. Funding Agency: Govt. of Karnataka.

ಚೆನ್ನಬಸವಣ್ಣ

ಪ್ರಧಾನ ಸಂಪಾದಕರು	:	**ಡಾ. ಎಚ್.ಟಿ. ಪೋತೆ,** ಪ್ರಾಧ್ಯಾಪಕರು ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
ಸಂಪಾದಕರು	:	**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್,** ಪ್ರಾಧ್ಯಾಪಕರು ಹಾಗೂ ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು

ISBN	:	978-81-921036-3-1
First Edition	:	2011
Pages	:	xxviii + 244 =272
©	:	Institute of Kannada Studies, Gulbarga University, Gulbarga
Paper used	:	70 gsm. N.S. Maplitho
Price	:	**Rs. 200/-**

ಪ್ರಥಮ ಮುದ್ರಣ	:	೨೦೧೧
ಪುಟಗಳು	:	xxviii +೨೪೪=೨೭೨
©	:	ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
ಬಳಸಿದ ಕಾಗದ	:	೭೦ gsm. ಎನ್.ಎಸ್. ಮ್ಯಾಪಲಿಥೋ
ಬೆಲೆ	:	**ರೂ. ೨೦೦/-**

ಮುದ್ರಣ
ಇಳಾ ಮುದ್ರಣ
ನಂ. ೩೬, ೪೦ ಅಡಿ ರಸ್ತೆ
ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು -೫೬೦ ೦೨೬
ದೂರವಾಣಿ : ೨೬೭೫೭೧೫೯

ಸಲಹಾ ಸಮಿತಿ

ಅಧ್ಯಕ್ಷರು

ಪ್ರೊ. ಈ. ಟಿ. ಪುಟ್ಟಯ್ಯ

ಕುಲಪತಿಗಳು

ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ

ಉಪಾಧ್ಯಕ್ಷರು

ಪ್ರೊ. ಎಸ್.ಎಲ್. ಹಿರೇಮಠ

ಕುಲಸಚಿವರು

ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ

ಸಂಚಾಲಕರು

ಪ್ರೊ. ಬಸವರಾಜ ಸಬರದ

ಪ್ರೊ. ವೀರಣ್ಣದಂಡೆ

ಸದಸ್ಯರು

ಡಾ. ಮ.ಗು. ಬಿರಾದಾರ

ಡಾ. ವೀರಣ್ಣ ರಾಜೂರ

ಡಾ. ವಸಂತ ಕುಷ್ಟಗಿ

6

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿ

ಕರ್ನಾಟಕ ಸರಕಾರ

ಕರ್ನಾಟಕ ಸರಕಾರ
ಬೆಂಗಳೂರು-೫೬೦ ೦೦೧
ದಿನಾಂಕ: ೧೫-೨-೨೦೧೧

ಶುಭಹಾರೈಕೆ

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಯೋಜನೆಯಡಿಯಲ್ಲಿ ಸಿದ್ಧಪಡಿಸಿರುವ ಹನ್ನೆರಡು ಹೊಸ ಸಂಪುಟಗಳ ಬಿಡುಗಡೆ ಕಾರ್ಯಕ್ರಮವನ್ನು ೨೦೧೧ ರಂದು ಹಮ್ಮಿಕೊಂಡಿರುವುದು ಔಚಿತ್ಯಪೂರ್ಣ.

ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನ ದೊರೆತಿದ್ದು, ಈ ಹಿನ್ನೆಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ ಎರಡು ಕೋಟಿ ರೂ. ಅನುದಾನವನ್ನು ಮೀಸಲಿಟ್ಟು, ಈಗಾಗಲೇ ಒಂದು ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯೂ ಸೇರಿದಂತೆ ನಾಡಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಈ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿರುವುದು ಮೆಚ್ಚತಕ್ಕ ಸಂಗತಿ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ವಚನಸಾಹಿತ್ಯ, ದಾಸಸಾಹಿತ್ಯ, ತತ್ವಪದ ಸಾಹಿತ್ಯ, ದಲಿತ ಬಂಡಾಯ ಸಾಹಿತ್ಯ, ಜಾನಪದ, ಶಾಸನ, ಇತಿಹಾಸ, ಹಸ್ತಪ್ರತಿ, ಸಾಹಿತ್ಯಚರಿತ್ರೆ, ತಂತ್ರಜ್ಞಾನ, ಕನ್ನಡೇತರರಿಗೆ ಕನ್ನಡ ಪರಿಚಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ರೂಪಿಸಲಾದ ವಿವಿಧ ಕ್ರಿಯಾಯೋಜನೆಗಳು ಹೆಚ್ಚು ಉಪಯುಕ್ತಕಾರಿಯಾಗಿವೆ. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಕನ್ನಡಕ್ಕೆ ಹೊಸ ಆಯಾಮಗಳನ್ನು ಜೋಡಿಸಿದೆ. ಈ ಕಾರ್ಯದಲ್ಲಿ ನಾಡಿನ ಅನೇಕ ಸಂಶೋಧನಾಸಕ್ತರು ಪಾಲುಗೊಂಡಿದ್ದು, ಅವರ ಎಲ್ಲ ಸಂಶೋಧನೆ, ಅಧ್ಯಯನ, ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತಿರುವುದು ಶ್ಲಾಘನೀಯ.

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಸಮೃದ್ಧವೂ ಪ್ರಬುದ್ಧವೂ ಆದ ಕನ್ನಡ ಭಾಷಾ ಸಾಹಿತ್ಯ ತನ್ನ ಭಾಷಿಕ, ಸಾಂಸ್ಕೃತಿಕ, ಸಾಹಿತ್ಯಿಕ ಅನನ್ಯತೆಯಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಬೆಳವಣಿಗೆಗೆ ಕನ್ನಡದ ಅಸಂಖ್ಯಾತ ಕವಿಗಳೂ,

ಲೇಖಕರೂ, ಕಲಾವಿದರೂ ಕಾರಣರಾಗಿದ್ದಾರೆ. ಕನ್ನಡ ಭಾಷೆ ಸೃಜನಶೀಲವಾಗಿ ಮತ್ತು ಶಾಸ್ತ್ರೀಯವಾಗಿ ಶ್ರೇಷ್ಠಮಟ್ಟದ ಬೆಳವಣಿಗೆಯನ್ನು ಹೊಂದಿದೆ. ವೈವಿಧ್ಯಪೂರ್ಣವಾದ ಒಂದು ದೊಡ್ಡ ಪರಂಪರೆ ನಮ್ಮ ಹಿಂದಿದೆ. ಈ ಮಹಾಪರಂಪರೆಯ ಮುಂಚೂಣಿಯಲ್ಲಿ ನಾವಿದ್ದೇವೆ. ಕನ್ನಡವನ್ನು ಇನ್ನೂ ಎತ್ತರಕ್ಕೆ ತೆಗೆದುಕೊಂಡುಹೋಗುವ ಬಹುಮುಖ್ಯ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕನ್ನಡ ಕಟ್ಟುವ ಈ ಮಹತ್ವದ ಕೈಂಕರ್ಯಕ್ಕೆ ಎಲ್ಲರೂ ಕೈಜೋಡಿಸಬೇಕಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ **ಶರಣ ಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣಾ ಯೋಜನೆ**ಯಡಿಯಲ್ಲಿ ಸಿದ್ಧಪಡಿಸಿರುವ ಹನ್ನೆರಡು ಬೃಹತ್ ಸಂಪುಟಗಳನ್ನು ಪ್ರಕಟಪಡಿಸಲು ಶ್ರಮಿಸಿದ ಎಲ್ಲರನ್ನೂ ಅಭಿನಂದಿಸಿ ಈ ಕೃತಿಗಳು ನಾಡಿನ ಸಹೃದಯರ ಮನ ಗೆಲ್ಲಲಿ ಎಂದು ಹಾರೈಸಿ ಶುಭ ಕೋರುತ್ತೇನೆ.

ಬಿ.ಎಸ್. ಯಡಿಯೂರಪ್ಪ

ಮುಖ್ಯಮಂತ್ರಿ

ಗೋವಿಂದ ಎಂ. ಕಾರಜೋಳ
ಸಣ್ಣ ನೀರಾವರಿ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರಕಾರ

ನಂ. ೩೩೦, ೩ನೇ ಮಹಡಿ,
ವಿಧಾನಸೌಧ,
ಬೆಂಗಳೂರು ೫೬೦ ೦೦೧
ದಿನಾಂಕ: ೧೫-೨-೨೦೧೧

ಶುಭಹಾರೈಕೆ

ಕನ್ನಡ ನಾಡು-ನುಡಿಗೆ ಸುದೀರ್ಘವಾದ ಇತಿಹಾಸವಿದೆ. ಭವ್ಯ ಪರಂಪರೆಯನ್ನು ಈ ನಾಡು ಹೊಂದಿದೆ. ಭಾರತೀಯ ಭಾಷೆಗಳಲ್ಲಿಯೇ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಹೆಗ್ಗಳಿಕೆಗೆ ನಮ್ಮ ಭಾಷೆ ಪಾತ್ರವಾಗಿದೆ. ಈ ನಾಡಿನ ಕವಿಗಳು, ಸಾಹಿತಿಗಳು, ಕಲಾವಿದರು, ಸಂಶೋಧಕರು, ಶಿಕ್ಷಣತಜ್ಞರು, ವಿಜ್ಞಾನಿಗಳು ವಿಶ್ವದಾದ್ಯಂತ ಹೆಸರು ಮಾಡಿದ್ದಾರೆ.

ಕನ್ನಡ ನಾಡು-ನುಡಿಗೆ ಸಂಬಂಧಪಟ್ಟ ಮಾತುಗಳು ರಾಮಾಯಣ ಮಹಾಭಾರತಗಳಲ್ಲಿ ಕಂಡುಬರುತ್ತವೆ. ಕ್ರಿಸ್ತಪೂರ್ವದಿಂದಲೇ ಕನ್ನಡ ಭಾಷೆಯ ಅಸ್ತಿತ್ವವನ್ನು ಸಂಶೋಧಕರು ಗುರುತಿಸಿದ್ದಾರೆ. ಕ್ರಿಸ್ತಶಕ ೪೫೦ರ ಹಲ್ಮಿಡಿ ಶಾಸನ ಕನ್ನಡದ ಉಪಲಬ್ಧವಿರುವ ಮೊದಲ ಲಿಖಿತ ರೂಪದ ಶಾಸನ. ಕನ್ನಡದ ಆದಿ ಮಹಾಕವಿ ಪಂಪನಿಗಿಂತ ಹಿಂದೆಯೇ ಒಂದು ಸಮೃದ್ಧವಾದ ಸಾಹಿತ್ಯ ಪರಂಪರೆಯನ್ನು ಕನ್ನಡ ಕಂಡಿದೆ ಎಂಬುದಕ್ಕೆ ಸಂಶೋಧಕರು ಸಾಕಷ್ಟು ಪುರಾವೆಗಳನ್ನು ನೀಡಿದ್ದಾರೆ. ಶಾತವಾಹನರು, ಕದಂಬರು, ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಯೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು ಈ ನಾಡಿನ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಸಂಗೀತ ಮೊದಲಾದ ಕ್ಷೇತ್ರಗಳಲ್ಲಿ ಅಪೂರ್ವ ಕೊಡುಗೆ ನೀಡಿದ್ದಾರೆ.

ಇಂಥ ಅಪೂರ್ವ ಪರಂಪರೆ ಹೊಂದಿರುವ ಕನ್ನಡ ಭಾಷೆಯನ್ನು ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸಿದೆ. ಕನ್ನಡದ ಕೆಲಸಕ್ಕೆ ಕೈಜೋಡಿಸಿರುವ ಕರ್ನಾಟಕ ರಾಜ್ಯ ಸರ್ಕಾರ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗೆ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕಟ್ಟುವ ಕೆಲಸ ಭರದಿಂದ ನಡೆದಿದೆ. ಕನ್ನಡದ ಇತಿಹಾಸ, ಭಾಷೆ, ಸಾಹಿತ್ಯ, ಪರಂಪರೆ, ಜಾನಪದ, ವಿಜ್ಞಾನ, ಮಾನವಿಕ ಇನ್ನಿತರ ಅಂಶಗಳನ್ನು ಕುರಿತ ಹೊತ್ತಗೆಗಳು ಸಿದ್ಧವಾಗುತ್ತಿವೆ. ಈ ಯೋಜನೆಯ **ಶರಣ ಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣಾ ಯೋಜನೆಯ** ಅಡಿಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಶರಣಸಾಹಿತ್ಯಕ್ಕೆ ಸಂಬಂಧಿಸಿದ ನಾಡಿನ ವಿವಿಧ ಲೇಖಕರು ಬರೆದ ವಿಮರ್ಶಾ ಲೇಖನಗಳ ಒಟ್ಟು ಹನ್ನೆರಡು ಸಂಪುಟಗಳಲ್ಲಿ

ಈಗ ಏಳು ಬೃಹತ್ ಸಂಪುಟಗಳು ಪ್ರಕಟವಾಗುತ್ತಿವೆ ಎಂಬ ವಿಚಾರ ತಿಳಿದು ನನಗೆ ತುಂಬಾ ಸಂತೋಷವಾಗಿದೆ.

ಕನ್ನಡದ ತೇರು ಎಳೆಯುವ ಮಹತ್ಕಾರ್ಯದಲ್ಲಿ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿ, ಉತ್ತೇಜಿಸಿ ಆ ಎಲ್ಲ ವಿಶೇಷ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ನಿರ್ದೇಶನ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ರಮೇಶ್ ಬಿ. ಝಳಕಿ ಅವರನ್ನು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ತಿಳಿದಾಗಲಂತೂ ನನಗೆ ಇನ್ನಷ್ಟು ಮಹದಾನಂದವಾಗಿದೆ. ಇದರ ಪೂರ್ಣ ಪ್ರಯೋಜನವನ್ನು ನಾಡಿನ ಜನತೆ ಪಡೆಯುವಂತಾಗಲಿ.

ರಾಜ್ಯ ಸರ್ಕಾರದ ಈ ಯೋಜನೆ ಕನ್ನಡ ನಾಡು–ನುಡಿ ಸಂಸ್ಕೃತಿಯ ಪುನರುತ್ಥಾನಕ್ಕೆ ಕಾರಣವಾಗಿದೆ. ಈ ಮೂಲಕ ವಿವಿಧ ಜ್ಞಾನಶಿಸ್ತುಗಳಲ್ಲಿ ಕನ್ನಡಿಗರ ಅಧ್ಯಯನ ಆಸಕ್ತಿ ಬೆಳೆಯಲು ವಿವಿಧ ಕ್ರಿಯಾ ಯೋಜನೆಗಳು ಸಹಕಾರಿಯಾಗಿವೆ. ಇದರಿಂದ ಹೊಸ ಚೈತನ್ಯವನ್ನು ಹುಟ್ಟುಹಾಕುವ ಹೊಸ ಸಂಚಲನವನ್ನು ಉಂಟುಮಾಡುವ ಅನನ್ಯ ಪರಂಪರೆಯೊಂದಕ್ಕೆ ಚಾಲನೆ ಸಿಕ್ಕಂತಾಗಿದೆ.

ಈ ಪರ್ವಕಾಲದಲ್ಲಿ ನಾವಿದ್ದೇವೆ ಎನ್ನುವುದು ಸಂತಸದ ಸಂಗತಿ. ಕನ್ನಡದ ಅಪೂರ್ವ ಪರಂಪರೆಯನ್ನು ಉಳಿಸಿ ಬೆಳೆಸುವ ಮಹತ್ಕಾರ್ಯದಲ್ಲಿ ಎಲ್ಲರೂ ಕೈಜೋಡಿಸಿದ್ದಾರೆ. ನಾಡು–ನುಡಿಯ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ಸದಾ ಸಹಕಾರ ನೀಡುವುದು. ಕನ್ನಡಿಗರಿಗೆ ಒಳಿತಾಗಲಿ, ಸರ್ವರೂ ಸುಖ ಶಾಂತಿಯಿಂದ ಬದುಕಿ ಬಾಳಲೆಂದು ಹೃದಯತುಂಬಿ ಹಾರೈಸುವೆ.

ಸಹಿ/–

ಗೋವಿಂದ ಎಂ. ಕಾರಜೋಳ

ಸಚಿವರು

ರಮೇಶ್ ಬಿ. ಝುಳಕಿ
ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ
ಹಾಗೂ ವಾರ್ತಾ ಇಲಾಖೆ

ಕರ್ನಾಟಕ ಸರಕಾರ

ಕೊಠಡಿ ಸಂಖ್ಯೆ ೨,
ನೆಲಮಹಡಿ, ವಿಕಾಸಸೌಧ,
ಬೆಂಗಳೂರು-೫೬೦ ೦೦೧
ದಿನಾಂಕ: ೧೫-೨-೨೦೧೧

ಶುಭಹಾರೈಕೆ

ದ್ರಾವಿಡ ಭಾಷಾ ಪರಂಪರೆಯ ನಡುವೆ ಕನ್ನಡ ಭಾಷೆಯ ಶ್ರೀಮಂತಿಕೆ ಮತ್ತು ಅದರ ಸಾಂಸ್ಕೃತಿಕ ವೈವಿಧ್ಯತೆ ಎದ್ದು ಕಾಣುವಂತಿದೆ. ತಮಿಳು ಭಾಷೆಯ ಪರಂಪರೆಗೆ ಸರಿಸಮಾನವಾಗಿಯೇ ಬೆಳೆದು ಬಂದಿರುವ ಕನ್ನಡಕ್ಕೆ ನಿಖರವಾಗಿಯೇ ಒಂದೂವರೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವಿರುತ್ತದೆ. ಕ್ರಿ.ಶ. ೪೫೦ ಹಲ್ಮಿಡಿ ಶಾಸನದ ಕಾಲಕ್ಕೆ ಕನ್ನಡ ಕರ್ನಾಟಕದಲ್ಲಿ ಬಳಕೆಯಲ್ಲಿತ್ತು. ವ್ಯಾಸಕೃತ ಮಹಾಭಾರತದಲ್ಲಿಯೇ ಕರ್ನಾಟಕದ ಪ್ರಸ್ತಾಪವಿದೆ. ಶಾತವಾಹನರು, ಕದಂಬರು ಇಲ್ಲಿಯ ಪ್ರಾಚೀನ ಅರಸು ಮನೆತನದವರೆಂದು ಇತಿಹಾಸಕಾರರು ಗುರುತಿಸಿರುತ್ತಾರೆ. ಗ್ರೀಕ್ ಭೂಗೋಳಶಾಸ್ತ್ರದ ಟಾಲೆಮಿಯ ಪ್ರವಾಸಿ ಬರೆವಣಿಗೆಯಲ್ಲಿಯೇ ಕನ್ನಡನಾಡಿನ ಅನೇಕ ಪ್ರದೇಶಗಳ ಪ್ರಸ್ತಾಪವಿರುವುದನ್ನು ಸಂಶೋಧಕ ಗೋವಿಂದ ಪೈ ಅವರು ಬೆಳಕಿಗೆ ತಂದರು. ಅಶೋಕನು ದಕ್ಷಿಣ ಭಾರತದಲ್ಲಿ ಹಾಕಿಸಿದ ಶಾಸನಗಳು ಮೊದಲು ದೊರಕಿರುವುದು ಕರ್ನಾಟಕದಲ್ಲಿಯೇ! ಚಿತ್ರದುರ್ಗದ ಸಿದ್ಧಾಪುರ, ರಾಯಚೂರಿನ ಮಸ್ಕಿ ಭಾಗದಲ್ಲಿ ದೊರಕಿದ ಶಾಸನದಿಂದಲೇ ಅಶೋಕನಿಗೆ 'ದೇವಾನಾಂಪ್ರಿಯ' ಎಂಬ ಬಿರುದು ಇದ್ದಿತೆಂದು ತಿಳಿದು ಬರುತ್ತದೆ. ಅಶೋಕನು ದಕ್ಷಿಣ ಭಾರತದ ಕರ್ನಾಟಕದಲ್ಲಿಯೇ ತನ್ನ ಶಾಸನಗಳನ್ನು ಹಾಕಿಸಿದನೆಂದರೆ ಕರ್ನಾಟಕದಲ್ಲಿಯ ಭಾಷಾಪ್ರದೇಶಗಳು ಚೆನ್ನಾಗಿಯೇ ನೆಲೆಯೂರಿದ್ದವೆಂದು ತಿಳಿಯಬಹುದಾಗಿರುತ್ತದೆ. ಇಷ್ಟೇ ಅಲ್ಲದೆ ಕಾಳಿದಾಸನ ಕಾಲ ನಿಗದಿ ಮಾಡುವುದರಲ್ಲಿಯೂ ಮೊದಲು ಸಹಾಯಕ್ಕೆ ಬಂದದ್ದು ಕರ್ನಾಟಕದ ಐಹೊಳೆಯ ಮೇಗುತಿ ದೇವಾಲಯದ ರವಿಕೀರ್ತಿಯ ಐದನೆಯ ಶತಮಾನದ ಶಾಸನ. 'ಅಯ್ಯಾಹೊಳೆಯ' ಐನೂರು ಜನ ವ್ಯಾಪಾರಸ್ಥರು ದಕ್ಷಿಣ ಭಾರತದ ವ್ಯಾಪಾರವನ್ನೆಲ್ಲ ನಿಯಂತ್ರಿಸುತ್ತಿದ್ದರಂತೆ. ಅಂದರೆ ಭಾರತದ ಇತಿಹಾಸಕ್ಕೆ ತನ್ನದೇ ಕಾಣಿಕೆ ನೀಡಿದ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಈ ಹೆಗ್ಗುರುತುಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದರ ಕಾರಣವೆಂದರೆ, ಭಾರತ ಸರ್ಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ನೀಡಿರುವುದು, ಎಲ್ಲಾ ರೀತಿಯಿಂದಲೂ ಸಮಂಜಸ ಹಾಗೂ ಸೂಕ್ತ ಎಂಬುದಕ್ಕಾಗಿ. ೨೦೦೮ರಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ

ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೂ ಎರಡೆರಡು ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ಅದರಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿ ಸಂವರ್ಧನೆಯ ಯೋಜನೆಗಳು ನೆರವೇರುವಂತಾಗಲಿ ಎಂದು ತಿಳಿಸಿರುತ್ತಾರೆ. ಅದರಂತೆ ಕರ್ನಾಟಕದ ವಿವಿಧ ಭಾಗದ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಕನ್ನಡ ಸಾಹಿತ್ಯ ಪರಂಪರೆಯನ್ನು ಕುರಿತಾಗಿ ಅನೇಕ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತವೆ. ಈ ಹಿನ್ನೆಲೆಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು **ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣಾ ಯೋಜನೆಯನ್ನು** ಹಮ್ಮಿಕೊಂಡು ಶರಣಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳ ಹನ್ನೆರಡು ಸಂಪುಟಗಳಲ್ಲಿ ಈಗ ಏಳು ಸಂಪುಟಗಳನ್ನು ಮೊದಲ ಕಂತಾಗಿ ಪ್ರಕಟಿಸಿದೆ. ಕನ್ನಡ ಆಸಕ್ತರು ನಮ್ಮ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಕುರಿತಂತೆ ಸಮಗ್ರ ಅರಿವನ್ನು ಪಡೆಯುವಂತೆ ರಚಿತವಾಗಿರುತ್ತವೆ. ಇಂಥದೊಂದು ಯೋಜನೆಯನ್ನು ಕೈಗೆತ್ತಿಕೊಂಡು ಅದರ ಮೊದಲ ಹಂತದ ಕಾರ್ಯ ಮುಗಿಸಿ, ಮುಂದಿನ ಹಂತದಲ್ಲಿಯೂ ಈ ಬಗೆಯ ಇನ್ನಷ್ಟು ಗ್ರಂಥಗಳ ಪ್ರಕಟಣೆಯ ಯೋಜನೆಯನ್ನು ಕೈಗೆತ್ತಿಕೊಂಡು ಉತ್ಸಾಹದಿಂದ ಮುಂದುವರೆಸುತ್ತಿರುವ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರು ಹಾಗೂ ಸಂಪುಟದ ಪ್ರಧಾನ ಸಂಪಾದಕರೂ ಆದ ಡಾ. ಎಚ್.ಟಿ. ಪೋತೆ ಅವರನ್ನೂ ಕುಲಪತಿ ಪ್ರೊ. ಈ.ಟಿ. ಪುಟ್ಟಯ್ಯ ಅವರನ್ನೂ ಮತ್ತು ಕುಲಸಚಿವ ಪ್ರೊ. ಎಸ್.ಎಲ್. ಹಿರೇಮಠ ಅವರನ್ನೂ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರಾದ ಡಾ. ವೀರಣ್ಣ ದಂಡೆಯವರನ್ನು ನಾನು ಕರ್ನಾಟಕ ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ.

ಕನ್ನಡ ಸಾಹಿತ್ಯದ ಎರಡು ಕಣ್ಣುಗಳೆಂದರೆ ವಚನ ದಾಸ ಪ್ರಕಾರಗಳು. ಅದರಲ್ಲೂ ವಚನಕಾರರ ಸಮಾಜಮುಖಿ ಚಿಂತನೆ ಜಗತ್ತಿನ ಇತಿಹಾಸದಲ್ಲಿ ಅವಿಸ್ಮರಣೀಯವಾದುದು. ಬುದ್ಧನ ತರುವಾಯ ಸಾಮಾನ್ಯರ ಕೊರಳಾಗಿ ಹೊರಹೊಮ್ಮಿದ ಸಾಹಿತ್ಯ ಪ್ರಕಾರವಿದು. ಈ ಚಿಂತನೆಯನ್ನು ವಿಮರ್ಶಿಸಿ ಬರೆದ ನಾಡಿನ ವಿದ್ವಾಂಸರ ಲೇಖನಗಳನ್ನು ಒಂದೆಡೆ ಸಂಕಲಿಸಿ ಬೃಹತ್ ಗ್ರಂಥರೂಪದಲ್ಲಿ ಪ್ರಕಟಿಸುತ್ತಿರುವುದು ಶ್ಲಾಘನೀಯವಾಗಿದೆ.

ಸಹಿ/–

ರಮೇಶ್ ಬಿ. ಝಳಕಿ

ಕಾರ್ಯದರ್ಶಿ

ಮನು ಬಳಿಗಾರ್
ಕ.ಆ.ಸೇ
ನಿರ್ದೇಶಕರು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕರ್ನಾಟಕ ಸರಕಾರ

ಕನ್ನಡ ಭವನ,
ಜೆ.ಸಿ. ರಸ್ತೆ,
ಬೆಂಗಳೂರು-೫೬೦ ೦೦೨
ದಿನಾಂಕ: ೧೫-೨-೨೦೧೧

ನಲ್ನುಡಿ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯೇ ಕುತೂಹಲಕರ ಮತ್ತು ವೈವಿಧ್ಯಮಯವಾದುದು. ಹತ್ತನೆಯ ಶತಮಾನ ಮತ್ತು ಅದರ ಪೂರ್ವಯುಗವನ್ನು ವೀರಯುಗ ಎಂದು ವಿದ್ವಾಂಸರು ಕರೆದಿರುವುದಲ್ಲದೆ, ಆ ಕಾಲಕ್ಕೆ ಬಂದ ಕೃತಿಗಳೆಲ್ಲವೂ ಕ್ಷಾತ್ರಧರ್ಮ ಮತ್ತು ಅದರ ಮೌಲ್ಯಗಳನ್ನೇ ಹೇಳುವಂಥವಾಗಿರುತ್ತವೆ. ಪಂಪ ಬರೆದದ್ದು 'ವಿಕ್ರಮಾರ್ಜುನವಿಜಯ'ವಾದರೆ ರನ್ನ ಬರೆದದ್ದು 'ಸಾಹಸಭೀಮವಿಜಯ'. ಇದೆಲ್ಲಕ್ಕಿಂತ ಪೂರ್ವದಲ್ಲಿ ಕವಿರಾಜಮಾರ್ಗಕಾರನು ಕನ್ನಡ ನಾಡಿನ ಜನಗಳನ್ನು ಕಲಿಗಳೆಂದೂ, ಕವಿಗಳೆಂದೂ ಮುಕ್ತಕಂಠದಿಂದ ಪ್ರಶಂಸಿಸುತ್ತಾನೆ. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಕುರಿತು ಆರಂಭ ಕಾಲಕ್ಕೆ ಎಲ್ಲ ಕವಿಗಳು ಹೇಳುವ ಮಾತಿನಲ್ಲಿ ಆಶ್ಚರ್ಯಕರ, ಕುತೂಹಲಕರ ಹೊಂದಾಣಿಕೆ ಇದೆ. ಕವಿರಾಜಮಾರ್ಗಕಾರನು ಕನ್ನಡ ಜನರು ಕವಿಗಳೂ ಕಲಿಗಳೂ ಆಗಿದ್ದರೆಂದರೆ, ಪಂಪ ತಾನೇ ಸತ್ಕವಿ, ಕಲಿ ಎಂದು ಹೇಳಿಕೊಳ್ಳುತ್ತಾನೆ. ಪಂಪ, ರನ್ನರ ಕೃತಿಗಳಲ್ಲಿ ಬರುವ ಸ್ತ್ರೀಪಾತ್ರಗಳು ಕೂಡ ಪುರುಷ ಪರಾಕ್ರಮವನ್ನು ಪುರಸ್ಕರಿಸಿ ಮಾತನಾಡುತ್ತವೆ. ಇದು ಕನ್ನಡನಾಡಿನ ಹತ್ತನೆ ಶತಮಾನ ಮತ್ತು ಅದರ ಪೂರ್ವ ವಿವರವಾದರೆ ಹನ್ನೆರಡನೆಯ ಶತಮಾನದ ಸಂಗತಿಯೇ ಬೇರೆ ಅರಮನೆಯಲ್ಲಿ ಬೆಳೆದ ಸಾಹಿತ್ಯ ಸಾಮಾನ್ಯರ ನಡುವೆ ಬಂದು ಚಳವಳಿಯ ರೂಪ ಪಡೆದುಕೊಂಡಿತು. ಪಾಂಡಿತ್ಯಪೂರ್ಣ ಸಾಹಿತ್ಯಸೃಷ್ಟಿಗಿಂತ ಜನಸಾಮಾನ್ಯರಿಗೆ ಅರ್ಥವಾಗುವ ಸಂಗತಿ ಮುಖ್ಯವೆಂಬ ಧೋರಣೆಯ ರಚನಕಾರರ ಪ್ರಭುತ್ವವನ್ನೇ ಪ್ರತಿಭಟಿಸಿ ಹೊರಬಂದದ್ದು ಆಶ್ಚರ್ಯಕರ ಬೆಳವಣಿಗೆ, ಬಸವಣ್ಣ, ಅಕ್ಕಮಹಾದೇವಿ, ಹರಿಹರ, ರಾಘವಾಂಕ ಇವರೆಲ್ಲ ಅರಸನ ವೈಭವದ ಆಸ್ಥಾನವನ್ನು ಬಿಟ್ಟು ಬಂದವರೆ. ತಮ್ಮ ಸಾಹಿತ್ಯ ಕೃತಿಗಳಲ್ಲಿ ಮಾನವೀಯತೆ, ಸರ್ವಸಮಾನತೆ, ಭಕ್ತಿ ಮತ್ತು ಅಧ್ಯಾತ್ಮವನ್ನು ಸಂಸ್ಥಾಪಿಸಿದವರು; ಆದಕ್ಕನುಗುಣವಾದ ಕಥೆ ಹಾಗೂ ಪಾತ್ರಗಳನ್ನೇ ಸೃಷ್ಟಿಸಿದರು.

ವಚನಕಾರರ ಕಾಲಕ್ಕೆ ಸಾಮಾನ್ಯ ಜನರ ನಡುವೆ ಬಂದ ಸಾಹಿತ್ಯವು ದಾಸವರೇಣ್ಯರ ಕಾಲಕ್ಕೆ ಜನಸಮೂಹದ ಅಂತರಂಗವನ್ನು ರಾಗ, ತಾಳಗಳ ಮುಖೇನ ಕಾಂತಾಸಮ್ಮಿತ

ಭಾವದ ಮೂಲಕವೇ ಮುಟ್ಟತೊಡಗಿತು. 'ವೀರನಾರಾಯಣನೇ ಕವಿ, ಲಿಪಿಕಾರ ಕುವರವ್ಯಾಸ, ಕೇಳುವ ಸೂರಿಗಳೆ ಜಂಗಮ ಜನಾರ್ಧನರು' ಎನ್ನುತ್ತಾನೆ ಕುಮಾರವ್ಯಾಸ. ಹೀಗೆ ಅರಮನೆಯಿಂದ ಜನಸಾಮಾನ್ಯರ ಕಡೆಗೆ ಪ್ರವಹಿಸಿದ ಕನ್ನಡ ಸಾಹಿತ್ಯ ಪರಂಪರೆಯೇ ವೈವಿಧ್ಯಮಯವಾದುದು. ಆಧುನಿಕ ಕನ್ನಡ ಸಂದರ್ಭದ ಕವಿ, ಕಥೆಗಾರ, ಕಾದಂಬರಿಕಾರರ ಪ್ರತಿಭಾನ್ವಿತ ಬರವಣಿಗೆಯಂತೂ ಸಮಸ್ತ ಕನ್ನಡಿಗರ ಅರಿವಿಗೆ ಬಂದಿರುವಂಥದ್ದೆ. ಹೀಗೆ ಒಂದೂವರೆ ಸಾವಿರ ವರ್ಷಗಳ ಸ್ಪಷ್ಟ ಮತ್ತು ಸಮಗ್ರ ಇತಿಹಾಸವಿರುವ ಕನ್ನಡ ಭಾಷಾ ಶ್ರೀಮಂತಿಕೆಗೆ ೨೦೦೮ರಲ್ಲಿ ಭಾರತ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ನೀಡಿತು. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವೂ ಕೂಡ ಕನ್ನಡನಾಡಿನ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ತಲಾ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿತು. ಈಗ ಎಲ್ಲ ವಿಶ್ವವಿದ್ಯಾಲಯಗಳು ಕನ್ನಡ ಸಾಹಿತ್ಯ, ಸಂಸ್ಕೃತಿ ತತ್ಸಂಬಂಧದ ಸಂಶೋಧನೆಯ ಯೋಜನೆಗಳಲ್ಲಿ ತೊಡಗಿಕೊಂಡಿವೆ. ಈ ನಿಟ್ಟಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು **ಶರಣ ಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣಾ ಯೋಜನೆಯನ್ನು** ಕೈಗೆತ್ತಿಕೊಂಡು ಅದರ ಮೊದಲ ಹಂತದ ಏಳು ಬೃಹತ್ ಸಂಪುಟಗಳನ್ನು ಬಿಡುಗಡೆ ಮಾಡುತ್ತಿದೆ. ಈ ಯೋಜನೆಯ ಯಶಸ್ಸಿಗೆ ಕಾರಣರಾದ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಈ.ಟಿ. ಪುಟ್ಟಯ್ಯ ಅವರಿಗೆ, ಕುಲಸಚಿವರಾದ ಪ್ರೊ. ಎಸ್.ಎಲ್. ಹಿರೇಮಠ ಅವರಿಗೆ ಪ್ರಾಧ್ಯಾಪಕರೂ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ವೀರಣ್ಣ ದಂಡೆ ಅವರಿಗೆ, ಪ್ರಾಧ್ಯಾಪಕರೂ ಹಾಗೂ ಈ ಯೋಜನೆಯ ಸಂಚಾಲಕರು, ಸಂಪುಟದ ಪ್ರಧಾನ ಸಂಪಾದಕರಾದ ಡಾ. ಎಚ್.ಟಿ. ಪೋತೆ ಅವರಿಗೆ ಸಂಪುಟದ ಸಂಪಾದಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪರವಾಗಿ ನಾನು ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಸಹಿ/–

ಮನು ಬಳಿಗಾರ್

ನಿರ್ದೇಶಕರು

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಕಾರ್ಯಸೌಧ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ

ಕುಲಪತಿಗಳ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯವು ಹೈದ್ರಾಬಾದ ಕರ್ನಾಟಕ ಪ್ರದೇಶದ ಹೆಮ್ಮೆಯ ವಿದ್ಯಾ ಸಂಸ್ಥೆಯಾಗಿದೆ. ೧೯೭೦-೭೧ ರಲ್ಲಿ ಇದು ಕರ್ನಾಟಕ ವಿಶ್ವವಿದ್ಯಾಲಯದ ಒಂದು ಸ್ನಾತಕೋತ್ತರ ಕೇಂದ್ರವಾಗಿ ಮುಂದೆ ೧೯೮೦ ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು. ಕಳೆದ ಮೂವತ್ತು ವರ್ಷಗಳಿಂದ ಈ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ ಹಾಗೂ ಪ್ರಕಟನೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ, ಬೋಧನೆ ಮತ್ತು ಸಂಶೋಧನೆ ಇವು ಆಕರಗೊಳ್ಳುವುದು ಪ್ರಕಟನೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು ಅನೇಕ ಮೌಲಿಕವಾದ ಪ್ರಕಟಣೆಗಳನ್ನು ಪ್ರಕಟಿಸಿದೆ. ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳು ಇದುವರೆಗೆ ನಾಲ್ಕು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದುದು ತುಂಬ ಹೆಮ್ಮೆಯ ಸಂಗತಿಯಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನ ವಿದ್ಯಾರ್ಥಿಗಳು ಬರೆದ ಸಂಶೋಧನ ಲೇಖನಗಳ ಸಂಕಲನ 'ಜ್ಞಾನ ಗಂಗಾ' ಸಂಚಿಕೆಗಳಂತೂ ತುಂಬ ಜನಪ್ರಿಯವಾಗಿವೆ. ಒಟ್ಟಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ಅಪೂರ್ವ ಪ್ರಕಟನೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆದಿದೆ.

ಕರ್ನಾಟಕ ಸರಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿ ಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು, ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು ಕೀರ್ತನಕಾರರ ಸ್ಮಾರಕಗಳು, ಸಾಂಸ್ಕೃತಿಕ ಪದಕೋಶ, ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಆಧುನಿಕ ನಾಟಕಗಳು, ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನೆ ಈ ಮುಂತಾದ ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ

ನಡೆಸುತ್ತಿರುವರು. ಈ ಯೋಜನೆಗಳಲ್ಲಿ ಶರಣ ಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನಾ ಯೋಜನೆಯೂ ಒಂದು. ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ, ಚೆನ್ನಬಸವಣ್ಣ, ಶೂನ್ಯಸಂಪಾದನೆ, ವಚನಕಾವ್ಯಚಿಂತನೆ, ಜಾಗತಿಕ ಚಿಂತಕರು ಮತ್ತು ಬಸವಣ್ಣ ಸಿದ್ದರಾಮ, ವಚನಕಾರ್ತಿಯರು, ಇತರವಚನಕಾರರು, ದಲಿತ ವಚನಕಾರರು ಹಾಗೂ ವಚನ ಜಾನಪದ ಹೀಗೆ ಒಟ್ಟು ಹನ್ನೆರಡು ಸಂಪುಟಗಳಲ್ಲಿ ಸಧ್ಯ ಏಳು ಸಂಪುಟಗಳನ್ನು ಹೊರತರುತ್ತಿರುವುದು ಹರ್ಷದ ಸಂಗತಿಯಾಗಿದೆ.

ಪ್ರಸ್ತುತ "ಚೆನ್ನಬಸವಣ್ಣ" ಸಂಪುಟವನ್ನು ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ವಿಶೇಷ ಶ್ರಮವಹಿಸಿ ಸಿದ್ಧಪಡಿಸಿರವರು. ಇಲ್ಲಿನ ಲೇಖನಗಳು ತುಂಬ ಮೌಲಿಕವಾಗಿವೆ. ಚೆನ್ನಬಸವಣ್ಣನವರ ಇತಿ ವೃತ್ತ ಹಾಗೂ ಅವರ ಸಾಧನೆಗಳ ಮೇಲೆ ಹೊಸಬೆಳಕು ಚೆಲ್ಲುವಂತಹ ವಾಗಿವೆ. ಚೆನ್ನಬಸವಣ್ಣನವರ ಜೀವನ ಹಾಗೂ ಸಾಧನೆ, ಸಿದ್ಧಿಗಳನ್ನು ಜನಸಾಮಾನ್ಯರಿಗೆ ತಿಳಿಸುವಲ್ಲಿ ಇಲ್ಲಿನ ಲೇಖನಗಳು ಯಶಸ್ವಿಯಾಗಿವೆ. ಒಟ್ಟಿನಲ್ಲಿ ಇಲ್ಲಿನ ಬರಹಗಳೆಲ್ಲವೂ ಶತಮಾನದ ವಿಮರ್ಶಾಚಿಂತನೆಯನ್ನು ಸಾದರಪಡಿಸುತ್ತಲೇ ಹೊಸ ಆವಿಷ್ಕಾರ ಮತ್ತು ಚಿಂತನೆಗಳಿಗೆ ಉತ್ತಮ ದಾರಿಯನ್ನು ನಿರ್ಮಿಸುವಲ್ಲಿ ಯಶಸ್ವಿಯಾಗಿವೆ. ಈ ಸಂಪುಟವನ್ನು ತುಂಬ ಶ್ರಮವಹಿಸಿ ಸಿದ್ಧಪಡಿಸಿದ ಸಂಪಾದಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೂ, ಯೋಜನೆಯ ಪ್ರಧಾನ ಸಂಪಾದಕರಾದ ಡಾ. ಎಚ್.ಟಿ. ಪೋತೆ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ರಮೇಶ್ ಬಿ. ಝಳಕಿ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರಿಗೂ ಅಲ್ಲದೆ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಪ್ರಧಾನ ಸಂಪಾದಕರ ನುಡಿ

ಬಸವಾದಿ ಶರಣರ ನಿವಹದಲ್ಲಿ ಚೆನ್ನಬಸವಣ್ಣನವರಿಗೆ 'ಅವಿರಳಜ್ಞಾನಿ'ಯ ಸ್ಥಾನವಿದೆ. ಉಳಿದ ಶರಣರಿಗಿಂತಲೂ ವಯಸ್ಸಿನಲ್ಲಿ ಅವರು ಕಿರಿಯರಾಗಿದ್ದರೂ ಸಮಯ–ಸಂದರ್ಭ–ಸನ್ನಿವೇಶಗಳಲ್ಲಿ ಆಗಾಗ ತಲೆದೋರುತ್ತಿದ್ದ ಸಮಸ್ಯೆ ಸಂದೇಹಗಳನ್ನು ನಿವಾರಿಸುವಲ್ಲಿ ಅವರ ಹಿರಿಯ ಜ್ಞಾನವು ಪ್ರಮುಖ ಪಾತ್ರವಹಿಸುತ್ತಿದ್ದಿತು. ಬಸವಣ್ಣನವರಿಗೆ ಚೆನ್ನಬಸವಣ್ಣನವರು ಸಂಬಂಧದಲ್ಲಿ ಸೋದರಳಿಯನಾಗಿದ್ದರೂ. ಅವರ ಸಾಧನೆಯ ಹಾದಿಯಲ್ಲಿ ಆಗಾಗ ಅಡ್ಡ ಬಂದ ಅಡ್ಡಿಗಳನ್ನು ನಿವಾರಿಸುವ ಮಾರ್ಗದರ್ಶಕನೂ ಆಗಿದ್ದಾರೆ. ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಚೆನ್ನಬಸವಣ್ಣನವರು ವಹಿಸಿದ ಪಾತ್ರವು ಅವಿಸ್ಮರಣೀಯವಾದುದು. ಬಸವಣ್ಣನವರ ಲಿಂಗೈಕ್ಯದ ನಂತರವೂ ಅದನ್ನು ಮುಂದುವರೆಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ.

ಕೂಡಲ ಸಂಗಮದಲ್ಲಿ ಬಸವನು ಲಿಂಗೈಕ್ಯನಾದನು. ಕಲ್ಯಾಣದಲ್ಲಿ ಕ್ರಾಂತಿಯ ಬಿರುಗಾಳಿ ಎದ್ದಿತು. ಅದರ ಘಾತಕ್ಕೆ ಹಲವಾರು ಭವಿಗಳೊಂದಿಗೆ ಭಕ್ತರೂ ಶರಣರೂ ಹತರಾದರು. ಶರಣರ ಪರಿವರ್ತನೆಯ ಕ್ರಾಂತಿಯು ಕುತಂತ್ರಿಗಳ ಕೈಗೆ ಸಿಕ್ಕಿ ರಕ್ತದ ಕ್ರಾಂತಿಯಾಯಿತು. ಆ ಸಮಯದಲ್ಲಿ ಚೆನ್ನಬಸವಣ್ಣನವರು ವಹಿಸಿದ ಪಾತ್ರವೂ ಅತ್ಯಂತ ಮಹತ್ವದ್ದು. ಬಿಜ್ಜಳನ ಸೈನ್ಯವೂ ಶರಣರನ್ನು ಕಂಡ–ಕಂಡಲ್ಲಿ ಬೇಟೆಯಾಡ ತೊಡಗಿತು. ಶರಣರು ರಚಿಸಿದ ವಚನ ಸಾಹಿತ್ಯದ ಕಟ್ಟುಗಳು ಬೆಂಕಿಗೆ ಬಲಿಯಾಗತೊಡಗಿದವು. ಚೆನ್ನಬಸವಣ್ಣನವರು ತಮ್ಮ ತಾಯಿ ನಾಗಲಾಂಬಿಕೆಯ ಮಾರ್ಗದರ್ಶನದಲ್ಲಿ ಕೆಲವು ಶರಣರೊಡನೆ ವೈರಿಗಳ ಸೈನ್ಯವನ್ನು ಎದುರಿಸುತ್ತಲೇ ಉಳವಿಯ ಮಾರ್ಗ ಹಿಡಿದು ತಾವು ಉಳಿಯಲು ಮತ್ತು ಶರಣ ಸಂಸ್ಕೃತಿ–ಸಾಹಿತ್ಯ ಉಳಿಸಲು ಹೊರಟರು.

ಇಂದಿನ ಉತ್ತರ ಕನ್ನಡ ಜಿಲ್ಲೆ ಉಳವಿಯ ಘೋರಕಾಡಿನ ಏಕಾಂತದಲ್ಲಿ ಚೆನ್ನಬಸವಣ್ಣನವರು ತಮ್ಮೊಡನಿದ್ದ ಶರಣರನ್ನು ರಕ್ಷಿಸಿಟ್ಟರು. ತಮ್ಮೊಂದಿಗೆ ತಂದಿದ್ದ ಶರಣ ಸಾಹಿತ್ಯವನ್ನು ನಾಶವಾಗದಂತೆ ಕಣ್ಣಿಟ್ಟು ಕಾಯ್ದರು. ಕಲ್ಯಾಣ ಮಹಾಮನೆ ಮತ್ತು ಅನುಭವ ಮಂಟಪದ ಕಾರ್ಯ ಚಟುವಟಿಕೆಗಳೆಲ್ಲ ಬಸವಾದಿ ಶರಣರ ನಡುವೆ ಚೆನ್ನಬಸವಣ್ಣನವರು ನೇತಾರನಂತೆ ನಿಂತು ಕಾರ್ಯ ನಿರ್ವಹಿಸಿದರು. ಉಳವಿಯ ಮಹಾಮನೆಯಲ್ಲಿ ಅವರು ಅನುಭವ ಮಂಟಪ ಪರಂಪರೆಯನ್ನು ಮುಂದುವರೆಸಿದರು. ವಚನ ರಚನೆಯ ಕ್ರಿಯೆಗೆ ಚಾಲನೆ ನೀಡಿದರು. ತಾವೇ ದಂಡನಾಯಕರಾಗಿ ನಿಂತುಕೊಂಡು ಶರಣರ ಮೇಲೆ ಉಂಟಾಗುತಿದ್ದ ದಾಳಿಯ ಗಂಡಾಂತರಗಳನ್ನು ತಪ್ಪಿಸಿದರು.

ಚೆನ್ನಬಸವಣ್ಣನವರು ರಚಿಸಿದ ವಚನಗಳು ತಾತ್ವಿಕ ಭೂಯಿಷ್ಠತೆಯಿಂದ ಕೂಡಿವೆ. ಅವರು ತಮ್ಮ ವಚನಗಳ ಮೂಲಕ ಹೆಚ್ಚಾಗಿ ವೀರಶೈವ ಸಿದ್ಧಾಂತವನ್ನು ಅಭಿವ್ಯಕ್ತಿಸಿದರು. ವೀರಶೈವ ತತ್ತ್ವಾದಿಗಳಿಗೆ ಒಂದು ನಿಶ್ಚಿತ ರೂಪ ಕೊಡುವ ಪ್ರಯತ್ನವನ್ನು ಮಾಡಿದರು. ಪ್ರಭುದೇವರ ನಂತರದಲ್ಲಿ ಅವರು ಕೆಲವು ಕಾಲ ಶೂನ್ಯಪೀಠದ ಚಕ್ರವರ್ತಿಗಳಾಗಿ ನಿಂತು ಈ ಕಾರ್ಯವನ್ನು ಇನ್ನಷ್ಟು ಎಚ್ಚರಿಕೆಯಿಂದ ಮಾಡಿದರು. ಈ ಕಾರಣದಿಂದಲೇ ಹಿಂದಿನ ಕಾಲದ ಶರಣರು ಚೆನ್ನಬಸವಣ್ಣನವರನ್ನು ಷಟ್‌ಸ್ಥಲ ನಿರ್ಣಯಾಚಾರ್ಯನೆಂದು ಕರೆದು ಗೌರವಿಸಿದ್ದಾರೆ.

ಬಸವಾದಿ ಶರಣರಲ್ಲಿ ಕೆಲವರು "ಕ್ರಮ ಸಮುಚ್ಚಯ ಷಟ್‌ಸ್ಥಲದ' ಬಗೆಗೆ ಮಾತನಾಡುತ್ತಿದ್ದಾಗ ಚೆನ್ನಬಸವಣ್ಣನವರು ಸಮ ಸಮುಚ್ಚಯ ಷಟ್‌ಸ್ಥಲದ ಸ್ವರೂಪವನ್ನು ಬರೆದರು. ಹೀಗೆ ಅವರು ವೀರಶೈವ ತತ್ತ್ವಗಳನ್ನು ಪರಿಷ್ಕರಿಸಿದರು: ತಿದ್ದಿದರು: ವೈವಸ್ಥೆಗೆ ಒಳಪಡಿಸಿದರು. ಅವುಗಳ ಸರಿಯಾದ ಸ್ವರೂಪವನ್ನು ವಿವರಿಸಿ ಹೇಳಿದರು. ತಾತ್ವಿಕ ತಳಹದಿಯನ್ನು ಹೊಂದಿರುವ ಕಾರಣದಿಂದ ಚೆನ್ನಬಸವಣ್ಣನವರ ವಚನಗಳು ನೀರಸವಾಗಿವೆಯೆಂಬ ನಿರ್ಣಯವು ಸಾಧುವಾದುದಲ್ಲ. ಕೆಲವೆಡೆಗಳಲ್ಲಿ ಅಂತಹ ಅನುಭವ ಬಂದರೆ, ಬಹುಸಂಖ್ಯಾಕ ವಚನಗಳು ನಮಗೆ ತತ್ತ್ವದೊಂದಿಗೆ ರಸತತ್ತ್ವದ ಸವಿಯನ್ನು ಒದಗಿಸುತ್ತದೆ. ಚೆನ್ನಬಸವಣ್ಣನವರ ಜೀವನ–ಸಾಧನೆಯ ಹತ್ತು ಹಲವು ಮುಖಗಳ ದರ್ಶನವೂ ಪ್ರಸ್ತುತ ಸಂಪುಟದಲ್ಲಿನ ಲೇಖನಗಳ ಆಶಯವಾಗಿದೆ. ಇಲ್ಲಿಯ ಎಲ್ಲ ಲೇಖನಗಳು ತುಂಬ ಪರಿಶ್ರಮದಿಂದ ಹಾಗೂ ಆಳವಾದ ಅಧ್ಯಯನದಿಂದ ರೂಪಗೊಂಡಂಥವುಗಳಾಗಿವೆ. ಇಂಥ ಮೌಲಿಕವಾದ ಲೇಖನಗಳನ್ನು ನಾಡಿನ ಖ್ಯಾತ ವಿದ್ವಾಂಸರಿಂದ ಸಂಗ್ರಹಿಸಿ, ಸಂಪಾದಿಸಿಕೊಟ್ಟ ಹಿರಿಯರೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ಅಭಿನಂದನೆಗೆ ಪಾತ್ರರಾಗಿದ್ದಾರೆ. ಅವರು ಇಲ್ಲಿ ಚೆನ್ನಬಸವಣ್ಣನಿಗೆ ಸಂಬಂಧಿಸಿದ, ಅವರ ಸಾಹಿತ್ಯವನ್ನು ಕುರಿತ ವಿಶೇಷ ಅಧ್ಯಯನ ನಡೆಸಿ ಬರೆದ ವಿದ್ವಾಂಸರ ಬರಹಗಳನ್ನು ತುಂಬ ಮುತುವರ್ಜಿವಹಿಸಿ ಸಂಪಾದಿಸಿದ್ದಾರೆ. ಇದರಿಂದಾಗಿ ಪ್ರಸ್ತುತ ಸಂಪುಟಕ್ಕೆ ಒಂದು ವಿಧದ ಸಮಗ್ರತೆಯುಂಟಾಗಿದೆ. ಇಲ್ಲಿಯ ವಿಮರ್ಶಾ ಹಾಗೂ ಸಂಶೋಧನ ಲೇಖನಗಳನ್ನು, ಚೆನ್ನಬಸವಣ್ಣನವರ ಬದುಕು ಹಾಗೂ ಬರಹಗಳ ಮೇಲೆ ಹೊಸ ಬೆಳಕು ಚೆಲ್ಲುವಲ್ಲಿ ಯಶಸ್ವಿಯಾಗಿವೆ.

ಡಾ. ಎಚ್.ಟಿ. ಪೋತೆ

ಪ್ರಧಾನ ಸಂಪಾದಕರು

ಸಂಪಾದಕರ ಮಾತು

ಮಧ್ಯಕಾಲೀನ ವಚನ ಸಾಹಿತ್ಯದ ಅಂಗಣದಲ್ಲಿ ಮೂವರು ವಚನಕಾರರ ಹೆಸರು ಗಣನೀಯವಾದುದು. ಅಲ್ಲಮಪ್ರಭು, ಬಸವಣ್ಣ ಮತ್ತು ಚೆನ್ನಬಸವಣ್ಣ ಇವರು ಬೇರೆ ಬೇರೆ ಕಾರಣಗಳಿಂದಾಗಿ ನಮ್ಮ ಗಮನವನ್ನು ಸೆಳೆಯುತ್ತಾರೆ. ಅಲ್ಲಮಪ್ರಭು ವ್ಯೋಮಮೂರುತಿಯಾದರೆ, ಬಸವಣ್ಣ ಜಗನ್ಮೂರ್ತಿ. ಆದರೆ ಇವರಿಬ್ಬರ ಆಂಶಿಕ ಸತ್ವವನ್ನು ಹೊಂದಿದ್ದ ಚೆನ್ನಬಸವಣ್ಣ ತತ್ತ್ವಜಿಜ್ಞಾಸುಮೂರ್ತಿ. ಈತ ಅಲ್ಲಮನಂತೆ ಎಲ್ಲವನ್ನೂ ತತ್ತ್ವೀಕರಿಸಿ ನೋಡಬಲ್ಲ ಹಾಗೂ ಬಸವಣ್ಣನಂತೆ ಸಾಮಾಜೀಕರಣದ ವಿನ್ಯಾಸದಲ್ಲಿಯೂ ಕಾಣಬಲ್ಲ. ಈತನ ವಚನಗಳನ್ನು ನಮ್ಮ ವಿಮರ್ಶಕ ವಿದ್ವಾಂಸರು ಮತೀಯ ಚೌಕಟ್ಟುಗಳ ಅಡಿಯಲ್ಲಿ ವ್ಯಾಖ್ಯಾನಿಸಿ ನಿಲ್ಲಿಸಿದ್ದು ಅರ್ಧಾಂಶಿಕ ಸತ್ಯ. ವಚನಸಾಹಿತ್ಯದಲ್ಲಿ ಈತನ ವಚನಗಳು ಅಷ್ಟು ಸಾಹಿತ್ಯಮೌಲ್ಯವನ್ನು ಹೊಂದಿಲ್ಲದಿದ್ದರೂ ಬೇರೆ ಬೇರೆ ಕಾರಣಗಳಿಂದಾಗಿ ನಮ್ಮ ಗಮನವನ್ನು ಅವು ಸೆಳೆಯುತ್ತವೆಂಬುದನ್ನು ಗಮನಿಸಬೇಕು.

ಚೆನ್ನಬಸವಣ್ಣನು ಜ್ಞಾನಿಗಳಲ್ಲಿ ಜ್ಞಾನಿ ಮಾತ್ರವಲ್ಲ ಆತ ಅವಿರಳಜ್ಞಾನಿ. ಈ ಜ್ಞಾನಿಯ ಗುಣ ಅವನಿಗೆ ಜನ್ಮಜಾತವಾಗಿ ಬಂದದ್ದು. ತನ್ನ ಸಮಕಾಲೀನ ಹಿರಿಯ ವಚನಕಾರ ಮತ್ತು ಕಿರಿಯ ವಚನಕಾರರ ನಡುವೆ ತನ್ನ ಅವಿರಳಜ್ಞಾನಿಯ ವ್ಯಕ್ತಿತ್ವದಿಂದಾಗಿ ವಿಶಿಷ್ಟ ವಚನಕಾರನಾಗಿ ಪಡಿಮೂಡಿದ. ಈತ ಉಳಿದ ಶರಣರಿಗಿಂತಲೂ ವಯಸ್ಸಿನಲ್ಲಿ ಕಿರಿಯನಾದರೂ ತತ್ತ್ವಾರ್ಥದಲ್ಲಿ ಹಿರಿಯ. ಆದರೆ ಈತನು ಸಮಯ, ಸಂದರ್ಭ ಮತ್ತು ಸನ್ನಿವೇಶಗಳಲ್ಲಿ ಆಗಾಗ ಒಡಮೂಡುತ್ತಿದ್ದ ಕ್ಲಿಷ್ಟ ಸಮಸ್ಯೆಗಳನ್ನು ಹಾಗೂ ಬಗೆಬಗೆಯ ಸಂದೇಹಗಳನ್ನು ನಿವಾರಿಸುತ್ತಿದ್ದ ರೀತಿ ಬಹುವಿಶಿಷ್ಟವಾದುದು. ಈ ವಿಶಿಷ್ಟ ಗುಣದಿಂದಾಗಿಯೇ ಹಿರಿ–ಕಿರಿಯ ಶರಣರಲ್ಲಿ ಪ್ರತ್ಯೇಕವಾದ ವ್ಯಕ್ತಿತ್ವವನ್ನು ನಿರ್ಮಾಣಮಾಡಿಕೊಂಡದ್ದು ನಮಗೆ ಎದ್ದು ಕಾಣುವ ಸಂಗತಿ. ಈತ ಅಣ್ಣ ಬಸವಣ್ಣನಿಗೆ ಸೋದರಳಿಯ. ಆದರೆ ಬಸವಣ್ಣನವರ ಸಾಧನೆಯ ಹಾದಿಯಲ್ಲಿ ಅನೇಕ ಎಡರು ತೊಡರುಗಳು ಬಂದಾಗ ಅದನ್ನು ನಿವಾರಿಸುವ ಮಾರ್ಗದರ್ಶಕನೂ ಈತನಾಗಿದ್ದುದು ಒಂದು ಹಿರಿಮೆ. ಕಲ್ಯಾಣಕ್ರಾಂತಿಯ ಸಂದರ್ಭದಲ್ಲಂತೂ ಚೆನ್ನಬಸವಣ್ಣ ವಹಿಸಿದ ಪಾತ್ರ ಇಂದಿಗೂ ಅವಿಸ್ಮರಣೀಯವಾದುದು. ಬಸವಣ್ಣನವರು ಲಿಂಗೈಕ್ಯರಾದ ನಂತರ ಅದನ್ನು ಲೋಕೋದ್ಧಾರದ ರೀತಿಯಲ್ಲಿ ಮುಂದುವರೆಸಿದ ಶ್ರೇಯಸ್ಸು ಚೆನ್ನಬಸವಣ್ಣನಿಗೆ ಸಲ್ಲುತ್ತದೆ.

ಬಸವಕಲ್ಯಾಣದಲ್ಲಿ ಕ್ರಾಂತಿಯ ಬಿರುಗಾಳಿ ಎದ್ದದ್ದು ಸರಿಯಷ್ಟೇ. ಈ ಬಿರುಗಾಳಿಯಲ್ಲಿ ಬಸವಣ್ಣ ಕೂಡಲಸಂಗಮದಲ್ಲಿ ಲಿಂಗೈಕ್ಯನಾದ. ಈ ಕ್ರಾಂತಿಯ ಘಾತಕ್ಕೆ ಭಕ್ತರೂ ಶರಣರೂ

ಸಾವನ್ನಪ್ಪಿದರು. ಶರಣರು ರಚಿಸಿದ ವಚನಸಾಹಿತ್ಯದ ಕಟ್ಟುಗಳು ಕ್ರಾಂತಿಕಾರರ, ವಿಧ್ವಂಸಕರ ಕ್ರೂರದೃಷ್ಟಿಗೆ ಸಿಲುಕಿ ಬೆಂಕಿಗೆ ಬಲಿಯಾದವು. ಈ ಸಂದರ್ಭದಲ್ಲಿ ಚೆನ್ನಬಸವಣ್ಣ ವಹಿಸಿದ ಪಾತ್ರ ಬಹಳ ಮಹತ್ತರವಾದುದು. ಈತನ ತಾಯಿ ನಾಗಲಾಂಬಿಕೆ. ಆಕೆಯ ಮಾರ್ಗದರ್ಶನದಲ್ಲಿ ಕೆಲವು ಶರಣರೊಡನೆ ಕ್ರಾಂತಿಕಾರರ ವೈರಿಗಳ ಸೈನ್ಯವನ್ನು ಎದುರಿಸುತ್ತ ಉಳವಿಯ ಮಾರ್ಗವನ್ನು ಹಿಡಿದನು. ಇಂದಿನ ಉತ್ತರಕನ್ನಡ ಜಿಲ್ಲೆಯಲ್ಲಿರುವ ಉಳವಿ ಚೆನ್ನಬಸವಣ್ಣನ ಎರಡನೆಯ ಕಾರ್ಯಕ್ಷೇತ್ರವಾಯಿತು. ಉಳವಿಯು ಅಂದಿನ ಕಾಲಕ್ಕೆ ಒಂದು ಘೋರಾರಣ್ಯ. ಆ ಅರಣ್ಯದಲ್ಲಿ ಶರಣರು ಬರೆದ ವಚನಗಳನ್ನು ರಕ್ಷಿಸಿಟ್ಟರು. ಕಲ್ಯಾಣದ ಮಹಾಮನೆ ಮತ್ತು ಅನುಭವಮಂಟಪದ ಕಾರ್ಯ ಚಟುವಟಿಕೆಗಳೆಲ್ಲ ಉಳವಿಯ ನೆಲದಲ್ಲೇ ಪುನಃ ಆರಂಭಗೊಂಡವು. ಉಳವಿಯು ಬಸವಣ್ಣನವರು ಕಂಡ ಲೋಕೋದ್ಧಾರದ ದ್ವಿತೀಯ ಕಾರ್ಯಕ್ಷೇತ್ರವಾದುದು ಈ ವಿಶಿಷ್ಟ ಸಂದರ್ಭದಲ್ಲಿ ಎಂಬುದು ಅಷ್ಟೇ ಸತ್ಯ.

ಮಧ್ಯಕಾಲೀನ ವಚನಸಾಹಿತ್ಯದ ಸಂದರ್ಭದಲ್ಲಿ ಉಳವಿ ಕ್ಷೇತ್ರವನ್ನು ಕಲ್ಯಾಣದ ಮಹಾಕ್ಷೇತ್ರದಂತೆ ಬೆಳೆಸಿದ ಕೀರ್ತಿ ಚೆನ್ನಬಸವಣ್ಣನಿಗೆ ಸಲ್ಲುತ್ತದೆಯಷ್ಟೆ? ಈತ ತಾತ್ತ್ವಿಕ ಮೂರ್ತಿ ಹೇಗೋ ಹಾಗೆಯೇ ವೀರಮೂರ್ತಿಯೂ ಹೌದು. ಎಲ್ಲ ಶರಣರಿಗೂ ಈತ ದಂಡನಾಯಕ. ಚೆನ್ನಬಸವಣ್ಣನ ಈ ಬಗೆಯ ವ್ಯಕ್ತಿತ್ವ ಉಳಿದ ವಚನಕಾರರಲ್ಲಿ ನಾವು ಕಾಣೆಲಾರೆವು. ಶರಣರಲ್ಲಿ ಅರಿವನ್ನು ಮೂಡಿಸಿದುದಲ್ಲದೆ ಅವರಲ್ಲಿ ವಚನಗಳ ವಿಕಾಸಕ್ಕೆ ದಾರಿಯನ್ನು ಮಾಡಿಕೊಟ್ಟ ಕೀರ್ತಿ ಈತನಿಗೆ ಸಲ್ಲುತ್ತದೆ. ಬಸವಕಲ್ಯಾಣದಲ್ಲಿ ರಚನೆಗೊಂಡ ವಚನಗಳಿಗೆ ತಾತ್ತ್ವಿಕತೆಯ ಸ್ವರೂಪವನ್ನು ಒದಗಿಸಿಕೊಟ್ಟದ್ದು ಚೆನ್ನಬಸವಣ್ಣನಿಗೆ ಸೇರುತ್ತದೆಂಬುದು ಚಾರಿತ್ರಿಕ ಸತ್ಯ. ಈತನ ಕಾಲದಲ್ಲಿಯೇ ವಚನಗಳಿಗೆ ಸೈದ್ಧಾಂತಿಕ ಸ್ವರೂಪ ದೊರಕಿತು. ಚೆನ್ನಬಸವಣ್ಣನು ರಚಿಸಿದ ಬಹುತೇಕ ವಚನಗಳು ವೀರಶೈವ ಸಿದ್ಧಾಂತವನ್ನು ಪ್ರತಿಮೀಕರಿಸುತ್ತವೆ. ಅಲ್ಲಮಪ್ರಭುಗಳ ನಂತರ ಶೂನ್ಯಪೀಠದ ಚಕ್ರವರ್ತಿಯಾಗಿ ನಿಂತು ಅಲ್ಲಮನ ಕಾರ್ಯವನ್ನು ಎಚ್ಚರಿಕೆಯಿಂದ ನಿರ್ವಹಿಸಿದ್ದು ಚೆನ್ನಬಸವಣ್ಣನ ಹಿರಿಮೆಯಾಗಿದೆ. ಈ ಕಾರಣದಿಂದಾಗಿಯೇ ಹಿಂದಿನ ಕಾಲದ ಶರಣರು ಈತನನ್ನು ಷಟ್‌ಸ್ಥಲ ನಿರ್ಣಯಾಚಾರ್ಯನೆಂದು ಕರೆದು ಗೌರವಿಸಿದ್ದಾರೆ. ಈ ಗೌರವಕ್ಕೆ ಪಾತ್ರನಾಗುವ ಎಲ್ಲಾ ಅರ್ಹತೆಗಳು ಚೆನ್ನಬಸವಣ್ಣನಿಗಿತ್ತು. ಈತ ಷಟ್‌ಸ್ಥಲ ಸಾರ್ವಭೌಮನಲ್ಲ. ಅದರ ಬದಲು ಷಟ್‌ಸ್ಥಲ ನಿರ್ಣಯಾಚಾರ್ಯ. ಈ ಅಂಶವನ್ನು ಇನ್ನಷ್ಟು ವಿವರಿಸಿ ಕೊಳ್ಳಬಹುದು. ಷಟ್‌ಸ್ಥಲವೆಂಬುದು ಏಕಕಾಲಕ್ಕೆ ಸಿದ್ಧಾಂತವೂ ಹೌದು ಆನ್ವಯಿಕ ಕ್ರಮವೂ ಹೌದು. ಸಿದ್ಧಾಂತ ಮತ್ತು ಅನುಭವ ಬೇರೆ ಬೇರೆಯಾಗದೆ ಅವು ಒಂದಾಗಿ ಉಳಿಯಬೇಕೆಂಬ ಅಲ್ಲಮಪ್ರಭು ಮತ್ತು ಬಸವಣ್ಣನವರ ಜೀವನತತ್ತ್ವವನ್ನು ಅಸಾಧಾರಣ ರೀತಿಯಿಂದ ಬಗೆದು ತೋರಿಸಿದ ಕೀರ್ತಿ ಚೆನ್ನಬಸವಣ್ಣನಿಗೆ ಸಲ್ಲುತ್ತದೆ.

ಮಧ್ಯಕಾಲೀನ ಶರಣರಲ್ಲಿ ಎರಡು ಬಗೆಯ ಷಟ್‌ಸ್ಥಲದ ನಿರ್ವಚನವನ್ನು ಮಾಡುತ್ತಾರೆ. ಮೊದಲನೆಯದು ಕ್ರಮಸಮುಚ್ಚಯ ಷಟ್‌ಸ್ಥಲ. ಎರಡನೆಯದು ಸಮಸಮುಚ್ಚಯ ಷಟ್‌ಸ್ಥಲ. ಶರಣ ಸ್ಥಲದಿಂದ ಐಕ್ಯಸ್ಥಲದ ವರೆಗೂ ಆರೋಹಣ ಕ್ರಮದಲ್ಲಿ ಪರಿಭಾವಿಸುವುದು ಕ್ರಮಸಮುಚ್ಚಯವಾದರೆ ಪ್ರತಿಯೊಂದು ಸ್ಥಲಕ್ಕೂ ಸಮಾನ ಕ್ರಮವನ್ನು ಪರಿಭಾವಿಸುವುದು ಸಮಸಮುಚ್ಚಯ, ಶರಣನೊಬ್ಬ ಒಂದೊಂದು ಸ್ಥಲವನ್ನು ಏರಿ ಅರಿವನ್ನು ಪಡೆಯುತ್ತಾನೆ ಎಂಬುದು ಕ್ರಮಸಮುಚ್ಚಯದ ನಿಲುವು. ಈ ಬಗೆಯ ತಾತ್ತ್ವಿಕ ದೃಷ್ಟಿಕೋನವು ಸಾಧಕನ

ನೆಲೆಯಿಂದ ಪರಿಗ್ರಹಿತವಾಗುತ್ತದೆ. ಆದರೆ ಒಂದೊಂದು ಸ್ಥಲದಲ್ಲೂ ಇತರೇ ಸ್ಥಲಗಳ ಅನುಭವವು ಮಿಲಿತವಾಗುತ್ತದೆ ಎಂಬುದು ಸಮಸಮುಚ್ಚಯದ ನಿಲುವು. ಈ ನಿಲುವಿನ ಬಗ್ಗೆ ಅನೇಕ ಚರ್ಚೆಗಳನ್ನು ಬೆಳೆಸಬಹುದಾದರೂ ಚೆನ್ನಬಸವಣ್ಣ ಸಮಸಮುಚ್ಚಯದ ಹಾದಿಯನ್ನು ಹಿಡಿದವನು. ಈತ ಸಾಧಕನು ಹೇಗೋ ತಾತ್ತ್ವಿಕನೂ ಹೌದು. ಈ ಎರಡು ಗುಣಗಣಗಳು ಈತನ ಜೀವಾಳವಾಗಿದ್ದವು. ಸಾಧಕನ ನಿಲುಮೆ ಹಾಗೂ ತಾತ್ತ್ವಿಕನ ನಿಲುಮೆ ಬೇರೆ ಬೇರೆಯಲ್ಲ. ಅವು ಒಂದರೊಳಗೊಂದು ಸೇರಿ ಗಮ್ಯವಾಗುವುದು ಚೆನ್ನಬಸವಣ್ಣನಂಥ ಸಾಧಕರಲ್ಲಿ ಮಾತ್ರ. ಹೀಗಾಗಿ ಚೆನ್ನಬಸವಣ್ಣನು ಪಾರಂಪರಿಕವಾಗಿ ಬಂದ ಅನೇಕ ಸೈದ್ಧಾಂತಿಕ ನಿಲುಮೆಗಳನ್ನು ಪರಿಷ್ಕರಿಸಿದ್ದು ಮಾತ್ರವಲ್ಲ ಅದನ್ನು ತಿದ್ದಿದ್ದು ಇದಕ್ಕಾಗಿಯೇ. ಅವನು ಹೊಸ ವ್ಯವಸ್ಥೆಗೆ ತಕ್ಕಂತೆ ಒಳಪಡಿಸಿದನು. ಅವುಗಳ ಸರಿಯಾದ ಸ್ವರೂಪವನ್ನು ಪರಮೋದ್ದೇಶವನ್ನು ವಿವರಿಸಿ ಹೇಳಿದನು.

ಚೆನ್ನಬಸವಣ್ಣನ ವಚನಗಳು ಅಲ್ಲಮನ ವಚನಗಳಂತೆ ಬೆಡಗಿನ ಸ್ವರೂಪದ ವಚನಗಳಲ್ಲ. ಅಥವ ಬಸವಣ್ಣನವರಂತೆ ಶುದ್ಧ ಸಾಮಾಜಿಕ ಸ್ವರೂಪದ ವಚನಗಳೂ ಅಲ್ಲ. ಹಾಗೆ ನೋಡಿದರೆ ಬೆಡಗಿನ ಸ್ವರೂಪದ ವಚನಗಳನ್ನು ಬರೆಯಬಲ್ಲ ಸಾಮರ್ಥ್ಯ ಚೆನ್ನಬಸವಣ್ಣನಿಗಿತ್ತು. ಇದು ಒಂದು ಬಗೆಯ ಅನುಭಾವದ ಹಾದಿ. ಈ ಹಾದಿಯು ಭಾಷೆಯನ್ನು ಮುರಿದುನೋಡುತ್ತದೆ. ಆದರೆ ಚೆನ್ನಬಸವಣ್ಣನಿಗೆ ವಚನಭಾಷೆ ಮುರಿದು ನೋಡುವುದಕ್ಕಿಂತಲೂ ಅದನ್ನು ತಾತ್ತ್ವಿಕ ಪ್ರಮೇಯದಲ್ಲಿ ಮಂಡಿಸುವುದೇ ಹೆಚ್ಚು ಗ್ರಾಹ್ಯವೆಂದು ನನಗೆ ತೋರುತ್ತದೆ. ಬಸವಣ್ಣನವರಂತೆ ಅಂತರಂಗದ ನಿಲುಮೆಯನ್ನು ಬಹಿರಂಗದಲ್ಲಿಟ್ಟು ನೋಡುವ ವಚನಕ್ರಮವು ಚೆನ್ನಬಸವಣ್ಣನಿಗೆ ಅಷ್ಟಾಗಿ ಹಿಡಿಸದು. ಲೋಕಸತ್ಯದ ನಿಲುವುಗಳು ಬಸವಣ್ಣನ ವಚನಗಳಲ್ಲಿ ಮೂಡುವ ಪರಿ ಶುದ್ಧಾಂಗವಾಗಿ ಸಾಮಾಜಿಕವಾದುದು. ಚೆನ್ನಬಸವಣ್ಣನಿಗೆ ಲೋಕಸತ್ಯದ ನಿಲುವುಗಳನ್ನು ಧಾರ್ಮಿಕ ನೆಲೆಯಲ್ಲಿ ನೋಡುವುದೇ ಹೆಚ್ಚು ಸಂಗತ. ಈ ಕ್ರಮವನ್ನು ಗಮನಿಸಿದರೆ ಚೆನ್ನಬಸವಣ್ಣನ ವಚನಗಳ ಹಿರಿಮೆ ಗರಿಮೆಗಳು ಹೆಚ್ಚು ಸ್ಪಷ್ಟವಾಗುತ್ತವೆ.

ಚೆನ್ನಬಸವಣ್ಣ ಬರೆದಿರುವ ವಚನಗಳಲ್ಲಿ ತತ್ತ್ವಾಂಶ ಮತ್ತು ಕಾವ್ಯಾಂಶಗಳು ಸಮಸಮವಾಗಿ ಮಿಡಿಯುತ್ತವೆ. ಈತನ ವಚನಗಳಲ್ಲಿ ರೂಪಕ, ಸಾಮತಿ ಮತ್ತು ಪ್ರತಿಮಾ ನಿರ್ಮಾಣಗಳು ಬರುವುದು ತುಸು ಕಡಿಮೆಯೇ. ಅಲ್ಲಮನ ವಚನಗಳಲ್ಲಿ ರೂಪಕ ವೈಭವವೇ ಹೆಚ್ಚು. ಬಸವಣ್ಣನವರ ವಚನಗಳಲ್ಲಿ ಸಾಮತಿಗಳ ಆಧಿಕ್ಯ ಹೆಜ್ಜೆ ಹೆಜ್ಜೆಗೂ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಚೆನ್ನಬಸವಣ್ಣನ ವಚನಗಳನ್ನು ಗಮನಿಸಿ ನೋಡುವುದು ಒಂದು ಕ್ರಮವಾದರೆ; ತಾತ್ತ್ವಿಕ ನೆಲೆಯಿಂದ ನೋಡುವುದು ಮತ್ತೊಂದು ಕ್ರಮ. ಈ ಕೆಳಗಿನ ಎರಡು ವಚನಗಳ ಮೂಲಕ ಇದನ್ನು ವಿವರಿಸಿ ನೋಡಬಹುದೆಂದು ತೋರುತ್ತದೆ.

ತಪವೆಂಬುದು ಬಂಧನ, ನೇಮವೆಂಬುದು ತಗಹು,
ಶೀಲವೆಂಬುದು ಸೂತಕ, ಭಾಷೆಯೆಂಬುದು ಪ್ರಾಣಘಾತಕ.
ಈ ಚತುರ್ವಿಧದೊಳಗೆ ಇಲ್ಲ,
ಕೂಡಲಚೆನ್ನಸಂಗಯ್ಯ ಏಕೋಗ್ರಾಹಿ.

(ಚೆನ್ನಬಸವಣ್ಣನವರ ವಚನ ಸಂಪುಟ– ವಚನ ೩೮೦)

ಮಡಿಲಲ್ಲಿ ಸುತ್ತಿದ ಹಾವಿನಂತೆ ಮಡಿಲಲ್ಲಿ ಕಟ್ಟಿದಡೇನು?
ಕೊರಳಲ್ಲಿ ಸುತ್ತಿದ ಹಾವಿನಂತೆ ಕೊರಳಲ್ಲಿ ಕಟ್ಟಿದಡೇನು?
ಕಳವು ಹಾದರ ಭವಿಯ ಸಂಗ ಅನ್ಯದೈವವ ಬಿಡದನ್ನಕ್ಕ
ಲಿಂಗಭಕ್ತನೆನಿಸಲು ಬಾರದಯ್ಯ.
ಅನಾಚಾರದಿಂದ ನರಕ, ಆಚಾರದಿಂದ ಸ್ವರ್ಗ.
ಕೂಡಲಚೆನ್ನಸಂಗ್ಯನೊಲ್ಲ ಭೂಮಿಭಾರಕರ.

(ಚೆನ್ನಬಸವಣ್ಣನವರ ವಚನ ಸಂಪುಟ– ವಚನ ೩೮)

ಈ ಎರಡು ವಚನಗಳಲ್ಲಿ ತಾತ್ತ್ವಿಕತೆ ಮತ್ತು ರಮ್ಯತೆಗಳು ಒಂದಕ್ಕೊಂದು ಸೇರಿಕೊಂಡಿವೆ. ಇಲ್ಲಿ ಬಳಸಿರುವ ಪದರೂಪಗಳು ತಾತ್ತ್ವಿಕತೆಯ ಭಿತ್ತಿಯನ್ನು ಪ್ರತಿಫಲಿಸುತ್ತವೆ. ಮನುಷ್ಯ ಸಂಬಂಧಿಯಾದ ನೆಲದ ಗುಣ ಇಲ್ಲಿ ಪ್ರತಿಮೆಗಳಾಗಿ ಬಂದಿವೆ.

ಚೆನ್ನಬಸವಣ್ಣ ಲೋಕದಲ್ಲಿ ಬಳಕೆಯಾಗುವ ಶಬ್ದಗಳನ್ನು ತಾತ್ತ್ವಿಕತೆಯ ಮಟ್ಟಕ್ಕೆ ಏರಿಸುವುದುಂಟು. ಅದೇ ರೀತಿ ಆ ತಾತ್ತ್ವಿಕತೆಗೆ ರಮ್ಯತೆಯ ಸೊಗಸನ್ನು ಸೇರಿಸುವುದೂ ಉಂಟು. ಲೋಕಕ್ಕೆ ತಪಸ್ಸು ಎಂಬುದು ಬಂಧನವೇ. ಅದೇ ರೀತಿ ವ್ರತಚಾರಣೆ ಎಂಬುದು ಯಾರಿಗಾದರೂ ಸಹ್ಯವಲ್ಲ. ಶೀಲವೆಂಬುದು ಸೂತಕ. ಭಾಷೆಯೆಂಬುಋ ಪ್ರಾಣಘಾತಕ. ಈ ವಚನದಲ್ಲಿ ತಪಸ್ಸು, ನೇಮ, ಶೀಲ ಮತ್ತು ಭಾಷೆ ಎಂಬುವು ಕೇವಲ ಬಳಕೆಗಾಗಿ ಬರದೆ ಲೋಕವನ್ನು ಅರ್ಥೈಸಿಕೊಳ್ಳಲು ಈ ಶಬ್ದಪ್ರತಿಮೆಗಳು ಸಾಧ್ಯ ಮಾಡುತ್ತವೆ. ಇಲ್ಲಿಯವರೆಗೂ ಭಾಷೆಯು ಕಟ್ಟಿಕೊಂಡಿರುವ ಅರ್ಥದ ಸಾಧ್ಯತೆಗಳನ್ನು ಬಿಡಿಗೊಳಿಸಿಕೊಳ್ಳುವುದರಲ್ಲಿ ಹೆಚ್ಚು ಆಸಕ್ತಿಯನ್ನುಂಟು ಮಾಡಿಕೊಳ್ಳುತ್ತದೆ.

ಚೆನ್ನಬಸವಣ್ಣನ ಮತ್ತೊಂದು ವಚನವನ್ನು ಇದರ ಮುಂದುವರಿಕೆಯಾಗಿ ನೋಡಬಹುದು. ಲಿಂಗಭಕ್ತನೆನಿಸಬೇಕಾದರೆ ಆತನಿಗೆ ಲೋಕದ ವಿಕಾರಗಳು ಇರಕೂಡದು. ಈ ಲೋಕವು ಕಳವು, ಹಾದರ, ಭವಿಯ ಸಂಗ ಮತ್ತು ಅನ್ಯದೈವಗಳೊಡನೆ ಸಂಸರ್ಗವನ್ನು ಹೊಂದಿದೆ. ಪ್ರತಿಯೊಬ್ಬನೂ ಇವುಗಳಿಂದ ಬಿಡುಗಡೆ ಪಡೆಯಲಾರ. ಇದು ಮಡಿಲಲ್ಲಿ ಸುತ್ತಿಕೊಂಡಿರುವ ಹಾವಿನಂತೆ ಎಂಬ ಶಬ್ದಪ್ರತಿಮೆಯು ಲೋಕದ ನೈರಂತರ್ಯ ಸ್ಥಿತಿಯನ್ನು ಪ್ರತಿಮಿಸುತ್ತದೆ. ಈ ಲೋಕದ ವಿಕಾರಗಳಲ್ಲಿ ಮಗ್ನನಾಗಿರುವವನನ್ನು "ಭೂಮಿಭಾರಕರ" ಎಂಬ ಶಬ್ದ ಪ್ರತಿಮೆಯು ಚೆನ್ನಾಗಿ ಪ್ರತಿಮಿಸುತ್ತದೆ. ಚೆನ್ನಬಸವಣ್ಣನ ವಚನಗಳು ತಾತ್ತ್ವಿಕ ಸಂಸರ್ಗತೆಯನ್ನು ಹೊಂದಿದ್ದರೂ ಸಾಹಿತ್ಯಿಕ ಪ್ರತಿಮೆಗಳು ವಚನದ ಚೌಕಟ್ಟುಗಳಲ್ಲಿ ಪಡಿನುಡಿಯುತ್ತವೆ.

ಅಲ್ಲಮಪ್ರಭುದೇವರ ದೃಷ್ಟಿಯಲ್ಲಿ ಚೆನ್ನಬಸವಣ್ಣ ಅವಿರಳ ಜ್ಞಾನಿ, ಸ್ವಯಂಭು ಜ್ಞಾನಿ. ಈ ಜ್ಞಾನಕ್ಕೆ ಲೋಕ–ಅಲೋಕಗಳ ನಂಟನ್ನು ಒಂದುಮಾಡುವ ಶಕ್ತಿಯುಂಟು. ಈತ ವಿರಳತೆಯಲ್ಲಿ ಬದುಕುವವನಲ್ಲ. ಸಾಮಾನ್ಯ ಜ್ಞಾನವೆಂಬುದು ಈತನಿಗೆ ಹೊರಗು. ಹೀಗಾಗಿ, ಚೆನ್ನಬಸವಣ್ಣ ಅವಿರಳಜ್ಞಾನಿ. ಶಿವಾನುಭವದಲ್ಲಿ ಅವಿರಳ ಜ್ಞಾನಿಯೆಂಬ ಮಾತಿಗೆ ವಿಶೇಷ ಅರ್ಥವುಂಟು. ಈ ಸಂಗತಿಯನ್ನು ಮಧ್ಯಕಾಲೀನ ಅನುಭಾವಿ ದೃಷ್ಟಿಯಿಂದ ಪರೀಕ್ಷಿಸುವುದು ಉಚಿತ. ಜ್ಞಾನಿಯಾದವನಿಗೆ ಒಳಗನ್ನು ಸೆರೆಹಿಡಿದು ಹೊರಗನ್ನು ನೋಡಬಲ್ಲ ಶಕ್ತಿಯಿರುತ್ತದೆ. ಈತನದು ಪರಾವಲಂಬಿ ಗುಣವಲ್ಲ. ಸ್ವಯಂ ಅನುಭವವೇ ಈತನ ಅಸ್ತ್ರವಾಗಿರುತ್ತದೆ. ಚೆನ್ನಬಸವಣ್ಣ ಅವಿರಳ ಜ್ಞಾನಿ ಹೇಗೋ ಸ್ವಯಂಭು ಜ್ಞಾನಿ ಕೂಡ. ಈ ಹಿನ್ನೆಲೆಯಲ್ಲಿ ಅಲ್ಲಮಪ್ರಭು ದೇವರ ಮಾತಿಗೆ ವಿವರವಾದ ಲೋಕಾರ್ಥವುಂಟು.

ಚೆನ್ನಬಸವಣ್ಣನು ಷಟ್‌ಸ್ಥಲಗಳಲ್ಲಿ ಒಂದಾದ ಪ್ರಸಾದಿಸ್ಥಲದ ಹಾದಿಯನ್ನು ಹಿಡಿದವನು. ಲಿಂಗಕ್ಕೆ ಅರ್ಪಿಸಿದ ಪದಾರ್ಥವನ್ನು ಪ್ರಸಾದವನ್ನಾಗಿಸುವ ಅರ್ಪಣ ವಿಧಾನವನ್ನು ಷಟ್‌ಸ್ಥಲದ ಆಚರಣೆಯಲ್ಲಿ ಅಳವಡಿಸಿ ಇದೇ ಜನ್ಮದಲ್ಲಿ ಲಿಂಗಾಂಗ ಸಾಮರಸ್ಯ ರೂಪದ ಮುಕ್ತಿಯು ಸಾಧ್ಯವೆಂದು ತಾತ್ತ್ವಿಕವಾಗಿಯೂ ಆಚರಣಾತ್ಮಕವಾಗಿಯೂ ಹೇಳಿದ ಹಿರಿಮೆ ಈತನದು. ಈ ನೆಲೆಯಲ್ಲಿ ಉಳಿದ ಸಮಕಾಲೀನ ಶರಣರಿಗಿಂತ ವಿಶಿಷ್ಟನೆಂದು ಕರೆಯಲ್ಪಟ್ಟನು. ಈ ಕಾರಣದಿಂದ ಅಲ್ಲಮಪ್ರಭುದೇವರು ತಮ್ಮ ಒಂದು ವಚನದಲ್ಲಿ "ಪ್ರಸಾದದ ಹಾದಿಯನೆಲ್ಲರಿಗೆ ತೋರಿ ಮಹಾಪ್ರಸಾದದ ಬೆಳವಿಗೆಯ ಮಾಡಿದನು ಗುಹೇಶ್ವರನ ಶರಣ ಚೆನ್ನಬಸವಣ್ಣ" ಎಂದು ಹೇಳಿರುವುದನ್ನು ಕಾಣಬಹುದು. ಇದೇ ಅಭಿಪ್ರಾಯವನ್ನು ಸಿದ್ಧರಾಮ ಮತ್ತು ಉರಿಲಿಂಗಪೆದ್ದಿ ಶರಣರು ಖಚಿತ ವಾಣಿಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಚೆನ್ನಬಸವಣ್ಣನು ಪ್ರಸಾದದ ಹಾದಿಯನ್ನು ತೋರಿಸಿರುವ ಜೊತೆಗೆ ಉಳಿದೆಲ್ಲ ಸ್ಥಲಗಳ ಕ್ರಿಯೆಗಳನ್ನು ಪ್ರಸಾದಿ ಸ್ಥಲದಲ್ಲಿಯೇ ಸಮನ್ವಯಗೊಳಿಸಿರುವಂತೆ ನನಗೆ ಕಾಣುತ್ತದೆ. ಇದು ಉಳಿದೆಲ್ಲ ವಚನಕಾರರಿಗಿಂತ ವಿಶಿಷ್ಟ ಜೀವನ ಯೋಗವನ್ನು ಸಾಧಿಸಿದ ಹಿರಿಮೆಯನ್ನು ತೋರಿಸುತ್ತದೆ. ಈತನ ವಚನಗಳಲ್ಲಿ ಶಿವಯೋಗದ ಬಗೆಗೂ ಗಮನಾರ್ಹವಾದ ವಿವರಣೆಗಳು ದೊರಕುತ್ತವೆ. ಇಷ್ಟಲಿಂಗದ ಅನುಸಂಧಾನದ ಮೂಲಕ ಈ ಕಾಯವನ್ನು ಪ್ರಸಾದಕಾಯವನ್ನಾಗಿಸುವ ದಾರಿಯನ್ನು ಚೆನ್ನಬಸವಣ್ಣ ಮುಖ್ಯವಾಗಿ ತೋರಿಸುತ್ತಾನಷ್ಟೆ. ಅದೇ ರೀತಿ ಪ್ರಾಣಲಿಂಗದ ಅನುಸಂಧಾನದ ಮೂಲಕ ಪ್ರಸಾದಕಾಯವನ್ನು ಪ್ರಕಾಶಕಾಯವನ್ನಾಗಿಸುವ ಹಾದಿಯನ್ನು ತೋರಿಸುತ್ತಾನೆ. ಭಾವಲಿಂಗದ ಅನುಸಂಧಾನದ ಮೂಲಕ ಪ್ರಕಾಶಕಾಯವನ್ನು ಆಕಾಶಕಾಯವನ್ನಾಗಿಸುವ ವಿವರ ಚೆನ್ನಬಸವಣ್ಣನವರ ವಚನಗಳಲ್ಲಿ ಎಳೆಎಳೆಯಾಗಿ ಬಿತ್ತರಗೊಂಡಿರುವುದನ್ನು ಕಾಣುತ್ತೇವೆ. ಹೀಗಾಗಿ, ಚೆನ್ನಬಸವಣ್ಣನವರ ವ್ಯಕ್ತಿತ್ವವನ್ನು ಷಟ್‌ಸ್ಥಲ ಸಿದ್ಧಾಂತ ಮತ್ತು ಅದರ ಆಚರಣೆಯ ನಿರ್ಣಯದಲ್ಲಿ ಅವರು ವಹಿಸಿದ ಮಹತ್ವಪೂರ್ಣವಾದ ಪಾತ್ರವನ್ನು ತಿಳಿಯಲು ಸಾಕಷ್ಟು ಸಾಮಗ್ರಿ ನಮಗೆ ದೊರೆಯುತ್ತದೆ. ಈಗ ಚೆನ್ನಬಸವಣ್ಣನ ಇತಿವೃತ್ತದ ಬಗೆಗೆ ಒಂದಿಷ್ಟು ಯೋಚಿಸಬಹುದು:

ಚೆನ್ನಬಸವಣ್ಣನ ಇತಿವೃತ್ತದ ಬಗೆಗೆ ಹಲವಾರು ಗೊಂದಲಗಳಿವೆ. ಇವನನ್ನು ಕುರಿತು ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ ಹಾಗೂ ಇತರೇ ಕೆಲವು ಕೃತಿಗಳಲ್ಲಿ ಒಂದೆರಡು ವಿಷಯಗಳ ಬಗೆಗೆ ಭಿನ್ನಾಭಿಪ್ರಾಯಗಳು ಇರುವುದುಂಟು. ಆದರೆ ಉಪಲಬ್ಧ ಸಾಮಗ್ರಿಯನ್ನೇ ಆಧರಿಸಿ ಚೆನ್ನಬಸವಣ್ಣನ ಜೀವನ ಚರಿತ್ರೆಯನ್ನು ಹೀಗೆ ನಿರೂಪಿಸಬಹುದು. ಚೆನ್ನಬಸವಣ್ಣನ ಸೋದರಿಯಾದ ಅಕ್ಕನಾಗಮ್ಮನ ಮಗ ಚೆನ್ನಬಸವಣ್ಣ ಎಂಬುದರಲ್ಲಿ ಯಾರೂ ಸಂದೇಹ ಪಡೆಯುವಂತಿಲ್ಲ. ಆದುದರಿಂದ ಚೆನ್ನಬಸವಣ್ಣನು ಬಸವಣ್ಣನವರ ಸೋದರಳಿಯನಾಗುತ್ತಾನೆ. ಚೆನ್ನಬಸವಣ್ಣನ ಜನ್ಮಸ್ಥಳ ಕಲ್ಯಾಣವೆಂದು ವಿರೂಪಾಕ್ಷ ಪಂಡಿತನ ಚೆನ್ನಬಸವಪುರಾಣ ಮತ್ತು ಸಂದರ್ಭಾನುಸಾರ ಚೆನ್ನಬಸವಣ್ಣನವರನ್ನು ಉಲ್ಲೇಖಿಸುವ ವೀರಶೈವ ಕೃತಿಗಳು ಹೇಳುತ್ತವೆ. ಆದರೆ ಇತ್ತೀಚಿನ ಕೆಲವು ವಿದ್ವಾಂಸರು ಬಸವಣ್ಣನವರು ಕಲ್ಯಾಣಕ್ಕೆ ಬರುವ ಪೂರ್ವದಲ್ಲಿಯೇ ಚೆನ್ನಬಸವಣ್ಣ ಜನಿಸಿರಬೇಕೆಂದು ಹೇಳುತ್ತಾರೆ. ಚೆನ್ನಬಸವಣ್ಣನವರ ತಂದೆಯ ಹೆಸರನ್ನು 'ಅಮಲಬಸವ ಚಾರಿತ್ರ್ಯ' (ಸಿಂಗಿರಾಜಪುರಾಣ)ವೊಂದನ್ನು ಬಿಟ್ಟು ಉಳಿದಾವ ಕೃತಿಗಳೂ

ಹೇಳುವುದಿಲ್ಲ. ಸಿಂಗಿರಾಜ ಪುರಾಣದಲ್ಲಿ ಎರಡು ಮೂರು ಕಡೆ ಅಕ್ಕನಾಗಮ್ಮನ ಪತಿ ಶಿವಸ್ವಾಮಿ ಅಥವಾ ಶಿವದೇವನೆಂದು ತೋರಿಸುತ್ತದೆ.

ಹಲ ಕೆಲವು ವೀರಶೈವಗ್ರಂಥಗಳಲ್ಲಿ ಚೆನ್ನಬಸವಣ್ಣನು ಪ್ರಸಾದದಿಂದ ಜನಿಸಿದರೆಂಬ ಮಾತು ಬರುತ್ತದೆ. ಲಕ್ಕಣ್ಣದಂಡೇಶ (ಕ್ರಿ.ಶ. ಸು. ೧೪೨೮) ತನ್ನ ಶಿವತತ್ವಚಿಂತಾಮಣಿಯಲ್ಲಿ ಜಂಗಮದ ತೀರ್ಥ–ಪ್ರಸಾದ ಸೇವನೆಯಿಂದ ಅಕ್ಕನಾಗಮ್ಮ ಚೆನ್ನಬಸವಣ್ಣನನ್ನು ಪಡೆದಳೆಂಬ ಅರ್ಥಬರುವಂತೆ ಹೇಳಲಾಗಿದೆ. ಲಕ್ಕಣ್ಣದಂಡೇಶನ ಸಮಕಾಲೀನನಾಗಿರಬಹುದಾದ ಚಾಮರಸ ತನ್ನ ಪ್ರಭುಲಿಂಗಲೀಲೆಯಲ್ಲಿ ಬಸವಣ್ಣನವರ ಒಕ್ಕುಮಿಕ್ಕ ಪ್ರಸಾದವನ್ನು ಅಕ್ಕನಾಗಾಯಿಗಳು ಉಣಲು, ಅದರಿಂದಾಗಿ ಮುಂದೆ ಚೆನ್ನಬಸವಣ್ಣನವರು ಜನಿಸಿದನೆಂದು ಹೇಳಿದೆ. ಪ್ರಾಯಶಃ ಕ್ರಿ.ಶ. ೧೫೦೦ರಲ್ಲಿ ಸಂಕಲನಗೊಂಡಿರಬಹುದಾದ ಹಲಗೆಯದೇವರ ಶೂನ್ಯಸಂಪಾದನೆಯಲ್ಲಿ ಕಕ್ಕಯ್ಯನ ಪ್ರಸಾದದಿಂದ ಚೆನ್ನಬಸವಣ್ಣ ಜನಿಸಿದರೆಂಬ ಮಾತು ಬರುತ್ತದೆ. ವಿರೂಪಾಕ್ಷಪಂಡಿತನ 'ಚೆನ್ನಬಸವ ಪುರಾಣ'ದಲ್ಲಿ ಶಿವನ ಪ್ರಸಾದದದಿಂದ ಅರ್ಥಾತ್ ಶಿವನ ಚಿತ್ಕಲೆಯಿಂದ ಚೆನ್ನಬಸವಣ್ಣ ಜನಿಸಿದಂತೆ ಹೇಳಿದೆ. ತದನಂತರ ಬರುವ ಸಿದ್ಧನಂಜೇಶ, ಶಾಂತಲಿಂಗದೇಶಿಕ, ಅದೃಶ್ಯಕವಿ, ಚೆನ್ನಪ್ಪ ಕವಿ ಮೊದಲಾದವರು ಕಕ್ಕಯ್ಯನ ಪ್ರಸಾದದಿಂದಲೇ ಅಕ್ಕನಾಗಮ್ಮ ಚೆನ್ನಬಸವಣ್ಣನ ಪಡೆದಳೆಂದು ಹೇಳುತ್ತಾರೆ. ಇದೆಲ್ಲದರ ಒಟ್ಟು ಮತಿತಾರ್ಥವೆಂದರೆ ಇವು ಕವಿಕಲ್ಪನೆಗಳೆಂದು ಭಾವಿಸುವುದು ಸರಿ.

ಪ್ರಸ್ತುತ ಚೆನ್ನಬಸವಣ್ಣ ಸಂಪುಟವು ಆತನ ಜೀವನ ಸಾಧನೆಯನ್ನು ಹತ್ತು ಹಲವು ಮುಖಗಳನ್ನು ತೋರಿಸಿಕೊಡುತ್ತಕಟ್ಟುತ್ತದೆ. ವಚನ ಸಾಹಿತ್ಯ ಮತ್ತು ವೀರಶೈವ ಸಿದ್ಧಾಂತದ ಹೊಕ್ಕು ಬಳಕೆಗಳನ್ನು ಟಿ. ಎನ್. ಮಲ್ಲಪ್ಪ ಅವರು ಚೆನ್ನಾಗಿ ಅರಿತಿದ್ದರು. ಆ ಹಿರಿಯ ವಿದ್ವಾಂಸರ **ಚೆನ್ನಬಸವಣ್ಣ** ಲೇಖನವನ್ನು ಸಂಪುಟದ ಮೊದಲಿಗೆ ಬಳಸಿಕೊಳ್ಳಲಾಗಿದೆ. ಈ ಲೇಖನವು ಚೆನ್ನಬಸವಣ್ಣನವರ ಇತಿವೃತ್ತ ಹಾಗೂ ತಾತ್ತ್ವಿಕತೆಯನ್ನು ಪರಿಶೀಲಿಸುತ್ತದೆ. ವೀರಶೈವ ಸಿದ್ಧಾಂತದ ಹಿನ್ನೆಲೆಯಲ್ಲಿ ಈ ಲೇಖನವು ರೂಪುಗೊಂಡಿದೆ. ಈ ಲೇಖನದ ಮುಂದುವರಿಕೆಯಾಗಿ ಎಂ.ಆರ್. ಶ್ರೀನಿವಾಸಮೂರ್ತಿಯವರ **ಚೆನ್ನಬಸವಣ್ಣ ಶೈವ ಸಂಪ್ರದಾಯದ ಹಿನ್ನೆಲೆ** ಎಂಬ ಲೇಖನವನ್ನು ಬಳಸಲಾಗಿದೆ. ಈ ಲೇಖನವು ದಕ್ಷಿಣ ಭಾರತದ ಶೈವಸಂಪ್ರದಾಯದ ವಿಶಾಲ ಪರಿಪ್ರೇಕ್ಷದ ಮೂಲಕ ಚೆನ್ನಬಸವಣ್ಣನವರ ಸೈದ್ಧಾಂತಿಕ ಚರ್ಚೆಯನ್ನು ನಮ್ಮ ಮುಂದೆ ಮಂಡಿಸುತ್ತದೆ. ಆರ್.ಸಿ. ಹಿರೇಮಠರವರ **ವ್ಯಕ್ತಿತ್ವ ಪ್ರಭಾವಮುದ್ರೆ** ಎಂಬ ಲೇಖನವು ಚೆನ್ನಬಸವಣ್ಣನವರ ಆಂತರಿಕ ವ್ಯಕ್ತಿತ್ವವನ್ನು ಇತರೆ ಶರಣರ ನೆಲೆಯಲ್ಲಿ ವ್ಯಕ್ತೀಕರಿಸುತ್ತದೆ. ಇದು ಚೆನ್ನಬಸವಣ್ಣನವರ ಚಾರಿತ್ರಿಕತೆಯ ಮಹಾಪ್ರಭಾವವನ್ನು ವಿವರಿಸುತ್ತದೆ. ಡಾ. ಬಿ. ವಿ. ಮಲ್ಲಾಪುರವರ **ಚೆನ್ನಬಸವಣ್ಣ – ಜ್ಞಾನಯೋಗ** ಎಂಬ ಲೇಖನವು ಜ್ಞಾನ ಯೋಗದ ದೃಷ್ಟಿಯಿಂದ ಪ್ರಮುಖವೆನಿಸುತ್ತದೆ. ಈ ಲೇಖನವು ಹಲವಾರು ದೃಷ್ಟಿಕೋನಗಳಿಂದ ಪ್ರಮುಖವೆನಿಸುತ್ತದೆ. ಎಂ. ಎಂ. ಕಲಬುರ್ಗಿಯವರ ಲೇಖನವು ಪ್ರಮುಖವಾಗಿ ವಚನಗಳ ಸಂಪಾದನೆಯ ನೆಲೆಬೆಲೆಗಳನ್ನು ಕುರಿತಿದೆ. ಈವರೆಗೂ ಚೆನ್ನಬಸವಣ್ಣನವರ ವಚನಗಳ ಸಂಪಾದನ ಕ್ರಮದಲ್ಲಿ ಆಗಿರುವ ವಿವಿಧ ಬಗೆಯ ಚಾರಿತ್ರಿಕ ಸಂಪಾದನ ನೆಲೆಗಳನ್ನು ಕುರಿತಿದೆ. **ಚೆನ್ನಬಸವಣ್ಣನವರ ಜೀವನ ಮತ್ತು ವ್ಯಕ್ತಿತ್ವ** ಎಂಬ ಪ್ರೊ. ಟಿ.ಎಸ್. ಪಾಟೀಲ ಅವರ ಲೇಖನವು ಚೆನ್ನಬಸವಣ್ಣನವರ ಇತಿವೃತ್ತದ ಚಾರಿತ್ರಿಕ

ನೆಲೆಯೊಡನೆ ವ್ಯಕ್ತಿತ್ವವನ್ನು ಪರಾಂಬರಿಸುತ್ತದೆ. ಈ ಲೇಖನವು ಚೆನ್ನಬಸವಣ್ಣನವರ ಬಗೆಗೆ ಬಂದಿರುವ ವಿದ್ವಾಂಸರ ಅಭಿಪ್ರಾಯಗಳನ್ನು ಪೂರ್ವಪಕ್ಷವಾಗಿ ಇಟ್ಟುಕೊಂಡು ಇತಿವೃತ್ತದ ಸಮಸ್ಯೆಗಳನ್ನು ಬಗೆಹರಿಸುತ್ತದೆ.

ಈ ಸಂಪುಟದಲ್ಲಿ ಅಡಕಗೊಂಡಿರುವ ಡಾ. ಬಿ.ನಂ. ಚಂದ್ರಯ್ಯ ಅವರ **ಚೆನ್ನಬಸವಣ್ಣನವರಲ್ಲಿ ಕರ್ಮಯೋಗ ಮತ್ತು ಭಕ್ತಿಯೋಗ** ಎಂಬ ಲೇಖನವು ಆಧುನಿಕ ತತ್ತ್ವ ಚಿಂತನೆಯ ಹಿನ್ನೆಲೆಯಲ್ಲಿ ವಿವರಿಸಲು ಯತ್ನಿಸುತ್ತದೆ. ಪ್ರಸಾದಯೋಗವು ಕರ್ಮ ಹಾಗೂ ಭಕ್ತಿಯನ್ನು ಸಮನ್ವಯೀಕರಿಸಿಕೊಳ್ಳುತ್ತದೆಂಬ ಒಪ್ಪಂದದ ನಿಲುವು ಚರ್ಚೆಯನ್ನು ಬಯಸುತ್ತದೆ. ಡಾ. ಸಿದ್ಧಯ್ಯಪುರಾಣಿಕ ಅವರ **ಚಿನ್ಮಯಾನಂದ ಚೆನ್ನಬಸವಣ್ಣ** ಡಾ. ಎಸ್ ವಿದ್ಯಾಶಂಕರ್ ಅವರ **ಚೆನ್ನಬಸವಣ್ಣ** ಲೇಖನಗಳು ಹಿಂದಿನ ಲೇಖನಗಳ ಚರ್ಚೆಯ ಪೂರ್ವಾಪರನೆಲೆಗಳ ಹಿನ್ನೆಲೆಯಲ್ಲಿ ನಾವು ಗಮನಿಸಬಹುದು. ಹೆಚ್. ಗಂಗಾಧರನ್ ಅವರ **ಮಹಾಪ್ರಸಾದಿ ಶರಣ ಚೆನ್ನಬಸವಣ್ಣ** ಲೇಖನವು ಜನಪ್ರಿಯ ಧಾಟಿಯಿದ್ದರೂ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಗಮನಿಸಬಹುದಾದ ಉತ್ತಮ ಲೇಖನವಾಗಿದೆ. ಚೆನ್ನಬಸವಣ್ಣ ರಚಿಸಿದ ಮಂತ್ರಗೋಪ್ಯಗಳ ಬಗೆಗೆ ಒಂದು ಲೇಖನವನ್ನು ಇಲ್ಲಿ ಬಳಸಲಾಗಿದೆ. ಈ ಲೇಖನವು ತಾತ್ತ್ವಿಕವಾಗಿದ್ದರೂ ವಿವರವಾದ ಮಾಹಿತಿಯನ್ನು ಒದಗಿಸಿಕೊಡುತ್ತದೆ. **ಚೆನ್ನಬಸವಣ್ಣ ಮಂತ್ರಗೋಪ್ಯಗಳು** ಎಂಬೀ ಲೇಖನವನ್ನು ಡಾ. ಅನ್ನದಾನಯ್ಯ ಪುರಾಣಿಕ ಅವರು ವಿಶಿಷ್ಟ ರೀತಿಯಲ್ಲಿ ವಿಚಾರಗಳನ್ನು ಸಂಯೋಜಿಸಿದ್ದಾರೆ. ಡಾ. ಪರಮೇಶ್ವರಯ್ಯ ಸೊಪ್ಪಿಮಠ ಅವರ **ಷಟ್‌ಸ್ಥಲ ಚಕ್ರವರ್ತಿ ಚೆನ್ನಬಸವಣ್ಣ** ಲೇಖನವು ಚೆನ್ನಬಸವಣ್ಣನವರ ಹಿರಿಮೆಯನ್ನು ಷಟ್‌ಸ್ಥಲದ ಹಿನ್ನೆಲೆಯಲ್ಲಿಯೂ ಇತರ ವಚನಕಾರರ ಹೇಳಿಕೆಯಲ್ಲಿಯೂ ವಿವರಿಸಿದೆ. **ಚೆನ್ನಬಸವಣ್ಣನವರ ವಚನಗಳಲ್ಲಿ ಸಾಹಿತ್ತಿಕ ಮೌಲ್ಯ** ಎಂಬ ಲೇಖನವನ್ನು ಪ್ರಸಿದ್ಧ ವಿಮರ್ಶಕ ಎಚ್.ಎಂ. ಚೆನ್ನಯ್ಯ ಬರೆದಿದ್ದಾರೆ. ಈ ಲೇಖನವು ಮಧ್ಯಕಾಲೀನ ವಚನಸಾಹಿತ್ಯ ಮೀಮಾಂಸೆಯ ಹಿನ್ನೆಲೆಯಲ್ಲಿ ನಮಗೆ ಮುಖ್ಯವೆನಿಸುತ್ತದೆ. ಡಾ. ಟಿ. ಆರ್. ಚಂದ್ರಶೇಖರರವರ **ವಚನ ಸಂಸ್ಕೃತಿ ಚೆನ್ನಬಸವಣ್ಣನ ಭಿನ್ನಸ್ವರ** ಎಂಬ ಲೇಖನವು ಸಮಾಜೋ–ಸಾಂಸ್ಕೃತಿಕ ದೃಷ್ಟಿಯಿಂದ ಗಮನಿಸಬಹುದಾಗಿದೆ. ಡಾ. ಹೆಚ್. ತಿಪ್ಪೇರುದ್ರಸ್ವಾಮಿ ಅವರ **ಅನುಭಾವಿ ಕವಿ** ಹಾಗೂ ಡಾ. ಮಳಲಿ ವಸಂತ ಕುಮಾರ ಅವರ **ಅನುಭವ ಮಂಟಪದಲ್ಲಿ ಚೆನ್ನಬಸವಣ್ಣನವರು** ಎಂಬೀ ಎರಡು ಲೇಖನಗಳು ಭಿನ್ನ ದೃಷ್ಟಿಯಿಂದ ಗಮನಿಸಬಹುದಾದ ಲೇಖನಗಳಾಗಿವೆ. ಡಾ. ಪಿ.ಎಸ್. ಶಂಕರರವರ **ವೈದ್ಯ ವಿಜ್ಞಾನಿ ಚೆನ್ನಬಸವಣ್ಣನವರು** ರುದ್ರೇಶ ಗಂಗಾಧರ ಕಿತ್ತೂರರವರ **ಚೆನ್ನಬಸವಣ್ಣನವರ ವಚನಗಳಲ್ಲಿ ಭೂಗೋಳ ಮತ್ತು ಖಗೋಳ ವಿಜ್ಞಾನ** ಮತ್ತು **ಚೆನ್ನಬಸವಣ್ಣನವರ ವೈದ್ಯಕೀಯ ವಿಚಾರಗಳು** ಎಂಬ ಮೂರು ಲೇಖನಗಳು ವಿಶಿಷ್ಟವಾಗಿವೆ. ವಚನಗಳನ್ನು ವೈಜ್ಞಾನಿಕ ನೆಲೆಯಿಂದ ನೋಡಬಹುದೆಂಬ ಸಂಗತಿಯ ಕಡೆ ನಮ್ಮ ಗಮನವನ್ನು ಈ ಲೇಖನಗಳು ಸೆಳೆಯುತ್ತವೆ. ಡಾ. ಜಗದಾಂಬಾ ಮಲ್ಲೇದೇವರು ಬರೆದ **ಅಷ್ಟಾವರಣಗಳು** ಮತ್ತು ಪ್ರೊ. ಜಿ. ಎನ್. ರೇವಣ್ಣ ಬರೆದ **ಪಂಚಾಚಾರ** ಈ ಎರಡು ಲೇಖನಗಳು ಶುದ್ಧ ಆಚರಣೆಯ ದೃಷ್ಟಿಯಿಂದ ಪರಿಶೀಲಿಸಲು ಅರ್ಹವಾಗಿವೆ. ಚೆನ್ನಬಸವಣ್ಣನು ಆಚರಣಾತ್ಮಕನೆಲೆಯ ಸಾಧಕ. ಈ ಸಾಧನೆಯ ಹಿನ್ನೆಲೆಯಲ್ಲಿ ಇವರೆರಡು ಲೇಖನಗಳನ್ನು ಗಮನಿಸಬಹುದಾಗಿದೆ.

ಡಾ. ಬಸವರಾಜ ಸಬರದ ಅವರ **ಬಸವಣ್ಣನವರ ವಚನಗಳಲ್ಲಿ ತಾತ್ತ್ವಿಕ ನೆಲೆ** ಎಂಬ ಲೇಖನವು ಹೊಚ್ಚ ಹೊಸತಾಗಿದೆ.

ಈ ಸಂಪುಟವನ್ನು ಹೀಗೆ ಹಲವು ಬಗೆಯ ಲೇಖನಗಳಿಂದ ಕಟ್ಟಲಾಗಿದೆ. ಇಲ್ಲಿಯ ಲೇಖನಗಳು ಚಾರಿತ್ರಿಕ, ಸಾಹಿತ್ಯಿಕ, ಧಾರ್ಮಿಕ, ವೈದ್ಯಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಗಳಿಂದ ರೂಪಿಸಲಾಗಿದೆ. ಈ ಎಲ್ಲಾ ಲೇಖನಗಳ ಮುಖಾಂತರ ಚೆನ್ನಬಸವಣ್ಣನ ಸಮಸ್ತ ದೃಷ್ಟಿಕೋನಗಳನ್ನು ಪರಿಶೀಲಿಸಲು ಸಹಾಯಕವಾಗಿದೆ. ಕಳೆದ ಶತಮಾನವು ಚೆನ್ನಬಸವಣ್ಣನನ್ನು ಕಂಡ ಸಮಸ್ತ ನೆಲೆಗಳನ್ನು ಇಲ್ಲಿ ಅಕರಗೊಳಿಸಲಾಗಿದೆ. ಆದರೆ, ಚೆನ್ನಬಸವಣ್ಣನ ಭಾಷಿಕ ನೆಲೆಯಿಂದಲೂ ಇತರ ಶರಣರಿಗು ಈತನಿಗು ಇರುವ ತಾತ್ತ್ವಿಕ ಭೇದಗಳ ಸ್ವರೂಪೋದ್ಧೇಶಗಳನ್ನು ಅರಿಯಲು ಅವಕಾಶವಿದೆ.

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡವಿಭಾಗವು ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿಯಲ್ಲಿ ಈ ಸಂಪುಟವನ್ನು ಪ್ರಕಟಗೊಳಿಸುತ್ತಿದೆ. ಈ ಸಂಪುಟದ ಸಿದ್ಧತೆಯಲ್ಲಿ ಅನೇಕರ ಸಹಕಾರ ನನಗೆ ಒದಗಿದೆ. ಈ ಸಂಪುಟವನ್ನು ಸಿದ್ಧಪಡಿಸಲು ಒತ್ತಾಯಪಡಿಸಿ ನನ್ನಿಂದ ಆಗುಗೊಳಿಸಿದ ತರುಣ ವಿದ್ವಾಂಸ ಡಾ. ಹೆಚ್.ಟಿ. ಪೋತೆ ಹಾಗೂ ಸಲಹಾ ಸಮಿತಿಯ ಸಮಸ್ತರಿಗೂ ನನ್ನ ವಂದನೆಗಳು ಸಲ್ಲುತ್ತವೆ. ಲೇಖನಗಳನ್ನು ನೆರಳುಪ್ರತಿ ಮಾಡಿಸಿ ಕಳುಹಿಸಿಕೊಟ್ಟು ನೆರವಾದ ಮೈಸೂರಿನ ವಿದ್ವನ್ಮಿತ್ರ ಡಾ. ಎನ್.ಎಸ್. ತಾರಾನಾಥ ಹಾಗೂ ಬಿಜಾಪುರ ಮಹಿಳಾ ವಿಶ್ವವಿದ್ಯಾಲಯದ ತರುಣ ಮಿತ್ರ ಡಾ. ಎಂ. ನಾಗರಾಜ ಇವರಿಬ್ಬರನ್ನು ಮನವಾರೆ ನೆನೆಯುತ್ತೇನೆ. ಇಲ್ಲಿಯ ಲೇಖನಗಳನ್ನು ಅಕ್ಷರಜೋಡಣೆ ಮಾಡಿಕೊಟ್ಟ ಉದಯಗ್ರಾಫಿಕ್ಸ್‌ನ ಎಂ. ಡಿ. ಶೈಲಜಾ ಮತ್ತು ಹಲವು ಬಗೆಗಳಲ್ಲಿ ನೆರವಾದ ಮಿತ್ರರನ್ನು ತುಂಬು ಮನಸ್ಸಿನಿಂದ ನೆನೆಯುತ್ತೇನೆ. ಅಂದವಾಗಿ ಮುದ್ರಿಸಿಕೊಟ್ಟ ಇಳಾ ಮುದ್ರಣದ ಮಾಲೀಕರಾದ ಸನ್ಮಿತ್ರ ಗುರು ಅವರನ್ನು ಈ ಹೊತ್ತಿನಲ್ಲಿ ನೆನೆಯುವುದು ನನ್ನ ಕರ್ತವ್ಯವಷ್ಟೆ.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಪರಿವಿಡಿ

ಚೆನ್ನಬಸವಣ್ಣ

●

ಟಿ. ಎನ್. ಮಲ್ಲಪ್ಪ

ಕರ್ಮಕಾಂಡದಲ್ಲಿ ಬೇಸತ್ತು ಜ್ಞಾನಕಾಂಡದ ಕಡೆಗೆ ತಿರುಗಿದ ಉಪನಿಷತ್ಕಾರರ ಸಿದ್ಧಾಂತವಾಗಲೀ ತದನಂತರ ಪ್ರಚಾರಕ್ಕೆ ಬಂದ ಬೌದ್ಧರ ಶೂನ್ಯವಾದವಾಗಲೀ. ಅದನ್ನು ಓಮ್ಮೆಟ್ಟಿಸಿದ ಶಂಕರಾಚಾರ್ಯರ ನಿರ್ವಿಶೇಷ ಬ್ರಹ್ಮವಾದವಾಗಲಿ ಜನಸಾಮಾನ್ಯಕ್ಕೆ ಅರ್ಥವಾಗಲಿಲ್ಲ. ಭಕ್ತಿಪಂಥದ ಪಾಂಚರಾತ್ರ ಪಾಶುಪತಮತಗಳು ವೈದಿಕ ಮಾರ್ಗಾನುಯಾಯಿಗಳಾಗಿ ಜನಸಾಮಾನ್ಯರನ್ನು ಆಕರ್ಷಿಸಿದವು. ಪಲ್ಲವರ ಕಾಲದಿಂದ ಹನ್ನೆರಡನೆಯ ಶತಮಾನದವರೆಗೂ ಪಾಶುಪತ ಕಾಳಾಮುಖ ಗುರುಗಳು ವೇದವೇದಾಂತಾದಿಗಳನ್ನು ಕಲಿಸುವ ವಿದ್ಯಾನಿಲಯಗಳ ಅಧಿಪತಿಗಳಾಗಿಯೂ ರಾಜಗುರುಗಳಾಗಿಯೂ ಪ್ರಸಿದ್ಧಿಗೆ ಬಂದರು. ಪಲ್ಲವರ ಕಾಲದಲ್ಲಿ ಅಗ್ನಿಷ್ಟೋಮ ವಾಜಪೇಯ ಅಶ್ವಮೇಧಾದಿ ಯಜ್ಞಯಾಗಗಳನ್ನು ಮಾಡಿದುದು ಕಂಡು ಬಂದಿದೆ. ಬೌದ್ಧರಲ್ಲಿದ್ದ ಶಾಕ್ತ ಸಂಪ್ರದಾಯವು ಕೆಲವು ಪಾಶುಪತ ಶಾಖೆಗಳಲ್ಲಿ ಸೇರಿಕೊಂಡಿದ್ದಿತು. ವರ್ಣಾಶ್ರಮಧರ್ಮ ಪರಿಪಾಲನೆಯೂ ರಾಜ್ಯದ ಹಿತದೃಷ್ಟಿಯಿಂದ ಯಜ್ಞಯಾಗಾದಿಗಳನ್ನು ಮಾಡುವುದೂ ರಾಜನ ಧರ್ಮವೆಂದು ಬೋಧಿಸುವ ಪುರೋಹಿತ ವರ್ಗವು ಪ್ರಬಲವಾಗುತ್ತಿತ್ತು. ಶೂದ್ರಾದಿಗಳು ಅಂತರ ಬೆಂತರಕಾಳಯ್ಯ ಮಾರಯ್ಯ ಧೂಳಯ್ಯಗಳೆಂಬ ಪುಡಿ ದೈವಗಳಿಗೆ ಪ್ರಾಣಿಗಳನ್ನು ಬಲಿಕೊಡುತ್ತಿದ್ದುದು ಯಜ್ಞಯಾಗಾದಿಗಳ ಅನುಕರಣವಾಗಿದ್ದಿತು. ಅರ್ಥವಿಲ್ಲದ ಈ ಮೂಢ ಪದ್ಧತಿ ಗಳನ್ನು ತಪ್ಪಿಸಿ ಸಮಾಜ ಸಂಸ್ಕರಣವನ್ನು ರಾಜಗುರುಗಳೂ ಸಂಪ್ರದಾಯಶರಣ ರಾಗಿದ್ದುದರಿಂದ ಇದು ಸುಲಭವಾಗಿರಲಿಲ್ಲ. ಆದರೂ ದೈವ ಪ್ರೇರಿತ ಶರಣರ ಸಮಾಜವನ್ನು ಸುಧಾರಿಸುವ ಕಾರ್ಯವನ್ನು ರಾಜರಿಂದಲೂ ರಾಜಗುರು ಗಳಿಂದಲೂ ತಡೆಯಲಾಗಲಿಲ್ಲ.

ಎಂ.ಆರ್. ಶ್ರೀನಿವಾಸಮೂರ್ತಿಗಳ ವಚನ ಧರ್ಮಸಾರದಲ್ಲಿ ಹೇಳಿದಂತೆ:

'ಇಂಥವರ ಮೇಲೆಲ್ಲ ಧಾಳಿಮಾಡಿ ವಚನ ಧರ್ಮದಲ್ಲಿ ಸೇರಿಕೊಳ್ಳುವಂತೆ ಮಾಡಿದ್ದು ನಿಜವಾಗಿ ದೊಡ್ಡ ಸಾಹಸದ ಪ್ರಕರಣ. ಕ್ರಿ.ಶ. ೧೪ನೆಯ ಶತಮಾನ ಮುಗಿಯುವ ಹೊತ್ತಿಗೆ ಈ ಕಾಳಾಮುಖ ಮತಗಳು ಹೇಳ ಹೆಸರಿಲ್ಲದಂತೆ ಅದೃಶ್ಯವಾಗಿ ಹೋದುದು ಪರಮಾಶ್ಚರ್ಯ ಪ್ರಕರಣ. ಈ ದಿಗ್ವಿಜಯ ಪ್ರಕರಣದಲ್ಲಿ ಮಹಾನಾಯಕರುಗಳಾಗಿದ್ದ ಮೂವರು ಅತಿರಥರು

ಬಸವಣ್ಣ, ಚೆನ್ನಬಸವಣ್ಣ ಮತ್ತು ಪ್ರಭುದೇವರು. ಬ್ರಹ್ಮಾಸ್ತ್ರ, ವೈಷ್ಣವಾಸ್ತ್ರ, ಪಾಶುಪತಾಸ್ತ್ರಗಳು ಏಕಕಾಲದಲ್ಲಿ ಶತ್ರು ಸೈನ್ಯದ ಮೇಲೆ ಪ್ರಯೋಗವಾದಂತೆ ಪರಿಣಾಮವಾಯಿತು; ಆದರೆ ಪ್ರಳಯ ಕಾಲದ ಅಂಧಕಾರವನ್ನು ಅವರು ಬರಗೊಡಲಿಲ್ಲ. ವೀರಶೈವರ ಪರಿಭಾಷೆಯಲ್ಲಿ ಹೇಳುವುದಾದರೆ ಬಸವಣ್ಣ ಇಷ್ಟ ಲಿಂಗವಾಗಿ, ಚನ್ನಬಸವಣ್ಣ ಪ್ರಾಣಲಿಂಗವಾಗಿ, ಪ್ರಭು ಭಾವಲಿಂಗವಾಗಿ, ಜ್ಯೋತಿರ್ಮಯವಾದ ಮಹಾಲಿಂಗದ ಮೂರು ಮುಖಗಳಾಗಿ ಕಾಂತಿಯನ್ನು ಬೀರಿದರು. ದಾರಿತಪ್ಪಿದವರು ಧರ್ಮ ಮಾರ್ಗಕ್ಕೆ ಬರುವಂತಾಯಿತು.... ಹಲವರು ಮಹಿಮಾಪುರುಷರು ಕಲ್ಯಾಣಕ್ಕೆ ಬಂದರೆಂದು ಬಸವ ಪುರಾಣಾದಿಗಳಿಂದ ತಿಳಿದುಬರುತ್ತದೆ. ಅಲ್ಲಿ ಶಿವಾನುಭವ ಮಂಟಪದಲ್ಲಿ ಆತ್ಮ ಆತ್ಮ ಮಥನಿಸಿ ಅನುಭಾವ ಹುಟ್ಟಿತು. ವಚನ ಧರ್ಮ ಪ್ರಕಾಶಿಸಿತು.'

ಅನುಭವ ಮಂಟಪದ ಅಧ್ಯಕ್ಷ ಪರಮ ವೈರಾಗ್ಯಮೂರ್ತಿ ಅಲ್ಲಮ ಪ್ರಭುವಿನ ನೇತೃತ್ವದಲ್ಲಿ ಭಕ್ತಿಭಂಡಾರಿ ಬಸವಣ್ಣನವರ ಯೋಜನೆಯಂತೆ ಸುಧಾರಣೆಗಳನ್ನು ಕಾರ್ಯರೂಪಕ್ಕೆ ತಂದ ಕೀರ್ತಿ ಚೆನ್ನಬಸವೇಶ್ವರನಿಗೆ ಸೇರಿದುದು. ವಯಸ್ಸಿನಲ್ಲಿ ಕಿರಿಯನಾದರೂ ಅರಿವಿನಲ್ಲಿಯೂ ಅರಿದುದನ್ನು ಕಾರ್ಯರೂಪಕ್ಕೆ ತರುವುದರಲ್ಲಿಯೂ ಚಾಣಾಕ್ಷನಾದ ಶಿವಯೋಗಿ ಸುಜ್ಞಾನಿ ಚೆನ್ನಬಸವೇಶ್ವರನು ಪ್ರಭುವಿನಿಂದ ಹೀಗೆ ಕೊಂಡಾಡಲ್ಪಟ್ಟಿರುವನು:

ಕಿರಿಯರಾದಡೇನು ಹಿರಿಯರಾಡೇನು? ಅರಿವಿಂಗೆ ಹಿರಿದು ಕಿರಿದುಂಟೆ? ಆದಿಯನಾದಿ ಇಲ್ಲದಂದು ಅಜಾಂಡ ಬ್ರಹ್ಮಾಂಡ ಕೋಟಿಗಳುದಯವಾಗದಂದು ಗೊಹೇಶ್ವರಲಿಂಗದಲ್ಲಿ ನೀನೊಬ್ಬನೇ ಮಹಾಜ್ಞಾನಿ ಎಂಬುದು ಕಾಣ ಬಂದಿತ್ತು ಕಾಣಾ ಚೆನ್ನಬಸವಣ್ಣ

(ಅ.ವ.ಚ. ೧೦೬೫)

ಆಚಾರದಲ್ಲಿ ಅನುಭಾವಿ, ಪ್ರಸಾದದಲ್ಲಿ ಪರಿಣಾಮಿ ಗುಹೇಶ್ವರ ಲಿಂಗದಲ್ಲಿ ಚೆನ್ನಬಸವಣ್ಣನೆಂಬ ಪ್ರಸಾದಿಗೆ ನಮೋ ನಮೋ ಎನುತಿರ್ದೆನು. ಚೆನ್ನಬಸವೇಶನನ್ನು ಸಾಕಿ ಸಲಹಿ ಪರಮಜ್ಞಾನಿಯನ್ನಾಗಿ ಮಾಡಿದ ಬಸವೇಶನೇ ಹೀಗೆ ಸ್ತೋತ್ರ ಮಾಡಿದ್ದಾನೆ:

'ಶಿವಾಚಾರದ ವಿಚಾರವನರಿಯದೆ ಜಗವು ಕೆಟ್ಟಿಹುದೆಂದು ಪರಮಪುರುಷಾರ್ಥ ಕಾರಣಮಾಗಿ ಮರ್ತ್ಯಲೋಕದಲ್ಲಿ ಅವತರಿಸಿ ಗುರುಲಿಂಗ ಜಂಗಮ ಪಾದೋದಕ ಪ್ರಸಾದವೆಂಬ ಪಂಚಾಚಾರವ ನೆಲೆಗೊಳಿಸಿ, ಷಟ್‌ಸ್ಥಲವೆಂಬ ಮಹಾನುಭಾವಮಂ ಕರತಳಾಮಳಕವಾಗಿ ಸ್ಥಲಗೊಳಿಸಿ ಪ್ರಾಣಲಿಂಗ, ಲಿಂಗ ಪ್ರಾಣವೆಂಬ ಭೇದವೆನಗೆ ತಿಳುಹಿ. ಎನ್ನ ಭ್ರಾಂತಿ ಸೂತಕವ ಬಿಡಿಸಿ ಲಿಂಗೈಕ್ಯವೆಂಬುದನೆನಗೆ ತೋರಿದೆಯಾಗಿ ನಿನ್ನಿಂದಲಾನು ಸಂಗನಬಸವಣ್ಣನೆಂಬ ಹೆಸರು ವಡೆದನು ಕೂಡಲಸಂಗಮದೇವರ ಸಾಕ್ಷಿಯಾಗಿ, ಎನಗೆ ನೀನು ಪರಮಾರಾಧ್ಯ ಕಣಾ ಚೆನ್ನಬಸವಣ್ಣ.'

ಪಾತಂಜಲಯೋಗದಲ್ಲಿ ನಿಷ್ಣಾತನಾಗಿದ್ದ ಸಿದ್ಧರಾಮ ಯೋಗೀಶ್ವರನಿಗೆ ಗುರುವಾಗಿ ಶಿವಯೋಗವನ್ನು ಕಲಿಸಿದ ಚೆನ್ನಬಸವೇಶ್ವರನನ್ನು ಸಿದ್ಧರಾಮ ಯೋಗಿಯು ಹೀಗೆ ಕೊಂಡಾಡಿರುವನು:

'ಅಧ್ಯಾತ್ಮ ಅಧ್ಯಾತ್ಮವೆಂದೆಂಬರಿ ಅಧ್ಯಾತ್ಮವಾರಿಗೆ? ಶ್ರೀ ಗುರುಸ್ವಾಮಿ ಬಹಳವಪ್ಪ ಶಿವಲಿಂಗದ ಸೂಕ್ಷ್ಮವ ಮಾಡಿ ಕರಸ್ಥಲಕ್ಕೆ ಕೊಟ್ಟ ಬಳಿಕ ಬೇರೆ ಯೋಗವುಂಟೆ? ತನ್ನ ಹಸ್ತವ ಮಸ್ತಕದಲ್ಲಿಟ್ಟು ವಾಯು ಪ್ರಾಣಿಯಾಗಿದ್ದುದಕೊಂದು ಲಿಂಗ ಪ್ರಾಣಿಯ ಮಾಡಿದ ಬಳಿಕ ಮರಳಿ ಯೋಗವುಂಟೇ

ಶಿವಯೋಗವಲ್ಲದೆ? ಲಿಂಗಾರ್ಚನೆಯ ಮಾಡಿ ಜಂಗಮ ಪ್ರಸಾದವ ಕೊಂಡ ಬಳಿಕ ಮರಳಿ ಯೋಗಕ್ಕೆ ಒಡಂಬಡುವುದೆ ಅರಿವು? ಇಂತಪ್ಪವನಗತಿಗಳೆದು ಶುದ್ಧ ಶಿವಯೋಗಿಯ ಮಾಡಿದಾತ ಚೆನ್ನಬಸವಣ್ಣ. ಆನು ಚೆನ್ನಬಸವಣ್ಣನ ಕರುಣದಿಂದೆ ಅಭ್ಯಾಸ ಯೋಗವನತಿಗಳೆದು ಶಿವಯೋಗದಲ್ಲಿ ನಿತ್ಯನಾಗಿ, ಭಕ್ತಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣೈಕ್ಯನೆಂಬ ಷಡುಸ್ಥಲಕ್ಕಧಿಕಾರಿಯಾದೆ. ನಿನ್ನವರ ಸಲುಗೆಗೆ ಸಂದೆ, ಚೆನ್ನಬಸವಣ್ಣನ ಕೃಪೆ ಎನ್ನನಿಂತು ಮಾಡಿತ್ತು ಕಣಾ ಗುರುವೆ ಕಪಿಲಸಿದ್ಧ ಮಲ್ಲಿಕಾರ್ಜುನ.'

(ಸಿ.ವ.ವ. ೧೦೩೯)

ಮೇಲಿನಂತೆಯೇ ಮಹಾದೇವಿಯಕ್ಕ ಮಡಿವಾಳ ಮಾಚಯ್ಯ ಮರುಳುಶಂಕರದೇವರೇ ಮೊದಲಾದವರಿಂದ ಹೊಗಳಲ್ಪಟ್ಟಿದ್ದರೂ ಮೇಲಿನ ಮೂವರು ಮಹಿಮಾ ಪುರುಷರ ಉಕ್ತಿಗಳಲ್ಲಿ ಕೆಲಭಾಗವನ್ನು ಮಾತ್ರ ಆರಿಸಿರುವುದಕ್ಕೆ ಕಾರಣ ಈ ಸ್ತೋತ್ರ ಭಾಗಗಳಿಂದ ಚೆನ್ನಬಸವಣ್ಣನು ಸಾಧಿಸಿದ ಆಧ್ಯಾತ್ಮದ ನಿಲುವು ಗೋಚರವಾಗುವುದಲ್ಲದೆ ಅವನು ಸಿದ್ಧಾಂತೀಕರಿಸಿ ಉಪದೇಶಿಸಿದ ಅಷ್ಟಾವರಣ ಪಂಚಾಚಾರ ಶಿವಯೋಗ ಮೊದಲಾದವುಗಳಲ್ಲಿ ಅವನಿಗಿದ್ದ ಪರಿಪೂರ್ಣ ಅನುಭವವು ಸ್ಪಷ್ಟವಾಗುವುದು ಎಂಬುದೇ ಆಗಿದೆ.

ಚಿಕ್ಕ ವಯಸ್ಸಿನಲ್ಲಿಯೇ ಇಂತಹ ಕ್ಲಿಷ್ಟವಾದ ವಿಷಯಗಳಲ್ಲಿ ಚೆನ್ನಬಸವಣ್ಣನು ನಿಷ್ಣಾತನಾದುದಕ್ಕೆ ಅವನ ಸೋದರ ಮಾವ ಭಕ್ತಿ ಭಂಡಾರಿ 'ವೀರಶೈವ ನಿರ್ಣಯ ಪರಮಾವತಾರ' ಬಸವಣ್ಣನು. ಚೆನ್ನಬಸವಣ್ಣನನ್ನು ಪೋಷಿಸಿ ವಿದ್ಯಾಬುದ್ಧಿಗಳನ್ನು ಕಲಿಸಿ ತನ್ನ ಸಂಪ್ರದಾಯದ ಕಂದನನ್ನಾಗಿ ಮಾಡಿಕೊಂಡುದೇ ಮೊದಲನೆಯ ಕಾರಣವಾಗಿದೆ. ಸೋಮನಾಥನು ಹೇಳುವಂತೆ ಚೆನ್ನಬಸವಣ್ಣನು 'ಬಸವ ಕಾರುಣ್ಯ ಹಸ್ತ ಸಂಭೂತ ಪ್ರಶಸ್ತ ದೇಹನು. ಸಂಸಾರ ನಿಸ್ಸಂಗಿ ಸರ್ವಾಂಗಲಿಂಗಿ.' ಎರಡನೆಯ ಕಾರಣ ಅವನು ಶಿವಯೋಗಿನಿಯಾದ ನಾಗಲಾಂಬೆಯ ತನೂಭವನಾಗಿದ್ದುದೇ ಆಗಿದೆ. ಅವಳೂ ಬಸವಣ್ಣನೂ ಬಾಗೆವಾಡಿ ಪುರವರಾಧೀಶ್ವರ ಗುರುಶೈವ ಭೂಸುರ ಮಾದಿರಾಜನ ಮಕ್ಕಳು. ಅವರು ಹುಟ್ಟಿದ ಸ್ಥಳವು ಹರಿಹರನ ಮಾತಿನಲ್ಲಿ 'ಶಿವ ಪುರಾಣಾಗಮ ಕುಳಂಗಳೆಸೆದಿರ್ಪ. ಶಿವಶಾಸ್ತ್ರ ಘೋಷ ಸಂಗೀತದಿಂದಿಡಿದಿರ್ಪ ಅಗ್ರಹಾರಂ ಬಾಗೆವಾಡಿ.' ಷಡಕ್ಷರ ದೇವನ ಮಾತಿನಲ್ಲಿ 'ಮಂಗಳಾಕರ ಲಿಂಗ ಮಂದಿರ ಮಂಜುಳಂ ಕರವೊಪ್ಪಿತಾ ಇಂಗಳೇಶ್ವರ ಬಾಗೆವಾಡಿ.' ಹೊನ್ನವಾಡಿಯ ಶಾಸನದಂತೆ *(No. 83, Bombay Karnataka Inscriptions Vol.I Part I)* ಬಾಗೆವಾಡಿಯು ಜ್ಞಾನರಾಶಿ ವ್ಯಾಖ್ಯಾನ ದೇವರೇ ಮೊದಲಾದ ಪಾಶುಪತ ಮಾಹೇಶ್ವರರ ಸ್ವಸ್ಥಾನಗಳಲ್ಲೊಂದಾಗಿತ್ತು. ಇಂತಹ ವಾತಾವರಣದಲ್ಲಿ ಬೆಳೆದವಳು ಚೆನ್ನಬಸವಣ್ಣನ ತಾಯಿ ಅಕ್ಕನಾಗಮ್ಮ. ಅವಳು ತಪಸ್ಸು ಮಾಡಿದ ಗವಿಯೂ, ಅದರ ಸಮೀಪದಲ್ಲಿಯೇ ಅವಳ ಮೇಲೆ ಪ್ರಭಾವವನ್ನು ಬೀರಿದ ರೇವಣ್ಣಸಿದ್ಧರ ಗವಿಯೂ ಇಂಗಳೇಶ್ವರದಲ್ಲಿದೆ. ಇಂತಹ ತಾಯಿಯ ಪೋಷಣೆಯಲ್ಲಿ ಬೆಳೆದ ಚೆನ್ನಬಸವಣ್ಣನಲ್ಲಿ ರಕ್ತಗತವಾಗಿದ್ದ ಸದ್ಬುದ್ಧಿ ಸದಾಚಾರಗಳು ಭಕ್ತಿಭಂಡಾರಿ ಬಸವಣ್ಣನ ಮಾರ್ಗದರ್ಶನದಿಂದ ಅಭಿವೃದ್ಧಿಯಾದವು.

ಮತಸ್ಥಾಪಕರು ಅಯೋನಿಜವೆಂದು ಭಾವಿಸುವುದು ಅಪರೂಪವೇನಲ್ಲ. ಪುರುಷ ಸಂಪರ್ಕವಿಲ್ಲದೆ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದವನು ಕ್ರೈಸ್ತನು; ಚಿದ್ವಿಲಾಸಿನಿಯಲ್ಲಿಯೂ ಮಾಧವಿಯಲ್ಲಿಯೂ ಹೇಳಿರುವಂತೆ ಶಂಕರಾಚಾರ್ಯರ ತಾಯಿಯು ಬ್ರಾಹ್ಮಣರ

ಸಂತರ್ಪಣೆಯಲ್ಲಿ ಅವರುಂಡು ಮಿಕ್ಕುದನ್ನು ಉಂಡುದರಿಂದ ಗರ್ಭವತಿಯಾದಳು. ಅದರಲ್ಲಿ ಶೈವತೇಜಸ್ಸು ಸೇರಿಕೊಂಡಿತ್ತು (ಭಕ್ತೇಪ್ರವಿಷ್ಟಮಭವತ್‌ಕಿಲ ಶೈವತೇಜಃ); ಅನಂತಾನಂದಗಿರಿಯ ಶಂಕರ ಶಂಕರ ವಿಜಯದಂತೆ, ಗಂಡನು ತಪಸ್ಸಿಗೆ ಹೋಗಿದ್ದಾಗ ಶಂಕರಾಚಾರ್ಯರ ತಾಯಿ ಧ್ಯಾನಮಗ್ನಳಾಗಿರುವ ಸಮಯದಲ್ಲಿ ಶಿವನು ಅವಳ ಮುಖಕಮಲವನ್ನು ಹೊಗಲು ಅವಳು ಗರ್ಭವತಿಯಾದಳು. ಕ್ರೈಸ್ತನಂತೆ, ಶಂಕರಾಚಾರ್ಯರಂತೆ, ಅಯೋನಿಜ ಎಂಬ ಭಾವನೆ ಚೆನ್ನಬಸವೇಶ್ವರನ ವಿಷಯದಲ್ಲಿ ಬಂದುದರಿಂದ ಅವನಲ್ಲಿ ವೀರಶೈವ ಧರ್ಮದವರಿಗೆ ಇರುವ ಅತ್ಯುನ್ನತಭಾವನೆಯು ವ್ಯಕ್ತವಾಗುತ್ತದೆ. ಆದರೆ ಅವನು ಅಯೋನಿಜನೆಂದು ಹೇಳಬೇಕಾಗಿಲ್ಲ. ಕಕ್ಕಯ್ಯನ ಪ್ರಸಾದವನ್ನು ಬಸವಣ್ಣ ತಂದುಕೊಟ್ಟು ಅಕ್ಕನಾಗಮ್ಮನು ಗರ್ಭಿಣಿಯಾದಳೆಂಬುದೂ ಅವಳು ಹೊಟ್ಟೆಯನ್ನು ಸೀಳಿ ಮಗುವನ್ನು ತೆಗೆದಳೆಂಬ ಪವಾಡ ನಡೆದುದೂ ಅದನ್ನು ಹೇಳುವವರೆಲ್ಲರ ಪ್ರಕಾರ ಬಿಜ್ಜಳನಾಳುತ್ತಿದ್ದ ಕಲ್ಯಾಣದಲ್ಲಿ. ಬಿಜ್ಜಳನು ಚಾಳುಕ್ಯರಾಜ್ಯದ ಸರ್ವಾಧಿಕಾರಿಯಾಗಿ ಕಲ್ಯಾಣಕ್ಕೆ ಬಂದುದು ಕ್ರಿ.ಶ. ೧೧೫೭ರಲ್ಲಿ, ಕಲ್ಯಾಣದಲ್ಲಿ ಕ್ರಾಂತಿಯು ಕ್ರಿ.ಶ. ೧೧೬೮ರಲ್ಲಿ ಆದಾಗ ಚೆನ್ನಬಸವಣ್ಣನು ಹತ್ತು ಹದಿನಾಲ್ಕು ವರ್ಷದವನಾಗಿರಬೇಕಾಯಿತು. ಅಷ್ಟರಲ್ಲಿ ಅನೇಕ ಗ್ರಂಥಗಳನ್ನು ಬರೆದು, ಪ್ರಭುವಿನ ಅನಂತರ ಶೂನ್ಯ ಸಿಂಹಾಸನಾಧ್ಯಕ್ಷನಾಗಿ, ಬಸವಣ್ಣನು ಕಲ್ಯಾಣವನ್ನು ಬಿಟ್ಟಮೇಲೆ ಕೆಲಕಾಲ ಮಂತ್ರಿಯಾಗಿ, ಕ್ರಾಂತಿಯಾದ ಮೇಲೆ ಶರಣರ ರಕ್ಷಣೆಯ ಭಾರವನ್ನು ವಹಿಸಿಕೊಂಡು ಯುದ್ಧ ಮಾಡುತ್ತ ಉಳವಿಗೆ ಅವರನ್ನು ಕರೆದುಕೊಂಡು ಹೋದನೆಂಬುದು ಊಹಿಸಲಾಗದಷ್ಟು ಅಸಾಧ್ಯದ ಮಾತು. ಇದಲ್ಲದೆ ಪ್ರಸಾದ ವಿಷಯದಲ್ಲಿ ಒಮ್ಮತವಿಲ್ಲ. ಒಬ್ಬರು ಕಕ್ಕಯ್ಯನ ಪ್ರಸಾದದಿಂದ ಚೆನ್ನಬಸವಣ್ಣನು ಹುಟ್ಟಿದನೆಂದರೆ ಮತ್ತೊಬ್ಬರಂತೆ ಅವನು ಹುಟ್ಟಿದುದು ಬಸವಣ್ಣನ ಪ್ರಸಾದದಿಂದ. ಮಗದೊಬ್ಬರಂತೆ ಶಿವನ ಪ್ರಸಾದದಿಂದ. ಗಂಡನ ಸಂಪರ್ಕವಿಲ್ಲದೆ ಪ್ರಸಾದದಿಂದಲೇ ಚೆನ್ನಬಸವಣ್ಣನ ತಾಯಿ ಗರ್ಭಿಣಿಯಾಗಿದ್ದರೆ ಬಸವಣ್ಣನ ಬಾಯಿಯಲ್ಲಿ ಹೊಲೆ ಗಂಡನಲ್ಲದೆ ಪಿಂಡದ ನೆಲೆಗೆ ಆಶ್ರಯವಿಲ್ಲ ಕರ್ಣದಲ್ಲಿ ಹುಟ್ಟಿದವರುಂಟೆ ಜಗದೊಳಗೆ ಎಂಬ ಮಾತು ಬರುತ್ತಿರಲಿಲ್ಲ. ಸಿಂಗಿರಾಜ ಪುರಾಣದಲ್ಲಿಯೂ, ರಾಘವಾಂಕನದೆನ್ನುವ ದೇವಾಂಗ ದಾಸಿಮಯ್ಯನ ಪುರಾಣದಲ್ಲಿಯೂ ಹೇಳಿದಂತೆ ಚೆನ್ನಬಸವಣ್ಣನು ಅಕ್ಕನಾಗಮ್ಮನ ಮತ್ತು ಅವಳ ಪತಿ ಶಿವದೇವನ ಪುತ್ರನು.

ಚೆನ್ನಬಸವಣ್ಣನು ಪ್ರಸಾದದಿಂದ ಹುಟ್ಟಿದನೆಂಬ ಕಲ್ಪನೆಯು ಬರುವುದಕ್ಕೆ ಕಾರಣವಿಲ್ಲದೆಯಿಲ್ಲ. ಬಸವಣ್ಣನು ಸಂಗಮಕ್ಕೆ ಹೋಗಿ ಹಿಂದಿರುಗಲು ಒಪ್ಪದಿದ್ದಾಗ ಅವನ ಮಾತಾಪಿತೃಗಳು, ಸಿಂಗಿರಾಜ ಪುರಾಣದಲ್ಲಿ ಹೇಳಿದಂತೆ 'ಸಂಸಾರದ ಭ್ರಾಂತಳಿಯ ದಳಿಯ ಶಿವದೇವ ಮಗಳ್‌ನಾಗಾಯನಾತಂಗೆ ಸೇವೆಗೋಸುಗಮಿತ್ತು ತಕ್ಕುದಂ ಕೊಟ್ಟು ಬಂದರು' –ಎಂದು ಹೇಳಿರುವುದರಲ್ಲಿ ಅವರೊಡನೆ ಮಗು ಚೆನ್ನಬಸವಣ್ಣನಿದ್ದುದನ್ನು ಹೇಳಿಲ್ಲ. ಚೆನ್ನಬಸವಣ್ಣನು ಚಿಕ್ಕ ವಯಸ್ಸಿನಲ್ಲಿಯೇ ಅವನು ಮಾಡಿರುವ ಮಹತ್ಕಾರ್ಯವೆಲ್ಲವನ್ನೂ ಮಾಡಿದನೆಂಬ ಭಾವನೆಯಿರುವುದರಿಂದಲೂ, ಅವನ ತಂದೆತಾಯಿಗಳು ಕೂಡಲಸಂಗಮಕ್ಕೆ ಬರುವ ಮೊದಲೇ ಅವನಿನ್ನೂ ಹುಟ್ಟಿರಲಿಲ್ಲವೆಂದಾಗುವುದು. ಅಕ್ಕನಾಗಮ್ಮ ಶಿವದೇವರ ಮದುವೆಯು ಇಂಗಳೇಶ್ವರ ಬಾಗೆವಾಡಿಯಲ್ಲಿಯೇ ಆಗಿರಬೇಕು. 'ತನ್ನ ಮಗಳನಾತಂಗೆ ಕೊಡುವೆ ಪೂರ್ವಸಂಬಂಧವುಂಟು ಮಾತಾಮಹರ ದೆಸೆಯಿಂದ' ಎಂದು ಬಲದೇವನು ಬಸವಣ್ಣನಿಗೆ ತನ್ನ ಮಗಳನ್ನು ಕೊಟ್ಟು

ಮದುವೆ ಮಾಡಿರುವುದನ್ನು ಶಿವತತ್ವ ಚಿಂತಾಮಣಿಯಲ್ಲಿ ಹೇಳಿದೆ. ಆದುದರಿಂದ ಹತ್ತಿರ ಸಂಬಂಧಿಗಳಲ್ಲಿ ಮದುವೆಯಾಗುತ್ತಿದ್ದ ಕಾಲವದು. ಶಿವದೇವನು ಬಲದೇವನಿಗೆ ಸಾಕ್ಷಾತ್ ತಮ್ಮನೋ ಅಥವಾ ಚಿಕ್ಕಪ್ಪನು ಮಗನೋ ಆಗಿದ್ದರೆ ಹೆಚ್ಚಲ್ಲ. ಅವರ ಹೆಸರುಗಳಲ್ಲಿ ಸಾಮ್ಯವಿದೆ. ಅಂತೂ ಮದುವೆಯಾದ ಸ್ವಲ್ಪಕಾಲ ಮಕ್ಕಳಿಲ್ಲದಿದ್ದಾಗ ಸತಿಪತಿಗಳು ಗುರುದೈವ ಪ್ರಸಾದವನ್ನು ಬೇಡಿ ಅನಂತರ ಅಂತಹ ಪ್ರಸಾದದ ಮಹಿಮೆಯಿಂದ ಮಕ್ಕಳಾದುವೆಂದು ನಂಬುವುದು ಸ್ವಭಾವ. ಬಸವಣ್ಣನು ತನ್ನ ಅಕ್ಕನಾಗಾಯಿಯನ್ನೂ ಆಕೆಯ ಗಂಡನನ್ನೂ ಆಶೀರ್ವದಿಸಿ ಪ್ರಸಾದವನ್ನು ಅವಳಿಗಿತ್ತ ಮೇಲೆ ಚೆನ್ನಬಸವಣ್ಣನ ಜನನವಾಗಿರಬೇಕು. ಆದುದರಿಂದಲೇ ನಾಗಮ್ಮನ ವಚನವೊಂದರಲ್ಲಿ ಅವಳು 'ಎನ್ನಭಾವದ ಬಳ್ಳಿಯ ಬೇರು ಹರಿಯಿತ್ತಯ್ಯಾ ಸಂಗನ ಬಸವಣ್ಣನ ಒಕ್ಕುದ ಕೊಂಡೆನಾಗಿ' ಎಂದು ಹಾಡಿದ್ದಾಳೆ; ಚೆನ್ನಬಸವಣ್ಣನೂ ತನ್ನದೊಂದು ವಚನದಲ್ಲಿ– 'ನಿನ್ನ ಒಕ್ಕು ಮಿಕ್ಕ ಶೇಷವನಿಕ್ಕಿ ನಿನ್ನಂತರಂಗದಲ್ಲಿ ಅವ್ವೆ ನಾಗಾಯಿಯ ಇಂಬುಗೊಂಡೊಡೆ ಎನ್ನಮನ ನಿಮ್ಮ ಪಾದದಲ್ಲಿ ಕರಗಿತ್ತಯ್ಯಾ ಸಂಗನ ಬಸವಣ್ಣಾ' ಎಂದು ಹಾಡಿದ್ದಾನೆ. ತನ್ನ ಹದಿನಾರನೆಯ ವರ್ಷದಲ್ಲಿ 'ಕರ್ಮಲತೆಯಂತಿರ್ದ ಜನ್ನಿವಾರಮಂ ಕಳೆದು ಬಿಸುಟು' ಸಂಗಮೇಶ್ವರನಲ್ಲಿಗೆ ಬಸವಣ್ಣನು ಹೋದ ಅನಂತರ ಈಶಾನ ಶಿವದೇವ ಗುರುವಿನ ಅನುಗ್ರಹದಿಂದ ಶರಣನಾದಮೇಲೆ ಅವನು 'ಒಕ್ಕುಮಿಕ್ಕ' ಪ್ರಸಾದವನ್ನು ನಾಗಾಯಿಶಿವದೇವರು ಉಂಡುದರಿಂದ ಅವರ ಕುಮಾರನಾಗಿ ಚೆನ್ನಬಸವಣ್ಣನು ಹುಟ್ಟಿರಬೇಕು. ಬಸವಣ್ಣನಿಗೆ ಅಕ್ಕನಾಗಮ್ಮನು ಹಿರಿಯಳಾದರೂ ಶರಣನಾದ ಬಸವೇಶ್ವರನ ಶಿಷ್ಯೆಯಾಗಿ ವೈರಾಗ್ಯವನ್ನು ಬೆಳೆಸಿಕೊಂಡಿರಬೇಕು. ಅವಳು ತವರೂರಾದ ಇಂಗಳೇಶ್ವರಕ್ಕೆ ಹೋದಾಗ ಅಲ್ಲಿರುವ ಅವಳ ಹೆಸರಿನ ಗವಿಯಲ್ಲಿಯೂ ಕಲ್ಯಾಣದಲ್ಲಿದ್ದಾಗ ಅಲ್ಲಿ ಅವಳ ಹೆಸರಿನ ಗವಿಯಲ್ಲಿಯೂ ಶಿವಯೋಗನಿರತಳಾಗಿದ್ದು ಬಸವಣ್ಣ ಚೆನ್ನಬಸವಣ್ಣರೊಡನೆ ಸಾಮಾನ್ಯವಾಗಿ ವಾಸಿಸುತ್ತಿದ್ದಂತೆ ತೋರುವುದು. ಸಿಂಗಿರಾಜ ಪುರಾಣದಲ್ಲಿ 'ಸಂಸಾರದ ಭ್ರಾಂತಳಿಯದಳಿಯ ಶಿವದೇವ' ಎಂದಿರುವುದನ್ನು ನೋಡಿದರೆ ಶಿವದೇವನು ಅವನ ಹೆಂಡತಿಯಂತೆ ಶಿವಾನುಭಾವಿಯಾಗಿದ್ದಂತೆ ಕಾಣುವುದಿಲ್ಲ; ಅವನು ಬಸವಣ್ಣ ಚೆನ್ನಬಸವಣ್ಣರಿಂದ ಸಂಸ್ಕರಿಸಲ್ಪಟ್ಟ ನೂತನ ಪಂಥಕ್ಕೆ ಒಂದು ವೇಳೆ ಸೇರದಿದ್ದರೂ ಅವರೊಡನೆ ಹೊಂದಿಕೊಂಡೇ ಇದ್ದಂತೆ ತೋರುತ್ತದೆ; ಏಕೆಂದರೆ ಮುಂದೆ ಬಸವಣ್ಣನು ಕಲ್ಯಾಣವನ್ನು ಬಿಟ್ಟು ಹೊರಟಾಗ ಅವನೊಡನಿದ್ದು ಸಹಾಯಕನಾಗಿದ್ದನೆಂದು ಸಿಂಗಿರಾಜ ಪುರಾಣದಿಂದ ತಿಳಿದು ಬರುತ್ತದೆ. ಬಿಜ್ಜಳನ ಆಳ್ವಿಕೆ ಮಂಗಳವಾಡದಲ್ಲಿ ಕ್ರಿ.ಶ. ೧೧೪೦ ರಲ್ಲಿ ಪ್ರಾರಂಭವಾದ ಒಂದೆರೆಡು ಸಂವತ್ಸರದಲ್ಲಿಯೇ ಬಸವಣ್ಣನ ಮದುವೆಯಾಗಿ ಮಂಗಳವಾಡಕ್ಕೆ ಅಕ್ಕನಾಗಮ್ಮನೊಡನೆಯೂ ಚೆನ್ನಬಸವಣ್ಣನೊಡನೆಯೂ ಬಂದು ಮಾವ ಬಲದೇವ ಮಂತ್ರಿಯ ಸಲಹೆಯಂತೆ ಬಿಜ್ಜಳನ ಆಡಳಿತದಲ್ಲಿ ಅಧಿಕಾರಿಯಾಗಿ ಕೆಲಸ ಮಾಡುತ್ತಿರಬೇಕು. ಬಿಜ್ಜಳನು ಚಾಳುಕ್ಯರಾಜ್ಯದ ಸರ್ವಾಧಿಕಾರಿಯಾಗಿ ೧೧೫೭ರಲ್ಲಿ ಕಲ್ಯಾಣಕ್ಕೆ ಹೋಗುವವರೆಗೂ ಬಸವಣ್ಣನ ಜೀವನದಲ್ಲಿ ಪ್ರಶಾಂತ ಸ್ಥಿತಿಯಿದ್ದುದರಿಂದ ಚೆನ್ನಬಸವಣ್ಣನ ವಿದ್ಯಾಭ್ಯಾಸವು ಬಸವಣ್ಣನ ನೇತೃತ್ವದಲ್ಲಿ ನಡೆದು ಅವನು ಚಿಕ್ಕ ವಯಸ್ಸಿನಲ್ಲಿಯೇ ಜ್ಞಾನಿಯಾಗಲು ಕಾರಣವಾಯಿತು. ಕಲ್ಯಾಣದಲ್ಲಿ ಚೆನ್ನಬಸವಣ್ಣನು ಹತ್ತುಹನ್ನೆರೆಡು ವರ್ಷಕಾಲ ಬಸವಣ್ಣನು ನಡೆಸುತ್ತಿದ್ದ ಧಾರ್ಮಿಕ ಸಾಮಾಜಿಕ ಸುಧಾರಣೆಯಲ್ಲಿಯೂ ಇದೆಲ್ಲಕ್ಕೂ ಹಿನ್ನೆಲೆಯಾಗಿ ಅನುಭವಮಂಟಪ

ದಲ್ಲಾಗುತ್ತಿದ್ದ ಶಿವಾನುಭವಗೋಷ್ಠಿಯಲ್ಲಿಯೂ ವಚನವಾಙ್ಮಯರಚನೆಯಲ್ಲಿಯೂ ಪ್ರಮುಖ ಭಾಗವಹಿಸಿ ಬಿಜ್ಜಳನ ಮರಣಾನಂತರ ಆದ ವಿಪ್ಲವದಿಂದ ಶರಣರನ್ನು ರಕ್ಷಿಸಿ, ಅವರೊಡನೆಯೂ ತಾಯಿ ಅಕ್ಕನಾಗಮ್ಮ ಅತ್ತೆ ಗಂಗಾಂಬಿಕೆಯರೊಡನೆಯೂ, ಉಳವಿಯ ಕಡೆಗೆ ಹೊರಟು ಅಲ್ಲಿ ಕೆಲಕಾಲವಿದ್ದು ಅಲ್ಲಿ ಶಿವೈಕ್ಯನಾದುದು ಪ್ರಸಿದ್ಧ ವಿಷಯವಾಗಿದೆ.

ವರ್ಣ ತಾರತಮ್ಯ ಸ್ತ್ರೀಪುರುಷ ತಾರತಮ್ಯ, ದೈವದ ಹೆಸರಿನಲ್ಲಿ ಪ್ರಾಣಿಹಿಂಸೆ ಮೊದಲಾದ ದೋಷಗಳನ್ನು ಪರಿಹರಿಸಿ ಭಕ್ತಿಜ್ಞಾನ ವೈರಾಗ್ಯಗಳ ಆಧಾರದಮೇಲೆ ಸಮಾಜ ಸುಧಾರಣೆಯನ್ನು ಮಾಡಲು ಪ್ರಭುದೇವರ ಅಧ್ಯಕ್ಷತೆಯಲ್ಲಿ ಚೆನ್ನಬಸವಣ್ಣನ ಮಾರ್ಗದರ್ಶನದಲ್ಲಿ ಅನುಭವಮಂಟಪವು ರಚಿತವಾಯಿತು. ನಾನಾ ದೇಶದಿಂದ ಅನುಭವಿ ಪ್ರತಿನಿಧಿಗಳು ಬಂದು ಸೇರಿದರು. ಕಾಶ್ಮೀರ ದೇಶದಿಂದ ಮಹದೇವಭೂಪಾಲನೂ ಆತನ ರಾಣಿಯೂ, ದಕ್ಷಿಣ ದೇಶದಿಂದ ಸಕಲೇಶ ಮಾದರಸ, ಕಳಿಂಗ ದೇಶದಿಂದ ಮರಳು ಶಂಕರದೇವ, ಆಂಧ್ರದೇಶದಿಂದ ಮೈದುನರಾಮಯ್ಯ ಉರಿಲಿಂಗಪೆದ್ದಿ ಮೊದಲಾದ ಅನೇಕ ಶರಣರೂ ಬಂದು ಸಾಮಾಜಿಕ ಧಾರ್ಮಿಕ ಸುಧಾರಣೆಗಳಲ್ಲಿ ಭಾಗವಹಿಸಿದರು. ಜಾತಿ ಅಥವ ಕಸಬು ಇಂತಹುದೇ ಇರಬೇಕೆಂಬ ನಿಯಮವಿರಲಿಲ್ಲ. ಮಡಿವಾಳ ಮಾಚಯ್ಯ, ಮೇದಾರ ಕೇತಯ್ಯ, ಅಂಬಿಗರ ಚೌಡಯ್ಯ, ಹಡಪದ ಅಪ್ಪಣ್ಣ, ತುರುಗಾಹಿ ರಾಮಣ್ಣ, ನುಲಿಯ ಚಂದಯ್ಯ, ಕೊಟ್ಟಣದ ರೆಮ್ಮವ್ವೆ ಮೊದಲಾದ ಶರಣಶರಣೆಯರು ತಮ್ಮ ತಮ್ಮ ಅನುಭವಗಳನ್ನು ವಚನಗಳ ಮೂಲಕ ವ್ಯಕ್ತಪಡಿಸುತ್ತಿದ್ದರು. ದಿವಾಕರರ ವಚನಶಾಸ್ತ್ರ ರಹಸ್ಯದಲ್ಲಿ ಹೇಳಿದಂತೆ 'ಅವರು ವಿಚಾರಕ್ಕಿಂತ ಆಚಾರಕ್ಕೆ, ನುಡಿಗಿಂತ ನಡೆಗೆ, ಬುದ್ಧಿಗಿಂತ ಭಾವಕ್ಕೆ, ತರ್ಕಕ್ಕಿಂತ ಅನುಭವಕ್ಕೆ, ಕುಲಕ್ಕಿಂತ ಶೀಲಕ್ಕೆ ಹೆಚ್ಚು ಮಹತ್ವವನ್ನು ಕೊಡುವರು. ಆಯಾ ಗುಣಗಳು ಅಳವಟ್ಟು, ಆಯಾ ಆಚಾರಗಳು ನೆಲೆಗೊಂಡು, ಅವು ಅವರೊಡನೆ ತನ್ಮಯವಾದಾಗ, ಅವರ ಅಂತಃಕರಣದಲ್ಲಿ ಉದಯಿಸಿದ ಸ್ಫೂರ್ತಿಯಿಂದ ಅವರು ವಚನಗಳನ್ನು ರಚಿಸಿದರೇ ಹೊರತು, ಏನೋ ವಾಙ್ಮಯ ಸೇವೆ ಮಾಡಬೇಕೆಂದು ಹೊರಟ ಆಧುನಿಕ ಭಾಷಾ ಸೇವಕರಂತೆ ಅವರು ಅವುಗಳನ್ನು ಬರೆದಿಲ್ಲ.' ಈ ಅನುಭವ ಮಂಟಪದಲ್ಲಾಗುತ್ತಿದ್ದ ವಿಷಯ ವಿಮರ್ಶೆಯ ಸ್ವರೂಪವು ಅಕ್ಕಮಹಾದೇವಿಯ ಸಂಪಾದನೆಯಿಂದ ಚೆನ್ನಾಗಿ ತಿಳಿದುಬರುವುದು. ಅವಳಿಗೆ ಹಾಕುತ್ತಿದ್ದ ಪ್ರಶ್ನೆಗಳು ಸಾಕ್ರಟೀಸನನ್ನು ಜ್ಞಾಪಕಕ್ಕೆ ತರುವುವು. ಪ್ರಶ್ನೆಗಳೂ ಮಹಾದೇವಿಯ ಉತ್ತರಗಳೂ ಯಾಜ್ಞವಲ್ಕ್ಯಗಾರ್ಗಿಯ ಸಂವಾದವನ್ನು ನೆನಪಿಗೆ ತರುವುವು. ಸತಿಗೆ ದೇವರಿಗಿಂತ ಪತಿಯೆ ಹೆಚ್ಚು ಎಂಬುದು ಸಾಮಾನ್ಯವಾಗಿ ಒಪ್ಪಿತವಾದ ಕಲ್ಪನೆ. ಸತಿಯ ಮೋಕ್ಷಮಾರ್ಗಕ್ಕೆ ಪತಿಯು ಅಡ್ಡಬಂದಾಗ ಅವನನ್ನು ತ್ಯಜಿಸುವ ಹಕ್ಕು ಸತಿಗುಂಟೆಂಬ ಧ್ವನಿ ಈ ಸಂವಾದದಲ್ಲಿರುವುದು. ಎಷ್ಟೋ ಹೊಸ ಸಮಸ್ಯೆಗಳು ವಿಚಾರಕ್ಕೊಳಗಾದವು. ಚಂದ್ರಜ್ಞಾನಾಗಮದಲ್ಲಿ ಹೇಳಿದ್ದಂತೆ ಲಿಂಗಹೋದರೆ ಪ್ರಾಣಬಿಡಬೇಕೆ? ಶೈವಗುರು ಕೊಟ್ಟ ಲಿಂಗವನ್ನು ತ್ಯಜಿಸಿ ಬೇರೆ ಲಿಂಗವನ್ನು ವೀರಶೈವ ಗುರುವಿನಿಂದ ಪಡೆಯಬೇಕೆ? ಇಂತಹುದೆಷ್ಟೋ ಸಮಸ್ಯೆಗಳು ಅನುಭವಿಗಳ ಪ್ರತಿನಿಧಿಗಳಿಂದ ನಿಷ್ಕರ್ಷಿಸಲ್ಪಟ್ಟು ಆದ ಸಿದ್ಧಾಂತಗಳನ್ನು ಶಾಸ್ತ್ರ ರೂಪಕ್ಕೆ ತರುವ ಹೊಣೆ ಚೆನ್ನಬಸವಣ್ಣನಿಗೆ ವಹಿಸಲ್ಪಟ್ಟಿತು.

ಚೆನ್ನಬಸವಣ್ಣನು ರಚಿಸಿದ ಕರಣಹಸುಗೆ, ಷಟ್‌ಸ್ಥಲ ಸಿದ್ಧಾಂತ ಮೊದಲಾದವುಗಳ ಸ್ವರೂಪವನ್ನು ತಿಳಿಯುವ ಮೊದಲು ಅಂದಿನ ಸಮಾಜ ವಿಷಯಗಳು ಚಾರಿತ್ರಿಕ ದೃಷ್ಟಿಯಿಂದ

ಬಿಡಿಸದೆ ಅಥವಾ ಸಂಪೂರ್ಣವಾಗಿ ಬಿಡಿಸದೆ ಉಳಿದು ನಿಂತಿರುವುವು ವಿಚಾರಾರ್ಹವಾಗಿವೆ. ಬಸವಣ್ಣ ಚನ್ನಬಸವಣ್ಣರು ಹುಟ್ಟಿದ ಕಮ್ಮೆ ಕುಲದಲ್ಲಿ ಲಿಂಗಧಾರಣೆಯ ಪದ್ಧತಿಯು ಇದ್ದಿತೆ, ಇದ್ದಿದ್ದರೆ ಅದರ ಸ್ವರೂಪವೇನು? ಇಲ್ಲದಿದ್ದರೆ ಲಿಂಗಧಾರಣವು ಹೊಸದಾಗಿ, ಇನ್ನೂ ಕೆಲವರು ತಿಳಿದಿರುವಂತೆ, ಪ್ರಾರಂಭಿಸಲ್ಪಟ್ಟಿತೆ? ಬಿಜ್ಜಳನು ಶೈವಧರ್ಮದವನೆಂದು ನಿರ್ಧರಿಸಲ್ಪಟ್ಟಿದೆಯಷ್ಟೆ. ಆ ಶೈವಕ್ಕೂ ಚೆನ್ನಬಸವಣ್ಣನು ಹುಟ್ಟಿದ ಶೈವಕ್ಕೂ ವ್ಯತ್ಯಾಸವೇನು? ಬಿಜ್ಜಳನಿಗೂ ಬಸವಣ್ಣನಿಗೂ ಪದೇ ಪದೇ ಘರ್ಷಣೆಯಾಗುತ್ತಿದ್ದಿತೆಂದು ಅವನ ವಿಷಯದ ಗ್ರಂಥಗಳಲ್ಲೆಲ್ಲ ಹೇಳಿದೆಯಲ್ಲ. ಇದು ನಿಜವಾದರೆ, ರಾಜನಾದ ಬಿಜ್ಜಳನು ಕೊನೆಯವರೆಗೂ ಬಸವ ಚೆನ್ನ ಬಸವರನ್ನು ಶಿಕ್ಷಿಸದೆ ಅದನ್ನೇಕೆ ಸಹಿಸಿಕೊಂಡಿದ್ದನು? ವೀರಶೈವಪದವು ಯಾವಾಗಿನಿಂದ ಪ್ರಚಾರದಲ್ಲಿದೆ? ಇವೆಲ್ಲವನ್ನು ಸ್ವಲ್ಪ ಮಟ್ಟಿಗಾದರೂ ವಿಚಾರಿಸಬೇಕು.

ಬಸವಣ್ಣಾದಿ ವಚನಕಾರರ ವಚನಗಳಲ್ಲಾಗಲೀ ಆ ಕಾಲದ ಅಥವಾ ಆ ಹಿಂದಿನ ಕಾಲದ ಇತರ ವಾಙ್ಮಯದಲ್ಲಾಗಲೀ ಶಾಸನಗಳಲ್ಲಾಗಲೀ ಚೆನ್ನಬಸವಣ್ಣನ ವಚನದಲ್ಲಿ ಕಂಡುಬರುವ ವೀರಶೈವ ಪದವು ಕಂಡುಬರುವುದಿಲ್ಲ. ಪ್ರಕ್ಷಿಪ್ತವಲ್ಲದಿದ್ದರೆ, ಅಪರೂಪವಾಗಿ ಆಗಮಗಳಲ್ಲಿ ಕಂಡುಬರುವ ಈ ಪದವನ್ನು ವಚನಕಾರರು ಸಂಸ್ಕರಿಸಿ ಈ ಸಮಾಜದ ಹೆಸರಿಗೆ ತಕ್ಕ ಪದವೆಂದು ಚೆನ್ನಬಸವಣ್ಣನು ಭಾವಿಸಿದಂತೆ ಕಾಣುತ್ತದೆ. ಈ ಧರ್ಮದಲ್ಲಿ ಎದ್ದುಕಾಣುವ ಲಿಂಗಧಾರಣೆಯು ಅನೇಕರು ಭಾವಿಸಿದ್ದಂತೆ, ಇಂದೂ ಕೆಲವರಿಂದ ಭಾವಿಸಲ್ಪಟ್ಟಿರುವಂತೆ ಬಸವಣ್ಣ ಚೆನ್ನಬಸವಣ್ಣರು ಪ್ರಾರಂಭಿಸಿದುದಲ್ಲ. ಇವರು ಸಂಸ್ಕರಿಸಿದ ಪಾಶುಪತಧರ್ಮದಲ್ಲಿಯೇ ಅದು ಪ್ರಚಾರದಲ್ಲಿದ್ದಿತು. ವೀರಶೈವದ ಹಿಂದಿನ ಹೆಸರು ಪಾಶುಪತವೆನ್ನುವುದು ವೀರಶೈವ ಗ್ರಂಥಗಳಿಂದಲೇ ತಿಳಿದು ಬರುತ್ತದೆ. ರೇಣುಕಾಚಾರ್ಯೋಪದೇಶರೂಪದಲ್ಲಿ ರಚಿತವಾಗಿರುವ ಸಿದ್ಧಾಂತ ಶಿಖಾಮಣಿಯ ಪ್ರಾರಂಭದ ಅಧ್ಯಾಯದಲ್ಲಿಯೇ 'ಪಶುಪತಿಮತಸಾರೇ' ಎಂದು ಹೇಳಿದೆ. 'ಬಾರದು ಬಾರದು ವಿಷಯಿಗೆ ಪಶುಪತಿಯ ಬ್ರತವು' ಎಂದು ಬಸವಣ್ಣ ಹೇಳಿದ್ದಾನೆ. ಶ್ರೀಕರ ಭಾಷ್ಯದ ಪ್ರಕಾರವೂ ಪಾಶುಪತವೆಂದರೆ ವೀರಶೈವವೇ. ಶಂಕರವಿಜಯದಲ್ಲಿ 'ಶಿರಸಿ ಪಾಷಾಣಲಿಂಗಧಾರಿಣಃ ಜಂಗಮಃ ಲಲಾಟೇಭುಜದ್ವಯೇಹೃನ್ನಾಭಿಷು ಲಿಂಗಧಾರಿಣಃ ಪಾಶುಪತಾಃ' ಎಂದು ಹೇಳಿದೆ. ಪಾಶುಪತ ಸೂತ್ರಗಳ ಆರಂಭದಲ್ಲಿಯೇ 'ಲಿಂಗಧಾರೀ' ಎಂಬ ಸೂತ್ರವಿದೆ: ಅದರ ಕೌಂಡಿನ್ಯಭಾಷ್ಯದಲ್ಲಿ 'ಲಿಂಗಂ–ತದ್ಧಾರಯನ್ ಲಿಂಗಧಾರೀ ಭವತಿ' ಎಂಬ ವಿವರಣೆಯಿದೆ. ಅನೇಕ ಶಾಸನಗಳಲ್ಲಿ ಉಕ್ತವಾಗಿರುವಂತೆ ರಾಜಗುರುಗಳಾಗಿದ್ದ ಪಾಶುಪತ ಮಹೇಶ್ವರರೂ ಅವರ ಶಿಷ್ಯರಾದ ರಾಜರುಗಳೂ ಮಹೇಶ್ವರರೆಂದು ಕರೆದುಕೊಳ್ಳುತ್ತಿದ್ದರಲ್ಲದೆ ಶಿವಪಾದ ಶೇಖರ ಎಂಬಂತಹ ಬಿರುದುಗಳುಳ್ಳವಾಗಿದ್ದರು. ಇಂತಹ ಬಿರುದುಗಳನ್ನೆಲ್ಲ ಅನುಲಕ್ಷಿಸಿ ಶಾಸನ ಇಲಾಖೆಯ ಎಚ್. ಕೃಷ್ಣಶಾಸ್ತ್ರಿಗಳು, ಇವರೆಲ್ಲರೂ ತಲೆಯಲ್ಲಿ ಲಿಂಗವನ್ನು ಧರಿಸಿದ್ದವರೆಂದೂ ಲಿಂಗಧಾರಣೆಯು ಬಸವ ಚೆನ್ನಬಸವಣ್ಣನಿಗಿಂತ ಹಿಂದೆಯೇ ಪ್ರಚಾರದಲ್ಲಿತ್ತೆಂದು ಈ ಧರ್ಮವನ್ನು ಸವರು ಸಂಸ್ಕರಿಸಿದರೆಂದೂ ಅಭಿಪ್ರಾಯಪಡುತ್ತಾರೆ. (ಇಕಿ. ಖಟಿಜ. ತ೦೭ಟ ೧೮). ಪಾಶುಪತರು ವೈದಿಕ ಧರ್ಮಾನುಯಾಯಿಗಳಾಗುತ್ತಿದ್ದಾಗ ಅದರಲ್ಲಿ ಪಾಶುಪರ, ಶೈವ, ಕಾಳಾಮುಖ, ಕಾಪಾಲಿಕ ಎಂಬ ನಾಲ್ಕು ಶಾಖೆಗಳಾದವು. ದುಃಖಾಂತವೇ ಮೋಕ್ಷವೆಂದೂ ಪರಮೇಶನು ನಿಮಿತ್ತಕಾರಣನು ಮಾತ್ರವೆನ್ನುವ ಪಾಶುಪತ

ಶಾಖೆಯೂ ಇದರಲ್ಲಿದ್ದ ಶಾಕ್ತ ಸಂಪ್ರದಾಯದ ಅತಿರೇಕವು ಮನೆಮಾಡಿಕೊಂಡಿದ್ದ ಕಾಪಾಲಿಕ ಶಾಖೆಯೂ ಕಾಲಕ್ರಮದಲ್ಲಿ ಹೇಳಹೆಸರಿಲ್ಲದಂತಾದವು. ಶುದ್ಧ ವೈದಿಕ ಶೈವವೂ ತಾಂತ್ರಿಕ ವೈದಿಕ ಕಾಳಾಮುಖವೂ ಪ್ರಬಲವಾಗಿದ್ದು ಅವುಗಳ ಗುರುಗಳು ರಾಜಗುರುಗಳಾಗಿ ೧೨ನೆಯ ಶತಮಾನದ ಕಾಲದವರೆಗೂ ಪ್ರಭಾವವುಳ್ಳವರಾಗಿದ್ದರು. ಚೆನ್ನಬಸವಣ್ಣನ ವಚನದಲ್ಲಿ ಪ್ರಥಮಬಾರಿಗೆ ಕಾಣಬಂದ ವೀರಶೈವ ಪದವು ಶಾಸನಗಳಲ್ಲಿ ಮೊದಲಬಾರಿಗೆ ಕಂಡುಬರುವುದು ಕ್ರಿ.ಶ. ೧೨೬೧ನೆಯ ಇಸವಿಯ ಮಲ್ಕಾಪುರ ಶಾಸನದಲ್ಲಿ. ಇದರಲ್ಲಿ ಚೋಳಮಾಳವರಾಜರ ಗುರುವೂ, ವೀರಶೈವ ಕಾಕತೀಯರಾಜ 'ಗಣಪರಿಕ್ಷ್ಮಾಪಾಲ ದೀಕ್ಷಾ ಗುರು'ವೂ 'ಕಳಚುರಿಕ್ಷ್ಮಾಪಾಲದೀಕ್ಷಾಗುರು'ವೂ ಆದ ವಿಶ್ವೇಶ್ವರ ಶಿವಾಚಾರ್ಯನು 'ಮಹೀಸುರ'ನೆಂದೂ ವೀರಶೈವಾಚಾರ್ಯಶತ್ಯೆರ್ವ್ಯತನೆಂದೂ ಉಕ್ತನಾಗಿದ್ದಾನೆ. ಈ ಶಾಸನ ವಿಷಯದಲ್ಲಿ ಕಪಟರಾಳ ಕೃಷ್ಣರಾಯರು ಅವರ ಪಾಶುಪತಲಾಕುಳ ಶೈವರ ವಿಷಯದ ಗ್ರಂಥದಲ್ಲಿ ಹೇಳಿರುವುದು ಬಸವಣ್ಣ, ಚೆನ್ನಬಸವಣ್ಣ, ಹರಿಹರ ರಾಘವಾಂಕರು ಹುಟ್ಟಿದ ಮತ ವಿಷಯದಲ್ಲಿ ಹೊಸ ಬೆಳಕನ್ನು ಬೀರುತ್ತದೆ. ಅವರು ಹೀಗೆ ಹೇಳುತ್ತಾರೆ–

'ಈ ಶಾಸನದಲ್ಲೂ ಶುದ್ಧ ಶೈವ ಸಂಪ್ರದಾಯದ ಶಿವಯೋಗಿಗಳಿಗೆ ವೀರಶೈವಾಚಾರ್ಯರು ಸ್ಥಾನಪತಿ ತಪೋಧನರೆನ್ನಲಾಗಿದೆ. ನಿಜಗುಣಶಿವಯೋಗಿಯೂ ಹರಿಹರ ರಾಘವಾಂಕರು ಬ್ರಾಹ್ಮಣರಾಗಿದ್ದು ಈ ಶುದ್ಧ ಶೈವ ಸಂಪ್ರದಾಯದವರಾಗಿದ್ದರೆಂದು ತೋರುವುದು. ಈಗಲೂ ಆಂಧ್ರದಲ್ಲಿ ಈ ಸಂಪ್ರದಾಯದ ಬ್ರಾಹ್ಮಣರಿರುವರು.'

ಕಪಟರಾಳ ಕೃಷ್ಣರಾಯರು ಇತ್ತೀಚೆಗೆ ಬರೆದಿರುವ ಕರ್ನಾಟಕ ಸಂಸ್ಕೃತಿಯ ಸಂಶೋಧನಾ ಗ್ರಂಥದ ೨೬೨ನೆಯ ಪುಟದಲ್ಲಿ ಉಕ್ತವಾದ ಹರಿಹರ ಚಕ್ರವರ್ತಿಯ ಗುರು ಕ್ರಿಯಾಶಕ್ತಿಯ ಕಾಲದ ಭೂರಿವಾಳ ಪರಿಷತ್ ಭೂಷಣ ರಾಮಾನಂದ ಭಾರತೀ ಶಿಷ್ಯ ಬ್ರಹ್ಮಾನಂದ ಭಾರತೀಯ ಬರೆದಿರುವ ಪುರುಷಾರ್ಥ ಪ್ರಬೋಧ ಗ್ರಂಥದಲ್ಲಿ ಉಕ್ತವಾಗಿರುವುದೂ ಬಸವಣ್ಣ, ಚೆನ್ನಬಸವಣ್ಣರು ಹುಟ್ಟಿದ ಮತ ವಿಷಯದಲ್ಲಿ ಬೆಳಕನ್ನು ಬೀರುತ್ತದೆ. ಕೃಷ್ಣರಾಯರು ಹೇಳುವಂತೆ:

ಶುದ್ಧ ವೈದಿಕ ಶೈವವನ್ನು ಕುರಿತು ಈ ಗ್ರಂಥವನ್ನು ರಚಿಸಲಾಗಿದೆ... ಮತ್ತೊಂದು ಮಹತ್ವದ ವಿಷಯವೇನೆಂದರೆ ಈಗ ವೀರಶೈವ ಪರಿಭಾಷೆಯಾಗಿರುವ ಇಷ್ಟಲಿಂಗ ಪ್ರಾಣಲಿಂಗ ಮುಂತಾದ ಸಾಂಕೇತಿಕ ಪದಗಳು ವೈದಿಕ ಶೈವ ಪ್ರಕ್ರಿಯೆಯಲ್ಲಿ ಬಳಕೆಯಲ್ಲಿದ್ದುವೆಂದು ಧಾರಾಳವಾಗಿ ಹೇಳಬಹುದು. ಇಷ್ಟಲಿಂಗಾರ್ಚನೆಯನ್ನು ಹೇಳುವ ಶ್ಲೋಕಗಳನ್ನು ಕೆಳಗೆ ಕೊಟ್ಟಿದೆ:–

'ನಿತ್ಯಾರ್ಚನವಿಧಿಂ ವಕ್ಷೇಶಿವಸ್ಯ ಪರಮಾತ್ಮನಃ ।
ವೈದಿಕ ನಿರತಾಚಾರ್ಯ ಪ್ರಸಾದಂ ಪ್ರಾಪ್ಯ ಆದರಾತ್ ॥
ಇಷ್ಟಲಿಂಗಾರ್ಚನಾರಂಭೇ ಜಪ್ತ್ವೇದಂ ಶ್ಲೋಕ ಪಂಚಕೈಃ ।
ಶನೈರ್ಭಕ್ತ್ಯೈವ ಹಸ್ತಾಭ್ಯಾಂ ಮುಖವಸ್ತ್ರಂ ನಿವಾರಯೇತ್॥
ಜಂಗಮಪ್ರಾಣ ಲಿಂಗೈಕ್ಯ ಲಿಂಗಾರ್ಚನ...
ವ್ರತಂ ಪಾಶುಪತಂ ಲೋಕೇ ಪ್ರಸಿದ್ಧಂಯತ್ ತದುಚ್ಯುತೇ ।
ಅಶ್ರುತಮಿತಿ ವಿದ್ವದ್ಭಿಃ ವೇದತಂತ್ರಾರ್ಥ ಕೋವಿದೈಃ ॥
ವಾಯವೀಯ ಪುರಾಣೋಕ್ತಂ ವ್ರತಂ ತಾಂತ್ರಿಕಂ ಭವೇತ್ ।
ವ್ರತಂ ಖೂರ್ಮ ಪುರಾಣೋಕ್ತಂ ಶುದ್ಧ ವೈದಿಕ ಮುಚ್ಯತೇ ॥'

ಮಲ್ಲಾಪುರ ಶಾಸನವೂ ಪುರುಷಾರ್ಥ ಪ್ರಬೋಧ ಗ್ರಂಥವೂ ಇದುವರೆಗೆ ತಿಳಿಯದಿದ್ದ ವಿಷಯಗಳನ್ನು ತಿಳಿಸುತ್ತದೆ. ಪುರುಷಾರ್ಥ ಪ್ರಬೋಧ ಗ್ರಂಥದಲ್ಲಿ ಕೂರ್ಮ ಪುರಾಣೋಕ್ತ ಪಾಶುಪತವು ವೈದಿಕವೆಂದು ಹೇಳಿದೆಯಷ್ಟೆ. ಆ ಕೂರ್ಮ ಪುರಾಣದಲ್ಲಿ 'ಲಿಂಗ ರುದ್ರಾಕ್ಷ ಭಸ್ಮಾದಿ ಧಾರಣಂ ವೈದಿಕಂ ಭವೇತ್' ಎಂದು ಹೇಳಿದೆ; ಪುರುಷಾರ್ಥ ಪ್ರಬೋಧದಲ್ಲಿ ತಾಂತ್ರಿಕ ಪಾಶುಪತ ವ್ರತವನ್ನು ಹೇಳುವುದೆನ್ನುವ ವಾಯವೀಯ ಪುರಾಣದಲ್ಲಿ 'ಕರಪೂಜಾ ನಿವೃತ್ತಾನಾಂ ಪೂಜಾಂ ಕೃತ್ವಾಥ ತಲ್ಲಿಂಗಂ ಶಿರಸಾ ಧಾರಯೇತ್ ಸದಾ' ಎಂದು ಹೇಳಿದೆ. ಸೂತ ಸಂಹಿತೆಯಲ್ಲಿ 'ತ್ರಿಪುಂಡ್ರ ಲಿಂಗಂತುಸದೈವ ಧಾರಯೇತ್' ಎಂದು ಹೇಳಿದೆ. ಪಾಶುಪತ ವ್ರತವು ಶಿರೋವ್ರತವೆಂಬ ಹೆಸರಿನಿಂದಶ್ರುತ್ಯುಕ್ತವಾಗಿದೆಯೆಂಬುದಕ್ಕೆ ಮುಂಡಕೋಪನಿಷತ್ತು ಆಧಾರವಾಗಿದೆಯೆಂದು ಸೂತ ಸಂಹಿತೆಯಲ್ಲಿಯೂ ಅದರ ವ್ಯಾಖ್ಯಾನದಲ್ಲಿಯೂ ಹೇಳಿದೆ. ಈ ಸೂತಸಂಹಿತೆಗೆ ವ್ಯಾಖ್ಯಾನವನ್ನು ಬರೆದ ಮಾಧವಾಚಾರ್ಯನು ಶುದ್ಧ ಶೈವನೆಂದೂ ಅವನು ಕ್ರಿಯಾಶಕ್ತಿಯ ಮೇಲ್ವಿಚಾರಣೆಯಲ್ಲಿ ಇಷ್ಟಲಿಂಗದಲ್ಲಿ ಅಧಿಷ್ಠಿತನಾದ ಶಿವನನ್ನು ಪೂಜಿಸುತ್ತಿದ್ದನೆಂದೂ ಇಛಿ ಗಿಖಖ ಖಏ ೨೮೧ ಶಾಸನದಲ್ಲಿ ಹೇಳಿರುವ ಭಾಗವಿದು– 'ಕ್ರಿಯಾಶಕ್ತಿ ಶಿವದೇಶಿಕಾಧಿಷ್ಠೇನ ಶುದ್ಧಶೈವಾಮ್ನಾಯ ವರ್ತ್ಮನಾ ನಿಜೇಷ್ಟಲಿಂಗ ಕೃತಾಧಿಷ್ಠಾನಂ ದೇವ ದೇವಂ' ಮಲ್ಲಾಪುರಶಾಸನದಿಂದಲೂ ಖಏ ೨೮೧ ಶಾಸನದಿಂದಲೂ ಪುರುಷಾರ್ಥ ಪ್ರಬೋಧ ಗ್ರಂಥದಿಂದಲೂ ಶುದ್ಧ ಶೈವ ಬ್ರಾಹ್ಮಣರಲ್ಲಿ ಇಷ್ಟಲಿಂಗಧಾರಣೆಯ ಪದ್ಧತಿಯಿದ್ದುದು ಬಸವ ಪೂರ್ವಕಾಲದಿಂದ ವಿಜಯನಗರದ ಕಾಲದವರೆಗೂ ಮುಂದುವರೆದುದು ಸ್ಪಷ್ಟವಾಗುವುದು. ಹರಿಹರ ರಾಘವಾಂಕ ಪದ್ಮರಸರು ಲಿಂಗಧಾರಿ ಶುದ್ಧ ಶೈವರೆಂಬುದು ಹಿಂದೆ ಈ ವಿಷಯದಲ್ಲಿ ಎದ್ದಿದ್ದ ಭಿನ್ನಾಭಿಪ್ರಾಯವನ್ನು ಪರಿಹರಿಸುವುದು. ಬಸವರಾಜ ದೇವ ರಗಳೆಯಲ್ಲಿ ಬಸವಣ್ಣನು ವೀರಶೈವ ನನ್ನದೆ ಶುದ್ಧ ಶೈವನೆಂದಿರುವುದು ಗಮನಾರ್ಹವಾಗಿದೆ. ಅದರಲ್ಲಿ 'ಶುದ್ಧ ಶೈವ ಸರೋನಿಧಿ ತರಂಗಮಾಲಾ ನಿಮಗ್ನ ಚಿತ್ತನಾಗಿರ್ದಂ' ಎಂದು ಹೇಳಿರುವುದರಿಂದ ಅದು ವ್ಯಕ್ತವಾಗುವುದು. 'ವೀರಶೈವ ಬ್ರಾಹ್ಮಣೋತ್ತಮಂ' ಎಂದು ಹೊಗಳಲ್ಪಟ್ಟ ಲಿಂಗ ಯಜ್ಞೋಪವೀತಧಾರಿ ಪದ್ಮರಸನ ತಾಯಿಯು ಕವಿಚರಿತ್ರೆಯಲ್ಲಿ ಹೇಳಿದಂತೆ 'ಕಮ್ಮೆ ಕುಲವಲ್ಲಭ ಗೌರಪನ ಅಕ್ಕಮಂಗಳೆ'. ಶ್ರೀಕರಭಾಷ್ಯದಲ್ಲಿ 'ಶ್ರೀ ಮದ್ಧಂಡಶಿಖೋಪವೀತ ವಿಲಸತ್ ಕೃಷ್ಣಾಜಿನಾಲಂಕೃತಃ' ಎಂದು ಹೊಗಳಲ್ಪಟ್ಟ ವೀರಶೈವ ಪಂಚಾಚಾರ್ಯರಲ್ಲಿ ಒಬ್ಬನಾದ ಏಕೋರಾಮನು ಏಕೋರಾಮ ಪುರಾಣದಂತೆ ಕಮ್ಮೆ ಕುಲದ ರಾಮಭದ್ರಾಚಾರ್ಯರ ಪುತ್ರನು. ಬಸವಣ್ಣನು ಕಮ್ಮೆ ಕುಲದವನೆಂದು ಬಸವರಾಜದೇವ ರಗಳೆಯಲ್ಲಿ ಹೇಳಿರುವುದರಿಂದ ಬಸವಣ್ಣ ಚನ್ನಬಸವಣ್ಣರು, ಪದ್ಮರಸ ಏಕೋರಾಮರಂತೆ ಲಿಂಗ ಯಜ್ಞೋಪವೀತಧಾರಿ ಕಮ್ಮೆಕುಲದ ಶುದ್ಧಶೈವ ಮತದಲ್ಲಿ ಹುಟ್ಟಿದವರು. ಈ ಧರ್ಮದಲ್ಲಿಯೇ ಸುಧಾರಣೆಯನ್ನು ಮಾಡಿ ಸುಧಾರಿತ ಧರ್ಮಕ್ಕೆ ಚೆನ್ನಬಸವಣ್ಣನು ವೀರಶೈವವೆಂದು ಹೆಸರಿಟ್ಟುದು. ಹಿಂದೆ ಶೈವ ಗುರುವು ಕೊಟ್ಟ ಲಿಂಗವನ್ನು ತ್ಯಜಿಸದೆ ವೀರಶೈವ ಗುರುವಿನ ಕೈಗೆ ಕೊಟ್ಟು ಮತ್ತೆ ಅದನ್ನು ಪಡೆಯಬೇಕೆಂದೂ ಲಿಂಗ ಕಳೆದರೆ ಪ್ರಾಣ ಬಿಡದೆ ಬೇರೆ ಲಿಂಗವನ್ನು ಪಡೆಯಬಹುದೆಂದೂ ಹೇಳುವುದಕ್ಕೆ ವಚನಗಳ ಆಧಾರವಿದೆ. ಚೆನ್ನಬಸವಣ್ಣನ ಲಿಂಗವನ್ನು ಬಸವಣ್ಣನೂ ಬಸವಣ್ಣನ ಲಿಂಗವನ್ನು ಚೆನ್ನಬಸವಣ್ಣನೂ ಹೀಗೆ ತೆಗೆದುಕೊಂಡು ಮರಳಿ ಕೊಟ್ಟುದರಿಂದ ಒಬ್ಬರನ್ನೊಬ್ಬರು ಗುರುವೆನ್ನುವರೇನೋ

ಎನಿಸುವುದು. ಪಂಡಿತಾರಾಧ್ಯರಂತೆ ಕೆಲವರು ಯಜ್ಞೋಪವೀತವನ್ನು ತೆಗೆದುಹಾಕಲು ಒಪ್ಪದ ಅನೇಕ ಶುದ್ಧ ಶೈವ ಪಂಥದವರು ವಿಜಯನಗರದ ಕಾಲದವರೆಗೂ ಇದ್ದಂತೆ ಕಾಣುತ್ತದೆ. ಶೂದ್ರರೂ ಲಿಂಗವನ್ನು ಧರಿಸುವ ಅಧಿಕಾರವನ್ನು ಸಂಸ್ಕರಿಸಲ್ಪಟ್ಟ ಮತದ ಪ್ರಕಾರ ಪಡೆದುದರಿಂದ ಶುದ್ಧ ಶೈವ ಬ್ರಾಹ್ಮಣರಲ್ಲಿ ಕೆಲವರು ಲಿಂಗವನ್ನು ಧರಿಸುವುದನ್ನು ಬಿಟ್ಟರಾದರೆ, ಹಾಗೆ ಬಿಡದವರು ಬ್ರಾಹ್ಮಣ್ಯವನ್ನು ಉಳಿಸಿಕೊಂಡಿರುವುದರ ಗುರುತಾಗಿ ಆರಾಧ್ಯ ಬ್ರಾಹ್ಮಣರೆಂಬ ಹೆಸರಿಟ್ಟುಕೊಂಡಿರಬೇಕು. ಶುದ್ಧ ಶೈವ ಬ್ರಾಹ್ಮಣರಲ್ಲಿ ಲಿಂಗಧಾರಿ ಗಳಿದ್ದುದೂ ಸಂಸ್ಕರಿಸಲ್ಪಟ್ಟಲಿಂಗಧಾರಿಗಳು ಶುದ್ಧ ಶೈವ ಲಿಂಗಿ ಬ್ರಾಹ್ಮಣರನ್ನು ಗೌರವಿಸುತ್ತಿದ್ದುದೂ ಈ ವಚನಗಳಿಂದ ವ್ಯಕ್ತವಾಗುತ್ತದೆ.

ಶೈವನೇಮಸ್ತರ ಕೈಯಲು ಉಪದೇಶವಾದರೆ ಏನಯ್ಯಾ? ಅಲ್ಲಿ ಏನೂ ಊನವಿಲ್ಲ; ಪಾರಂಪರ್ಯದಲ್ಲಿ ನಡೆದಿತ್ತಾಗಿ; ನದಿಯ ಮೂಲವನು ಗುರುವಿನ ಮೂಲವನು ಅರಸುವರೆ? ಗುರುಲಿಂಗ ಜಂಗಮಸಾಕ್ಷಿಯಾಗಿ ಪಟ್ಟಾಭಿಷೇಕ ಪ್ರಣವ ಮಂತ್ರದಿಂದ ಲಿಂಗದರ್ಶನವಾಯಿತ್ತಾಗಿ ಕಳೆಯಬಾರದು... ಉಳಿಯ ಉಮೇಶ್ವರಾ. ಶೈವ ಗುರುವಿನ ಕೈಯಲ್ಲಿ ಸಾಹಿತ್ಯವಾದ ಲಿಂಗವನ್ನು ವೀರಶೈವ ಗುರುವಿನ ಕೈಯಲ್ಲಿ ಕೊಟ್ಟು ಮರಳಿಕೊಂಡಡೆ, ಆತ ಇಹಲೋಕ ಪೂಜ್ಯನು. ನಿಮ್ಮಾಣೆ ನಿಮ್ಮ ಪ್ರಮಥರಾಣೆ ರೇಕಣ್ಣ ಪ್ರಿಯನಾಗನಾಥಾ, ಬಸವಣ್ಣ, ಚೆನ್ನಬಸವಣ್ಣನವರು ಹುಟ್ಟಿದ ಕಮ್ಮೆಕುಲದಲ್ಲಿ ಲಿಂಗಧಾರಣೆ ಇರಲಿಲ್ಲವೆಂಬ ಕಪಟರಾಳ ಕೃಷ್ಣರಾಯರೇ ಮೊದಲಾದ ವಿದ್ವಾಂಸರ ಸಂದೇಹವನ್ನು ಮೇಲಿನ ಆಧಾರಗಳು ಪರಿಹರಿಸುತ್ತವೆ.

ಪಾಶುಪತವ್ರತವನ್ನು ಹೇಳುವ ಸೂತ ಸಂಹಿತೆ ಕೂರ್ಮ ಪುರಾಣ ವಾಯವೀಯ ಸಂಹಿತೆಗಳೆಲ್ಲದರಲ್ಲಿಯೂ ಲಿಂಗಧಾರಣೆಯನ್ನು ವಿಧಿಸಿರುವುದನ್ನೂ ಶುದ್ಧ ಶೈವ ಬ್ರಾಹ್ಮಣ ಪ್ರಕ್ರಿಯೆಯನ್ನು ಹೇಳುವ ಪುರುಷಾರ್ಥ ಪ್ರಬೋಧ ಗ್ರಂಥದಲ್ಲಿ ಈ ಪ್ರಕ್ರಿಯೆಯಿರುವುದನ್ನು ತಿಳಿಸಿರುವುದನ್ನೂ ಗಮನಿಸಿದ್ದಾಯಿತು. ವಾಯವೀಯ ಸಂಹಿತೆಯಲ್ಲಿ 'ರಸಲಿಂಗಂ ಬ್ರಾಹ್ಮಣಾನಾಂ... ಬಾಣಲಿಂಗಂ ಕ್ಷತ್ರಿಯಾಣಾಂ.... ಸ್ವರ್ಣಲಿಂಗಂ ವೈಶ್ಯಾನಾಂ... ಶಿಲಾಲಿಂಗಂ ತು ಶೂದ್ರಾಣಾಂ... ಸ್ತ್ರೀಣಾಂತು ಪಾರ್ಥಿವಲಿಂಗಂ' ಇತ್ಯಾದಿಯಾಗಿ ಬೇರೆ ಬೇರೆ ಜಾತಿಯವರಿಗೂ ಸ್ತ್ರೀಯರಿಗೂ ಲಿಂಗವನ್ನು ಕೊಡಬಹುದೆಂಬ ಉದಾರ ಬುದ್ಧಿಯು ಕಂಡು ಬರುವುದಾದರೂ ವರ್ಣಭೇಧ, ಸ್ತ್ರೀಪುರುಷ ಭೇದಗಳು ಉಳಿದು ನಿಂದಿದ್ದವು. ಈ ಲಿಂಗಗಳು ದೇವರ ಮನೆಯಲ್ಲಿಟ್ಟಿರುವ ಲಿಂಗಗಳಂತೆ ಸಾರ್ವತ್ರಿಕವಾಗಿ ಯಾರು ಬೇಕಾದರೂ ಪೂಜೆ ಮಾಡುವ ಲಿಂಗಗಳಲ್ಲ, ಅವರವರ ಲಿಂಗಗಳು ಅವರವರಿಂದಲೇ ಪೂಜಿಸಲ್ಪಡ ಬೇಕೆಂಬ ವಿಧಿಯಿದ್ದುದರಿಂದ ಇವೂ ಇಷ್ಟಲಿಂಗಗಳೇ. ಈ ವ್ಯತ್ಯಾಸಗಳು ಸಂಸ್ಕರಿಸಲ್ಪಟ್ಟ ಮತದಲ್ಲಿ ತೆಗೆದುಹಾಕಲ್ಪಟ್ಟವು. ಎಲ್ಲ ಮತದವರಿಗೆ ಇಷ್ಟಲಿಂಗಗಳನ್ನು ಕೊಡುವುದೂ ವೇಟೂರು ಪ್ರಭಾಕರ ಶಾಸ್ತ್ರಿಗಳು ತೆಲುಗು ಬಸವ ಪುರಾಣದ ಮುನ್ನುಡಿಯಲ್ಲಿ ಗಮನಿಸುವಂತೆ ಗೋಲಕೀ ಮಠದ ದೀಕ್ಷಿತರು ಶ್ರಾದ್ಧ ಸೂತಕಾದಿಗಳನ್ನು ಆಚರಿಸಬೇಕಿಲ್ಲ ವೆಂದಿರುವುದೂ ಬದಲಾಗುತ್ತಿರುವ ಸಮಾಜದ ಧೋರಣೆಯನ್ನು ಸೂಚಿಸುತ್ತದೆ.

Ec XIDg 42 ಶಾಸನದಂತೆ ಬಿಜ್ಜಳನ ಮೂಲಪುರುಷನು ಬ್ರಾಹ್ಮಣ ಗರ್ಭ ಸಂಭೂತನು. ಬಿಜ್ಜಳನು ವರ್ಣಾಶ್ರಮ ಧರ್ಮ ಪರಿಪಾಲಕನಾಗಿ ನೂತನ ಪಂಥದ ಸಮತಾವಾದವನ್ನು ಒಪ್ಪಿದವನಲ್ಲ. ಆದುದರಿಂದ ಇವನನ್ನು ಬಸವಣ್ಣನು ಭವಿ ಬಿಜ್ಜಳನೆಂದು ಕರೆದನು. ಆದರೆ

ಇವನು ಬಸವಪೂರ್ವ ಪಾಶುಪತ ಮತದವನಲ್ಲವೆಂದಾಗುವುದಿಲ್ಲ. ಬಿಜ್ಜಳನು ಶೈವನೆನ್ನಲಿರುವ ಆಧಾರಗಳು ಅವನು ವಂಶಪಾರಂಪರ್ಯ ಪಾಶುಪತ ಮಾಹೇಶ್ವರಾನುಯಾಯಿಯೆಂಬುದನ್ನು ಸೂಚಿಸುತ್ತವೆ. ಅವನೇ ಪಾಶುಪತ ಗುರುಗಳಿಗೆ ಭಕ್ತಿಯಿಂದ ದಾನಮಾಡಿದ್ದಾನೆ. ಕಳಚೂರ್ಯರ ಹತ್ತಿರ ಸಂಬಂಧಿಗಳು ಚಾಳುಕ್ಯರು ಭುವನೈಕಮಲ್ಲ ಚಾಳುಕ್ಯ ಚಕ್ರವರ್ತಿಯು ಪನ್ನಗರಾಜ ಭೂಷಣ ಪದಾಬ್ಜಶೇಖರನೆಂದು (ECSK ೧೦೦ ಮತ್ತು ೧೩೦) ಮತ್ತೆ ಮತ್ತೆ ಹೊಗಳಿಸಿಕೊಂಡಿರುವುದು ತಲೆಯಲ್ಲಿ ಲಿಂಗಧರಿಸುವುದು ಒಂದು ಹೆಮ್ಮೆಯ ವಿಷಯವೆಂದು ಭಾವಿಸಿದಂತೆ ಕಾಣುತ್ತದೆ. ಬಿಜ್ಜಳನ ಮಾತಾಮಹ ವಿಕ್ರಮಾದಿತ್ಯನ ಇನ್ನೊಬ್ಬ ಮಗಳ ಮಗನಾದ ಪೆಮ್ಮಡಿರಾಯನು ಮಾಹೇಶ್ವರ ಬಿರುದಾಂಕಿತನು ಮತ್ತು 'ಶಿವಪಾದಾಂಬುರುಹ ಶೇಖರ; ಚಂದ್ರಭೂಷಣ ಪಂಡಿತರ ಶಿಷ್ಯನೆಂಬುದು ಮಿಥಿಕ್ ಸೊಸೈಟಿ ಜರ್ನಲ್ (೫–೧ ಪು. ೨೬೨)ನಿಂದ ತಿಳಿದುಬರುತ್ತದೆ. ರೇವಣಸಿದ್ಧನು ಬಿಜ್ಜಳನ ಮಗಳನ್ನು ಮದುವೆಯಾಗಿದ್ದನು. ಮೇಲಾಗಿ ಮಲ್ಕಾಪುರ ಶಾಸನದಂತೆ ವಿಶ್ವೇಶ್ವರ ಶಿವಾಚಾರ್ಯನೇ ವೀರಶೈವ ಕಾಕತೀಯ ಚಕ್ರವರ್ತಿ ಗಣಪತಿಗೆ ದೀಕ್ಷಾ ಗುರುವಾಗಿರುವಂತೆ ಕಳಚುರಿಕ್ಷ್ಮಾಪಾಲ ದೀಕ್ಷಾ ಗುರುವೂ ಆಗಿದ್ದನು. ಇಛಿ ಗಿಙಙ ಖಏ ೧೦೨ ರ ಪ್ರಕಾರ ಬಿಜ್ಜಳನು 'ಶಿಷ್ಟೇಷ್ಟ ಸಂತರ್ಪಣ'ಕ್ಕೆ ದಾನ ಮಾಡಿದ್ದಾನೆ ಮತ್ತು ಇವನ ಅಳಿಯ ಬೊಮ್ಮರಸನು 'ಶಿಷ್ಟೇಷ್ಟ ನಿಕರಾಭರಣಂ'. ಬೊಮ್ಮರಸನ ಭಾವ ಕಸಪಯ್ಯನ 'ನಿಜೇಷ್ಟ ವಿಶಿಷ್ಟ ಜನ'ದ ವಿಷಯವು ಶಾಸನೋಕ್ತವಾಗಿದೆ. ದಾವಣಗೆರೆಯ ೪೨ನೆಯ ಶಾಸನದಲ್ಲಿ ಇವನ 'ವಿಪ್ರಜನೇಷ್ಟ ದಾನ ಸಂಗತಿ' ಉಕ್ತವಾಗಿದೆ. ಈ ಸಿಂಗಿರಾಜಪುರಾಣದ ಸೂಚನಾಪದ್ಯವೊಂದರಲ್ಲಿ 'ಇಷ್ಟಮಂ ಬಸವಂಗೀಯೆ' ಎಂದು ಹೇಳಿದೆ. ಇಲ್ಲಿರುವ ಇಷ್ಟು ಪದಗಳ ಅರ್ಥವನ್ನು ನಿರ್ಧರಿಸಿ ಬಿಜ್ಜಳನ ಮತವನ್ನು ಸಂಶೋಧಕರು ನಿರ್ಧರಿಸಬೇಕಾಗುವುದಾದರೂ ಶಿವತತ್ತ್ವಚಿಂತಾಮಣಿಯಲ್ಲಿ ಹೇಳಿದಂತೆ ಬಿಜ್ಜಳನು ತನ್ನ ತಂಗಿಯನ್ನು ಮಂತ್ರಿಯಾದ ಬಸವಣ್ಣನಿಗೆ ಕೊಟ್ಟು 'ಮಂತ್ರಿಗಂ ತಮ್ಮೊಳಗೆ ಹೋರೆ (ಹೋರಾಟ) ಹುಟ್ಟದ ಮಾಳ್ಪ ತೆರದಿ' ಮದುವೆ ಮಾಡಿದುದಕ್ಕೆ ಬಿಜ್ಜಳನ ಮತ ಅಡ್ಡಿ ಬರಲಿಲ್ಲವೆಂದು ಇಲ್ಲಿ ಹೇಳಿದರೆ ಸಾಕು. ತದನಂತರ ಬಸವಣ್ಣನು ಧರ್ಮ ಕ್ರಾಂತಿಯನ್ನು ಪ್ರಾರಂಭಿಸಿದರೂ ಸಮೀಪ ಬಂಧುಗಳಾದ ಬಸವಣ್ಣ ಚೆನ್ನಬಸವಣ್ಣವರನ್ನು ಶಿಕ್ಷಿಸದೆ ತಾಳಿಕೊಂಡಿರಬೇಕಾಯಿತು. ಬಸವಣ್ಣನ ಕ್ರಾಂತಿಯು ಬಿಜ್ಜಳನ ಶಾಂತಿಯ ಮೇರೆಯನ್ನು ಮೀರಿಸಿದಾಗ ಅವನನ್ನು ರಾಜ್ಯದಿಂದ ಹೊರಗೆ ಹಾಕಬೇಕಾಯಿತು. ಆದರೂ ಬಸವಾನುಯಾಯಿಗಳು ಕಲ್ಯಾಣದಲ್ಲಿ ಹೆಚ್ಚಾಗಿದ್ದುದರಿಂದ ಅವರ ಸಮಾಧಾನಕ್ಕೆ ಚೆನ್ನಬಸವಣ್ಣನನ್ನು ಮಂತ್ರಿಯನ್ನಾಗಿ ಕೆಲಕಾಲ ನೇಮಿಸಿಕೊಳ್ಳಬೇಕಾಯಿತು. ಬಸವಣ್ಣನಾದರೂ ಭಾವನಾದ ಬಿಜ್ಜಳನನ್ನು ಕೊಲ್ಲಿಸಲು ಈ ಕಾರಣದಿಂದಲೂ ಯೋಚಿಸಲಾರನು. ಕಾಕತೀಯರ ಕಾಲದಲ್ಲಿದ್ದ ಗೌರಾಂಕನ ನವನಾಥ ಚರಿತ್ರೆಯಲ್ಲಿ ನವನಾಥಸಿದ್ಧರು ಸೇಡು ತೀರಿಸಿಕೊಳ್ಳುವುದಕ್ಕಾಗಿ ಬಿಜ್ಜಳನನ್ನು ಕೊಂದರೆಂದು ಹೇಳಿರುವುದು, ರಾಘವಾಂಕನು ಸಿದ್ಧರಾಮ ಚರಿತ್ರೆಯಲ್ಲಿ 'ಭೂಪ ಬಿಜ್ಜಳನಳಿದ ವೀರ ಜಗದೇವನಿಂ ಸಿದ್ಧ ಸಂಕೇತದಿಂ' ಎಂಬುದರಿಂದ ಸಮರ್ಥನೆ ಪಡೆದಿರುವ ಸಮೀಪ ಕಾಲದ ಆಧಾರ ವಿಮರ್ಶಕರ ಗಮನಕ್ಕೆ ಬಂದಿಲ್ಲ. ಶರಣರ ಮೇಲೆ ಅಪವಾದ ಬಂದು ಅವರು ಪ್ರತೀಕಾರದ ಹಿಂಸೆಗೊಳಗಾದರು. ಆಗ ಚೆನ್ನಬಸವಣ್ಣನ ಮುಂದಾಳುತನದಲ್ಲಿ ಕಲ್ಯಾಣವನ್ನು ಶರಣರು ಬಿಟ್ಟು ಹೋಗಬೇಕಾಯಿತು. ಶಿವಪೂಜೆಯನ್ನು ಮಾಡುತ್ತಿದ್ದ

ಕೈಗಳು ಆಯುಧವನ್ನು ಆತ್ಮರಕ್ಷಣೆಗಾಗಿ ಹಿಡಿದವು. ಮುರುಗೋಡು ಕೇಶರವಳ್ಳಿಗಳ ಬಳಿ ಯುದ್ಧವಾಗಿ ಎರಡು ಕಡೆಯೂ ಅನೇಕರು ಮಡಿದರು; ಉಳಿದ ಶರಣರು ಚೆನ್ನಬಸವಣ್ಣನ ಮಾರ್ಗದರ್ಶನದಲ್ಲಿ ಶಿವಪೂಜೆ ಶಿವಧ್ಯಾನಗಳಲ್ಲಿ ಉಳವಿಯಲ್ಲಿ ತಮ್ಮ ಅಂತ್ಯ ಕಾಲವನ್ನು ಕಳೆದರು. ಬಸವಣ್ಣನು ಕಲ್ಯಾಣವನ್ನು ಬಿಡುವಾಗಲೇ ಅಲ್ಲಿ ಅವರೆಲ್ಲ ಹತ್ತಿಸಿದ್ದ ಜ್ಯೋತಿಯು ಆರಿ ಹೋಗುವುದೆಂದು ವ್ಯಥೆಪಟ್ಟಿದ್ದರು.

ನಾನು ಬಂದ ಕಾರ್ಯಕ್ಕೆ ನೀವು ಬಂದಿರಿ;
ನೀವು ಬಂದ ಕಾರ್ಯಕ್ಕೆ ನಾನು ಬಂದೆ;
ನಾನೂ ನೀವೂ ಬಂದ ಕಾರ್ಯಕ್ಕೆ ಬಂದಾತನಲ್ಲಮ ಪ್ರಭುದೇವರು
ಮುಂದೆ ಕೆಲದಿನಕ್ಕೆ ಕಲ್ಯಾಣವೆಂಬುದು ಪ್ರಣತಿಯಾಯಿತ್ತು
ನಾನು ತೈಲವಾದೆನು ;
ನೀವು ಬತ್ತಿಯಾದಿರಿ ಪ್ರಭುದೇವರು ಜ್ಯೋತಿಯಾದರು
ಪ್ರಣತಿಯೊಡೆಯಿತ್ತು ; ತೈಲವರಿತಿತ್ತು ;
ಜ್ಯೋತಿ ಬಯಲಾಯಿತ್ತು.

ದೈವವಶಾತ್ ಪ್ರಭುದೇವರೊಡನೆ ಆ ಹಿಂದೆಯೇ ಶರಣರನೇಕರು ಕಲ್ಯಾಣದ ಜ್ಯೋತಿಯಿಂದ ಹತ್ತಿಸಿಕೊಂಡು ಹೋಗಿದ್ದ ಜ್ಯೋತಿಯನ್ನು ಕಾಕತೀಯ ರಾಜ್ಯದಲ್ಲಿ ಬೆಳಗಿದರು; ಅಲ್ಲಿಂದ ಆ ಜ್ಯೋತಿ ವಿಜಯನಗರದ ರಾಜ್ಯದಲ್ಲಿ ಬೆಳಗಿತು ಬಸವಣ್ಣ ಚೆನ್ನಬಸವಣ್ಣ ಪ್ರಭುಗಳು ಹತ್ತಿಸಿದ ಜ್ಯೋತಿಯಿಂದ ಹತ್ತಿಕೊಂಡ ದೀಪಗಳು ಇನ್ನೂ ಕೇದಾರದಿಂದ ರಾಮೇಶ್ವರಾದ್ಯಂತವಾಗಿ ಬೆಳಗುತ್ತಿವೆ.

ಚೆನ್ನಬಸವಣ್ಣನ ಜೀವನ ಚರಿತ್ರೆಯ ಸ್ಥೂಲಪರಿಚಯವನ್ನು ಮಾಡಿ ಅದಕ್ಕೆ ಸಂಬಂಧಪಟ್ಟ ಕೆಲವು ಸಮಸ್ಯೆಗಳನ್ನು ಬಿಡಿಸುವ ಪ್ರಯತ್ನ ಮಾಡಲಾಯಿತು. ಆತನಿಗಿಂತಲೂ ವಯಸ್ಸಿನಲ್ಲಿಯೂ ಜ್ಞಾನದಲ್ಲಿಯೂ ಹಿರಿಯರಾದವರು ಅವನನ್ನು ಸ್ತೋತ್ರ ಮಾಡಿರುವುದನ್ನು ನೋಡಿದರೆ ಅವನ ಜ್ಞಾನದ ಮಟ್ಟವು ಎಷ್ಟು ಎತ್ತರವಾಗಿತ್ತೆನ್ನುವುದು ಮನವರಿಕೆಯಾಗುವುದು. ಹೊಸದಾಗಿ ಮಾಡಿದ ಸುಧಾರಣೆಗಳನ್ನು ಶರಣರು ಅನುಸರಿಸುವಂತೆ ನೋಡಿಕೊಳ್ಳುವ ಹೊಣೆಯನ್ನು ಹೊತ್ತ ಚೆನ್ನಬಸವಣ್ಣನ ಮಾತಿನಲ್ಲಿ ಸ್ವಲ್ಪ ಕಾಠಿಣ್ಯವಿರುವುದು ಸ್ವಾಭಾವಿಕ. ಶರಣೆಂದವರಿಗೆ ಚೆನ್ನಬಸವಣ್ಣನು ಶರಣೆನ್ನುವುದನ್ನು ನಿರೀಕ್ಷಿಸಬಹುದೇ ಹೊರತು ಬಸವಣ್ಣನಂತೆ ಶರಣು ಶರಣೆನ್ನುವುದನ್ನಲ್ಲ. ಅವನಿಗಿಂತ ಹಿರಿಯರನ್ನು ಸ್ತೋತ್ರ ಮಾಡಿರುವ ರೀತಿಯದಂತಿರಲಿ, ಅವನ ಶಿಷ್ಯನಾದ ಸಿದ್ಧರಾಮನನ್ನು ಅವನು ಸ್ತೋತ್ರ ಮಾಡಿರುವುದನ್ನು ನೋಡಿದರೆ ಅವನು ಅಹಂಭಾವವುಳ್ಳವನೆನಿಸುವುದಿಲ್ಲ.

ನಡು ಮುರಿದು ಗೂಡು ಗೂರಿದರೇನು
ಲಿಂಗದ ನಿಜವರಿಯದನ್ನಕ್ಕ ಸಾವನ್ನಕ್ಕ ಜಪ ಮಾಡಿದರೇನು
ಲಿಂಗದ ಪ್ರಾಣ ತನ್ನ ಪ್ರಾಣ ಒಡಗೂಡದನ್ನಕ್ಕ?
ಇಂತಿವರೆಲ್ಲರೂ ಅಭ್ಯಾಸ ಶಕ್ತಿಗರುಹಿಗರು;
ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ
ಮಾಯಾ ಕೋಳಾಹಳ ಸಿದ್ಧರಾಮಯ್ಯದೇವರಿಗೆ
ಅಹೋರಾತ್ರಿಯಲ್ಲಿ ನಮೋ ನಮೋ ಎಂದು ಬದುಕಿರ್ದೆನು ಕಣಾ ಪ್ರಭುವೇ

ಬಸವಣ್ಣನು, ಭಕ್ತಿಯಲ್ಲಿ ತಲ್ಲೀನನಾಗಿ ಲಾಂಛನಕ್ಕೆ ಶರಣೆನ್ನುವ ನಿಲುವಿನವನಾದರೆ, ಅಕ್ಕಮಹಾದೇವಿಯರಂತಹವರ ವೈರಾಗ್ಯವನ್ನೂ ಒರೆಯಿಕ್ಕಿ ನೋಡುವ ನಿಲುವು ಪ್ರಭುವಿನದು. ಭಕ್ತಿ ವೈರಾಗ್ಯಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟರೂ ಅರಿವು ಆಚರಣೆಯಲ್ಲಿ ಸಮನ್ವಯ ವಾಗುವುದಕ್ಕೆ ಹೆಚ್ಚು ಮಹತ್ವ ಕೊಡುವುದು ಚೆನ್ನಬಸವಣ್ಣನ ನಿಲುವು. ಅಂಗದ ಮೇಲೆ ಲಿಂಗವುಳ್ಳುದೆಲ್ಲವೂ ಸಂಗಮನಾಥನೆಂಬ ಭಾವನೆ ಬಸವಣ್ಣಂಗಾಯಿತಲ್ಲದೆ 'ಎನಗೆ ಆ ಭಾವವಿಲ್ಲಾ ನೋಡಾ' ಎಂಬ ದಾಕ್ಷಿಣ್ಯವಿಲ್ಲದ ನುಡಿಯವನದು.ಬಸವಣ್ಣ ನಿರೀಕ್ಷಿಸುವಂತೆ ಜಗತ್ತನ್ನೆಲ್ಲ ಶರಣರನ್ನು ಮಾಡುವುದು ಹೇಗೆ?

> **ಬಟ್ಟ ಬಯಲೆಲ್ಲ ಗಟ್ಟಿಗೊಂಡೊಡೆ ಸ್ವರ್ಗಮರ್ತ್ಯಪಾತಾಳಕ್ಕೆ**
> **ತಾವಿನ್ನೆಲ್ಲಿಯದೋ? ಮೇಘಜಲವೆಲ್ಲ ಮುತ್ತಾದೊಡೆ**
> **ಸಪ್ತ ಸಾಗರುಗಳಿಗೆ ಉದಕವೆಲ್ಲಿಯದೋ?**
> **ಕಷ್ಟ ಜೀವಿ ಮನುಜರೆಲ್ಲ ನೆಟ್ಟನೆ ಜ್ಞಾನಿಗಳಾದೊಡೆ**
> **ಮುಂದೆ ಭವದ ಬಳ್ಳಿಗೆ ಬೀಜವಿನ್ನೆಲ್ಲಿಯದೋ?**
> **ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ ಸಾವಿರಕ್ಕೊಬ್ಬ ಸತ್ಯ,**
> **ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ.**

ಅಲ್ಲಮಪ್ರಭುವು ಅದ್ವೈತ ಪರಮಾವಸ್ಥೆಯನ್ನು ಮುಟ್ಟಿ ನಿಷ್ಕ್ರಿಯನಾದವನು; ಗೌಡಪಾದರ ವೈತಥ್ಯ ಪ್ರಕರಣದಲ್ಲಿ ಹೇಳಿದಂತೆ 'ನಿಸ್ತುತಿ ನಿರ್ನಮಸ್ಕಾರಃ' ಎಂದರೆ ಅದರ ಶಾಂಕರ ಭಾಷ್ಯದಲ್ಲಿ ಹೇಳಿದಂತೆ 'ಸ್ತುತಿ ನಮಸ್ಕಾರಾದಿ ಸರ್ವಕರ್ಮ ವಿವರ್ಜಿತಃ' ಆದವನು. ಚೆನ್ನಬಸವಣ್ಣನಾದರೋ ಮುಂಡಕೋಪನಿಷತ್ತಿನಲ್ಲಿ ಹೇಲಿದಂತೆ 'ಆತ್ಮ ಕ್ರೀಡಃ ಆತ್ಮರತಿಃ ಕ್ರಿಯಾವಾನ್ ಏಷ ಬ್ರಹ್ಮ ವಿದಾಂ ವರಿಷ್ಠಃ' ಎಂಬಂತೆ ಆತ್ಮರತನೂ ಆತ್ಮ ಕ್ರೀಡನೂ ಆಗಿರುವನಲ್ಲದೆ ಕ್ರಿಯಾವಾನನು ಆಗಿ ಶ್ರೇಷ್ಠ ಬ್ರಹ್ಮವಿದನಾಗಿರುವವನು.

ಆತ್ಮಕ್ರೀಡಃ, ಆತ್ಮರತಿಃ, ಕ್ರಿಯಾವಾನ್, ಆದ ವ್ಯಕ್ತಿ ಸ್ವರೂಪವುಳ್ಳವ ನಾದುದರಿಂದಲೇ ಬಸವಣ್ಣನು ರೂಪಿಸಿದಂತಹ ಮತದ ಪ್ರಸಾರವನ್ನು ಕೈಗೊಂಡು ಅದಕ್ಕೆ ಅವಶ್ಯವಾದ ಗ್ರಂಥಗಳನ್ನು ಚೆನ್ನಬಸವಣ್ಣನು ರಚಿಸಬೇಕಾಯಿತು. ವಚನಗಳಲ್ಲದೆ, ಕರಣ ಹಸುಗೆ, ಮಿಶ್ರಾರ್ಪಣ, ಮಂತ್ರಗೋಪ್ಯ, ಕಾಲಜ್ಞಾನ ಇತ್ಯಾದಿ ಅವನು ರಚಿಸಿದ ಗ್ರಂಥಗಳು. ಈ ಗ್ರಂಥಗಳ ಪರಿಚಯವು ಅದಕ್ಕಾಗಿ ಬರೆದ ಗ್ರಂಥದಿಂದಲೇ ಸಾಧ್ಯ; ಅವನ ಮುಖ್ಯ ಸಿದ್ಧಾಂತವೇನೆಂಬುದನ್ನು ಮಾತ್ರ ಇಲ್ಲಿ ಹೇಳಬೇಕಾಗುವುದು.

'ತೇನ ತ್ಯಕ್ತೇನ ಭುಂಜೀಥಾಃ' ಎಂಬ ಈಶಾವಾಸ್ಯ ಸಿದ್ಧಾಂತದಂತೆ ಎಲ್ಲವನ್ನು ಶಿವಪ್ರಸಾದರೂಪವಾಗಿ ಅನುಭವಿಸಬೇಕೆನ್ನುವುದು ಚೆನ್ನಬಸವಣ್ಣನ ಮುಖ್ಯ ಸಿದ್ಧಾಂತ. 'ಪಂಚೇಂದ್ರಿಯಗಳು...ತಮತಮಗೆ ಬಂದ ಭೋಗಸುಖ ಲಿಂಗಾರ್ಪಿತವೆಂದು ನಡೆದವು ಲಿಂಗದತ್ತತ್ತಲೆ, ಕೂಡಲ ಚೆನ್ನಸಂಗಯ್ಯಾ ಲಿಂಗನಿವಾಸಿ ಶರಣಂಗೆ' ಎನ್ನುವುದವನ ವಚನ. ಹೀಗೆ ಅರಿತವನು ಅದರಂತೆ ಆಚರಿಸಬೇಕು. ಏಕೆಂದರೆ ಈಶೋಪನಿಷತ್ತು ಮತ್ತೆ ಹೀಗೆ ಹೇಳುತ್ತದೆ 'ಅಂಧಂತ ಮಃ ಪ್ರವಿಶಂತಿ ಯೇಸವಿದ್ಯಾಮುಪಾಸತೇ । ತತೋಭೂಯ ಇವತೇತಮೋಯವ ಉದ್ಯಾಯಾಂರತಾಃ॥' ಅವಿದ್ಯೆಯೆಂದರೆ ಕರ್ಮ, ಕ್ರಿಯೆ, ಆಚರಣೆ; ಇಂತಹ ಅವಿದ್ಯೆಯೊಂದರಲ್ಲೇ ನಿರತನಾಗಿರುವವನಿಗಿಂತ ವಿದ್ಯೆಯೆಂದರೆ ಅರಿವೊಂದರಲ್ಲೇ

ನಿರತನಾದವನು ಹೆಚ್ಚು ಕತ್ತಲೆಲೋಕಕ್ಕೆ ಹೋಗುವನೆನ್ನುವುದು ಉಪನಿಷತ್ತು. 'ಕ್ರಿಯೆಯೇ ಜ್ಞಾನ, ಜ್ಞಾನವೇ ಕ್ರಿಯೆ ಜ್ಞಾನವೆಂದರೆ ತಿಳಿಯುವುದು, ಕ್ರಿಯೆಯೆಂದರೆ ತಿಳಿದಂತೆ ಮಾಡುವುದು. ಪರಸ್ತ್ರೀಭೋಗಿಸಬಾರದೆಂಬುದೇ ಜ್ಞಾನ. ಅದರಂತೆ ಆಚರಿಸದಿರ್ಪುದೆ ಕ್ರಿಯೆ. ಅಂತು ಆಚರಿಸದಿದ್ದರೆ ಅದೇ ಅಜ್ಞಾನ ನೋಡಾ ಕೂಡಲ ಚೆನ್ನಸಂಗಮ ದೇವಾ' ಎಂಬ ವಚನದ ಅಭಿಪ್ರಾಯವಾದರೂ ಅದೇ. ಪರಸ್ತ್ರೀ ಸಂಗವು ತಪ್ಪೆಂದು ತಿಳಿದು ಜ್ಞಾನಿಯು ಪರಸ್ತ್ರೀ ಸಂಗವ ಮಾಡಿದರೆ, ಆ ಜ್ಞಾನಿಯು ಪರಸ್ತ್ರೀಸಂಗವ ಮಾಡದಿರುವ ಅಜ್ಞಾನಿಗಿಂತ ಅಧಮನೆಂಬುದು ಮಥಿತಾರ್ಥ. 'ಕರ್ಮಮಂಗೈದೆ ಕಳೆ ಶತವರ್ಷಮಂ, ನರಗೇ ಕರ್ಮಲೇಪನವಿಲ್ಲ ಬಿಡಲಿದನು ಪೆರತಿಲ್ಲ'ವೆನ್ನುವುದು ಈಶದ ಎರಡನೆಯ ಮಂತ್ರ. ಕರ್ಮ ಲೇಪನವಾಗದಂತೆ ಯಾವಜ್ಜೀವವೂ ಕರ್ಮ ಮಾಡಲು ತನುತ್ರಯಗಳಲ್ಲಿಯೂ ಇಂದ್ರಿಯಗಳಲ್ಲಿಯೂ ಶಿವಚೈತನ್ಯವಿರುವುದರ ಅರಿವಿರಬೇಕು. ಆ ಚೈತನ್ಯಕ್ಕೆ ಸಮರ್ಪಿಸಲು ಅರ್ಹವಾದುದನ್ನೇ ಶರಣನು ಮಾಡಬೇಕು. ತನುತ್ರಯಗಳಲ್ಲಿಯೂ ಪಂಚೇಂದ್ರಿಯ ಮನಸ್ಸುಗಳಲ್ಲಿರುವ ಲಿಂಗಗಳೆಂಬ ಹೆಸರಿನ ಚೈತನ್ಯದ ಅರಿವನ್ನು ಚೆನ್ನಬಸವಣ್ಣನು ಮಾಡಿ ಕೊಟ್ಟಿರುವನು.

ಗುರುವು ವೇಧಾ–ಮನುಕ್ರಿಯಾದೀಕ್ಷೆಗಳಿಂದ ಶಿಷ್ಯನ ಸೂಕ್ಷ್ಮ, ಸ್ಥೂಲ–ಕಾರಣತನುಗಳಲ್ಲಿ ಭಾವ–ಪ್ರಾಣ ಇಷ್ಟಲಿಂಗಗಳನ್ನು ಪ್ರತಿಷ್ಠಿಸಿ ಮಲತ್ರಯಗಳನ್ನು ನಾಶ ಮಾಡುವನು. 'ತಸ್ಯಭಾಸಾ ಸರ್ವಮಿವಿದಂ ಭಾತಿ' ಎಂಬ ಮುಂಡಕ ಶ್ರುತಿಯಂತೆ ಪರಂಜ್ಯೋತಿಯಾದ ಹೃದಯಪುಂಡರೀಕದಲ್ಲಿರುವ ಭಾವಲಿಂಗವು ಬೆಳಗಲು ಇಂದ್ರಿಯಗಳೂ ಬೆಳಗಿ ಚೇತನಗೊಳ್ಳುವುವು. ಆ ಪರಂಜ್ಯೋತಿಯ ಬೆಳಗೇ ಇಂದ್ರಿಯಗಳಿಗೆ ಚೈತನ್ಯವನ್ನು ಕೊಡುವ ಪ್ರಾಣಲಿಂಗವು; ಈ ಬೆಳಕನ್ನು ಪ್ರತಿಬಿಂಬಿಸುವ ಕನ್ನಡಿಯೇ ಇಷ್ಟಲಿಂಗವು; ಹೆಬ್ಬೆರಳಿನ ಗಾತ್ರವಿರುವ ಹೃದಯ ಕುಹರದ ಗಾತ್ರದ ಇಷ್ಟಲಿಂಗದ ಮೂಲಕವೇ ಪ್ರಾಣಲಿಂಗ ಭಾವಲಿಂಗಗಳ ಅನುಸಂಧಾನವು ಸಾಧ್ಯ:

> **ಇಷ್ಟಲಿಂಗ ಪ್ರಾಣಲಿಂಗವೆಂಬುದನಾರು ಬಲ್ಲರು?**
> **ಇಷ್ಟಲಿಂಗವದು ದರ್ಪಣ; ಪ್ರಾಣಲಿಂಗ ಪ್ರತಿಬಿಂಬ;**
> **ದರ್ಪಣ ಮಸುಳಿಸಿದರೆ ಪ್ರಾಣಲಿಂಗವ ಕಾಣಬಹುದೆ?**
> **ಸಾಕ್ಷಿ–'ಇಷ್ಟಲಿಂಗಮವಿಶ್ವಸ್ಥ ಪ್ರಾಣಲಿಂಗಂ ನಪಶ್ಯತಿ ।**
> **ದರ್ಪಣ ಪ್ರತಿಬಿಂಬಾನಾಂ ಯಥಾರೂಪಂ ತಥಾಭವೇತ್;**

ಮೊದಲು ವೈಭವದಿಂದ ಪೂಜೆ ಮಾಡುತ್ತಿದ್ದಾಗ ಕಾಣುವುದು ಇಷ್ಟಲಿಂಗವೊಂದೆ. ಭಕ್ತಿಯ ಆವೇಶ ಹೆಚ್ಚಿ 'ಆಡುತಾಡುತ್ತಲ್ಲಿ ಪೊಗಳ್ವುದಂ ನೆರೆ ಮರೆದು । ನೋಡುನೋಡುತ್ತಲ್ಲಿ ನೋಟಮಂ ಮಿಗೆ ಮರೆದು ಘನ ಸುಖದೊಳೆರಡಿಲ್ಲದಂತಿರುತಿರ್ದ' ಸ್ಥಿತಿಯಲ್ಲಿ ಕಾಣುವುದು ಪ್ರಾಣಲಿಂಗ ಮತ್ತು ಅದರ ಅನುಲಕ್ಷ್ಯದಿಂದ ಕಾಣುವುದು ಜ್ಯೋತಿಸ್ವರೂಪವಾದ ಭಾವಲಿಂಗ. ಅಲಂಕರಿಸಿಕೊಂಡು ನೋಡುವಾಗ ಮೊದಲು ಕಂಡ ಕನ್ನಡಿ ಕಾಣದೆ ಹೋಗಿ ಮುಖವು ಕಂಡಂತೆ.

> **ತನುವ ಬೆಳಗಲಿಷ್ಟ ಲಿಂಗ ।**
> **ಮನವ ಬೆಳಗೆ ಪ್ರಾಣಲಿಂಗ ।**
> **ಅನಘಭಾವಲಿಂಗ ಭಾವ ಬೆಳಗಲೊಡನಿರೆ ॥**

ತನುವು ಮನವು ಭಾವ ಶುದ್ಧ ।
ವೆನಲು ಲಿಂಗಸಹಿತಲುಣುವ ।
ಮನುಜಗಿಹವೆ ಪರವು ಇಹದೆಮುಕುತಿ ದೊರೆವುದು ॥

ಲಿಂಗತ್ರಯ ವಿಚಾರವಾದ ಮೇಲೆ ಷಡ್ಲಿಂಗಗಳ ಕಲ್ಪನೆಯನ್ನು ಮನದಟ್ಟು ಮಾಡಿಕೊಳ್ಳಬೇಕು. ಕೇನೋಪನಿಷತ್ತು 'ಕೇನೇಷಿತಂ ಪತತಿ ಪ್ರೇಷಿತಂ ಮನಃ?' ಎಂದು ಪ್ರಾರಂಭವಾಗಿ ಮನವೇ ಮೊದಲಾದ ಇಂದ್ರಿಯಗಳಿಗೆ ಶಕ್ತಿದಾಯಕವಾದ ಚೈತನ್ಯವನ್ನು 'ಶ್ರೋತ್ರಸ್ಯ ಶ್ರೋತ್ರಂ, ಮನಸೋ ಮನೋಯದ್‌ವಾಚೋ ಹ ವಾಚಂ' ಎಂದು ಮೊದಲಾಗಿ ಉತ್ತರವನ್ನು ಕೊಡುತ್ತದೆ. ವೀರಶೈವ ಪರಿಭಾಷೆಯಲ್ಲಿ ನಾಸಿಕ, ಜಿಹ್ವೆ, ನೇತ್ರ, ತ್ವಕ್ಕು, ಕರ್ಣ, ಭಾವಗಳಲ್ಲಿರುವ ಪರಮಾತ್ಮನ ಚೈತನ್ಯಕ್ಕೆ ಕ್ರಮವಾಗಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಮಹಾಲಿಂಗವೆಂದು ಹೆಸರು. 'ಭದ್ರಂ ಕರ್ಣೇಭಿಃ ಶ್ರುಣುಯಾಮ, ಭದ್ರಂ ಪಶ್ಯೇಮ ಅಕ್ಷಿಭಿಃ' ಎಂಬಂತೆ, ಮೂಸುವುದು, ರುಚಿಸುವುದು, ನೋಡುವುದು, ಸ್ಪರ್ಶಿಸುವುದು, ಕೇಳುವುದು, ಭಾವಿಸುವುದು ಇವೆಲ್ಲವೂ ಕ್ರಮವಾಗಿ ಆಯಾ ಅಂಗಗಳಲ್ಲಿರುವ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಭಾವಲಿಂಗಗಳಿಗೆ ಅರ್ಪಿತವಾಗುವಂತಹವಾಗಿ ಎಂದರೆ ಮಂಗಳಕರವಾದುವಾಗಿ ಅರ್ಪಿತವಾಗಬೇಕು.

ನಾಸಿಕದಾಚಾರ, ಜಿಹ್ವೆಗುರು, ಕಂಗಳು (ಶಿವ) ಲಿಂಗ,
ತ್ವಕ್ಕು ಜಂಗಮಲಿಂಗ, ಕರ್ಣಪ್ರಸಾದ, ಭಾವ
ಮಹಾಲಿಂಗ ಕೂಡಲ ಚೆನ್ನಸಂಗಯ್ಯಾ
ನಿಮ್ಮ ಶರಣ ಇಂತು ಸರ್ವಾಂಗ ಪ್ರಸಾದಿ
ಶಬ್ದ, ಸ್ಪರ್ಶ, ರೂಪು, ರಸ, ಗಂಧ
ಪಂಚೇಂದ್ರಿಯಗಳು ಮೊದಲಾಗಿ ನಡೆದವು
ಲಿಂಗದತ್ತತ್ತಲೆ ತಮತಮಗೆ ಬಂದ ಭೋಗಸುಖ
ಲಿಂಗಾರ್ಪಿತವೆಂದು ನಡೆದವು ಲಿಂಗದತ್ತತ್ತಲೆ
ಕೂಡಲ ಸಂಗಯ್ಯಾ ಲಿಂಗ ನಿವಾಸಿ ಶರಣಂಗೆ

ಮಾಡುವುದೆಲ್ಲವೂ ಲಿಂಗಪ್ರಸಾದವಾಗಿಯೇ ಮಾಡಿ ಭೋಗಿಸ ಬೇಕಾಗಿ ಅನರ್ಪಿತವಾದುದು ಅಶುದ್ಧವಾದುದು ಅದನ್ನು ಶರಣನು ಮಾಡಲಾಗುವುದೇ ಇಲ್ಲ. 'ನೆಲವೆಲ್ಲ ತಳವಾರನಾದೊಡೆ ಕಳ್ಳಂಗೆ ಹೋಗಲೆಡೆಯುಂಟೆ?' ಸರ್ವಾಂಗ ಲಿಂಗಿಗೆ ಅನರ್ಪಿತ ಉಂಟೆ? ಎಂಬುದೊಂದು ವಚನ. ಎಲ್ಲ ಕರಣಂಗಳಲ್ಲಿಯೂ ಲಿಂಗಗಳಿರುವುದರಿಂದ ಅನರ್ಪಿತವಾದುದಕ್ಕೆ ಅವಕಾಶವಿಲ್ಲವೆಂದರ್ಥ.

ಶಂಕರಾಚಾರ್ಯರ ಸಿದ್ಧಾಂತದಂತೆಯೆ ವೀರಶೈವ ಸಿದ್ಧಾಂತದ ಪ್ರಕಾರ ಮೋಕ್ಷದಲ್ಲಿ ಶಿಬಿರಪೂರ್ಕನ್ಯಾಯದಂತೆ ಅದ್ವೈತವೇ ಸಿದ್ಧಿಸುವುದು; ಆದರೆ ಶಾಂಕರ ಸಿದ್ಧಾಂತದಂತೆ ದೀಪ ಹಚ್ಚಿದ ಕೂಡಲೆ ತಮವು ಹರಿದು ಬೆಳಕಾಗುವಂತೆ ತತ್ತ್ವಮಸ್ಯಾದಿ ವಾಕ್ಯಗಳಿಂದಾದ ಜ್ಞಾನದಿಂದ ಕೂಡಲೆ ಮೋಕ್ಷವಾಗುವುದು; ಇದಕ್ಕೆ ವಿರುದ್ಧವಾಗಿ ಮೋಕ್ಷಶಿಖರವನ್ನು ಹಂತ ಹಂತವಾಗಿ ಹತ್ತಬೇಕೆನ್ನುವುದು ವೀರಶೈವರ ಷಟ್‌ಸ್ಥಲಸಿದ್ಧಾಂತ ಅಂಗನು ಎಂದರೆ ಜೀವನು ಏರುವ ಮೋಕ್ಷದ ಮೂರು ಮಟ್ಟಗಳು ತ್ಯಾಗಾಂಗ, ಭೋಗಾಂಗ, ಮತ್ತು ಯೋಗಾಂಗ. ತನುಗುಣವಳಿದಲ್ಲಿ ತ್ಯಾಗಾಂಗ, ಲಿಂಗದೊಡನೆ ಸಕಲ ಸುಖಂಗಳಂ ಭೋಗಿಸುವಲ್ಲಿ ಭೋಗಾಂಗ,

ನಿಜದಲ್ಲಿ ಬೆರೆಯಲು ಯೋಗಾಂಗ ತ್ಯಾಗಾಂಗದಲ್ಲಿ ಭಕ್ತಮಹೇಶವೆಂಬ ಸ್ಥಲಗಳೂ, ಭೋಗಾಂಗದಲ್ಲಿ ಪ್ರಸಾದಿ ಪ್ರಾಣಲಿಂಗಿ ಎಂಬ ಸ್ಥಲಗಳೂ, ಯೋಗಾಂಗದಲ್ಲಿ ಶರಣ ಐಕ್ಯ ಸ್ಥಳಗಳೂ ಸೇರಿ ಷಟ್‌ಸ್ಥಲಗಳೆಂಬ ಆರು ಮೆಟ್ಟಿಲುಗಳಿರುವುವು.

ವಿಶ್ವಾಸದಿಂದ ಭಕ್ತನಾಗಿ,
ವಿಶ್ವಾಸದೊಳಗಣ ನಿಷ್ಠೆಯಿಂ ಮಹೇಶ್ವರನಾಗಿ,
ಆ ನಿಷ್ಠೆಯೊಳಗಣ ಸಾವಧಾನದಿಂ ಪ್ರಸಾದಿಯಾಗಿ,
ಆ ಸಾವಧಾನದೊಳಗಣ ಸ್ವಾನುಭಾವದಿಂ ಪ್ರಾಣಲಿಂಗಿಯಾಗಿ
ಆ ಸ್ವಾನುಭಾವದೊಳಗಣ ಅರಿವಿನಿಂ ಶರಣನಾಗಿ,
ಆ ಅರಿವು ನಿಜದಲ್ಲಿ ಸಮರಸ ಭವವನ್ನೈದಿದೊಡೆ
ಐಕ್ಯಸ್ಥಲ ಗುಹೇಶ್ವರ

ಕಿಂಕುರ್ವಾಣಿಯಿಂದ ಉಳ್ಳುದನರಿತು ಮಾಡುವಲ್ಲಿ ಭಕ್ತ, ನಿಷ್ಠೆನಿಬ್ಬೆರಸಿ ಗಟ್ಟಿಗೊಂಡು ಅಭಿಲಾಶೆ ಸಮನಿಸದೆ ಪರಿಚ್ಛೇದ ಬುದ್ಧಿಯುಳ್ಳಲ್ಲಿ ಮಾಹೇಶ್ವರ. ಅನರ್ಪಿತವ ಸಮನಿಸದೆ, ಬಂದುದ ಕಾಯದ ಕರಣದ ಕೈಯಲ್ಲಿ ಕೊಟ್ಟು, ಲಿಂಗ ಸಹಿತ ಭೋಗಿಸುವಲ್ಲಿ ಪ್ರಸಾದಿ. ಪ್ರಾಣಕ್ಕೆ ಪ್ರಾಣವಾಗಿ ಕಾಲಸ್ಥಿತಿಯನ್ನರಿದು ಎಚ್ಚರಿಕೆ ಗುಂದದಿಪ್ಪಲ್ಲಿ ಪ್ರಾಣಲಿಂಗಿ ತನಗೆ ಲಿಂಗವಾಗಿ ಲಿಂಗಕ್ಕೆ ತಾನಾಗಿ ಬೆಚ್ಚು ಬೇರಿಲ್ಲದಿರ್ದೊಡೆ ಶರಣ. ಸದಾಚಾರ ಸಂಪತ್ತಿನಲ್ಲಿ ಬಂದ ಅನುಭಾವವನು ಮೀರಿ ಹೆಸರಡಗಿದ ಸುಖವದು ಲಿಂಗೈಕ್ಯ..ಕೂಡಲ ಚೆನ್ನಸಂಗಯ್ಯಾ.

ತನು ಬಯಲು ನಿರವಯದೊಳಡಗಿತ್ತು;
ಮನಬಯಲು ನಿರವಯದೊಳಡಗಿತ್ತು;
ಭಾವಬಯಲು ನಿರವಯದೊಳಡಗಿತ್ತು;
ಬಯಲು ಬಯಲ ಬೆರಸಿ ಬಯಲೇ ಆಯಿತ್ತು
ಕೂಡಲ ಚೆನ್ನಸಂಗಯ್ಯನೆಂಬ ನುಡಿಯಡಗಿತ್ತು *(ಚೆ.ಬ.ವ. ೧೪೯೯)*

ಐಕ್ಯಸ್ಥಿತಿಯ ಚೆನ್ನಬಸವಣ್ಣನ ವಚನವಿದು 'ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು ಬಯಲು ಬಯಲಾಯಿತಯ್ಯಾ' ಎಂಬ ಪ್ರಭುವಿನ ವಚನದಂತಿದೆ. ಬಯಲು ಬಯಲನೆ ಬಿತ್ತಿ ಎಂಬುದು 'ಪೂರ್ಣಮದಃ ಪೂರ್ಣಮಿದಂ' ಎಂಬುದನ್ನೂ 'ಬಯಲು ಬಯಲನೆ ಬೆಳೆದು' ಎಂಬುದು 'ಪೂರ್ಣಾತ್‌ಪೂರ್ಣ ಮದುಚ್ಯತೇ' ಎಂಬುದನ್ನೂ 'ಬಯಲು ಬಯಲಾಯಿತ್ತಯ್ಯಾ' ಎಂಬುದು 'ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವ ಶಿಷ್ಯತೇ' ಎಂಬುದನ್ನೂ ಜ್ಞಾಪಕಕ್ಕೆ ತರುತ್ತದೆ. ಚೆನ್ನಬಸವಣ್ಣನು 'ಬಯಲು ಬಯಲ ಬೆರಸಿ ಬಯಲೇ ಆಯಿತ್ತು' ಎಂದಿರುವುದರಲ್ಲಿಯೂ ಆ ಶಾಂತಿ ಮಂತ್ರದ ಅಭಿಪ್ರಾಯವೇ ಇದೆ. ಪರಬ್ರಹ್ಮದಲ್ಲಿ ಹೊರಹೊಮ್ಮಿದ ಚಿದಚಿತ್ ಪ್ರಪಂಚವೆಲ್ಲವೂ 'ಬ್ರಹ್ಮೈವೇದಂ' ಎಂಬ ಆಧಾರದಂತೆ ಬ್ರಹ್ಮವೇ; ತೋರಿಕೆಯಲ್ಲ. ಪರಬ್ರಹ್ಮವೆಂಬ ಸಮುದ್ರದಲ್ಲಿ ಚಿದಚಿತ್ ಪ್ರಪಂಚವೆಂಬ ನೊರೆತೆರೆಗಳು ಹೊರಹೊಮ್ಮಿ ಮತ್ತೆ ಅದರಲ್ಲಿ ಲಯವಾದಾಗ ಏರುಪೇರುಗಳಾಗು ವುದಿಲ್ಲವೆಂದಭಿಪ್ರಾಯ.

ಪ್ರಣವ, ಸೃಷ್ಟಿಕಲ್ಪನೆಯು ವೀರಶೈವದ ವೈಶಿಷ್ಟ್ಯವು. ನಿಷ್ಕಲವಾದ ಪರಶಿವಬ್ರಹ್ಮವು ನಾದಬಿಂದು ಕಲಾತೀತವಾದುದು. ಅದರಲ್ಲಿ ಸೃಷ್ಟಿಯ ಲೀಲೆ ತೋರಲು ಅದು ಸಕಲವಾಗಿ ಅದರಿಂದ ನಾದಬಿಂದು ಕಲೆಗಳು ಹೊರಹೊಮ್ಮುವುವು. ನಾದವು ಓಂ ಓಂ ಓಂ ಎಂಬ ಶಬ್ದರೂಪವಾದುದು; ಸೃಷ್ಟಿ ಸ್ಥಿತಿ ಲಯ ಕಾರಣವಾದ ಅ ಉ–ಮಕಾರಗಳು ಓಂಕಾರದಲ್ಲಿವೆ.

'ಓಮಿತ್ಯೇತದಕ್ಷರಮಿದಂ ಸರ್ವಂ' ಎಂದೂ, 'ಸರ್ವಂಹ್ಯೇತದ್‌ಬ್ರಹ್ಮ' ಎಂದೂ, 'ಪ್ರಪಂಚೋ ಪರಮಃ ಶಿವಃ ಅದ್ವೈತಃ ಏವಂ ಓಂಕಾರಃ' ಎಂದೂ 'ಓಂಕಾರೋ ಧೀಮಾತ್ರಂ ಪಾದಾ ಮಾತ್ರಾ ಅಕಾರ ಉಕಾರ ಮಕಾರ ಇತಿ' ಎಂದೂ ಮಾಂಡೂಕ್ಯೋಪನಿಷತ್ತಿನಲ್ಲಿ ಹೇಳಿರುವುದು ಮೇಲಿನ ವೀರಶೈವ ನಿಲುವನ್ನು ಸಮರ್ಥಿಸುತ್ತದೆ. ಚೆನ್ನಬಸವಣ್ಣನ ಕರಣಹಸುಗೆಯಲ್ಲಿ ಹೀಗೆ ಹೇಳಿದೆ:

ಅಕಾರ ಪ್ರಣವವೇ ಚಿನ್ನಾದ ಸ್ವರೂಪ ಮಾಗಿರ್ಪುದು...
ಯಥಾದೀರ್ಘಘಂಟಾ ನಿನಾದವತ್...
ಓಂ ಓಂ ಓಂ ಎಂದು ಸುನಾದ ಘೋಷವುಳ್ಳದ್ದೇ ಅಕಾರ
ಪ್ರಣವ; ಉಕಾರ ಪ್ರಣವವೇ ಚಿದ್ಬಿಂದು...
ಯಥಾ ಸುವರ್ಣ ತೈಲಧಾರವತ್ ಅಂತಪ್ಪುದೊಂದು
ಚಿದ್ಬಿಂದು ಪ್ರಕಾಶವನ್ನುಳ್ಳದ್ದೇ ಉಕಾರ ಪ್ರಣವ;
ಮಕಾರ ಪ್ರಣವವೇಚಿತ್ಕಳಾ ಸ್ವರೂಪವಾಗಿರುತ್ತಿಹುದು...
ಯಥಾ ಅರುಣ ಪ್ರಕಾಶವತ್ ಮಧ್ಯಾಹ್ನ
ಕಾಲದ ಚಂಡ ಸೂರ್ಯ ಕೋಟಿಗಳ ಪ್ರಕಾಶವನ್ನು ಕೀಳ್ವಡಿಸಿ
ಬೆಳಗಲ್ಪಟ್ಟ ಮಹಾಪ್ರಕಾಶವನ್ನುಳ್ಳದ್ದೇ ಮಕಾರ ಪ್ರಣವ.

'ಜನ್ಮವಾಗುವಂತಹ ಸಮಸ್ತತೆಯು ಇಂಬಾದ ನಾದ ಉದಯಿಸುವುದಕ್ಕೆ ನಿರವಯದಲ್ಲಿ ಒಂದೂ ಸಾಧನವಿಲ್ಲದೆ ತನ್ನಿಂದ ತಾನೇ ಉಂಟಾದ ಲೀಲೆಯೊಂದುಂಟು..ಅದರಲ್ಲಿ ತೋರಿದ ಲೀಲೆಯೇ ನೆನಹು; ಅದೇ ಅದುರು. ಅದುರಿದ ಮಾತ್ರದಿಂ ಅತಿಸೂಕ್ಷ್ಮನಾದ ಘೋಷವುಂಟಾಗುವುದು' ಎಂದು ವೀರಶೈವ ತತ್ವ ಪ್ರಕಾಶಿಕೆಯಲ್ಲಿ ಹೇಳಿರುವ ವಿವರಣೆಯೊಡನೆ ಮೇಲಿನಂತೆ ಕರಣಹಸುಗೆಯಲ್ಲಿ ಹೇಳಿರುವುದನ್ನು ಮನನ ಮಾಡಿಕೊಂಡರೆ, ವೀರಶೈವ ಸಿದ್ಧಾಂತದಂತೆ ಸೃಷ್ಟಿ ಲೀಲಾ ವೈಭವವು ಕಣ್ಣು ಮುಂದೆ ಮಿಂಚಿದಂತಾಗುವುದು–ಪ್ರಶಾಂತ ವಾತಾವರಣ, ಇದ್ದಕ್ಕಿದ್ದಂತೆಯೇ ಸೃಷ್ಟಿ ವೈಭವ ಲೀಲೆ; ಅದೇ ನೆನಹು; ಅದೇ ಅದುರು (Vibration), ಅದುರಿದ ಮಾತ್ರದಿಂ ಅತಿಸೂಕ್ಷ್ಮನಾದ ಘೋಷ 'ಯಥಾ ದೀರ್ಘಘಂಟಾನಿನಾದವತ್' ಹಾಗೆಯೇ 'ಮಧ್ಯಾಹ್ನ ಕಾಲದ ಚಂಡ ಸೂರ್ಯಕೋಟಿಗಳ ಪ್ರಕಾಶವನ್ನು ಕೀಳ್ವಡಿಸಿ ಬೆಳಗಲ್ಪಟ್ಟ ಮಹಾಪ್ರಕಾಶ'ದ ಉಷ್ಣ. ಅದುರುವುದು, ಶಬ್ದ, ಪ್ರಕಾಶ, ಬಿಸಿ ಇವೆಲ್ಲವೂ ಶಕ್ತಿಯ ವಿವಿಧ ರೂಪಗಳೆಂಬುದೂ ಇವು ಒಂದರಿಂದ ಒಂದು ಆಗುವವೆಂಬುದೂ ಭೌತಿಕ ಶಾಸ್ತ್ರದ ವಿದ್ಯಾರ್ಥಿಗೂ ತಿಳಿಯುವುದು. ಇಂತಹ ಅದರುವಿಕೆ, ಶಬ್ದ, ಬೆಳಗು, ಬಿಸಿ ಇವುಗಳಿಂದ ಪ್ರಾರಂಭವಾಗುವುದು ಸೃಷ್ಟಿ, ಹೀಗೆ ಪರಶಿವ ಶಕ್ತಿಯಿಂದ ಜಗತ್ತು ಉದಯಿಸಿ, ಅದರಲ್ಲಿಯೇ ಉಳಿದು ನಿಂದು, ಅದರಲ್ಲಿಯೇ ಲಯವಾಗುವುದು.

ಜೀವನೆಂಬ ಯಾತ್ರಿಕನಿಗೆ ಗುರುವು ಮಾರ್ಗದರ್ಶಕನು; ಜಂಗಮವು ಸತ್ಸಹವಾಸವು: ಮಮತೆಯೆಂಬ ಹಸಿವನ್ನು ಕಳೆವುದು ಪ್ರಸಾದವು, ತಾಪತ್ರಯವೆಂಬ ಬಾಯಾರಿಕೆಯನ್ನು ಪರಿಹರಿಸುವುದು ಪಾದೋದಕವು. ವಿಷಯಗಳೆಂಬ ಕಳ್ಳಕಾಕರ ಹಾವಳಿಯನ್ನು ತಪ್ಪಿಸುವ ವಿಭೂತಿ ರುದ್ರಾಕ್ಷಿಗಳೆಂಬ ಆಯುಧಗಳನ್ನು ಧರಿಸಿ, ಮನವನ್ನು ಗುರಿಯತ್ತ ಏಕಾಗ್ರಗೊಳಿಸುವ ಮಂತ್ರದ ಸಹಾಯದಿಂದ ಲಿಂಗವೆಂಬ ಗುರಿಯನ್ನು ಅಂಗವೆಂಬ ಯಾತ್ರಿಕನು ಸುರಕ್ಷಿತವಾಗಿ ಮುಟ್ಟುವನು. ಹೀಗೆ ಗುರಿಯನ್ನು ಮುಟ್ಟಲು ಮೂರು ಮಟ್ಟಗಳಲ್ಲಿ ಆರು ಮೆಟ್ಟಿಲುಗಳನ್ನು

ಅವನು ಏರಬೇಕಾಗುವುದು. ಭಕ್ತಿ ಮತ್ತು ಅದರಲ್ಲಿನ ನಿಷ್ಠೆಯಿಂದ ಭಕ್ತಮಾಹೇಶ ಎಂಬ ಮೆಟ್ಟಿಲುಗಳುಳ್ಳ ತ್ಯಾಗಾಂಗ ಮಟ್ಟವನ್ನೂ, ಲಿಂಗಾರ್ಪಿತವಾದುದನ್ನೇ ಭೋಗಿಸಿ ಪ್ರಾಣಕ್ಕೆ ಪ್ರಾಣವಾಗಿ ಎಚ್ಚರದಪ್ಪದೆ ಪ್ರಸಾದಿ ಪ್ರಾಣಲಿಂಗಿ ಎಂಬ ಮೆಟ್ಟಲುಗಳುಳ್ಳ ಭೋಗಾಂಗವೆಂಬ ಮಟ್ಟವನ್ನೂ, ಶರಣಸತಿ ಲಿಂಗಪತಿಭಾವದಿಂದಲೂ ಅಂತ್ಯದಲ್ಲಿ ಅಭೇದಭಾವದಿಂದಲೂ ಶರಣ ಐಕ್ಯ ಎಂಬ ಮೆಟ್ಟಲುಗಳುಳ್ಳ ಯೋಗಾಂಗ ಮಟ್ಟವನ್ನು ಮುಮುಕ್ಷುವು ಏರಿ ಜೀವನ್ಮುಕ್ತನಾಗುವನು.

ಇಂತಹ ಅಷ್ಟಾವರಣ ಷಟ್‌ಸ್ಥಲಾದಿ ವೀರಶೈವ ಸಿದ್ಧಾಂತ ರಚನೆಗಾಗಿಯೇಅವತರಿಸಿದ ಪುಣ್ಯಪುರುಷ ಚೆನ್ನಬಸವಣ್ಣನು; ಅನುಭವಮಂಟಪದ ಅಧ್ಯಕ್ಷ ಪ್ರಭುವಿನ ದೃಷ್ಟಿಯಲ್ಲಿ 'ಬಯಲ ಬಣ್ಣಕ್ಕೆ ತಂದು ನೆಳಲ ಶೃಂಗಾರವ ಮಾಡಿದನು, ಗುಹೇಶ್ವರನ ಶರಣ ಚೆನ್ನಬಸವಣ್ಣ; ಗುರುವಾದ ಬಸವಣ್ಣನಿಗೆ ಗುರುವಾಗಿ ಅವನಿಗೆ ಪರಮಾರಾಧ್ಯನಾದನು ಚೆನ್ನಬಸವಣ್ಣನು; ಮಡಿವಾಳಯ್ಯನ ದೃಷ್ಟಿಯಲ್ಲಿ 'ಮಾಯಕ್ಕೆ ಹೊರಗಾದ ನಿರ್ಮಾಯ' ಚೆನ್ನಬಸವಣ್ಣನು; ಅಕ್ಕಮಹಾದೇವಿ ಕರುಣದ ಶಿಶು ಚೆನ್ನಬಸವೇಶನಿಗೆ; ಮರುಳು ಶಂಕರ ದೇವರ 'ನಿರ್ಮಲಾತ್ಮ ಚೇತನನಯ್ಯ ಷಡುಸ್ಥಲ ಬ್ರಹ್ಮಿ ಚೆನ್ನಬಸವಣ್ಣನು.' ಮಾಯಿದೇವರ ಮಾತಿನಲ್ಲಿ 'ಭಾಕ್ತಿಕಪುರಸ್ಸರ, ಷಟ್‌ಸ್ಥಲಧೀರ, ಚಿತ್ ಸುಧಾಭರಿತಾಂತರಂಗಸಕಲಾಕ್ಷ ಸಮರ್ಪಿತ ಲಿಂಗ, ತತ್ಪ್ರಸಾದ ಸುಖ ವಿಶೇಷ ತೃಪ್ತ, ಶಿವಯೋಗ ಪದೈಕಸಮಾಪ್ತ, ಚೆನ್ನಬಸವಯ್ಯ.'

'ಶಶಿರವಿಗಳಂತೆ ಬೆಳಬೆಳಗುತಿರ್ದಂ ನೋಡ, ಉಸುರಲಿಲ್ಲದ ಪರಬ್ರಹ್ಮವಾದಂ ನೋಡ' ಎಂದು ಹರಿಹರನಿಂದ ಸ್ತುತಿಸಲ್ಪಟ್ಟ ಶೂನ್ಯ ಸಿಂಹಾಸನಾಧ್ಯಕ್ಷ ನಿರಂಜನಮೂರ್ತಿ ಅಲ್ಲಮಪ್ರಭುವು ಶರಣರಿಗೆ ಸನ್ಮಾರ್ಗವನ್ನು ತೋರುವ ನಿಶ್ಚಲ ಪರಂಜ್ಯೋತಿಯಾಗಿದ್ದನು. ಬಿಜ್ಜಳನ ಮಂತ್ರಿ ಬಸವಣ್ಣನು ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವಂತೆ ಕರ್ತಾರನ ಕಮ್ಮಟವಿದರಲ್ಲಿ ಹೇಗೆ ಸದಾಚರಣೆಯಿಂದ ನಡೆಯಬೇಕೆಂಬ ಯೋಜನೆಯನ್ನು ರೂಪಿಸಿ, ಅದರಂತೆ ನಡೆದು ಶರಣರಿಗೆ ಮಾರ್ಗದರ್ಶಕನಾಗಿದ್ದನು. ಈ ಯೋಜನೆಯಂತೆ ಸಿದ್ಧಾಂತೀಕರಿಸಿ ಶಾಸ್ತ್ರ ರಚನೆಮಾಡಿ, ಶರಣರಿಗೆ ಬೋಧಿಸಿ ಅದರಂತೆ ನಡೆಯುವ ಹಾಗೆ ಮಾಡುವ ಕಾರ್ಯ, ಕ್ರಿಯಾವಂತ ಬ್ರಹ್ಮನಿಷ್ಠ ಚೆನ್ನಬಸವಣ್ಣನ ಪಾಲಿಗೆ ಬಿದ್ದಿತು. ಈ ಕಾರ್ಯ ಸಾಮಾನ್ಯ ಬುದ್ಧಿಗೆ ನಿಲುಕತಕ್ಕದ್ದಲ್ಲ. ಆದರೆ ಎಂ. ಆರ್. ಶ್ರೀನಿವಾಸಮೂರ್ತಿಯವರ ಮಾತಿನಲ್ಲಿ 'ಪಾದರಸದಂತೆ, ಮಿಂಚಿನಂತೆ ಆತನ ಪ್ರತಿಭೆ'. ಆದುದರಿಂದ ಅವನಿಗೆ ಷಟ್‌ಸ್ಥಲ ಸಿದ್ಧಾಂತದಂತಹ ವೀರಶೈವದ ಮೂಲ ಸಿದ್ಧಾಂತಕ್ಕೆ ಶಾಸ್ತ್ರೀಯವಾದ ಸ್ವರೂಪವನ್ನು ಕೊಡಲು ಸಾಧ್ಯವಾಯಿತು. ಕರಣ ಹಸುಗೆಯೊಂದೇ ಸಾಕು, ಅವನ ಪ್ರತಿಭೆಯ ಮೇರೆಯನ್ನು ತೋರಲು, ನಿಷ್ಕಲ ಬ್ರಹ್ಮವು ಸಕಲ ನಿಷ್ಕಲವಾಗಿ ಸಕಲವಾಗಿ ಮುಂದೆ ಮೂವತ್ತಾರು ತತ್ತ್ವಗಳಾಗಲು ಕಾರಣವಾಯಿತು. ಹೇಗೆ ಆ ಪ್ರವೃತ್ತಿಮಾರ್ಗದಲ್ಲಿ ದೇಹಸಂಬಂಧವಾಗುವುದು, ನಿವೃತ್ತಿ ಮಾರ್ಗದಲ್ಲಿ ಹೇಗೆ ಅದರಿಂದ ಬಿಡುಗಡೆಯಾಗುವುದು ಮೊದಲಾದುವೆಲ್ಲ ಶಾಸ್ತ್ರೀಯವಾಗಿ ಅವನಿಂದ ನಿರ್ಧರಿಸಲ್ಪಟ್ಟಿವೆ. ವೇದಾಂತದಲ್ಲಿ ಸಾಮಾನ್ಯವಾಗಿ ಅನುಸರಿಸುವ ಸಾಂಖ್ಯ ಸಿದ್ಧಾಂತದಂತೆ ತನ್ಮಾತ್ರೆಗಳಿಂದಾದ ಮಹಾಭೂತಗಳೇ ಕಡೆಯ ತತ್ತ್ವಗಳು. ಕರಣ ಹಸುಗೆಯ ಪ್ರಕಾರ ಮಹಾಭೂತಗಳೇ ಮೊದಲನೆಯವು. ಸಾಂಖ್ಯ ಸಿದ್ಧಾಂತದಂತೆ ತತ್ತ್ವಗಳೊಳಗೆ ಗಣಿಸಲ್ಪಡದ ಪ್ರಾಣವಾಯುಗಳು ಕರಣ ಹಸುಗೆಯಲ್ಲಿ ತತ್ತ್ವಗಳಾಗಿವೆ. ಕರಣ ಹಸುಗೆಯ ಸಿದ್ಧಾಂತಕ್ಕೆ

'ವಿಜಯ ಭೈರವೀ ಆಗಮವೇ ಆಧಾರ. ಮಿಶ್ರಾರ್ಪಣ ಗ್ರಂಥದಲ್ಲಿ ತ್ರಿವಿಧಾರ್ಪಣಗಳ ಮತ್ತು ತ್ರಯಾಂಗ ತ್ರಿಲಿಂಗಿಗಳ ವಿವರಣೆಗಳಿವೆ. ಪದ ಮಂತ್ರಗೋಪ್ಯದಲ್ಲಿ ಸಿದ್ಧರಾಮನಿಗೆ ಉಪದೇಶಿಸಿದ ಶಿವಯೋಗ ಸ್ವರೂಪವು ಉಕ್ತವಾಗಿದೆ.

ಮತಸಿದ್ಧಾಂತವನ್ನು ಹೇಳುವ ಉದ್ದನೆಯ ವಚನಗಳಲ್ಲಿ ಸಾಮಾನ್ಯವಾಗಿ ತತ್ತ್ವ ನಿರೂಪಣೆಯನ್ನು ಮಾಡುವ ಚಿಕ್ಕ ವಚನಗಳಲ್ಲಿರುವ ಬಿಗಿಯೂ ಕಂಡುಬರುವುದು ಸ್ವಾಭಾವಿಕವೇ. ತತ್ತ್ವ ನಿರೂಪಣೆಯ ವಚನಗಳಲ್ಲಿ ಪ್ರಭುವಿನ ವಚನಗಳಂತೆ ಪ್ರತಿಭೆ, ಗಾಂಭೀರ್ಯ, ಗಹನ ವಚನ ರಚನಾ ವಿನ್ಯಾಸವನ್ನು ಕಾಣುತ್ತೇವೆ. ವ್ಯಾಖ್ಯಾನವಿಲ್ಲದೆ ಅರ್ಥವಾಗದ ಬೆಡಗಿನ ವಚನಗಳೂ ಚೆನ್ನಬಸವಣ್ಣನಿಂದ ರಚಿತವಾಗಿವೆ. ಹಿರಿದಾದ ತತ್ತ್ವವನ್ನು ಕಿರಿದಾದ ಅರ್ಥಗರ್ಭಿತ ಸೂತ್ರೋಕ್ತಿಗಳನ್ನು ಚೆನ್ನಬಸವಣ್ಣನು ರಚಿಸಿರುವುದರಲ್ಲಿ ಕೆಲವನ್ನು ಮಾದರಿಗಾಗಿ ಇಲ್ಲಿ ಕೊಟ್ಟಿದೆ:

ಆಚಾರವೇ ಅಂಗ, ಅರಿವೇ ಪ್ರಾಣ; ಆಚಾರ ಸಹಿತ ಭಕ್ತ,
ಅನಾಚಾರ ಸಹಿತ ನರ; ಕಾಯ ಗುರು, ಪ್ರಾಣಲಿಂಗ
ಜ್ಞಾನಜಂಗಮ; ತನುವಿನ ಪ್ರಾಣ ಆಚಾರ, ಮನದ
ಪ್ರಾಣ ಅನುಭಾವ; ನಾನಿಲ್ಲದ ಮುನ್ನ ನೀನಿರ್ದುದಿಲ್ಲಯ್ಯ,
ಪದವೇ ಲಿಂಗ, ಅರ್ಥವೇ ಭಕ್ತಿ; ಬಯಸಿ ಬಂದುದು
ಅಂಗಭೋಗ, ಬಯಸದೆ ಬಂದುದು ಲಿಂಗಭೋಗ,
ಮುತ್ತು ನೀರಿನಲ್ಲಿ ಹುಟ್ಟಿ ಮತ್ತೆ ನೀರಪ್ಪುದೆ? ; ಅಹಂ
ಎಂಬುದೇ ದೇಹ, ದಾಸೋಹಂ ಎಂಬುದೇ ನಿರ್ದೇಹ;
ಅಗ್ನಿಯೊಳಗೆ ಕರ್ಪೂರವಡಗಿದಂತೆ ಮಹಾಲಿಂಗದಲ್ಲಿ ಲೀಯ
ವಾದುದೇ ಲಿಂಗೈಕ್ಯ ; ಇಷ್ಟಲಿಂಗವೆಂಬುದು
ದರ್ಪಣ ; ಪ್ರಾಣಲಿಂಗವೆಂಬುದು ಪ್ರತಿಬಿಂಬ ; ಅರಸನ
ಭಕ್ತಿ ಅಹಂಕಾರದಿಂದ ಕೆಟ್ಟಿತ್ತು ; ಬಣಜಿಗನ ಭಕ್ತಿ
ಬಳ್ಳದ ಮೊನೆಯಲ್ಲಿ ಹೋಯಿತ್ತು ; ಮಧುರಗುಣವ
ಇರುವೆ ಬಲ್ಲುದು ; ವೇಳೆಯ ಗುಣವ ಕೋಳಿಬಲ್ಲುದು;
ಅಟ್ಟುದ ಅಡುವರೆ ಸುಟ್ಟುದ, ಸುಡುವರೆ? ಅನುಭಾವ
ವೆಂಬುದು ನೆಲದ ಮರೆಯ ನಿಧಾನ, ಶಿಶು ಕಂಡ ಕನಸು
ಅರಿವೆ ಗುರು, ಅನುಭಾವವೇ ಲಿಂಗ; ಪರುಷ ಪರ್ವತದಲ್ಲಿ ಕಬ್ಬುನವುಂಟೆ?

ಇಂತಹವೆಷ್ಟೋ ವಚನಗಳಲ್ಲಿ ಚೆನ್ನಬಸವಣ್ಣನ ಆಧ್ಯಾತ್ಮದ ಪ್ರಕಾಶ, ಅನುಭವದ ಬೆಳಗು ಕಾವ್ಯದ ಕಾಂತಿ, ಅರುಹಿನ ಕುರುಹು, ಪಾದರಸದಂತಹ ಪ್ರತಿಭೆಯು ಮಿಂಚುತ್ತಿರುವುದು. ಈ ಲೇಖನವನ್ನು ಮರಿತೋಂಟದಾರ್ಯರ ಮಾತಿನಲ್ಲಿ ಹೀಗೆ ಸಮಾಪ್ತ ಗೊಳಿಸೋಣವೆನಿಸುತ್ತದೆ:

'ಶಿವತತ್ತ್ವಾಮೃತಾಸ್ವಾದ ಚೇತಸೇ ಯೋಗಿನೇ ನಮಃ
ತೇ ಚೆನ್ನಬಸವೇಶಾಯ ಷಟ್ಸ್ಥಲಬ್ರಹ್ಮವಾದಿನೇ'*

---

* ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಪ್ರಸಂ. ಪ್ರೊ. ಜಿ. ಶಿವರುದ್ರಪ್ಪ, ಕನ್ನಡ ಅಧ್ಯಯನ ಕೇಂದ್ರ, ಪ್ರಸಾರಾಂಗ, ಬೆಂಗಳೂರು ವಿ.ವಿ. ಬೆಂಗಳೂರು

ಚೆನ್ನಬಸವಣ್ಣ : ಶೈವಸಂಪ್ರದಾಯದ ಹಿನ್ನೆಲೆ

ಎಂ.ಆರ್. ಶ್ರೀನಿವಾಸ ಮೂರ್ತಿ

ಶೈವದ ಭೇದಗಳಲ್ಲಿ ಕೆಲವು ವೀರಶೈವಕ್ಕೆ ಸಮೀಪವಾಗಿದ್ದು ವೀರಶೈವದಂತೆಯೇ ವ್ಯತ್ಯಾಸ ತೋರದೆ ಬಳಕೆಗೆ ಬಂದು ಹೋಗಿದ್ದವು. ಕೆಲಕೆಲವರು ವೀರಪಂಥವನ್ನು ಹೂಡಿ ಭೇದವೆಣಿಸುವುದಕ್ಕೆ ತೊಡಗುತ್ತಿದ್ದರು. ಆದರೆ ಸೌಮ್ಯಪಕ್ಷದವರು ತಮ್ಮ ವಾದವನ್ನು ಮುಂದಿಡದೆ ಬಿಡುತ್ತಿರಲಿಲ್ಲ.

'ತನ್ನದಾದರೇನು ಕನ್ನಡಿ, ಅನ್ಯರಾದಡೇನು ಕನ್ನಡಿ?
ತನ್ನ ರೂಪು ಕಂಡಡೆ ಸಾಲದೇ? ಸದ್ಗುರು ಆವನಾದಡೇನು?
ತನ್ನನರುಹಿದಡೆ ಸಾಲದೇ ಹೇಳಾ ಸಿಮ್ಮಲಿಗೆಯ ಚೆನ್ನರಾಮಾ'
'ಶೈವ ನೇಮಸ್ತರ ಕಯ್ಯಲು ಉಪದೇಶವಾದರೆ ಏನಯ್ಯಾ;
ಅಲ್ಲಿ ಏನೂ ಊನವಿಲ್ಲ; ಪಾರಂಪರ್ಯದಲ್ಲಿ ನಡೆದಿತ್ತುದಾಗಿ...
ಗುರುಲಿಂಗಜಂಗಮಸಾಕ್ಷಿಯಾಗಿ ಪಟ್ಟಾಭಿಷೇಕ ಪ್ರಣವ ಮಾತ್ರದಿಂದ
ಲಿಂಗದರ್ಶನವಾಯಿತ್ತಾಗಿ, ಕಳೆಯಬಾರದು, ಬೆರಸಿ
ತನ್ನೊಳಗೆ ತಾನಚ್ಚೊತ್ತಿ ಕರಿಗೊಂಡಿತ್ತಾಗಿ...ಉಳಿಯುಮೇಶ್ವರಾ'

ಆದುದರಿಂದ ಶೈವಸಂಪ್ರದಾಯದಿಂದ ದೀಕ್ಷೆಯಾಗಿ ಪಡೆದದ್ದು ಕೂಡ ಇಷ್ಟಲಿಂಗವೆಂದೂ ಅದನ್ನೇನೂ ನಿರಾಕರಿಸಬೇಕಾದ್ದಿಲ್ಲವೆಂತಲೂ ಹೇಳಿದ್ದಾರೆ. ವೀರಪಂಥದವರು '...ಶೈವಗುರುವಿನ ಕಯ್ಯಲ್ಲಿ ಸಾಹಿತ್ಯವಾದ ಲಿಂಗವನು ವೀರಶೈವ ಗುರುವಿನ ಕಯ್ಯಲ್ಲಿ ಕೊಟ್ಟು ಮರಳಿಕೊಂಡಡೆ ಆತ ಇಹಲೋಕ ಪೂಜ್ಯನು. ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ತಪ್ಪದು ರೇಕಣ್ಣಪ್ರಿಯ ನಾಗನಾಥಾ'

ಎಂದು ಹೇಳಿದ್ದಾರೆ. ಹೀಗೆ ಎರಡು ಪಂಥಗಳೂ ಬೇರೆಕೆಯಾಗಿ ವೀರಶೈವದಲ್ಲಿ ವ್ಯವಹಾರವಾಗುತ್ತಿತ್ತೆಂದು ತೋರುತ್ತವೆ. ಶುದ್ಧಶೈವರು ಅಥವಾ ಮಹಾಶೈವರು ಲಿಂಗಧಾರಣ ಮಾಡಿಕೊಳ್ಳುತ್ತಿದ್ದರು; ಅಷ್ಟಾವರಣಗಳನ್ನೂ ಪಾಲಿಸುತ್ತಿದ್ದರು. ಆದರೆ ಅವರು ಸ್ಥಾವರಲಿಮಗ ಪೂಜಕರಾಗಿಯೂ ಇರುತ್ತಿದ್ದರು. ದೇವಸ್ಥಾನಗಳಲ್ಲಿ ನಿತ್ಯೋತ್ಸವ ರಥೋತ್ಸವಾದಿಗಳನ್ನು ನಡೆಸುತ್ತಿದ್ದರು. ಆದರೆ ಇಷ್ಟಲಿಂಗ (ಬಿದ್ದುಹೋದರೆ ಅಥವಾ) ಕಳೆದುಹೋದರೆ ಸಾಕಷ್ಟು ಪ್ರಾಯಶ್ಚಿತ್ತ ಮಾಡಿಕೊಂಡು ಗುರುವಿನಿಂದ ಬೇರೆ ಲಿಂಗವನ್ನು ಪಡೆದುಕೊಳ್ಳಬಹುದಾಗಿತ್ತು.

ತನ್ನಿಷ್ಟಲಿಂಗವು ಚೋರಾದಿಗಳಿಂ ಪೋಗಿ ಮರಳಿ ತನ್ನ ವಶಕ್ಕೆ ಬಾರದಿರ್ದೊಡೊಂದು ಲಕ್ಷಂ ಅಘೋರ ಮಂತ್ರ ಜಪದಿಂ ಶುದ್ಧಾತ್ಮನಾಗಿ ಮೇಲಾಚಾರ್ಯನಿಂ ವಿಧ್ಯುಕ್ತಮಾಗಿ ಮತ್ತೆ ಪಡೆದು ವ್ರತನಿಯಮಾದಿ ಲೋಪಮಾಗಲ್ ಅಷ್ಟೋತ್ತರ ಶತಗಾಯಿತ್ರೀ ಜಪದಿಂ ಪರಿಶುದ್ಧಿಯಂ ಪಡೆದು...ಪರಿಭಾವಿಸುತ್ತಿಂತು ಸಕಲ ಸತ್ಕ್ರಿಯೆಗಳಿಂ ನಿರ್ಮಲಾಂತಃಕರಣನಾಗಿರ್ಪಾತನೇ ಸರ್ವಸಂಪೂಜ್ಯ ಶುದ್ಧಶೈವನಪ್ಪಂ' ಎಂದು ನಿಜಗುಣಶಿವಯೋಗಿಯು ಹೇಳಿದ್ದಾನೆ. ವೀರಶೈವನಿಗೆ ಇಮತಹ ಸಂದರ್ಭಲದಲ್ಲಿ ಪ್ರಾಣತ್ಯಾಗವಲ್ಲದೆ ಬೇರೆ ಪ್ರಾಯಶ್ಚಿತ್ತವಿಲ್ಲ. ಯಾವ ಚೆನ್ನಬಸವಣ್ಣನು ಸಿದ್ಧರಾಮನನ್ನು ಶುದ್ಧ ಶೈವ ಸಂಪ್ರದಾಯದವನೆಂದು ಲಿಂಗವಿಲ್ಲದ ಭವಿಯೆಂದೂ ಜರೆದನೋ ಆ ಚೆನ್ನಬಸವಣ್ಣನೇ ಇಷ್ಟಲಿಂಗಹೋದರೆ ಪ್ರಾಣತ್ಯಾಗಮಾಡಬೇಡಿ ಗುರುವಿನಿಂದ ಬೇರೆ ಲಿಂಗವನ್ನು ಪಡೆಯಿರಿ ಎಂದು ಹೇಳಿದ್ದಾನೆ:

'ಗುರು ಸತ್ತರೆ ಸಮಾಧಿಯ ಹೊಗಲೊಲ್ಲರಯ್ಯ! ಲಿಂಗ ಬಿದ್ದರೆ ಸಮಾಧಿಯ ಹೊಕ್ಕೆವೆಂಬರು ಗುರುವಿಂದ ಲಿಂಗವಾಯಿತ್ತೊ ಲಿಂಗದಿಂದ ಗುರುವಾದನೋ? ಅರೊತೆಂದೊಡೆ ಪೃಥ್ವಿಯಲ್ಲಿ ಹುಟ್ಟಿತ್ತು, ಕಲ್ಲುಕುಟಿಗನಿಂದ ರೂಪವಾಯಿತ್ತು, ಗುರುವಿನ ಹಸ್ತದಿಂದ ಲಿಂಗವಾಯಿತ್ತು. ಇಂತೀ ಮೂವರಿಗೆ ಹುಟ್ಟಿದ ಲಿಂಗವ ಕಟ್ಟಿ ಜಗವೆಲ್ಲಾ ಲಿಂಗವನೆತ್ತಿಕೊಂಡು ಷೋಡಶೋಪಚಾರಮಂ ಮಾಡುವುದು. ಹೀಗಲ್ಲದೆ ಶಸ್ತ್ರಸಮಾಧಿ ದುರ್ಮರಣವ ಮಾಡಿಕೊಂಡಿಹೆನೆಂಬ ಪಂಚಮಹಾಪಾತಕಂಗೆ ನಾಯಕ ನರಕ. ಲಿಂಗವು ಬೀಳಬಲ್ಲುದೇ? ಭೂಮಿಯಾನಬಲ್ಲುದೇ? ಸದ್ಗುರುನಾಥನಿಲ್ಲವೇ? ಇಂತೀ ಕಟ್ಟುವ ತೆರನ ಮುಟ್ಟುವ ಭೇದವ ಆರುಬಲ್ಲರೆಂದಡೆ, ಈರೇಳು ಭುವನ ಹದಿನಾಲ್ಕು ಲೋಕದೊಡೆಯ ಪೂರ್ವಾಚಾರಿ ಕೂಡಲಚೆನ್ನಸಂಗಯ್ಯನಲ್ಲದೆ ಮಿಕ್ಕಿನ ಮಾತಿನ ಜ್ಞಾನಿಗಳೆತ್ತಬಲ್ಲರು.'

ಹಿಂದೆ ಹೀಗೆ ಶುದ್ಧ ಶೈವಸಂಪ್ರದಾಯಗಳು ವೀರಶೈವವೆಂದೇ ಬೋಧೆಯಾದುವು. ವಿಜಯನಗರದಲ್ಲಿ ಮಹಾಲಿಂಗದೇವ ಮೊದಲಾದ ವಿರಕ್ತರು ವಚನಗಳನ್ನು ಸಂಕಲಿಸಿ ಟೀಕೆಗಳನ್ನು ಬರೆದು ವೀರಶೈವಕ್ಕೆ ಒಂದು ಘನರೂಪವನ್ನು ಕೊಟ್ಟಾಗ ಮತ್ತು ಗುಮ್ಮಳಾಪುರ, ಗೂಳೂರು ಮತ್ತು ಗುಬ್ಬಿಯ ಪ್ರಾಂತದಲ್ಲಿ ತೋಂಟದ ಸಿದ್ಧಲಿಂಗ ಯತಿಯೂ ಆತನ ಶಿಷ್ಯರೂ ವೀರಶೈವವನ್ನು ವೀರಪಂಥವಾಗಿ ಎರಕ ಹೊಯ್ದಾಗ ಸಿದ್ಧರಾಮನು ಕಲ್ಯಾಣಪಟ್ಟಣಕ್ಕೆ ಹೋಗಿದ್ದ ಘಟನೆಯನ್ನು ಉತ್ಥಾಪನೆ ಮಾಡಿದರು. ಆದರೆ ಶುದ್ಧ ಶೈವಚರಣೆಯುಳ್ಳವನೆಂದು ಮೇಲಿನ ಚೆನ್ನಬಸವಣ್ಣನ ಅಭಿಪ್ರಾಯವನ್ನು ಪ್ರತಿಭಟಿಸಿ,

'ಲಿಂಗಹೋದರೇನು, ಗುರು ಉಂಟೆಂಬ ಬಾಲಭಾಷೆಯ ಕೇಳಲಾಗದು. ಕೇಳಿದವನ ಸಂಗ ಸಿಂಗಿಕಾಳಕೂಟವಿಷವು. ಆತನ ಸಂಗದಲ್ಲಿರಲು ಪಂಚಮಹಾಪಾತಕ ತಪ್ಪದಯ್ಯ ಕಪಿಲ ಸಿದ್ಧಮಲ್ಲಿಕಾರ್ಜುನಾ'

ಎಂಬುದಾಗಿ ಹೇಳಿರುವನಲ್ಲ! ಸಿದ್ಧರಾಮನಿಗೆ ಇಷ್ಟಲಿಂಗವಿರಲಿಲ್ಲವೆ? ಆ ಲಿಂಗದಲ್ಲಿ ಅವನಿಗೆ ವೀರಶ್ರದ್ಧೆ ಇರಲಿಲ್ಲವೆ? ಸರಿಯಾಗಿ ವಿಚಾರಮಾಡಿದರೆ ಚೆನ್ನಬಸವಣ್ಣನಿಗಿಂತ ಸಿದ್ಧರಾಮನೇ ಉಗ್ರವೀರಶೈವನೆಂದು ಬೋಧೆಯಾಗುವುದಿಲ್ಲವೇ?

ಸಿದ್ಧರಾಮನಿಗೆ ಇಷ್ಟಲಿಂಗವಿಲ್ಲವೆಂದು ಆಕ್ಷೇಪಿಸಿದವರು ಬಸವ ಮತ್ತು ಚೆನ್ನಸವಣ್ಣನವರ ಜೊತೆಗೆ ಮೆರಿಮಿಂಡದೇವರು ಮತ್ತು ಮೋಳಿಗೆ ಮಾರಯ್ಯ ಇವರಿಬ್ಬರು ಮಾತ್ರ ಎಂಬುದು ಲಿಮಗಲೀಲಾವಿಲಾಸ ಚಾರಿತ್ರದಿಂದ ಗೊತ್ತಾಗುತ್ತದೆ. ಆ ಇಬ್ಬರು ಹೇಳಿದ ವಚನಗಳನ್ನೇ

ಶೂನ್ಯಸಂಪಾದನೆಯಲ್ಲಿ ಎತ್ತಿಹೇಳಿದೆ ಇತರ ಶರಣರು ಹತ್ತಾರುಜನ ಹೇಳಿದ ವಚನಗಳನ್ನು ಸೇರಿಸಿದೆ. ಈಗ ಮೆರಿಮಿಂಡದೇವನು ಯಾರು? ಸೌಂದರನಂಬಿಯ ಸಮಕಾಲಿಕನು, ತಿರುವಾಯೂರಿನವನು. ನಂಬಿಯಣ್ಣನು ಶರಣರಿಗೆ ಎರಗದೆ ದೇವಸ್ಥಾನದೊಳಕ್ಕೆ ಪ್ರವೇಶಿಸಿದನೆಂದು ಕೋಪಗೊಂಡವನು. ಸೌಂದರ ನಂಬಿಯೂ ತಮಿಳು ೬೩ ಪುರಾತನದಲ್ಲಿ ಪ್ರಖ್ಯಾತನಾದವನು. ಬಸವಾದಿಗಳ ಸಮಕಾಲೀನನಲ್ಲವೇ ಅಲ್ಲ. ಇನ್ನು ಮೆರಿಮಿಂಡದೇವನು ಕಲ್ಯಾಣಪಟ್ಟಣದಲ್ಲಿದ್ದು ಸಿದ್ಧರಮನು ಅಲ್ಲಿಗೆ ಬಂದಾಗ ತಾನೇ ಶುದ್ಧಶಯವನಾಗಿದ್ದುಕೊಂಡು ಸಿದ್ಧರಾಮನನ್ನು ಇಷ್ಟಲಿಂಗವಿಲ್ಲದ ಶೈವನೆಂದು ಆಕ್ಷೇಪಿಸಿದ್ದು ಹೇಗೆ?

ಸಿದ್ಧರಾಮನು ವಚನಗಳಲ್ಲಿ 'ಭಕ್ತೇಭ್ಯಸ್ತು ಚರಶ್ರೇಷ್ಠೋ ಚರೇಭ್ಯಸ್ತು ಪರಾತ್ಪರಂ। ವಸ್ತುನೋ ಭಾತಿ ದೇವೇಶಿ ತಂ ತ್ವಕ್ತ್ವಾ ಅಲ್ಲಮಪ್ರಭುವೆಂಬ ಮಕುಟಾಗಮ ವಾಕ್ಯ ವಿಚಾರಿಸಿದಲ್ಲಿಂದಚ್ಚೊತ್ತಿಹುದಯ್ಯ ಎನ್ನ ಮನಕ್ಕೆ ಕಪಿಲಸಿದ್ಧಮಲ್ಲಿಕಾರ್ಜುನಾ' ಎಂದು ಮಕುಟಾಗಮ ವಾಕ್ಯವನ್ನು ಉದಾಹರಿಸಿದೆ. ಹೀಗೆಯೇ ವಾತೂಲದಿಂದ ಉದಾಹರಿಸಿದ ಶ್ಲೋಕಗಳುಳ್ಳ ವಚನಗಳೂ ಹೇರಳವಾಗಿ ಬರುತ್ತವೆ. ಈ ಆಗಮಗಳು ಅದರಲ್ಲಿಯೂ ರೇವಣಸಿದ್ಧ ಅಲ್ಲಮ ಮೊದಲಾದವರನ್ನು ಹೆಸರಿಸಿರುವ ಆಗಮಗಳು ಅತವ ಆಗಮ ಭಾಗಗಳು ಈಚೆಗೆ ಬರೆಯಲ್ಪಟ್ಟುವೆಂದು ಪಂಡಿತರು ಅಭಿಪ್ರಾಯ ಪಡುತ್ತಾರೆ. ಈ ಆಗಮ ವಾಕ್ಯಗಳನ್ನು ಉದ್ಧರಿಸಿರುವ ಸಿದ್ಧರಾಮನ ವಚನಗಳು ಪ್ರಕ್ಷಿಪ್ತವೆಂದು ಧಾರಾಳವಾಗಿ ಹೇಳಬಹುದಾಗಿದೆ. ಹೀಗೆಯೇ ಹಲವು ವಚನಗಳು ಪ್ರಕ್ಷಿಪ್ತಗಳೆಂದು ಅವುಗಳ ಭಾಷೆಯಿಂದ ವ್ಯಕ್ತವಾಗುತ್ತವೆ. ನೂರೊಂದು ವಿರಕ್ತರಲ್ಲಿ ಮತ್ತು ಅವರ ಶಿಷ್ಯರಲ್ಲಿ, ಏಳ್ನೂರು ವಿರತರಲ್ಲಿ ಮತ್ತು ಅವರ ಶಿಷ್ಯರಲ್ಲಿ ಯಾವ ಯಾವ ಮಹಾನುಭಾವರು ಪುರಾತನರ ಹೆಸರುಗಳಲ್ಲಿ ವಚನಗಳಲ್ಲಿ ಸೃಷ್ಟಿಸಿ ಸೇರಿಸಿದರೋ ಆ ಪರಮೇಶ್ವರನಿಗೆ ಗೊತ್ತು.

ಆದುದರಿಂದ ಸಿದ್ಧರಮನು ಕಲ್ಯಾಣಕ್ಕೆ ಹೋದಾಗ ಏನಾಯಿತು? ಚಾಮರಸನು ಪ್ರಭುಲಿಂಗಲೀಲೆಯಲ್ಲಿ ಹೇಳಿರುವಂತೆ ಆಯಿತೆಂದು ನಾವು ಅಭಿಪ್ರಾಯ ಪಡುತ್ತೇವೆ. ಸಿದ್ಧರಾಮನು ಬಸವಾದಿಗಳ ಸಂದರ್ಶನ ಸಂಭಾಷಣೆಗಳ ಲಾಭವನ್ನು ಅನುಭವ ಮಂಟಪದಲ್ಲಿ ಪಡೆದು ಆ ಶರಣರ ವಿಚಾರದಲ್ಲಿ ಗೌರವಭಾವವನ್ನು ತಳೆದು ಅವರ ಸ್ತೋತ್ರಗಳನ್ನು ಮಾಡಿ ಸೊನ್ನಲಾಪುರಕ್ಕೆ ಹಿಂದಿರುಗಿದನೆಂದು ನಾವು ಭಾವಿಸುತ್ತೇವೆ. ಆ ಅನುಭವಮಂಪಟದಲ್ಲಿ ಷಟ್ಸ್ಥಲ ವಿಚಾರ, ಮೊದಲಾದವುಗಳಲ್ಲಿಯೂ ಜಂಗಮರ ಮತ್ತು ಶರಣರ ಲೋಪದೋಷಗಳನ್ನು ತೋರಿಸಿ ಖಂಡಿಸುವುದರಲ್ಲಿಯೂ ಚೆನ್ನಬಸವಣ್ಣನೇ ಮುಖ್ಯ ಪಾತ್ರವನ್ನು ವಹಿಸುತ್ತಿದ್ದನಾದುದರಿಂದ ಆತನ ಮೂರ್ತಿಸ್ವರೂಪ ಸಿದ್ಧರಾಮನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿದ್ದಿರಬೇಕು. ಆ ಲೋಕಗುರುವಾದ ಚೆನ್ನಬಸವಣ್ಣನನ್ನು ತಾನೂ ಗುರುವಾಗಿಯೇ ಕಂಡು ಹಲವು ಸ್ತೊತ್ರಗಳನ್ನು ಸಿದ್ಧರಾಮನು ಬರೆದಿದ್ದಿರಬೇಕು. ಬೇತಾಳಸ್ಥಾಪನೆ ಮಾಡಿದ ಈಚಿನ ಮಹನೀಯರು ಅದರ ತೃಪ್ತಿಗಾಗಿ ತಕ್ಕ ವಚನಗಳನ್ನು ಸೃಷ್ಟಿಸಿ ತಾವೂ ತೃಪ್ತಿಪಟ್ಟಿದ್ದಿರಬೇಕು.

ಚೆನ್ನಬಸವಣ್ಣನು ಷಟ್ಸ್ಥಲಾಚಾರ್ಯನಾಗಿ ನಿಂತಾಗ ಅವನಿಗೆ ಯೌವನೋದಯ ವಾಗಿತ್ತೆಂದು ನಾವು ಅಭಿಪ್ರಾಯಪಡುತ್ತೇವೆ. ಅವನ ಜೀವನಚರಿತ್ರೆಯಲ್ಲಿ ಪವಾಡಗಳು ಒಮದೆರಡು ಮಾತ್ರವೇ ಹೊರತು ಹೆಚ್ಚಾಗಿಲ್ಲವೆಂಬುದನ್ನು ನೋಡಿದ್ದೇವೆ. ಎರಡನೆಯದಾಗಿ, 'ಅಯ್ಯಾ ಅಯ್ಯಾ, ಎಂದು ಕರೆಯುತ್ತಲಿದ್ದೇನೆ. ಅಯ್ಯಾ, ಅಯ್ಯಾ ಎಂದು ಒರಲುತ್ತಲಿದ್ದೇನೆ. 'ಓ'

ಎನ್ನಲಾಗದೆ ಅಯ್ಯ? ಆವಾಗಳೂ ನಿಮ್ಮ ಕರೆವುತ್ತಲಿದ್ದೇನೆ' ಎಂದು ಮೊದಲಾಗಿ ಮೊರೆಯಿಡುವ ಪ್ರಪತ್ತಿಸ್ವರವೂ ಅವನಲ್ಲಿಲ್ಲ. ಒಂದೆರಡು ಬಾರಿ ಮಾತ್ರ ಯಾವ ಕಾರಣದಿಂದಲೋ ಮನಸ್ಸಿಗೆ ವಿಷಾದವಾದಾಗ,

'ಹೆಗ್ಗಣವನಿಕ್ಕಿ ನೆಲಗಟ್ಟು ಕಟ್ಟದಂತೆ ಆಯಿತೆನ್ನ ಕಾಯಗುಣ. ಅಹಂಕಾರ ಪ್ರಬೋಧೆಗೆಳೇಕಯ್ಯ? ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳನಿಕ್ಕಿ ಎನ್ನ ಮಾಡಿದಿರಿ, ಎನ್ನ ಬಾಧಿಸಲಿಂತು ಲಿಂಗಯ್ಯ ತಂದೆ? ಆಧಿವ್ಯಾಧಿಗಳೆಲ್ಲವ ಕಳೆದು ನಿರ್ವಾಣನಪ್ಪ ಪದವ ಕರುಣಿಸಯ್ಯ ಕೂಡಲಚೆನ್ನಸಂಗಮದೇವಾ'

ಎಂದು ಹೇಳಿದ್ದಾನೆ. ಚೆನ್ನಬಸವಣ್ಣನು ಏನಿದ್ದರೂ ಮಹಾಜ್ಞಾನಿ. ಆದ್ದರಿಮದಲೇ ಅಲ್ಲಮಪ್ರಭುವಂಥ ಮಹಾತ್ಮನು

'ಕಿರಿಯರಾದಡೇನು? ಹಿರಿಯರಾದಡೇನು? ಅರಿವಿಂಗೆ ಹಿರಿದು ಕಿರಿದು ಉಂಟೆ? ಆದಿ ಅನಾದಿ ಇಲ್ಲದಂದು ಅಜಾಂಡ ಬ್ರಹ್ಮಾಂಡ ಕೋಟಿಗಳುದಯ ವಾಗದಂದು ಗುಹೇಶ್ವರ ಲಿಂಗದಲ್ಲಿ ನೀನೊಬ್ಬನೇ ಮಹಾಜ್ಞಾನಿ ಎಂಬುದು ಕಾಣಬಂದಿತ್ತು ಕಾಣಾ ಚೆನ್ನಬಸವಣ್ಣ'

'....ಗುಹೇಶ್ವರ ಲಿಂಗದಲ್ಲಿ ನೀನು ಕಾಯವಿಡಿದು ಕಲ್ಪಿತವ ಹೊದ್ದೆ ಎಂಬುದು ಕಾಣಬಂದಿತ್ತು ನೋಡಾ ಚೆನ್ನಬಸವಣ್ಣ'

ಎಂದು ಹೊಗಳಿದ್ದಾನೆ. ಬಸವಣ್ಣನು ಭಕ್ತಿಯ ಭರದಲ್ಲಿ 'ಅಂಗದ ಮೇಲೆ ಲಿಂಗವುಳ್ಳದೆಲ್ಲವು ಸಂಗಮನಾಥನಲ್ಲದೆ ಮತ್ತಾರನೂ ಕಾಣೆ', ಎಂದು ಲಿಂಗಧಾರಿಗಳಾಗಿ ಬಂದ ಕಪಟಗಳನ್ನೂ ಸ್ವಾರ್ಥಸಾಧಕರನ್ನೂ ಗೌರವಿಸಿ ಸಮಾಜದ ಮತ್ತು ವೀರಶೈವದ ಕ್ಷೇಮಕ್ಕೆ ತೊಮದರೆಯನ್ನುಂಟು ಮಾಡುತ್ತಿದ್ದರೆ 'ಅಮಗದ ಮೇಲೆ ಲಿಂಗವುಲ್ಳುದೆಲ್ಲವು ಸಂಗಮನಾಥನೆಂಬ ಭಾವನೆ ಬಸವಣ್ಣಂಗಾಯಿತಲ್ಲದೆ ಎನಗೆ ಆ ಭಾವವಿಲ್ಲ ನೋಡಾ! ಲಿಂಗೈಕ್ಯ ಶರಣರ ಕಂಡರೆ ನಂಬಿ ನೆಚ್ಚಿ ಅವರ ಪಾದಕ್ಕೆರಗುವುದೆನ್ನ ಮನವು' ಎಂದು ತನ್ನ ದೃಢನಿಶ್ಚಯವನ್ನು ಹೊರಗೆಡಹಿ ಸದಾಚಾರ ಸದ್ಭಕ್ತಿಗಳಿಗೆ ಮಾತ್ರ ಆತನು ಪ್ರೋತ್ಸಾಹ ಕೊಡುತ್ತಿದ್ದನು. 'ಆರು ಬಾಗಿಲಿನೊಳಾರು ಸ್ಥಲವನುಸಿರದೊಡೆ ಮುರು ಕಣ್ಣುಳ್ಳರಂ ಬಿಡಬೇಡ' ಎಂದು ತನ್ನ ಅರಮನೆಯ ದ್ವರರಕ್ಷಕರಗಿದ್ದ ಷಟ್ಸ್ಥಲ ಬ್ರಹ್ಮಿಗಳಿಗೆ ಹೇಳಿದ ಮಾತುಗಳ ಮರ್ಮವದು. ಬರಿಯ ವೇಷ ಭಾಷೆಗಳನ್ನು ನೆಚ್ಚದೆ ಅರಿವು ಆಚಾರ ಪರಸ್ಪರವಾಗಿ ಹೊಂದಿಕೆಯಾಗಿ ಇರಬೇಕೆಂಬುದನ್ನೇ ಚೆನ್ನಬಸವಣ್ಣನು ಹೇಳುತ್ತಿದ್ದನು.

'ಭಕ್ತನು ಶಾಂತನಾಗಿರಬೇಕು. ತನ್ನ ಕುರಿತು ಬಂದ ಠಾವಿನಲ್ಲಿ ಸತ್ಯನಾಗಿರಬೇಕು. ಭೂತ ಹಿತವಚನವ ನುಡಿಯಬೇಕು. ಸಕಲ ಪ್ರಾಣಿಗಳ ತನ್ನಂತೆ ಭಾವಿಸುವುದು. ಗುರುಲಿಂಗಜಂಗಮಕ್ಕೆ ತನುಮನಧನಗಳನ್ನು ಸವೆಯಿಸಬೇಕು. ಅಪಾತ್ರ ದಾನವ ಮಾಡಲಾಗದು. ಸಕಲೇಂದ್ರಿಯಂಗಳ ತನ್ನ ವಶವಮಾಡಬೇಕು. ಇದೆ ಮೊದಲಲ್ಲಿ ಬೇಹ ಶೌಚ ನೋಡಾ. ಲಿಂಗವ ಪೂಜಿಸಿ ಪ್ರಸಾದವ ಪಡೆವಡೆ ಇದೆ ಸಾಧನ ತಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ.'

'ಪರುಷದ ಪರ್ವತದಲ್ಲಿ ಕಬ್ಬುನ ಉಂಟೇ ಅಯ್ಯ? ಅಷ್ಟ ವಿಧಾರ್ಚನೆ ಷೋಡಷೋಪಚಾರವ ಮಾಡುವಾತಂಗೆ ಅವಗುಣ ಉಂಟೇ ಅಯ್ಯ? ಇದು ಕಾರಣವಾಗಿ ಭಕ್ತಕಾಯ ಮಮಕಾಯವಯ್ಯ ಕೂಡಲ ಚೆನ್ನಸಂಗಮದೇವಾ.'

ಎಂಬುದಾಗಿ ಅಂತರಂಗ ಶುದ್ಧಿಗೂ ಆತ್ಮೋನ್ನತಿಗೂ ಸಹಕಾರಿಗಳಾದ ಲಕಷಣಗಳನ್ನು

ಒಟ್ಟಿನಲ್ಲಿ ಲಿಂಗವ ಪೂಜಿಸಿದ ಬಳಿಕ ಲಿಂಗಲಕ್ಷಣಗಳನ್ನು ಭಕ್ತರು ಪಡೆಯಬೇಕೆಂಬುದು ಚೆನ್ನಬಸವಣ್ಣನ ಬೋಧೆಯಾಗಿತ್ತು. ಹಾಗಿಲ್ಲದೆ ಇದ್ದವರನ್ನು ಖಂಡಿಸಿದ್ದಾನೆ ಮತ್ತು ಈ ರೀತಿ ಲಕ್ಷಣಗಳನ್ನು ಪಡೆದು ಭಕ್ತರೂ ಶರಣರೂ ಆಗುವುದು ಸುಲಭವಲ್ಲ ಎಂಬುದನ್ನು ತಿಳಿದುಕೊಂಡು 'ಸಾವಿರಕ್ಕೊಬ್ಬ ಸತ್ಯ, ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ' ಎಂದು ಹೇಳಿದ್ದಾನೆ. ಲೌಕಿಕದ ವಿಚಾರಗಳನ್ನು ಸಮಾನ್ಯ ಜನರು ಮಾಡುವ ಆಕ್ಷೇಪಣೆಗಳನ್ನು ಬಲ್ಲವನಾಗಿದ್ದುದರಿಂದ ಶರಣನು ಲೋಕ ವಿರೋಧಿ, ಲೋಕರಂಜನೆಗಾಗಿ ಏನನ್ನು ಹೇಳಕೂಡದು, ಮತ್ತು ಲೋಕಾಭಿಪ್ರಯಕ್ಕಾಗಿ ಹೆದರಕೂಡದು ಎಂದು ಬೋಧಿಸಿದನು. ಸಮಾಜವನ್ನು ಉದ್ಧಾರ ಮಾಡಲು ಹೊರಟವರು ಕಟುವಾಗಿಯೇ ಟೀಕಿಸಬೇಕಾಗುತ್ತದೆ; ಸಾರ್ವಜನಿಕರ ಸಂತೋಷಾನುಗ್ರಹಗಳನ್ನು ಅಲ್ಲಗಳೆಯಬೇಕಾಗುತ್ತದೆ. ಇಷ್ಟಾಗಿ ಸಾಮಾನ್ಯ ಜನರ ಅಭಿಪ್ರಾಯಗಳಾದರೂ ಎಂತವು? ಅವುಗಳಿಗೆ ಜ್ಞಾನಿಯಾದವನು ಏನು ಬೆಲೆ ಕೊಡಬೇಕು.

'ಸರ್ವಸಂಗ ಪರಿತ್ಯಾಗ ಮಾಡಿದ ಶಿವಶರಣನ ಲೋಕದ ಸಂಸಾರಿಗಳೆಂತು ಮೆಚ್ಚುವರಯ್ಯ? ಊರೊಳಗಿದ್ದರೆ ಉಪಾಧಿಕನೆಂಬುದು, ಅಡವಿಯೊಳಗಿದ್ದರೆ ಮೃಗನೆಂಬರು, ಹೊನ್ನ ಬಿಟ್ಟರೆ ದರಿದ್ರನೆಂಬರು, ಹೆಣ್ಣ ಬಿಟ್ಟರೆ ನಪುಂಸಕನೆಂಬರು, ಪುಣ್ಯವ ಬಿಟ್ಟರೆ ಪೂರ್ವಕರ್ಮಿ ಎಂಬರು, ಮಾತನಾಡದಿದ್ದರೆ ಮೂಗನೆಂಬರು, ಮಾತನಾಡಿದರೆ ಜ್ಞಾನಿಗೇಕಯ್ಯ ಮಾತೆಂಬರು, ನಿಜವನ್ನಾಡಿದರೆ ನಿಷ್ಠುರಿಯೆಂಬರು, ಸಮತೆಯ ನುಡಿದರೆ ಅಂಜುವನೆಂಬರು ಇದು ಕಾರಣ ಕೂಡಲಚೆನ್ನಸಂಗಯ್ಯ ನಮ್ಮ ಶರಣ ಲೋಕದಿಚ್ಛೆಯ ನುಡಿಯು, ಲೋಕದಿಚ್ಛೆಯ ನಡೆಯ.'

'ಲಿಂಗವುಳ್ಳುದೆಲ್ಲವು ಸಂಗಮನಾಥನೆಂಬ ಭಾವನೆಯಿಲ್ಲದ' ಯುವಕನೂ ತೇಜಸ್ವಿಯೂ ಪ್ರತಿಭಾವಂತನೂ ನಿಷ್ಠುರಿಯೂ ಲೋಕದಿಚ್ಛೆಯನ್ನು ನುಡಿಯದವನೂ ಆದ ಚೆನ್ನಬಸವಣ್ಣನ ಟೀಕೆಗಳು ಕಠಾರಿಯ ಇರಿತದಂತೆಯೂ, ಖಂಡನೆಗಳು ಖಡ್ಗದ ಹೊಯ್ಲುಗಳಂತೆಯೂ ಪರಿಣಾಮಕಾರಿಯಾಗಿವೆ. ಆದರೆ ಆ ಮಾತುಗಳಲ್ಲಿ ಅಶ್ಲೀಲವಿಲ್ಲ, ಒರಟುತನವಿಲ್ಲ, ತೀಕ್ಷ್ಣವಿಡಂಬನೆ ಮಾತ್ರ ಭೇದಿಸುತ್ತ ಹೋಗುತ್ತದೆ. ಜಂಗಮರನ್ನು ಕುರಿತು ಬರಿಯ ತಲೆ ಬೋಳಾದರೆ ಪ್ರಯೋಜನವಿಲ್ಲ ಎಂದು ಹೇಳುವ ಪ್ರಸಂಗದಲ್ಲಿ,

'ಹೊನ್ನು ಹೆಣ್ಣು ಮಣ್ಣು ಬಿಟ್ಟು ಮಂಡೆಯ ಬೋಳಿಸಿಕೊಂಡು ಬೋಳಾದ ಬಳಿಕ ನಿರಾಸಕ್ತನಾಗಿ ಶಿವಧ್ಯಾನಪರಾಯಣನಾಗಿಪ್ಪುದೀಗ ಪ್ರಥಮ ಬೋಳು. ಲಿಂಗಾಣತಿಯಿಂದ ಬಂದುದು ಕೈಕೊಂಡು ಲಿಂಗಸಾವಧಾನವಾಗಿಪ್ಪುದೀಗ ದ್ವಿತೀಯ ಬೋಳು. ಶರಣ ಸತಿ ಲಿಂಗಪತಿ ಎಂಬುಭಯವಳಿದು ಪರಮಾನಂದದಲ್ಲಿಪ್ಪುದೀಗ ತೃತೀಯ ಬೋಳಿನ ಅನುವ ಕೂಡಲಚೆನ್ನಸಂಗಯ್ಯನಲ್ಲಿ ಅಲ್ಲಯ್ಯ ಬಲ್ಲ'.

'ಕೇಶ ಕಾಷಾಯಾಭರವನಿಕ್ಕಿದೊಡೇನು? ವಿಭೂತಿ ರುದ್ರಾಕ್ಷಿ ಧರಿಸಿದೊಡೇನು? ಸಕಾರದಲ್ಲಿ ಸನ್ಮತನಲ್ಲ, ನಿರಕಾರದಲ್ಲಿ ನಿರುತನಲ್ಲ, ಪಾರಮಾರ್ಥದಲ್ಲಿ ಪರಿಣಾಮಿಯಲ್ಲ ಇದು ಕಾರಣವಾಗಿ ಕೂಡಲಸಂಗಮದೇವಾ ತುರುಬಾಗಲಿ ಜಡೆಯಾಗಲಿ ಬೋಳಾಗಲಿ ಅರಿವು ಆಚಾರವುಳ್ಳಡೆ ಜಂಗಮ.'

ಮೇಲಿನ ವಚನಗಳಲ್ಲಿ ಭಾವ ಗಾಂಭೀರ್ಯವೊಂದೇ ಅಲ್ಲ ಶೈಲಿಯ ಚೆಲುವು ಪದಸರಣಿ ಹೇಗಿದೆ ನೋಡಿ. ಅನುಭವಮಂಟಪದಲ್ಲಿ ಶರಣರು ಸೇರಿದಾಗ 'ಮನ ಮನ

ಮಥಿಸಿಸಿ, ಅನುಭಾವ' ಹುಟ್ಟುತ್ತಿತ್ತಷ್ಟೆ. ಗ್ರಂಥಸ್ಥವಾದ ಪಾರಿಭಾಷಿಕ ಪದಗಳನ್ನೂ ಕೆಲವು ವಾಕ್ಯಗಳನ್ನೂ ಬಾಯಲ್ಲಿ ಹೇಳುತ್ತ ಶುಷ್ಕವ್ಯಾಖ್ಯಾನದಿಂದ ತಮ್ಮ ಪಾಂಡಿತ್ಯವನ್ನು ಮೆರೆಯುತ್ತಿದ್ದವರಿಗೆ,

'ತಾನು ಬೋಳು ಕಪ್ಪರವೆಂತೆಂಬರು. ತಾಳಾವುದು, ಬೋಳಾವುದು, ಕಪ್ಪರವಾವುದೆಂದರಿಯರು. ಕಾಯದ ಕಳವಳದ ಗುಣವ ತಾಳಬಲ್ಲಡೆ ತಾಳು. ಸಂಸಾರ ವಿಷಯವ ಬೋಳಿಸಬಲ್ಲಡೆ ಬೋಳು. ಪರದಲ್ಲಿ ಪರಿಣಾಮಿಸಬಲ್ಲಡೆ ಕಪ್ಪರ ಇಂತಿಲ್ಲದಿದ್ದೊಡೆ ನಮ್ಮ ಕೂಡಲಚೆನ್ನಸಂಗಯ್ಯನಲ್ಲಿ ಡೊಂಬರೆ ಬೋಳು;

'ದೇಹ ನಿರ್ದೇಹವೆನುತಿಪ್ಪರಯ್ಯ ದೇಹ ನಿರ್ದೇಹವಪ್ಪ ಮರ್ಮವನರಿಯರು. ಅಹಂ ಎಂಬುದೇ ದೇಹ, ದಾಸೋಹಂ ಎಂಬುದೇ ನಿರ್ದೇಹ ನೋಡಾ... ಅಹಂಭಾವವಳಿದವರ ಕೂಡಲಚೆನ್ನಸಂಗಯ್ಯನಲ್ಲಿ ನಿರ್ದೇಹಿಗಳೆಂಬೆ.'

'ಪದಾರ್ಥ ಪದಾರ್ಥವೆಂದೆಂಬಿರಿ. ಪದವಾವುದು ಅರ್ಥವಾವುದು ಎಮದರಿಯರಿ. ಪದವೇ ಲಿಂಗ ಅರ್ಥವೇ ಭಕ್ತಿ. ಇದನರಿದು ಪದಾರ್ಥವ ತಂದು ಅರ್ಪಿತವ ಮಾಡಬಲ್ಲಡೆ ಕೂಡಿಪ್ಪನಯ್ಯ ನಮ್ಮ ಕೂಡಲ ಚೆನ್ನಸಂಗಮದೇವ' ಎಂದು ತತ್ತ್ವದ ತಿರುಳನ್ನು ತಿಳಿಸುತ್ತಿದ್ದನು. ಚೆನ್ನಬಸವಣ್ಣನ ಬುದ್ಧಿಶಕ್ತಿ, ವಾದ ಸಾಮರ್ಥ್ಯ ಎಂಥವು ಎಂಬುದನ್ನು ನೋಡಬಹುದಾಗಿದೆ 'ಶೀಲ ಶೀಲ' ಎಂದು ಒದ್ದಾಡುವ ಕರ್ಮಠರಿಗೆ ಆ ಶೂಲಗಳು ಪಾರಮಾರ್ಥವನ್ನು ದೊರಕಿಸುವುದಿಲ್ಲವೆಂದೂ, ಶೀಲಗಳು ಅಂತರಂಗಶುದ್ಧಿಗೂ ಸತ್ಕ್ರಿಯಾಚರಣೆಗೂ ಸಾಧಕಗಳಾಗಿರ ಬೇಕಲ್ಲದೆ ಸುಮ್ಮನೆ ಕೆಲವು ಪದಾರ್ಥಗಳ ಬಗ್ಗೆ ನೇಮ ನಿಷ್ಠೆಗಳನ್ನು ತೋರಿಸಿದರೆ ಪ್ರಯೋಜನವಿಲ್ಲವೆಂದೂ ಚೆನ್ನಬಸವಣ್ಣನು ಹೇಳಿದ್ದಾನೆ.

'ಶೀಲ ಶೀಲ ಎಂದು ಗರ್ವಿಸಿ ನುಡಿವುತಿಪ್ಪಿರಿ. ಶೀಲವಾವುದೆಂದರಿಯರಿ ಕೇಳಿರಣ್ಣಾ. ಇದ್ದುದ ವಂಚನೆಯ ಮಾಡದಿಪ್ಪುದೇ ಶೀಲ. ಇಲ್ಲದುದಕ್ಕೆ ಕದನ ಮಾಡದಿಪ್ಪುದೇ ಶೀಲ. ಪರಧನ ಪರಸ್ತ್ರೀಯರ ಮುಟ್ಟದಿಪ್ಪುದೇ ಶೀಲ. ಪರದೈವವರ ಸಮಯಕ್ಕೆ ಅಳುಪದಿಪ್ಪುದೇ ಶೀಲ. ಗುರುನಿಂದೆ ಹರನಿಂದೆ ಚರನಿಂದೆ ಕೇಳದಿಪ್ಪುದೇ ಶೀಲ. ನಮ್ಮ ಕುಡಲ ಚೆನ್ನ ಸಂಗನ ಶರಣರ ಬರವಿಂಗೆ ಮೆಯ್ಯಾಂತುದೇ ಅಚ್ಚಶೀಲ.'

'ಶೀಲ ಶೀಲ ಎಂದು ಗರ್ವಿಸಿ ನುಡಿವುತಿಪ್ಪಿರಿ. ಶಿಲವಾವುದೆಂದರಿಯರಿ ಕೇಳಿರಣ್ಣಾ. ಇದ್ದುದ ವಮಚನೆಯ ಮಾಡದಿಪ್ಪುದೇ ಶೀಲ. ಇಲ್ಲದುದಕ್ಕೆ ಕದನ ಮಾಡದಿಪ್ಪುದೇ ಶೀಲ. ಪರಧನ ಪರಸ್ತ್ರೀಯರ ಮುಟ್ಟದಿಪ್ಪುದೇ ಶೀಲ. ಪರದೈವವರ ಸಮಯಕ್ಕೆ ಅಳುಪದಿಪ್ಪುದೇ ಶೀಲ. ಗುರುನಿಂದೆ ಹರನಿಂದೆ ಚರನಿಂದೆ ಕೇಳದಿಪ್ಪುದೇ ಶೀಲ. ನಮ್ಮ ಕೂಡಲಚೆನ್ನ ಸಂಗನ ಶರಣರ ಬರವಿಂಗೆ ಮೆಯ್ಯಾಂತುದೇ ಅಚ್ಚಶೀಲ.'

'ಶೀಲವಂತನಾದೊಡೆ ಪ್ರಪಂಚನಾಸ್ತಿಯಾಗಿರಬೇಕು. ಸೀಮೆಯಾದೊಡೆ ಪಂಚೇಂದ್ರಿಯಂಗಳು ನಾಸ್ತಿಯಾಗಿರಬೇಕು. ತನ್ನ ಕರ್ತುವಿನಲ್ಲಿ ಸಕಲ ಸಂಶಯ ನಾಸ್ತಿಯಾದ ಶೀಲಕ್ಕೆ ಭವಂನಾಸ್ತಿ, ಭ್ರಮೆನಾಸ್ತಿ. ಇವು ನಾಸ್ತಿಯಾದಲ್ಲದೆ ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ ಶೀಲವಂತನೆನಿಸಬಾರದು, ಈ ವಂಚನೆಯ ಢಂಬಕ ಅಪಸ್ಮಾರಿಗಳಿಗೆಂತಯ್ಯ.'

ಎಂಬುದಾಗಿ ಶೀಲವಂತರೆಂಬ ಸೋಗಿನವರಿಗೆ ವಿವೇಕ ಹೇಳಿದ್ದಾನೆ. ಚೆನ್ನಬಸವಣ್ಣನು ಮುಖ್ಯವಾಗಿ ಷಟ್ಸ್ಥಲಬೋಧೆಯನ್ನು ಮಾಡಿದವನು. ಆದರೆ ಆತನ ವಚನಗಳಲ್ಲಿ ಪ್ರಸಾದಿಸ್ಥಲದ

ವಚನಗಳೇ ಹೆಚ್ಚಾಗಿವೆ. ಸಾಮಾನ್ಯವಾಗಿ ಬಸವಣ್ಣ ಭಕ್ತ, ಚೆನ್ನಬಸವಣ್ಣ ಪ್ರಸಾದಿ, ಅಲ್ಲಮಪ್ರಭು ಶರಣ ಎಂದು ಹೇಳುವುದುಂಟು. ಷಟ್ಸ್ಥಲ ಬೋಧೆಯನ್ನು ಮಾಡಿದುದಕ್ಕಿಂತ ಹೆಚ್ಚಾಗಿ ಷಟ್ಸ್ಥಲ ತತ್ತ್ವಗಳನ್ನು ಸಮಾಜ ರಚನೆಗೆ ಸಮನ್ವಯಿಸಿಕೊಂಡು ಪಾರಮಾರ್ಥದಲ್ಲಿ ಸರ್ವ ಸಮಾನತೆಯಿರುವಂತೆ ಲೌಕಿಕದಲ್ಲಿಯೂ ಸರ್ವಸಮಾನತೆ ಇರಬೇಕೆಂದು ಒತ್ತಿ ಹೇಳಿ ಚೆನ್ನಬಸವನು ತನ್ನ ಪ್ರಭಾವವನ್ನು ಬೀರಿದ್ದಾನೆ. ಲಿಂಗಧಾರಿಗಳೆಲ್ಲ ಒಂದೇ ಜಾತಿ; ಅವರಲ್ಲಿ ಹೆಚ್ಚು ಕಡಮೆಗಳಿಲ್ಲ, ವೃತ್ತಿಗಳನ್ನನುಸರಿಸಿ ಜಾತಿಭೇದಗಳಿಲ್ಲ; ಪರಸ್ಪರ ಅನ್ನೋದಕ ವ್ಯವಹಾರಗಳನ್ನು ವಿವಾಹ ಸಂಬಂಧಗಳನ್ನು ಮಾಡಬೇಕು ಎಂಬುದನ್ನು ತಿಳಿಯಹೇಳಿದನು.

'ದಾಸೀಪುತ್ರನಾಗಲಿ ವೇಶ್ಯಾಪುತ್ರನಾಗಲಿ ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ, ಪೂಜಿಸಿ, ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ. ಹೀಗಲ್ಲದೆ ಉದಾಸೀನವ ಮಾಡಿಬಿಡುವವರಿಗೆ ಪಂಚಮಹಾಪಾತಕ ನರಕ ಕಾಣಾ ಕೂಡಲಸಂಗಮದೇವಾ' 'ಭವಿಯಲ್ಲಿ ಭವಿಯ ಹಸ್ತದಲ್ಲಿ ಭವಿಪಾಕವಲ್ಲದೆ, ಭಕ್ತರ ಮನೆಯಲ್ಲಿ ಭಕ್ತರ ಹಸ್ತದಲ್ಲಿ ಭವಿಪಾಕ ಉಂಟೇ? ಇಲ್ಲವಯ್ಯಾ ಸುಲಿವರ ಯುಕ್ತಿ ಎಂಥಾದ್ದೋ? ಭಕ್ತಿ ಎಂಥಾದ್ದೋ? ಮುಕ್ತಿ ಎಂಥಾದ್ದೋ? ಆ ಪರಮಸದ್ಭಕ್ತನ ಹಸ್ತದಿಂದೆ ಬಂದ ಸಕಲ ಪದಾರ್ಥಗಳ ಲಿಂಗ ಪ್ರಸನ್ನತ್ವದಿಂದೆ ಬಂದುದಾಗಿ ಆ ಪದಾರ್ಥವನ್ನು ಶುದ್ಧತೆಯಿಂದ ಲಿಂಗಕ್ಕೆ ಕೊಟ್ಟುಕೊಂಬುದೇ ದೇವಭಕ್ತರ ನಡೆ. ಅವರೊಕ್ಕುದು ಮಹಾ ಪ್ರಸಾದವಯ್ಯಾ ಕೂಡಲ ಚೆನ್ನಸಂಗಮದೇವಾ.'

ಕೆಲವರು ಸಹಪಂಕ್ತಿ ಭೋಜನಾದಿಗಳಿಗೆ ಒಂದೊಂದು ವೇಳೆ ಒಪ್ಪಿಕೊಂಡರೂ ಹೆಣ್ಣು ಕೊಟ್ಟು ತರುವುದಕ್ಕೆ ಒಪ್ಪುತ್ತಿರಲಿಲ್ಲವೆಂದು ತೋರುತ್ತದೆ. ಅದನ್ನು ತಮ್ಮ ಕುಲಾಚಾರವನ್ನನ್ನುಸರಿಸಿ ಮಾಡಬೇಕೆಂದು ವಾದಿಸುತ್ತಿದ್ದರು. ಇಂಥವರಿಗೆಲ್ಲ,

'ಉಂಬುವುದು ಉಡುವುದು ಶಿವಾಚಾರ, ಕೊಂಬುದು ಕೊಡುವುದು ಕುಲಾಚಾರ ಎಂಬ ಅನಾಚಾರಿಯ ಮಾತ ಕೇಳಲಾಗದು. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರ ಒಂದೇ ಎಂದು ಕೊಟ್ಟು ಕೊಂಬುದು ಸದಾಚಾರ, ಉಳಿದವೆಲ್ಲ ಅನಾಚಾರ ಎಂದು ಖಂಡಿಸಿ ಬುದ್ಧಿ ಹೇಳಿದ್ದಾನೆ. ಆದರೂ ಇಂತಹ ವಿವಾಹ ಸಂಬಂಧಗಳು ಆಗಿನ ಕಾಲದಲ್ಲಾಗಲಿ ಈಚೆಗಾಗಲಿ ಹೆಚ್ಚಾಗಿ ನಡೆದಂತೆ ಕಂಡುಬರುವುದಿಲ್ಲ. ಚೆನ್ನಬಸವಣ್ಣನ ಕಾಲದಲ್ಲಿ ಮಧುವಯ್ಯನೆಂಬ ಪೂರ್ವಜಾತಿಯಲ್ಲಿ ಬ್ರಾಹ್ಮಣವಾಗಿದ್ದವನ ಮಗಳನ್ನು ಹರಳಯ್ಯನೆಂಬ ಸರ್ವಜಾತಿಯ ಹೊಲೆಯನ ಮಗನಿಗೆ ಕೊಡಿಸಿ–ಅವರು ಲಿಂಗಧಾರಿಗಳಾದ್ದರಿಮದ ಸರ್ವಸಮಾನತೆಯುಳ್ಳ ಶಿವಜಾತಿಯವರೆಂದು ಮದುವೆಯನ್ನು ಮಾಡಿಸಿದರು. ಹೀಗೆ ವರ್ಣಸಂಕರವನ್ನುಂಟುಮಾಡಿ ಸಮಾಜದಲ್ಲಿ ಗೊಮದಲವೆಬ್ಬಿಸಿದರೆಂಬ ಕಾರಣದಿಂದ ಬಿಜ್ಜಳನು ಕೋಪಗೊಮಡು ಆ ಹರಳಯ್ಯ ಮತ್ತು ಮಧುವಯ್ಯರನ್ನು ಕ್ರೂರವಾಗಿ ದಂಡಿಸಿದರು. ಶರಣರು ಕೋಪಗೊಂಡು ಬಿಜ್ಜಳನನ್ನು ಸಂಹಾರಮಾಡಿಬಿಟ್ಟರು.

ಚೆನ್ನಬಸವನು ಗುರುಲಿಂಗಜಂಗಮಾದಿಗಳ ಸೇವೆಯನ್ನು ಮಾಡಬೇಕೆಂದು ಹೇಳಿರುವುದು ಜೊತೆಗೆ ಕಾಯಕದಿಂದ, ಸ್ವಯಾರ್ಜಿತವಾದ ಹಣದಿಂದ, ಆ ಸೇವೆಯನ್ನು ಮಾಡಿದರೆ ಮಾತ್ರ ಸಾರ್ಥಕ ಎಂದು ಒತ್ತಿಹೇಳಿದ್ದಾನೆ. ಹಿರಿಯರು ಗಳಿಸಿಟ್ಟಿರುವ ಆಸ್ತಿಯಕಂದ ಜೀವನಮಾಡುವವರೂ ಕಾಯಕವಿರಹಿತನಾದವರೂ ನರಕಕ್ಕೆ ಹೋಗುತ್ತಾರೆ ಎಂಬ ತತ್ತ್ವವನ್ನು ಆತನು ಪ್ರತಿಪಾದಿಸಿದ್ದಾನೆ. ಸಮಾಜದಲ್ಲಿ ಪ್ರತಿಯೊಬ್ಬನೂ 'ಉತ್ಪಾದಕನಾಗಿದ್ದು ಹಣವನ್ನು

ಸಂಪಾದಿಸಿ ದೇಶದ ಸಂಪತ್ತನ್ನು ಹೆಚ್ಚಿಸಬೇಕೆಂಬ ದೊಡ್ಡ ಆರ್ಥಿಕ ತತ್ತ್ವ ಚೆನ್ನಬಸವಣ್ಣನ ವಚನಗಳಲ್ಲಿ ಕಂಡುಬರುತ್ತದೆ.

'ತನುಮನ ಬಳಲದೆ ಉದ್ದಂಡವೃತ್ತಿಯಲ್ಲಿ ಧನವ ಗಳಿಸಿ ಗುರುಲಿಂಗ ಜಂಗಮಕ್ಕೆ ಮೆಚ್ಚಿಸಿ ದಾಸೋಹಮಾಡಿ ಭಕ್ತರಾದೆವೆಂಬವರ ಮುಖವ ತೋರದಿರಯ್ಯ ಎನಗೆ. ಅವಪರಧನಚೋರಕ. ಅವ ಪಾಪಿ ಕೋಪಿ ಪರಿಭ್ರಷ್ಟ. ಅವನ ಕಯಕವ ವಿಚಾರಿಸದೆ ಉಪದೇಶವ ಕೊಟ್ಟ ಗುರುವಿಂಗೆ ರವರವನರಕ. ಅವನ ಆಯತವ ವಿಚಾರಿಸದೆ ಅವನ ಮನೆಯ ಹೊಕ್ಕು ಲಿಂಗಾರ್ಚನೆಯ ಮಾಡುವ ಜಮಗಮಕೆ ಏಳನೆಯ ಪಾತಕ. ಇಂತಪ್ಪ ಗುರುಶಿಷ್ಯ ಜಂಗಮದ ಬಾಳುವೆ ಹುಲಿ ಕಪಿಲೆಯ ತಿಂದು ಮಿಕ್ಕದ ನರಿ ತಿಂದಂತಾಯಿತ್ತು ಕಾಣಾ ಕೂಡಲ ಚೆನ್ನಸಂಗಮದೇವ.'

'ಕೃಷಿ ಕೃತ್ಯ ಆವ ಕಾಯಕದಿಂದದೊಡೇನು? ತನುಮನ ಬಳಲಿಸಿ ಗಳಿಸಿ ತಿಂದು ಗುರುಲಿಮಗಜಂಗಮಕ್ಕೆ ಮೆಚ್ಚಿಸಿ ದಾಸೋಹವ ಮಾಡುವ ಪರಮ ಸದ್ಭಕ್ತನ ಪಾದವ ತೋರಯ್ಯಾ ಎನಗೆ. ಅದೆಂತೆಂದೊಡೆ ಆತನ ತನು ಶುದ್ಧ, ಆತನ ಮನ ಸುದ್ಧ, ಆತನ ನಡೆ ಶುದ್ಧ, ನುಡಿ ಎಲ್ಲ ಪಾವನವು. ಆತಂಗೆ ಉಪದೇಶವ ಮಾಡಿದಾತನೆ ಪರಮ ಸದ್ಗುರು. ಅಂತಪ್ಪ ಸದ್ಭಕ್ತರ ಮನೆಯ ಕೈಲಾಸವೆಂದು ಹೊಕ್ಕು ಲಿಂಗಾರ್ಚನೆಯ ಮಾಡುವ ಜಂಗಮವೇ ಜಗತ್ಪಾವನ. ಇಂತಪ್ಪ ಗುರುಶಿಷ್ಯ ಜಂಗಮಕ್ಕೆ ನಾನು ನೆರೆನಂಬಿ ನಮೋ ನಮೋ ಎಂಬೆನಯ್ಯ ಕೂಡಲ ಚೆನ್ನಸಂಗಮದೇವ.'

ಭಕ್ತಿಭಂಡಾರಿಯಾದ ಬಸವಣ್ಣನು 'ದೇವ ಸಹಿತ ಭಕ್ತ ಮನೆಗೆ ಬಂದರೆ, ಕಾಯಕ ವಾವುದೆಂದು ಬೆಸಗೊಂಡೆನಾದರೆ ನಿಮ್ಮಾಣೆ, ನಿಮ್ಮ ಪುರಾತನರಾಣೆ' ಎಂದು ಒಂದೊಂದು ಬಾರಿ ಕಾರಣಾಂತರಗಳಿಂದ ಹೇಳುತ್ತಿದ್ದನು. ಆದರೆ ಚೆನ್ನಬಸವಣ್ಣನು ಆ ವಿಚಾರದಲ್ಲಿ ಖಮಡಿತವಾದಿಯಾಗಿದ್ದನು.

❐

---

* ಚೆನ್ನಬಸವ ಪುರಾಣ ಸಂಗ್ರಹ, ಸಂ. ಎಂ.ಆರ್. ಶ್ರೀನಿವಾಸಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು – ೧೮, ೧೯೭೬.

ವ್ಯಕ್ತಿತ್ವ-ಪ್ರಭಾವಮುದ್ರೆ

●

ಡಾ. ಆರ್.ಸಿ. ಹಿರೇಮಠ

"ಕಂಗಳ ನೋಟ, ಹೃದಯದ ಜ್ಞಾನ; ಮನದೊಳಗೆ
ಮಾತಾಡುತ್ತಿರ್ದೆನಯ್ಯಾ.
ಜೇನಮಳೆಗಳು ಕಱೆದವು; ಅಮೃತದ ಕಳೆಗಳು ಸುರಿದವು.
ಕೂಡಲಚನ್ನಸಂಗನೆಂಬ ರಸಸಾಗರದೊಳಗೋಲಾಡುತ್ತಿರ್ದೆನಯ್ಯಾ"[೧]

"ಸ್ಥಲವೆಂದೆನ್ನ, ನಿಃಸ್ಥಲವೆಂದೆನ್ನೆ; ನಿರ್ಣಯವೆನಗಾದ ಬಳಿಕ
ಏನೆಂದಱಿಯೆನಯ್ಯಾ"
ಇದುಕಾರಣ, ಕೂಡಲ ಚನ್ನಸಂಗಯ್ಯಾ ಲಿಂಗೈಕ್ಯವೆಂದೆನ್ನೆ."[೨]

ಚನ್ನಬಸವಣ್ಣನವರು ಸ್ವಲೀಲಾನಂದವಿಲಾಸದಲ್ಲಿದ್ದ ಭಾವಗಳನ್ನು ಇಲ್ಲಿ ವಚನಿಸಿರುವರು. ಇದು ಅವರು ಮುಟ್ಟಿದ ಇತ್ತರದ ಒಂದು ಹಂತ. ಸುಜ್ಞಾನವೇ ಮಯವೆತ್ತು ಬಂದಂತಿದ್ದ ಚನ್ನಬಸವಣ್ಣನವರು ಇಂತಹ ಸಹಜಸ್ಥಿತಿಯನ್ನು ಪಡೆಯಬೇಕಾದರೆ ಸಾಧನಮಾರ್ಗ ನಿರಂತರ ನಡೆದಿದೆ. ಷಟ್‌ಸ್ಥಲಸಾಧನೆಗೆ ಅಂತರಂಗನಿರೀಕ್ಷಣೆ, ಆತ್ಮಾನುಸಂಧಾನ, ಭಕ್ತಿಯ ಉದಯ ಇವು ಕಾರಣ ವಾಗುತ್ತವೆ. ಪ್ರಸಾದಕಾಯರಾಗಿ ಜನಿಸಿದ ಚನ್ನಬಸವಣ್ಣನವರೂ ಅಂತರಂಗ ನಿರೀಕ್ಷಣೆಯನ್ನು ಮಾಡಿಕೊಳ್ಳದೆ ಹೋಗಿಲ್ಲ.

"ಆನು ಶುದ್ಧಧವಳಿತನು; ಎನಗೆ ಅನಾದಿ ಬಂದು ಹೊದ್ದಿದ
ಕಾರಣವೇನಯ್ಯಾ?
ಜಗವ ಮೊಗೆಯಲು ಬಂದೆನೇಕಯ್ಯಾ?
ಗಿಡುವ ಹಱಿಯಲು ಬಂದೆನೇಕಯ್ಯಾ?
ಎಲ್ಲರ ನಡುವೆ ಕುಳ್ಳಿರ್ದು, ಗೀತವ ಪಾಡಬಂದೆನೇಕಯ್ಯಾ?
ಚನ್ನಬಸವಣ್ಣನೆಂಬೆರಡು ಶಬ್ದವೇಕಯ್ಯಾ, ಕೂಡಲ ಚನ್ನಸಂಗಮದೇವಯ್ಯಾ?"

ಶರಣರ ಮಧ್ಯದಲ್ಲಿ ಕುರಿತು ಗೀತವ ಪಾಡುತ್ತಿರ್ದ ಚನ್ನಬಸವಣ್ಣನವರೇ ಸ್ವತಃ ತಮ್ಮ ಇರವನ್ನು, ನಿಲವನ್ನು ಪರೀಕ್ಷಿಸಿಕೊಂಡಿರುವರು. ಆತ್ಮಜ್ಞನವೇನೋ ಆಗಿದೆ. ಅದು ಪೂರ್ವಸುಕೃತದ ಫಲವೋ, ಶರಣಸಂಗದ ಒಲವೋ ಆಗಿದ್ದಿತು. ಆದರೆ, ಶುದ್ಧ ಧವಳಿತನೆಂಬ ಆತ್ಮಜ್ಞನಮಾತ್ರದಿಮದಲೇ ಮೋಕ್ಷ ಸಾಧ್ಯವಾಗು ವಂತಿಲ್ಲ. ಆ ಜ್ಞಾನ, ಕ್ರಿಯೆಯಲ್ಲಿ ಅಳವಟ್ಟು, ಮೇಲೆ ನಿರ್ದೇಶಿಸಿದಂತೆ ಕ್ರಿಯಾಜ್ಞಾನಸಾಮರಸ್ಯವಾಗಬೇಕು. ಹಾಗೆ ಆಗುವವರೆಗೆ ಲೋಕದ

ಬಂಧ ಉಂಟು. ಚನ್ನಬಸವಣ್ಣನವರಂಥ ದಿವ್ಯಜ್ಞಾನಿಗಳು 'ಜಗವ ಮೊಗೆಯಲು ಬಂದೆನೇಕಯ್ಯಾ?' ಎಂದು ಕೇಳಿದುದು ಮಾರ್ಮಿಕವಾಗಿದೆ. ಬಹುಜನಗಳಿಗೆ ಸಂಸಾರಬಂಧ ಬಹು ಬಿಗಿಯಾಗಿದ್ದರೆ, ಮಹಾಜ್ಞಾನಿಯಾಗಿದ್ದವರಿಗೆ ಅತಿ ಸೂಕ್ಷ್ಮವಾದ ಲೇಪನವಿದ್ಧಂತೆ ತೋರುತ್ತದೆ. ಅಂತೆಯೇ ಚನ್ನಬಸವಣ್ಣನವರಿಗೆ ತಾವು ಈ ಲೋಕವೃಕ್ಷದ ಫಲಗಳನ್ನು ಹರಿದು ತಿಂದು, ತಿರಿದು ಉಂಡು ಲೋಕವನ್ನೇ ನುಂಗಲು ಬಂದಿರುವೆನೆಂಬ ಭಾವನೆ ಯುಂಟಾಗುತ್ತದೆ. ಮಹಾನುಭಾವರಿಗೆ ಒಳ ಹೊರಗೆಂಬುದಿಲ್ಲ. ಸಾಮಾನ್ಯರಾದರೋ ಡಾಂಭಿಕವೃತ್ತಿಯಲ್ಲಿ ಇರಿಯದೆ ಮೆರೆವ ವೀರನಂತೆ ಹಿರಿಯತನವನ್ನು ಪ್ರಕಟಪಡಿಸಬಹುದು. ಆದರೆ, ಮಹಾತ್ಮರಾದವರು ತಮ್ಮಂತರಂಗದ ಎಂತಹ ಮುಚ್ಚುಮರೆಯ ಮಾತಾದರೂ ಅದನ್ನು ಬಿಚ್ಚಿ ಹೇಳಿ, ಲೋಕದ ಮುಮದಿಡುವರು; ತಪ್ಪನ್ನು ಒಪ್ಪಿಕೊಳ್ಳುವರು; ಅನುತಾಪಪಡುವರು. ಮೋಕ್ಷಕ್ಕೆ ಇದೇ ಪ್ರಥಮ ಸೋಪಾನ. ಹನ್ನೆರಡನೆಯ ಶತಮಾನದ ಕಲ್ಯಾಣದ ಶರಣವೃದವನ್ನೆಲ್ಲ ತಮ್ಮ ಅದ್ಭುತವಾದ ಸುಜ್ಞಾನಪ್ರಭೆಯಿಂದ ಹುಟ್ಟುತ್ತಲೇ ಕಣ್ಣು ಕುಕ್ಕಿಸಿದ ಚನ್ನಬಸವಣ್ಣನವರು ಹೀಗೆ ಅಂತರಂಗವೀಕ್ಷಣೆ ಮಾಡುತ್ತಿರುವುದು ಗಮನಾರ್ಹವಾಗಿದೆ.

ಭಕ್ತಿಯಂಕುರದ ಪ್ರಥಮದರ್ಶನವಿದು. ಪಿಂಡಸ್ಥಲ ಪಿಂಡಜ್ಞನಸ್ತಲಗಳಲ್ಲಿ ಇಂತಹ ಅವಸ್ಥೆ ಕಂಡುಬರುತ್ತದೆ. ಶರಣನೋ ಆಗ ಸಂಸಾರಬಂಧವನ್ನು ತ್ಯಜಿಸಿ, ಸದ್ಭಕ್ತಿಯನ್ನು ಕೋರುವನು.

> **"ಅಂಗದ ಮೇಲೆ ಲಿಂಗವುಳ್ಳುದೆಲ್ಲಾ ಸಂಗಮನಾಥನೆಂಬ ಭಾವ**
> **ಬಸವಣ್ಣಂಗಾಯಿತ್ತಲ್ಲದೆ ಎನಗೆ ಆ ಭಾವವಿಲ್ಲ."**
> **"ನಿಮ್ಮಡಿಯ ಭಕ್ತಿಯನೊಂದನೇ ಕರುಣಿಸಿ ಕಾಪಾಡಯ್ಯಾ"**[೨]

ಎಂದು ಕೂಡಲ ಚನ್ನಸಂಗಯ್ಯನಲ್ಲಿ ಮೊರೆಹೋಗುವರು. ಈ ಭಕ್ತಿ ಸಂಪುಟವನ್ನು ಮುಚ್ಚಿರುವ ಅಜ್ಞಾನ ಹೊರಗಿಲ್ಲವೆಂಬ ಅರಿವೂ ಚನ್ನಬಸವಣ್ಣನವರಿಗೆ ಆಗಿದೆ.

> **"ಎನಗೆ ಹಗೆಯು ನೋಡಯ್ಯಾ, ಎನಗೆ ನಾನೆ ಕೆಳೆಯು ನೋಡಯ್ಯಾ!**
> **ಅನ್ಯರು ಹಗೆಯಲ್ಲ; ಕೆಳೆಯಲ್ಲ. ಬಾಗಿದ ತಲೆ, ಮುಗಿದ ಕೈಯಾಗಿರಿಸು"**[೩]

ಎಂದು ದೇವ ದೇವನನ್ನು ಪ್ರಾರ್ಥಿಸುವರು. ತನಗೆ ತಾನೇ ಹಗೆ. ತನ್ನ ನಿಜ ಸ್ವರೂಪವನು ತಾನೇ ಮರೆತುದರಿಂದ, ತನಗೆ ತಾನೇ ಕೆಲೆ, ಆ ಮರವೆಯ ಪರೆಯನ್ನು ತಾನೇ ಹರಿಬೇಕಾದುದರಿಂದ, ಇದಕ್ಕೆ ಸದ್ಭಕ್ತಿ ಬೇಕು. ಅದಕ್ಕೂ ಮೊದಲು, ಅದನ್ನು ಹರಿದೊಗೆಯಬೇಕೆಂಬ ಸುಜ್ಞಾನ, ಸದ್ಭಕ್ತನ ಹೃದಯದಲ್ಲಿ ಅಂಕುರಿಸಬೇಕು. ಚನ್ನಬಸವಣ್ಣನವರ ಹೃದಯದಲ್ಲಿ ಅಂಕುರಿಸಿದ ಆ ಸುಜ್ಞಾನವೇ ಹೀಗೆ ಪ್ರಾಥಿಸುತ್ತಿರುವುದು. ಅದು ತಾನೇ ಬಲಗೊಂಡು, ಕರಿಗೊಂಡು ಸ್ವಸ್ವರೂಪ ಜ್ಞಾನವನ್ನು ಪಡೆಯಬೇಕಾಗಿರುವುದಾದರೂ ಅಲ್ಲಿ ಶ್ರೀಗುರುವಿನ ಕರುಣೆ ಅವಶ್ಯವೆಂದು ತೋರುತ್ತದೆ. ಅಂತೆಯೇ ಚನ್ನಬಸವಣ್ಣನವರು 'ಬಸವಣ್ಣನ ಶ್ರೀಪಾದವ ತೋಜಿ ಬದುಕಿಸಯ್ಯಾ'[೪] ಎಂದು ಪ್ರಾರ್ಥಿಸಿರುವರು. ಬಸವಣ್ಣನವರ ಸೋದರಳಿಯನಾಗಿ, ಅವರ ಮಹಾಮನೆಯಲ್ಲಿಯೇ ಜನಿಸಿ, ನಿತ್ಯವೂ ಅವರ ಸನ್ನಿಧಿಯಲ್ಲಿಯೇ ಇರುವ ಚನ್ನಬಸವಣ್ಣನವರು ಹೀಗೆ ಪ್ರಾರ್ಥಿಸುವಲ್ಲಿ ಅವರ ಹೃದಯದ ಆರ್ತಧ್ವನಿ ತೀಕ್ಷ್ಣವಾಗಿದೆಯೆಂದು ವ್ಯಕ್ತವಾಗುತ್ತದೆ. ಶರಣರು ಕಂಡವರಿಗೆ ಕಂಡಮತೆ ದೀಕ್ಷೆಯನ್ನು ಕೊಡುತ್ತಿರಲಿಲ್ಲೆಂಬ ಅಂಶವೂ ಇಲ್ಲಿ ಸ್ಮರಣೀಯವಾಗಿದೆ. ಚನ್ನಬಸವಣ್ಣನವರ ಹೃದಯದಲ್ಲಿ

ಅಂತಹ ಭಕ್ತಿಯ ಕಾತರ ಕಂಡುಬಂದಾಗ ಅಣ್ಣ ಬಸವಣ್ಣನವರು ಅವರಿಗೆ ಲಿಂಗದೀಕ್ಷೆಯನ್ನು ಕೊಟ್ಟಿರುವರು.

ಅಲ್ಲಿಂದ ಸುಜ್ಞಾನದ ಹೆಜ್ಜೆ ಸುಸ್ಪಷ್ಟವಾಗಿ ಗೋಚರವಾಗುತ್ತವೆ. ದಾಸೋಹಂ ಭಾವ ಮೊದಲು ತಲೆದೋರಿರಬೇಕು. ಅಂತಹ ಭಾವವಿಲ್ಲದೆ ಭಕ್ತಿ ಬಲಿಯದು; ಜ್ಞಾನ ಬೆಳೆಯದು.

"ಆವಾವ ಪರಿಯಲ್ಲಿ ಆವಾವ ಭಾವದಲ್ಲಿ
ಗುರು ಲಿಂಗ ಜಂಗಮಕ್ಕೆ ದಾಸೋಹವ ಮಾಡಿಹೆನೆಂಬ, ಕೂಡಿಹೆನೆಂಬ
ಸದ್ಭಕ್ತರ ಬಾಗಿಲ ತೋಜಿ ಬದುಕಿಸಯ್ಯಾ"
"ಪುರಾತನ ಮನೆಯಲ್ಲಿ ಭೃತ್ಯಭೃತ್ಯನಾಗಿಪ್ಪೆನಯ್ಯಾ."[೨]
"ತನು ಮನ ಧನವ ಎರಡಿಲ್ಲದೆ, ಸಮರ್ಪಿಸುವ
ಭಕ್ತರ ಭಕ್ತ ನಾನು; ಆಳಿನಾಳಯ್ಯಾ!"

ಹೀಗೆ ದಾಸೋಹಂಭಾವ ಚನ್ನಬಸವಣ್ಣನವರಲ್ಲಿ ದಿಟಪುಟವಾಗಿ ಮೈದೋರುತ್ತದೆ. ಜೊತೆಗೆ ಈ ಮರ್ತ್ಯಲೋಕದ ಬಗೆಗೆ ಶ್ರದ್ಧೆಯೂ ತಲೆದೋರುತ್ತದೆ. ಈ ಚರಾಚರ ಸೃಷ್ಟಿಯೆಲ್ಲಾ 'ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾಗಿ ಜೀವ ಜಾಲವಲ್ಲವೆ ಸಚರಾಚರವೆಲ್ಲಾ?' ಎಂದು 'ಈ ಲೋಕದಲ್ಲಿ ಜಡವೂ ಚೈತನ್ಯಮಯ' ಎಂದು ಚನ್ನಬಸವಣ್ಣನವರ ದೃಢವಾದ ನಂಬುಗೆ. ಷಟ್‌ಸ್ಥಲಸಾಧನೆಯಲ್ಲಿ ಲಿಂಗಾಂಗ ಚರಾಚರಸೃಷ್ಟಿಗಳ ಬಗೆಗೆ ಶ್ರದ್ಧೆ ಒಡಮೂಡಬೇಕಾಗುತ್ತದೆ. 'ಭೂಮಿಯನೊಲ್ಲದೆ ಗಗನಕ್ಕೆ ಹಾರಿದವಂಗೆ ಆ ವ್ಯೋಮದಲ್ಲಿ ನಿಲುವುದಕ್ಕೆ ಎಡೆಯುಂಟೇ?' ಎಂದು ಚನ್ನಬಸವಣ್ಣನವರು ಕೇಳುವರು. ಮೋಕ್ಷಸಂಪಾದನೆ ಯಾಗಬೇಕಾದರೆ, ಪರಮಾತ್ಮನ ಸಚ್ಚಿದಾನಂದ ಸ್ವರೂಪವಾದ ಈ ಚರಾಚರ ಸೃಷ್ಟಿಯನ್ನು ನಂಬಿ, ಅಲ್ಲಿ ಗಟ್ಟಿಯಾಗಿ ನಿಲ್ಲಬೇಕಾಗುತ್ತದೆ. ಇದು ವೀರಶೈವ ದೃಢನಂಬುಗೆ.

"ಭೋಗಭೂಮಿಯ ಭೊಗತನುವಿನ
ಲಾಗದನುಪಮಸಿದ್ಧಿ ಕರ್ಮೋ
ದ್ಯೋಗಭೂಮಿಯ ಕರ್ಮತನುವಿನಲಲ್ಲದೆ..."

ಕರ್ಮೋದ್ಯೋಗಭೂಮಿಯಲ್ಲಿ ಮುಮುಕ್ಷುವಾದವನಿಗೆ ನಂಬುಗೆ ಬೇಕೇ ಬೇಕು; ಸತ್ಕ್ರಿಯೆಗಳು ಅಲ್ಲಿ ನಡೆಯಲೇಬೇಕು. ಆದರೆ, ಆತನು ಲೋಕ ವ್ಯವಹಾರವನ್ನು ಮಾಡುವ ರೀತಿ ಬೇರೆಯಾಗಿರುತ್ತದೆ.

"ನಾನು ಮೆಟ್ಟುವ ಭೂಮಿಯ ಭಕ್ತನ ಮಾಡಿದಲ್ಲದೆ, ಮೆಟ್ಟೆನಯ್ಯಾ.
ನಾನು ನೋಡುತ್ತಿಹ ಆಕಾಶ ಚಂದ್ರ ಸೂರ್ಯರ ಭಕ್ತರ ಮಾಡಿದಲ್ಲದೆ, ನೋಡೆನಯ್ಯಾ.
ನಾನು ಬಳಸುವ ಜಲವ ಭಕ್ತನ ಮಾಡಿದಲ್ಲದೆ, ಬಳಸೆನಯ್ಯಾ.
ನಾನು ಕೊಂಬ ಹದಿನೆಂಟು ಧಾನ್ಯಗಳ ಭಕ್ತರ ಮಾಡಿದಲ್ಲದೆ, ಕೊಳ್ಳೆನಯ್ಯಾ.
ಕೂಡಲಸಂಗಯ್ಯಾ ನಿಮ್ಮಾಣೆ.[೫೧]

ಆದುದರಿಂದಲೆ ಚನ್ನಬಸವಣ್ಣನವರು ಈ ಲೋಕದಲ್ಲಿ ವ್ಯವಹರಿಸಲು ಅಂಜುವುದಿಲ್ಲ.

"ನೀ ನಿಲಿಸಿದಲ್ಲಿ ನಾನಂಜೆ ನಾನಂಜೆ ನನಂಜೆನಯ್ಯಾ–
ಮನವು ಮಹಾಘನಕ್ಕೆ ಶರಣುವೊಕ್ಕುದಾಗಿ
ನೀ ನಿಲಿಸಿದ ಧನದಲ್ಲಿ ನಾನಂಜೆ ನಾನಂಜೆ ನಾನಂಜೆನಯ್ಯಾ
ಧನವು ಸತಿ ಸುತ ಮಾತಾಪಿತರಿಗೆ ಹೋಗದಾಗಿ,

ನೀನಿರಿಸಿದ ತನುವಿನಲ್ಲಿ ನಾನಂಜೆ ನಾನಂಜೆ ನಾನಂಜೆನಯ್ಯಾ
ತನುಸರ್ವಾರ್ಪಿತದಲ್ಲಿ ನಿಹಿತಪ್ರಸಾದಭೋಗಿಯಾಗಿ."೨

ಪದಾರ್ಥಗಳ ಮಧ್ಯದಲ್ಲಿ ವ್ಯವಹರಿಸಿದರೆ, ವಿಷಯವಾಗಿ ಬಂಧವಾಗುತ್ತದೆ; ಆ ಪದಾರ್ಥಗಳನ್ನೇ ಪ್ರಸಾದವನ್ನಾಗಿ ಮಾಡಿದರೆ, ಮೋಕ್ಷವಾಗುತ್ತದೆ. ಲೋಕದ ವ್ಯವಹಾರವನ್ನೆಲ್ಲಾ ಮಿಕ್ಕವರಂತೆ ಶರಣನೂ ಆಚರಿಸುತ್ತಿರುತ್ತಾನೆ. ಆದರೆ, ಅಲ್ಲಿ ಒಂದು ಅಂತರವುಂಟು. ಲೋಕವನ್ನೇ ಪ್ರಸಾದಭಾವನೆಯಿಂದ ಲಿಂಗಕ್ಕರ್ಪಿಸಿ ಸ್ವೀಕರಿಸುತ್ತಾನೆ ಶರಣ. ಆತನ ಮಾಟ ಕೂಟ ನೋಟ ಎಲ್ಲಾ ಲಿಂಗಮಯ ವಾಗುತ್ತದೆ. ಹಾಗೆ ಆಗಬೇಕೆಂಬುದೇ ಚನ್ನಬಸವಣ್ಣನವರ ಛಲ. ಅಂತೆಯೇ ಭಕ್ತನ ಮಾಡಿದಲ್ಲದೆ ಲೋಕವನ್ನು ಮುಟ್ಟೆನೆಂದು ಅವರು ಪಣತೊಡುವರು. ಇದಕ್ಕನುಗುಣವಾಗಿ ಗುರು ಕೊಟ್ಟ ಇಷ್ಟಲಿಂಗಕ್ಕೆ ಜಲ ಗಂಧ ಅಕ್ಷತೆಯ ಪೂಜೆ ನಡೆಯುತ್ತದೆ. 'ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡುವೆನಯ್ಯಾ, ಸಕಲ ಕ್ಷೇಮದಿಂದ ನಡೆದು ನಿಮ್ಮಲ್ಲಿಗೆ ಸಾರುವೆನು' ಎಂದು ಸುಕ್ಷೇಮವಾದ ಹಾದಿಯನ್ನು ಹಿಡಿಯುವರು. ಗುರುಲಿಂಗ ಜಂಗಮದ ಆರಾಧನೆ ನಿರಂತರವೂ ನಡೆಯುತ್ತದೆ. 'ಲಿಮಗೈಕ್ಯವಿಲ್ಲದವರ ನಾನೊಲ್ಲೆ'ನೆಂದು ಶರಣಸಂಗವನ್ನೇ ಸದುಹೃದಯ ಬಯಸುತ್ತದೆ. ಗುರು ಲಿಂಗ ಜಂಗಮಕ್ಕೆ ತನು ಮನ ಧನಗಳನ್ನರ್ಪಿಸುವ ತಮ್ಮ ಛಲವನ್ನು ಚನ್ನಬಸವಣ್ಣನವರು ಹೀಗೆ ವ್ಯಕ್ತಪಡಿಸುವರು:

"ಮಾಡುವಲ್ಲಿ ಎನ್ನ ನಾನು ಅರೆಯಿತ್ತು ಮಾಡಿದೆನಾದಡೆ,
ನೀಡುವಲ್ಲಿ ಎನ್ನ ನಾನು ಅರೆಯಿತ್ತು ನೀಡಿದೆನಾದಡೆ,
ನೀಡುವ ಅವಸರದಲ್ಲಿ ರುಚಿಗೆ ಹಾರಯಸಿದೆನಾದಡೆ,
ನಿಮಗಂದೆ ದ್ರೋಹಿಯಯ್ಯಾ!
ಮಾಡುವಲ್ಲಿ ನೀಡುವಲ್ಲಿ ಕೂಡೆ ಶುದ್ಧನಲ್ಲದಡೆ
ನೀನಂದೆ ಮುಗಕೊಯ್ಯಾ, ಕೂಡಲಚನ್ನಸಂಗಮದೇವಾ."
"ನೆರೆ ನಂಬೊ ನೆರೆನೆಂಬೊ ಗುರುಲಿಂಗಜಂಗಮವ.
. . . . . ನೆರೆನಂಬಿದೆಯಾದಡೆ,
ತನ್ನನೀವ ಕೂಡಲಚನ್ನಸಂಗಮದೇವ

ಹೀಗೆ ನಂಬಿ, ಗುರುಲಿಂಗಜಂಗಮಕ್ಕೆ ಛಲದಿಂದ ಆತ್ಮಸಾಕ್ಷಿಯಾಗಿ ಮಾಡಿ ನೀಡಿ, ಪರಿಣಮಿಸುವ ಪಣತೊಡುವರು. ಲಿಂಗಪ್ರಸಾದವಲ್ಲದುದನ್ನು ಅವರು ಮುಟ್ಟರು.

"ಲಿಂಗಮುಖಕ್ಕೆ ಬಾರದುದು ಕೃತಕಿಲ್ಬಿಷವಯ್ಯಾ
ಕುಡಲಚನ್ನಸಂಗಯ್ಯಾ, ನಿಮ್ಮತ್ತ ಮುಂದಾಗದುದೆಲ್ಲ
ಎನ್ನತ್ತಮುಂದಾಗದು."

ಹೀಗೆ ಗುರುಲಿಂಗ ಜಂಗಮದ ಪ್ರಸಾದ, ಪ್ರಸಾದಕಾಯರಾದ ಚನ್ನಬಸವಣ್ಣನವರನ್ನೇ ಪ್ರಸಾದಮಯವಾಗಿ ಮಾಡುತ್ತದೆ. ಎಲ್ಲವೂ ಶ್ರೀಗುರುಕರುಣೆಯಿಂದ ಪ್ರಸಾದವಾಗುತ್ತದೆ.

"ಸರ್ವಾಂಗ ಪ್ರಸಾದವವ್ವಾ, ಸರ್ವಾರ್ಥ ಪ್ರಸಾದವವ್ವಾ,
ಸರ್ವಾಂಗ ಸ್ವಯವವ್ವಾ, ಕೂಡಲಚನ್ನಸಂಗನ ಪ್ರಸಾದವವ್ವಾ."
'ವಲಿತ ಪಲಿತ ಪ್ರಸಾದವವ್ವಾ, ಆದಿ ವ್ಯಾಧಿ ಪ್ರಸಾದವವ್ವಾ,
ಗಮನಾಗಮನ ಪ್ರಸಾದವವ್ವಾ,

ಹೀಗೆ ಪ್ರಸಾದಭಾವ ಕರಿಗೊಳ್ಳುತ್ತದೆ. ಶ್ರೀಗುರುವಿನ ಆ ಕೃಪೆಯನ್ನು ಚನ್ನಬಸವಣ್ಣನವರು ಗೀತಮಾತೆಂಬ ಜ್ಯೋತಿಯಲ್ಲಿ ಪಡಿಮೂಡಿಸಿರುವರು:

"ಅಜ್ಞಾನವೆಂಬ ಕಾಳಿಕೆವಿಡಿದ ಮನದ ಮೋಹವ, ಪರಿಹರಿಸಿದ ಪರಿಯ ನೋಡಿರೇ ಒಮ್ಮೆಕಾಸಿ,
ಒಮ್ಮೆ ಕರಗಿಸಿ, ಒಮ್ಮೆ ಬಣ್ಣವಿಟ್ಟು.
ಎನ್ನ ಮನದ ಮೋಹವ ಕಳೆದನಯ್ಯಾ, ನಿಮ್ಮ ಶರಣ ಬಸವಣ್ಣ.

ಎಂದು ಮನದ ಮೋಹವನ್ನು ಗುರು ಪರಿಹರಿಸಿದ ಬಗೆಯನ್ನು ಬಣ್ಣಿಸಿರುವರು. ಭಕ್ತಿ ಮಾರ್ಗವೇನು ಸುಲಭವಾದುದಲ್ಲ. ಭಕ್ತಿ ಕರಗಸಿದಂತೆ ಹೋಗುತ್ತ ಕೊಯ್ವುದು, ಬರುತ್ತ ಕೊಯ್ವುದು. ಅಂತೆಯೇ ಅದನ್ನು ಮಾಡುವುದು ಕರಕಷ್ಟವೆಂದು ಭಕ್ತಿಭಂಡಾರಿ ಬಸವಣ್ಣನವರು ಸಾರಿರುವರು. ಪರಮಾತ್ಮನು ಮೆಚ್ಚಿದನೆಂದಡೆ, ಸಲೆ ಮಾರುವೋದನೆಂದಡೆ ತನುವನಲ್ಲಾಡಿಸಿ ನೋಡುವ, ಮನವನಲ್ಲಾಡಿಸಿ ನೋಡುವ, ಧನವನಲ್ಲಾಡಿಸಿ ನೋಡುವ. ಇದಕ್ಕಂಜದಿದ್ದಡೆ ಕೃಪೆದೋರುವ. ಹಾಗೆಯೇ ಶ್ರೀಗುರು ಚನ್ನಬಸವಣ್ಣನವರನ್ನು ಒಮ್ಮೆ ಕಾಸಿ, ಒಮ್ಮೆ ಕರಗಿಸಿ, ಒಮ್ಮೆ ಬಣ್ಣವಿಟ್ಟು ಅವರ ಮನದ ಮೋಹವನ್ನು ಕಳೆದು ಪ್ರಸಾದ ಕಾಯನನ್ನಾಗಿ ಮಾಡಿದರು. ಅದನ್ನು ಚನ್ನಬಸವಣ್ಣನವರು ಭಕ್ತಿಭರಭಾರದಿಂದ ಸಂಸ್ಮರಿಸಿರುವರು.

"ಸಾಕಾರವಿಡಿದು ಉಪದೇಶವ ಕೊಟ್ಟು, ಎನ್ನ ಕಾಯವ ಸಮರ್ಪಿಸಿಕೊಂಡು
ಶುದ್ಧನ ಮಾಡಿದನಯ್ಯಾ ಶ್ರೀಗುರು.
ಪ್ರಾಣದಲಡಗಿ ಸಿದ್ಧನ ಮಾಡಿದನಯ್ಯಾ ಶ್ರೀಗುರು.
ಎನ್ನ ಆತ್ಮಪದದಲ್ಲಿ ಬೆರಸಿ, ಪ್ರಸಿದ್ಧನ ಮಾಡಿದನಯ್ಯಾ ಶ್ರೀಗುರು."

ಬಸವಣ್ಣನವರ ಕೃಪೆಯಿಂದ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಗಳು ಚನ್ನಬಸವಣ್ಣನವರಿಗೆ ಸಂಪ್ರಾಪ್ತವಾಗುವವು. ಆಗ ದ್ವೈತಸಂದೇಹ ತಾನೆ ಕರಗುತ್ತದೆ.

"ಉಂಟೆಂಬುದು ಬಸವಣ್ಣಕೊಂಡ; ಇಲ್ಲೆಂಬುದನಲ್ಲಮಕೊಂಡ"

ಹೀಗೆ ಉಂಟು ಇಲ್ಲ ಎಂಬ ದ್ವೈತದ ಬೇರುಗಳನ್ನು ಬಸವಣ್ಣ ಪ್ರಭುದೇವರು ಕಿತ್ತುಕೊಳ್ಳುವರು. ಆಗ ಎಲ್ಲವೂ ಲಿಂಗಮಯವಗುವುದು; ಪರಮಾತ್ಮನ ಸಾಕ್ಷಾತ್ಕಾರವಾಗುವುದು.

"ಕಾಯದಿಂದ ಲಿಮಗದುರಶನ, ಕಾಯದಿಂದ ಜಂಗಮದರುಶನ;
ಕಾಯದಿಂದ ಪ್ರಸಾದ ಸಂಪತ್ತು.
ಕೂಡಲ ಚನ್ನಸಂಗಮದೇವಾ, ಈ ಕಾಯದಿಂದ ನಿಮ್ಮುವ ಕಂಡೆನಯ್ಯಾ"

ಕಾಯವಿಡಿದು ಪ್ರಸಾದಕಾಯರಾಗಿ, ಕೂಡಲಚನ್ನಸಂಗಮದೇವರನ್ನು ಕಂಡ ವಿಷಯವನ್ನು ಚನ್ನಬಸವಣ್ಣನವರು ಪರಮಾನಂದಭರಿತರಾಗಿ ವ್ಯಕ್ತಪಡಿಸಿರುವರು.

ಮರ ಮರ ಮಥನಿಸಿ ಜ್ಯೋತಿ ಹುಟ್ಟುವಂತೆ, ಮಾತು ಮಾತು ಹಳಚಿ ಜ್ಯೋತಿ ಹುಟ್ಟುತ್ತದೆ. ಈ ಜ್ಯೋತಿ ಶರಣಸಂಗದಿಂದ, ಶಿವಾನುಭವಸದ್ಗೋಷ್ಠಿಯಿಂದ ಹುಟ್ಟುತ್ತದೆ, ವೀರಶೈವ ಧರ್ಮ, ವೈಯಕ್ತಿಕವಾಗಿರದೆ ಸಾಮೂಹಿಕ ತತ್ವವನ್ನು ಎತ್ತಿಹಿಡಿಯುವುದರಿಂದ ಶರಣಸಂಗಕ್ಕೆ ಅಲ್ಲಿ ವಿಶೇಷ ಮಹತ್ವವುಂಟು. ಶರಣಸಂಗವಿಲ್ಲದೆ ವೈಯಕ್ತಿಕ ಕಾರ್ಯಕಲಪಗಳಿಂದ ಅದ್ಭುತವಾದ ಕ್ರಾಮತಿ ತಲೆದೋರುವಂತಿರಲಿಲ್ಲ. ಪ್ರಭು, ಬಸವಣ್ಣನವರಂತಹ ದಿವ್ಯ ಮಹಾನುಭಾವಿಗಳು ನಡೆದುದು ಮಾರ್ಗವಾಗಿದೆ; ನುಡಿದುದು ಮಂತ್ರವಾಗಿದೆ. ಮುಟ್ಟಿದುದು ಲಿಂಗವಾಗಿದೆ. ಆದುದರಿಮದ ಪ್ರತಿಯೊಬ್ಬ ಶರಣರ ಜಿವನದಲ್ಲಿ ಇತರ ಶರಣರ ಪ್ರಭಾವ ಸುಸ್ಪಷ್ಟವಾಗಿ ಒಡೆದುಕಾಣುತ್ತದೆ. ಚನ್ನಬಸವಣ್ಣನವರ ಜೀವನದಲ್ಲಿ ಅಂತಹ ಶರಣರ ಪ್ರಭಾವವನ್ನು ನಿಸ್ಸಮದೇಹವಾಗಿ ಕಾಣುತ್ತೇವೆ. ಅವರ ವಚನಗಳನ್ನು ಮಥಿಸಿದರೆ, ಬಸವಣ್ಣನವರು, ಪ್ರಭುದೇವರು, ಮಡಿವಾಳ ಮಾಚಿದೇವರು ಮುಂತಾದವರ ಪ್ರಭಾವಮುದ್ರೆಯನ್ನು [illegible]ತವಾಗಿ ಕಾಣುತ್ತೇವೆ.

“ಬೆನ್ನಿನಲ್ಲಿ ಬಸವಣ್ಣನ ತೆಗೆದ, ಹೊಟ್ಟೆಯಲ್ಲಿ ಎನ್ನ ತೆಗೆದ,
ಬ್ರಹ್ಮರಂಧ್ರದಲ್ಲಿ ಅಲ್ಲಮನ ತೆಗೆದ.
ಸಂಗನೊ ಮಡಿವಾಳನೋ, ಮಡಿವಾಳನೊ ಸಂಗನೋ
ಎಂದು ನುಡಿಯಲಮ್ಮೆನು.”

ಎಂದು ಮಡಿವಾಳನ ವಿಷಯವಾಗಿ ಭಕ್ತಿಭಾವವನ್ನು ವ್ಯಕ್ತಪಡಿಸಿರುವರು. ಮಡಿವಾಳ ಮಾಚಿದೇವನು ಕ್ರಿಯಾಮೂರ್ತಿ. ಆತನ ಭಕ್ತಿ ಬಸವಣ್ಣ, ಜ್ಞಾನ ಚನ್ನಬಸವಣ್ಣ, ಅನುಭಾವ ಪ್ರಭುದೇವರು. ಹೀಗೆಯೇ ಅನೇಕ ಶರಣರ ಬಗೆಗೆ ಚನ್ನಬಸವಣ್ಣನವರು ಭಕ್ತಿ ಕುಸುಮವನ್ನರ್ಪಿಸಿರುವರು. ಬಸವಣ್ಣನವರು ಬಗೆಗಂತೂ ಅವರಿಗೆ ಎಷ್ಟು ಕೊಂಡಾಡಿದರೂ ತೃಪ್ತಿಯಿಲ್ಲ. ಅಮತಹ ಸದ್ಗುರುವನ್ನು ಪಡೆದ ತಾವು ಕೃತಕೃತ್ಯರೆಂದು ಮತ್ತೆ ಮತ್ತೆ ಹೇಳಿಕೊಳ್ಳುವರು.

“ಬಸವಣ್ಣಾ, ನಿಮ್ಮ ತೊತ್ತಿನ ತೊತ್ತಿನ ಮಱಿತೊತ್ತಿನ ಮಗ ನಾನಯ್ಯಾ”
“ಅಂತರಂಗದಲ್ಲಿ ಅಱಿವು ಪರಿಪೂರ್ಣ,
ಬಹಿರಂಗದಲ್ಲಿ ದಾಸೋಹಸಂಪನ್ನ,
ಮನೋವಾಕ್ಕಾಯ ಕರ್ಮಂಗಳಲ್ಲಿ ಸದ್ಭಕ್ತಿಸಂಪನ್ನ,
ಎಡೆದೆಱಹಿಲ್ಲದ ಲಿಂಗಸಂಪನ್ನ,
ಸರ್ವ ಅಂಗದಲ್ಲಿ ಸರ್ವಾಚಾರಸಂಪನ್ನ.
“ಲಿಂಗಪ್ರಾಣ, ಪ್ರಾಣಲಿಂಗವೆಂಬುದು ಎನ್ನಂತರಂಗದಲ್ಲಿ ಸ್ಥಾಪ್ಯವಮಾಡಿ,
ಎನ್ನ, ನಿನ್ನಂತೆಮಾಡಿ, ನಿಜಲಿಂಗದೊಳಗೆ ನಿರವಯವಾದೆಯಲ್ಲಾ, ಬಸವಣ್ಣಾ!
ನಿನ್ನ ಒಕ್ಕ ಮಿಕ್ಕ ಶೇಷವನಿಕ್ಕಿ ಆಗುಮಾಡಿ,
ನಿನ್ನಂತರಂಗದಲ್ಲಿ ಅಷ್ಟನಾಗಾಯಿಯ ಇಂಬುಗೊಂಡಡೆ,
ಎಮ್ಮ ಮನ, ನಿಮ್ಮ ಪಾದದಲ್ಲಿ ಕರಗಿ ಕೊಱಗಿತ್ತಯ್ಯಾ, ಸಂಗನಬಸವಣ್ಣಾ!”
“ಸಂಗನ ಬಸವಣ್ಣನ ಕರುಣದ ಶಿಶುವೆಂದು
ಮೂಱುಲೋಕವೆಲ್ಲವು ಅಱಿದು ಜಯ ಜಯ ಎನುತಿರ್ದುದು”
“ಬಸವಣ್ಣನ ಸಂಪ್ರದಾಯದ ಕಂದ ನೋಡಾ, ನಾನು

ಹೀಗೆ ಬಸವಣ್ಣನವರನ್ನು ಕುರಿತು, ಹೃದಯದ ಕೋಡಿ ಹರಿದು ಮಹಾಸಾಗರವಾಗುವಂತೆ ಚನ್ನಬಸವಣ್ಣನವರು ಹಾಡಿ ಹಣ್ಣಾಗಿರುವರು.

ಇದೇ ರಿರಿಯಲ್ಲಿ ಪ್ರಭುದೇವರನ್ನು ಕುರಿತು ಚನ್ನಬಸವಣ್ಣನವರು ಮನವಾರೆ ಸ್ತೋತ್ರಮಾಡಿರುವರು.

“ಶರಣ ಪ್ರಭುದೇವರು ಅಜಾತನೆಂಬ ಭೇದವೆನಗಿಂದು ತಿಳಿಯಿತ್ತು.”
ಅಱಿವಿನ ತೃಪ್ತಿಗೆ ಅನುಭಾವವಾಶ್ರಯ;
ಲಿಂಗದ ಅನುಭಾವದಿಃುದ ನಿಮ್ಮ ಕಡೆನು
ನಿಮ್ಮ ಕಡೆನ್ನ ಮಱಿದ ಕಾಣಾ, ಪ್ರಭುವೇ!”
“ಎನ್ನ ಅನುಭಾವದ ಗಮ್ಮವೇ, ಅಱಿವಿನ ವಿಶ್ರಾಮವೇ,
ಭಾವದ ಬಯಕೆಯೇ, ನಿಜದ ನೊಲವೇ,
ಪರಿಣಾಮದ ಮೇರುವೇ, ಮನದ ಮಹಿಮನೇ
ನಿಮ್ಮ ಸುಳುಹೆತ್ತಲಡಗಿತ್ತು?

ಎಲೆ ಲಿಂಗವೆ, ನಿನ್ನ ನಾಮವೆತ್ತ ನಿರ್ನಾಮವಾಯಿತ್ತು
ಎಲ್ ಪರಮಗುರುವೆ, ಕೂಡಲ ಚನ್ನಸಂಗಯ್ಯನಲ್ಲಿ
ಉರಿಯುಂಡ ಕರ್ಪುರದಂತಾದೆಯಲ್ಲಾ ಪ್ರಭುವೇ!"

ಹೀಗೆ ಪ್ರಭುದೇವರನ್ನು ಅನನ್ಯಭಾವದಿಂದ ಚನದನಬಸವಣ್ಣನವರು ಕೊಂಡಾಡಿರುವರು. ಮರುಳಶಂಕರದೇವರ ವಿಷಯವಾಗಿಯೂ ಚನ್ನಬಸವಣ್ಣನವರು ತಮ್ಮ ಭಕ್ತಿಭಾವವನ್ನು ಪ್ರಕಟಪಡಿಸಿರುವರು.

"ಅಂಗ ಪ್ರಾಣದೇಹ ಭಾವಗಳನ್ನು ಇಷ್ಟಪ್ರಾಣ ಭಾವಲಿಮಗಗಳಿಗೆ ಅರ್ಪಿಸಿ,
ಆಚಾರಲಿಂಗಪ್ರಸಾದಿ, ಪ್ರಾಣಲಿಮಗಪ್ರಸಾದಿ, ಜಂಗಮಲಿಂಗಪ್ರಸಾದಿಯಾದ
ಮರುಳಶಂಕರದೇವರು, ಸತ್ಯಶರಣರ ಅಂಗದೊಳಗೆ ಬಿದ್ದ
ಅಗುಳನೆತ್ತಿಪ್ಪೆಕೊಂಡೆಹೆನೆಮದು ನಿಮ್ಮ ಪ್ರಸಾದದ ಕುಳಿಯೊಳಗೆ
ಹನ್ನೆರಡು ವರ್ಷ ಪರ್ಯಂತರ ಪ್ರಸಾದಿಯಾಗಿರ್ದ."

ಗುರುಲಿಂಗಜಂಗಮ ತಾನೇ ಆಗಿ, ಮತ್ತೆ ತಾನೆಂಬುದೇನೂ ಇಲ್ಲದೆ ಇಷ್ಟ; ತನ್ನ ತಾ ನಿರ್ದೇಶಮಂ ಮಾಡಿಕೊಂಡು ನಿಜಪದವನ್ನೈದಿಪ್ಪ.

ಮಾಡಬಾರದ ಭಕ್ತಿಯನೆ ಮಾಡಿ,
ನೋಡಬಾರದ ನೋಟವನೆ ನೋಡಿ,
ಕೂಡಬಾರದ ಕೂಟವನೆ ಕೂಡಿ
ಸ್ತುತಿಸುವಂಗೆ ಸ್ತುತಿಗೆ ಬಾರದೆ,
ಮುಟ್ಟುವಂಗೆ ಮುಟ್ಟಬಾರದೆ,
ಬಟ್ಟಬಯಲಾಗಿ ಹೋದ ಮರುಳ ಶಂಕರದೇವ!"

ಮಹಾದೇವಿಯಕ್ಕನವರನ್ನು ಕುರಿತು ಚನ್ನಬಸವಣ್ಣನವರು ಹಾಡಿ ಹರಸಿರುವು;

"ಆದ್ಯರ ಅಱುವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ,
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ,
ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ,
ಅಜಗಣ್ಣನ ಐದು ವಚನಕ್ಕೆ ಕೂಡಲ ಚನ್ನಸಂಗಯ್ಯನಲ್ಲಿ
ಮಹಾದೇವಿಯಕ್ಕಗಳ ಒಂದು ವಚನ ನಿರ್ವಚನ ಕಾಣಾ, ಸಿದ್ಧರಾಮಯ್ಯಾ!"

ಹೀಗೆ ಪ್ರಭುದೇವರನ್ನು ಅನನ್ಯಭಾವದಿಂದ ಚನ್ನಬಸವಣ್ಣನವರು ಕೊಂಡಾಡಿರುವರು. ಮರುಳಶಂಕರದೇವರ ವಿಷಯವಾಗಿಯೂ ಚನ್ನಬಸವಣ್ಣ ನವರು ತಮ್ಮ ಭಕ್ತಿ ಭಾವವನ್ನು ಪ್ರಕಟಪಡಿಸಿರುವರು:

"ಅಂಗ ಪ್ರಾಣ ದೇಹ ಭಾವಗಳನ್ನು ಇಷ್ಟಪ್ರಾಣ ಭಾವಲಿಂಗಗಳಿಗೆ ಅರ್ಪಿಸಿ,
ಆಚಾರಲಿಂಗಪ್ರಸಾದಿ, ಪ್ರಾಣಲಿಂಗಪ್ರಸಾದಿ, ಜಂಗಮಲಿಂಗಪ್ರಸಾದಿಯಾದ
ಮರುಳಶಂಕರದೆವರು, ಸತ್ಯಶರಣರ ಅಂಗಳದೊಳಗೆ ಬಿದ್ದ
ಅಗುಳನೆತ್ತಿಪ್ಪೆಕೊಂಡೆಹೆನೆಂದು ನಿಮ್ಮ ಪ್ರಸಾದದ ಕುಳಿಯೊಳಗೆ
ಹನ್ನೆರಡು ವರ್ಷ ಪರ್ಯಂತರ ಪ್ರಸಾದಿಯಾಗಿರ್ದ."
"ಗುರುಲಿಂಗ ಜಂಗಮ ತಾನೇ ಆಗಿ, ಮತ್ತೆ ತಾನೆಂಬುದೇನೂ ಇಲ್ಲದೆ ಇಪ್ಪ
ತನ್ನ ತಾ ನಿರ್ದೇಶಮಂ ಮಾಡಿಕೊಂಡು ನಿಜಪದವನ್ನೈದಿಪ್ಪ."
ಮಾಡಬಾರದ ಭಕ್ತಿಯನೆ ಮಾಡಿ,

ನೋಡಬಾರದ ನೋಟವನೆ ನೋಡಿ,
ಕೂಡಬಾರದ ಕೂಟವನೆ ಕೂಡಿ
ಸ್ತುತಿಸುವಂಗೆ ಸ್ತುತಿಗೆ ಬಾರದೆ,
ಮುಟ್ಟುವಂಗೆ ಮುಟ್ಟಬಾರದೆ,
ಬಟ್ಟಬಯಲಾಗಿ ಹೋದ ಮರುಳ ಶಂಕರದೇವ!"

ಮಹಾದೇವಿಯಕ್ಕನವರನ್ನು ಕುರಿತು ಚನ್ನಬಸವಣ್ಣನವರು ಹಾಡಿ ಹರಸಿರುವರು.

"ಆದ್ಯರ ಅಱುವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚ,
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚ,
ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ,
ಅಜಗಣ್ಣನ ಐದು ವಚನಕ್ಕೆ ಕೂಡಲ ಚನ್ನಸಂಗಯ್ಯನಲ್ಲಿ
ಮಹಾದೇವಿಯಕ್ಕಗಳ ಒಂದು ವಚನ ನಿರ್ವಚನ ಕಾಣಾ, ಸಿದ್ಧರಾಮಯ್ಯಾ!"

ಹೀಗೆ ಚನ್ನಬಸವಣ್ಣನವರು ಶಿವಶರಣರನ್ನು ಅನಂತಮುಖಿಯಾಗಿ ಅನನ್ಯಭಾವದಿಂದ ಸ್ತೋತ್ರಮಾಡಿರುವರು.

"ಎನ್ನಂತರಂಗವೆ ಬಸವಣ್ಣ, ಬಹಿರಂಗ ಮಡಿವಾಳ ಮಾಚಯ್ಯ,
ಈ ಉಭಯಸಂಗವೇ ಪ್ರಭುದೇವರು."

ಎಂದು ತಮ್ಮ ಅಂತರಂಗ ಬಹಿರಂಗವೆಲ್ಲಾ ಶರಣಸಂಪದವೆಂದು ನಿಜದರಿವಿನಲ್ಲಿ ನುಡಿದು ಕೃತಾರ್ಥರಾಗಿರುವರು. ಲಿಂಗವೇ ತಾವಾಗಿ ಬೇರೆಂಬುದಿಲ್ಲದೆ ನಿರವಯಸ್ಥಿತಿಯನ್ನು ಪಡೆದರು; ಅಚಲಲಿಂಗ ಸೋಂಕಿ, ಅನುಭಾವಸಂಪನ್ನರಾದರು. ಅವರು ಭೋಗಿಸಿತ್ತೆಲ್ಲ ಸಮರ್ಪಿತವಾಯಿತು; ರುಚಿಸಿತ್ತೆಲ್ಲ ಪ್ರಸಾದವಾಯಿತು. ಅರಿದುದೆಲ್ಲಾ ಪರಬ್ರಹ್ಮವಾಯಿತು; ನುಡಿದುದೆಲ್ಲಾ ಪರತತ್ತ್ವವಾಯಿತು. ಅಪ್ಪುವನಪ್ಪಿದ ವಾರಿಕಲ್ಲಂತೆ, ವಾಯುವನಪ್ಪಿದ ಪರಿಮಳದಂತೆ, ಅನಲನನಪ್ಪಿದ ಕರ್ಪುರದಂತೆ, ಲಿಂಗವನಪ್ಪಿ, ಲಿಂಗವೆ ಆದರು. ಗಾಳಿಯ ಮರೆಯ ಜ್ಯೋತಿಯಂತೆ ಸುಖಸೂಸದೆ ಇದ್ದರು. ಸಹಜವಿಡಿದು, ನಿಜವಳವಟ್ಟು, ಅದು ಇದು ಎನ್ನಲು ಎಡೆಯಿಲ್ಲದಿದ್ದರು. ಭಾವಲಿದು ನಿಭಾವವಾಗಿದ್ದರು. ಮಾತು ಮಾಣಿಕ್ಯವ ನುಂಗಿತು. ಜ್ಯೋತಿ ಕತ್ತಲೆಯ ನುಂಗಿತು, ತನು ಬಯಲಾಗಿ ನಿರವಯಲೊಳಡಗಿತ್ತು, ಬಯಲು ಬಯಲ ಬೆರೆಸಿ ಬಯಲೇ ಆಗಿತ್ತು. ಆಗ ಊಹೆ–ಉತ್ತರ, ದೇಹಿ–ದೇಹಿಕ, ನಾನು–ನೀನು ಎಂಬ ಭ್ರಾಂತು, ಸಂದು ಸಂಶಯವಿಲ್ಲದೆ ನಿಭ್ರಾಂತು ಆಗುತ್ತದೆ. ಅನುಭಾವವಿಲ್ಲದ ಸಂಗಸುಖವನ್ನು ಚನ್ನಬಸವಣ್ಣನವರು ಅನುಬವಿಸುವರು. ನೆನಹಿನ ಸುಖವ ನೋಟ, ನೋಟದ ಸುಖವ ಕೂಟ, ಕೂಟದ ಸುಖವ ಆಲಿಂಗನ, ಆಲಿಂಗನದ ಸುಖವ ಸಂಗ, ಸಂಗಸುಖವ ಸಮರತಿ, ಸಮರತಿಯ ಸುಖವ ಪರವಶತೆ ನುಂಗಿ, ಚನ್ನಬಸವಣ್ಣನವರು ಉಪಮಾತೀತಸ್ಥಿತಿಯಲ್ಲಿದ್ದರು. ರೂಪಿಲ್ಲದ ರೂಪು, ಗಮನವಿಲ್ಲದ ಗಮ್ಯ ಪ್ರಾಪ್ತವಾದುವು.

ಹೀಗೆ ಅವಿರಳಾನಂದಪರವಶರಾದ ಚೆನ್ನಬಸವಣ್ಣನವರು ನಿಷ್ಕ್ರಿಯಾತ್ಮಕ ರಾಗಿರಲಿಲ್ಲ. ಶರಣರ ಅನುಭಾವ, ನಿಷ್ಕ್ರಿಯೆಯನ್ನು ಬೋಧಿಸುವುದೇ ಇಲ್ಲ. ಅದು ಮೊದಲಿನಿಂದ ಕೊನೆಯವರೆಗೂ ಕ್ರಿಯಾಜ್ಞಾನಸಾಮರಸ್ಯಯುಕ್ತವಾಗಿಯೇ ಸಾಗುವುದು. ಆದುದರಿಂದ ಚನ್ನಬಸವಣ್ಣನವರ ಶಿವಾನುಭಾವ ಅಸದೃಶವಾದ ಲೋಕಸಂಗ್ರಹಕಾರ್ಯವನ್ನಡಸಗಿದೆ. ಅವರು ಕೈಕೊಂಡ ತಾತ್ವಿಕ, ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಕ್ರಾಂತಿಯಲ್ಲಿ ಚನ್ನಬಸವಣ್ಣನವರೇ

ನೇತಾರ. ಷಟ್‌ಸ್ಥಲನಿರ್ಣಯಮಾಡಿದ ವಿಷಯವನ್ನು ಹಿಂದೆ ವಿವರಿಸಲಾಗಿದೆ. ಶಿವಯೋಗ ಸರ್ವಾಚಾರಸಂಪತ್ತಿನ ಘನಮಹಿಮೆಯನ್ನು ನಿಷ್ಕರ್ಷಿಸಿ, ಅದನ್ನು ಜೀವಿಸಿ ಶರಣಜೀವಿಗಳಾದರು.

ತತ್ವನಿರ್ಣಯದ ಗುರಿ ಸಮಾಜೋದ್ಧಾರವಾಗಿದ್ದಿತು. ಆದುದರಿಂದ ಅಷ್ಟಾವರಣ ಪಂಚಾಚಾರಗಳನ್ನು ನೂತನ ಸಮಾಜ ರಚನೆಗೆ ಅನುವಾಗುವಂತೆ ಅಣಿಗೊಳಿಸಿದುದರ ಶ್ರೇಯಸ್ಸು ಚನ್ನಬಸವಣ್ಣನವರಿಗೆ ಸಲ್ಲುತ್ತದೆ. ಧರ್ಮತತ್ವಗಳು ನಿರ್ಮಲವಾದ ಸಮಾಜವನ್ನು ಕಟ್ಟಲಿಕ್ಕೆ ಅನುಕೂಲವಾಗಬೇಕೆಂದು ವೀರಶೈವವನ್ನು ವಿಶಾಲವಾದ ತಳಹದಿಯ ಮೇಲೆ ನಿಲ್ಲಿಸಿದರು. ಜಾತಿ–ಮತ, ಕುಲ–ಗೋತ್ರ, ನಾಮ–ಸೀಮೆಗಳ ಹಂಗು ಹರಿದುಹಾಕಿ, ಧರ್ಮವನ್ನು ಸರ್ವರ ಸ್ವತ್ತನ್ನಾಗಿ ಮಾಡಿದರು. ವೀರಶೈವ ಧರ್ಮವನ್ನು ವಿಶ್ವಧರ್ಮವಾಗುವಂತೆ ಮಾಡಿದುದರ ಪುಣ್ಯವಿಶೇಷದ ಬಹುಭಾಗ ಚನ್ನಬಸವಣ್ಣನವರಿಗೆ ಸಲ್ಲುತ್ತದೆ.

ಕನ್ನಡ ಸಾಹಿತ್ಯದಲ್ಲಿ ವಚನವಾಙ್ಮಯವೊಂದು ಮಹಾಮೇರುವಿದ್ದಂತೆ. ಅಲ್ಲಿ ಚನ್ನಬಸವಣ್ಣನವರ ವಚನಗಳು ಅತ್ಯುನ್ನತವಾದ ಸ್ಥಾನವನ್ನು ಅಲಂಕರಿಸಿದೆ. 'ಎಮ್ಮಯ್ಯ ಉಸುರಿದುದು ವಚನವಾಗಿದೆ' ಎಂದು ಸಿದ್ಧರಾಮಯ್ಯದೇವರು ಹೇಳಿದ ಮಾತು ನಿತ್ಯ ಸತ್ಯವಾಗಿದೆ! ಅಸಂಖ್ಯ ವಚನಗಳಲ್ಲದೆ,

೧) ಕರಣಹಸಿಗೆ
೨) ಮಿಶ್ರಾರ್ಪಣ
೩) ಹಿರಿಯ ಮಂತ್ರಗೋಪ್ಯ
೪) ಪದಮಂತ್ರ ಗೋಪ್ಯ
೫) ಸಕೀಲದ ವಚನಗಳು

ಇವೇ ಮೊದಲಾದವುಗಳನ್ನು ಚನ್ನಬಸವಣ್ಣನವರು ರಚಿಸಿರುವರು. ಇವನ್ನು ಅವಲೋಕಿಸಿದರೆ, ತತ್ವಶಾಸ್ತ್ರದಲ್ಲಿ ಅವರಿಗಿದ್ದ ಅಪಾರವಾದ ಶಕ್ತಿ ವ್ಯಕ್ತವಾಗುತ್ತದೆ. ಅನುಭಾವ ಅದರೊಮದಿಗೆ ಕೂಡಿ ಕಾವ್ಯವೂ ಆಗಿದೆ. ಇಂತಹ ಕಾವ್ಯಶ್ರೀಯನ್ನು ಮಂತ್ರಗೋಪ್ಯ ಹಿರಿಯಮಂತ್ರಗೋಪ್ಯಗಳಲ್ಲಿ ಕಾಣಬಹುದು.

'ರುದ್ರಭಾರತ'ವೆಂಬ ಇನ್ನೊಂದು ಕೃತಿಯ ಕರ್ತೃವನ್ನು ಚನ್ನಬಸವಣ್ಣನವರಿಗೆ ಆರೋಪಿಸಲಾಗಿದೆ. ಆ ಗ್ರಂಥವು ಸೃಷ್ಟಿಯ ವ್ಯುತ್ಪತ್ತಿಯ ವಿವರಣೆಯಿಂದ ಆರಂಬವಾಗಿ, ಮುಂದೆ ಮುಸಲ್ಮಾನರನ್ನೊಳಗೊಂಡ ಅನೇಕ ಜಾತಿ ಉಪಜಾತಿಗಳೂ ಉದ್ಭವವಾದ ಅಸಂಗತ ವಿಷಯಗಳಿಂದ ಮುಕ್ತಾಯವಾಗುತ್ತದೆ. ವಿಷಯ, ಶೈಲಿ ಮುಂತಾದ ಯಾವ ದೃಷ್ಟಿಯಿಂದ ವಿಚಾರಿಸಿದರೂ ಅದು ಚನ್ನಬಸವಣ್ಣನವರು ಕರಿತಯಾಗಿರಲು ಸಾದ್ಯವೇ ಇಲ್ಲ. ಆ ಗ್ರಂಥದ ಕರ್ತೃ ಚನ್ನಬಸವಣ್ಣನವರಲ್ಲ. ಅವರ ಹೆಸರಿನಲ್ಲಿ ಮೇಘಚಕ್ರ, ಭೂಚಕ್ರ, ಜಪದ ಸಕೀಲ ಮುಂತಾದ ಚಿಕ್ಕ ಗ್ರಂಥಗಳು ದೊರೆಯುತ್ತವೆ. ಆದರೆ, ಅವು ಚನ್ನಬಸವಣ್ಣನವರವೇ ಎಂದು ನಿಷ್ಕರ್ಷಿಸಲು ಪ್ರಬಲವಾದ ಆಧಾರಗಳಿಲ್ಲ. ಅಲ್ಲಿಯ ವಿಷಯ ನಿರೂಪಣೆಯೂ ಅಷ್ಟೊಂದು ಸುಸಂಗತವಾಗಿರುವುದಿಲ್ಲ. ಆದುದರಿಂದ ಅವನ್ನು ನಾವು ಈಗ ಗಣನೆಗೆ ತೆಗೆದುಕೊಂಡಿರುವುದಿಲ್ಲ.

ವಚನಗಳ ಕರ್ತೃವಾಗಿ, ಶಾಸ್ತ್ರಗ್ರಂಥಗಳ ಸ್ರಷ್ಟಾರರಾಗಿ, ಚನ್ನಬಸವಣ್ಣನವರು ಕನ್ನಡ ಸಾಹಿತ್ಯದಲ್ಲಿ ಉನ್ನತವಾದ ಸ್ಥಾನವನ್ನು ಅಲಂಕರಿಸಿರುವರು. ವಿಶ್ವಧರ್ಮವೆನಿಸಿದ ವೀರಶೈವಕ್ಕೆ

ಪಂಚಪ್ರಾಣರೆನಿಸಿ, ಅದನ್ನು ನಿರ್ಣಯಿಸಿ ತೋರಿಸಿದುದರಿಂದ ಭಾರತೀಯ ಹಾಗೂ ಕನ್ನಡನಾಡಿನ ತಾತ್ವಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಚನ್ನಬಸವಣ್ಣನವರ ಸ್ಥಾನ ಹಿರಿದಾಗಿದೆ. ಅದ್ಭುತವಾದ ಸಾಮಾಜಿಕ ಕ್ರಾಂತಿಗೆ ನೇತಾರರಾಗಿ ನಿಂತುದರಿಂದ ಭಾರತೀಯ ಹಾಗೂ ಜಾಗತಿಕ ಸಮಾಜೋದ್ಧಾರಕರಲ್ಲಿ ಚನ್ನಬಸವಣ್ಣನವರ ಸ್ಥಾನ ಮಿಗಿಲಾಗಿದೆ. ಬಸವಾದಿ ಪ್ರಮಥರಲ್ಲಿ ಅವರ ಸ್ಥಾನ ಅತ್ಯಂತ ಹಿರಿದಾಗಿದ್ದಿತೆಂದು ಬೇರೆ ಹೇಳಲೇಬೇಕಿಲ್ಲ. ಮುಂದೆ ಉದ್ಧರಿಸುವ ವಚನಗಳು ಅದಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ. ಅವರ ಹೆಸರನ್ನು ತಮ್ಮ ಅಂಕಿತವನ್ನಾಗಿಟ್ಟುಕೊಂಡು ಶರಣರು ವಚನಗಳನ್ನು ರಚಿಸಿದುದುಂಟು. ಆ ಅಂಕಿತಗಳು ಇಂತಿವೆ:

	ಅಂಕಿತ	ಶರಣರು
೧.	ಬಸವಣ್ಣ ಪ್ರಿಯ ಕೂಡಲ ಚನ್ನ ಸಂಗಮದೇವ	ಅಕ್ಕನಾಗಮ್ಮ
೨.	ನಿಃಕಳಂಕ ಕೂಡಲ ಚನ್ನಸಂಗಮದೇವ	ಹಡಪದ ರೇಚಣ್ಣ
೩.	ಚನ್ನಬಸವಣ್ಣ ಸಾಕ್ಷಿ	ಕನ್ನಡಿಕಾಯಕದ ಅಮುಗಿದೇವಯ್ಯ
೪.	ಕಮಳೇಶ್ವರಲಿಂಗ ಚನ್ನಕೂಡಲ ರಾಮೇಶ್ವರಲಿಂಗ	”
೫.	ಚನ್ನಬಸವಣ್ಣ ಪ್ರಿಯ ಭೋಗ ಮಲ್ಲಿಕಾರ್ಜುನ	ಪ್ರಸಾದಿ ಭೋಗಣ್ಣ
೬.	ಚನ್ನಬಸವಣ್ಣಪ್ರಿಯ ಚಂದೇಶ್ವರಲಿಂಗ	ನುಲಿಯ ಚಂದಯ್ಯ
೭.	ಚನ್ನಬಸವಣ್ಣಪ್ರಿಯ ಏಲೇಶ್ವರಲಿಂಗ	ಏಲೇಶ್ವರ ಕೇತಯ್ಯ

ಹೀಗೆ ವಚನಾಂಕಿತಗಳಲ್ಲಿ ಚನ್ನಬಸವಣ್ಣನವರ ಹೆಸರು ಕಂಡುಬರುವುದು ಅವರ ದಿವ್ಯಘನದ್ಯೋತಕ. ವಚನಗಳಲ್ಲಿ ಕಂಡುಬಂದಂತೆ. ಕ್ರಿ.ಶ. ೧೭೪೪ನೆಯ ಇಸ್ವಿಯ ಒಂದು ತಾಮ್ರ ವಚನಗಳಲ್ಲಿ ಕಂಡುಬಂದಂತೆ. ಕ್ರಿ.ಶ. ೧೭೪೪ನೆಯ ಇಸ್ವಿಯ ಒಂದು ತಾಮ್ರ ಶಾಸನದಲ್ಲಿ ಚನ್ನಬಸವಣ್ಣನವರ ಹೆಸರು ಉಲ್ಲೇಖಿತವಾಗಿರುವುದು ಗಮನಾರ್ಹವಾಗಿದೆ.

ಅಖಂಡ ಜ್ಞಾನದ ಸಾಕಾರರೂಪವಾಗಿ ಮೈವೆತ್ತ ಚನ್ನಬಸವಣ್ಣನರ ಮಹಿಮೆಯನ್ನು ಬಣ್ಣಿಸಲು ಬಯಲು ಬಾಯ್ದೆರೆಯಬೇಕಾಗುತ್ತದೆ, ಶಬ್ದ ನಿಃಶಬ್ದವಾಗಬೇಕಾಗುತ್ತದೆ; ಮಾತು ಜ್ಯೋತಿರ್ಲಿಂಗವಾಗಬೇಕಾಗುತ್ತದೆ. ಆಗ ತಾನೆ ನಿರವಯ, ನಿರುಪಾಧಿಕ, ಪರಂಜ್ಯೋತಿಸ್ವರೂಪವಾದ ಚನ್ನಬಸವಣ್ಣನವರ ವ್ಯಕ್ತಿತ್ವದ ಮಹಿಮೆ ಗೋಚರವಗುತ್ತದೆ. ಇದೀಗ ಘನಕ್ಕೆ ಘನವಾದ ಆ ವ್ಯಕ್ತಿತ್ವವನ್ನು ಬಣ್ಣಿಸಲು, ಅಣುವಿಗೆ ಅಣುವಾದ ಈ ಶಬ್ದ ನಾಚಿ ಮುಗ್ಧವಾಗುತ್ತದೆ. ಜಗತ್ತಿನ ತತ್ತ್ವಜ್ಞಾನಿಗಳಲ್ಲಿ, ಸಾಮಾಜಿಕ ಕ್ರಾಂತಿಕಾರರಲ್ಲಿ, ಶ್ರೇಷ್ಠ ಸಾಹಿತ್ಯನಿರ್ಮಾಪಕರಲ್ಲಿ ಅವರ ಸ್ಥಾನ ಮಿಗಿಲೆಂದು ಹೇಳಬಯಸುತ್ತೇವೆ. ಅವರ ಮಹಿಮೆಯನ್ನು ಅನೇಕ ಶರಣರು ಕೊಂಡಾಡಿರುವರು. ಚನ್ನಬಸವಣ್ಣ ಚಿತ್‌ಸ್ವರೂಪವೆಂದು ಹಲವರು ಹೇಳಿದರೆ, ಲಿಂಗಸ್ವರೂಪನೆಂದು ಮತ್ತೆ ಕೆಲವರು ಬಣ್ಣಿಸಿದರು. ವೀರಶೈವದ ಗುರು ಲಿಂಗ ಜಂಗಮ, ಇಷ್ಟ ಪ್ರಾಣಭಾವ, ಸ್ಥೂಲ ಸೂಕ್ಷ್ಮಕಾರಣ ಮುಂತಾದ ತ್ರಿವಿಧದ ಪರಿಭಾಷೆಯಲ್ಲಿ ಬಸವಣ್ಣ, ಚನ್ನಬಸವಣ್ಣ, ಪ್ರಭುದೇವನವರ ಹೆಸರುಗಳನ್ನು

ಉಲ್ಲೇಖಿಸುವುದುಂಟು. ಚನ್ನಬಸವಣ್ಣನವರು ಚಿದ್ರೂಪರಾಗಿ, ಲಿಂಗಸ್ವರೂಪರಾಗಿ ವೀರಶೈವರಿಗೆ ಮಂತ್ರಮೂರ್ತಿಗಳಾಗಿರುವರು. ಅವರ ಬಗೆಗೆ ಭಕ್ತಿಭಾವವನ್ನು ವ್ಯಕ್ತಪಡಿಸಿದ ಶರಣರು, ಅನೇಕ ವೀರಶೈವ ಕವಿಗಳು ಕಾವ್ಯಾರಂಬದಲ್ಲಿ ಚನ್ನಬಸವಣ್ಣನವರು ಹೆಸರನ್ನೆತ್ತದೆ ತಮ್ಮ ಕಾವ್ಯವನ್ನು ಆರಂಭಿಸುವಂತಿಲ್ಲ. ಅನೇಕ ಕಾವ್ಯಗಳಲ್ಲಿ ಚನ್ನಬಸವಣ್ಣನವರ ಚರಿತ್ರೆ ಬಿಡಿಯಾಗಿಯೋ ಇಡಿಯಾಗಿಯೋ ಬಂದಿರುವುದನ್ನು ಕಾಣುತ್ತೇವೆ. ಚನ್ನಬಸವ ಪುರಾಣವಂತೂ ಅವರ ದಿವ್ಯ ವ್ಯಕ್ತಿತ್ವವನ್ನು ಕಂಡರಿಸುದಕ್ಕಾಗಿ ಹುಟ್ಟಿದ ಮಹಾಕಾವ್ಯ. ಚನ್ನಬಸವಾಷ್ಟಕ, ಚನ್ನಬಸವರಗಳೆ, ಮುಂತಾದ ಅನೇಕ ಕೃತಿಗಳೂ ಹಾಡುಗಳೂ ಹುಟ್ಟಿ ಬೆಳೆದಿವೆ. ಜನಜೀವನದಲ್ಲಿ ಅವರು ಬೆರೆತಿರುವುದರಿಂದ ಅನೇಕ ಜಾನಪದ ಕೃತಿಗಳೂ ಚನ್ನಬಸವಣ್ಣನವರ ಬಗೆಗೆ ಮೈದಾಳಿವೆ. ಹೀಗೆ ಶರಣರೂ ಕವಿಗಳೂ ಚನ್ನಬಸವಣ್ಣನವರನ್ನು ವಿವಿಧಮುಖವಾಗಿ ಕೊಂಡಾಡಿರುವುದನ್ನು ಕೆಳಗೆ ಕಾಣಬಹುದು.

❐

* ಚೆನ್ನಬಸವಣ್ಣನವರು, ಲೇ. ಡಾ. ಆರ್.ಸಿ. ಹಿರೇಮಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೫.

ಚನ್ನಬಸವಣ್ಣ – ಜ್ಞಾನಯೋಗ

●

ಡಾ॥ ಬಿ.ವ್ಹಿ. ಮಲ್ಲಾಪುರ

ಹನ್ನೆರಡನೆಯ ಶತಮಾನದ ಅಂದಿನ ಆ ಸಂದರ್ಭ, ಧಾರ್ಮಿಕ ಸಾಮಾಜಿಕ ಹಾಗೂ ಆರ್ಥಿಕ ಅರಾಜಕತೆಯಿಂದ ವಿಷಮಿಸಿದ್ದಂತೆ, ತುಂಬಾ ಪ್ರಾಚೀನಕಾಲದಿಂದಲೂ ಆಚರಣೆಯಲ್ಲಿದ್ದು, ಕಾಲಕಾಲಕ್ಕೆ ಪ್ರಗತಿಪರವಾಗಿ ಬೆಳೆಯುತ್ತ ಹಾಗೆಯೆ ಬದಲಾವಣೆಗೊಳ್ಳುತ್ತ ಬಂದ, ತತ್ತ್ವ ಸಾಧನೆಯ ಪ್ರಮುಖ ಮಾರ್ಗಗಳಲ್ಲಿ ಒಂದಾದ ಯೋಗದ ಬಗೆಗೂ ಒಂದು ರೀತಿಯ ಗೊಂದಲವುಂಟಾಗಿತ್ತು. 'ಯೋಗವೆಂದರೆ ಅದೊಂದು ಮಾಯಾವಿದ್ಯೆ, ಮಾಟ, ಅದನ್ನು ಸಾಧಿಸುವುದು ತುಂಬಾ ಕಷ್ಟ, ಸಾಮಾನ್ಯರಿಗೆ ಅದು ಸಾಧ್ಯವಲ್ಲ, ಅತ್ಯಂತ ರಹಸ್ಯವಿದ್ಯೆಯಾದುದರಿಂದ ಅದನ್ನು ತಿಳಿಸಿ ಹೇಳಲು ಬರುವುದಿಲ್ಲ, ತಿಳಿಸಿದರೆ ತಿಳಿಯುವುದೂ ಇಲ್ಲ, ಹಾಗೆ ಹೀಗೆ' – ಮುಂತಾಗಿ ಕೆಲವು ಜನ ಸ್ವಾರ್ಥಿಗಳು ಯೋಗದ ಬಗ್ಗೆ ನಡೆಸಿದ ತಪ್ಪು ಪ್ರಚಾರ. ಕೆಲವು ಜನ ಗ್ರಂಥಕಾರರು ತಿಳಿದೋ ತಿಳಿಯದೆಯೋ ತಮ್ಮ ಕೃತಿಗಳಲ್ಲಿ ವ್ಯಕ್ತಪಡಿಸಿದ ಅಸಂಗತ ಅಸಂಬದ್ಧ ಅಭಿಪ್ರಾಯಗಳು, ಹಾಗೆಯೆ ಯೋಗಸಿದ್ಧರೆಂದು ಹೇಳಿಕೊಳ್ಳುವ ಕೆಲವರ ಬೀಭತ್ಸ, ಆಚರಣೆ – ಇತ್ಯಾದಿಗಳಿಂದಾಗಿ 'ಯೋಗ' ಎಂದರೇನೆ ಸಾಮಾನ್ಯ ಜನತೆ ಬೆಚ್ಚಿಬೀಳುವಂತಾಗಿತ್ತು. "ಹಠಯೋಗಲಂಬಿಕೆ ಎಂದು ಆಕುಂಚನವಂಮಾಡಿ, ವಜ್ರ ಅಮರಿಯ ಕಲ್ಪವೆಂದು ಮಲಮೂತ್ರಂಗಳ ಸೇವಿಸುತ, ಇದು ಪೂರ್ವ ನವನಾಥಸಿದ್ಧರ ಮತೋಕ್ತವೆಂದು ಕಾಪಾಲಿಕಾಚರಣೆಯ ನಾಚರಿಸುವವರಲ್ಲ ಶರಣರು" ಎಂಬ ಪ್ರಭುವಾಣಿಯನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ಇಂತಹ ಒಂದು ಪರಿಸ್ಥಿತಿಯಲ್ಲಿ ಸಮಗ್ರಕ್ರಾಂತಿಯ ಹರಿಕಾರರಾದ ಶಿವಶರಣರು ತಾವು ಕೈಗೆತ್ತಿಕೊಂಡ ಸಮಾಜೋಧಾರ್ಮಿಕ ಮೌಲ್ಯಗಳ ಪುನರುತ್ಥಾನದ ಅಂಗವಾಗಿ ಯೋಗದ ಬಗೆಗೂ ಪುನರಾಲೋಚನೆ ಮಾಡಬೇಕಾದುದು ಅನಿವಾರ್ಯವಾಗಿತ್ತು, ಅಂದಿನ ಅಗತ್ಯವೂ ಆಗಿತ್ತು. ಆ ಮೊದಲು ನಿಗಮಾಗಮ, ಉಪನಿಷತ್ತು, ಭಗವದ್ಗೀತೆ ಮತ್ತು ಇತರ ಹಲವಾರು ಶಾಸ್ತ್ರಗ್ರಂಥಗಳಲ್ಲಿ ಪ್ರತಿಪಾದನೆಗೊಂಡಿರುವ ಯೋಗದ ಬಗೆಗಿನ ವಿಚಾರಗಳನ್ನು ಚೆನ್ನಾಗಿ ಮಥಿಸಿ, ತಮ್ಮ ಅತ್ಯಂತಿಕ ಉದ್ದೇಶಕ್ಕೆ ಪೋಷಕವಾಗುವಂತಹವುಗಳನ್ನು ಸ್ವೀಕರಿಸಿ, ಸಮನ್ವಯಗೊಳಿಸಿ, ಕೆಲವು ಪಾರಿಭಾಷಿಕ ಪದಗಳಿಗೆ ತಮ್ಮ ಸಿದ್ಧಾಂತದ ಹಿನ್ನೆಲೆಯಲ್ಲಿ

ಹೊಸ ಹೊಸ ಅರ್ಥಗಳನ್ನು ಪರಿಕಲ್ಪಿಸಿ, ಎಲ್ಲಕ್ಕಿಂತ ಮುಖ್ಯವಾಗಿ ಸ್ವಾನುಭವದ ಬೆಳಕಿನಲ್ಲಿ ತಮ್ಮದೇ ಆದ ಒಂದು ಹೊಸ ಯೋಗಪದ್ಧತಿಯನ್ನು ಶಿವಶರಣರು ರೂಪಿಸಿದರು. ಅದನ್ನೇ ಶಿವಯೋಗವೆಂದು ಸಾಮಾನ್ಯವಾಗಿ ಕರೆಯಲಾಗುತ್ತದೆ. ಪಾರಮೇಶ್ವರತಂತ್ರದಲ್ಲಿ[೧] "ವೀರಶೈವ ಮತಸ್ಥಸ್ಯ ಜ್ಞಾನಯೋಗೋ ಹಿ ಸಾಧನಂ" ಎಂಬ ಮಾತು ಬರುತ್ತದೆ. ಆದರೆ ಶಿವಶರಣಪ್ರತಿಪಾದಿತ ಲಿಂಗಾಂಗಸಾಮರಸ್ಯರೂಪದ ಯೋಗಕ್ಕಿಂತ ಆಗಮೋಕ್ತಶಿವಯೋಗ ಭಿನ್ನವಾಗಿದೆ. ಹೀಗೆ ಆಗಮೋಕ್ತ 'ಶಿವಯೋಗ'ದಿಂದ ಭಿನ್ನವಾದ ಇದನ್ನು ಶಿವಶರಣಪ್ರತಿಪಾದಿತ ಶಿವಯೋಗ, ಇನ್ನೂ ಅರ್ಥಪೂರ್ಣವಾಗಿ 'ಲಿಂಗಾಂಗಯೋಗ' ಎಂದು ಕರೆಯುವುದು ಸಮಂಜಸವೆನಿಸುತ್ತದೆ. ಸಮಾಜದ ವಿವಿಧ ಕ್ಷೇತ್ರಗಳಿಂದ ವಿವಿಧ ಸ್ತರಗಳಿಂದ ಬಂದ ಹಲವಾರು ಜನ ಅನುಭಾವಿಗಳು ಅನುಭವ ಮಂಟಪದಂತಹದ ಒಂದು ವೇದಿಕೆಯ ಮೇಲೆ ಕುಳಿತು ನಡೆಸಿದ. ಚಿಂತನ ಮಥನಗಳ ಹಿನ್ನೆಲೆಯಲ್ಲಿ ಶಿವಶರಣರ ಈ 'ಲಿಂಗಾಂಗಯೋಗ' ನಿರ್ಣಯಗೊಂಡಿರಬಹುದಾದ ಪ್ರಯುಕ್ತ ಅದಕ್ಕೆ ಸಮಷ್ಟಿಯ ಒಪ್ಪಿಗೆಯ ಮುದ್ರೆ ಬಿದ್ದರಲೂ ಸಾಕು.

ಶಿವರಶರಣ ಪ್ರತಿಪಾದಿತ ಶಿವಯೋಗನಿರ್ಣಯದಲ್ಲಿ ಚನ್ನಬಸವಣ್ಣನದು ಎದ್ದು ಕಾಣುವ ಹೆಸರು. ಷಡುಸ್ಥಲವನುದ್ಧರಿಸಿದ ಸಮ್ಯಗ್‌ಜ್ಞಾನಿ ಚನ್ನಬಸವಣ್ಣ, ವೀರಶೈವವು ಶಿವಯೋಗವನ್ನು ಷಡುಸ್ಥಲದಲ್ಲಿ ಅಳವಡಿಸಿದ ಪರಿಯನ್ನು ನೆನೆದಾಗ ಮೇಲಿನ ಹೇಳಿಕೆಗೆ ಸಮರ್ಥನೆ ದೊರೆಯುತ್ತದೆ. ಯೋಗವನ್ನು ಷಟ್‌ಸ್ಥಲಾತ್ಮಕವಾಗಿ ಮಾಡಿದುದು ಅಧ್ಯಾತ್ಮಿಕ ಪ್ರಪಂಚದಲ್ಲಿಯೆ ಹೊಸದು. ಹೀಗೆ ಯೋಗಾಚಾರದಲ್ಲಿ ಹೊಸ ಆಯಾಮವೊಂದನ್ನು ತೆರೆದು ತೋರಿದ ಕೀರ್ತಿ ಚನ್ನಬಸವಣ್ಣನಿಗೆ ಸಲ್ಲುತ್ತದೆ. ಅಧ್ಯಾತ್ಮ ಸರ್ವರಿಗೂ ಸಾಧ್ಯವಾಗಬೇಕೆಂಬ ಸದುದ್ದೇಶದಿಂದ ಷಟ್‌ಸ್ಥಲವನ್ನು ನಿತ್ಯಜೀವನದ ಆಚರಣೆಯಲ್ಲಿ ಅಳವಡಿಸಿರುವುದನ್ನು ಈಗಾಗಲೇ ಹಲವಾರು ಜನ ವಿದ್ವಾಂಸರು ಗುರುತಿಸಿದ್ದಾರೆ. ಷಟ್‌ಸ್ಥಲಾಚರಣೆಯಲ್ಲಿಯೆ ಶಿವಯೋಗದ ಆಚರಣೆಯನ್ನು ಕ್ರಮಬದ್ಧವಾಗಿ ಯೋಜಿಸಿರುವುದರಿಂದ ಸಾಧಕನ ದಿನನಿತ್ಯದ ಆಚರಣೆಯಲ್ಲಿ ಸಹಜವಾಗಿಯೇ ಶಿವಯೋಗವೂ ಅಳವಟ್ಟಂತಾಗಿದೆ. ಜಿತೇಂದ್ರಿಯರ ಧರ್ಮವೆಂದೂ, ಸರ್ವೇಂದ್ರಿಯಗಳ ನಿಗ್ರಹದ ಮೂಲಕ ಕಷ್ಟಸಾಧ್ಯವೆಂದೂ ಪರಿಗಣಿತವಾಗಿದ್ದ ಜ್ಞಾನಯೋಗವು ಕೂಡ, ಇದರಿಂದಾಗಿ ಸರಳೀಕರಣಗೊಂಡಿತು. ಯೋಗವೆಂದರೆ ಬೆಚ್ಚಿ ಬೀಳುತ್ತಿದ್ದ ಸಾಮಾನ್ಯರೂ ಕೂಡ ಅದರ ಬಗ್ಗೆ ಆಸ್ಥೆ ವಹಿಸುವಂತಾಯಿತು. ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನವೂ ನಡೆಯಿತು. ತತ್ಫಲವಾಗಿ ಶಿವಯೋಗಿಗಳ ಒಂದು ಪರಂಪರೆಯೇ ಏರ್ಪಟ್ಟು, ಅಂದಿನಿಂದ ಇಂದಿನವರೆಗೆ ಅದು ಕೊಂಡಿ ಕಳಚದೆ ಮುಂದುವರಿದುಕೊಂಡು ಬಂದಿದೆ.

ಯೋಗ ಶಬ್ದಕ್ಕೆ ಬೇರೆ ಬೇರೆ ಅರ್ಥಗಳಿದ್ದರೂ, ಕೂಡುವಿಕೆ, ಬೆರೆಯುವಿಕೆ, ಒಂದಾಗುವಿಕೆ, ಎಂಬರ್ಥವನ್ನೇ ಶಿವಶರಣರು 'ಯೋಗ' ಶಬ್ದಕ್ಕಿಟ್ಟುಕೊಂಡಿರುವುದು, ವಚನಗಳ ಅಧ್ಯಯನದಿಂದ ತಿಳಿದುಬರುತ್ತದೆ. ಶಿವಯೋಗದ ಅತ್ಯಂತಿಕ ಉದ್ದೇಶ ಲಿಂಗಾಂಗಸಾಮರಸ್ಯ, ಇಲ್ಲಿ ಲಿಂಗ, ಅಂಗಳು ಪರಸ್ಪರ ಒಂದೊರೊಳಗೊಂದು ಒಡವೆರತು ಬೇರಿಲ್ಲವಾಗುತ್ತವೆ. ಶಿವಶರಣಪ್ರತಿಪಾದಿತ ಈ ಲಿಂಗಾಂಗಸಾಮರಸ್ಯರೂಪದ 'ಶಿವಯೋಗ', ಪರಸ್ಪರ ಅವಿನಾಭಾವಸಂಬಂಧವಿರುವ ಯೋಗತ್ರಯಗಳ ಒಂದು ಮಹಾಸಂಪುಟ, ಸಮನ್ವಯಸಂಪುಟ. ಭಕ್ತಿ, ಕರ್ಮ ಅಥವಾ ಕಾಯಕ ಮತ್ತು ಜ್ಞಾನ ಯೋಗಗಳ ಒಂದು ತ್ರಿಪುಟ, ಶಿವಯೋಗ. ಇಲ್ಲಿ ಭಕ್ತಿ, ಜ್ಞಾನ,

ಕ್ರಿಯೆಗಳು ಪರಸ್ಪರ ಪೂರಕ, ಪೋಷಕಗಳಾಗಿ ಸಮನ್ವಯಗೊಳ್ಳುತ್ತವೆ. ಭಕ್ತಿ, ಕ್ರಿಯೆ ಮತ್ತು ಜ್ಞಾನಗಳ ಈ ಬೆಯ ಸಮನ್ವಯವನ್ನು ನಾವು ಭಗವದ್ಗೀತೆಯ ಯೋಗದಲ್ಲಿ ಕಾಣುತ್ತೇವೆ. ಶಿವಶರಣರು ಅದರಿಂದ ಪ್ರಭಾವಿತರಾಗಿದ್ದಾರೆ, ಭಗವದ್ಗೀತೆಯ 'ಜ್ಞಾನಯೋಗ' ತಲೆಬರಹದ ನಾಲ್ಕನೆಯ ಅಧ್ಯಾಯದ ಕೊನೆಯ ಹತ್ತಾರು ಶ್ಲೋಕಗಳಲ್ಲಿ ಜ್ಞಾನವನ್ನು, ಜ್ಞಾನದ ಮಹತಿಯನ್ನು ಮತ್ತು ಜ್ಞಾನಯಜ್ಞವನ್ನು ಕುರಿತು ಕೆಲವು ಮಾತುಗಳು ಬರುತ್ತವೆ. ಅದನ್ನು ಹೀಗೆ ಸಂಗ್ರಹಿಸಬಹುದು.

'ಜ್ಞಾನರೂಪದ ಯಜ್ಞವನ್ನು ದೃಢವ್ರತಿಗಳು ಮಾಡುತ್ತಾರೆ. ದ್ರವ್ಯಮಯ ಯಜ್ಞಕ್ಕಿಂತ ಜ್ಞಾನಯಜ್ಞ ಶ್ರೇಯಸ್ಕರವಾದುದು. ಎಲ್ಲ ಕರ್ಮವು ಜ್ಞಾನದಲ್ಲಿ ನಿಶ್ಶೇಷವಾಗಿ ಪರಿಸಮಾಪ್ತಿ ಹೊಂದುತ್ತದೆ. ತತ್ತ್ವದರ್ಶಿಗಳಾದ ಜ್ಞಾನಿಗಳು ಮಾತ್ರ ಜ್ಞಾನೋಪದೇಶ ಮಾಡುವರು. ದೀರ್ಘದಂಡನ ಮಸ್ಕಾರಗಳಿಂದಲೂ ಅದನ್ನು (ಬ್ರಹ್ಮಜ್ಞಾನವನ್ನು) ತಿಳಿದುಕೊಳ್ಳಬೇಕು. ಜ್ಞಾನವನ್ನು ಪಡೆದುಕೊಂಡರೆ ಮತ್ತೆ ಮತ್ತೆ ಮೋಹವುಂಟಾಗುವುದಿಲ್ಲ. ಜ್ಞಾನದಿಂದ ಎಲ್ಲ ಪ್ರಾಣಿಗಳನ್ನು ಆತ್ಮನಲ್ಲಿಯೂ, ಆತ್ಮನನ್ನು ಪರಮಾತ್ಮನಲ್ಲಿಯೂ ಕಾಣುವಂತಾಗುತ್ತದೆ. ಮಾಡಿದ ಎಲ್ಲ ಪಾಪಗಳನ್ನು ಜ್ಞಾನವೆಂಬ ನಾವೆಯಿಂದ ದಾಟಬಹುದು. ಪ್ರಜ್ವಲಿಸುವ ಅಗ್ನಿ ಕಟ್ಟಿಗೆಗಳನ್ನು ಸುಟ್ಟು ಹೇಗೆ ಬೂದಿಮಾಡುತ್ತದೆಯೊ, ಹಾಗೆ ಜ್ಞಾನವೆಂಬ ಅಗ್ನಿ ಕರ್ಮಗಳನ್ನೆಲ್ಲ ಭಸ್ಮಮಾಡಿಬಿಡುತ್ತದೆ. ಈ ಪ್ರಪಂಚದಲ್ಲಿ ಜ್ಞಾನಕ್ಕೆ ಸಮಾನವಾದ ಮತ್ತೊಂದು ಪವಿತ್ರವಸ್ತುವಿಲ್ಲ. ಕಾಲಕ್ರಮದಲ್ಲಿ, ಯೋಗಸಿದ್ಧಿ ಹೊಂದಿದವನು ತಾನೇ ತನ್ನಲ್ಲಿ ಜ್ಞಾನವನ್ನು ಪಡೆಯುತ್ತಾನೆ. ಶ್ರದ್ಧೆ, ತತ್ಪರತೆ, ಜಿತೇಂದ್ರಿಯತ್ವವುಳ್ಳವನು ಮಾತ್ರ ಜ್ಞಾನವನ್ನು ಹೊಂದುತ್ತಾನೆ. ಹಾಗೆ ಹೊಂದಿ ಶೀಘ್ರದಲ್ಲಿಯೆ ಪರಮ ಶಾಂತಿ ಪಡೆಯುತ್ತಾನೆ. ಜ್ಞಾನವಿಲ್ಲದವನೂ, ಶ್ರದ್ಧೆಯಿಲ್ಲದವನೂ, ಸಂಶಯಾತ್ಮನೂ ನಾಶಹೊಂದುತ್ತಾನೆ. ಸಂಶಯಾತ್ಮನಿಗೆ ಈ ಲೋಕವೂ ಇಲ್ಲ, ಪರಲೋಕವೂ ಇಲ್ಲ, ಸುಖವೂ ಇಲ್ಲ. ಯೋಗದಿಂದ ಕರ್ಮತ್ಯಾಗಮಾಡಿದವನನ್ನೂ, ಜ್ಞಾನದಿಂದ ಸಂಶಯ ನಾಶಪಡಿಸಿದವನನ್ನೂ, ಆತ್ಮವಂತನನ್ನೂ ಕರ್ಮಗಳು ಬಂಧಿಸುವುದಿಲ್ಲ. ಆದುದರಿಂದ ಅಜ್ಞಾನದ ಫಲವಾಗಿ ಹುಟ್ಟಿ, ಮನಸ್ಸಿನಲ್ಲಿ ಮನೆಮಾಡಿರುವ ಆತ್ಮ ವಿಷಯದ ಸಂಶಯವನ್ನು ಜ್ಞಾನವೆಂಬ ಕತ್ತಿಯಿಂದ ಕತ್ತರಿಸಿ ಯೋಗ (ಕರ್ಮಯೋಗ)ವನ್ನು ಅನುಷ್ಠಾನ ಮಾಡಬೇಕು.'

ಭಗವದ್ಗೀತೆ ಹೇಳುವ ಈ ಮಾತುಗಳಲ್ಲಿ ಕೆಲವಾದರೂ ವೀರಶೈವಕ್ಕೆ ಒಪ್ಪಿತ ಮಂತ್ರಯೋಗ, ಲಯಯೋಗ, ಹಠಯೋಗ, ಪಾತಂಜಲಯೋಗ, ಮುಖ್ಯವಾಗಿ ರಾಜಯೋಗದಂತಹ ಪ್ರಾಚೀನಯೋಗಗಳ ಹಲವಂಶಗಳನ್ನು ಶಿವಶರಣಪ್ರತಿಪಾದಿತ ಶಿವಯೋಗ ಸ್ವೀಕರಿಸಿದೆ. ಆದರೆ ಇಲ್ಲಿ ಸಾಧನೆ ನಡೆಯುವುದು ವೀರಶೈವಕ್ಕೇನೇ ವಿಶಿಷ್ಟವಾಗಿರುವ ಸ್ಥಲಸಿದ್ಧಾಂತದ ಹಿನ್ನೆಲೆಯಲ್ಲಿ – ನಮ್ಮ ಚೈತನ್ಯದ ಕುರುಹಾದ, ಗುರುದತ್ತವಾದ ಇಷ್ಟಲಿಂಗದ ಅನುಸಂಧಾನದ ಮೂಲಕ, ಇದರಿಂದಾಗಿ ಶಿವಶರಣ ಪ್ರತಿಪಾದಿತ ಶಿವಯೋಗ ಇತರ ಯೋಗಗಳಿಂದ ಭಿನ್ನವಾಗಿದೆ.

ಮೇಲೆ ಹೇಳಿದಂತೆ ಭಕ್ತನ ಜ್ಞಾನಕರ್ಮಗಳು ಲಿಂಗಾಂಗಯೋಗದ ಅವಿಭಾಜ್ಯ ಅಂಗಗಳಾಗಿದ್ದು, ಅದರೊಡನೆ ಅವು ಅವಿನಾಭಾವಸಂಬಂಧ ಹೊಂದಿವೆ. ಆದುದರಿಂದ ಅವುಗಳನ್ನು ಒಂದರಿಂದೊಂದು ಬೇರ್ಪಡಿಸಿ ವಿವರಿಸದೆ ಶಿವಯೋಗದ ಅಂಗವಾಗಿಯೆ ಪ್ರತಿಪಾದಿಸುವುದು ರೂಢಿ. ವೀರಶೈವದಲ್ಲಿ ಭಕ್ತಿಯ ಪರಿಕಲ್ಪನೆ ಉಳಿದೆಲ್ಲ ಭಾರತೀಯ

ಸಿದ್ಧಾಂತಗಳಲ್ಲಿರುವುದಕ್ಕಿಂತ ಭಿನ್ನವಾಗಿದೆ, ವಿಶಿಷ್ಟವಾಗಿದೆ. ವೀರಶೈವದ ಪ್ರಕಾರ ಶಿವಾಂಶಸಂಭೂತನಾದ ಅಂಗನಲ್ಲಿ ಹುದುಗಿರುವ ಶಿವಶಕ್ತಿಯೆ ಭಕ್ತಿ, ಆ ಭಕ್ತಿಶಕ್ತಿಯ ವಿಕಾಸವೇ ಷಟ್‌ಸ್ಥಲದ ಉದ್ದೇ. ಶಿವಯೋಗಕ್ಕೂ ಕೂಡ ಭಕ್ತಿವಿಕಾಸವೆ ಮುಖ್ಯ, ಏಕೆಂದರೆ ವಿಕಾಸಗೊಂಡ ಭಕ್ತಿಯು ಶಿವಶಕ್ತಿಯಲ್ಲಿ ಒಂದಾಗಲು ಸಾದ್ಯ. ಶಕ್ತಿ-ಭಕ್ತಿಗಳ ಸಂಯೋಗದ ಶಿವಶರಣರ ಪ್ರಕಾರ ಶಿವಯೋಗ ಅಥವಾ ಲಿಂಗಾಂಗಯೋಗ, ಆದುದರಿಂದ ಶಿವಯೋಗದಲ್ಲಿ 'ಭಕ್ತಿ'ಯು ಸಾಧನೆಯು ಉದ್ದಕ್ಕೂ ಓತಪ್ರೋತವಾಗಿ ಇದ್ದೇ ಇರುತ್ತದೆ. ವಿಕಾಸಗೊಳ್ಳುತ್ತಲೇ ಹೋಗುತ್ತದೆ. ಕೆಲವರು, ವೀರಶೈವದಲ್ಲಿ ಭಕ್ತಿಗಿರುವ ಮಹತ್ವವನ್ನು ಪರಿಗಣಿಸಿ ವೀರಶೈವಯೋಗವನ್ನು ಭಕ್ತಿಯೋಗವೆಂದು ಕರೆದಿರುವಲ್ಲಿ ಅರ್ಥವಿದೆ. ವೀರಶೈವರಿಗೆ ಭಕ್ತಿಯ ಪಂಚಮಪುರುಷಾರ್ಥ, ಭಕ್ತಿಯ ವಿಕಾಸಕ್ಕೆ ಜ್ಞಾನ ಕ್ರಿಯೆಗಳು ಸಾಧಕಗಳಾಗಿ ನಿಲ್ಲುತ್ತವೆ.

ಶಿವಯೋಗದಲ್ಲಿ ಜ್ಞಾನಕ್ರಿಯೆಗಳು ಸಮನ್ವಯಗೊಂಡಿರುವುದು ತುಂಬಾ ಅವಶ್ಯವೆನ್ನುತ್ತಾನೆ ಚನ್ನಬಸವಣ್ಣ.

> **'ಅಂತರಂಗದ ಅರಿವು, ಬಹಿರಂಗದ ಕ್ರಿಯೆ,**
> **ಈ ಉಭಯಸಂಪುಟವೊಂದಾದ ಶರಣಂಗೆ**
> **ಹಿಂಗಿತ್ತು ತನುಸೂತಕ, ಹಿಂಗಿತ್ತು ಮನಸೂತಕ ;**
> **ಕೂಡಲ ಚನ್ನಸಂಗಯ್ಯನಲ್ಲಿ ಸಂಗವಾದುದು ಸರ್ವೇಂದ್ರೀಯ.**[೧]

ಈ ವಚನದಲ್ಲಿ, ತನುಸೂತಕ ಮನಸೂತಕಗಳು ಹಿಂಗಿ ಸರ್ವೇಂದ್ರಿಯಗಳಿಗೆ ಸಂಗಸಂಬಂಧವುಂಟಾಗಲು ಜ್ಞಾನ ಕ್ರಿಯೆಗಳ ಸಮನ್ವಯ ಅವಶ್ಯವೆಂಬದುನ್ನು ಪ್ರತಿಪಾದಿಸಲಾಗಿದೆ. "ಕ್ರಿಯೆಯ ಜ್ಞಾನ, ಆ ಜ್ಞಾನವೆ ಕ್ರಿಯೆ, ಜ್ಞಾನವೆಂದಡೆ ತಿಳಿಯುವುದು, ಕ್ರಿಯೆಯೆಂದಡೆ ತಿಳಿದಂತೆ ಮಾಡುವುದು, ಪರಸ್ತ್ರೀಯ ಭೋಗಿಸಬಾರದೆಂಬುದೆ ಜ್ಞಾನ, ಅದರಂತೆ ಆಚರಿಸುವುದೆ ಕ್ರಿಯೆ. ಅಂತು ಆಚರಿಸದಿದ್ದಡೆ ಅದೇ ಅಜ್ಞಾನ ನೋಡಾ, ಕೂಡಲ ಚನ್ನಸಂಗಮದೇವಾ" [೨] ಎಂಬ ವಚನದಲ್ಲಿ ಚನ್ನಬಸವಣ್ಣ ಕ್ರಿಯೆ - ಜ್ಞಾನಗಳಲ್ಲಿ ಅಭೇದವನ್ನು ಕಲ್ಪಿಸುವ ಮಟ್ಟಕ್ಕೆ ಹೋಗಿರುವುದನ್ನು ಗುರುತಿಸಬಹುದಾಗಿದೆ. ಜ್ಞಾನ-ಕ್ರಿಯೆಗಳು ಸಮನ್ವಯಗೊಳ್ಳದಿದ್ದರೆ, ಅದು ಅಜ್ಞಾನವಾಗಿ ಬಂಧನಕ್ಕೆ ಕಾರಣವಾಗುವುದೆಂಬ ಸೂಚನೆಯೂ ಇಲ್ಲಿದೆ.

ಇನ್ನು ಜ್ಞಾನ ಅಥವಾ ಜ್ಞಾನಯೋಗವನ್ನು ಕುರಿತು ಒಂದೆರಡು ಮಾತು ; ಲಿಂಗಾಂಗಯೋಗದಲ್ಲಿ ಭಕ್ತಿ - ಜ್ಞಾನ - ಕ್ರಿಯೆಗಳು ಎಲ್ಲಾ ಕಾಲದಲ್ಲಿ ಇರುವವಾದರೂ ಆತ್ಮ ವಿಕಾಸದ ವಿವಿಧ ಹಂತಗಳ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ, ಒಂದೊಂದು ಸಂದರ್ಭದಲ್ಲಿ ಇವುಗಳಲ್ಲಿ ಯಾವುದಾದರೂ ಒಂದಕ್ಕೆ ಪ್ರಾಧಾನ್ಯವಿರುವುದು ಕಂಡುಬರುತ್ತದೆ. "ಜ್ಞಾನವನ್ನು ಪ್ರಧಾನವಾಗಿಟ್ಟುಕೊಂಡು ಆ ಮೂಲಕ ತನ್ನಲ್ಲಿರುವ ಶಕ್ತಿಗಳನ್ನು ಎಚ್ಚರಗೊಳಿಸಿ ಲಿಂಗದೊಡನೆ ಸಂಯೋಗ ಸಾಧಿಸುವುದೇ ಜ್ಞಾನಯೋಗ"ವೆಂದು ಹೇಳಬಹುದು. ಷಟ್‌ಸ್ಥಲದ ಮೊದಲ ಮೂರು ಸ್ಥಳಗಳಲ್ಲಿ ಕ್ರಿಯೆಗೆ ಪ್ರಾಧ್ಯಾನ್ಯವಿರುತ್ತದೆ. ಆದರೆ ಅದು ಜ್ಞಾನಯುಕ್ತವಾಗಿರುತ್ತದೆ. ಮುಂದಿನ ಮೂರು ಸ್ಥಲಗಳಲ್ಲಿ ಜ್ಞಾನಕ್ಕೆ ಪ್ರಾಧಾನ್ಯ ಬರುತ್ತದೆ. ಆದರೂ ಅದು ಕ್ರಿಯಾಯುಕ್ತವೂ ಆಗಿರುತ್ತದೆ. ಇದನೇ ಇನ್ನೊಂದು ರೀತಿಯಲ್ಲಿ ಹೀಗೆ ಹೇಳಬಹುದು. ಇಷ್ಟದ ಮೂಲಕ ಪ್ರಾಣಲಿಂಗಾನುಸಂಧಾನದ ಸಂದರ್ಭದಲ್ಲಿ ಜ್ಞಾನ ಪಾತ್ರ ಇರುವುದಾದರೂ ಶಿವಯೋಗದ

ಕೊನೆಯ ಹಂತವಾದ ಭಾವಲಿಂಗಾನುಸಂಧಾನದಲ್ಲಿ ಇದು ಎದ್ದು ಕಾಣುತ್ತದೆ. ಆಗಲೂ ಅಲ್ಲಿ ಭಕ್ತಿ ಕ್ರಿಯೆಗಳಿರುವುದನ್ನು ಮರೆಯಲಾಗದು.

ಅರಿವಿಲ್ಲದುದರ ಪರಿಣಾಮವನ್ನು ವಿವರಿಸುವ ನೆಪದಲ್ಲಿ ಅರಿವಿನ ಮಹತ್ವವನ್ನು,

"ಅರಿವಿಲ್ಲದ ಕಾರಣ ಭವಕ್ಕೆ ಬಂದರು :
ಅರಿವಿಲ್ಲದವಂಗೆ ಆಚಾರವಿಲ್ಲ,
ಆಚಾರವಿಲ್ಲದವಂಗೆ ಗುರುವಿಲ್ಲ
ಗುರುವಿಲ್ಲದವಂಗೆ ಲಿಂಗವಿಲ್ಲ,
ಲಿಂಗವಿಲ್ಲದವಂಗೆ ಜಂಗಮವಿಲ್ಲ
ಜಂಗಮವಿಲ್ಲದವಂಗೆ ಪ್ರಸಾದವಿಲ್ಲ,
ಪ್ರಸಾದವಿಲ್ಲದವಂಗೆ ಗಣತ್ವವಿಲ್ಲ.....[೩]

ಎಂಬ ಚನ್ನಬಸವಣ್ಣನ ಈ ವಚನ ಸ್ಪಷ್ಟಪಡಿಸುತ್ತದೆ. ಅರಿವಿಲ್ಲದವನಿಗೆ ಗುರುಲಿಂಗ ಜಂಗಮಗಳು ಸಿದ್ಧಿಸವೆಂಬ ಮಹತ್ತ್ವಪೂರ್ಣ ಅಂಶವನ್ನು ಈ ವಚನ ಒಳಗೊಂಡಿದೆ. ಚನ್ನಬಸವಣ್ಣನ ಒಂದು ವಚನ ಮತಿಜ್ಞಾನಾದಿ ಆರು ಬಗೆಯ ಜ್ಞಾನಗಳನ್ನು ಉಲ್ಲೇಖಿಸುತ್ತದೆ. ಅದೆಂದರೆ – "....ಮತಿಜ್ಞಾನದ ಭಕ್ತ, ಶ್ರುತಿಜ್ಞಾನವೆ ಮಹೇಶ್ವರ, ಖಂಡಜ್ಞಾನವೆ ಪ್ರಸಾದಿ, ಕೇವಲಜ್ಞಾವೆ ಪ್ರಾಣಲಿಂಗಿಕ, ಜ್ಯೋತಿರ್ಜ್ಞಾನವೆ ಶರಣ, ಮಹಾಜ್ಯೋತಿಜ್ಞಾನವೆ ಐಕ್ಯ. ಈ ಷಟ್‌ಸ್ಥಲದ ನೆಲೆಯ ಬಲ್ಲಾತನೆ ಕೂಡಲ ಚನ್ನಸಂಗಯ್ಯನಲ್ಲಿ ಐಕ್ಯನು"[೪] ಎಂದು ಆಯಾ ಸ್ಥಳಗಳಿಗಿರುವ ಜ್ಞಾನದ ಸಂಬಂಧವನ್ನೂ ವಿಶದಪಡಿಸುತ್ತದೆ.

ಲಿಂಗೋಪಾಸನೆಯ ಅಂಗಗಳಾದ ಲಿಂಗಾರ್ಚನ, ಲಿಂಗನಿರೀಕ್ಷಣ, ಲಿಂಗಧ್ಯಾನಗಳು ಸಮ್ಯಗ್‌ಜ್ಞಾನಾತ್ಮಕವಾಗಿರದಿದ್ದರೆ, ಲಿಂಗಾಂಗಸಾಮರಸ್ಯರೂಪದ ಮುಕ್ತಿ ಸಾಧ್ಯವಿಲ್ಲವೆಂಬುದನ್ನು ಚನ್ನಬಸವಣ್ಣನ ಕೆಳಗಿನ ವಚನ ಅರ್ಥವತ್ತಾದ ಉಪಮೆಗಳ ಮೂಲಕ ಕಾವ್ಯಮಯವಾಗಿ ವಿವರಿಸುತ್ತದೆ.

"ಕತ್ತಲ ಮನೆಯಲ್ಲಿದ ಮನುಜನು
ಜ್ಯೋತಿಯನೆನಿತುಹೊತ್ತು ನೆನೆದಡೆಯೂ ಬೆಳಕಾಗಬಲ್ಲದೆ
ಬೆಂಕಿಯ ಹೊತ್ತಿಸದನ್ನಕ್ಕ?
ಮರದುದಿಯ ಫಲವು ನೋಟಮಾತ್ರಕ್ಕುದುರುವುದೆ
ಹತ್ತಿಹರಿಯದನ್ನಕ್ಕ?
ಹುಟ್ಟುಗುರುಡನು ಕಷ್ಟಪಟ್ಟು ಎಷ್ಟು ಹತ್ತು ನಡೆದಡೆಯೂ
ಇಚ್ಛಿತ ಪಟ್ಟಣವ ಮುಟ್ಟುವನೆ, ಕಣ್ಣುಳ್ಳವನ ಕೈಹಿಡಿಯದನ್ನಕ್ಕ?
ಹಾಂಗೆ, – ಸಮ್ಯಗ್‌ಜ್ಞಾನಾತ್ಮಕವಾದ
ಲಿಂಗಾರ್ಚನ, ಲಿಂಗನಿರೀಕ್ಷಣ, ಲಿಂಗಧ್ಯಾನಗಳಿಲ್ಲದೆ
ಆ ನೆನಹು, ನಿರೀಕ್ಷಣೆ, ಪೂಜೆ ಇವುಗಳೊಂದೊಂದೆ
ಮುಕ್ತಿಯನೀವವೆಂಬ ಯುಕ್ತಿಗೆಟ್ಟ ಮಂದಮತಿಗಳ ಮೆಚ್ಚುವನೆ
ಕೂಡಲಚನ್ನಸಂಗಮದೇವನು?[೫]

ಸಮ್ಯಗ್‌ಧ್ಯಾನದ ಮಹತಿಯನ್ನು ಈ ವಚನ ಚೆನ್ನಾಗಿ ಮನದಟ್ಟು ಮಾಡಿಕೊಡುತ್ತದೆ, ಚನ್ನಬಸವಣ್ಣನ ಇನ್ನೊಂದು ವಚನ ಯಾವ ಯಾವ ಲಿಂಗದರುಶನ ಎಲ್ಲಿ ಎಂಬುದನ್ನು ವಿವರಿಸುತ್ತ "ಮುಖಲಿಂಗದರುಶನ ಜಂಗದಲ್ಲಿ, ಭಾವದಲಿಂಗದರುಶನ ಮನದಲ್ಲಿ,

ಸ್ವಯಂಲಿಂಗದರ್ಶನ ಕಾಯದಲ್ಲಿ" ಎಂದು ಹೇಳಿ ಕೊನೆಗೆ "ಈ ತ್ರಿವಿಧಲಿಂಗದರುಶನ ಜ್ಞಾನದಲ್ಲಿ" ಎಂದು ತಿಳಿಸುತ್ತದೆ (ವ. ೩೩೫). "ಜ್ಞಾನಸಂಸಾರವಿಲ್ಲದೆ ಭವಹರಿಯದು" ಅರಿವಿಲ್ಲದವನಿಗೆ ಅರ್ಚನೆ ಘಟಿಸದು. – ಮುಂತಾಗಿ ಅರಿವಿನ ಮಹಿಮೆ ಹಾಗೂ ಮಹತ್ವವನ್ನು ಹೇಳುವ ಇಂತಹ ಸೂತ್ರಪ್ರಾಯವಾದ ಮಾತುಗಳು ಚನ್ನಬಸವಣ್ಣನ ವಚನಗಳಲ್ಲಿ ಹಲವಾರೆಡೆ ಕಾಣಿಸಿಕೊಳ್ಳುತ್ತವೆ.

ಜ್ಞಾನದೀಪ್ತಿಯನ್ನು ಬೆಳಗುವ ತೈಲ ನಮಗೆ ಎಲ್ಲಿಂದ ದೊರೆಯುತ್ತದೆಂಬ ಗುಟ್ಟನ್ನೂ ಚನ್ನಬಸವಣ್ಣ ಹೇಳಿಕೊಟ್ಟಿದ್ದಾನೆ.

"ಜ್ಞಾನದೀಪ್ತಿಯ ಬೆಳಗುವ ತೈಲವಾವುದೆಂದಡೆ
ಶಿವಶರಣರ ನುಡಿಗಡಣದ ಒಸರು !
ಆ ಒಸರಿಂಗಲ್ಲದೆ ಜ್ಞಾನಪ್ರಕಾಶವಿಲ್ಲ
ಅದು ತಾನೆಂಬ (ತಾನಾರೆಂಬ?) ನಿಶ್ಚಯವ ತೋರುವುದು,
ಹೀನ ಜಡತೆಯ ಮುಸುಕಿನ ಗ್ರಂಥಿಯನಳಿವುದು
ಭಾನು ಬಂದಡೆ ಕತ್ತಲೆ ಹರಿವಂತೆ
ಬುಧರೊಳು ನೀನಿರಲು ಕರ್ಮ ಹರಿವುದು
ಕೂಡಲ ಚನ್ನಸಂಗಮದೇವಾ"[೬]

ಈ ವಚನದಲ್ಲಿ ಈ ಗುಟ್ಟು ರಟ್ಟಾಗಿದೆ. ಶಿವಶರಣರ ನುಡಿಗಡಣದ ಒಸರು ನಮ್ಮಲ್ಲಿ ಬೆಳಗಬೇಕಾದ ಜ್ಞಾನದೀವಿಗೆಗೆ ತೈಲವಾಗಿದೆ. ಈ ಜ್ಞಾನದೀವಿಗೆ ಬೆಳಗಿದಾಗ ಆತ್ಮ ನನಾವರಿಸಿದ ಹೀನ ಜಡತೆಯ ಮುಸುಕಿನ ಗಂಟು ಸಡಿಲಿ 'ತಾನು' ಆರೆಂಬ ನಿಶ್ಚಯ ಅಥವಾ ಯಥಾರ್ಥಜ್ಞಾನ, ಸಾಧಕನಿಗೆ ಉಂಟಾಗುತ್ತದೆ. ಅದೇ ಶಿವಯೋಗದ ಪಿತ್ತು ಜ್ಞಾನಯೋಗದ ಗೊತ್ತು. ಚನ್ನಬಸವಣ್ಣ ಯಾವ ಅನುಭಾವಬುಧರ ಯಾವ ಶಿವಶರಣರ ನುಡಿಗಡಣದ ಒಸರನ್ನು ತನ್ನ ಜ್ಞಾನದೀಪ್ತಿಗೆ ತೈಲವಾಗಿಸಿದನೊ? ನಮಗಂತೂ ಸಮ್ಯಗ್‌ಜ್ಞಾನಿಯಾದ ಆ ಚನ್ನಬಸವಣ್ಣನ ನುಡಿಗಡಣ ಲಭ್ಯವಿದೆ. ಅದರಲ್ಲಿಯೆ ಜ್ಞಾನ ಯೋಗದ ಒಸರನ್ನು ಹುಡುಕಿಕೊಳ್ಳಬೇಕು.

ಜ್ಞಾನಯೋಗದ ಮೂಲಕ ಲಿಂಗಾಂಗಸಾಮರಸ್ಯ ಸಾಧಿಸಲು, 'ಲಿಂಗ' ಮತ್ತು 'ಅಂಗ'ಗಳ ಬಗೆಗೆ ಸರಿಯಾದ ಜ್ಞಾನವಿರಬೇಕಾದುದು ತುಂಬಾ ಮುಖ್ಯ. ದೀಕ್ಷಾ ಸಂದರ್ಭದಲ್ಲಿ ಗುರುವಿನ ಮೂಲಕ ಲಿಂಗಸ್ಥಲ, ಅಂಗಸ್ಥಲ, ಅಷ್ಟಾವರಣ, ಪಂಚಾಚಾರ, ಉಪಾಸನಾವಿಧಾನ ಇತ್ಯಾದಿಗಳ ಜ್ಞಾನ ದೊರೆತಿರುತ್ತದೆ. ಆ ಆಯತಜ್ಞಾನವನ್ನು ಸ್ವಾಯತಮಾಡಿಕೊಂಡು, ಸನ್ನಿಹಿತವಾಗಿಸಬೇಕು, ಎಂದರೆ ಆ ಜ್ಞಾನವನ್ನು ಸಾಕ್ಷಾತ್ಕರಿಸಿ ಕೊಳ್ಳಬೇಕು. ಅರ್ಚನ ಅರ್ಪಣ ಅನುಭಾವಾದಿಗಳಿಂದ ಅಂತರಂಗದಲ್ಲಿರುವ ಚಿದ್ವಸ್ತು ಪ್ರಕಟವಾಗುತ್ತದೆಂದು ಚನ್ನಬಸವಣ್ಣ ಒಂದೆಡೆ ಹೇಳಿದ್ದಾನೆ. ಈ ಅರ್ಚನ ಅರ್ಪಣ ಅನುಭಾವಾದಿಗಳ ಮೂಲಕ ಇಷ್ಟಲಿಂಗಧ್ಯಾನ, ಪ್ರಾಣಲಿಂಗಧಾರಣ, ಭಾವಲಿಂಗಸಮಾಧಿಗಳನ್ನು ಸಾಧಿಸಬೇಕು. ಸಮಯವನ್ನು ಎಂದರೆ ಧ್ಯಾನ – ಧಾರಣ – ಸಮಾಧಿಗಳ ಏಕತಾನತೆಯನ್ನು ಉದ್ದಿಷ್ಟ ವಸ್ತುವಿನ ಮೇಲಿಟ್ಟು ತೀವ್ರಸಾಧನೆ ನಡೆಸಿದಾಗ ಆ ವಸ್ತುವಿನ ಸಮ್ಯಗ್‌ಜ್ಞಾನ ಸಾಧಕನಿಗೆ ಉಂಟಾಗುತ್ತದೆಂದು ಯೋಗಶಾಸ್ತ್ರ ಹೇಳುತ್ತದೆ. ಒಂದು ವಸ್ತುವಿನ ಸಮ್ಯಗ್‌ಜ್ಞಾನ ಸಾಕ್ಷಾತ್ಕಾರವೆಂದರೆ ಆ ವಸ್ತುವೇ ತಾನಾದಂತೆ. ಶಿವಯೋಗದಲ್ಲಿ ಪ್ರಸಾದಕಾಯನಾಗುವ, ಪ್ರಕಾಶಕಾಯನಾಗುವ,

ಮತ್ತು ಆಕಾಶಕಾಯನಾಗುವ ಮೂರು ಹಂತಗಳನ್ನು ಪ್ರತಿಪಾದಿಸಲಾಗಿದೆ. ಎರಡು ಮತ್ತು ಮೂರನೆಯ ಹಂತಗಳಲ್ಲಿ ಸಾಧಕ ಜ್ಞಾನಯೋಗದ ಮೂಲಕ ಲಿಂಗಾನುಸಂಧಾನ ನಡೆಸಿ ಲಿಂಗವೇ ತಾನಾಗುತ್ತಾನೆ. ಆದುದರಿಂದ ಯಾವ ವಸ್ತುವಿನ ಸಾಕ್ಷಾತ್ಕಾರಕ್ಕಾಗಿ ನಾವುಸಾಧನೆ ನಡೆಸುತ್ತೇವೆಯೊ ಆ ವಸ್ತುವಿನ ಬಗೆಗೆ ಯಥಾರ್ಥಜ್ಞಾನ ಸಾಧಕನಿಗಿರಬೇಕಾದುದು ಮುಖ್ಯವಾಗಿರುತ್ತದೆ. ಜ್ಞಾನಯೋಗದ ಯಶಸ್ಸು ಈ ಯಥಾರ್ಥಜ್ಞಾನವನ್ನವಲಂಬಿಸಿದೆ. ಲಿಂಗದ ಬಗೆಗೆ ಯಥಾರ್ಥಜ್ಞಾನವನ್ನಿಟ್ಟುಕೊಂಡು ಆ ಲಿಂಗದ ಧ್ಯಾನದಲ್ಲಿ ತಲ್ಲೀನತೆ ಸಾಧಿಸಿದರೆ ಕೀಟ ಭ್ರಮರ ನ್ಯಾಯದಂತೆ ಸಾಧಕ ತಾನೇ ಲಿಂಗವಾಗುತ್ತಾನೆ.

ಶಿವಯೋಗಕ್ಕೆ ಅದರ ಅಂಗವಾದ ಜ್ಞಾನಯೋಗಕ್ಕೆ ಸಂಬಂಧಿಸಿದಂತೆ ತಿಳಿದು ಕೊಳ್ಳಬೇಕಾದ ಅಂಶಗಳು ಅನೇಕವಾಗಿವೆ. ಅವುಗಳಲ್ಲಿ ಲಿಂಗ, ಲಿಂಗಗತಶಕ್ತಿ, ಅಂಗ, ಅಂಗಗತಭಕ್ತಿ, ಹಸ್ತ, ಮುಖ, ಪದಾರ್ಥ ಮತ್ತು ಪ್ರಸಾದ ಎಂಬ ಎಂಟು ವಿಷಯಗಳ ಜ್ಞಾನ ಅರ್ಪಣಾವಿಧಾನದ ಮೂಲಕ ಪ್ರಸಾದಕಾಯ ಸಾಧಿಸಲು ಮುಖ್ಯವಾಗಿ ಬೇಕಗುತ್ತವೆ. ಇವೆಲ್ಲವುಗಳ ಸ್ವರೂಪಲಕ್ಷಣಗಳ ವಿವರ ಚನ್ನಬಸವಣ್ಣನ ಅನೇಕ ವಚನಗಳಲ್ಲಿ ಬಂದಿದೆ. ಅವುಗಳನ್ನು ಓದಿದಾಗ ಅಂಗಭೋಗವನ್ನು, ಲಿಂಗಭೋಗವಾಗಿಸಿ ಪ್ರಸಾದಕಾಯರಾಗುವ ತಿಳಿವಳಿಕೆಯುಂಟಾಗುತ್ತದೆ. ಪ್ರಸಾದಯಾಕವನ್ನು ಪ್ರಕಾಶಕಾಯವಾಗಿಸುವ, ಇನ್ನೂ ಮುಂದುವರಿದು ಆಕಾಶಕಾಯವಾಗಿಸುವ ಯೋಗಪ್ರಕ್ರಿಯೆಗೆ ಅವಶ್ಯವೆನಿಸಿದ ದೇಹವಿಜ್ಞಾನಕ್ಕೆ ಸಂಬಂಧಿಸಿದ ನಾಡಿಗಳು, ವಾಯುಗಳು, ಚಕ್ರಗಳು, ಅವುಗಳಿಗಿರುವ ಲಿಂಗಸಂಬಂಧ, ದೃಷ್ಟಿಯೋಗ – ಇವೇ ಮೊದಲಾದವುಗಳ ಸ್ವರೂಪಜ್ಞಾನ ಚನ್ನಬಸವಣ್ಣನ ವಚನಗಳಲ್ಲಿ ನಿಕ್ಷೇಪಗೊಂಡಿದೆ. ಜ್ಞಾನಯೋಗಸಾಧನೆಗೆ ಇದೆಲ್ಲ ತಿಳಿದಿರಬೇಕಾದುದು ಮುಖ್ಯ. ಲಿಂಗದ ಕಲೆ ಅಂತರಂಗಕಕೆ ಹೇಗೆ ವೇಧಿಸುತ್ತದೆಂಬ ಜ್ಞಾನಯೋಗದ ವಿವರವನ್ನೊಳಗೊಂಡ ಚನ್ನಬಸವಣ್ಣನ ಒಂದು ವಚನವನ್ನು ಉದಾಹರಣೆಗಾಗಿ ಇಲ್ಲಿ ನೋಡಬಹುದು;

> **ಲಿಂಗದ ಕಲೆ ಅಂತರಂಗಕ್ಕೆ ವೇಧಿಸುವ ಹಲವು ಸಾಧನಂಗಳಲ್ಲಿ**
> **ಒಂದು ಸಾಧನದಲ್ಲಿ ಹೇಳಿಹೆನು ಕೇಳಿರಯ್ಯಾ :**
> **ಕರದಿಷ್ಟಲಿಂಗದಿ ತೆರೆದಿಟ್ಟ ದೃಷ್ಟಿ ಎವೆ ಹಳಚದಂತಿರ್ದಡೆ,**
> **ಆ ಲಿಂಗವು ಕಂಗಳಲ್ಲಿ ವ್ಯಾಪಿಸುತಿಪ್ಪುತದು.**
> **ಆ ಮಂಗಲಮಯವಾದ ಕಂಗಳಲ್ಲಿ ಮನವನಿರಿಸಿ**
> **ಲಿಂಗನಿರೀಕ್ಷಣೆಯಿಂದ ನೆನೆಯಲು, ಆ ಲಿಂಗಮೂರ್ತಿ ಮನವನಿಂಬುಗೊಂಡು**
> **ಪ್ರಾಣಲಿಂಗವಾಗಿ ಪರಿಣಮಿಸುತಿಪ್ಪುದು**
> **ಬಳಿಕ ಮನೋಮಯಲಿಂಗವನು, ಭೇದವಿಲ್ಲದ ಸುವಿಚಾರದಿಮದ ಪರಿಭಾವಿಸಲು,**
> **ಆ ಲಿಂಗಮೂರ್ತಿ ಭಾವದಲ್ಲಿ ಸಮರಸಗೊಂಡು**
> **ಭಾವಲಿಂಗವಾಗಿ ಕಂಗೊಳಿಸುತ್ತಿಪ್ಪುದು,**
> **ಆ ಭಾವಲಿಂಗವನು ಎಡೆವಿಡದೆ ಭಾವಿಸುತ್ತ, ನೆನಹು ನಿರೀಕ್ಷಣೆಯಿಂದ ತಪ್ಪದಾಚರಿಸಲು,**
> **ಶರಣನು ನಿತ್ಯತೃಪ್ತನಾಗಿ ವಿರಾಜಿಸುತಿಪ್ಪನು,**
> **ಇದೇ ನಮ್ಮ ಕೂಡಲ ಚನ್ನಸಂಗಯ್ಯನೊಡನೆ ಕೂಡುವ ಪರಮೋಪಾಯವು.** [೭]

ಈ ವಚನ – ಇಷ್ಟಲಿಂಗದ ಅನುಸಂಧಾನದಿಂದಲೆ ಪ್ರಾಣ, ಭಾವಲಿಂಗ ಗಳನ್ನು ಪರಿಭಾವಿಸಿ ಸುಖಿಸುವ ವಿವರವನ್ನು ತುಂಬಾ ಪ್ರಭಾವಪೂರ್ಣರೀತಿಯಲ್ಲಿ ಕೊಡುತ್ತಿದೆ.

ಕಣ್ಣು, ಮನ (ಪ್ರಾಣ)ಗಳ ಕ್ರಿಯೆ ಮುಗಿದು ಭಾವಪ್ರಪಂಚಕ್ಕೆ ಸೇರಿದ ಅದ್ವೈತ ಸುಜ್ಞಾನಕ್ರಿಯೆ ಆರಂಭವಾದಾಗ ಯೋಗ, ಜ್ಞಾನಯೋಗಕ್ಕೆ ತಿರುಗುತ್ತದೆ. ಇದನ್ನು ತುಂಬಾ ಪರಿಣಾಮಕಾರಿ ಯಾಗಿ ಇಲ್ಲಿ ಪ್ರತಿಪಾದಿಸಲಾಗಿದೆ. ಜ್ಞಾನಯೋಗಕ್ಕೆ ಸಂಬಂಧಿಸಿದಂತೆ ಇಂತಹ ಮಹತ್ವಪೂರ್ಣ ವಿವರ ನೀಡುವ ಹಲವಾರು ವಚನಗಳನ್ನು ಚನ್ನಬಸವಣ್ಣ ರಚಿಸಿದ್ದಾನೆ. ಅವುಗಳನ್ನು ಪರಿಭಾವಿಸುವುದೇ ಒಂದು ಸೊಗಸು. ಚನ್ನಬಸವಣ್ಣ ನಿಜವಾದ ಅರ್ಥದಲ್ಲಿ ಸಮ್ಯಗ್ ಜ್ಞಾನಿ: ಜ್ಞಾನಯೋಗಿ.

ಯೋಗ, ಜ್ಞಾನಯೋಗ, – ಇವುಗಳಿಗೆ ಸಂಬಂಧಿಸಿದ ಹಲವಾರು ಅಂಶಗಳ ಬಗೆಗೆ ಹೆಚ್ಚಿಗೆ ತಿಳಿಯಬಯಸುವವರು, ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿರುವ "ಚೆನ್ನಬಸವಣ್ಣನವರ ವಚನಗಳು" (೧೯೭೧) ಗ್ರಂಥದಲ್ಲಿಯ ಕೆಳಗಿನ ಸಂಖ್ಯೆಯ ವಚನಗಳನ್ನು ನೋಡಬಹುದು.

1. ಶಿವಯೋಗದ ವಿವರ : 1038
2. ದಶವಾಯುಗಳ ಹೆಸರು, ಅವುಗಳಿರುವ ಸ್ಥಾನ ಮತ್ತು ಅವುಗಳ ಕಾರ್ಯ : 844, 845, 846
3. ದೇಹದಲ್ಲಿರುವ ವಿವಿಧ ಚಕ್ರಗಳ ಸಂಪೂರ್ಣ ವಿವರ : 1068
4. ವೀರಶೈವ 'ಲಿಂಗ'ದ ವಿಶೇಷತೆ : 879
5. ಇಷ್ಟಲಿಂಗ ಪ್ರಾನಲಿಂಗಗಳ ವಿವರ : 138,286
6. ಅರ್ಪಣ ವಿಧಾನ : 560
7. ಇಂದ್ರಿಯಗಳಲ್ಲಿರುವ ಲಿಂಗಗಳಿಗೆ ಅರ್ಪಣೆ : 302
8. ಸರ್ವಾಂಗವೆಲ್ಲ ಲಿಂಗವಾದ ಪರಿಕ್ರಮ : 343
9. ಮಹಾಲಿಂಗವೆ ಗುರುಲಿಂಗ, ಶಿವಲಿಂಗ, ಜಂಗಮಲಿಂಗವಾದ ಬಗೆ : 468
10. ಲಿಂಗದ ನಿರ್ವಚನ : 787
11. ಪ್ರಸಾದ, ಪ್ರಸಾದಿಗಳ ವಿವರ : 742, 743
12. ಯಾವ ತನು ಮತ್ತು ಯಾವ ಭೂತದಲ್ಲಿ ಯಾವ ಲಿಂಗ ಪ್ರತಿಷ್ಠೆಗೊಮಡಿದೆ : 924, 925
13. ಪಂಚಾಚಾರಗಳ ವಿವರ : 1159, 1378
14. ಲಿಂಗಸ್ಥಲ, ಅವುಗಳ ಹಸ್ತ, ಲಿಂಗಸ್ಥಲ, ಅವುಗಳಿಗೆ ಅರ್ಪಿಸಬೇಕಾದ ವಿಷಯ : 1377
15. ಆಚಾರಾದಿ ಲಿಂಗಗಳು ಮತ್ತು ಅವುಗಳ ಅವಾಂತರಭೇದಗಳು : 1440*

ಕೊನೆ ಟಿಪ್ಪಣಿ

೧. ಪಾರಮೇಶ್ವರತಂತ್ರ, ಪ. ೨, ೩೪, ೩೮
೨. ಚನ್ನಬಸವಣ್ಣನವರ ವಚನಗಳು, ವ. ೧೩೦೮
೩. ಅದೇ, ವ. ೧೧೧೭
೪. ಚನ್ನಬಸವಣ್ಣನವರ ವಚನಗಳು, ವ. ೧೩೯೩.
೫. ಅದೇ. ವ, ೧೪೩೩
೬. ಚನ್ನಬಸವಣ್ಣನವರ ವಚನಗಳು. ವ. ೯೨೧
೭. ಅದೇ, ವ. ೧೧೨೭
೮. ಚನ್ನಬಸವಣ್ಣನವರ ವಚನಗಳು, ವ. ೧೦೫೨

* ಚೆನ್ನಬಸವಣ್ಣನವರು ಸಂ. ಜಗದಾಂಬಾ ಮಲ್ಲೇದೇವರು, ಪ್ರ. ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ, ರಾಮಾನುಜ ರಸ್ತೆ, ಮೈಸೂರು–೫೭೦ ೦೦೪, ಪು. ೯೫ ರಿಂದ ೧೦೩, ೧೯೯೧

ಚೆನ್ನಬಸವಣ್ಣನವರ ಷಟ್‌ಸ್ಥಲವಚನ ಸಂಪಾದನೆಯ ನೆಲೆ-ಬೆಲೆಗಳು

●

ಡಾ. ಎಂ. ಎಂ. ಕಲಬುರ್ಗಿ

ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ-ಈ ಮೂವರು ಹನ್ನೆರಡನೆಯ ಶತಮಾನದ ಶರಣಸಿದ್ಧಾಂತದ ಮೂರು ಪ್ರಮುಖಲಕ್ಷಣಗಳನ್ನು ಪ್ರತಿನಿಧಿಸುತ್ತಾರೆ. ಪ್ರಧಾನವಾಗಿ ಬಸವಣ್ಣನವರದು ಸಾಮಾಜಿಕಸಿದ್ಧಾಂತ, ಪ್ರಭುದೇವರದು ಆಧ್ಯಾತ್ಮಿಕಸಿದ್ಧಾಂತ, ಚೆನ್ನಬಸವಣ್ಣನವರದು ಧಾರ್ಮಿಕಸಿದ್ಧಾಂತ. ಇಲ್ಲಿ ಬಸವಣ್ಣನವರು ಮನುಷ್ಯನ ಸಾಮಾಜಿಕ ಜೀವನದ ಬಗ್ಗೆ, ಪ್ರಭುದೇವರು ಮನುಷ್ಯನ ಆಧ್ಯಾತ್ಮಿಕ ಜೀವನದ ಬಗ್ಗೆ ಹೆಚ್ಚು ಮಾತನಾಡಿದರೆ, ಚೆನ್ನಬಸವಣ್ಣನವರು ವೀರಶೈವ ಮನುಷ್ಯನ ಧಾರ್ಮಿಕಜೀವನದ ಬಗ್ಗೆ ಹೆಚ್ಚು ಮಾತನಾಡುತ್ತಾರೆ. ಹೀಗಾಗಿ ಕೆಲವೇ ವಚನಗಳನ್ನು ಹೊರತೆಗದರೆ ಬಸವಣ್ಣ, ಪ್ರಭುದೇವರ ರಚನೆಗಳು ಕ್ರಮವಾಗಿ ಶುದ್ಧ ಸಾಮಾಜಿಕ, ಶುದ್ಧ ಆಧ್ಯಾತ್ಮಿಕ ವಚನಸಂಪುಟಗಳಾಗಿ ಪರಿಣಮಿಸುತ್ತವೆ. ಕೆಲವೇ ಸಾಮಾಜಿಕ, ಆಧ್ಯಾತ್ಮಿಕ ವಚನಗಳನ್ನು ಹೊರತೆಗೆದರೆ ಚೆನ್ನಬಸವಣ್ಣನವರ ಕೃತಿ ಶುದ್ಧ ವೀರಶೈವ ಧಾರ್ಮಿಕ ವಚನಸಂಪುಟವಾಗಿ ಪರಿಣಮಿಸುತ್ತದೆ. ಈ ಕಾರಣದಿಂದಾಗಿ ಚೆನ್ನಬಸವಣ್ಣನವರಿಗೆ ವೀರಶೈವ ಧಾರ್ಮಿಕ ಪರಂಪರೆಯಲ್ಲಿ ಎಲ್ಲರಿಗಿಂತ ಮಿಗಿಲಾದ ಸ್ಥಾನಕೊಡುತ್ತ ಬರಲಾಗಿದೆ. ಇದರ ಫಲವಾಗಿ ವೀರಶೈವದ ಇತಿಹಾಸದುದ್ದಕ್ಕೂ ಬಸವಣ್ಣ, ಪ್ರಭುದೇವರ ಚಿಂತನೆಗಳು ಹಿಂದೆಬಿದ್ದು, ಅವರ ವಚನಗಳು ಧಾರ್ಮಿಕರು ಮಾಡಬಹುದಾದ ಪಾಠಾಂತರ ದಾಳಿಯಿಂದ ದೂರ ಉಳಿದಿವೆ. ಚೆನ್ನಬಸವಣ್ಣನವರ ಚಿಂತನೆಗಳು ಮುಂದೆ ಬಂದು, ಅವರ ವಚನಗಳಿಗೆ ಸಹಜವಾಗಿಯೇ ಎಲ್ಲ ಧಾರ್ಮಿಕ ಕೃತಿಗಳಿಗೆ ಅಂಟಬಹುದಾದ ಪಾಠಾಂತರದೋಷಗಳು ಕಾಲಕ್ರಮದಲ್ಲಿ ಅಂಟಿಕೊಂಡಿವೆ.

ಪರಿಸರ-ಚರಿತ್ರೆ

ಅಕಾಯಚರಿತ್ರೆ ಶರಣರ ಆದರ್ಶ. ಅವರು ತಮ್ಮ ಕಾಯಚರಿತ್ರೆಯನ್ನು ಬರೆಯಲಿಲ್ಲ. ಕವಿಗಳಿಂದ ಬರೆಯಿಸಲೂ ಇಲ್ಲ. ಮುಂಬರುವ ಪೀಳಿಗೆಗೆ ಆದರ್ಶವಾಗಿರಲೆಂದು ಆಮೇಲೆ ಬಂದ ವೀರಶೈವ ಕವಿಗಳು ಶರಣರ ಚರಿತ್ರೆಯನ್ನು ಬರೆಯುತ್ತ ಬಂದರು. ಆದರೆ ಪುರಾಣಪ್ರಜ್ಞೆ ಮತ್ತು ಹದಿನೈದನೆಯ ಶತಮಾನದಲ್ಲಿ ಶರಣರ ಚರಿತ್ರೆಗೆ ಕೊಟ್ಟ ಹೊಸ ತಿರುವು, ಆಕರಗಳ

ಅಭಾವ, ಈ ಅಭಾವವನ್ನು ಕಲ್ಪನೆಯಿಂದ ತುಂಬಿಕೊಂಡ ಪ್ರಮಾದ ಇತ್ಯಾದಿಗಳು ಸೇರಿಕೊಂಡು, ಶರಣರ ಚಾರಿತ್ರಿಕ ಕಾವ್ಯಗಳಲ್ಲಿ ಅನೇಕ ಗೊಂದಲಗಳು (Confusions) ತಲೆಯೆತ್ತಿ ನಿಂತವು.

ಶರಣರ ಜೀವನಚರಿತ್ರೆಗೆ ಸಂಬಂದಿಸಿದ ಆಕರಗಳು ನೋಡಲಿಕ್ಕೆ ವಿಪುಲವಾಗಿದ್ದರೂ ಅದರಲ್ಲಿ ಉಪಯೋಗಕ್ಕೆ ಬಾರದ ಸಾಮಗ್ರಿಯೇ ಹೆಚ್ಚು. ಉಪಯೋಗಕ್ಕೆ ಬರುವ ಸಾಮಗ್ರಿ ಕಡಿಮೆ. ಈ ಕಡಿಮೆ ಸಾಮಗ್ರಿಯಾದರೂ ವೈರುಧ್ಯಗಳಿಂದ ಕೂಡಿರುವುದರಿಂದ ಸಂಶೋಧಕನಿಗೆ ಸಾಮಗ್ರಿಯೇ ಒಂದು ಸಮಸ್ಯೆಯಾಗಿ ನಿಲ್ಲುತ್ತದೆ. ಇದನ್ನು ಬಿಡಿಸಲು ಹೋದರೆ ಅನೇಕ ಹೊಸ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಕೆಲವೊಮ್ಮೆ ಚರಿತ್ರೆಯ ಕೆಲವು ಮಗ್ಗುಲುಗಳನ್ನು ಕಟ್ಟುವುದಕ್ಕೆ ಈ ಸಾಮಗ್ರಿ ಸಾಲದೇ ಹೋಗುತ್ತದೆ. ಇಂಥ ತೊಂದರೆಗಳ ಮಧ್ಯದಲ್ಲಿ ನಿಂತು, ಲಭ್ಯ ಆಕರಗಳ ಸಹಾಯದಿಂದ ಚೆನ್ನಬಸವಣ್ಣನವರ ಚರಿತ್ರೆಯನ್ನು ಹೀಗೆ ರೂಪಿಸಬಹುದು:

ಪ್ರಸಿದ್ಧ ಶರಣರನ್ನೂ ಅಪ್ರಸಿದ್ಧ ಶರಣರನ್ನೂ ಕುರಿತು ಕಾವ್ಯ ಬರೆದಿರುವ ಚರಿತ್ರೆ ಯುಗದ ಹರಿಹರ-ರಾಘವಾಂಕರು ಸುಪ್ರಸಿದ್ಧ ಶರಣರಾದ ಚೆನ್ನಬಸವಣ್ಣನವರ, ಅವರ ತಾಯಿ ನಾಗಲಾಂಬಿಕೆಯರ ಚರಿತ್ರೆ ಹೋಗಲಿ, ತಪ್ಪಿಯೂ ಇವರಿಬ್ಬರ ಹೆಸರನ್ನು ಹೇಳಿಲ್ಲ.[೧] ಈ ಮೌನಕ್ಕೆ ಕಾರಣ ಗೊತ್ತಾಗುತ್ತಿಲ್ಲ. 'ಪುರಾಣಯುಗ'ದ ಭೀಮಕವಿ (ಕ್ರಿ.ಶ.೧೩೬೮)ಯ 'ಬಸವಪುರಾಣ'ದಲ್ಲಿ ಚೆನ್ನಬಸವಣ್ಣನವರ ವಿಷಯ ಬಂದರೂ ತೀರ ಆನುಷಂಗಿಕ, ತೀರ ಸ್ವಲ್ಪ. ಶರಣರ ಸಾಹಿತ್ಯ-ಚರಿತ್ರೆಗಳ ಪುನರುಜ್ಜೀವನ ಸಂದರ್ಭವಾದ ಹದಿನೈದನೆಯ ಶತಮಾನದಲ್ಲಿಯೂ ಚೆನ್ನಬಸವಣ್ಣನವರನ್ನು ಕುರಿತು ಸ್ವತಂತ್ರಕೃತಿ ಹುಟ್ಟದಿರುವುದು ಆಶ್ಚರ್ಯದ ಸಂಗತಿಯಾಗಿದೆ. ಇದನ್ನು ಗಮನಿಸಿದ ವಿರೂಪಾಕ್ಷ ಪಂಡಿತ (೧೫೮೪) ತನ್ನ ಚೆನ್ನಬಸವ ಪುರಾಣದಲ್ಲಿ "ಧರೆಯೊಳಗೆ ಸಕಲ ಶರಣರ ಕಥೆಗಳಂ ಕವೀಶ್ವರರೊಲ್ದು ಪೇಳ್ದರೀ ಚೆನ್ನಬಸವೇಶ್ವರನ ಚರಿತೆಯನದೊರ್ವರುಂ ಪೇಳ್ದುದಿಲ್ಲ" ಎಂಬ ಪೀಠಿಕೆ ಹಾಕಿಕೊಂಡು, ೧೫೮೪ರಷ್ಟು ತಡವಾಗಿ ಚೆನ್ನಬಸವಣ್ಣನವರನ್ನು ಕುರಿತು ಕೃತಿ ರಚಿಸುತ್ತಾನೆ. ಇವನನ್ನು ಬಿಟ್ಟರೆ ಮುಂದೆ ಮತ್ತೆ ಯಾರೊಬ್ಬರೂ ಚೆನ್ನಬಸವಣ್ಣನವರ ವಿಷಯವಾಗಿ ಕೃತಿ ರಚಿಸುವ ಗೋಜಿಗೆ ಹೋಗಲಿಲ್ಲವೆಂಬುದೂ ಕುತೂಹಲದ ಸಂಗತಿಯಾಗಿದೆ. ಕಳೆದ ೮೦೦ ವರ್ಷಗಳ ಅವಧಿಯಲ್ಲಿ ಬಸವಣ್ಣನವರನ್ನು ಕುರಿತು ನೂರಾರು, ಪ್ರಭುದೇವ ಸಿದ್ಧರಾಮರನ್ನು ಕುರಿತು ಹತ್ತಾರು ಕೃತಿಗಳು ಹುಟ್ಟಿದರೆ ಚೆನ್ನಬಸವಣ್ಣನವರನ್ನು ಕುರಿತು ಒಂದೇ ಒಂದು ಕೃತಿ ಹುಟ್ಟಿತು. ಅದೂ ಹೆಸರಿಗೆ ಮಾತ್ರ ಚೆನ್ನಬಸವ ಪುರಾಣ. ಹೀಗೇಕಾಯಿತು? ಎಂಬ ಪ್ರಶ್ನೆಗೆ ಸಂಶೋಧಕರು ಉತ್ತರವನ್ನು ಶೋಧಿಸಬೇಕಾಗಿದೆ.

ಬಾಗೇವಾಡಿ:

ಬಾಗೇವಾಡಿಯ ಮಾದರಸ ಮಾದಲಾಂಬಿಕೆಯರ ಮಗಳೂ ಬಸವಣ್ಣನವರ ಸಹೋದರಿಯೂ ಆದ ನಾಗಲಾಂಬಿಕೆ ಚೆನ್ನಬಸವಣ್ಣನವರ ತಾಯಿ. ಹರಿಹರ ಇವಳ ಹೆಸರನ್ನೇ ಎತ್ತುವುದಿಲ್ಲ. ಹೆಸರು ಹೇಳುವ ಪಾಲ್ಕುರಿಕೆ ಸೋಮನಾಥ ಇವಳನ್ನು ಬಸವಣ್ಣನವರ ಸೋದರಿಯೆಂದು ಕರೆಯುವವನೇ ಹೊರತು, ಅಕ್ಕನೋ ತಂಗಿಯೋ ಸ್ಪಷ್ಟಪಡಿಸುವುದಿಲ್ಲ. ಈ ಕವಿಗಳನ್ನು ಬಿಟ್ಟರೆ ಬಸವಪುರಾಣದ ಭೀಮಕವಿ, ಶೂನ್ಯಸಂಪಾದನೆಯ ಪ್ರಸಾದಿ ಮಹಾದೇವಯ್ಯಗಳು ಇವಳು ಬಸವಣ್ಣನ ತಂಗಿಯೆಂದೇ ಹೇಳುತ್ತಾರೆ. ಭೀಮಕವಿಯು

(೪–೪೯) "ನಿಜವನಿತೆ ಗಂಗಾದೇವಿಯುಂ ತನ್ನನುಜೆ ನಾಗಲದೇವಿಯುಂ" ಸಹಿತ ಬಸವಣ್ಣ ಕೂಡಲಸಂಗಮಕ್ಕೆ ಹೋದನೆನ್ನುತ್ತ ಅನುಜೆ (=ತಂಗಿ) ಪದ ಬಳಸಿರುವನೇ ಹೊರತು, ಅಗ್ರಜೆ (=ಅಕ್ಕ) ಪದವನ್ನಲ್ಲ. ಪ್ರಸಾದಿ ಮಹಾದೇವಯ್ಯನಂತೂ "ತನ್ನಿಂ ಕಿಱಿಯಳಪ್ಪ ನಾಗಲಾಂಬಿಕೆ ಸಹಿತ" ಬಸವಣ್ಣನವರು ಕಪ್ಪಡಿ ಸಂಗಮಕ್ಕೆ ಹೋದರೆಂದು ಸ್ಪಷ್ಟವಾಗಿಯೇ ಹೇಳುತ್ತಾನೆ. ಇಷ್ಟು ಮಹತ್ವದ ಕೃತಿಗಳೇ, ಅದರಲ್ಲಿಯೂ ಪ್ರಾಚೀನತಮಕೃತಿಗಳೇ ನೇರವಾಗಿ ಅವಳನ್ನು ತಂಗಿ ಎಂದಿರುವುದು ಗಮನಾರ್ಹವೆನಿಸಿವೆ. ಬಹುಶಃ ತಂಗಿಯಾಗಿರುವ ಅವಳನ್ನು ಪ್ರೀತಿ–ಗೌರವ ಕಾರಣವಾಗಿ 'ಅಕ್ಕ' ಎಂಬ ವಿಶೇಷಣ ಬಳಸಿ ಅಕ್ಕ+ನಾಗಮ್ಮನೆಂದೇ ಕರೆಯುತ್ತಿರಬಹುದು, ಮಹಾದೇವಿಯನ್ನು 'ಅಕ್ಕ+ಮಹಾದೇವಿ' ಎಂದು ಕರೆದರಂತೆ. ಆದರೆ ೧೫ನೆಯ ಶತಮಾನದ ತರುವಾಯ ಬಂದ ಲಕ್ಕಣದಂಡೇಶ, ಚಾಮರಸ, ಸಿಂಗಿರಾಜ ಮೊದಲಾದವರು ಇಲ್ಲಿಯ 'ಅಕ್ಕ' ಎಂಬ 'ವಿಶೇಷಣ'ವನ್ನು ವಾಚ್ಯಾರ್ಥದಲ್ಲಿ ಸ್ವೀಕರಿಸಿ, ಅವಳನ್ನು ಬಸವಣ್ಣನವರ ಅಕ್ಕನೆಂದೇ ತಪ್ಪಾಗಿ ಭಾವಿಸಿರಬಹುದೇ?

ಉಪನಯನ ಸಂದರ್ಭದಿಂದಲೇ ಬಸವಣ್ಣನವರ ಜೀವನದಲ್ಲಿ ಹೋರಾಟ ಪ್ರಾರಂಭವಾಗುತ್ತದೆ. ಇದರಿಂದಾಗಿ ಅವರು ಅಗ್ರಹಾರದ ಬ್ರಾಹ್ಮಣರ ವಿರೋಧ ಕಟ್ಟಿಕೊಳ್ಳಬೇಕಾಯಿತು. ಹರಿಹರ ಹೇಳುವಂತೆ ಎಳೆವಯಸ್ಸಿನಲ್ಲಿಯೇ ತಂದೆ ತಾಯಿಗಳು ತೀರಿಕೊಳ್ಳುವಲ್ಲಿ ಹಿರಿಯರ ಹಿಡಿತದಿಂದ ಮುಕ್ತನಾದ ಬಸವಣ್ಣ ತನ್ನ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಿರಬಹುದು. ಇದರಿಂದ ಬ್ರಾಹ್ಮಣರ ವಿರೋಧ ಮತ್ತೂ ವರ್ಧಿಸಿತು. ಆಗ ಈ ತಬ್ಬಲಿ ಮಕ್ಕಳು ಬಾಗೇವಾಡಿ ಅಗ್ರಹಾರದಿಂದ ಬಹಿಷ್ಕಾರಕ್ಕೆ ಗುರಿಯಾಗಿರಬಹುದು.

ಒಡೆಯರು ಬಂದರೆ ಗುಡಿ ತೋರಣವ ಕಟ್ಟಿ,
ನಂಟರು ಬಂದಲೆ ಸಮಯವಿಲ್ಲೆನ್ನಿ.
ಅಂದೇಕೆ ಬಾರರು? ನೀರಿಂಗೆ ನೇಣಿಂಗೆ ಹೋಱಾಗಾದಂದು,
'ಸಮಯಾಚಾರ'ಕ್ಕೆ ಒಳಗಾದಂದು.
ಪರುಷ ಮುಟ್ಟಲು ಕಬ್ಬುನ ಸುವರ್ಣವಾಯಿತ್ತು,
ಬಳಿಕ ಬಂಧುಗಳುಂಟೆ? ಕೂಡಲಸಂಗಮದೇವಾ.

ಇತ್ಯಾದಿ ವಚನಗಳಲ್ಲಿ ಬಹಿಷ್ಕಾರಕ್ಕೆ ಗುರಿಯಾಗಿರಬಹುದಾದ ಧ್ವನಿ ಕೇಳಿಸುತ್ತದೆ. ಈ ರೀತಿ ಬಹಿಷ್ಕೃತನಾದ ಬಸವಣ್ಣ ಬ್ರಾಹ್ಮಣರನ್ನು ತ್ಯಜಿಸಿ, ತನ್ನ ಸಹೋದರಿಯೊಂದಿಗೆ ಬಾಗೇವಾಡಿಯಲ್ಲಿಯ 'ಸಮಯಾಚಾರ' ಸಮಾಜವನ್ನು ಪ್ರವೇಶಿಸಿದನೆಂದು ಕಾಣುತ್ತದೆ. ಈ ಸನ್ನಿವೇಶವನ್ನು ಬಸವಪುರಾಣ ಹೀಗೆ ಚಿತ್ರಿಸುತ್ತದೆ.

....ಬಸವಂ ನಿಜಸಹೋದರಿ
ಯೆನಿಪ ನಾಗಾಂಬಿಕೆಯು ತಾನುಂ
ತನಗೆಯಲ್ಲಿರಲಾಗದೆನುತ್ತೆಯ್ತಂದು 'ಮಹಮನೆ'ಯ
ಮನೆಗೆ ಬರುತಿರೆ ಭಕ್ತರೆಲ್ಲರು
ಮನಮೊಸೆದಿವಂ ತಮ್ಮ ಮಗನೆಂ
ದೆನುತ ತಮ್ಮತ್ತಲು ತೆಗೆದುಕೊಂಡರು....

ಎಂಬ ಪದ್ಯ ಬ್ರಾಹ್ಮಣರನ್ನು ಬಿಟ್ಟು ಬಸವಣ್ಣನವರು ಸೋದರಿಯೊಂದಿಗೆ ಬಾಗೇವಾಡಿಯಲ್ಲಿಯೇ ಇದ್ದ 'ಮಹಮನೆ'ಗೆ ಹೋದರೆಂದೂ ಅಲ್ಲಿಯ 'ಭಕ್ತರು' ಅವರನ್ನು ಬರಮಾಡಿಕೊಂಡರೆಂದೂ

ತಿಳಿಸುತ್ತದೆ. ಹೀಗೆ ಬರಮಾಡಿಕೊಂಡ 'ಸಮಯಾಚಾರ' ಬಹುಶಃ ಕಾಳಾಮುಖ ಶೈವಪಂಥವೇ ಆಗಿರಬಹುದು.[೨] ಬಾಗೇವಾಡಿಯಲ್ಲಿ ಕಾಳಾಮುಖ ಸಮಾಜವನ್ನು ಪ್ರವೇಶಮಾಡಿರಬಹುದಾದ ಕಾರಣದಿಂದಾಗಿಯೇ ಬಸವಣ್ಣನವರಿಗೆ ಕಾಳಾಮುಖ ಕೇಂದ್ರವಾಗಿದ್ದ ಕೂಡಲಸಂಗಮದಲ್ಲಿ ಸಾಧಕನೆಂದು ಪ್ರವೇಶ ಪಡೆಯಲು ಅನುಕೂಲವಾಗಿರಬೇಕು.

ಕೂಡಲಸಂಗಮದಲ್ಲಿ ಶೈವನಾಗಿರುವಾಗಲೇ ಬಸವಣ್ಣ ವಚನ ರಚಿಸಲು ಪ್ರಾರಂಭಿಸಿರಬಹುದೆಂದು ಶ್ರೀ ಫ.ಗು.ಹಳಕಟ್ಟಿ ಮೊದಲಾದವರು ಸಕಾರಣ ತರ್ಕಿಸಿದ್ದಾರೆ.[೩] ಈಗ ಅವನ ಮುದ್ರಿಕೆ ಸ್ಥಾವರಲಿಂಗ ಸೂಚಕವಾದ 'ಕೂಡಲಸಂಗಮದೇವಾ' ಎಂಬುದೇ ಆಗಿರಬೇಕು. ಬಸವಣ್ಣನವರ ವಚನಗಳಲ್ಲಿ ಕೆಲವೊಮ್ಮೆ ವಿಚಾರಗಳ ವೈರುಧ್ಯ ತೋರಿಬರುವುದಕ್ಕೆ, ಕೆಲವು ವಚನಗಳನ್ನು ಆತ ಶೈವನಾಗಿದ್ದ ಅವಧಿಯಲ್ಲಿ ಬರೆದುದೇ ಕಾರಣವಾಗಿರಬೇಕು.

ಹೀಗೆ ಬ್ರಾಹ್ಮಣ್ಯವನ್ನು ದಾಟಿ ಶೈವಕ್ಕೆ ಬಂದ ಬಸವಣ್ಣನವರು ಆ ಧರ್ಮದಲ್ಲಿಯೂ ಇದ್ದ ಕಂದಾಚಾರಕ್ಕೆ ಜಿಗುಪ್ಸೆಗೊಂಡು, ಅದನ್ನೂ ದಾಟಿ ಶರಣಧರ್ಮಕ್ಕೆ ಸಮಗ್ರರೂಪ ಕೊಟ್ಟರೆಂದು ತೋರುತ್ತದೆ. ಆದುದರಿಂದ ಬಸವಣ್ಣನವರು ಒಮ್ಮೆ ಬಾಗೇವಾಡಿಯಲ್ಲಿ ಇನ್ನೊಮ್ಮೆ ಬಹುಶಃ ಕೂಡಲಸಂಗಮದಲ್ಲಿ ಹೀಗೆ ಎರಡು ಸಲ ಮತದ ಗೆರೆಯನ್ನು ದಾಟಿದರೆಂದು ಕಾಣುತ್ತದೆ. ಕೂಡಲಸಂಗಮದಲ್ಲಿ ಚೆನ್ನಬಸವಣ್ಣನವರ ಪ್ರಸ್ತಾಪವನ್ನು ನಮ್ಮ ಒಂದೂ ಕಾವ್ಯಗಳು ಮಾಡುವುದಿಲ್ಲ. ಆದುದರಿಂದ ಅವರು ಕೂಡಲಸಂಗಮದಲ್ಲಿ ಹುಟ್ಟಿದರೆಂದು ಕೆಲವು ವಿದ್ವಾಂಸರು ಹೇಳುವುದು ಕಲ್ಪನೆಯೆನಿಸುತ್ತದೆ.

ಕಲ್ಯಾಣ:

ಕಲ್ಯಾಣದ ನಿಜಘಟನೆಗಳನ್ನು ಕಂಡುಹಿಡಿಯುವ, ಅವುಗಳನ್ನು ಕಾಲಕ್ರಮದಲ್ಲಿ ಹೊಂದಿಸುವ ಕೆಲಸ ಇನ್ನೂ ಸರಿಯಾಗಿ ನಡೆದಿಲ್ಲ. ಕೊನೆಯ ಪಕ್ಷ ಈ ಆಂದೋಲನದ ಕೇಂದ್ರಬಿಂದುವಾದ ಬಸವಣ್ಣನ ಜೀವನದ ಘಟನೆಗಳು ಮತ್ತು ಅವುಗಳ ಕಾಲಕ್ರಮ ಸ್ಪಷ್ಟವಾದರೆ, ಅವನ ಸುತ್ತ ಹೆಣೆದುಕೊಂಡವರ ಚರಿತ್ರೆಯ ಚೌಕಟ್ಟನ್ನೂ ಸರಿಯಾಗಿ ಹೊಂದಿಸಲು ಸಾಧ್ಯವಾಗುತ್ತದೆ.

ಬಸವಣ್ಣ ಹುಟ್ಟಿದುದು ೧೧೦೬ ಎಂದು ಕೆಲವರು ೧೧೩೨ ಎಂದು ಕೆಲವರು ಹೇಳುತ್ತಲಿದ್ದಾರೆ. ಇದೇ ರೀತಿ ಐಕ್ಯಮಿತಿಯ ಬಗೆಗೆಯೂ ಭಿನ್ನಾಭಿಪ್ರಾಯಗಳಿವೆ. ಬಿಜ್ಜಳ–ಬಸವಣ್ಣ ಸ್ವಲ್ಪ ಹೆಚ್ಚು ಕಡಿಮೆ ಸಮವಯಸ್ಕರೆಂಬ ಅಭಿಪ್ರಾಯವಿದೆ. ಹಾಗಿದ್ದರೆ ೧೧೩೬ರ ಸುಮಾರಿಗೆ ಮಾಂಡಲಿಕನಾಗಿರುವ ಬಿಜ್ಜಳ ೧೧೦೬ರ ಸುಮಾರಿಗೆ ಹುಟ್ಟಿರುವುದು ಸ್ವಾಭಾವಿಕ. ಸಮವಯಸ್ಸಿನ ಬಸವಣ್ಣನು ಹೆಚ್ಚು ಕಡಿಮೆ ಇದೇ ವರ್ಷದಲ್ಲಿ ಜನಿಸಿರುವುದು ಸಹಜ. ಇದು ನಿಜವಿದ್ದರೆ ೧೧೪೮ರ ಶಾಸನದಲ್ಲಿ ಉಲ್ಲೇಖಗೊಂಡ ಜೇಡರ ದಾಸಿಮಯ್ಯನು ಬಸವಣ್ಣನವರಿಗಿಂತ ಪ್ರಾಚೀನನಾಗಿರಲಿಕ್ಕಿಲ್ಲ, ವಯಸ್ಸಿನಲ್ಲಿ ಸ್ವಲ್ಪ ದೊಡ್ಡವನಿರಬೇಕು. ಈ ಕಾರಣಕ್ಕಾಗಿಯೇ ಶೂನ್ಯ ಸಂಪಾದನೆಕಾರ ಜೇಡರದಾಸಿಮಯ್ಯನನ್ನು ಅನುಭವಮಂಟಪದಲ್ಲಿ ಗೋಷ್ಠಿಯ ಸದಸ್ಯನಾಗಿ ಚಿತ್ರಿಸಿದಂತಿದೆ.

ಎರಡನೆಯದಾಗಿ, ವಚನಗಳಲ್ಲಿ ಆಗಾಗ ಬರುವ ಶರಣರ ಉಲ್ಲೇಖಗಳು ಕೆಲವೊಮ್ಮೆ ಅವರ ಪ್ರಾಚೀನತೆಯ ಸೂಚನೆಗಿಂತ, ಪರಸ್ಪರ ಗೌರವವನ್ನು ಸೂಚಿಸುವಂತೆ ತೋರುತ್ತದೆ.

ಚೆನ್ನಬಸವಣ್ಣನಂಥ ಕಿರಿಯನನ್ನು ಹಿರಿಯರಾದ ಶಂಕರದಾಸಿಮಯ್ಯ, ಡೋಹರ ಕಕ್ಕಯ್ಯ, ಜೇಡರ ದಾಸಿಮಯ್ಯನ ಹೆಂಡತಿಯಾದ ದುಗ್ಗಳೆ, ಇಷ್ಟೆಯೇಕೆ ತಾಯಿಯಾದ ನಾಗಲಾಂಬಿಕೆ ಸಹ ಸ್ತುತಿಸುವುದು ಗೌರವ ತೋರಿಸುವುದೇ ಆಗಿದೆ. ಇದೇ ರೀತಿ ಜೇಡರ ದಾಸಿಮಯ್ಯನ ವಚನದಲ್ಲಿ ಬರುವ "ಕೀಳು ಡೋಹರ ಕಕ್ಕ, ಕೀಳು ಮಾದರ ಚೆನ್ನ" ಎಂಬ ಉಲ್ಲೇಖನವನ್ನೂ ವಯಸ್ಸಿಗೆ ಅನ್ವಯಿಸದೆ ಪರಸ್ಪರ ಗೌರವ ಸೂಚನೆಯೆಂದೇ ಇಟ್ಟುಕೊಳ್ಳಬೇಕಾಗುತ್ತದೆ. ಮೂರನೆಯದಾಗಿ

೧. ಅಪ್ಪನು ಡೋಹಾರ ಕಕ್ಕಯ್ಯನಾಗಿ,
ಮುತ್ತಯ್ಯ ಚೆನ್ನಯ್ಯನಾದರೆ ಆನು ಬದುಕೆನೆ? (೩೪೫)

೨. ಅಪ್ಪನು ನಮ್ಮ ಮಾದಾರ ಚೆನ್ನಯ್ಯ,
ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ,
ಚಿಕ್ಕಯ್ಯನೆಮ್ಮಯ್ಯ ಕಾಣಿರಯ್ಯ,
ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ (೩೫೧)

೩. ಹಿರಿಯಯ್ಯ ಶ್ವಪಚಯ್ಯ, ಕಿಱಿಯಯ್ಯ ಡೋಹಾರ ಕಕ್ಕಯ್ಯ (೩೫೩)

೪. ಕಕ್ಕಯ್ಯ ಹಿರಿಯಯ್ಯ, ಚಿಕ್ಕಯ್ಯ ಚೆನ್ನಯ್ಯ (೩೫೫)

ಎಂದು ಬಸವಣ್ಣನವರು ಹೇಳುವುದನ್ನು ಕೆಲವರು ವಾಚ್ಯಾರ್ಥದಲ್ಲಿ ಸ್ವೀಕರಿಸಿ, ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ ಮೊದಲಾದವರು ಬಸವಣ್ಣನವರಿಗೆ ಅಪ್ಪ, ಅಜ್ಜನ ವಯಸ್ಸಿನವರಿರಬಹುದೆಂದು ಭಾವಿಸಿದ್ದಾರೆ. ಆಶ್ಚರ್ಯವಾದ ಸಂಗತಿಯೆಂದರೆ ಬಸವಣ್ಣನವರು ತಮ್ಮ ಯಾವುದೇ ವಚನದಲ್ಲಿ ಸಿರಿಯಾಳ, ಮರುಳ ಶಂಕರದೇವ ಮೊದಲಾದ ಮೇಲುವರ್ಗದವರನ್ನು ಬಾಯಿತಪ್ಪಿಯೂ ಅಪ್ಪ, ಅಜ್ಜ, ಅಣ್ಣ ಎಂದು ಕರೆದಿಲ್ಲ. ಈ ಪದಗಳನ್ನು ಕೇವಲ ಕೆಳವರ್ಗದಿಂದ ಬಂದ ಶರಣರಿಗೆ ಮಾತ್ರ ಬಳಸಿರುವುದರಿಂದ ಪತಿತರ ಬಗೆಗೆ ಅಧಿಕ ಗೌರವ ತೋರುವುದೇ ಈ ಪದ ಬಳಕೆಯ ಹಿಂದಿರುವ ಉದ್ದೇಶವೆಂದು ಸ್ಪಷ್ಟವಾಗುತ್ತದೆ. ಆದುದರಿಂದ ಜೇಡರ ದಾಸಿಮಯ್ಯ, ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ ಮೊದಲಾದವರು ಬಸವಣ್ಣನವರಿಗಿಂತ ಪ್ರಾಚೀನರು; ಬಹಳ ಹಿರಿಯರು ಆಗಿರಲಿಕ್ಕಿಲ್ಲ. ಈ ದೃಷ್ಟಿಯಿಂದ ನೋಡಿದರೆ ಶಂಕರದಾಸಿಮಯ್ಯ, ಜೇಡರದಾಸಿಮಯ್ಯ, ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ, ಬಸವಣ್ಣ ಮೊದಲಾದವರು ಹೆಚ್ಚು ಕಡಿಮೆ ಒಂದೇ ತಲೆಮಾರಿನವರೆನಿಸುತ್ತದೆ. ಇವರಿಗೆ ಕಿರಿಯ ತಲೆಮಾರಿನ ವ್ಯಕ್ತಿಯಾಗಿದ್ದಾನೆ, ಬಸವಣ್ಣನವರ ಸೋದರಳಿಯ ಚೆನ್ನಬಸವಣ್ಣ.

ನಾಗಲಾಂಬಿಕೆ ಚೆನ್ನಬಸವಣ್ಣನವರ ತಾಯಿ. ಈ ವಿಷಯವನ್ನು ಎಲ್ಲ ವೀರಶೈವ ಕೃತಿಗಳು ಏಕಮತದಿಂದ ಸಾರುತ್ತವೆ. ಸ್ವತಃ ಚೆನ್ನಬಸವಣ್ಣನವರು ನಾಗಲಾಂಬಿಕೆಯನ್ನು "ಅವ್ವೆ" ಎಂದು ಎರಡು ಸಲ ತಮ್ಮ ವಚನಗಳಲ್ಲಿ ಉಲ್ಲೇಖಿಸಿದ್ದಾರೆ. ಬಹುಮುಖ್ಯ ಸಂಗತಿಯೆಂದರೆ ಈ ಕೆಳಗಿನ ಘಟ್ಟಿವಾಳಯ್ಯನ ವಚನವೊಂದು ಈ ಸಂಗತಿಯನ್ನು ದಾಖಲಿಸಿದ ಸಮಕಾಲೀನ ಆಕರವಾಗಿದೆ.

ಕರವೂರ ನಿರಂಹಕಾರ-ಸುಜ್ಞಾನಿದೇವಿಯರ
ಬಸುಱಲ್ಲಿ ಬಂದರೆನ್ನಬಹುದೇ ಪ್ರಭುದೇವರು?
ಮಂಡಗೆಯ ಮಾದಿರಾಜ-ಮಾದಲಾಂಬಿಕೆಯಮ್ಮನವರ

ಬಸುಱಲ್ಲಿ ಬಂದರೆನ್ನಬಹುದೇ ಬಸವೇಶ್ವರನು?
ಅಕ್ಕ ನಾಗಲಾಂಬಿಕೆಯಮ್ಮನವರ ಬಸುಱಲ್ಲಿ
ಬಂದರೆನ್ನಬಹುದೇ ಚೆನ್ನಬಸವೇಶ್ವರನು?
ಮೊರಡಿಯ ಮುದ್ದಗೌಡ-ಸುಗ್ಗಲೆಯ
ಬಸುಱಲ್ಲಿ ಬಂದರೆನ್ನಬಹುದೇ ಸಿದ್ಧರಾಮೇಶ್ವರನು?
ಇವರು ಒಬ್ಬರಿಂದಾದವರಲ್ಲ, ತಮ್ಮಿಂದ ತಾವಾದರು
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲು ಮಾಣು.

ಈ ವಚನ ಚೆನ್ನಬಸವಣ್ಣಣವರ ವಿಷಯದಲ್ಲಿ ತಾಯಿಯ ಹೆಸರನ್ನು ಮಾತ್ರ ತಿಳಿಸುತ್ತದೆ. ಇಂಥ ಸಂದರ್ಭದಲ್ಲಿ ಚೆನ್ನಬಸವಣ್ಣನವರ ತಂದೆ ಶಿವದೇವನೆಂದು ಇತ್ತೀಚಿನ ಸಿಂಗಿರಾಜನ ಸಿಂಗಿರಾಜಪುರಾಣ ಮತ್ತು ಇನ್ನೂ ಇತ್ತೀಚಿನ ದೇವಾಂಗ ದಾಸಿಮಯ್ಯನ ಪುರಾಣ (ಸಾಂಗತ್ಯ)ಗಳು ಹೇಳುತ್ತವೆ. ಸಿಂಗಿರಾಜಪುರಾಣವು ವಿಜಯನಗರ ಸಾಮ್ರಾಜ್ಯ ಪತನವಾದ ಬಳಿಕ ಅಂದರೆ ೧೬ನೆಯ ಶತಮಾನದ ಪ್ರಾರಂಭದಲ್ಲಿ ಬರೆದ ಕೃತಿಯೆಂದು ಆಂತರಿಕ ಆಧಾರಗಳಿಂದ ಶ್ರೀ ಎಚ್. ದೇವೀರಪ್ಪನವರು ಪ್ರತಿಪಾದಿಸಿದುದು ಸರಿಯೆಂದು ತೋರುತ್ತದೆ. ನಾಲ್ಕುನೂರು ವರ್ಷ ಎಲ್ಲ ಕಾವ್ಯಗಳು ಮೌನವಾಗಿರುವಾಗ ಸಿಂಗಿರಾಜ ಪುರಾಣ ಮಾತ್ರ ತಡವಾಗಿಯಾದರೂ ಶಿವದೇವನ ಹೆಸರನ್ನು ಹೇಳಿದೆ. ಈ ಕೃತಿಯನ್ನು ಅನುಸರಿಸಿಯೇ ದೇವಾಂಗ ದಾಸಿಮಯ್ಯನ ಪುರಾಣ ಶಿವದೇವನ ಹೆಸರನ್ನು ಹೇಳಿರಬೇಕು. ಒಟ್ಟಿನಲ್ಲಿ ಈ ಎರಡು ಕಾವ್ಯಗಳು ಚೆನ್ನಬಸದವಣ್ಣಣವರ ತಾಯಿ ನಾಗಲಾಂಬಿಕೆ, ತಂದೆ ಶಿವದೇವ ಎಂದು ತಿಳಿಸುತ್ತವೆ.

ಕಲ್ಯಾಣದಲ್ಲಿ ಶರಣರು ನಡೆಸಿದ ಚಳುವಳಿಯ ಅವಧಿ ೧೨ ವರುಷವೆಂದು ಕೆಲವರು, ೩೬ ವರ್ಷವೆಂದು ಕೆಲವರು ಅಭಿಪ್ರಾಯ ಪಟ್ಟಿರುವರು. ಇತ್ತೀಚೆ ಎರಡನೆಯ ಅಭಿಪ್ರಾಯ ಹೆಚ್ಚು ಮಾನ್ಯತೆ ಪಡೆಯುತ್ತಲಿದೆ. ಚೆನ್ನಬಸವಣ್ಣನಿಗೆ ೨ ಪಟ್ಟವೆಂಬ* ಪ್ರತೀತಿ ಇರುವುದರಿಂದ, ಕಲ್ಯಾಣದಲ್ಲಿ ಹುಟ್ಟಿದ ಅವರ ಜೀವಿತ ಕಾಲಾವಧಿ ೨೪ ವರ್ಷವೆನ್ನಬೇಕಾಗುತ್ತದೆ.

ವಚನ ರಚನೆ, ಅನುಭಾವ ಗೋಷ್ಠಿಯಲ್ಲಿ ಪಾಲ್ಗೊಳ್ಳುವಿರೆ, ಷಟ್ಸ್ಥಲ ಸಿದ್ಧಾಂತದ ನವೀಕರಣಗಳನ್ನು ಬಿಟ್ಟರೆ, ಚೆನ್ನಬಸವಣ್ಣಣವರ ಜೀವನದಲ್ಲಿ ಜರುಗಿದ ಇನ್ನೊಂದು ಮುಖ್ಯಘಟನೆಯೆಂದರೆ ಸಿದ್ಧರಾಮನಿಗೆ ಲಿಂಗದೀಕ್ಷೆ ಕೊಟ್ಟುದು. ಬಸವಣ್ಣನವರ ತರುವಾಯ ಇವರು ಬಿಜ್ಜಳನಲ್ಲಿ ದಂಡನಾಯಕರಾಗಿದ್ದರೆಂದೂ ತಿಳಿದುಬರುತ್ತದೆ.

ಉಳಿವೆ :

ಕಲ್ಯಾಣದ ಕೊನೆಯ ಘಟನೆಗಳು ಇನ್ನೂ ಅಸ್ಪಷ್ಟವಾಗಿ ಉಳಿದಿವೆ. ಒಂದು ಮಾತು ನಿಜ. ಶರಣರು ಉಳಿವೆಗೆ ಧಾವಿಸಿದ ಗಂಡಾಂತರ ಪ್ರಸಂಗದಲ್ಲಿ ಆ ಸಮೂಹದ ನೇತೃತ್ವ ವಹಿಸಿದವರು ಚೆನ್ನಬಸವಣ್ಣನವರು. ಶರಣರು ಪ್ರಯಾಣ ಮಾಡಿದ ಈ ಮಾರ್ಗವನ್ನು "ದಂಡಿನ ದಾರಿ" ಎಂದು ಜನತೆ ಅಲ್ಲಲ್ಲಿ ಈಗಲೂ ಕರೆಯುತ್ತಾರೆ. ಈ ದಾರಿಯನ್ನು ಉದ್ದಕ್ಕೂ ಗೊತ್ತು ಹಚ್ಚುವುದು ಇನ್ನೂ ಸಾಧ್ಯವಾಗಿಲ್ಲ. ಹೀಗಿದ್ದೂ ಅನೇಕ ಕೃತಿಗಳ ಸಹಾಯದಿಂದ ವಿದ್ವಾಂಸರು ಈ ದಾರಿಯನ್ನು ಹೀಗೆ ರೇಖಿಸಿದ್ದಾರೆ.

ಕಲ್ಯಾಣ–ತೊರೆಗಲ್ಲು–ಕಡಕೋಳ–ಮಾದಲೂರು–ಮುರಗೋಡ–ಮೂಗಬಸವ–ನಾಗಲಾಪುರ–ಹುಣಸೀ ಕಟ್ಟಿ–ಕಾದಾರವಳ್ಳಿವರೆಗೆ ಬಂದ ಶರಣ ಸಮೂಹದ ಒಂದು ಭಾಗ ಕಕ್ಕೇರಿ–ಲಿಂಗನಮಠ–ಜಂಗಮಹಟ್ಟಿ–ಜಗಳಬೆಟ್ಟ–ಸಾಂಬ್ರಾಣಿವರೆಗೆ ಬಂದು, ಇನ್ನೊಂದು ಭಾಗ ನಂದಿಹಳ್ಳಿ–ಕಿತ್ತೂರು–ಧಾರವಾಡ–ಸತ್ತೂರವರೆಗೆ ಬಂದು, ಆಮೇಲೆ ಎರಡೂ ಭಾಗಗಳು ಮೇಲುಗೈಯಲ್ಲಾಪುರದಲ್ಲಿ ಒಂದುಗೂಡಿ ಉಳಿವೆಗೆ ಬಂದವು.

ಈ ವಿಷಯವಾಗಿ ಧಾರವಾಡದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಂಡಾರದಲ್ಲಿರುವ ಸೋದೆಯ ಅರಸು ಸದಾಶಿವರಾಯನ "ಉಳುವೆ ಮಹಾತ್ಮೆ" ಎಂಬ ಕೃತಿ ಸ್ವಲ್ಪ ಬೆಳಕು ಚೆಲ್ಲುತ್ತದೆ. ಕಲ್ಯಾಣ–ಪರವತಾಬಾದಿ–ಪೇರಜಾಬಾದಿ–ಕೋಳಕೂರು–ಬಡದಳ–ಸತ್ತಿಗ್ಗೆರೆ–ಮುರಗೋಡ–ಹುಬ್ಬಳ್ಳಿ–ಬಂಕಾಪುರ–ಹಾನಗಲ್ಲು–ಮಳುಗೆ–ಜಾಂಗಲಿಕ್ಷೇತ್ರ –ಸೋದೆ–ತುಂಬೆಬೀಡು–ಯಲ್ಲಾಪುರ–ಬೆನಕನಘಟ್ಟ–ಮಲ್ಲಾಪುರ–ಬಿದುರೆ–ಹೆಬ್ಬಳಪಳ್ಳಿ–ಉಳಿವೆ ಎಂಬ ವಿವರ ಈ ಕೃತಿಯಲ್ಲಿದೆ. ಈವರೆಗೆ ಗೊತ್ತಾಗದೆ ಇದ್ದ ಮಲಪ್ರಭೆಯ ಉತ್ತರದ ಅಂದರೆ ಗುಲ್ಬರ್ಗಾ ಜಿಲ್ಲೆಯ ಪರವತಾಬಾದಿ, ಪೇರಜಾಬಾದಿ, ಕೋಳಕೂರು, ಬಡದಳ ಗ್ರಾಮಗಳನ್ನು ಮೊದಲ ಸಲ ಸೂಚಿಸುವುದಲ್ಲದೆ, ದಕ್ಷಿಣದ ಗ್ರಾಮಗಳ ವಿಷಯವಾಗಿಯೂ ಈ ಕೃತಿ ಕೆಲವು ಸಲ ಭಿನ್ನಾಭಿಪ್ರಾಯ ತಾಳುತ್ತದೆ. ಈ ಊರುಗಳ ಹೆಸರಿನ ಸಹಾಯದಿಂದ 'ದಂಡಿನ ದಾರಿ'ಯನ್ನು ಶೋಧಿಸುವುದು ಅವಶ್ಯವಿದೆ. ಹೀಗೆ ಚೆನ್ನಬಸವಣ್ಣನವರು ಎಳೆಯ ವಯಸ್ಸಿನಲ್ಲಿಯೇ ಶರಣಸಮೂಹದ ಸಂರಕ್ಷಣೆಯ ಹೊಣೆ ಹೊತ್ತು ಉಳಿವೆವರೆಗೆ ಬಂದು, ಅಲ್ಲಿಯೇ ಲಿಂಗೈಕ್ಯರಾದರು.

ವೀರಶೈವಧರ್ಮ:

ಭಾರತೀಯರ ಆಧ್ಯಾತ್ಮಿಕ ಚಿಂತನೆ ಪ್ರಾರಂಭವಾದುದು, ಮೂಲತಃ ಆಶ್ರಮದಲ್ಲಿ. ಕುಟುಂಬ ಕಟ್ಟಿಕೊಂಡು ಆಶ್ರಮದಲ್ಲಿ ಬಾಳುತ್ತಿದ್ದ ಋಷಿಗಳು ಮತ್ತು ಕುಟುಂಬ ಜೀವನವನ್ನು ತ್ಯಜಿಸಿ ಆಶ್ರಮವಾಸಿಯಾಗಿದ್ದ ಸನ್ಯಾಸಿಗಳು, ಈ ಸಿದ್ಧಾಂತವನ್ನು ರೂಪಿಸಿದರು. ಹೀಗಾಗಿ ಭಾರತೀಯ ಆಧ್ಯಾತ್ಮವೆಂಬುದು ಮೂಲತಃ ಆಶ್ರಮಜೀವನದ ಸೃಷ್ಟಿಯೇ ಹೊರತು, ಸಮಾಜಜೀವನದ ಸೃಷ್ಟಿಯಲ್ಲ, ಆಶ್ರಮವೆಂಬುದು ಸಾಮಾಜಿಕ ಜಟಿಲ ಸಮಸ್ಯೆಗಳಿಂದ ಮುಕ್ತವಾದ ಒಂದು ಏಕಾಂತ ಸ್ಥಳ. ಇಲ್ಲಿ ನೆಲೆನಿಂತವರಿಗೆ ಮುಖ್ಯಸಮಸ್ಯೆಯೆಂದರೆ ತಮ್ಮೊಳಗಿನ ವ್ಯಕ್ತಿಗತ (Individual) ವಿಕಾರಗಳ ಪರಿಹಾರ. ಆದುದರಿಂದ ಸಹಜವಾಗಿಯೇ ಇಲ್ಲಿಯ ಆಧ್ಯಾತ್ಮದ ಸ್ವರೂಪ ವ್ಯಕ್ತಿಗತವಾದುದು, ಅಂದರೆ ವ್ಯಕ್ತಿತ್ವವನ್ನು ಶಿವತ್ವದ ನೆಲೆಗೆ ಎತ್ತರಿಸಿಕೊಳ್ಳುವುದು. ಕಾಲಕ್ರಮದಲ್ಲಿ ನಮ್ಮ ಆಧ್ಯಾತ್ಮ ಚಿಂತನೆ ಆಶ್ರಮದಿಂದ ಮಠಕ್ಕೆ ಅಂದರೆ ಅರಣ್ಯಮಧ್ಯದಿಂದ ಸಮಾಜಮಧ್ಯಕ್ಕೆ ಬಂದರೂ ಮೊದಲಿನ ವ್ಯಕ್ತಿಗತ (Individual) ಸಿದ್ಧಾಂತ ಚಿಂತನಕ್ರಮ ಮುಂದುವರಿಯಿತೇ ಹೊರತು, ಜೊತೆಗೆ ಸಾಮಾಜಿಕ (Social) ಸಿದ್ಧಾಂತ ಚಿಂತನಕ್ರಮ ಬೆಳೆದು ಬರಲೇ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ವ್ಯಕ್ತಿಗತ ಸಿದ್ಧಾಂತದ ಜೊತೆಗೆ ಸಾಮಾಜಿಕ ಸಿದ್ಧಾಂತವನ್ನೂ ರೂಪಿಸಿದ ಪ್ರಥಮ ಶ್ರೇಯಸ್ಸು ಭಾರತದಲ್ಲಿ ಬುದ್ಧನಿಗೆ, ದ್ವಿತೀಯ ಆದರೆ ಅದ್ವಿತೀಯ ಶ್ರೇಯಸ್ಸು ಶಿವಶರಣರಿಗೆ ಸಲ್ಲುತ್ತದೆ. ಬುದ್ಧ ಸಾಮಾಜಿಕ ಸಿದ್ಧಾಂತದ ಕೆಲವು ಮಗ್ಗಲುಗಳನ್ನು ಬೋಧೆಮಾಡಿದ, ಆಚರಣೆಯಲ್ಲಿಯೂ ತಂದ.

ಬಸವಣ್ಣ ಎಲ್ಲ ಮಗ್ಗಲುಗಳನ್ನು ಕಂಡುದಲ್ಲದೆ, ಅವುಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಒಂದು ಆಂದೋಲನವನ್ನೇ ಕೈಗೆತ್ತಿಕೊಂಡ. ಏಕೆಂದರೆ ವ್ಯಕ್ತ ಸುಧಾರಿಸಿದರೆ ಸಮಾಜ ಸುಧಾರಿಸುವುದು ಎಷ್ಟು ಸತ್ಯವೋ, ಸಮಾಜ ಸುಧಾರಿಸಿದರೆ ವ್ಯಕ್ತಿ ಸುಧಾರಿಸುವುದೂ ಅಷ್ಟೇ ಸತ್ಯವೆಂಬ ತತ್ವವನ್ನು ಅವನು ಪೂರ್ಣಪ್ರಮಾಣದಲ್ಲಿ ಕಂಡವನಾಗಿದ್ದನು. ಆದುದರಿಂದ ಬುದ್ಧನಿಗಿಂತ ಬಸವ ಹೆಚ್ಚು ರಭಸದಿಂದ ಸಮಾಜಸುಧಾರಣೆಯಲ್ಲಿ ಹೆಜ್ಜೆಹಾಕಿದ. ಈ ಸುಧಾರಣೆಯ ಅಂಗವಾಗಿ ಕೊನೆಯ ದಿನಗಳಲ್ಲಿ ಹರಳಯ್ಯ, ಮಧುವಯ್ಯಗಳ ಮಕ್ಕಳ ಅಂತರ್ಜಾತಿ ವಿವಾಹ ಘಟಿಸಿತೆಂದೂ. ಆ ಕಾರಣಕ್ಕಾಗಿ ಕಲ್ಯಾಣದಲ್ಲಿ ಕ್ರಾಂತಿ ಸಂಭವಿಸಿತೆಂದೂ ಈವರೆಗೆ ನಂಬುತ್ತ ಬರಲಾಗಿದೆ. ಆದರೆ ಮತಾಂತರಗೊಂಡ 'ಬೃಹತ್ ವೀರಶೈವ ಸಮಾಜ'ದಲ್ಲಿ ೩೬ ವರ್ಷ ಹೋಗಲಿ, ೧೨ ವರ್ಷ ಕಳೆದರೂ ಹರಳಯ್ಯ ಮಧುವಯ್ಯರ ಘಟನೆಗೆ ಮೊದಲು ಒಂದೂ ಅಂತಹ ಮದುವೆ ಜರುಗಲಿಲ್ಲವೆ? ಶರಣರ ಕ್ರಾಂತಿ ಕೇವಲ ಘೋಷಣೆಯ ಮಟ್ಟದಲ್ಲಿ ಉಳಿದು ಆಚರಣೆಯಲ್ಲಿ ಇಳಿದು ಬರಲಿಲ್ಲವೆ? ಆಚರಣೆಯಲ್ಲಿ ಇಳಿದು ಬಂದರೂ ಮತಾಂತರಗೊಂಡವರು, ತಮ್ಮ ತಮ್ಮ ಮೂಲಜಾತಿಗಳಲ್ಲಿಯೇ ಅಂದು ಮದುವೆಗಳನ್ನು ಏರ್ಪಡಿಸುತ್ತಿದ್ದ ಪಕ್ಷದಲ್ಲಿ ಬಸವಣ್ಣ ಹೊಸದನ್ನು ಏನು ಮಾಡಿದಂತಾಯಿತು? ಎಂಬ ಪ್ರಶ್ನೆಗಳು ತಲೆಯೆತ್ತುತ್ತವೆ. ಬಸವಣ್ಣ ಮಾತಿನ ಮಹಾಪುರುಷನಲ್ಲ, ಕೃತಿಯ ಮಹಾಪುರುಷ. ಆದುದರಿಂದ ೩೬ ಅಥವಾ ೧೨ ವರ್ಷಗಳ ಕಾಲವ್ಯಾಪ್ತಿಯಲ್ಲಿ ಬೇರೆ ಬೇರೆ ಜಾತಿಗಳಿಂದ ಬಂದ ಶರಣಸಮಾಜದಲ್ಲಿ ರಕ್ತಸಂಬಂಧ ಅನೇಕ ಸಂಖ್ಯೆಯಲ್ಲಿ ಜರುಗಿರುವ ಸಾಧ್ಯತೆಯಿದೆ.

ಈ ಬಗೆಯ ಚಟುವಟಿಕೆಗಳಿಂದಾಗಿ, ಭಾರತದಲ್ಲಿ ಪರಂಪರಾಗತವಾಗಿ ಬಂದ 'ವ್ಯಕ್ತಿ ಕೇಂದ್ರಿತ ಸಿದ್ಧಾಂತ'ಕ್ಕೆ 'ಸಮಾಜ ಕೇಂದ್ರಿತ ಸಿದ್ಧಾಂತ'ವನ್ನು ಜೋಡಿಸಿದ, ಅದನ್ನು ತೀವ್ರಗತಿಯಲ್ಲಿ ಆಚರಣೆಗೆ ತಂದ ಕೀರ್ತಿ ಶರಣರಿಗೆ ಸಲ್ಲುತ್ತದೆ. ಈ ವ್ಯಕ್ತಿಕೇಂದ್ರಿತ ಸಿದ್ಧಾಂತವನ್ನು 'ಲಿಂಗವ್ಯಸನ'ವೆಂದೂ ಸಾಮಾಜಕೇಂದ್ರಿತ ಸಿದ್ಧಾಂತವನ್ನು 'ಜಂಗಮಪ್ರೇಮ'ವೆಂದೂ ಬಸವಣ್ಣನವರು ಕರೆದಿದ್ದಾರೆ. ಲಿಂಗೋಪಾಸನೆಯ ಮೂಲಕ ಲಿಂಗವಾಗಲು, ಮುಂದುವರಿದು ಜಂಗಮಲಿಂಗವಾಗಲು ಅವಲಂಬಿಸಬೇಕಾದ ಷಟ್ಸ್ಥಲ ಪ್ರಕ್ರಿಯೆಯನ್ನು 'ಲಿಂಗವಿಡಿದು ಲಿಂಗಸಿದ್ಧಿ' ಎಂದು ವೀರಶೈವದಲ್ಲಿ ಗುರುತಿಸಲಾಗಿದೆ.

ಲಿಂಗವಿಡಿದು ಲಿಂಗಸಿದ್ಧಿ:

ಆತ್ಮ (=ಲಿಂಗ) ಮೂಲತಃ ಶುದ್ಧವಾದುದು. ಸರ್ವವ್ಯಾಪಕತ್ವ, ಸರ್ವಜ್ಞತ್ವ, ಸರ್ವಕರ್ತೃತ್ವ ಲಕ್ಷಣವುಳ್ಳುದು. ಆಣವ, ಮಾಯಾ, ಕಾರ್ಮಿಕ ಮಲಗಳ ಆವರಣದಿಂದಾಗಿ ಇದಕ್ಕೆ ಅಲ್ಪವ್ಯಾಪಕತ್ವ, ಅಲ್ಪಜ್ಞತ್ವ, ಅಲ್ಪಕರ್ತೃತ್ವ ಸ್ಥಿತಿ ಪ್ರಾಪ್ತವಾಗುತ್ತದೆ. ಈಗ ಲಿಂಗ (=ಆತ್ಮ) ಮಲಿನಗೊಂಡು ಅಂಗವಾಗುತ್ತದೆ. ಅಂಗವು ಈ ಮಾಲಿನ್ಯವನ್ನು ಕಳೆದುಕೊಳ್ಳುತ್ತ ಲಿಂಗವಾಗುವ ದೃಷ್ಟಿಕೋನವನ್ನು ಗುರು ದಯಪಾಲಿಸುತ್ತಾನೆ. ಜೊತೆಗೆ ಉಪಾಸನಾ ಸಾಧನವಾಗಿ ಇಷ್ಟಲಿಂಗವನ್ನು ಕರುಣಿಸುತ್ತಾನೆ.

ಇಷ್ಟಲಿಂಗವು ವ್ಯಕ್ತಿಯ ಆತ್ಮಲಿಂಗದ ಪ್ರತೀಕ. ಇದರ ಅನುಸಂಧಾನವೆಂದರೆ ಆತ್ಮಾನುಸಂಧಾನವೇ ಆಗಿದ್ದು, ಇದರಿಂದ ಉಪಾಸಕ ಕ್ರಮೇಣ ಆತ್ಮಶುದ್ಧಿಯನ್ನು ಸಂವರ್ಧಿಸಿಕೊಳ್ಳುತ್ತಾನೆ. ಇಲ್ಲಿ ಹಂತಹಂತವಾಗಿ ವ್ಯಕ್ತಿತ್ವದ ಉದಾತ್ತೀಕರಣಕ್ರಿಯೆ ಜರುಗುತ್ತದೆ.

ಅಂದರೆ ಕ್ರಮೇಣ ಶ್ರದ್ಧಾ, ನಿಷ್ಠಾ, ಅವಧಾನ, ಅನುಭಾವ, ಆನಂದ, ಸಮರಸ ಭಾವಗಳನ್ನು ಬೆಳೆಸಿಕೊಳ್ಳುತ್ತಾನೆ. ಈ ಭಾವಗಳಿಗೆ ಅನುಗುಣವಾಗಿ ವ್ಯಕ್ತಿ ಕ್ರಮವಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಸ್ಥಿತಿಗಳನ್ನು ಪಡೆಯುತ್ತಾನೆ. ಭಕ್ತ-ಮಹೇಶ ಸ್ಥಿತಿಗಳನ್ನು ಪಡೆಯುವಲ್ಲಿ ಸ್ಥೂಲತನುಚೈತನ್ಯವು ಇಷ್ಟಲಿಂಗವಾಗುತ್ತದೆ. ಪ್ರಸಾದಿ–ಪ್ರಾಣಲಿಂಗಿ ಸ್ಥಿತಿಗಳನ್ನು ಪಡೆಯುವಲ್ಲಿ ಸೂಕ್ಷ್ಮತನುಚೈತನ್ಯವು ಪ್ರಾಣಲಿಂಗವಾಗುತ್ತದೆ. ಶರಣ–ಐಕ್ಯಸ್ಥಿತಿಗಳನ್ನು ಪಡೆಯುವಲ್ಲಿ ಕಾರಣತನುಚೈತನ್ಯವು ಭಾವಲಿಂಗ (ಜಂಗಮಲಿಂಗ)ವಾಗುತ್ತದೆ. ಈ ಭಾವಲಿಂಗಕ್ಕೆ (ಶರಣ–ಐಕ್ಯಸ್ಥಲಗಳಿಗೆ) ಅನುಗುಣವಾಗಿ ಬಾಳುವವನೇ ಅನುಭಾವಿ, ಅವನ ಸ್ಥಿತಿಯೇ ಅನುಭಾವ.

ಈ ಲಿಂಗಾಂಗಸಾಮರಸ್ಯಸ್ಥಿತಿಯನ್ನೇ ವೀರಶೈವರಲ್ಲಿ ಕ್ರಿಯಾಜ್ಞಾನಸಾಮರಸ್ಯ ಲಿಂಗೈಕ್ಯ (ಲಿಂಗೈಕ್ಯ ಮತ್ತು ಜಂಗಮೈಕ್ಯ)ವೆಂದು ಕರೆಯುತ್ತಾರೆ. ಇದೇ "ಲಿಂಗವಿಡಿದು ಲಿಂಗಸಿದ್ಧಿ"ಯೆನಿಸುತ್ತದೆ. ಇಲ್ಲಿ ಅಂಗವು ಆಚರಣೆ (ಸಾಧನೆ)ಯ ಮೂಲಕ ಕ್ರಮವಾಗಿ ಐಕ್ಯಸ್ಥಿತಿ ಪಡೆಯುವುದರಿಂದ ಇದಕ್ಕೆ 'ಆಚರಣೆಯ ಸ್ಥಲ' (ಸಾಧನೆಯ ಸ್ಥಲ) ಇಲ್ಲವೆ 'ಅಂಗಸ್ಥಲ'ವೆಂದು ಕರೆಯುತ್ತಾರೆ.

ವೀರಶೈವನಾದವನು ಕ್ರಮೇಣ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಹಂತಗಳನ್ನೇರಿ ಕೊನೆಗೆ ಐಕ್ಯಸ್ಥಿತಿ ಪಡೆಯಬೇಕೆಂಬುದು ಬಸವಣ್ಣನವರ ಷಟ್‌ಸ್ಥಲ ಪ್ರತಿಪಾದನೆಯಾಗಿದ್ದಿತು. ಚೆನ್ನಬಸವಣ್ಣ ಇದರಿಂದ ಭಿನ್ನನಾಗುತ್ತಾನೆ. ಇದನ್ನು ಬಸವಣ್ಣನವರು ಒಪ್ಪುತ್ತಾರೆ. ಈ ವಿಚಾರಗಳನ್ನು ತಿಳಿಸುವ ಬಸವಣ್ಣ, ಚೆನ್ನಬಸವಣ್ಣನವರ ವಚನಗಳು ಹೀಗಿವೆ:

> **ಮೆಲ್ಲಮೆಲ್ಲನೆ ಭಕ್ತನೆನಿಸಿಕೊಂಬೆ**
> **ಮೆಲ್ಲಮೆಲ್ಲನೆ ಮಾಹೇಶ್ವರನೆನಿಸಿಕೊಂಬೆ**
> **ಮೆಲ್ಲಮೆಲ್ಲನೆ ಪ್ರಸಾದಿಯೆನಿಸಿಕೊಂಬೆ**
> **ಮೆಲ್ಲಮೆಲ್ಲನೆ ಪ್ರಾಣಲಿಂಗಿಯೆನಿಸಿಕೊಂಬೆ**
> **ಮೆಲ್ಲಮೆಲ್ಲನೆ ಶರಣನೆನಿಸಿಕೊಂಬೆ**
> **ಮೆಲ್ಲಮೆಲ್ಲನೆ ಐಕ್ಯನೆನಿಸಿಕೊಂಬೆ**
> **ಮೆಲ್ಲಮೆಲ್ಲನೆ ಷಡುಸ್ಥಲವ ಮೀಱಿ**
> **ನಿರವಯಸ್ಥಲವನೈದುವೆ ಕೂಡಲಸಂಗಮದೇವಾ.**

ಬಸವಣ್ಣನವರು ಮೊದಮೊದಲು ಪ್ರತಿಪಾದಿಸುತ್ತಿದ್ದ ಷಟ್‌ಸ್ಥಲ ಪದ್ಧತಿಯಿದು. ಚೆನ್ನಬಸವಣ್ಣನವರು ಇದನ್ನು ಖಂಡಿಸುತ್ತ,

> **ಮೆಲ್ಲಮೆಲ್ಲನೆ ಭಕ್ತ, ಮೆಲ್ಲಮೆಲ್ಲನೆ ಮಾಹೇಶ್ವರ**
> ಮೆಲ್ಲಮೆಲ್ಲನೆ ಪ್ರಸಾದಿ, ಮೆಲ್ಲಮೆಲ್ಲನೆ ಪ್ರಾಣಲಿಂಗಿ,
> ಮೆಲ್ಲಮೆಲ್ಲನೆ ಶರಣ, ಮೆಲ್ಲಮೆಲ್ಲನೆ ಐಕ್ಯರಾದೆವೆಂಬರು ನಿಮ್ಮ ಶರಣರು.
> **ತಾವೇನು ಮರುಜವಣಿಯ ಕೊಂಡರೆ?**
> **ಆವ ಸ್ಥಲದಲಿ ಷಡುಸ್ಥಲವಡಗದಿದ್ದರೆ**
> **ಆ ಭಕ್ತಿಯ ಬಾಯಲ್ಲಿ ಹುಡಿಹೊಯ್ಯನೆ ಕೂಡಲ ಚೆನ್ನಸಂಗಮದೇವ?**

ಎಂದು ಷಟ್‌ಸ್ಥಲದಲ್ಲಿ ಹೊಸಪದ್ಧತಿಯನ್ನು ಪ್ರತಿಪಾದಿಸುತ್ತಾರೆ, ಇದನ್ನು ಬಸವಣ್ಣನವರು ಒಪ್ಪುತ್ತ

ಮೆಲ್ಲಮೆಲ್ಲನೆ ಭಕ್ತಾದ್ಯೈಕ್ಯಾಂತವಾದೆಹೆನೆಂದು
ಅದಕ್ಕೆ 'ನೀನು ನಿತ್ಯವ ಪಡೆದು ಬಂದೆಯಾ' ಎಂದು
ನಿಂದ ಸ್ಥಲದಲ್ಲಿಯೇ ನಿಜಷಡುಸ್ಥಲವಡಗದಿದ್ದಡೆ
ಜಂಗಮದಾಸೋಹವೇಕೆಂದು ಹೇಳಿ ನಿಜವ ಕರುಣಿಸಿದನಾಗಿ
ಲಿಂಗಜಂಗಮದ ಭೇದವ ಚೆನ್ನಬಸವಣ್ಣ ಬಲ್ಲ... (ಬ.ವ. ೧೨೭೪)

ಎಂದು ಹೇಳುತ್ತಿದ್ದು, ಈ ಹೊಸ ಪದ್ಧತಿಯ ಪ್ರಕಾರ ಷಡುಸ್ಥಲದ ಸಂಯೋಜನೆ ಹೀಗಿದೆ:

ಪಿಂಡಸ್ಥಲ, ಪಿಂಡಜ್ಞಾನಸ್ಥಲ, ಸಂಸಾರಹೇಯಸ್ಥಲ, ಗುರುಕಾರುಣ್ಯಸ್ಥಲ೧, ವಿಭೂತಿಸ್ಥಲ, ಪಂಚಾಕ್ಷರಿಸ್ಥಲ, ಲಿಂಗಧಾರಣಸ್ಥಲ, ತಾಮಸನಿರಸನ ಸ್ಥಲ೧, –ಎಂಬ ಸ್ಥಲಗಳು ಪೀಠಿಕೆಯಾಗಿ ಬಂದ ಬಳಿಕ, ಮೇಲೆ ಹೇಳಿದ ಹೊಸ ಪದ್ಧತಿಯ ಷಟ್ಸ್ಥಲವಿಚಾರ ಹೀಗೆ ನಿರೂಪಿಸಲ್ಪಟ್ಟಿದೆ.

೧. ಭಕ್ತಸ್ಥಲ: ಭಕ್ತನ ಜ್ಞಾನಿಸ್ಥಲ, ಭಕ್ತನ ಭಕ್ತಸ್ಥಲ, ಭಕ್ತನ ಮಾಹೇಶ್ವರ ಸ್ಥಲ, ಭಕ್ತನ ಪ್ರಸಾದಿಸ್ಥಲ, ಮಾಹೇಶ್ವರನ ಪ್ರಾಣಲಿಂಗಿಸ್ಥಲ, ಭಕ್ತನ ಶರಣಸ್ಥಲ, ಭಕ್ತನ ಐಕ್ಯಸ್ಥಲ.
೨. ಮಾಹೇಶ್ವರಸ್ಥಲ: ಮಾಹೇಶ್ವರನ ಜ್ಞಾನಿಸ್ಥಲ, ಮಾಹೇಶ್ವರನ ಮಾಹೇಶ್ವರ ಸ್ಥಲ, ಮಾಹೇಶ್ವರನ ಭಕ್ತಸ್ಥಲ, ಮಾಹೇಶ್ವರನ ಪ್ರಸಾದಿಸ್ಥಲ, ಮಾಹೇಶ್ವರನ ಪ್ರಾಣಲಿಂಗಿಸ್ಥಲ, ಮಾಹೇಶ್ವರನ ಶರಣಸ್ಥಲ, ಮಾಹೇಶ್ವರನ ಐಕ್ಯಸ್ಥಲ.
೩. ಪ್ರಸಾದಿಸ್ಥಲ: ಪ್ರಸಾದಿಯ ಜ್ಞಾನಿಸ್ಥಲ, ಪ್ರಸಾದಿಯ ಪ್ರಸಾದಿಸ್ಥಲ, ಪ್ರಸಾದಿಯ ಭಕ್ತಸ್ಥಲ, ಪ್ರಸಾದಿಯ ಮಾಹೇಶ್ವರ ಸ್ಥಲ, ಪ್ರಸಾದಿಯ ಪ್ರಾಣಲಿಂಗಿಸ್ಥಲ, ಪ್ರಸಾದಿಯ ಶರಣಸ್ಥಲ, ಪ್ರಸಾದಿಯ ಐಕ್ಯಸ್ಥಲ.
೪. ಪ್ರಾಣಲಿಂಗಿಸ್ಥಲ: ಪ್ರಾಣಲಿಂಗಿಯ ಜ್ಞಾನಿಸ್ಥಲ, ಪ್ರಾಣಲಿಂಗಿಯ ಪ್ರಾಣಲಿಂಗಿಸ್ಥಲ, ಪ್ರಾಣಲಿಂಗಿಯ ಭಕ್ತಸ್ಥಲ, ಪ್ರಾಣಲಿಂಗಿಯ ಮಾಹೇಶ್ವರ ಸ್ಥಲ, ಪ್ರಾಣಲಿಂಗಿಯ ಪ್ರಸಾದಿಸ್ಥಲ, ಪ್ರಾಣಲಿಂಗಿಯ ಶರಣಸ್ಥಲ, ಪ್ರಾಣಲಿಂಗಿಯ ಐಕ್ಯಸ್ಥಲ.
೫. ಶರಣಸ್ಥಲ: ಶರಣನ ಜ್ಞಾನಿಸ್ಥಲ, ಶರಣನ ಶರಣಸ್ಥಲ, ಶರಣನ ಭಕ್ತಸ್ಥಲ, ಶರಣನ ಮಾಹೇಶ್ವರಸ್ಥಲ, ಶರಣನ ಪ್ರಸಾದಿಸ್ಥಲ, ಶರಣನ ಪ್ರಾಣಲಿಂಗಿಸ್ಥಲ, ಶರಣನ ಐಕ್ಯಸ್ಥಲ.
೬. ಐಕ್ಯಸ್ಥಲ: ಐಕ್ಯನ ಜ್ಞಾನಸ್ಥಲ, ಐಕ್ಯನ ಐಕ್ಯಸ್ಥಲ, ಐಕ್ಯನಭಕ್ತಸ್ಥಲ, ಐಕ್ಯನ ಮಾಹೇಶ್ವರ ಸ್ಥಲ, ಐಕ್ಯನ ಪ್ರಸಾದಿಸ್ಥಲ, ಐಕ್ಯನ ಪ್ರಾಣಲಿಂಗಿಸ್ಥಲ, ಐಕ್ಯನ ಶರಣಸ್ಥಲ.

ಶರಣನಾದವ ಒಂದು ಸ್ಥಲದಲ್ಲಿ ಆರು ಸ್ಥಲಗಳನ್ನು ಅಳವಡಿಸಿಕೊಳ್ಳುತ್ತ ಕ್ರಮವಾಗಿ ಆರು ಹಂತಗಳನ್ನು ಏರಿ, ಅಂತಿಮ ಹಂತ ಪಡೆಯುತ್ತಾನೆ. ಇದನ್ನು 'ಮಿಶ್ರುಷಡುಸ್ಥಲ'ವೆಂದು ಕರೆಯುತ್ತಾರೆ. ಈ ಷಡುಸ್ಥಲವನ್ನು ಪ್ರಥಮವಾಗಿ ಪ್ರತಿಪಾದಿಸಿದನಾಗಿ ಚೆನ್ನಬಸವಣ್ಣನಿಗೆ "ಷಡುಸ್ಥಲ ಚಕ್ರವರ್ತಿ" ಎಂಬ ಗೌರವ ಪ್ರಾಪ್ತವಾಗಿದೆ.

ಲಿಂಗಭೋಗೋಪಭೋಗ :

ಹೀಗೆ ಒಂದೊಂದು ಸ್ಥಲದಲ್ಲಿ ಆರು ಸ್ಥಲಗಳನ್ನು ಏರುತ್ತಲಿರುವಾಗ, ಅಲ್ಲಲ್ಲಿಯ ಅಂಗಕ್ರಿಯೆಗಳಲ್ಲಿ ಲಿಂಗಕ್ರಿಯೆಗಳು ಜರುಗುತ್ತವೆ. ಈಗ ಆತನದು ಲಿಂಗಭೋಗೋಪಭೋಗ ಜೀವನ. ಅಂದರೆ ವ್ಯಕ್ತಿಯು ಲೋಕವನ್ನು ನೇತ್ರ, ಶ್ರೋತ್ರ, ನಾಸಿಕ, ಜಿಹ್ವೆ, ತ್ವಚೆಗಳೆಂಬ ಐದು ಇಂದ್ರಿಯಗಳ ಮೂಲಕ ಭೋಗಿಸುತ್ತಿದ್ದು, ಈ ಇಂದ್ರಿಯ ಗುಣಗಳನ್ನು ಲಿಂಗವನ್ನಾಗಿ

ಮಾಡಿಕೊಂಡುದರಿಂದ ಅಲ್ಲಿ ನಡೆಯುವ ಭೋಗಕ್ರಿಯೆ ಲಿಂಗಭೋಗವಾಗುತ್ತದೆ. ಅಂದರೆ ನಾಸಿಕ ಚೈತನ್ಯ ಆಚಾರಲಿಂಗವಾಗಿ ಗಂಧವನ್ನು, ಜಿಹ್ವಾಚೈತನ್ಯ ಗುರುಲಿಂಗವಾಗಿ ರಸವನ್ನು, ನೇತ್ರಚೈತನ್ಯ ಶಿವಲಿಂಗವಾಗಿ ರೂಪವನ್ನು, ತ್ವಕ್‌ಚೈತನ್ಯ ಜಂಗಮಲಿಂಗವಾಗಿ ಸ್ಪರ್ಶವನ್ನು, ಶ್ರೋತ್ರಚೈತನ್ಯ ಪ್ರಸಾದಲಿಂಗವಾಗಿ ಶಬ್ದವನ್ನು ಭೋಗಿಸುತ್ತವೆ. ಇವುಗಳಿಗೆ ಕೇಂದ್ರವಾದ ಹೃದಯಚೈತನ್ಯ ಮಹಾಲಿಂಗವಾಗಿ ಇವೆಲ್ಲವನ್ನೂ ಭೋಗಿಸುತ್ತದೆ. ಇದನ್ನೇ ಲಿಂಗಭೋಗೋಪಭೋಗ ಎನ್ನುವುದು. ವಚನ ಸಾಹಿತ್ಯದಲ್ಲಿ ಈ ವಿಷಯವನ್ನು–

ಎನ್ನ ಶ್ರೋತ್ರದ ಕೊನೆಯಲ್ಲಿರ್ದು ಸುಶಬ್ದವನಜಿವಾತನು ನೀನೆ,
ಎನ್ನ ತ್ವಕ್ಕಿನ ಕೊನೆಯಲ್ಲಿರ್ದು ಸುಸ್ಪರ್ಶನವ ಮುಟ್ಟುವಾತನು ನೀನೆ,
ಎನ್ನ ನೇತ್ರದ ಕೊನೆಯಲ್ಲಿದ್ದು ಸುರೂಪವನಜಿವಾತನು ನೀನೆ,
ಎನ್ನ ಜಿಹ್ವೆಯ ಕೊನೆಯಲ್ಲಿರ್ದು ಸುರುಚಿಯನಜಿವಾತನು ನೀನೆ,
ಎನ್ನ ಘ್ರಾಣದ ಕೊನೆಯಲ್ಲಿರ್ದು ಸರ್ವಭೋಗೋಪಭೋಗವ
ಎನ್ನ ಸರ್ವಾಂಗದಲ್ಲಿರ್ದು ಸರ್ವಭೋಗೋಪಭೋಗವ
ಭೋಗಿಸುವಾತನು ನೀನೆ, ಕೂಡಲ ಚೆನ್ನಸಂಗಮದೇವಾ.

ಎಂಬಂಥ ಅನೇಕ ವಚನಗಳ ಮೂಲಕ ಪ್ರತಿಪಾದಿಸಲಾಗಿದೆ. ವ್ಯಕ್ತಿಯು ಲೋಕಾನುಭವವನ್ನು ಇಲ್ಲಿ ಶಿವಾನುರೂಪದಿಂದ ಪಡೆಯುವುದರಿಂದ, ಇದನ್ನು "ಅನುಭಾವಸ್ಥಲ" ಪದ್ಧತಿಯೆಂದೂ ಕರೆಯುತ್ತಾರೆ. ೩೬ ಸ್ಥಲಗಳ ಮಿಶ್ರಣ ಕಾರಣವಾಗಿ ಇದನ್ನೂ "ಮಿಶ್ರಷಡುಸ್ಥಲ"ವೆಂದು ಕರೆಯುತ್ತಾರೆ.

ಒಟ್ಟಿನಲ್ಲಿ 'ಲಿಂಗವಿಡಿದು ಲಿಂಗಸಿದ್ಧಿ ತತ್ವ'ವು 'ಆಚರಣೆ'ಯಾದರೆ, 'ಲಿಂಗಭೋಗೋಪಭೋಗತ್ವ'ವು 'ಸಂಬಂಧ'ವೆನಿಸುತ್ತದೆ. ಈ ಎರಡೂ ಸಿದ್ಧಾಂತಗಳನ್ನು ಪ್ರತಿಪಾದಿಸುವ ವಚನ ಸಂಕಲನಗಳಿಗೆ 'ಆಚರಣೆಯ ಸಂಬಂಧದ ವಚನ' ಎಂದು ಕರೆಯಲಾಗುತ್ತದೆ. ಕನ್ನಡದಲ್ಲಿ ಇಂಥ ಅನೇಕ ವಚನ ಕಟ್ಟುಗಳು ಸಿಗುತ್ತವೆ.

ಪರಿಷ್ಕರಣ :

ಕೂಡಲಸಂಗಮಾಧೂತನ "ಶಿಖಾರತ್ನ ಪ್ರಕಾಶವು" ಹೆಸರಿನ ಬಾಲಸಂಗಯ್ಯನ ವಚನಕೃತಿಯೊಂದಿಗೆ ವಚನಸಾಹಿತ್ಯದ ಪ್ರಕಟಣೆ ೧೮೮೩ರಿಂದ ಪ್ರಾರಂಭವಾಯಿತು. ಆಮೇಲೆ ಈ ಪ್ರಕಟನಕಾರ್ಯ ವ್ಯಾಪಕವಾಗಿ ಬೆಳೆಯುತ್ತ ನಡೆದು, ಅಲ್ಲಿ–

೧. ಪ್ರಾರಂಭದ ಪ್ರಯತ್ನಗಳು
೨. ವಿಜಾಪುರದ ಶಿವಾನುಭವ ಗ್ರಂಥಮಾಲೆಯ ಪ್ರಕಟನೆಗಳು
೩. ಧಾರವಾಡದ ಕನ್ನಡ ಅಧ್ಯಯನ ಪೀಠದ ಪ್ರಕಟನೆಗಳು
೪. ಗದುಗಿನ ತೋಂಟದಾರ್ಯಮಠದ ವೀರಶೈವ ಅಧ್ಯಯನ ಸಂಸ್ಥೆಯ ಪ್ರಕಟನೆಗಳು.

ಎಂಬ ನಾಲ್ಕು ಪ್ರಮುಖ ಘಟ್ಟಗಳು ಕಾಣಿಸಿಕೊಂಡಿವೆ.

ಗ್ರಂಥಸಂಪಾದನ ಪ್ರಸಂಗದಲ್ಲಿ ಶಿಷ್ಟಸಾಹಿತ್ಯದ ಸಂಪಾದನೆಗೆ ಬಳಸುವ ಸೂತ್ರಗಳನ್ನೇ ವಚನಸಾಹಿತ್ಯ ಸಂಪಾದನೆಗೂ ವಿದ್ವಾಂಸರು ಅನ್ವಯಿಸುತ್ತಲಿದ್ದಾರೆ. ಇದು ಸಮರ್ಪಕ ವಿಧಾನವಲ್ಲವೆಂದು ಕಾಣುತ್ತದೆ. ಹಸ್ತಪ್ರತಿಗಳನ್ನು ಹೆಚ್ಚು ಸಂಖ್ಯೆಯಲ್ಲಿ ಸಂಗ್ರಹಿಸಿದಷ್ಟೂ

ಶಿಷ್ಯಸಾಹಿತ್ಯ ಸಂಪಾದನೆ ಹೆಚ್ಚು ಶುದ್ಧವಾಗುತ್ತಿದ್ದರೆ, ವಚನಸಾಹಿತ್ಯ ಸಂಪಾದನೆ ಹೆಚ್ಚು ಅಶುದ್ಧವಾಗುವ ಸಂಭವವಿದೆ. ಏಕೆಂದರೆ ಇಲ್ಲಿ ವಿಭಿನ್ನ ಸಂಪ್ರದಾಯದ ಎಲ್ಲ ಹಸ್ತಪ್ರತಿಗಳಿಂದ ಪಾಠಗಳನ್ನು ಆಯ್ದುಕೊಂಡು, ನಮ್ಮದೇ ಆದ ಬೇರೊಂದು ಪಾಠ ರೂಪಿಸುವ ಅಪಾಯವಿದೆ. ಆದುದರಿಂದ ವಚನಗಳನ್ನು ಪರಿಷ್ಕರಿಸುವಲ್ಲಿ ಒಂದು ಉತ್ತಮ ಹಸ್ತಪ್ರತಿಯನ್ನು ಆಯ್ದುಕೊಂಡು, ಅಲ್ಲಿಯ ವಚನಗಳ ಶಿಲ್ಪಕ್ಕೆ ಭಂಗ ಬರದಂತೆ ಅಂದರೆ ಅದರ ಪಾಠಸಂಪ್ರದಾಯಕ್ಕೆ ಧಕ್ಕೆ ಆಗದಂತೆ ಭಾಷಿಕ ದೋಷಗಳನ್ನು ದೂರ ಮಾಡಬೇಕು. ಅವಶ್ಯವಿದ್ದಲ್ಲಿ ಮಾತ್ರ ಅದೇ ಕುಟುಂಬದ ಬೇರೊಂದು ಹಸ್ತಪ್ರತಿಯಿಂದ ಶುದ್ಧಪಾಠ ಎತ್ತಿಕೊಂಡು, ಆ ವಚನವನ್ನು ಸುಧಾರಣೆ ಮಾಡಿಕೊಳ್ಳಬೇಕು. ಸರಿಯಾದ ಅರ್ಥಕೊಡುವ ಮಟ್ಟಕ್ಕೆ ಅದನ್ನು ತಂದು ನಿಲ್ಲಿಸಬೇಕು. ವಚನಸಾಹಿತ್ಯ ಸಂಪಾದನೆಯಲ್ಲಿ ಇದೇ ಸರಿಯಾದ ವಿಧಾನವಾಗಿದೆ. ಪ್ರಸ್ತುತ ಕೃತಿಯನ್ನು ಈ ವಿಧಾನದ ಆದರ್ಶದಲ್ಲಿ ಪರಿಷ್ಕರಿಸಲಾಗಿದೆ. ವಚನದ ಪಾಠಸಂಪ್ರದಾಯವನ್ನು ರಕ್ಷಿಸಲಾಗಿದೆ. ಹೀಗಾಗಿ ಒಂದೇ ವಚನ ಇಲ್ಲಿಯ ಮೂರೂ ಕೃತಿಗಳಲ್ಲಿ ಬೇರೆ ಬೇರೆ ಪಾಠಗಳಿಂದ ಕಂಡುಬರುವುದು ಸಹಜವಾಗಿದೆ. ಪ್ರಸ್ತುತ "ಚೆನ್ನಬಸವಣ್ಣನವರ ಷಟ್ಸ್ಥಲವಚನ ಮಹಾಸಂಪುಟ" ಹೆಸರಿನ ಕೃತಿಯಲ್ಲಿ ಮೂರು ಕೃತಿಗಳನ್ನು ಈ ರೀತಿಯಿಂದ ಸಂಪಾದಿಸಿ ಕೊಡಲಾಗಿದ್ದು, ಅವುಗಳ ವಿವರ ಹೀಗಿದೆ:

೧. ಚೆನ್ನಬಸವರಾಜದೇವ ಷಡುಸ್ಥಲವಚನ :

"ಭಕ್ತನ ಭಕ್ತ, ಭಕ್ತನ ಮಾಹೇಶ್ವರ..." ಈ ರೀತಿ ಸ್ಥಲವಿವೇಚನೆಯುಳ್ಳ ೮೭೧ ವಚನಗಳ ಸಂಕಲನವಿದು. ಸುಮಾರು ೮ ವರ್ಷಗಳ ಹಿಂದೆ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ VIII-IIರಲ್ಲಿ "ಚೆನ್ನಬಸವರಾಜದೇವರ ಷಡುಸ್ಥಲದ ವಚನ" ಎಂಬ ಹೆಸರಿನ ಈ ತಾಳೆಗರಿ ಪ್ರತಿ (ನಂ. ಕೆ. ೧೨೦೬/೧. ಗರಿ ೬೪. ಆಕಾರ ೧೩"×೨.೨೫") ನನ್ನ ಗಮನಕ್ಕೆ ಬಂದಿತು. ಚೆನ್ನಬಸವಣ್ಣನವರ ಷಟ್ಸ್ಥಲವಚನ ಕಟ್ಟುಗಳಲ್ಲಿಯೇ ಇದು ದೊಡ್ಡ ಗಾತ್ರದ್ದಾಗಿದೆ. ಈ ಅಂಶ ನನ್ನ ಗಮನವನ್ನು ಬಲವಾಗಿ ಸೆಳೆಯಿತು. ವಚನ ಸಂಖ್ಯಾದೃಷ್ಟಿಯಿಂದ ಬಸವಣ್ಣ, ಪ್ರಭುದೇವರ ಷಟ್ಸ್ಥಲವಚನ ಕಟ್ಟುಗಳಿಗೆ ಸಮಾನವಾಗಿರುವ ಈ ಸಂಕಲನವನ್ನು ಪ್ರಕಟಿಸುವುದು ಅವಶ್ಯವೆನಿಸಿ ಹಲವು ವರ್ಷಗಳ ಹಿಂದೆಯೇ ಮೈಸೂರಿನಿಂದ ತರಿಸಿಕೊಂಡು, ಪ್ರತಿಮಾಡಿಕೊಂಡು, 'ಮೂ' ಎಂಬ ಸಂಕೇತಕೊಟ್ಟು ಇದನ್ನು ಆಧಾರ ಪ್ರತಿಯೆಂದು ಇಟ್ಟುಕೊಳ್ಳಲಾಯಿತು. ಆಮೇಲೆ ಶರಣಸ್ಥಲದವರೆಗೆ ಮಾತ್ರ ಇರುವ ಈ ಸಂಪ್ರದಾಯದ ತಾಳೆಗರಿಯು ಒಂದು ಅಪೂರ್ಣ ಪ್ರತಿ (ನಂ. ೧೫೬) ಧಾರವಾಡದ ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಂಡಾರದಲ್ಲಿರುವ ವಿಷಯವು ತಿಳಿದುಬಂದಿತು. ಇದನ್ನು 'ಅ' ಸಂಕೇತದಿಂದ ಅವಶ್ಯವೆನಿಸಿದಲ್ಲಿ ಮಾತ್ರ ಬಳಸಿಕೊಳ್ಳಲಾಗಿದೆ.[೪] ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದ ಚೆನ್ನಬಸವಣ್ಣನವರ ವಚನಗಳು (ದ್ವಿ.ಆ.) ಕೃತಿಯ ಪಾಠಗಳನ್ನೂ ಅವಶ್ಯವಿರುವಲ್ಲಿ ಸ್ವೀಕರಿಸಲಾಗಿದೆ.

ಇಲ್ಲಿಯ ಸುಮಾರು ೮೧ ವಚನಗಳು ಹೊಸವು. ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದ ಚೆನ್ನಬಸವಣ್ಣನವರ ವಚನಗಳ ದ್ವಿತೀಯ ಆವೃತ್ತಿಯಲ್ಲಿ ಸಿಗುವ ಸಮಾನ

ವಚನಗಳನ್ನು ಈ ಪರಿಷ್ಕರಣದಲ್ಲಿ ಆಯಾ ವಚನದ ಮುಂದೆ ಚೌಕಕಂಸಿನಲ್ಲಿ ಸೂಚಿಸಲಾಗಿದೆ. ಹಾಗೆ ಸೂಚಿಸದವುಗಳನ್ನು ಹೊಸ ವಚನಗಳೆಂದು ಭಾವಿಸಬೇಕು.

೨. ಚೆನ್ನಬಸವೇಶ್ವರದೇವರು ನಿರೂಪಿಸಿದ ಅನುಭಾವಷಟ್ಸ್ಥಲದ ವಚನಂಗಳು :

"ಭಕ್ತನ ಆಚಾರಲಿಂಗ, ಭಕ್ತನ ಶಿವಲಿಂಗ..." ಈ ರೀತಿ 'ಅನುಭಾವಸ್ಥಲ' ಪದ್ಧತಿಯಲ್ಲಿ ವಚನಗಳನ್ನು ಸಂಕಲಿಸಿದ ಷಡುಸ್ಥಲಕೃತಿಯಿದು. ಚೆನ್ನಬಸವಣ್ಣನವರ ಷಟ್ಸ್ಥಲವಚನ ಕಟ್ಟುಗಳಲ್ಲಿಯೇ ಹೆಚ್ಚು ಜನಪ್ರಿಯವಾಗಿರುವ ಇದರ ಅನೇಕ ಪ್ರತಿಗಳು ಹುಟ್ಟಿಕೊಂಡಿವೆ. ಈ ಕೃತಿಯನ್ನು ೧೯೧೪ರಲ್ಲಿ ಬಳ್ಳಾರಿಯ ಶಿವಲಿಂಗ ಶೆಟ್ಟಿ,[೫] ೧೯೨೬ರಲ್ಲಿ ಶ್ರೀ ಹಳಕಟ್ಟಿಯವರು ಪ್ರಕಟಿಸಿದ ಬಳಿಕ ಬಹಳ ದಿನಗಳವರೆಗೆ ಪ್ರಕಟವಾಗಿರಲಿಲ್ಲ. ಡಾ.ಆರ್.ಸಿ. ಹಿರೇಮಠರು ಪ್ರಕಟಿಸಿದ್ದರೂ ಮಧ್ಯೆ ಮಧ್ಯೆ ಹೊಸದಾಗಿ ಲಭಿಸಿದ ವಚನಗಳನ್ನು ಸೇರಿಸಿರುವುದರಿಂದ, ಈ ಕಟ್ಟಿನ ಮೂಲ ಚೌಕಟ್ಟು, ತನ್ನ ಸ್ವರೂಪವನ್ನು ಕಳೆದುಕೊಂಡಿದ್ದಿತು. ೩೨೨ (೩೨೩) ವಚನಗಳ ಈ ಕೃತಿಪರಿಷ್ಕರಣಕ್ಕಾಗಿ ಕನ್ನಡ ಅಧ್ಯಯನ ಪೀಠದ ತಾಳೆಗರಿ ಪ್ರತಿ (ನಂ. ೨೫. ಗರಿ ೬೮. ಆಕಾರ ೧.೫"×೮")ಯನ್ನು 'ಮೂ' ಸಂಕೇತದಿಂದ ಆಧಾರ ಪ್ರತಿಯಾಗಿ ಇಟ್ಟುಕೊಳ್ಳಲಾಗಿದೆ. ಇದಕ್ಕೆ ಅವಶ್ಯವೆನಿಸಿದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟವಾದ ಚೆನ್ನಬಸವಣ್ಣನವರ ವಚನಗಳು (ದ್ವಿ.ಆ.) ಕೃತಿಯನ್ನು ಭಿನ್ನಪಾಠಗಳಿಗಾಗಿ ಬಳಸಿಕೊಳ್ಳಲಾಗಿದೆ. ಈ ಆವೃತ್ತಿಯಲ್ಲಿ ಸಿಗುವ ಸಮಾನ ವಚನಗಳನ್ನು ಪ್ರಸ್ತುತ ಪರಿಷ್ಕರಣದ ವಚನಗಳ ಮುಂದೆಯೇ ಚೌಕಕಂಸಿನಲ್ಲಿ ತೋರಿಸಲಾಗಿದೆ.

೩. ಚೆನ್ನಬಸವಣ್ಣನವರ ಷಡುಸ್ಥಲದ ನಿರ್ಣಯ :

"ಭಕ್ತ, ಮಾಹೇಶ್ವರ, ಪ್ರಸಾದಿ..." ಹೀಗೆ ಸರಳವಾಗಿ ಆರು ಸ್ಥಲಗಳಲ್ಲಿ ಚೆನ್ನಬಸವಣ್ಣನವರ ೧೨೪ ವಚನಗಳನ್ನು ಸಂಕಲಿಸಿದ ಇನ್ನೊಂದು ಬಗೆಯ ಷಟ್‌ಸ್ಥಲ ಕೃತಿಯಿದು. ಕನ್ನಡ ಅಧ್ಯಯನ ಪೀಠದ ತಾಳೆಗರಿ (ನಂ. ೧೫೩, ಗರಿ ೨೨.೧೦.೫"×೧.೭೫")ಯನ್ನು 'ಮೂ' ಸಂಕೇತದಿಂದ ಆಧಾರಪ್ರತಿಯನ್ನಾಗಿ ಇಟ್ಟುಕೊಳ್ಳಲಾಗಿದೆ. ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯ ಕಾಗದ ಪ್ರತಿ (ನಂ. ೭೫೭–II, ಪತ್ರ ೧೫. ಆಕಾರ ೬.೨೫"×೪")ಯನ್ನು 'ಅ' ಸಂಕೇತದಿಂದ ಪಾಠಾಂತರಕ್ಕೆ ಅವಶ್ಯವಿದ್ದಲ್ಲಿ ಮಾತ್ರ ಬಳಸಿಕೊಳ್ಳಲಾಗಿದೆ.[೬] ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದ ಚೆನ್ನಬಸವಣ್ಣನವರ ವಚನಗಳು ಕೃತಿಯನ್ನು (ದ್ವಿ.ಆ.) ಪಾಠಾಂತರಕ್ಕಾಗಿ ಬಳಸಿಕೊಳ್ಳಲಾಗಿದ್ದು, ಈ ಆವೃತ್ತಿಯಲ್ಲಿ ಕಂಡುಬರುವ ಸಮಾನ ವಚನಗಳನ್ನು ಪ್ರಸ್ತುತ ಪರಿಷ್ಕರಣದ ಆಯಾ ವಚನಗಳ ಮುಂದೆಯೇ ಚೌಕಕಂಸಿನಲ್ಲಿ ತೋರಿಸಲಾಗಿದೆ. ಹಾಗೆ ತೋರಿಸದವು ಹೊಸ ವಚನಗಳೆಂದು ಭಾವಿಸಬೇಕು.

ವಚನಸಾಹಿತ್ಯದಲ್ಲಿ ಸಿದ್ಧರಾಮನ ಹೆಸರಿನಲ್ಲಿ ಪ್ರಕ್ಷಿಪ್ತ ವಚನಗಳ ಪ್ರಮಾಣ ಅಧಿಕವಾಗಿದ್ದರೆ, ಚೆನ್ನಬಸವಣ್ಣನವರ ವಚನಗಳಿಗೆ ಪಾಠಾಂತರ ಪ್ರಮಾಣ ಹೇರಳವಾಗಿದೆ. ಸಿದ್ಧರಾಮ ಶೈವದಿಂದ ವೀರಶೈವಕ್ಕೆ ಬಂದ ವಿಷಯವಾಗಿ ಇತಿಹಾಸದುದ್ದಕ್ಕೂ ಬೆಳೆದು ಬಂದಿರಬಹುದಾದ ವಾದ-ಪ್ರತಿವಾದಗಳ ಸಮರ್ಥನೆಗಾಗಿ ಪಕ್ಷ-ಪ್ರತಿಪಕ್ಷದವರು ಕೂಟವಚನಗಳನ್ನು ಹೇರಳ ಸಂಖ್ಯೆಯಲ್ಲಿ ಹುಟ್ಟಿಸಿದರೆಂದು ತೋರುತ್ತದೆ. ಚೆನ್ನಬಸವಣ್ಣನವರ ವಚನಗಳಿಗೆ ಕೂಟವಚನಗಳಿಗಿಂತ

ಹೇರಳ ಭಿನ್ನಪಾಠ ಹುಟ್ಟಲು ಬೇರೆ ಕಾರಣವಿದೆ. ಈ ಪ್ರಸ್ತಾವನೆಯ ಪ್ರಾರಂಭದಲ್ಲಿ ಹೇಳಿದಂತೆ ಚೆನ್ನಬಸವಣ್ಣಣವರ ವಚನಗಳ ಮುಖ್ಯವಸ್ತು ಧಾರ್ಮಿಕ ತತ್ವ. ಧರ್ಮದ ವಾರಸುದಾರರು ಕಾಲಕ್ಕೆ ತಕ್ಕಂತೆ ಮತ್ತು ತಮ್ಮ ತತ್ವಾಬಿರುಚಿಗೆ ತಕ್ಕಂತೆ ಇಲ್ಲಿಯ ಪಾಠಗಳನ್ನು ಲೋಪ, ಆಗಮ, ಆದೇಶ ರೂಪಗಳಲ್ಲಿ ಮಾರ್ಪುಗೊಳಿಸುತ್ತ ಬಂದುದೇ ಇದಕ್ಕೆ ಕಾರಣವಾಗಿರಬಹುದು. ಆದುದರಿಂದ ಚೆನ್ನಬಸವಣ್ಣನವರ ವಚನಗಳು ಸಂಕ್ಷಿಪ್ತ ಪಾಠಸಂಪ್ರದಾಯ, ವಿಸ್ತಾರಪಾಠಸಂಪ್ರದಾಯ ಇತ್ಯಾದಿ ರೀತಿಗಳಲ್ಲಿ ರೂಪಗೆಡುತ್ತ ಬಂದವು. ಮೇಲಾಗಿ ಎಲ್ಲರ ವಚನಗಳಿಗಿಂತ ಚೆನ್ನಬಸವಣ್ಣನವರ ವಚನಗಳು ಧಾರ್ಮಿಕ ಸಂದರ್ಭದಲ್ಲಿ ಹೆಚ್ಚು ಪ್ರಯೋಜಕವೆನಿಸುವುದರಿಂದ, ಅವುಗಳ ಲಿಪಿಕರಣ ಕಾರ್ಯವೂ ಪದೇ ಪದೇ ನಡೆದಿದೆ. ಈಗ ಲಿಪಿಕಾರರ ಅಜ್ಞಾನ, ಅನ್ಯಥಾಜ್ಞಾನ, ಅನವಧಾನಗಳಿಂದಾಗಿಯೂ ಈ ಪಾಠಾಂತರ ಕ್ರಿಯೆ ವರ್ಧಿಸಿದೆ.

ವಚನಗಳಲ್ಲಿ ಬಳಕೆಯಾಗಿರುವ ಸಂಸ್ಕೃತಶ್ಲೋಕಗಳ ಪ್ರಕ್ಷಿಪ್ತತೆ, ಪಾಠಾಂತರ ಇನ್ನೊಂದು ಸಮಸ್ಯೆಯೆನಿಸಿದೆ. ವಚನಗಳ ವಿಚಾರವನ್ನು ಸಮರ್ಥಿಸಲು ಅವುಗಳ ಒಡಲಲ್ಲಿ ಶರಣರೇ ಸಂಸ್ಕೃತಿಶ್ಲೋಕ ಬಳಸಿದುದುಂಟು. ಇನ್ನೂ ಸಮರ್ಥಿಸಲು ತರುವಾಯದವರು ಬೇರೆ ಕೆಲವು ಹೊಸ ಶ್ಲೋಕಗಳನ್ನು ಸೇರಿಸಿರುವ ಸಂಭವವುಂಟು. ಇದಕ್ಕೆ ವಿರುದ್ಧವಾಗಿ ಸಂಸ್ಕೃತಜ್ಞಾನವಿಲ್ಲದ ಲಿಪಿಕಾರರು ಮೂಲಶ್ಲೋಕಗಳನ್ನೂ ಕೈಬಿಟ್ಟಿರುವುದುಂಟು; ತಪ್ಪು ತಪ್ಪಾಗಿ ಲಿಪಿಸಿರುವುದುಂಟು. ೧೫೩೬ನೆಯ ನಂಬರಿನ ಪ್ರತಿಯಲ್ಲಿ ಸಂಸ್ಕೃತಶ್ಲೋಕಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಿದೆ. ಈ ಬಗೆಯ ಪ್ರತಿ ಇದೊಂದೇ ಇರುವುದರಿಂದ ಈ ಉಪಕ್ರಮ ವಿಶ್ವಾಸಾರ್ಹವಾದುದಲ್ಲವೆನಿಸುತ್ತದೆ. ಸಾಮಾನ್ಯವಾಗಿ ಎಲ್ಲ ಪ್ರತಿಗಳಲ್ಲಿ ಸಂಸ್ಕೃತ ಶ್ಲೋಕಗಳಿರುವುದರಿಂದ ಈ ಸಂಪ್ರದಾಯದ ಹಸ್ತಪ್ರತಿಗಳೇ ಪ್ರಾಮಾಣಿಕವಾಗಿರಬಹುದು. ಹೀಗಾಗಿ ಈ ಸಂಪ್ರದಾಯದ ಕೆ. ೧೨೦೬/ಪ್ರತಿಯನ್ನೇ ನಾವು ಒಪ್ಪಿಕೊಂಡಿದ್ದೇವೆ. ಲಿಪಿಕಾರರ ಅಜ್ಞಾನದಿಂದಾಗಿ ಈ ಮೂರು ಕೃತಿಗಳಲ್ಲಿ ಒಂದೂ ಶ್ಲೋಕ ಶುದ್ಧರೂಪದಲ್ಲಿ ಕಂಡುಬರುವುದಿಲ್ಲ. ತುಂಬ ನಿಷ್ಪ್ರಯೋಜಕವಾಗಿರುವ ಈ ಅಶುದ್ಧ ಶ್ಲೋಕಗಳನ್ನು ಅಡಿಯಲ್ಲಿಯೂ ಕೊಡದೆ ಇವುಗಳ ಸ್ಥಾನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ "ಚೆನ್ನಬಸವಣ್ಣನವರ ವಚನಗಳು" ಗ್ರಂಥದ ದ್ವಿತೀಯ ಆವೃತ್ತಿಯಲ್ಲಿ ಕಂಡುಬರುವ ಪರಿಷ್ಕೃತ ಶ್ಲೋಕಗಳನ್ನು ಸ್ವೀಕರಿಸಿದ್ದೇವೆ. ಇಷ್ಟಾಗಿಯೂ ಉಳಿದುಕೊಂಡ ಕೆಲವು ಶ್ಲೋಕಗಳನ್ನು ಪರಿಷ್ಕರಿಸುವುದು ನಮಗೆ ಅಸಾಧ್ಯವೆನಿಸಿದ ಕಾರಣ ಹಾಗೇ ಇಟ್ಟುಕೊಂಡಿದ್ದೇವೆ.

ಪಾಠಾಂತರಕ್ಕೆ ಸಂಬಂಧಪಟ್ಟಂತೆ ಇನ್ನೊಂದು ಸಮಸ್ಯೆಯೆಂದರೆ ಮುದ್ರಿಕೆಪಲ್ಲಟ. ಇದರಿಂದಾಗಿ ಕೆಲವೊಮ್ಮೆ ಬಸವಣ್ಣನವರ ವಚನಗಳು ಚೆನ್ನಬಸವಣ್ಣನವರ ಹೆಸರಿನಲ್ಲಿ, ಚೆನ್ನಬಸವಣ್ಣನವರ ವಚನಗಳು ಬಸವಣ್ಣನವರ ಹೆಸರಿನಲ್ಲಿ ಕಂಡುಬರುತ್ತವೆ. ಈ ಪ್ರಮಾದ ಕಾರಣವಾಗಿ ಬಸವಣ್ಣನವರ ಕೆಲವು ವಚನಗಳು ಇಲ್ಲಿ 'ಕೂಡಲ ಚೆನ್ನಸಂಗಮದೇವಾ' ಮುದ್ರಿಕೆಯಿಂದ ಸೇರಿಕೊಂಡಿವೆ. ಸಂಕಲನದ ಮೂಲ ಚೌಕಟ್ಟಿಗೆ ಭಂಗಬರಬಾರದೆಂದು ಅಡಿಯಲ್ಲಿ ನಿಜವಾದ ವಚನಕಾರರ ಸೂಚನೆ ಕೊಟ್ಟು ಅವುಗಳನ್ನು ಹಾಗೆಯೇ ಇಟ್ಟುಕೊಂಡಿದ್ದೇವೆ.

ಇದಲ್ಲದೆ ಚೆನ್ನಬಸವಣ್ಣನವರ ಕೆಲವು ವಚನಗಳು ಎರಡು ಕಡೆ ಬಂದಿವೆ. ಕಟ್ಟಿನ ಮೂಲ ಶಿಲ್ಪವನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಅವುಗಳನ್ನೂ ಹಾಗೆಯೇ ಇಟ್ಟುಕೊಳ್ಳಲಾಗಿದೆ.

ಇದೆಲ್ಲವನ್ನು ಮೀರಿಯೂ ಎದುರಾಗುವ ಭಿನ್ನಪಾಠಗಳ ಸಮಸ್ಯೆಯಂತೂ ಅನಿವಾರ್ಯ ಸ್ವರೂಪದ್ದು. ಇಂಥಲ್ಲಿ ವೀರಶೈವತತ್ವ, ಶರಣರ ಶೈಲಿಗಳನ್ನು ಗಮನಿಸಿ ಪರಿಷ್ಕರಣಕಾರ್ಯವನ್ನು ಪೂರೈಸಿದ್ದೇವೆ. ಇಷ್ಟಾಗಿಯೂ ಅನೇಕ ಪಾಠಸಮಸ್ಯೆಗಳು ಇಲ್ಲಿ ಉಳಿದುಕೊಂಡಿರುವುದು ಸಹಜ. ಎರಡು ಕಣ್ಣೇಕೆ, ನಾಲ್ಕು ಕಣ್ಣಿನಿಂದ ಓದಿದರೂ ಅಲ್ಲಲ್ಲಿ ಅಚ್ಚಿನ ತಪ್ಪು ಉಳಿದಿವೆ. ವಿದ್ವಾಂಸರು ಇದನ್ನೆಲ್ಲವನ್ನು ಮನ್ನಿಸಬೇಕಾಗಿ ವಿನಂತಿ.

ಉಳಿದಿರುವ ಕೆಲಸ :

ಚೆನ್ನಬಸವಣ್ಣನವರ 'ಷಟ್ಸ್ಥಲ ವಚನ ಕಟ್ಟು'ಗಳು (ಅ) ಭಕ್ತ, ಮಾಹೇಶ್ವರ, ಪ್ರಸಾದಿ... ಹೀಗೆ ಆರು ಸ್ಥಲಗಳಲ್ಲಿ, (ಆ) ಭಕ್ತನ ಭಕ್ತ, ಭಕ್ತನ ಮಾಹೇಶ್ವರ... ಹೀಗೆ ೩೬ ಸ್ಥಲಗಳಲ್ಲಿ, (ಇ) ಭಕ್ತನ ಆಚಾರಲಿಂಗ, ಭಕ್ತನ ಶಿವಲಿಂಗ... ಹೀಗೆ ೩೬ ಸ್ಥಲಗಳಲ್ಲಿ ಸಿಗುತ್ತವೆ. ಇಲ್ಲಿಯ 'ಅ' ಮಾದರಿಗೆ ಪ್ರಭುದೇವರ, 'ಆ' ಮಾದರಿಗೆ ಬಸವಣ್ಣನವರ ವಚನ ಕಟ್ಟು ಸಿಗುತ್ತಿದ್ದರೆ, ಮೂರೂ ಮಾದರಿಗಳಲ್ಲಿ ಚೆನ್ನಬಸವಣ್ಣನವರ ವಚನ ಕಟ್ಟು ಸಿಗುವುದು ವಿಶೇಷ ಸಂಗತಿಯಾಗಿದೆ. ಪ್ರಸ್ತುತ ಸಂಪುಟದಲ್ಲಿ ಇಂಥ ಮೂರು ಕಟ್ಟುಗಳನ್ನು ಪರಿಷ್ಕರಿಸಿ ಕೊಡಲಾಗಿ, ಇವುಗಳನ್ನು ಬಿಟ್ಟರೂ, ಒಮ್ಮೆಯೂ ಪ್ರಕಟವಾಗದೆ, ಪ್ರಕಟಿಸಲೇಬೇಕಾದ ಚೆನ್ನಬಸವಣ್ಣನವರ ಕೃತಿಗಳು ಹೀಗಿವೆ:

೧. ಚೆನ್ನಬಸವಣ್ಣನವರ ೨೫೦ ವಚನಗಳನ್ನು ಚೆನ್ನವೀರಣ್ಣೊಡೆಯನು (೧೬೫೦) ಮಿಶ್ರಷಟ್ಸ್ಥಲದ ವಚನ ಹೆಸರಿನಲ್ಲಿ ಸಂಕಲಿಸಿರುವುದಾಗಿ ಕರ್ಣಾಟಕ ಕವಿಚರಿತೆ (ದ್ವಿತೀಯ ಸಂಪುಟ ೧೯೭೩, ಪು. ೩೮೫) ತಿಳಿಸುತ್ತದೆ. ಈ ಕಟ್ಟು ಈಗ ಲಭ್ಯವಿಲ್ಲ ಶೋಧಿಸಬೇಕು. ೨. ಮದ್ರಾಸ ಓರಿಯಂಟಲ್ ಮ್ಯಾನುಸ್ಕ್ರಿಪ್ಟ್ಸ ಲೈಬ್ರರಿಯಲ್ಲಿ ಚೆನ್ನಬಸವಣ್ಣನವರ ೧೮೦ ವಚನಗಳ ತಾಳೆಗರಿ ಪ್ರತಿ ಇರುವುದಾಗಿ ಆ ಸಂಸ್ಥೆಯ, ಹಸ್ತಪ್ರತಿ ಸೂಚಿ (IV-೫೬೦)ಯಲ್ಲಿ ಹೇಳಲಾಗಿದೆ. ಈ ಪ್ರತಿ ಈಗ ಧಾರವಾಡದ ಕನ್ನಡ ಸಂಶೋಧನ ಸಂಸ್ಥೆಯಲ್ಲಿದ್ದು, ಎಲ್ಲ ಗರಿಗಳು ಹುಳು ಕೊರೆದು ಹಾಳಾಗಿವೆ. ಆರು ಸ್ಥಲಗಳಲ್ಲಿ ಕ್ರಮವಾಗಿ ೪೨, ೩೫, ೭೯, ೧೦, ೧೨, ೨, ಹೀಗೆ ೧೮೦ ವಚನಗಳಿವೆ. ಇವುಗಳಲ್ಲಿ ಕೆಲವು ಹೊಸ ವಚನಗಳಿರುವುದನ್ನು ಗಮನಿಸಿದ್ದೇನೆ. ೩. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಚೆನ್ನಬಸವಣ್ಣಣವರ 'ಮಿಶ್ರಷಟ್ಸ್ಥಲದ ವಚನ', ಹೆಸರಿನ ಕೃತಿ (ಸೂಚಿVII–೪೯೪) ಇರುವುದಾಗಿ ತಿಳಿದುಬರುತ್ತದೆ. ಇದರಲ್ಲಿ ೪೭ ವಚನಗಳಿವೆ.[೭] ಅಪ್ರಕಟಿತ ಈ ಮೂರೂ ಷಟ್ಸ್ಥಲಕೃತಿಗಳನ್ನು ಸಂಯುಕ್ತಸಂಪುಟವಾಗಿ ಪ್ರಕಟಿಸುವುದು ಅವಶ್ಯವಿದೆ.

II. ಚೆನ್ನಬಸವಣ್ಣನವರು ರಚಿಸಿದ, ಅವರ ವಚನಗಳಿಂದ ಬೇರೊಬ್ಬರು ಸಂಕಲಿಸಿದ ಷಟ್ಸ್ಥಲೇತರ ಕೆಲವು ಕೃತಿಗಳನ್ನು ಈಗಾಗಲೇ ವಿದ್ವಾಂಸರು ಪ್ರಕಟಿಸಿದ್ದಾರೆ. ಇವಲ್ಲದೆ ಈ ಬಗೆಯ ಸಣ್ಣ ಪುಟ್ಟ ಬೇರೆ ಕೃತಿಗಳು ಸಿಗುವ ಸೂಚನೆಗಳಿವೆ. ಇವೆಲ್ಲವುಗಳನ್ನು

ಸಂಕಲಿಸಿ ಇನ್ನೊಂದು ಸಂಯುಕ್ತ ಸಂಪುಟವನ್ನು ಪ್ರಕಟಿಸುವುದು ಅವಶ್ಯವಿದೆ. ಈ ಎರಡೂ ಕೆಲಸಗಳು ಕೈಗೂಡಿದರೆ ಚೆನ್ನಬಸವಣ್ಣನವರ ಸಮಗ್ರ ಸಾಹಿತ್ಯ ಪ್ರಕಟವಾದಂತಾಗುತ್ತದೆ.

---

೧. ಹರಿಹರ ಸಿದ್ಧರಾಮನನ್ನೂ ಕುರಿತು ರಗಳೆ ಬರೆದಿಲ್ಲ. ಏಕಾಂತ ರಾಮಯ್ಯನ ರಗಳೆಯಲ್ಲಿ ಸಿದ್ಧರಾಮನ ಪ್ರಸ್ತಾಪವನ್ನಾದರೂ ಮಾಡುತ್ತಾನೆ, ಚೆನ್ನಬಸವಣ್ಣನ ಹೆಸರನ್ನೇ ಎತ್ತುವುದಿಲ್ಲ. ಸಿದ್ಧರಾಮನನ್ನು ಕುರಿತು ಸ್ವತಂತ್ರಕಾವ್ಯ ಬರೆದಿರುವ ರಾಘವಾಂಕನೂ ಚೆನ್ನಬಸವಣ್ಣನ ಹೆಸರು ಎತ್ತುವುದಿಲ್ಲ.

೨. 'ಸಮಯಾಚಾರ' 'ಕಾಳಾಮುಖ' ಸಮೀಕರಣದ ಬಗ್ಗೆ ನನಗೆ ಇನ್ನೂ ಸಂದೇಹವಿದೆ. 'ಸಮಯಾಚಾರ' ಪದದ ಅರ್ಥವನ್ನು ಶೋಧಿಸಬೇಕಾಗಿದೆ. ಶಿವಭಕ್ತನೊಬ್ಬ ಶೂದ್ರನೊಂದಿಗೆ ಊಟ ಮಾಡಿಸಿದ ಕಥೆಯನ್ನೊಳಗೊಂಡ ಶಿವಾಧಿಕ್ಯ ಪುರಾಣ (ಅಪ್ರಕಟಿತ)ಕ್ಕೆ 'ಸಮಯಾಚಾರಮಠದ ಪುರಾಣ' ಎಂಬ ಹೆಸರಿದೆ. ಆದುದರಿಂದ 'ಸಮಯಾಚಾರ'ವೆಂಬುದು ಜಾತಿಮುಕ್ತ ಸಮಾಜವನ್ನು ಸೂಚಿಸುವುದೆ? ವಿಚಾರಿಸಬೇಕು.

೩. ಶಿವಾನುಭವ ೧೬–೧೦ ಪು. ೪೮೯.

* ಒಂದು ಪಟ್ಟ = ೧೨ ವರ್ಷ.

೧–೧. ವಿಭೂತಿಸ್ಥಲದಿಂದ ತಾಮಸನಿರಸನ ಸ್ಥಲದವರೆಗಿನ ಭಾಗ ಕೆಲವೊಮ್ಮೆ ಷಟ್ಸ್ಥಲವಚನ ಪ್ರತಿಗಳಲ್ಲಿ ಕಂಡುಬರುವುದಿಲ್ಲ.

೪. ಈ ಬಗೆಯ ಕಾಗದ ಪ್ರತಿ ಹುಬ್ಬಳ್ಳಿಯ ಮೂರು ಸಾವಿರ ಮಠದಲ್ಲಿಯೂ ಇರುವ ಸಾಧ್ಯತೆಯಿದೆ. (ಮೂರು ಸಾವಿರ ಮಠದ ಹಸ್ತಪ್ರತಿ ಸೂಚಿ. ಸಂಖ್ಯೆ ೩೫೩ ನೋಡಿರಿ.)

೫ ೧೯೧೪ರಲ್ಲಿ ಶ್ರೀ ಕಮಡಳ್ಳಿಮಠ ಈಶ್ವರಯ್ಯ ಅವರು ಬಳ್ಳಾರಿಯ ಕರ್ನಾಟಕ ಬುಕ್ ಡಿಪೋ ಮೂಲಕ "ಚೆನ್ನಬಸವಣ್ಣನವರ ವಚನಗಳು" ಕೃತಿಯನ್ನು ಪ್ರಕಟಿಸಿದ್ದಾರೆ. ಶಿವಲಿಂಗಶೆಟ್ಟ್ರು ಪ್ರಕಟನೆ ಮತ್ತು ಇದು ಒಂದೇ ಆಗಿರಬಹುದೇ? ನೋಡಿ: ಕನ್ನಡ ಗ್ರಂಥ ಸಲೂಚಿ, ಸಂಪುಟ. ೩. ಮೈಸೂರು ವಿಶ್ವವಿದ್ಯಾಲಯ, ಪುಟ. ೧೬೪, ೧೬೫.

೬. ಈ ಬಗೆಯ ಕಾಗದ ಪ್ರತಿ ಗದುಗಿನ ತೋಂಟದಾರ್ಯ ಮಠದಲ್ಲಿ (ಬಿ ೧೭೮) ತಾಳೆ ಪ್ರತಿ ಮೈಸೂರು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ (ಸೂಚಿ VIII–೬೨) ಇರುವುದಾಗಿ ತಿಳಿದುಬರುತ್ತದೆ. ಕಅಪೀ ಸೂಚಿ VI೩೧೪ ನೋಡಿ.

೭. ಈ ಬಗೆಯ ಇನ್ನೊಂದು ಪ್ರತಿ ಲಂಡನ್ನಿನ "ಬ್ರಿಟಿಶ್ ಲೈಬ್ರರಿ ರೆಫರನ್ಸ್ ಡಿವಿಜನ್"ದಲ್ಲಿ ಇದ್ದಂತಿದೆ. ಅದರ ನಂ. Oriental 9556.

ಚನ್ನಬಸವಣ್ಣನವರ ಜೀವನ ಮತ್ತು ವ್ಯಕ್ತಿತ್ವ

ಪ್ರೊ. ಟಿ.ಎಸ್ ಪಾಟೀಲ

ಚನ್ನಬಸವಣ್ಣನವರ ಜೀವನ ಕಥನ
ಆರಾಧ್ಯ ಪ್ರಾಣಲಿಂಗವೆಂದರಿದು,
ಪೂರ್ವಗುಣವಳಿದು, ಪುನರ್ಜಾತನಾದಬಳಿಕ
ಸಂಸಾರಬಂಧುಗಳೆನ್ನವರೆಂದೊಡೆ,
ನಂಟು ಭಕ್ತಿ, ನಾಯಕರನರಕ!
ಇಂತೆಂದುದು ಕೂಡಲ ಸಂಗನ ವಚನ,[1]
ಅಣ್ಣ, ತಮ್ಮ ಹೆತ್ತಪ್ಪ, ಗೋತ್ರವಾದರೇನು,
ಲಿಂಗಸಾಹಿತ್ಯವಿಲ್ಲದವರು ಎನ್ನವರೆನ್ನೆನಯ್ಯಾ,
ನಂಟು ಭಕ್ತಿ ನಾಯಕ ನರಕ,
ಕೂಡಲ ಸಂಗಮದೇವಾ![2]

ಪೂರ್ವಗುಣವಳಿದು ಮುನರ್ಜಾತನಾದ ಬಳಿಕ ಪೂರ್ವಸಂಸಾರ ಬಂದನಗಳನ್ನು ತನ್ನವರೆನ್ನಲಾಗದು. ಗುರುಕರಕಮಲಸಂಜಾತರಾಗಿ ಗುರುಪುತ್ರರಾದವರು, ಪೂರ್ವದ ತಂದೆ ತಾಯಿಗಳ ನೆನೆಯುವುದಾಗಲಿ ರಕ್ತಸಂಬಂಧಕ್ಕೆ ಅವಕಾಶವಾಗಲಿ ಇಲ್ಲ. ಇದು ಕೂಡಲ ಸಂಗನ ಶರಣರ ಆಣತಿ. ಅಣ್ಣ, ತಮ್ಮ, ಹೆತ್ತಪ್ಪನಾದರೂ ಲಿಂಗಸಾಹಿತ್ಯವಿಲ್ಲದವರ ಸಂಗ, ಭಂಗವೆಂಬುದು ಶರಣರ ಅಭಿಮತ. ಆದುದರಿಂದ ಗುರುಕುಲಕಮಲಸಂಜಾತರಾದ ಶರಣರ ಚರಿತ್ರೆಯಲ್ಲಿ ಪೂರ್ವಾಶ್ರಮಕ್ಕೆ ಸ್ಥಾನವಿಲ್ಲ. ಶರಣರು ವಚನಗಳಲ್ಲಿ ಎಲ್ಲಿಯೂ ತಮ್ಮ ಪೂರ್ವದ ತಂದೆ ತಾಯಿಗಳ ಹೆಸರನ್ನು ಹೇಳಿರುವುದಿಲ್ಲ, ಇದು ಗಮನಾರ್ಹ ಸಂಗತಿ. ಶರಣರ ವಚನಗಳಲ್ಲಿ ಅವರ ಜೀವನ ಚರಿತ್ರೆಗೆ ಸಂಬಂಧಪಟ್ಟ ಅಂಶಗಳು ಅತಿವಿರಳ. ಅವರ ಸಾಧನೆ, ಸಿದ್ಧಿ ಹಾಗೂ ಸಾಕ್ಷತ್ಕಾರದ ಸಂಗತಿಗಳು ಮಾತ್ರ ವಚನಗಳಲ್ಲಿ ಸ್ಪಷ್ಟವಾಗಿ ನಿರೂಪಿತವಾಗಿವೆ. ಹೀಗೆ ಶರಣರು ಜೀವನ ಕಥನಕ್ಕಿಂತಲೂ ಅನುಭಾವ ಮಥನಕ್ಕೆ ಮಹತ್ವ ನೀಡಿದರು. ಐತಿಹಾಸಿಕ ಪ್ರಜ್ಞೆಯ ಅಥವಾ ಅನಾಸಕ್ತಿಯ ಪರಿಣಾಮವಾಗಿ ಶರಣರ ಜೀವನ ಚರಿತ್ರೆಯನ್ನು ಕುರಿತು ಅಧಿಕೃತ ಗ್ರಂಥಗಳಿಲ್ಲ. ಹಲಕೆಲವು ಪುರಾಣಗಳಿಂದ ಶರಣರ ಚರಿತ್ರೆಯನ್ನು ಸಂಗ್ರಹಿಸಬಹುದು. ಅಲ್ಲಿ ಚರಿತ್ರೆಗೆ ಗೌಣ ಸ್ಥಾನ, ಪವಾಡಕ್ಕೆ ಪ್ರಧಾನ ಸ್ಥಾನ.

ಚನ್ನಬಸವಣ್ಣನವರನ್ನು ಕುರಿತು ಶಿವಕವಿಗಳು ಕಾವ್ಯಗಳನ್ನು ರಚಿಸಿದ್ದಾರೆ. ವೈಚಾರಿಕತೆ ಹಾಗೂ ವೈಜ್ಞಾನಿಕ ದೃಷ್ಟಿಗೆ ಸರಿಹೋಗುವ ಸಂಗತಿಗಳನ್ನು ಈ ಪುರಾಣಗಳಿಂದ ಸಂಗ್ರಹಿಸಿ ಚನ್ನಬಸವಣ್ಣನವರ ಜೀವನ ಕಥನ ನಿರೂಪಿಸಲಾಗಿದೆ.

ಚನ್ನಬಸವಣ್ಣನವರು ಅನುಭಾವಿ ಅಕ್ಕನಾಗಮ್ಮ ಮತ್ತು ಶಿವಸ್ವಾಮಿ ಇವರ ಪುತ್ರನೆಂದೂ, ಬಸವಣ್ಣನವರ ಸೋದರಳಿಯನೆಂದೂ ಈ ಕಾವ್ಯಗಳಿಂದ ಕಂಡುಬರುತ್ತದೆ. ಚನ್ನಬಸವಣ್ಣನವರ ಗುರು, ಅಣ್ಣ ಬಸವಣ್ಣನವರಂದು ವಚನಗಳಿಂದಲೂ. ಕಾವ್ಯಗಳಿಂದಲೂ ಸ್ಪಷ್ಟವಾಗುತ್ತದೆ.

ಭೀಮಕವಿಕೃತ ಬಸವಪುರಾಣ (ಕ್ರಿ.ಶ.ಸು. ೧೩೬೯)

ಶ್ರೀ ಚನ್ನಬಸವಣ್ಣನವರ ಉದಯ ಕುರಿತು ಹೇಳುವ ಭೀಮಕವಿ ಬಸವ ಪುರಾಣದ ಏಳನೆಯ ಸಂಧಿಯ ಸೂಚಾನಾಪದ್ಯ ಹೀಗಿದೆ.

ತರುಣಿ ನಾಗಾಂಬೆಯ ಸುಗರ್ಭದಿ
ನಿರುಪಮಜ್ಞಾನಸ್ವರೂಪಂ,
ಪರಮಕಾರಣ ಚನ್ನಬಸವಂ ಉದ್ಭವಂ ಗೈದಂ.[೩]

ಚಾಮರಸಕೃತ ಪ್ರಭುಲಿಂಗಲೀಲೆ(ಕ್ರಿ. ಶ. ಸು.೧೪೩೦)ಚಚ

ಚನ್ನಬಸವಣ್ಣನವರು, ಬಸವಣ್ಣನವರ ಪ್ರಸಾದಿಂದ ಜನಿಸಿದರಂಬ ವಿಷಯ ಪ್ರಭುಲಿಂಗಲೀಲೆಯ ಗತಿ, ಪದ್ಯ ೨೩೩ರಲ್ಲಿ ಹೀಗೆ ಉಕ್ತವಾಗಿದೆ.

ಮಿಕ್ಕು ಭಕ್ತಿಯಲೊಂದು ದಿವಸದ
ಲಕ್ಕ ನಾಗಾಯಿಗಳು ಬಸವನ
ಒಕ್ಕು ಮಿಕ್ಕ ಮಹಾಪ್ರಸಾದವನುಣಲು ಕ್ಷಣದೊಳಗೆ
ತಕ್ಕ ಶಿವತತ್ವ ಸ್ವರೂಪವೆ ಸಿಕ್ಕಿಬೆಲೆದುದಯಿಸಲು ಕಾಣುತ
ಲಕ್ಕನಾ ಬಸವೇಶ್ವರನ ಹೆಸರಿಟ್ಟಳಾ ಶಿಶುಗೆ [೪]

ವಿರೂಪಾಕ್ಷಾಪಂಡಿತಕೃತ ಚನ್ನಬಸವಪುರಾಣ(ಕ್ರಿ. ಶ.ಸು.೧೫೮೪)

ಚನ್ನಬಸವಪುರಾಣದ ಸಂಧಿ೪, ಪದ್ಯ ೨, ೩, ೪ರಲ್ಲಿ ಚನ್ನಬಸವಣ್ಣನವರು ಶಿವನ ಚಿತ್ಕಳಾಮೃತ ಪ್ರಸಾದದಿಂದ ಜನಿಸಿದರೆಂದು ಹೇಳಲಾಗಿದೆ.

ವಿರೂಪಾಕ್ಷಪಂಡಿತನ ಪ್ರಕಾರ
ನಮ್ಮೀ ಚಿತ್ಕಲಾಮೃತ ಪ್ರಸದಮಿದಂ ನಿನ್ನ ಗರ್ಭದೊಳಗೆ।
ತೊಳಗುವೆಮ್ಮೀ ಷಣ್ಮುಖಿ ಸ್ಥಿತ ಪ್ರಣವನಿ।
ರ್ಮಳ ರೂಪನಾ ಷಟ್ಸ್ಥಲಬ್ರಹ್ಮಿ ಸಕಲ ಭೂ।
ತಳವಂದ್ಯನಗಣಿತ ಪವಾಡಪುರುಷಂ ಜನಿಪನೆಂದೀಶ್ವರಂ ನುಡಿದನು [೫]

ವಿರೂಪಾಕ್ಷಪಂಡಿತನ ಈ ಗ್ರಂಥಕ್ಕೆ ಚನ್ನಬಸವಪುರಾಣವೆಂಬ ಹೆಸರು ಇರುವುದರಿಂದ ಇದರಲ್ಲಿ ಚೆನ್ನಬಸವಣ್ಣ ನವರ ಚರಿತ್ರೆಯು ಸಂಪೂರ್ಣವಾಗಿ ಬಂದಿರಬೇಂಬ ಗ್ರಹಿಕೆಯು ಆಗುವುದುಂಟು. ಆದರೆ ಕವಿಯು ತನ್ನ ಕಾವ್ಯದ ಪೀಠಿಕಾ ಸಂಧಿಯನ್ನು–

ಪರಮ ಗುರು ಚನ್ನಬಸವಂ ಸಿದ್ಧರಾಮಂಗೆ
ಪರಮಶಿವತತ್ವಮಂ ತಿಳಿಪಿ ದೀಕ್ಷೆನಿತ್ತ
ಪರಮಸತ್ಕಥೆಯಿದಂ ಸದ್ಭಕ್ತರೊಲವಿನಿಮ ಕೇಳ್ದು ಕೃತಕೃತ್ಯರಹುದು॥

ಎಂಬ ಸೂಚನಾ ಪದ್ಯದಿಂದ ಪ್ರಾರಂಭಿಸುತ್ತಾನೆ. ಆದುದರಿಂದ ಇದರಲ್ಲಿ ಮುಖ್ಯಯ ಚರಿತ್ರಭಾಗವು ಅಲ್ಪವಾಗಿಯೇ ಇದೆ. ಚನ್ನಬಸವಣ್ಣನವರ ಹೆಸರಿನಲ್ಲಿ ಪ್ರಕಟವಾದ ಈ ಮಹಾಕಾವ್ಯದಲ್ಲಿ ಅವ ಚರಿತ್ರೆಯ ಬಗ್ಗೆ ಹೆಚ್ಚಿನ ವಿವರಗಳು ಸಿಕ್ಕುವುದಿಲ್ಲ. ಚನ್ನಬಸವಣ್ಣನವರ ಉದಯ– ಬಲ್ಯ– ಪ್ರೌಢಾವಸ್ಥೆ ಈ ವಿಷಯಗಳು ವಿಸ್ತಾರಾಗಿ ಬಂದಿವೆ. ಶಿವನ ಪಂಚವಿಂಶತಿ ಲೀಲೆಗಳನ್ನು ಕವಿಯು ಬಹು ವಿಸ್ತಾರವಾಗಿ ಬಣ್ಣಿಸಿದ್ದಾನೆ.

೬೩ ಪುರತನರು. ೭೭೦ ಅಮರಣಗಣಂಗಳು, ೧೦೧ ವಿರಕ್ತರು ಇವರ ವಿಷಯವನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾನೆ.

ವಿರೂಪಾಕ್ಷಪಂಡಿತನ ಪ್ರಕಾರ ಚನ್ನಬಸವನು ಇನ್ನೂ ತನ್ನ ತಾಯಿಯ ಉದರದಲ್ಲಿದ್ದಗ ಬಿಜ್ಜಳ ಭೂಪಾಲ ಪ್ರಶ್ನೆಗೆ ಉತ್ತರಿಸುತ್ತಾನೆ. ಮಲ, ಮೂತ್ರ, ರಕ್ತ, ಮಾಂಸಗಳಿಂದ ಕೂಡಿದ ಮಾನವಶರೀರದಲ್ಲಿ ಶಿವನ ಚಿತ್ಕಳಾಮೂರ್ತಿ ಇರುವುದೇ ಎಂದು ಬಿಜ್ಜಳನು ಸಂಶಯಗೊಂಡನು. ಆಗ ನಾಗಲಾಂಬಿಕೆಯು ತನ್ನ ಉದರವನ್ನು ಉಗುರ್ಗೊನೆಯಿಂದ ಬಗಿದಳು: ಕೋಟಿ ಬಾಲಸೂರ್ಯರ ಪ್ರಕಾಶದಿಂದ ಹೊಳೆಯುವ, ಭಸಿತವನ್ನು ಧರಿಸಿದ, ನಗೆಮೊಗದ, ಕರ್ಣಕುಂಡಲ ಹಾಗೂ ಕಿರುಜಡೆಗಳಿಂದ ಶೋಭಿಸುವ ಶಿಶುವು ಶಿವಲಿಂಗಾಧರನಾಗಿ ಸುರಕುಸುಮಮಾಲಿಕೆಯ ಮಧ್ಯದಲ್ಲಿ ಕಂಗೊಳಿಸುತ್ತಿದ್ದುದನ್ನು ನೋಡಿ ಸಭಿಕರೆಲ್ಲ ವಿಸ್ಮಯಗೊಂಡರು. ನಾಗಾಲಾಂಭಿಕೆಯು ಗರ್ಭದ ಕೂಸನ್ನು ತನ್ನ ಅಂಗೈತಳಕೆ ತರಲು, ಆಕೆಯ ಉದರವು ಎಂದಿನಂತೆ ಆಯಿತು. ಈ ಸಂಗತಿಯು ಚನ್ನಬಸವ ಪುರಾಣದ ನಾಲ್ಕನೆಯ ಸಂಧಿಯ ೨೩,೨೪,೨೬,೨೭,೨೮,೩೩ ಈ ಪದ್ಯಗಳಲ್ಲಿ ವಿಸ್ತಾರವಾಗಿ ನಿರೂಪಿತವಾಗಿದೆ.

ಈ ಕವಿಗಳಲ್ಲದೆ ಬೇರೆ ಕೆಲವರು ಕವಿಗಳೂ ಚನ್ನಬಸವಣ್ಣನವರ ವೃತ್ತಾಂತವನ್ನು ತಮ್ಮ ಕಾವ್ಯಗಳಲ್ಲಿ ಅರುಹಿದ್ದಾರೆ. ಲಕ್ಕಣ್ಣದಂಡೇಶನ ಶಿವತತ್ವ ಚಿಂತಾಮಣಿ(ಕ್ರಿ. ಶ.ಸು.೧೪೨೫). ಹಲಗೆದೇವ ಸಂಪಾದಿತ ಶೂನ್ಯಸಂಪಾದನೆ(ಕ್ರಿ. ಶ. ಸು. ೧೫೩೦) ಸಿದ್ಧನಂಜೇಶನ ಗುರುರಾಜ ಚಾರಿತ್ರ (ಕ್ರಿ. ಶ.೧೬೭೨) ಶಾಂತಲಿಂಗದೇಶೀಕನ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ (ಕ್ರಿ.ಶ. ೧೬೮೦) ಅದೃಶ್ಯ ಕವಿಯ ಪ್ರೌಢರಯನ ಕಾವ್ಯ (ಕ್ರಿ.ಶ.ಸು.೧೬೮೦) ಚನ್ನಪ್ಪ ಕವಿಯ ಶರಣಲೀಲಾಮೃತ (ಕ್ರಿ.ಶ. ಸು.೧೭೦೦) ಇವರೆಲ್ಲರೂ ಚನ್ನಬಸವಣ್ಣನವರು ಪ್ರಸಾದದಿಂದ (ಬಸವಣ್ಣನವರ ಪ್ರಸಾದ, ಕಕ್ಕಯ್ಯ ನವರ ಪ್ರಸಾದ–ಶಿಪ್ರಸಾದ) ಜನಿಸಿದರೆಂದು ತಮ್ಮ ಕಾವ್ಯಗಳಲ್ಲಿ ಹೇಳಿದ್ದಾರೆ.

ಕ್ರಿ. ಶ೧೧೯೫ರಲ್ಲಿ ಆಂಧ್ರಪ್ರದೇಶದಲ್ಲಿ ಪ್ರಖ್ಯಾತನಾಗಿದ್ದ ಪಾಲ್ಕುರಿಕೆ ಸೋಮನಾಥನು ಕನ್ನಡದಲ್ಲಿ ಚನ್ನಬಸವಸ್ತೋತ್ರ ರಗಳೆ" ಎಂಬ ಗ್ರಂಥವನ್ನೂ ಸಂಸ್ಕೃತದಲ್ಲಿ" ಶ್ರೀ ಚನ್ನಬಸವೋದಹರಣಂ" ಎಂಬ ರಗಳೆ ಗ್ರಂಥವನ್ನೂ ಬರೆದಿದ್ದಾನೆ.

ಆಂಧ್ರಪ್ರದೇಶದಲ್ಲಿ ಕ್ರಿ. ಶ೧೭೫೧ರಲ್ಲಿ ಜೀವಿಸಿದ್ದ ಅತ್ತಲೂರಿಪಾಪಕವಿಯು"ಚನ್ನಬಸವ ಪುರಾಣಮು" ಎಂಬ ಚಂಪೂಗ್ರಂಥವನ್ನು ಬರೆದಿದ್ದಾನೆ. ಆಂಧ್ರ ಪ್ರದೇಶದಲ್ಲಿ ಮಲ್ಲಿಕಾರ್ಜುನ

ಪಂಡಿತಾರಾಧ್ಯವಂಶೀಯನೆಂದು ಪ್ರಸಿದ್ಧವಾದ ಕವಿ ಕುಮಾರಸ್ವಾಮಿಯು ಸಂಸ್ಕೃತದಲ್ಲಿ" ಚನ್ನಬಸವ ಪುರಾಣಂ" ಎಂಬ ಕಾವ್ಯವನ್ನು ಬರೆದಿದ್ದಾನೆ.

ಸಿಂಗಿರಾಜ ಕವಿಕೃತ'ಸಿಂಗಿರಾಜಪುರಾಣ'(ಕ್ರಿ.ಶ.೧೫೦೦)

ಚನ್ನಬಸವಣ್ಣನವರ ಚರಿತ್ರೆಯನ್ನು ವಿವರಿಸುವ ಮತ್ತೊಂದು ಮಹಾಪಾವ್ಯವೆಂದರೆ ಸಿಂಗಿರಾಜಪುರಾಣ. ಇದು ಬಸವಣ್ಣನವರು ಎಸಗಿದ ಪವಾಡಗಳನ್ನು ಮೀಸಲಾಗಿದ್ದ ಕಾವ್ಯ. ಅದರ ಕರ್ತೃ ಸಿಂಗಿರಾಜನಿಗೆ ಐತಿಹಾಸಿಕ ಪ್ರಜ್ಞೆ ಹಾಗೂ ವಿರ್ಮಶನ ಬುದ್ಧಿ ಇವೆ. ಚನ್ನಬಸವಣ್ಣನವರ ಜೀವನ ಕಥನ ನಿರೂಪಿಸುವಲ್ಲಿ 'ಪ್ರಸಾದ ಪವಾಡದ'ಅಂಶವನ್ನು ಹೇಳಲು ಪ್ರಾಯಶಃ ಕವಿಗೆ ಇಷ್ಟವಿಲ್ಲ. ಚನ್ನಬಸವಣ್ಣನವರ ತಂದೆಯ ಹೆಸರು ಶಿವದೇವ(ಶಿವಸ್ವಾಮಿ) ಎಂದು ಕವಿ ಸ್ಪಷ್ಟವಾಗಿ ಹೇಳುತ್ತಾನೆ. ಇದು ತರ್ಕದ ಒರೆಗಲ್ಲಿಗೆ. ವಿಜ್ಞಾನದ ವಿರ್ಮಶೆಗೆ ನಿಲ್ಲುವ ವಿಚಾರ. ಆದ್ದರಿಂದ ಚನ್ನಬಸವಣ್ಣನವರು ಅಕ್ಕನಾಗಾಯಿ ಮತ್ತು ಆಕೆಯ ಪತಿ ಶಿವಸ್ವಾಮಿ ಈ ದಂಪತಿಗಳ ಸುತನೆಂದು ಸ್ಪಷ್ಟಹಾಗೂ ಸೂಕ್ತ. ಚನ್ನಬಸವಣ್ಣನವರ ಜನನ ವಿಚಾರದಲ್ಲಿ('ಪ್ರಸಾದ ಪವಾಡ'ವನ್ನೇ ಮುಂದುವರೆಸದೆ) ಅಕ್ಕನಾಗಮ್ಮ ಪತಿ ಶಿವಸ್ವಾಮಿ ಎಂದು ಪ್ರಪ್ರಥಮವಾಗಿ ಹೇಳಿ ಸಿಂಗಿರಾಜನು ಮಹದುಪಕಾರ ಮಾಡಿದಾನೆ. ಸಿಂಗಿರಾಜನ ಈ ಅಭಿಪ್ರಾಯವು ಆಧುನಿಕ ವಿಮರ್ಶಕನಿಗೆ ಸೂಕ್ತವೆನಿಸುತ್ತದೆ.

ಗುರುಕಾರುಣ್ಯ

ಚನ್ನಬಸವಣ್ಣನವರಿಗೆ ಗುರುಕಾರುಣ್ಯವನ್ನು ಅನುಗ್ರಹಿಸಿದವರು ಅಣ್ಣ ಬಸವಣ್ಣನವರು ಸದ್ಗುರು ಬಸವಣ್ಣನವರ ಕರಕಮಲಸಂಜಾತರಾಗಿ ಬೆಳಗಿದವರು ಚೆನ್ನಬಸವಣ್ಣನವರು. ಈಮಾತನ್ನು ಚನ್ನಬಸವಣ್ಣನವರೇ ತಮ್ಮ ವಚನಗಳಲ್ಲಿ ಹೇಳಿದ್ದಾರೆ.

ಒಮ್ಮೆಯು ಶ್ರೀ ಗುರುವಿನ ಚರಣವ ನೆನೆದಡೆ, ಭವಬಂಧನ ಬಿಡುವುದು.
ಗುರುವೆ ಶರಣು, ಗುರುಲಿಂಗವೆ ಶರಣು.
ಹರಿಬ್ರಹ್ಮಾದಿಗಳಿಗೆ ಅಗೋಚರವಾದ,
ಕೂಡಲಚನ್ನಸಂಗಯ್ಯನೆಂಬ ಲಿಂಗ ತೋರಿದ
ಬಸವಣ್ಣ ಗುರುವೇ ಶರಣು, ಶರಣು,[೬]

ಚಿತ್‌ಪಿಂಡವು ಗರ್ಭದಲ್ಲಿರುವಾಗಲೇ ಶ್ರೀಗುರುಬಸವಣ್ಣನವರು ಇಂಗಧಾರಣ ಮಾಡಿ, ಗುರುಸಥಳದಲ್ಲಿ ನಿಂದು ಅನುಗ್ರಿಸಿದ್ದಾರೆ. ಈ ವಿಷಯವನ್ನು ಚನ್ನಬಸವಣ್ಣ ನವರೇ ತಮ್ಮ ವಚನಗಳಲ್ಲಿ ಸೃಷ್ಟೀಕರಿಸಿದ್ದಾರೆ.

...........**ನೀ ಹೊಟ್ಟೆಗೆ ವಿಭೂತಿಯ ಪಟ್ಟವ ಕಟ್ಟಿದಮದು ಆಯಿತ್ತೆನಗನುಗ್ರಹ.**[೬]

ಇಂತಹ ಪ್ರಥಮಗುರುವಾದ ಬಸವಣ್ಣನಿಂದ ಕರ್ಮಗಳು ಕಳಚಿದವು, ಸದ್ಗುರುವಿನ ಹಸ್ತಮಸ್ತಕ ಸಂಯೋಗದಿಂದ ಪೂರ್ವಗುಣವಳಿದು ಪುನರ್ಜಾತನಾದೆ, ಶರಣ ಬಸವಣ್ಣ ಭವಕಲ್ಪಿತವ ಕಳೆದನು. ಶ್ರೀಗುರು ಬಸವಣ್ಣನುಪದೇಶೀಸಿದ ಇಷ್ಟಲಿಂಗವು ಸರ್ವಾಂಗದಲ್ಲಿ ಭಿನ್ನಾಮಂಗಳಿಂದ ಪ್ರಕಾಶಿಸುತ್ತಿಹುದೆಂದು ವಿಸ್ತರಿಸಿ ಹೇಳಿದ್ದಾರೆ ಚನ್ನಬಸವಣ್ಣನವರು. ಬಸವಣ್ಣನವರ ಭಾವಾಹಸ್ತ ಮುಟ್ಟಿದ ಕಾರಣ–

ಉಪ್ಪು ನೀರೊಳು ಕೂಡಿದಂತೆ, ವಾರಿಕಲ್ಲು ಅಂಭೂಧಿಯೊಳು ಬಿದ್ದಂತೆ, ಶಿಖಿಕರ್ಪೂರಯೋಗದಂತೆ ಆದೆನೆಂದು ಅರುಹಿಪ್ಪಾರೆ.

" ಎನ್ನ ಸರ್ವಾಂಗವೆಲ್ಲವೂ ಲಿಂಗವಾದ ಪರಿಕ್ರಮವೆಂತೆಂದಡೆ,
ಶ್ರೀಗುರುಬಸವಣ್ಣನುಪದೇಶಿಸಿದ ಇಷ್ಟಲಿಂಗವೆನ್ನ ಸರ್ವಾಂಗದಲ್ಲಿ
ಭಿನ್ನನಾಮಗಳಿಂದ ಪ್ರಕಾಶಿಸುತ್ತಿಹುದು..."[೮]

ಎನ್ನುತ್ತಾರೆ ಅವಿರಳಜ್ಞಾನಿ ಚನ್ನಬಸವಣ್ಣ.

ಚನ್ನಬಸವಣ್ಣನವರ ವ್ಯಕ್ತಿತ್ವ

ಚನ್ನಬಸವಣ್ಣನವರ ವ್ಯಕ್ತಿತ್ವ ಅವರ ವಚನಗಳಲ್ಲಿ ಮೂಡಿಬಂದಿರುವುದಲ್ಲದೆ ಅವರ ವ್ಯಕ್ತಿತ್ವವು ಸಮಕಾಲೀನ ಶರಣರ ಮೇಲೆಯೂ ಪ್ರಭಾವ ಬೀರಿದೆ. ಆ ಶರಣರು ತಾವು ಕಂಡಂತೆ ತಮ್ಮ ವಚನಗಳಲ್ಲಿ ಚನ್ನಬಸವಣ್ಣನವರ ವ್ಯಕ್ತಿತ್ವವನ್ನು ಚಿತ್ರಿಸಿದ್ದಾರೆ. ಕವಿಗಳೂ ತಮ್ಮ ಕಾವ್ಯಗಳಲ್ಲಿ ಆ ವ್ಯಕ್ತಿತ್ವವನ್ನು ಪರಿಚಯಿಸಲು ಪ್ರಯತ್ನಿಸಿದ್ದಾರೆ.

ಚನ್ನಬಸವಣ್ಣನವರ ವ್ಯಕ್ತಿತ್ವ ವಿಕಸನದಲ್ಲಿ, ಬಸವಣ್ಣನವರ ಅನುಭವಮಂಟಪದ ಇತರ ಶರಣರ ಪ್ರಭಾವವನ್ನು ಕಾಣುತ್ತೇವೆ. ಚನ್ನಬಸವಣ್ಣನವರ ವಚನಗಳ ಅವಲೋಕನದಿಂದ ಈ ಪ್ರಭಾವ ಸುಸ್ಪಷ್ಟವಾಗುತ್ತಿದೆ. ಬಸವಣ್ಣನವರು, ಅಲ್ಲಮಪ್ರಭು ದೇವರು, ಮಡಿವಾಳ ಮಾಚಿದೇವರು, ಮುಂತಾದವರ ಪ್ರಭಾವ ಎದ್ದು ಕಾಣುತ್ತಿದೆ.ಬಸವಣ್ಣನವರ ಬಗೆಗಂತೂ ಚನ್ನಬಸವಣ್ಣನವರಿಗೆ ಅಪಾರ ಭಕ್ತಿ, ಅಂತಹ ಸದ್ಗುರುವಿನ ಸಾನಿಧ್ಯ ದೊರೆತದ್ದು ಪೂರ್ವಸುಕೃತ. ಶಿವಕೃಪೆಯುಳ್ಳವರಿಗೆ ಮಾತ್ರ ಅದು ಸಾಧ್ಯವೆಂದೇ ಚನ್ನಬಸವಣ್ಣನವರ ಭಾವನೆ. ಶ್ರೀಗುರು ಬಸವಣ್ಣನವರನ್ನು ಪಡೆದ ತಾವು ಕೃತಕೃತ್ಯರೆಂದು ತಮ್ಮ ವಚನಗಳಲ್ಲಿ ಮತ್ತೆ ಮತ್ತೆ ಹೇಳಿಕೊಳ್ಳುವರು.

ಚನ್ನಸಂಗಾ, ನಿಮ್ಮಲ್ಲಿ ಬಯಸಿ ಬೇಡುವಡೆ,
ಬಸವನಂತಪ್ಪ ನಿಧಾನ ದೊರಕಿತ್ತೆನಗೆ,
ಚನ್ನಸಂಗಾ, ನಿಮ್ಮಲ್ಲಿ ಬಯಸಿ ಬೇಡುವೆ,
ಬಸವನಂತಪ್ಪ ಪರುಷ ದೊರಕಿತ್ತೆನಗೆ,
ಚನ್ನಸಂಗಾ, ನಿಮ್ಮಲ್ಲಿ ಬಯಸಿ ಬೇಡುವಡೆ,
ಬಸವನಂತಪ್ಪ ಕಾಮಧೇನು ದೊರಕಿತ್ತನೆಗೆ,
ಚನ್ನಸಂಗಾ, ನಿಮ್ಮಲ್ಲಿ ಬಯಸಿಬೇಡುವಡೆ,
ಬಸವನಂತಪ್ಪ ಸುರತರು ದೊರಕಿತ್ತೆನಗೆ,
ಚನ್ನಸಂಗಾ ನಿಮ್ಮಲ್ಲಿ ಬಯಸಿ ಬೇಡುವಡೆ,
ತ್ರಿವಿಧ ತ್ರಿವಿಧದ ಮೊದಲನೆ ತೋರಿದ ಬಸವಣ್ಣನೆನಗೆ,
ಚನ್ನಸಂಗಾ ನಿಮ್ಮಲ್ಲಿ ಬಯಸಿ ಬೇಡುವಡೆ,
ಬಸವಣ್ಣನಿಂದ ನೀವಾದಿರಾಗಿ ಕೂಡಲಚನ್ನಸಂಗಯ್ಯನಲ್ಲಿ
ಪ್ರಸಾದಿಯ ಪ್ರಸಾದಿಯಾದೆನು[೯]

ತಾವು ಸಂಗನ ಬಸವಣ್ಣನ ಕರುಣದ ಶಿಶುವೆಂದೂ[೧೦] ಬಸವಣ್ಣನ ಸಂಪ್ರದಾಯದ ಕಂದನೆಂದೂ[೧೧], ಚನ್ನಬಸವಣ್ಣನವರು ತಿಳಿಸುತ್ತಾರೆ. ಒಮ್ಮೆ ಕಾಸಿ, ಒಮ್ಮೆ ಕರಗಿಸಿ, ಒಮ್ಮೆ

ಬಣ್ಣವಿಟ್ಟು ಮನದ ಮೋಹವನ್ನು ಶ್ರೀಗುರು ಬಸವಣ್ಣನವರು ಪರಿಹರಿಸಿದ ಬಗೆಯನ್ನು ಬಣ್ಣಿಸಿದ ರೀತಿ ಹೀಗಿದೆ.

ಅಜ್ಞಾನವೆಂಬ ಕಾಳಿಕೆವಿಡಿದ ಮನದ ಮೋಹವ ಪರಿಹರಿಸಿದ
ಪರಿಯ ನೋಡಿರೆ!
ಒಮ್ಮೆ ಕಾಸಿ, ಒಮ್ಮೆ ಕರಗಿಸಿ, ಒಮ್ಮೆ ಬಣ್ಣವಿಟ್ಟು,
ಎನ್ನ ಮನದ ಮೋಹವ ಕಳೆದನಯ್ಯ,
ಕೂಡಲಚೆನ್ನಸಂಗಯ್ಯ,ನಿಮ್ಮ ಶರಣ ಬಸವಣ್ಣನು[೧೨]

ಹೀಗೆ ಬಸವಾದಿ ಪ್ರಥಮರು ಕಾರುಣ್ಯದ ಶಿಶುವಾಗಿ ಬೆಳೆದ ಚೆನ್ನಬಸವಣ್ಣನವರು ತಮ್ಮ ವ್ಯಕ್ತಿತ್ವ ಬೆಳಗಿಸಿಕೊಂಡರು. ಪರಿಪೂರ್ಣತ್ವವನ್ನು ಸಾಧಿಸಿ ನಿರವಯಲ ನಿಲವಿನಲ್ಲಿ ನಿಂದರು, ನಿಜದ ಬೆಳಗಿನಲ್ಲಿ ಓಲಾಡಿದರು. ಮರಣವ ಗೆಲಿದ ಮಹಂತರಾಗಿ ಮರ್ತ್ಯವ ಪಾವನಗೊಳಿಸಿದರು ಚಿತ್‌ಪಿಂಡವಿದು ಮರ್ತ್ಯಕ್ಕೆ ಬಂದ ಚೆನ್ನಬಸವಣ್ಣನವರು ಒಡಲುಗೊಂಡು ಒಡಲುವಿಡಿಯದೆ ನಿಜದೊಡಲು ಬೆರೆಸಿದರು, 'ಕಂಗಳ ನೋಟ, ಹೃದಯದ ಜ್ಞಾನ, ಮನದೊಳಗೆ ಮತನಾಡುತ್ತಿರ್ದೆನಯ್ಯಾ! ಜೇನುಮಳೆಗಳು ಕರೆದವು, ಅಮೃತದ ಕಳೆಗಳು ಸುರಿದವು, ಕೂಡಲಚೆನ್ನಸಂಗನೆಂಬ ರಸಸಾಗರದೊಳಗೋಲಾಡುತಿರ್ದೆನಯ್ಯಾ!'[೧೩]

ಲಿಂಗಸುಖದ ಸುಗಿಯನ್ನೂ ನಿರವಯ ನಿಲವನ್ನೂ , ಚೆನ್ನಬಸವಣ್ಣನವರು ವಚನಿಸಿದ್ದಾರೆ. ಇದು ಅವರು ಮುಟ್ಟಿದ ಎತ್ತರದ ಒಂದು ಹಂತ, ನಿಂದ ನಿಲವು. ಸುಜ್ಞಾನವೇ ಮೈವೆತ್ತು ಬಂದಂತಿತ್ತು ಚೆನ್ನಬಸವಣ್ಣನವರು ಪಿಂಡಸ್ಥಲ, ಪಿಂಡಜ್ಞಾನಸ್ಥಲ ಮೊದಲಾದವುಗಳ ಮೂಲಕ ಷಟ್ಸ್ಥಲ ಸಾಧನೆಗೈದು ಇಂತಹ ಸಹಜ ಸ್ಥಿತಿಯನ್ನು ಪಡೆದಿದ್ದಾರೆ. ಹೀಗೆ ಪರಮಾನಂದ ಪರವಶವಾದ ಚೆನ್ನಬಸವಣ್ಣನವರು ಕ್ರಿಯಾವಿರಹಿತರಾಗಿರಲಿಲ್ಲ. ಬಸವಾದಿ ಪ್ರಥಮರ ಅನುಭಾವಮಾರ್ಗ ಮೊದಲಿನಿಂದ ಕೊನೆಯವರೆಗೂ ಕ್ರಿಯಾಜ್ಞಾನ ಸಾಮರಸ್ಯಯುಕ್ತವಾಗಿಯೇ ಸಾಗುವುದು. ಆದ್ದರಿಂದ ಚೆನ್ನಬಸವಣ್ಣನವರು ಷಟ್ಸ್ಥಲ ಜ್ಞಾನಸಾರಾಮೃತವನ್ನು ಮುಮುಕ್ಷುಗಳಿಗೆ ಉಣಬಡಿಸಿದರು, ಅನ್ನು ಕೊಂಡವರು ಪಾವನವಾದರು. ಉಂಡವರು ಶರಣರಾದರು. ಮರಣವ ಗೆಲಿದ ಮಹಂತರಾದರು.

ಅಂತೆಯೇ ಗುರುಕರುಣವನ್ನು ಪಡೆದು ಕೃತಾರ್ಥರಾದ ಶ್ರೀ ಸಿದ್ಧರಾಮೇಶ್ವರರು ಗುರು ಚೆನ್ನಬಸವಣ್ಣನವರನ್ನು ಕುರಿತು ಭಕ್ತಿಭಾವದಿಂದ ಹಾಡಿ ನಲಿನಲಿದಾಡಿದ್ದಾರೆ.

ಕ್ರಿಯೆಯದು ಚೆನ್ನಬಸವಣ್ಣನ ಎಡಪಾದ,
ಜ್ಞಾನವದು ಚೆನ್ನಬಸವಣ್ಣನ ಬಲಪಾದ,
ನಾನವರ ಚಮ್ಮಾವುಗೆ, ನೀನವನ ಮನೆದಾಸ ನೋಡಯ್ಯ,
ಕಪಿಲ ಸಿದ್ಧಮಲ್ಲಿಕಾರ್ಜುನ[೧೪]

ಶರಣರು ಕಂಡ ಚೆನ್ನಬಸವಣ್ಣ

ಬಸವಣ್ಣ:
ಬೆಳಗಿನೊಳಗಣ ಬೆಳಗು ಮಹಾಬೆಳಗೆಂಬ
ಪ್ರಸದದಲ್ಲೊದಗಿದ ಪ್ರಸಾದಿಯ ಪರಿಣಾಮದ
ಪರಮಾನಂದಚೆನೇನೆಂದುಪಮದುವೆನಯ್ಯಾ?

ಪರಮಾತ್ರಯವೇ ತಾನಾಗಿ, ಕೂಡಲ ಸಂಗಮದೇವಯ್ಯ
ಚನ್ನಬಸವಣ್ಣನೆಂಬ ಮಹಾಪ್ರಸಾದಿ,
ಎನ್ನ ವಾಙ್ಮನಕ್ಕಗೋಚರನಾಗಿ ನಾನೇಂಬೆನಯ್ಯಾ?[೧೫]
ಸಿದ್ಧರಾಮೇಶ್ವರ:
ಶುದ್ಧವನರಿದೆ ಚನ್ನಬಸವಣ್ಣಾ ನಿಮ್ಮಿಂದೆ
ಸಿದ್ಧವನಿರಿದೆ ಚನ್ನಬಸವಣ್ಣಾ ನಿಮ್ಮಿಂದೆ
ಪ್ರಸಿದ್ಧವನರಿದೆ ಚನ್ನಬಸವಣ್ಣಾ ನಿಮ್ಮಿಂದೆ
ಕಪಿಲಸಿದ್ಧಮಲ್ಲಿಕಾರ್ಜುನಯ್ಯ
ಚನ್ನಬಸವಣ್ಣಾ ಗುರುವಾಗಿ ಬಂದು
ಎನ್ನ ಜನ್ಮಕರ್ಮದ ನಿವೃತ್ತಿ ಮಾಡಿದನಯ್ಯಾ.[೧೬]

ಪ್ರಭುದೇವರು:

ಕಿರಿಯರಾಡೇನು ಹಿರಿಯರಾದಡೇನು
ಅರಿವಿಂಗೆ ಹಿರಿದು ಕಿರಿದುಂಟೆ?
ಆದಿ ಅನಾದಿಯಿಲ್ಲದಂದು
ಅಜಾಂಡ ಬ್ರಹ್ಮಾಂಡ ಕೋಟಿಗಳುದಯವಾಗದಂದು
ಗುಹೇಶ್ವರ ಲಿಂಗದಲ್ಲಿ ನೀನೊಬ್ಬನೆ ಮಹಾಜ್ಞಾನಿ ಎಂಬುದು
ಕಾಣಬಂದಿತ್ತು ಕಾಣಾ ಚನ್ನಬಸವಣ್ಣ.[೧೭]

ಮಹಾದೇವಿಯಕ್ಕ:

ನಿಮ್ಮ ಶರಣ ಸಮ್ಯಗ್‌ಜ್ಞಾನಿ ಚನ್ನಬಸವಣ್ಣನ ಶ್ರೀಪಾದಕ್ಕೆ ಶರಣೆಂನು
ಎನ್ನಭವಂ ನಾಸ್ತಿಯಾಯಿತ್ತಯ್ಯಾ ಪ್ರಭುವೆ.[೧೮]

ಮಡಿವಾಳ ಮಾಚಿದೇವ

ಅಹುದಹುದು, ಇಂತಿರಬೇಡವೇ ನಿರಹಂಕಾರ!
ಮಹಾಜ್ಞಾನಕ್ಕೆ ನಿರಹಂಕಾರವೆ ಶೃಂಗಾರ.
ಭಕ್ತಿಗೆ ಬಸವಣ್ಣನೆ ಶೃಂಗಾರ,
ಬಸವಣ್ಣಂಗೆ ಚನ್ನಬಸವಣ್ಣನೆ ಶೃಂಗಾರ
ಕಲಿದೇವರದೇವಾ. ಎನಗೆಯೂ ನಿನಗೆಯೂ ಚನ್ನಬಸವಣ್ಣನೆ ಶೃಂಗಾರ[೧೯]

ಕವಿಗಳು ಕಂಡ ಚನ್ನಬಸವಣ್ಣ

ಭೀಮಕವಿ
ವಿನುತಿಸುವೊಡೆದು ಕೊರೆತೆಯಲ್ಲಾ
ಘನಮಹಿಮನಹ ಬಸವನೆ ಗಣಿದಿಸಲು ಬಲ್ಲ
ಅರ್ನ ಬಸವನ ನಿಜಚರಿತ್ರವ
ನನುನಯದೊಳಾ ಚನ್ನಬಸವನೆ
ನೆನದು ಕೀರ್ತಿಸಲುರಿವನೆನುತೆಲ್ಲರು ಪೊಗಳುತಿರಲು[೨೦]

ಚಾಮರಸ
ವೀರಶೈವಾಚಾರ ಮಾರ್ಗವಿ
ಚಾರದರ್ಭಯಂತರದೊಳೀಪರಿ
ಯೋರಣೆಸಿ ಹರಕರ್ಮಭಕ್ತಿಜ್ಞಾನವಿಹುದೆಂದು
ಧಾರುಣಿಲಯರಿವಂತೆ ಕುರುಣಾ
ಕಾರನಾಗಿ ಷಡುಸ್ಥಲವನು
ದ್ಧರಿಸಿದ ಗುರುಚನ್ನಸಂಗನ ಬಸವ ಶರಣಾರ್ಥಿ[೨೧]
ವಿರೂಪಾಕ್ಷಪಂಡಿತ
ಸನ್ನುತ ಶಿವಪ್ರಸಾದವೆ ನಾಗಲಾಂಬಿಕೆಗೆ
ನನ್ನಿಯಿಂ ಶಿಶುವಾಗಿ ಜನಿಸಿ ಬಾಲ್ಯವನುಳಿದು
ಭಿನ್ನವಿಲ್ಲದೆ ಶಿವಗಣಕ್ಕೊಲಿದು ಸ್ಥಾವರಾದ್ಯನ್ಯಲಿಂಗದ ಭಜನೆಯ
ಮುನ್ನವೇ ಬಿಡಿಸಿ ಷಟ್ಸ್ಥಳಮಾರ್ಗಮಂ ತಿಳಿಪಿ
ಚನ್ನಾಗಿ ಪ್ರಾಣಲಿಂಗದ ನೆಲೆನರುಹಿ ಕೊ
ಟ್ಟುನ್ನತಸುಮುಕ್ತಿಯೊಳಗಿಂಬಿಟ್ಟ ಪರಮಗುರು ಚನ್ನಬಸವಂಗೆ ಶರಣು[೨೨]

ಸಮಕಾಲೀನ ಶರಣರ ಮೇಲೆ ಚನ್ನಬಸವಣ್ಣನವರ ಪ್ರಭಾವ

ಹೀಗೆ ಬಸವಣ್ಣನವರು ಸ್ಥಾಪಿಸಿದ ಅನುಭವಮಂಟಪವು ಅಧ್ಯಾತ್ಮದ ಅಪೂರ್ವ ಪ್ರಯೋಗಶಾಲೆ. ಅರಿವ ಸಂಪಾದಿಸಿ, ಆಚಾರವನಂಗಗೊಳಿಸಲಾಯಿತು. ಅಲ್ಲಿ, ಜಾತಿ, ವರ್ಣ, ವೃತ್ತಿ, ಭೇದವಿರಲಿಲ್ಲ. ಸ್ತ್ರೀ ಪುರುಷರೆಂಬ ಭಿನ್ನಭಾವಿಲ್ಲ. ಶಿವಭಕ್ತರೆಲ್ಲರೂ ಒಂದೆ. ಸಕಲ ಜೀವಾತ್ಮರಿಗೆ ಲೇಸು ಬಯಸುವವನೇ ಕುಲ; ಅವನೇ ಶರಣ. ಪರಸ್ಪರ ವಿಚಾರ ವಿನಿಮಯದಿಂದ. ಚರ್ಚೆಗಳಿಂದ ವಿನೂತನ ವಿಚಾರವಾದವು ಅಲ್ಲಿ ಅವತರಿಸಿತು. ವಿವಿಧ ಕಾಯಕದವರು ಯಾವುದೇ ಭೇದಭಾವಗಳಿಲ್ಲದೆ ಅಲ್ಲಿ ಸೇರಿ, ವಿಶ್ವಸಾಹಿತ್ಯಕ್ಕೆ ವಿಶೇಷಕೊಡುಗೆಯಾದ ವಚನಗಳ ಮೂಲಕ ವಿಶ್ವಧರ್ಮವನ್ನು ಬೋಧಿಸಿದರು. ದೇಹವೇ ದೇವಾಲಯ, ದಯವೇ ಧರ್ಮದ ಮೂಲ, ಕಾಯಕವೇ ಕೈಲಾಸ, ಆಚಾರವೇ ಸ್ವರ್ಗ,ಅರಿದೆಡೆ ಶರಣ, ಈ ಮೊದಲಾದ ನಿತ್ಯ ವಿನೂತನ ಶಾಶ್ವತ ತತ್ವಗಳು ಉದಯಿಸಿದವು. ಅವುಗಳನ್ನು ಲಾಲಿಸಿ, ಪಾಲಿಸಿ, ಶರಣರಾದವರು. ಮಾನವನನ್ನು ದೇವನನ್ನಾಗಿ ಪರಿವರ್ತಿಸಿದ ಮಹಾಪ್ರಯೋಗಶಾಲೆ ಅನುಭವಮಂಟಪ. ಕಲ್ಯಾಣವು ಕೈಲಾಸವಾಯಿತು. ಮರ್ತ್ಯಲೋಕವೆಲ್ಲವು ಭಕ್ತಿಸಾಮ್ರಾಜ್ಯವಾಯಿತು. ಇಮತಪ್ಪ ಕಲ್ಯಾಣವ ಹೊಕ್ಕವರೆಲ್ಲರೂ ನಿಜಲಿಂಗಪದಮಂ ಪಡೆದರು. ಲಿಂಗಾಂಗಸಾಮಸ್ಯ ಪಡೆದು. ನಿಜವನರಿದ ನಿಶ್ಚಿಂತರಾದರು, ಮರಣವ ಗೆಲಿದ ಮಹಂತರಾದರು.

ಈ ಮಹಾಪರಿವರ್ತನೆಯಲ್ಲಿ ಚನ್ನ ಬಸವಣ್ಣನವರ ಪಾತ್ರ ಮಹತ್ತರವದುದು ಚನ್ನಬಸವಣ್ಣನವರ ಪ್ರಭಾವ ಸಮಕಾಲೀನ ಶರಣರ ಮೇಲೆ ಆದದನ್ನು ವಚನಗಳಿಂದ ತಿಳಿಯಬಹುದು. ಪ್ರಮುಖ ಶರಣ, ಶರಣೆಯರೆಲ್ಲ ಚನ್ನಬಸವಣ್ಣನವರನ್ನು ಕೊಂಡಾಡಿದ್ದಾರೆ. ಚನ್ನಬಸವಣ್ಣನವರು ಅನುಭವಮಂಟಪದಲ್ಲಿ ನಡೆದ ಚರ್ಚೆಯಲ್ಲಿ ಬುಮುಖ್ಯವಾದ ಪಾತ್ರವನ್ನು ವಹಿಸಿದ್ದಾರೆ; ಮಹತ್ವದ ಎಲ್ಲ ಸನ್ನಿವೇಶಗಳಲ್ಲಿಯೂ ಚನ್ನಬಸವಣ್ಣನವರು ಕಂಡುಬರುತ್ತಾರೆ. ಮಹಾದೇವಿಯಕ್ಕನವರ ಸತ್ವಪರೀಕ್ಷೆ ನಡೆದಲ್ಲಿ, ನುಲಿಯ ಚಂದಯ್ಯಗಳು ಕಾಯಕದಲ್ಲಿ

ನಿರತರಾದಾಗ ಲಿಂಗವನ್ನು ತೊರೆದಲ್ಲಿ, ಇಂಥ ಎಲ್ಲ ಸಮಯದಲ್ಲಿ ಸಿದ್ಧರಾಮೇಶ್ವರರಿಗೆ ಗುರುವಾಗಿ ಲಿಂಗದೀಕ್ಷೆ ಕರುಣಿಸುವಲ್ಲಿ, ಇಂಥ ಎಲ್ಲ ಸಮಯದಲ್ಲಿ ಚನ್ನಬಸವಣ್ಣನವರ ವ್ಯಕ್ತಿತ್ವದ ಪ್ರಭಾವ ಎದ್ದುಕಾಣುತ್ತದೆ. ಅವರನ್ನು ಕುರಿತು ಶರಣರು ವಿವಿಧ ಮುಖವಾಗಿ ಕೊಂಡಾಡಿರುವುದನ್ನು ಕಾಣಬಹುದು. ಈ ವಚನಗಳಲ್ಲಿ ಚನ್ನಬಸವಣ್ಣನವ ಪ್ರಭಾವ ಆಯಾಯ ಶರಣರ ಮೇಲೆ ಆದುದನ್ನು ಅವಲೋಕಿಸಬಹುದು.

ಪ್ರಭುದೇವರು

ಬೆಳಗುವ ಜ್ಯೋತಿಯ ತಿರುಳಿನಂತೆ ಹೊಳೆವ ಕಂಗಳ ಕಾಂತಿ
ಒಳಹೊರಗೆನ್ನದೆ ಅಳಮಟ್ಟ ಶಿವಯೋಗಿಯ ಕಂಡೆ ನೋಡಾ!
ನಿಜಉಂಡ ನಿರ್ಮಲದ ಘನವ ಕಂಡು ಬೆರಗಾದೆ ನಾನು
ಗುಹೇಶ್ವರಲಿಂಗದಲ್ಲಿ ಚನ್ನಬಸವಣ್ಣನಿಂದಲಾನು ಬದುಕಿದೆನು[೨೩]

ಮಹಾದೇವಿಯಕ್ಕ

ಮರ್ತ್ಯಲೋಕದ ಭಕ್ತರ ಮನವ ಬೆಳಗಲೆಂದು ಇಳಿತಂದನಯ್ಯಾ ಶಿವನು:
ಕತ್ತಲೆಯ ಪಾಳೆಯವ ರವಿ ಹೊಕ್ಕಂತಾಯಿತ್ತಯ್ಯಾ.
ಚಿತ್ತದ ಪ್ರವೃತ್ತಿಯ ಹಿಂಗಿಸಿ,
ಮುಕ್ತಿಪಥವ ತೋರಿದನೆಲ್ಲ ಅಸಂಖ್ಯಾತಗಣಂಗಳಿಗೆ
ತನುವೆಲ್ಲ ಸ್ವಯಲಿಂಗ, ಮನವೆಲ್ಲ ಚರಲಿಂಗ, ಬವವೆಲ್ಲ ಮಹಾಘನದ ಬೆಳಗು.
ಚನ್ನಮಲ್ಲಿಕಾರ್ಜುನಯ್ಯಾ

ನಿಮ್ಮ ಶರಣ ಸಮ್ಯ್‌ಜ್ಞಾನಿ, ಚನ್ನಬಸವಣ್ಣನ ಶ್ರೀಪಾದಕ್ಕೆ ಶರಣೆಂದು ಎನ್ನಭವಂ ನಾಸ್ತಿಯಾಯಿತಯ್ಯಾ ಪ್ರಭುವೇ.[೨೪]

ಸಿದ್ಧಾರಾಮೇಶ್ವರ

ಎನ್ನ ಘ್ರಾಣದಲ್ಲಿ ಆಚಾರಲಿಂಗವಾಗಿ ಬಂದ ಗುರು ಚನ್ನಬಸವಣ್ಣ
ಎನ್ನ ಜಿಹ್ವೆಯಲ್ಲಿ ಗುರುಲಿಂಗವಾಗಿ ಬಂದ ಗುರು ಚನ್ನಬಸವಣ್ಣ
ಎನ್ನ ನೇತ್ರದಲ್ಲಿ ಶಿವಲಿಂಗವಾಗಿ ಬಂದ ಗುರು ಚನ್ನಬಸವಣ್ಣ
ಎನ್ನ ತ್ವಕ್ಕಿನಲ್ಲಿ ಜಂಗಮಲಿಂಗವಾಗಿ ಬಂದ ಗುರು ಚನ್ನಬಸವಣ್ಣ
ಎನ್ನ ಶ್ರೋತ್ರದಲ್ಲಿ ಪ್ರಸಾದಲಿಂಗವಾಗಿ ಬಂದ ಗುರು ಚನ್ನಬಸವಣ್ಣ
ಎನ್ನ ಹೃದಯದಲ್ಲಿ ಮಹಾಲಿಂಗವಾಗಿ ಬಂದ ಗುರು ಚನ್ನಬಸವಣ್ಣ
ಎನ್ನ ಸ್ಥೂಲದೇಹದಲ್ಲಿ ಇಷ್ಟಲಿಂಗವಾಗಿ ಬಂದ ಗುರು ಚನ್ನಬಸವಣ್ಣ
ಎನ್ನ ಸೂಕ್ಷ್ಮ ದೇಹದಲ್ಲಿ ಪ್ರಾಣಲಿಂಗವಾಗಿ ಬಂದ ಗುರು ಚನ್ನಬಸವಣ್ಣ
ಎನ್ನ ಕಾರಣದೇಹದಲ್ಲಿ ಭಾವಲಿಂಗವಾಗಿ ಬಂದ ಗುರು
ಕಪಿಲ ಸಿದ್ಧಮಲ್ಲಿಕಾರ್ಜುನನೆಂಬ ಚನ್ನಬಸವಣ್ಣ[೨೫]

ಗ್ರಂಥಸೂಚಿ

೧. ಬಸವಣ್ಣನವರ ಷಟ್‌ಸ್ಥಳದ ವಚನಗಳು, ವ. ೮೯.
೨. ಅದೇ, ವ. ೭೧೩.
೩. ಬಸವ ಪುರಾಣ ಸಂಧಿ, ೭. ಸೂಚನಾಪದ್ಮ
೪. ಪ್ರಭುಲಿಂಗಲೀಲೆ ಗತಿ ೯. ಪ. ೨೩೩.
೫. ಚೆನ್ನಬಸವಪುರಾಣ ಸಂಧಿ, ೪. ಪ. ೪.
೬. ಚೆನ್ನಬಸವಣ್ಣನವರ ವಚನಗಳು, ವ. ೫೮.
೭. ಅದೇ, ವ. ೬೦
೮. ಚೆನ್ನಬಸವಣ್ಣನವರ ವಚನಗಳು, ವ. ೩೫೮.
೯. ಚೆನ್ನಬಸವಣ್ಣನವರ ವಚನಗಳು, ವ. ೭೦೭.
೧೦. ಅದೇ, ವ. ೧೮೯.
೧೧. ಅದೇ, ವ. ೨೭೫.
೧೨. ಅದೇ, ವ. ೧೮೧.
೧೩. ಅದೇ, ವ. ೧೩೬೬.
೧೪. ಸಿದ್ಧರಾಮೇಶ್ವರರ ವಚನಗಳು, ವ. ೮೯೦.
೧೫. ಬಸವಣ್ಣನವರ ವಚನಗಳು, ವ. ೯೪೪.
೧೬. ಸಿದ್ಧರಾಮೇಶ್ವರರ ವಚನಗಳು, ವ. ೭೪೮.
೧೭. ಪ್ರಭುದೇವರ ವಚನಗಳು, ವ. ೧೦೮೧.
೧೮. ಮಹಾದೇವಿಯಕ್ಕನ ವಚನಗಳು, ವ. ೨೦೩.
೧೯. ಶೂನ್ಯಸಂಪಾದನೆ, ೯, ೪೯.
೨೦. ಬಸವಪುರಾಣ, ೭, ೧೧
೨೧. ಪ್ರಭುಲಿಂಗಲೀಲೆ, ೧. ೩.
೨೨. ಚೆನ್ನಬಸವಪುರಾಣ, ೧. ೧೩.
೨೩. ಪ್ರಭುದೇವರ ವಚನಗಳು, ವ. ೧೨೯೧.
೨೪. ಮಹಾದೇವಿಯಕ್ಕನ ವಚನಗಳು, ವ. ೨೦೩
೨೫. ಸಿದ್ಧರಾಮೇಶ್ವರರ ವಚನಗಳು, ವ. ೭೩೮.

---

* ಚೆನ್ನಬಸವಣ್ಣನವರು ಸಂ. ಜಗದಾಂಬಾ ಮಲ್ಲೇದೇವರು, ಪ್ರ. ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ, ರಾಮಾನುಜ ರಸ್ತೆ, ಮೈಸೂರು–೫೭೦ ೦೦೪, ಪು. ೧೦೪ ರಿಂದ ೧೨೩, ೧೯೯೧

ಚನ್ನಬಸವಣ್ಣನವರಲ್ಲಿ ಕರ್ಮಯೋಗ ಮತ್ತು ಭಕ್ತಿಯೋಗ

●

ಡಾ॥ ಬಿ. ನಂ. ಚಂದ್ರಯ್ಯ

ಭಾರತೀಯ ಪರಂಪರೆಯಲ್ಲಿ ಯೋಗಕ್ಕೆ ತನ್ನದೇ ಆದ ಪ್ರಾಚೀನ ಇತಿಹಾಸವಿದೆ. ಆರ್ಯ ಪೂರ್ವಯುಗದ ಹರಪ್ಪ–ಮೊಹೆಂಜೊದಾರೊ ಉತ್ಖನನಗಳಲ್ಲಿ ದೊರೆತ ಶಾಸನಗಳಲ್ಲಿ, ಯೋಗಮುದ್ರೆಯಲ್ಲಿ ಕುಳಿತಿರುವ ಶಿವನ ಪ್ರಸ್ತಾಪವಿದೆ. ಇದೇ ಶಾಸಸದಲ್ಲಿ ಕಂಡು ಬರುವ 'ಮೀನಕಣ್ಣ' ಪದ,ಯೋಗದ ಇರವನ್ನು ತಿಳಿಸುತ್ತದೆ. ತಪಸ್ಸು ಹಾಗೂ ಆಧ್ಯಾತ್ಮಿಕ ಶೌಚಕ್ಕೆ ಹೆಸರಾದವರನ್ನು 'ಮೀನಾಸ್' ಎಂದು ಆಗ ಕರೆಯುತ್ತಿದ್ದರು. "That life of asceticism wa practiced in the pre-aryan proto - Indian period is evident from the fact that one of the inscription mentions 'the learned minas who dwell in the caves'. Cave dwelling was not normal in those days, when beautifully built brick houses were common. Learned minas dwellign in caves could not but be ascetics" ಎಂದು ಫಾದರ್ ಹೆರಾಸ್ ಹೇಳುತ್ತಾರೆ.

'ಮೀನಕಣ್ಣ' ಅತ್ಯಂತ ಅರ್ಥಗರ್ಭಿತವಾದ ಪದ. ಮುಂದೆ ಸಂಸ್ಕೃತದಲ್ಲಿ 'ಅನಿಮಿಷ ದೃಷ್ಟಿ' ಎಂದು ಈ ಶಬ್ದವನ್ನು ಅನುವಾದಿಸಿಕೊಂಡರು. ಮಣಿ ವೀಕ್ಷಣೆ (crystal gazing) ಪರ್ವತಗಳಷ್ಟೇ ಹಲೆಯದು. ಅದು ಚುಂಬಕ ಶಕ್ತಿ(magnetism)ಯನ್ನು ಸೃಷ್ಟಿಸುತ್ತದೆ ಎಂಬ ನಂಬಿಕೆಯೂ ಅಷ್ಟೇ ಹಳೆಯದು. 1850ರಷ್ಟು ಈಚೆಗೆ ಬ್ಯಾರೆನ್ ವೋನ್ ರೀಷೆನ್‌ಬಾಕ್ (Baron Von reichenbac) ಈ ಲೋಕಶಕ್ತಿಯನ್ನು ಕಂಡು ಹಿಡಿದ. ಅದನ್ನು odylic force (ಪ್ರಕೃತಿಯಲ್ಲಿ ವ್ಯಾಪಿಸಿರುವ ವಿಶೇಷ ಶಕ್ತಿ) ಎಂದು ವರ್ಣಿಸಿದ. ಮನಿ ವೀಕ್ಷಣೆ ಮತ್ತು ಮನುಷ್ಯನ ದೇಹ ಮತ್ತು ಕೈಲಿರುವ ಮಣಿ ಚುಂಬಕದಿಂದ ಈ ಶಕ್ತಿಯನ್ನು ಉತ್ಪನ್ನ ಮಾಡಬಹುದು ಎಂದೂ ವರ್ಣಿಸಿದ. ವಸ್ತುವಿನ ಸಹಜ ಜಾಗ್ರತ ಸ್ಥಿತಿಯಲ್ಲಿ ಅದರ ಪ್ರಯೋಗ ನಡೆಸಿ, ಈ ವಿಶೇಷ ಶಕ್ತಿಯನ್ನು ಛಾಯಾ ಗ್ರಹಣದಲ್ಲಿ ಸೆರೆಹಿಡಿಯಬಹುದೆಂದು ತೋರಿಸಿದ. ಆದುದರಿಂದ ಚುಮಬಕ ಹರಳು ಮತ್ತು ಮನುಷ್ಯನ ದೇಹಗಳು ಇಂಥ ಶಕ್ತಿಗಳನ್ನು ಹೊರಸೂಸುತ್ತವೆ ಎಂದು ನಂಬಲು ತಕ್ಕ ಕಾರಣಗಳು ಸಿದ್ಧವಾದವು.

ಶಿವನ ನಿರಾಕಾರಸ್ವರೂಪವಾದ ಇಷ್ಟಲಿಂಗಕ್ಕೆ ಹೊಳಪಿದೆ. ಅನಿಮಿಷದೃಷ್ಟಿ ಆಕರ್ಷಣೆ

ಯನ್ನುಂಟು ಮಾಡುವುದರಿಂದ ಇಷ್ಟಲಿಮಗ ಒಂದು ಮಣಿಚುಂಬಕ. ಶಿವಯೋಗದ ಪ್ರಕಾರ ಪರಮಪರಂಜ್ಯೋತಿಸ್ವರೂಪವಾದ ಪರಾತ್ಪರವಸ್ತು ಸಹಸ್ರಾರದಲ್ಲಿರುತ್ತದೆ. ಈ ಶಕ್ತಿಯನ್ನು ಗುರು ತನ್ನ ಇಚ್ಛಾಶಕ್ತಿಯಿಂದ ಚಿತ್ತಕ್ಕೆ ತಂದು, ಚಿತ್ತದಿಂದ ದೃಕ್ಕಿಗೆ ತಂದು, ದೃಕ್ಕಿಂದ ಹಸ್ತಕ್ಕೆ ತರುತ್ತಾನೆ. ಈ ಚಿತ್ಕಲೆಯನ್ನು ಇಷ್ಟಲಿಮಗದಲ್ಲಿ ಪ್ರತಿಷ್ಠಾಪಿಸಿದ ಗುರು, ಅನಿಮಿಷ ದೃಷ್ಟಿಯಿಂದ ನೋಡಿ ಪೂಜಿಸಲು ಶಿಷ್ಯನ ಅಂಗೈಯಲ್ಲಿ ಆಯತಗೊಳಿಸುತ್ತಾನೆ.

ಶಿವನ ನಿರಾಕಾರಸ್ವರೂಪವಾದ ಇಷ್ಟಲಿಂಗಕ್ಕೆ ಹೊಳಪಿದೆ. ಅನಿಮಿಷದೃಷ್ಟಿ ಆಕರ್ಷಣೆ ಯನ್ನುಂಟು ಮಾಡುವುದರಿಂದ ಇಷ್ಟಲಿಮಗ ಒಂದು ಮಣಿಚುಂಬಕ. ಶಿವಯೋಗದ ಪ್ರಕಾರ ಪರಮಪರಂಜ್ಯೋತಿಸ್ವರೂಪವಾದ ಪರಾತ್ಪರವಸ್ತು ಸಹಸ್ರಾರದಲ್ಲಿರುತ್ತದೆ. ಈ ಶಕ್ತಿಯನ್ನು ಗುರು ತನ್ನ ಇಚ್ಛಾಶಕ್ತಿಯಿಂದ ಚಿತ್ತಕ್ಕೆ ತಂದು, ಚಿತ್ತದಿಂದ ದೃಕ್ಕಿಗೆ ತಂದು, ದೃಕ್ಕಿಂದ ಹಸ್ತಕ್ಕೆ ತರುತ್ತಾನೆ. ಈ ಚಿತ್ಕಲೆಯನ್ನು ಇಷ್ಟಲಿಮಗದಲ್ಲಿ ಪ್ರತಿಷ್ಠಾಪಿಸಿದ ಗುರು, ಅನಿಮಿಷ ದೃಷ್ಟಿಯಿಂದ ನೋಡಿ ಪೂಜಿಸಲು ಶಿಷ್ಯನ ಅಂಗೈಯಲ್ಲಿ ಆಯತಗೊಳಿಸುತ್ತಾನೆ.

ಅನಿಮಿಷ ದೃಷ್ಟಿಯನ್ನು 'ಸಂಯಮ' ಎಂದು ಕರೆಯುತ್ತಾರೆ. ಈ ಸಂಯಮವೇ ಪತಂಜಲಿಯ ಯೋಗಶಾಸ್ತ್ರದ ಕೇಂದ್ರಬಿಂದು. ರಹಸ್ಯ, ಇದನ್ನು ಸಾಧಿಸಿದವನಿಗೆ ಅತೀಂದ್ರಿಯ ಶಕ್ತಿ ಪ್ರಾಪ್ತವಾಗುತ್ತದೆ. ಆದರೆ ಹಂತ-ಹಂತವಾಗಿ ಈ 'ಸಂಯಮ'ವನ್ನು ಬಳಸಬೇಕು. ಕೆಳಹಂತವನ್ನು ಸಾಧಿಸಿ, ಉನ್ನತ ಹಂತವನ್ನು ಸಾಧಿಸಬೇಕು. ಸ್ಥೂಲದಿಂದ ಸೂಕ್ಷ್ಮಕ್ಕೆ, ಸೂಕ್ಷ್ಮದಿಂದ ಕಾರಣಕ್ಕೆ ಸಾಗಬೇಕು. ಇಷ್ಟಲಿಂಗದಿಂದ ಪ್ರಾಣಲಿಂಗಕ್ಕೆ, ಪ್ರಾಣಲಿಂಗದಿಂದ ಭಾವಲಿಂಗಕ್ಕೆ ಹರಿಯಬೇಕು. ಇದನ್ನು ಸಾಧಿಸುವುದು ಯೋಗ.

ಕಾಲಕ್ರಮದಲ್ಲಿ ಯೋಗಕ್ಕೆ ಅನೇಕಾರ್ಥಗಳು ಬಂದವು. ಅಪ್ಟೆ ತಮ್ಮ ನಿಘಂಟಿನಲ್ಲಿ ೩೮ ಅರ್ಥಗಳನ್ನು ಕೊಟ್ಟಿದ್ದಾರೆ. ಗೀತೆಯಲ್ಲಿ ಮೊದಲ ಅಧ್ಯಾಐದಲ್ಲಿಯೇ ವಿಷಾದ ಯೋಗದಿಂದ ಆರಂಭಿಸಿ, ಪ್ರತಿಯೊಂದು ಅಧ್ಯಾಯದಲ್ಲಿಯೂ ಬೇರೆ ಬೇರೆ ಯೋಗಗಳನ್ನು ಗುರುತಿಸಿದರು. 'ಯೋಗ'ವನ್ನು ಸಂಯೋಗ, ಆತ್ಮ – ಪರಮಾತ್ಮರ ಸಂಗಮ, ತಪಸ್ಸು, ಧ್ಯಾನ, ಇಂದ್ರಿಯ ಸಂಯಮ, ಚಿತ್ರವೃತ್ತಿ ನಿರೋಧ ಎಂದು ಮುಂತಾಗಿ ಕರೆದರು.

ಯೋಗದ ಸಹಾಯಕಗಳಾದ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ, ಎಂಬ ಅಷ್ಟಾಂಗಗಳಲ್ಲಿ ಮೊದಲೈದು ಬಾಹ್ಯಾಚರಣೆಗೆ ಸಂಬಂಧಿಸಿದ್ದು, ತನು ಸಂಸ್ಕಾರ ಮಾಡುತ್ತವೆ. ಕೊನೆಯ ಮೂರು ಅಂತರಂಗಕ್ಕೆ ಅಥವಾ ಮನಸ್ಸಿಗೆ ಸಂಬಂದಿಸಿದ್ದು, ಚಿತ್ತಸಂಸ್ಕಾರ ಮಾಡಿ ಸಮಾಧಿಗೆ ಕೊಂಡೊಯ್ಯುತ್ತವೆ. ಹೀಗೆ ಅಂತರಂಗ – ಬಹಿರಂಗ ಶುದ್ಧಿಯಾಗಿ, ಅಂತರ್ಮುಖಿಯಾದ ಜೀವ ಆರಾಧ್ಯ ವಸ್ತುವಿನಲ್ಲಿ ಕೇಂದ್ರಿಕೃತಗೊಂಡು, ಅಂತರ್ದೃಷ್ಟಿ ಉನ್ಮೀಲನಗೊಂಡು ಆ ವಸ್ತುವನ್ನು ಬೆಳಗುತ್ತದೆ. ಜ್ಞೇಯ-ಜ್ಞಾತೃಗಳ ಸಂಯೋಗ ಸಂಭವಿಸುತ್ತದೆ. ಆತ್ಮ – ಪರಮಾತ್ಮ ಭೇದ ಕರಗಿ, ಕರ್ಮಸ್ತಬ್ಧವಾಗಿ, ಸಮಾಧಿ ಏರ್ಪಡಿಸುತ್ತದೆ. ಈ ಸ್ಥಿತಿಯಲ್ಲಿ ಆಲಿಕಲ್ಲು ಆಲಿಕಲ್ಲ ತಾಗಿದಂತಾಗಿ, ಸಮರಸಗೊಂಡು, ತನ್ನಲ್ಲಿ ತಾನು ಲೀನವಾಗುತ್ತದೆ.

ಶಿರದಲ್ಲಿ ಗಂಡು – ಹೆಣ್ಣುಗಳಂತಿರುವ ಪೈನಿಯಲ್ ಗ್ಲಾಂಡ್ (ಬಿಂದು) ಮತ್ತು ಪಿಟ್ಯೂಟರಿಗಳ ಮದುವೆ ನಡೆದು, ಫಲವಾಗಿ ನೈಜಪ್ರಜ್ಞೆ ಅಥವಾ ಸ್ವರೂಪಜ್ಞಾನ ಉದಿಸುತ್ತ. ಆಗ ಮೂರನೆ ಕಣ್ಣು ಮಿಂಚುತ್ತದೆ. ಇಷ್ಟಲಿಂಗದಲ್ಲಿ ನೆಟ್ಟ ಅನಿವಾರ್ಯ ಅನಿಮಿಷದೃಷ್ಟಿ

ಕಾಂತಶಕ್ತಿಯನ್ನು ಸೂಸುತ್ತದೆ. ಇದು ಪೈನಿಯಲ್ ಗಲಾಂಡ್ (ಬಿಂದು) ಅನ್ನು ಕ್ರಿಯಾಶೀಲಗೊಳಿಸುತ್ತದೆ. ಇಷ್ಟಲಿಂಗದಲ್ಲಿನ ಅನಿಮಿಷದೃಷ್ಟಿ, ಬುದ್ಧಿಯಲ್ಲಿನ ನರಗಳನ್ನು ಎಚ್ಚರಿಸುತ್ತದೆ. ನಂತರ ಕಣ್ಣುಗಳ ಹಿಂಬದಿಯಲ್ಲಿರುವ ಪಿಟ್ಯೂಟರಿಗೆ ಬರುತ್ತದೆ. ಸ್ಫೂರ್ತಿಗೊಂಡ ಪಿಟ್ಯೂಟರಿ ಮೂರನೇ ವೆಂಟ್ರಿಕಲ್ ಮೂಲಕ ಹರಿದು ಮೂರನೆಯ ಕಣ್ಣನ್ನು ಬೆಳಗುತ್ತದೆ. ಶಿವಯೋಗ ಇದನ್ನು ನಮಗೆ ಕಲಿಸುತ್ತದೆ.

ಭಾರತೀಯ ಧರ್ಮಪರಂಪರೆಯಲ್ಲಿ ವಿಕಾಸಗೊಂಡು, ಅರಳಿದ ಷಡ್ದರ್ಶನಗಳ ಸಾರ್ಥಕ ಅಂಶಗಳನ್ನೆಲ್ಲ ತನ್ನಲ್ಲಿ ಅವಳಡಿಸಿಕೊಂಡು, ಸೃಷ್ಟಿಕರ್ತನಿಂದ ಹಿಡಿದು ಸೃಷ್ಟಿಯಲ್ಲಿ ಗೋಚರಿಸುವ ಅಣುವಿನವರೆಗೆ ಎಲ್ಲೆಲ್ಲೂ ವ್ಯಾಪಿಸಿರುವ ಶಕ್ತಿ ತತ್ತ್ವವನ್ನು ಗಮನಿಸಿ, ಸೂಕ್ಷ್ಮಶಕ್ತಿ ವಿಶಿಷ್ಟನಾದವನು ಶಿವ, ಸ್ಥೂಲಶಕ್ತಿ ವಿಶಿಷ್ಟನಾದವನು ಜೀವ. ಹೀಗೆ ಶಕ್ತಿ ವಿಶಿಷ್ಟವಾದ ಶಿವ – ಜೀವರಲ್ಲಿ ಕಂಡು ಬರುವ ಅದ್ವೈತವನ್ನು ಶಕ್ತಿ ವಿಶಿಷ್ಟಾದ್ವೈತವೆಂದು ಕರೆದುಕೊಂಡು ಮುಮದುವರಿದರು. ಇದರಲ್ಲಿ ಸ್ಥೂಲ ಮತ್ತು ಸೂಕ್ಷ್ಮ ಎಂದು ಎರಡನ್ನು ಶಕ್ತಿಯಿಂದ ಕಿಂಚಿಜ್ಞತಾರೂಪವನ್ನು ಪಡೆಯುತ್ತದೆ; ಸ್ಥೂಲ ಅಜಿತ್ ಶಕ್ತಿಯಿಂದ ಕಿಂಚಿತ್ ಕರ್ತೃತಾರೂಪವನು ಪಡೆಯುತ್ತದೆ. ಆದರೆ ಶಿವ ಸೂಕ್ಷ್ಮ ಚಿದಚಿದಾತ್ಮಕ ಶಕ್ತಿ ವಿಶಿಷ್ಟನಾದವನು. ಆದುದರಿಂದಲೇ ಆತ ಸರ್ವಜ್ಞ ತಾ ಮತ್ತು ಸರ್ವಕರ್ತೃತಾರೂಪನಾಗಿದ್ದಾನೆ. ಹೀಗೆ ಶಿವ ಜೀವರಿಬ್ಬರೂ ಶಕ್ತಿ ಸಮನ್ವಿತರಾದರೂ ಆ ಶಕ್ತಿಯ ಸ್ವರೂಪದಲ್ಲಿ ಭೇದ ಕಾಣುತ್ತದೆ. ಸ್ಥೂಲ ಶಕ್ತಿಯಿಂದ ಜೀವ ಆವೃತನಾಗಿ ತನ್ನ ಮೂಲ ಸ್ವರೂಪವನ್ನು ಮರೆತು, ತಾನು "ಅಲ್ಪಜ್ಞಾನಿ" "ಅಲ್ಪಶಕ್ತ" ಎಂಬ ಪರಿಮಿತ ಭಾವನೆಗೆ ಒಳಗಾಗಿದ್ದಾನೆ. ಶಿವ–ಜೀವರಲ್ಲಿರುವ ಭೇದ ಮೂಲತಃ ಇರುವ ಭೇದವಲ್ಲ; ಸ್ಥೂಲ ಮತ್ತು ಸೂಕ್ಷ್ಮಶಕ್ತಿಗಳಿಂದ ತಾತ್ಕಾಲಿಕವಾಗಿ ಕಮಡುಬರುವಂಥದು. ಇಲ್ಲಿ ಸ್ಥೂಲ ಎಂದರೆ ಅಶುದ್ಧ ಎಂದು ಅರ್ಥ ಕೊಡಲಾಗಿದೆ. ಜಿವ, ತನ್ನ ಶಸುದ್ಧತೆಯಿಂದ ಸೂಕ್ಷ್ಮ ಶಕ್ತಿವಿಶಿಷ್ಟ ಸಂಪರ್ಕವನ್ನು ಕಳೆದುಕೊಂಡಿದೆ. ಸೃಷ್ಟಿಯ ನಿರ್ಮಾಣಕಾರ್ಯಲದ್ಲಿ ಸಂಕೋಚಸ್ಥಿತಿಯನ್ನು ಪಡೆದು ಆಣವ, ಮಾಯಾ, ಕಾರ್ಮಿಕ ಮಲತ್ಯಗಳಿಗೆ ಒಳಗಾಗಿ ಜೀವ, ತನ್ನ ಶುದ್ಧ ಸ್ವರೂಪವನ್ನು ಕಳೆದುಕೊಂಡು ಅಶುದ್ಧವಾಗುತ್ತದೆ. ಅಂದರೆ ಸೂಕ್ಷ್ಮಶಕ್ತಿ ವಿಶಿಷ್ಟನಾದ ಶಿವನ ಅಂಶವೇ ಜೀವರುಗಳಾಗಿ ಪರಿಣಮಿಸಿ ಸ್ಥೂಲ ಶಕ್ತಿಯಿಂದ ಆವೃತವಾಗುತ್ತವೆ. ಈ ಸಂಕೋಚ ಸ್ಥಿತಿಯಿಂದ ಬಿಡುಗಡೆ ಪಡೆದುಮೂಲರೂಪದ ಪೂರ್ಣ ವಿಕಾಸ ಸ್ಥಿತಿಯನ್ನು ಪಡೆದಾಗ ಸೂಕ್ಷ್ಮ ಚಿದಚಿದಾತ್ಮಕ ಶಕ್ತಿ ವಿಶಿಷ್ಟವಾಗಿ, ಶಿವನೊಡನೆ ಅದ್ವೈತಭಾವವನ್ನು ಪಡೆಯುತ್ತದೆ.

ಮನುಷ್ಯಲೋಕದಲ್ಲಿ ಮನುಷ್ಯರಾಗಿ ಹುಟ್ಟಿದ ಜೀವಿಗಳು ಈ ಸ್ಥಿತಿಯ್ನು ಪಡೆಯಲು ಅನೇಕ ಸಾಧನಾಮಾರ್ಗಗಳನ್ನು ಅವಲಂಬಿಸಿವೆ. ಇದಕ್ಕಾಗಿ ಶರಣರು ಅನುಸರಿಸಿದ ಸಾಧನಾಮಾರ್ಗ, ಷಟ್ಸ್ಥಲ ಸಾಧನಾ ಮಾರ್ಗ, ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಈ ಆರೂ ಸ್ಥಲಗಳನ್ನು, ಆಚರಣೆಯ ಮಾರ್ಗದಲ್ಲಿ ಅಳವಡಿಸಿಕೊಳ್ಳುವಾಗ, ಸಾಧಕನ ಅನುಭವಕ್ಕನುಗುಣವಾಗಿ ಅನೇಕ ಉಪವಿಭಾಗಗಳನ್ನು ಮಾಡಿಕೊಂಡಿದ್ದಾರೆ. ೧೮,೩೬, ೨೧೬, ೧೦೧ ಹೀಗೆ ಸ್ಥಲ ವಿಭಾಗ ಮಾಡಿಕೊಂಡಿದ್ದಾರೆ. ಇದನ್ನೇ ಚನ್ನಬಸವಣ್ಣನವರು

"ಸಾಕಾರ ಹದಿನೆಂಟು ಸ್ಥಲ ಅಂಗದಲ್ಲಿ ಆಚರಿಸುತ್ತ, ಅಲ್ಲಲ್ಲಿಗೆ ಭಕ್ತ, ಅಲ್ಲಲ್ಲಿಗೆ ಮಹೇಶ್ವರ, ಅಲ್ಲಲ್ಲಿಗೆ ಪ್ರಸಾದಿಯಾಗಿಪ್ಪ ಆ ಸಾಕಾರವನೇನೆಂದು ಉಪಮಿಸುವೆನಯ್ಯಾ? ನಿರಾಕಾರ

ಹದಿನೆಂಟು ಸ್ಥಳವ ಆತ್ಮನಲ್ಲಿ ಆಚರಿಸುತ್ತ ಅಲ್ಲಲ್ಲಿಗೆ ಪ್ರಾಣಲಿಂಗಿ, ಅಲ್ಲಲ್ಲಿಗೆ ಶರಣ, ಅಲ್ಲಲ್ಲಿಗೆ ಐಕ್ಯನಾಗಿರ್ಪ ಆ ನಿರಾಕಾರವನೇನೆಂದು ಉಪಮಿಸುವೆನಯ್ಯಾ? ಆ ಸಾಕಾರ ಹದಿನೆಂಟು ಸ್ಥಲವ ಅಂಗದಲ್ಲಿ ಆಚರಿಸುವುದು ಭಕ್ತಸ್ಥಲ; ಆ ನಿರಾಕಾರ ಹದಿನೆಂಟು ಸ್ಥಲವ ಆತ್ಮನಲ್ಲಿ ಆಚರಿಸುವುದು ಜಂಗಮ ಸ್ಥಲ. ಇಂತೀ ಉಭಯ ಸ್ಥಲ ಒಂದಾಗಿ ನಿಂದ ನಿಜದ ನಿಲವು ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಲಿಂಗೈಕ್ಯವು. " ಭಕ್ತ, ಜಂಗಮ ಸ್ಥಲ ಒಂದಾದುದೇ ಐಕ್ಯ ಎಂದು ಹೇಳಿದರು.

ಇದನ್ನೆ ಈ ರೀತಿ ಆಚರಣೆಯಲ್ಲಿ ವಿಂಗಡಿಸಿಕೊಂಡಿದ್ದಾರೆ.

ಚನ್ನಬಸವಣ್ಣ ವಯಸ್ಸಿನಲ್ಲಿ ಕಿರಿಯರಾದರೂ ಜ್ಞಾನದಲ್ಲಿ ಹಿರಿಯರು. ಅದರಿಂದಲೇ ಅವರನ್ನು ಬೌದ್ಧಿಕ ಸಾಮ್ರಾಜ್ಯದ ನಿರಂಕುಶ ಚಕ್ರವರ್ತಿ, ಮಿಂಚಿದ ಪ್ರತಿಭೆ, ಪಾದರಸದಂಥ ಸ್ವಭಾವ ಎಂದು ಮುಂತಾಗಿ ಹೊಗಳಿದ್ದಾರೆ. ಅಂತೆಯೇ ಪ್ರಭುದೇವರ ಕೆಳಗಿನ ವಚನಗಳು ಚನ್ನಬಸವಣ್ಣನವರ ಮಹತ್ವವನ್ನು ತಿಳಿಸುತ್ತವೆ:


ಕಾಯವಿಡಿದು ಹುಟ್ಟಿದಾತ ಕಾಲಾಗ್ನಿರುದ್ರನಾಗಲಿ, ಕಾಯವಿಡಿದು ಹುಟ್ಟಿದಾತ ಕಾಮಸಂಹಾರನಾಗಲಿ, ಕಾಯವಿಡಿದು ಹುಟ್ಟಿದಾತ ಅನಾದಿ ಪರಮೇಶ್ವರನಾಗಲಿ, ಅರಿವು ಸಾಧ್ಯವಾಗದು. ಅವರಿಗೆಯು ಗುಹೇಶ್ವರ ಲಿಂಗದಲ್ಲಿ ನೀನು ಕಾಯವಿಡಿದು ಕಲ್ಪಿತವ ಹೊದ್ದೆ ಎಂಬುದು ಕಾಣಬಂದಿತ್ತು ನೋಡಾ ಚನ್ನಬಸವಣ್ಣ.

....ಮಾಯೆಯ ಹೊಡೆಗಿಚ್ಚು ಗೆಲಬ್ಬರೆ ಗುಹೇಶ್ವರ ಲಿಂಗದಲ್ಲಿ ಸರ್ವಸಂದೇಹವಳಿದಿಪ್ಪ ಚನ್ನಬಸವಣ್ಣಂಗೆ ನಮೋ ನಮೋ ಎಂಬೆನು" ಎಂದು ಮುಂತಾಗಿ ಜ್ಞಾನ ವೈರಾಗ್ಯದ ಮಹಾಮೇರುವೇ ಆದ ಪ್ರಭುದೇವರ ಈ ಮಾತುಗಳು ಚನ್ನಬಸವಣ್ಣನವರು ಸಾಧಿಸಿದ್ದ ಸಿದ್ಧಿ, ನಿಲವನ್ನು ಸ್ಪಷ್ಟವಾಗಿ ಚಿತ್ರಿಸುತ್ತವೆ. ಚನ್ನಬಸವಣ್ಣನವರು ತಮ್ಮ ಈ ವ್ಯಕ್ತಿತ್ವದಿಂದಾಗಿಯೇ ಅನುಭವಮಂಟಪದಲ್ಲಿ ಧೀರ, ದಿಟ್ಟ ನಿಲುವಿನ ಪ್ರಭಾವೀ ವ್ಯಕ್ತಿ – ಶಕ್ತಿಗಳಾಗಿದ್ದರು. ಬಸವಣ್ಣನವರನ್ನು ಒಳಗೊಂಡಂತೆ ಸಮಸ್ತ ಶರಣ ಸಂದೋಹವನ್ನು, ಅನುಭವಮಂಟಪದ ಕಾರ್ಯಕಲಾಪಗಳನನು ಚಾಕಚಕ್ಯತೆಯಿಂದ ಅತ್ಯಂತ ಜಾಣ್ಮೆ ಕಶಲಗಳಿಮದ ನಿಯಂತ್ರಿಸುತ್ತಿದ್ದರು. ಬಸವಣ್ಣನವರಂತೆ ಬರಬರ ಉಬ್ಬುವ ಭಾವುಕ ಭಕ್ತಿಗಿಂತ ನಿಚ್ಚಳ ಶಾಸ್ತ್ರಾಜ್ಞಾನದಿಂದೊಡಗೂಡಿದ ಅನುಭಾವವನ್ನು ಪಡೆದಿದ್ದರು ಪ್ರತಿಯೊಂದನ್ನೂ ತಮ್ಮ ನಿಶಿತಮತಿಯೊರೆಗಲ್ಲಿಗೆ ತೀಡಿ, ತಮ್ಮ ವೈಚಾರಿಕ ಅನುಭಾವದ ಬೆಳಕಿನಲ್ಲಿ ಅದ್ದಿ ಸ್ವೀಕರಿಸಿದ್ದಲ್ಲದೆ, ಶರಣ ಸಮಾಜದಲ್ಲಿ ಅದನ್ನು ಹರಿಯಬಿಟ್ಟರು. ಹೀಗೆ ಷಟ್ಸ್ಥಲದ ಸಾರಾಯವನ್ನು ಸ್ವಾಯತ ಮಾಡಿಕೊಂಡಿದ್ದ ಚನ್ನಬಸವಣ್ಣನವರನ್ನು ಷಟ್ಸ್ಥಲಚಕ್ರವರ್ತಿ ಎಂದು ಕರೆದರು. ಅನ್ಯ ಕಾರ್ಯಗಳಲ್ಲಿ ತೊಡಗಿದ್ದುದರಿಂದ, ಇವರಲ್ಲಿ ನಿಶಿತ, ನಿಚ್ಚಳ ಷಟ್ಸ್ಥಲಜ್ಞಾನವಿದುದ್ದರಿಂದ, ಅದಕ್ಕೊಂದು ರೂಪು ಕೊಡುವಂತೆ, ಬಸವಣ್ಣನವರು ಆ ಕಾರ್ಯಕ್ಕೆ ಚನ್ನಬಸವಣ್ಣನವರನ್ನು ನೇಮಿಸಿದರು. ಆ ಕಾರ್ಯಭಾರವನ್ನು ಸಂತೋಷದಿಂದ ಒಪ್ಪಿಕೊಂಡ ಚನ್ನಬಸವಣ್ಣನವರು ಈ ರೀತಿ ಷಟ್ಸ್ಥಲವನ್ನು ವಿಂಗಡಿಸಿದರು – ಭಕ್ತಿಸ್ಥಲಲದಲಿ ಪಿಂಡಸ್ಥಲ. ಪಿಂಡಜ್ಞಾನಸ್ಥಲ, ಸಂಸಾರ ಹೇಯಸ್ಥಲ, ಗುರುಕಾರುಣ್ಯಸ್ಥಲ, ತಾಮಸ ನಿರಸನ ಸ್ಥಲ. ಸ್ಥಲ ನಿರ್ದೇಶ, ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಈ ಕ್ರಮದಲ್ಲಿ ವಿಂಗಡಿಸಿದರು. ಮುಂದಿನ ಐದೂ ಸ್ಥಲಗಳಲ್ಲಿ ಇದೇ ಕ್ರಮವನ್ನು

ಅನುಸರಿಸಿ ಆರೂ ಸ್ಥಲಗಳಿಗೆ ಅನ್ವಯವಾಗುವಂತೆ ಷಟ್ಸ್ಥಲವನ್ನು ವಿಂಗಡಿಸಿ ಈ ಮಾರ್ಗದಲ್ಲಿ ಭಕ್ತ ಸಾಧನಾನಿರತನಾಗಿ ಲಿಂಗಾಂಗಸಾಮರಸ್ಯವನ್ನು, ಭಕ್ತ – ಜಂಗಮ ಸಂಯೋಗವನ್ನು ಸಾಧಿಸಬೇಕೆಂದು ವಿಧಿಸಿದರು. ಇವರ ಈ ವಿಧಿಯಲ್ಲಿ ಆಯಾಯ ಸ್ಥಲದಲ್ಲಿದ್ದುಕೊಂಡೇ ಲಿಂಗಾಂಗಸಾಮರಸ್ಯವನ್ನು ಸಾಧಿಸಬಹುದೆಂದು ತೋರಿಸಿದರು.

ಷಟ್ಸ್ಥಲ ಸಾದನೆಯಲ್ಲಿ ಯೋಗವನ್ನು ಅಳವಡಿಸಿಕೊಳ್ಳುವುದನ್ನು ಶರಣರು ಹೇಳುತ್ತಾರೆ. ಚನ್ನಬಸವಣ್ಣನವರು ತಮ್ಮ ೧೯೭೭ನೆಯ ವಚನದಲ್ಲಿ ಯೋಗದ ವಿವರಗಳನ್ನು ಕೊಡುತ್ತಾನೆ. ಸ್ಥಳದಿಂದ ಸ್ಥಳಕ್ಕೆ, ಅಥವಾ ನಿಮ್ನಸ್ತರದಿಂದ ಉನ್ನತಸ್ತರಕ್ಕೆ ಏರುತ್ತ ಹೋದಂತೆಲ್ಲ ತನುಮನಗಳನ್ನು ಮೇಳವಿಸುವ ಪ್ರಯತ್ನದಲ್ಲಿ ಯೋಗದ ಸಹಾಯ ಅವಶ್ಯಕ. ಹಿಂದೆ ತಿಳಿಸಿರುವಂತೆ ಯೋಗದಲ್ಲಿ ನಾನಾ ರೀತಿಗಳುಂಟು, ನಾನಾ ಹಂತಗಳುಂಟು. ಮಂತ್ರಯೋಗ, ಲಯಯೋಗ, ಹಠಯೋಗ, ರಾಜಯೋಗ, ಶರಣರು ಇವುಗಳಲ್ಲಿಯೇ ನಿಲ್ಲದೆ, ಇವುಗಳನ್ನು ದಾಟಿ, ಶಿವಯೋಗವನ್ನು ಪಡೆದವರು, ಶಿವಯೋಗ ಸಿದ್ಧಿಯ ಸಾಧನೆಯ ಹಾದಿಯಲ್ಲಿ ಭಕ್ತಿಯೋಗ, ಕರ್ಮಯೋಗ, ಜ್ಞಾನಯೋಗಗಳನ್ನು ಅಳವಡಿಸಿಕೊಂಡು ಮುನ್ನಡೆಯಬೇಕು. ಇವು ತೋರಿಕೆಯಲ್ಲಿ ಭಿನ್ನವಾದರೂ ಸಾಧನೆಯಲ್ಲಿ ಒಂದೇ ಎಂಬುದನ್ನು ಮರೆಯಬಾರದು.

ಕರ್ಮಯೋಗ : ಕರ್ಮ ಎಂದರೆ ಕೆಲಸ. ಮಾಡುವ ಎಲ್ಲ ಕೆಲಸಗಳೂ ಕರ್ಮವೇ. ಕರ್ಮದ ಫಲವನ್ನು ತಾಂತ್ರಿಕವಾಗಿ ಕರ್ಮ ಎಂದೇ ಕರೆಯುತ್ತಾರೆ. ಆಧ್ಯಾತ್ಮಿಕ ದೃಷ್ಟಿಯಿಂದ ಪೂರ್ವಾರ್ಜಿತಕರ್ಮಗಳ ಫಲವೂ ಕರ್ಮವೇ. ಆದರೆ ಕರ್ಮಯೋಗದಲ್ಲಿ ಕೇವಲ ಕೆಲಸ ಎಂದಷ್ಟೇ ಅರ್ಥ. ಮನುಷ್ಯನ ಉದ್ದೇಶ ಜ್ಞಾನ. ಇದೇ ನಮ್ಮ ಧರ್ಮ ನಮ್ಮ ಮುಂದಿಟ್ಟಿರುವ ಆದರ್ಶ. ಸಂತೋಷವೇ ಜ್ಞಾನ ಎಂದು ತಿಳಿಯುವುದು ತಪ್ಪು. ಇದೇ ನಮ್ಮ ದುಃಖಕ್ಕೆ ಕಾರಣ, ಕಾಲ ಕಳೆದಂತೆ ಸುಖ–ದುಃಖಗಳು ನಮ್ಮ ಗುರಿಯಲ್ಲ. ಅವು ಕೇವಲ ಗುರಿಯನ್ನು ತಲುಪುವಲ್ಲಿನ ಸಾಧನೆಗಳು, ಜ್ಞಾನ ಪ್ರಾಪ್ತಿಯೇ ನಮ್ಮ ಗುರಿ ಎಂಬುದನ್ನು ತಂತಾನೆ



ತಿಳಿದುಕೊಳ್ಳುತ್ತಾನೆ. ಸುಖಕ್ಕಿಂತ ದುಃಖದಿಂದ ಹೆಚ್ಚು ಪಾಠ ಕಲಿಯುತ್ತಾನೆ. ಸುಖ – ದುಃಖಗಳು ಮನುಷ್ಯನ ಬದುಕಿನಲ್ಲಿ ಸುಳಿದು, ಎರಡೂ ಒಟ್ಟಾಗಿ ಅವನ ಗುಣಧರ್ಮವನ್ನು ನಿರ್ಧರಿಸುತ್ತವೆ. ಇದನ್ನೇ ಮನುಷ್ಯನ ಗುಣ, ಸ್ವಧರ್ಮ, ಸ್ವಭಾವ (ಅುಚಿಡಿಚಿಛಿಣಜಡಿ) ಎಂದು ಕರೆಯುವುದು. ಒಳ್ಳೆಯದು. ಕೆಟ್ಟದ್ದು ಎರಡೂ ಅವನ ಈ ಸ್ವಭಾವವನ್ನು, ವ್ಯಕ್ತಿತ್ವವನ್ನು ರೂಪಿಸುವಲ್ಲಿ ಸಮಾನ ಪ್ರಭಾವ ಬೀರುತ್ತವೆ. ಪ್ರಪಂಚದ ಧೀರ ದೀಮಂತ ವ್ಯಕ್ತಿಗಳ ಜೀವನವನ್ನು ನೋಡಿದರೆ, ಶ್ರೀಮಂತಿಕೆಗಿಂತ ಬಡತನ, ಸುಖಕ್ಕಿಂತ ದುಃಖ ಹೊಗಳಿಕೆಗಿಂತ ತೆಗಳಿಕೆ ಅವನ ವ್ಯಕ್ತಿತ್ವವನ್ನು ರೂಪಿಸಿರುವುದನ್ನು ಕಾಣುತ್ತೇವೆ.

ತಾನು ಪಡೆದ ಈ ಜ್ಞಾನ ಹೊರಗಿಂದ ಬಂದ್ದಲ್ಲ, ಒಳಗಡೆ ಸುಪ್ತವಾಗಿರುವುದೇ ಉನ್ಮೀಲಗೊಳ್ಳುವಂಥದು. ಅದು ಸಂದರ್ಭೋಚಿತವಾಗಿ ಅಭಿವ್ಯಕ್ತವಾಗುತ್ತದೆ. ಮನುಷ್ಯ ಕಲಿತ, ಅರಿತ ಎಂದರೆ ತನ್ನೊಳಗೆ ಅಡಗಿರುವುದನ್ನು ಕಂಡುಕೊಂಡ ಎಂದೇ ಅರ್ಥ. ಅನಂತಜ್ಞಾನದ ತವನಿಧಿ ಎನಿಸಿದ ತನ್ನಾತ್ಮಕ್ಕೆ ಮುಸುಗಿದ್ದ ತೆರೆ ಸರಿಸಿದ, ಸ್ವಸ್ವರೂಪ ಜ್ಞಾನ ಪಡೆದ ಎಂದರ್ಥ. “The infinite library of the universe is our mind. The extenal world is simply the suggestion, the occasion, which sets us to study our own mind, but the object of our study is always our own mind. “ಬೌದ್ಧ ಧರ್ಮದಲ್ಲಿಯೂ ಇದನ್ನೇ ಹೇಳಿದ್ದಾರೆ. “understanding buddhism means understanding the mind and realising the self nature, free from every passion and free from evey suffering. From the stand point of practice, cultivating buddhism is cultivating the mind and cultivating mind is cultivating awareness... by cultivating awareness we can be free from concept and subjective thought and that karma frees, hence there is no Dharma without cultivating awareness.”

ನಮ್ಮೆಲ್ಲ ಭಾವನೆಗಳು ಮತ್ತು ಕ್ರಿಯೆಗಳು, ಅಳು – ನಗು, ಸುಖ – ದುಃಖ , ನಿಂದೆ – ಅನುಗ್ರಹ, ಹೊಗಳಿಕೆ – ತೆಗಳಿಕೆ ಇವೆಲ್ಲವೂ ನಮ್ಮನ್ನು ನಾವು ಸೂಕ್ಷ್ಮವಾಗಿ ಪರಿಶೀಲಿಸಿ ನೋಡಿ ಕೊಂಡರೆ, ಆಗಿಂದಾಗ್ಗೆ ನಮ್ಮ ಮೇಲೆ ಉಂಟಾದ ಆಘಾತಗಳಿಂದಾಗಿ ನಮ್ಮೊಳಗಿನಿಂದಲೇ ಹೊರಬಂದವು ಎಂಬುದು ಕಾಣುತ್ತದೆ. ಈ ಎಲ್ಲ ಹೊಡೆತಗಳನ್ನು ಒಟ್ಟಿಗೇ ಕರ್ಮ, ಕ್ರಿಯೆ ಎಂದು ಕರೆಯುತ್ತಾರೆ. ಹೀಗೆ ಉಂಟಾದ ಮಾನಸಿಕ – ಭೌತಿಕ, ಪ್ರತಿಯೊಂದು ಆಘಾತವೂ ಆತ್ಮಕ್ಕೆ ಉಂಟಾದದ್ದು. ಇದೆಲ್ಲವೂ ಕರ್ಮವೇ. ಹೀಗೆ ಎಲ್ಲ ಕಾಲದಲ್ಲೂ ನಾವು ಕರ್ಮನಿರತರಾಗಿರುತ್ತೇವೆ. ಕೇಳುವುದು, ಉಸಿರಾಡುವುದು, ನಡೆದಾಡುವುದು, ಹೀಗೆ ಮಾನಸಿಕ – ಭೌತಿಕವಾದ ಎಲ್ಲ ಕ್ರಿಯೆಯೂ ಕರ್ಮ, ಇದು ತನ್ನ ಪ್ರಭಾವವನ್ನು ನಮ್ಮ ಮೇಲೆ ಬೀರುತ್ತದೆ.

ಮನುಷ್ಯಸ್ವಭಾವದಲ್ಲಿ ಪ್ರವೃತ್ತವಾಗಿರುವ ಈ ಕರ್ಮ ಅದ್ಭುತ ಶಕ್ತಿಯುಳ್ಳದ್ದು. ಇದರಿಂದಾಗಿ ವಿಶ್ವದ ಸಮಸ್ತ ಶಕ್ತಿಯನ್ನು ತನ್ನತ್ತ ಸೆಳೆದುಕೊಳ್ಳುವ ಕಾಂತ, ಕೇಂದ್ರ ಶಕ್ತಿ ಮನುಷ್ಯ, ಇವನಲ್ಲಿ ಎಲ್ಲ ಶಕ್ತಿಯೂ ಕೇಂದ್ರೀಕೃತವಾಗಿ ಶಕ್ತಿಗಾಗಿ ಕೆಲಸ ಮಾಡುತ್ತದೆ. ಪ್ರತಿಯೊಬ್ಬ ಮನುಷ್ಯನೂ ಒಂದೊಂದು ಉದ್ದೇಶದಿಂದ ತನ್ನ ಈ ಶಕ್ತಿಯನ್ನು ಬಳಸಿಕೊಳ್ಳುತ್ತಾನೆ. ತನ್ನಿಷ್ಟದ ಫಲವನ್ನು ಪಡೆದುಕೊಳ್ಳುತ್ತಾನೆ. ಆದರೆ ನಿಸ್ವಾರ್ಥದಿಂದ ಮಾಡಿದ

ಕೆಲಸ ಹೆಚ್ಚು ಫಲವನ್ನು ಕೊಡುತ್ತದೆ. ಇಂಥವನು ಕಾಲಕ್ರಮದಲ್ಲಿ ನೀತಿಯ ಮೇರುವೇ ಆಗಿಪರಿಣಮಿಸುತ್ತಾನೆ. ಉನ್ನತಾದರ್ಶಗಳ ಗಣಿಯಾಗುತ್ತಾನೆ. ಇದಕ್ಕೆ ಸಂಯಮ ಬೇಕು. ಈಸಂಯಮ ಆಗಾಧ ಶಕ್ತಿಯನ್ನು ಒಳಗೊಂಡಿದೆ. ಈ ಆತ್ಮ ಸಂಯಮವೇ ಪ್ರಪಂಚಲದಲಿ ಕ್ರಿಸ್ತ, ಬುದ್ಧರನ್ನು ಸೃಷ್ಟಿಸಿದೆ. ಗದ್ದಲದ ವಾತಾವರಣವರಿಲಿ, ಶಾಂತಿಸಾಗರವೆನೆಲಸಿರಲಿ, ಎಲ್ಲ ಪರಿಸ್ಥಿತಿಯಲ್ಲಿಯೂ ಈ ಸಂಯಮ ಸಮತ ಸಾಧಿಸಿ ಕೊಂಡಿರುವುದರಿಂದ ಶಾಂತನಾಗಿರುತ್ತಾನೆ, ನಿಸ್ತರಂಗ ಸ್ಥಿತಿಯಲ್ಲಿರುತ್ತಾನೆ. ಇದನ್ನೇ ಆದರ್ಶಪೂರ್ಣ ಕರ್ಮಯೋಗ ಎಂದುಕರೆಯುವುದು.

ಸ್ವಾರ್ಥತ್ಯಾಗ ಅಷ್ಟು ಸುಲಭವಲ್ಲ. ಸಾಧಕನಾದವನು ಸ್ವಾರ್ಥವನ್ನು ತ್ಯಜಿಸಲೇ ಬೇಕು. ಸಾಧನೆ ಸ್ವಾರ್ಥದಿಂದಲೇ ಆರಂಭವಾದರೂ, ಕಾಲಕ್ರಮದಲ್ಲಿ ಸಾಧನಾಪಥದಲ್ಲಿ ಚಲಿಸುತ್ತಿರುವಂತೆ, ಅದು ಕರಗುತ್ತ ಬಂದು ಮಾಯವೇ ಆಗಿಬಿಡುತ್ತದೆ. ಇದಕ್ಕೆ ಮೊದಲು ತಾನು ನಂಬಿದ ವಸ್ತುವಿನಲ್ಲಿ ಪೂರ್ಣ ನಂಬಿಕೆ ಇರಬೇಕು. ಶ್ರದ್ಧೆ ಬಲಿಯಬೇಕು ಸೈರಣೆ – ಸಮತೆಗಳು ಈ ಗುಣಗಳನ್ನು ತಂದುಕೊಡುತ್ತವೆ. ಇದಕ್ಕಾಗಿ ಸಾಧಕನಲ್ಲಿ ಮೊದಲು ತನ್ನ ಮಾರ್ಗದ ಸ್ಪಷ್ಟ ಕಲ್ಪನೆ ಇರಬೇಕು. ಆತ್ಮಜಾಗ್ರತಿಯ ಎಚ್ಚರಿಕೆ ಭಕ್ತಸ್ಥಲದಲ್ಲಿ ಅತ್ಯಗತ್ಯ:

> **ಅನು ಶುದ್ಧಧವಳಿತನು, ಎನಗೆ ಅನಾದಿ ಬಂದು ಹೊದ್ದಿದ ಕಾರಣವೇನಯ್ಯ?**
> **ಜಗವ ಮೊಗೆಯಲು ಬಂದೆನೇಕಯ್ಯಾ?**
> **ಗಿಡುವ ಹಜೆಯಲು ಬಂದೆನೇಕಯ್ಯಾ?**
> **ಎಲ್ಲರ ನಡುವೆ ಕುಳ್ಳಿರ್ದು ಗೀತವ ಪಾಡ ಬಂದೆನೇಕಯ್ಯಾ?**
> **ಚನ್ನಬಸವಣ್ಣನೆಂಬೆರಡು ಶಬ್ದವೇಕಯ್ಯಾ,**
> **ಕೂಡಲಚನ್ನಸಂಗಮದೇವಯ್ಯಾ?**೨

ಎಂದು ತನ್ನನ್ನು ತಾನು ಪ್ರಶ್ನಿಸಿಕೊಳ್ಳುತ್ತಾನೆ ಚನ್ನಬಸವಣ್ಣ. ಮನಸ್ಸು, ಚಂಚಲ ನೂರಾರು ಭಾವಗಳನ್ನು ಹೊತ್ತು ನೂರಾರು ಕಡೆಗಳಿಗೆ ಹರಿಯುತ್ತಿರುತ್ತದೆ. ತನ್ನ ಮನಸ್ಸಿನ ತಾಮಸದಿಂದ ತಾನೇ ಅಂಧಕಾರವನ್ನು ನಿರ್ಮಿಸಿಕೊಳ್ಳುತ್ತದೆ. ಮನಸ್ಸಿನ ಈ ಸ್ವಭಾವವನ್ನು ಅರಿತು ಅದಕ್ಕೆ ಅತೀತವಾಗಲು ಸತತ ಪ್ರಯತ್ನ ಕೈಗೊಳ್ಳಬೇಕು:

> **ಹೆಗ್ಗಣವನಿಕ್ಕೆ ನೆಲಗಟ್ಟ ಕಟ್ಟಿದಂತೆ ಆಯಿತ್ತೆನ್ನ ಕಾಯಗುಣ ;**
> **ಅಹಂಕಾರ ಪ್ರಬೋಧೆಗಳೇಕಯಯಾ?**
> **ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳನಿಕ್ಕಿ ಎನ್ನ ಮಾಡಿದಿರಿ,**
> **ಎನ್ನ ಬಾಧಿಸಲೆಂದು ಲಿಂಗಯ್ಯ ತಂದೆ!**
> **ಅಧಿವ್ಯಾಧಿಗಳೆಲ್ಲವ ಕಳೆದು, ನಿರ್ವಾಣವಪ್ಪ ಪದವ ಕರುಣಿಸಯ್ಯಾ**
> **ಕೂಡಲಚನ್ನಸಂಗಮದೇವಾ**೩

ಎಂಬುದು ಅವನ ಅಹರ್ನಿಶಿ ಪ್ರಾರ್ಥನೆಯಾಗಬೇಕು. 'ತಾಮಸನಿರಸನಸ್ಥಲ' ಇದನ್ನು ಮುಖ್ಯವಾಗಿ ಹೇಳುತ್ತದೆ.

ಕರ್ಮ ಮಾಡುತ್ತಲೇ ಇರಬೇಕು. ಆದರೆ ಮಾಡಿದೆನೆಂಬ ಹಮ್ಮು ಸುಳಿಯಲೂಬಾರದು. ಅದು ಅಹಂಕಾರಕ್ಕೆ ಅವಕಾಶ ಕೊಡುತ್ತದೆ. ಹಾಗಾಗಬಾರದು. "ಮುಂದೊಂದು ಕಲ್ಪಿಸದೆ ಹಿಂದೊಂದು ಭಾವಿಸದೆ ಸೆಲೆಸಂದ" ರೀತಿಯಲ್ಲಿ ನಿರಪೇಕ್ಷಿತರಾಗಿ, ಕರ್ಮನಿರತರಾಗಿಬೇಕೆನ್ನುತ್ತಾನೆ ಶಿವಶರಣರು. "ಫಲಪದದಾಸೆಯ ಮಾಡಲಾಗದು ಕ್ರಿಯೆಯಲ್ಲಿ ಎನ್ನುತ್ತಾರೆ.

ಇಲ್ಲಿ ಕರ್ಮ ನಿರಪೇಕ್ಷ, ಕಾಮರಹಿತ ಎಂಬ ನಿಷೇಧಾರ್ಥಕ್ಕಿಂತ ಹೆಚ್ಚಾಗಿ, ವಿಧಾಯಾತ್ಮಕವಾದ ಉದಾತ್ತ ನಿಲವಿನತ್ತ ಕಾಮವನ್ನು ತಿರುಗಿಸುವುದು, ಎಂಬರ್ಥದಲ್ಲಿ ಶರಣರು ಬಳಸಿದ್ದಾರೆ. ನಿಃಕಾಮಿಯಾಗಿ ಕಾಮಿಸುವ ಕಲೆಯನ್ನು ಕಾಯಕತತ್ತ್ವದಲ್ಲಿ ಕಂಡಕೊಂಡಿದ್ದಾರೆ ಶರಣರು–

ಮಾನವ ಮತ್ಸರವ ಕಳೆದು, ಮನದ ಮೇಲೆ ಲಿಂಗ ಕುಳ್ಳಿರಿಸಬೇಕಯ್ಯಾ<
ಧನಲೋಭವ ಕಳೆದು ಧನದ ಮೇಲೆ ಜಂಗಮವ ಕುಳ್ಳಿರಿಸಬೇಕಯ್ಯಾ.
ತನುಗುಣಂಗಳ ಕಳೆದು, ಪ್ರಸಾದ ಕಾಯವ ಮಾಡಬೇಕಯ್ಯಾ.
ಇಂತೀ ತ್ರಿವಿಧ ಗುಣಂಗಳ ಕಳೆದು, ತ್ರಿವಿಧದಲ್ಲಿ ದಾಸೋಹಿಯಾಗಿರಬೇಕು.
ಕೂಡಲಚನ್ನಸಂಗಮದೇವಯ್ಯಾ [೧]

ತನು–ಮನ–ಧನ ಸಮಸ್ತವನ್ನೂ ಗುರು–ಲಿಂಗ– ಜಂಗಮಕ್ಕರ್ಪಿಸಬೇಕು. ನಿರ್ವಂಚನೆಯಿಂದ ಸರ್ವಾರ್ಪಣ ಮಾಡಬೇಕು. ಈ ತ್ರಿವಿಧ ದಾಸೋಹದ ರಹಸ್ಯವನ್ನರಿತ ಸಾಧಕನಿಗೆ ಯಾವುದೂ ಬಾಧಕವಾಗುವುದಿಲ್ಲ. ಪ್ರಪಂಚವನ್ನು ತ್ಯಜಿಸಿ ಕಾಡಿಗೆ ಹೋಗಬೇಕಾದುದಿಲ್ಲ. ಬಂದುದೆಲ್ಲವನ್ನು ಲಿಂಗಕ್ಕೆ ಅರ್ಪಿಸಿಕೊಳ್ಳುವುದು ಪ್ರಸಾಧತತ್ತ್ವದ ಒಂದು ಮುಖ್ಯವಾದರೆ, ತನ್ನನ್ನೇ ಸಂಪೂರ್ಣವಾಗಿ ಲಿಂಗಕ್ಕೆ ಅರ್ಪಿಸಿಕೊಳ್ಳುವುದು ಇನ್ನೊಂದು ಮುಖ.

ಕಾಯಕವೆ ಲಿಂಗಾರ್ಪಿತ ; ಅರ್ಪಿತವೆ ಪ್ರಸಾದ.
ಅದೇ ಮತ್ತೆ ಮತ್ತೆ ಅರ್ಪಿತ,
ದರ್ಶನದಿಂದಲಾಯಿತ್ತು, ಸ್ಪರ್ಶನದಿಂದಲಾಯಿತ್ತು
ಅರ್ಪಿಸುವ ಸೋಂಕಿನಸುಖವನರ್ಪಿಸಲಱಿಯದಿರ್ದಡೆ ಭ್ರಾಮತಿ,
ಕೂಡಲಚನ್ನಸಂಗಯ್ಯನ ಪ್ರಸಾದಿಯ ಪ್ರಸಾದವ
ಅತಿಗಳೆದಡೆ ಅದಕ್ಕಿನ್ನೆಂತೊ । [೨]

ಕರಣಂಗಳೆಲ್ಲವೂ ಲಿಂಗಕಿರಣಂಗಳಾಗಿ ಆ ಲಿಂಗಕಿರಣವೇ ಹರಣವಾಗಿರಬೇಕು ಎಂಬುದು ಅರ್ಪಿತವಾದುದಕ್ಕೆ ಸಾಕ್ಷಿ. ಈ ಅರ್ಪಿತದ ರಹಸ್ಯವನ್ನು ಹೀಗೆ ಹೇಳುತ್ತಾರೆ :

ಅಂಗಕ್ಕೆ ಆಚಾರವಳವಟ್ಟಲ್ಲಿ ಲಿಂಗಕ್ಕೆ ಆ ಅಂಗವೆ ಅರ್ಪಿತ.
ಪ್ರಾನಕ್ಕೆ ಪ್ರಸಾದ ಸಾಧ್ಯವಾದಲ್ಲಿ ಲಿಂಗಕ್ಕೆ ಆ ಪ್ರಾಣವೆ ಅರ್ಪಿತ.
ಮನವು ಮಹವನಿಂಬುಗೊಂಡಲ್ಲಿ ಲಿಂಗಕ್ಕೆ ಆ ಮನವೆ ಅರ್ಪಿತ.
ಭಾವ ಭ್ರಮೆಯಳಿದು ನಿರ್ಭಾವವಾದಲ್ಲಿ ಲಿಂಗಕ್ಕೆ ಆ ಭಾವವೆ ಅರ್ಪಿತ.
ಜ್ಞಾತೃಜ್ಞಾನ ಜ್ಞೇಯ ಸಂಪುಟವಾಗಿ, ಅಱಿವು ನಿರ್ಣಯ ನಿಷ್ಪತ್ತಿಯಾಗಿ
ಕುಱುಹುಗೆಟ್ಟಲ್ಲಿ ಲಿಂಗಕ್ಕೆ ಆ ಅಱಿವೆ ಅರ್ಪಿತ.
ಇಂತು ಸರ್ವಾಂಗವೆ ಅರ್ಪಿತವಾಗಿ ಲಿಮಗಕ್ಕೆ ಒಡೆತನವಿತ್ತ ಕಾರಣ, ?
ಕೂಡಲಚೆನ್ನಸಂಗಯ್ಯನಲ್ಲಿ ನಾನೆಂದೆನಲಱಿಯದೆ ನಿಂದ ನಿಜದ ಮಹಾಪ್ರಸಾದಿ [೩]

ಅಂಗ ಪ್ರಾಣ ಮನ ಭಾವ ಅರಿವುಗಳ ಅರ್ಪಣೆಯನ್ನು ಇಲ್ಲಿ ಸೂಚಿಸಲಾಗಿದೆ. ಹೀಗೆ ಶರಣರು ಪ್ರಸಾದತತ್ತ್ವದಲ್ಲಿ ಕರ್ಮಯೋಗದ ಪರಮರಹಸ್ಯವನ್ನು ವ್ಯಾಪಕವಾದ ರೀತಿಯಲ್ಲಿ ಅಳವಡಿಸಿಕೊಂಡಿರುವುದುನ್ನು ಕಾಣಬಹುದು, ಕಾಯಾರ್ಪಣ, ಕರಣಾರ್ಪಣ, ಭಾವಾರ್ಪಣಗಳ ಕಲ್ಪನೆಯಲ್ಲಿ ಇದು ಸ್ಪಷ್ಟವಾಗಿ ಕಂಡುಬರುತ್ತದೆ :

ನಡೆವ ನುಡಿವ ಚೈತನ್ಯವುಳ್ಳನ್ನಕ್ಕರ ಒಡಲಗುಣಂಗಳಾರಿಗೂ ಮಾಣವು.
ನೋಡುವ ನಯನ, ಕೇಳುವ ಶ್ರೋತ್ರ, ವಾಸಿಸುವ ಘ್ರಾಣ.

ಮುಟಟುವ ತ್ವಕ್ಕು, ರುಚಿಸುವ ಜಿಹ್ವೆ ತಾಗಿತ್ತೆಂದೆನಬೇಡ.
ನೋಡುತ, ನಡೆಯುತ, ಕೇಳುತ, ವಸಿಸುತ,
ಮುಟ್ಟುತ, ರುಚಿಸುತ ಲಿಂಗಾರ್ಪಿತವ ಮಾಡಿ,
ಲಿಂಗಭೋಗೋಪಭೋಗಿಯಾದ ಪ್ರಸಾದಿಗೆ ಸರ್ವಾಂಗ ಶುದ್ಧವಾಯಿತ್ತಯ್ಯಾ,
ಕಾಯತ್ರಯಂಗಳ, ಜೀವತ್ರಯಗಂಗಳ, ಭಾವತ್ರಯಂಗಳ ಒಂದು ಮಾಡಿ,
ಸುಖ ದುಃಖ, ಗುಣ ನಿರ್ಗುಣಗಳೆಂಬ ಉಭಯವ ಲಿಂಗದಲ್ಲಿ ಏಕವ ಮಾಡಿ,
ಅಹುದು ಅಲ್ಲ, ಬೇಕು ಬೇಡೆಂಬ ಸಂಶಯವ ಕಳೆದು
ಕೂಡಲಚನ್ನಸಂಗಯ್ಯನಲ್ಲಿ ಆದಿಪುರಾತನರು ಕೂಡಿದ ಪಥವಿದು[೪].

ಈ ದೇಹವಿರುವವರೆಗೂ ದೇಹಧರ್ಮಕ್ಕೆ ಅಧೀನವಗಿರಲೇಬೇಕು. ಆದರೆ ಪ್ರಸಾದಿ ಅಂಗಗುಣಗಳನ್ನು ಲಿಂಗಗುಣಗಳನ್ನಾಗಿ ಪರಿವರ್ತಿಸುತ್ತಾನೆ. ಬೇಕು ಬೇಡೆಂಬ ಸಂಶಯಗಳನ್ನು ಕಳೆದುಕೊಂಡು ಸರ್ವಾಂಗ ಪ್ರಸಾದಿಯಾಗುತ್ತಾನೆ.

ಕಣ್ಣಿಕಪ್ಪರವ ಕಾಳಿಕೆಯ ಕಳೆದು
ತನ್ನ ಲಿಂಗಕ್ಕೆ ಕೊಡಬಲ್ಲನಾಗಿ ಲಿಂಗಪ್ರಸಾದಿ,
ಶ್ರೋತೃಕಪ್ಪರದ ಅಪಶಬ್ದವ ಕಳೆದು
ತನ್ನ ಲಲಿಂಗಕ್ಕೆ ಕೊಡಬಲ್ಲನಾಗಿ ಲಿಂಗಪ್ರಸಾದಿ,
ನಾಸಿಕ ಕಪ್ಪರದ ಅವಗಂಧವ ಕಳೆದು
ತನ್ನ ಲಿಂಗಕ್ಕೆ ಕೊಡಬಲ್ಲಾನಗಿ ಲಿಂಗಪ್ರಸಾದಿ.
ಜಿಹ್ವಾಕಪ್ಪರದ ಅವರುದಿಯ ಕಳೆದು
ತನ್ನ ಲಿಂಗಕ್ಕೆ ಕೊಡಬಲ್ಲನಾಗಿ ಲಿಂಗಪ್ರಸಾದಿ,
ತ್ವಕ್ಕಿನ ಕಪ್ಪರದ ಅವಗುಣವ ಕಳೆದು
ತನ್ನ ಲಿಂಗಕ್ಕೆ ಕೊಡಬಲ್ಲಾಗಿ ಲಿಂಗಪ್ರಸಾದಿಲ...[೫]

ಎಂದು ಪಂಚೇಂದ್ರಿಯಗಳನ್ನು ಪರಿಶುದ್ಧಗೊಳಿಸಿದ ಅರ್ಪಿತ ತತ್ತ್ವವನ್ನು ಹೇಳುತ್ತಾರೆ ಚನ್ನಬಸವಣ್ಣನವರು.

ಭಕ್ತಿ, ಜ್ಞಾನ, ಕ್ರಿಯೆಗಳು ಸಂಗಮಗೊಂಡು, ಸಾಧಕ ಶರಣನ ಬಹಿರಂಗವನ್ನು ಪರಿಶುದ್ಧಗೊಳಿಸಿ, ಆಚರಣೆಯಲ್ಲಿ ಅಳವಡಿಸಿ, ಕರ್ಮನಿರತನನ್ನಾಗಿಸಿ, ಅಂತರಂಗದ ಅರಿವನ್ನು ಪಡೆಯುವಲ್ಲಿ ಸಹಾಯಕವಾಗಿರುವುದನ್ನು ಕಾಣುತ್ತೇವೆ. ಭಕ್ತಿ – ಕರ್ಮಗಳು ಜ್ಞಾನದೊಡನೆ ಸೇರಿ ಭಕ್ತನ ಸ್ವಸ್ವರೂಪವನ್ನು ತಿಳಿಯುವಲ್ಲಿ ಮಾರ್ಗಸೂಚಿಗಳಾಗಿ ಅಂತರಂಗ– ಬಹಿರಂಗಗಳನ್ನು ಬೆಳಗುವುದರ ಮೂಲಕ ಅಂತರಂಗ ಸಾಧನೆಗೆ ಅನುವು ಮಾಡಿಕೊಟ್ಟಿದೆ.

ಪ್ರಾಣಲಿಂಗಿಸ್ಥಲದಲ್ಲಿ ಸಾಧನೆ ಧ್ಯಾನದ ಕಡೆಗೆ, ಅನುಸಂಧಾನದ ಕಡೆಗೆ ತಿರುಗುತ್ತದೆ. ಇಷ್ಟಲಿಂಗ ಅಂತರಂಗ – ಬಹಿರಂಗಗಳನ್ನೆಲ್ಲ ವ್ಯಾಪಸಿಸಿದ ಶಕ್ತಿಯಾಗಿ ಪರಿಣಮಿಸುತ್ತದೆ. ಬಹಿರಂಗದ ಪೂಜೆ ಅಂತರಂಗದ ನಿರ್ಮಲ ಪರಂಜ್ಯೋತಿಯನ್ನು ಕಾಣುವುದರ ಕಡೆಗೆ ಚಲಿಸಿ, ಅಂತಃಶಕ್ತಿಯನ್ನು ಜಾಗ್ರತಗೊಳಿಸುವ ಯೋಗದ ಕಡೆಗೆ ತಿರುಗುತ್ತದೆ. ಅನುಭಾವ ಭಕ್ತಿಯಿಂದ ಇಷ್ಟಲಿಂಗದ ಅನುಸಂಧಾನವನ್ನು ಕೈಕೊಳ್ಳುತ್ತದೆ. ಮೊದಲ ಮೂರು ಸ್ಥಳಗಳಲ್ಲಿ ಭಕ್ತಿ, ಕ್ರಿಯೆ, ಜ್ಞಾನರೂಪಾದ ಪೂರ್ವಸಿದ್ಧತೆ ಪಡೆದು, ಇಲ್ಲಿ ಆ ಮೂರೂ ಮುಪ್ಪುರಿಗೊಂಡು ದೇಹದಲ್ಲಿರುವ ಅಂತಃಶಕ್ತಿಯನ್ನು ಜಾಗ್ರತೆಗೊಳಿಸುವ ಯೋಗ ಸಾಧನೆಯನ್ನು ಕೈಕೊಳ್ಳುತ್ತವೆ. ಈ ಸಾಧನೆಯಿಂದ ಇಷ್ಟಲಿಂಗ – ಪ್ರಾಣಲಿಂಗಗಳು ಒಂದಾಗಿ ಲಿಂಗೈಕ್ಯವನ್ನು ಸಾಧಿಸುತ್ತವೆ.

ಅಂಗದ ಮೇಲೆ ಆಯತವಾದುದೆ ಇಷ್ಟಲಿಂಗ :
ಇಷ್ಟಲಿಂಗವಿಡಿದು ಪ್ರಾಣಲಿಂಗ ಸ್ವಾಯುತ;
ಪ್ರಾಣಲಿಂಗ ಉದಿಸಿದಲ್ಲದೆ ಇಷ್ಟಲಿಂಗವ ಕಾಣಬಾರದು.
ಈ ಭೇದದ ಭೇದಿಸಲಬಲ್ಲಡೆ ಕೂಡಲಚನ್ನಸಂಗಯ್ಯನಲ್ಲಿ ಲಿಂಗೈಕ್ಯವು [೬]

ಅಂಗದ ಮೇಲೆ ಕುರುಹಾಗಿಟ್ಟ ಇಷ್ಟಲಿಂಗವನ್ನು ಅನುಸಂಧಾನ ಮಾಡುತಾ, ಅಲ್ಲಿ ಆಯುತವಾದುದನ್ನು ಸ್ವಾಯತ ಮಾಡಿಕೊಳ್ಳಬೇಕು. ಇದಕ್ಕೆ ಸಹಾಯಕವಾದ ಅಂತರಂಗದ ಯೋಗಸಾಧನೆಯನ್ನು ಪ್ರಾಣಲಿಂಗಿಸ್ಥಲದಲ್ಲಿ ಕಾಣುತ್ತೇವೆ.

ಪ್ರಯತ್ನಪೂರ್ವಕವಾಗಿ ಕೈಕೊಂಡ ಯೋಗಸಾಧನೆಯ ಅನುಭಾವ ಶರಣ – ಐಕ್ಯ ಸ್ಥಲಗಳಲ್ಲಿ ಸಹಜಸ್ಥಿತಿಯಾಗಿ ಪರಿಣಮಿಸುತ್ತದೆ. ಇಲ್ಲಿನ ಶರಣ ಉದ್ಭ್ರಮಿಯಲ್ಲ, ಉದ್ದೇಶಿಯಲ್ಲ; ನಿದ್ದೆಗೆಟ್ಟವನು, ನಿಜವನೆ ಬೆಳಗುತ್ತಿಹನು, ನಿಶ್ಚಿಂತನಾಗಿ ಸ್ಥಿರವಾಗಿ ನಿಂದವನು; ಸೀಮೆಯ ಕೆಡಿಸಿ ನಿಸ್ಸೀಮನಾದವನು, ಬೋಧೆಯ ಕೆಡಿಸಿ ನಿಭೋಧನಾದವನು; ಕಾಯವ ಕೆಡಿಸಿ ಕರ್ಮಾದಿ ಗುಣವಿರಹಿತನಾದವನು; ಆಶೆಯ ಕೆಡಿಸಿ ಆಶೆಗತೀತನಾದನು; ಹೀಗಾದ ಕಾರಣ ಈ ಶರಣಂಗೆ ಆರೂ ಸರಿಯಿಲ್ಲ. ಕುಲವಿಲ್ಲದ ಅಕುಲ, ಶರೀರವಿಲ್ಲದ ಸಂಬಂಧಿ, ಮತ್ಸರವಿಲ್ಲದ ಮಹಿಮ, ಕರ್ಮವಿಲ್ಲದ ಕಾರಣಿಕ, ಅರ್ಪಿತವಿಲ್ಲದ ಅಪ್ಯಾಯನಿ, ಪ್ರಸಾದವಿಲ್ಲದ ಪರಿಣಾಮಿ, ಹೀಗಾಗಿ

ದೇಹಿಯಲ್ಲ, ನಿರ್ದೇಹಿಯಲ್ಲ; ಬೋಧಕನಲ್ಲ, ನಿರ್ಭೋಧಕನಲ್ಲ;
ಕಾಮಿಯಲ್ಲ, ನಿಃಕಾಮಿಯಲ್ಲ; ಆಸೆವಿಡಿದು ಬಂದ ಆಮಿಷನಲ್ಲ;
ಅವಗುಣವಿಲ್ಲದ ನಿರ್ಗುಣಿ ನೋಡಯ್ಯಾ, [೭]
ಕೂಡಲಚನ್ನಸಂಗಾ, ನಿಮ್ಮ ಶರಣ [೮]

ಈ ನಿಲವಿನಲ್ಲಿ ನಿಂದ ಶರಣ ಚನ್ನಬಸವಣ್ಣನವರ ಅನುಭಾವದ ವಚನ :

ಕಂಗಳ ನೋಟ, ಹೃದಯದ ಜ್ಞಾನ; ಮನದೊಳಗೆ ಮಾತನಾಡುತಿರ್ದೆನಯ್ಯಾ!
ಜೇನ ಮಳೆಗಳು ಕಱೆದವು; ಅಮೃತದ ಕಳೆಗಳು ಸುರಿದವು;
ಕೂಡಲಚನ್ನಸಂಗನೆಂಬ ರಸಸಾಗರದೊಳಗೋಲಾಡುತಿರ್ದೆನಯ್ಯಾ [೮]

ಅಂಗಲಿಂಗಸಂಗಿಯಾದ ಶರಣನ ಅಂಗವೆಲ್ಲ ಲಿಂಗವೆ. ಆತನ ಮನವೆಲ್ಲ ಅವಿರಳ ಜ್ಞಾನವೆ. 'ಸ್ಫಟಿಕದ ಘಟದೊಳಗೆ ಎತ್ತಿದ ಜ್ಯೋತಿ ಒಳಹೊರಗೊಂದೇ ಸ್ವಯವಾಗಿ ಪ್ರಜ್ವಲಿಸುವಂತೆ' ಲಿಂಗಭರಿತ ಶರಣನ ಅಪೂರ್ವಕಾಂತಿ ಒಳಹೊರಗೊಂದಾಗಿ ಪ್ರಜ್ವಲಿಸುತ್ತದೆ. ಈ ಐಕ್ಯವನ್ನು ಸಹಜ ಸ್ಥಿತಿಯನ್ನಾಗಿ ಪಡೆದಿದ್ದರೂ ಆತ ಲೌಕಿಕ ಜಗತ್ತಿನ ಸಂಪರ್ಕವನ್ನು ಕಳೆದುಕೊಂಡಿರುವುದಿಲ್ಲ. "ಶರಣಸತಿ ಲಿಂಗಪತಿ' ಭಾವನೆಯಿಂದ ತನ್ನನ್ನು ಸಂಪೂರ್ಣವಾಗಿ ತನ್ನ ಪತಿ ಶಿವನಿಗೆ ಅರ್ಪಿಸಿಕೊಳ್ಳುತ್ತಾನೆ. ಈ ಶರಣ. ಈ ಅಲೌಕಿಕ ಪತಿಯೊಡನೆ ಸಮರಸ ಕೂಟವನ್ನು ಪಡೆದು ಆನಂದದ ನಿಬ್ಬೆರಗಿನಲ್ಲಿ ನಿಲ್ಲುತ್ತಾನೆ. ಆ ಅಲೌಕಿಕದ ಅನುಭಾವದಲ್ಲಿ ಮೈಮರೆಯುತ್ತಾನೆ. ಆದರೆ ಅಲ್ಲಿಯೇ ನಿಂತುಬಿಡುವುದಿಲ್ಲ; ಹಮ್ಮಿನ – ಸೊಮ್ಮಿನ ಸಂಬಂಧವನ್ನು ಬಿಟ್ಟು ಸಮಾಜದ ಕಿಂಕರನಾಗಿ ದುಡಿಯುತ್ತಾನೆ.

ತನ್ನ ಕರ್ತವ್ಯವನ್ನು ನಿರ್ವಹಿಸಿದ ಅನುಭಾವಿ, ಐಕ್ಯಸ್ಥಲದಲ್ಲಿ ಸಂಪೂರ್ಣ ಸಾಮರಸ್ಯದಲ್ಲಿ ಲೀನವಾಗುವುದನ್ನು ಕಾಣುತ್ತೇವೆ.

ಮಂತ್ರಯೋಗ, ಹಠಯೋಗ, ಲಯಯೋಗ, ಜ್ಞಾನಯೋಗ
ಇಂತೀ ಎಲ್ಲಾ ಯೋಗವನಱಿದು ಮಱೆದು,

ಭಕ್ತಿಯೋಗದ ಮೇಲೆ ನಿಂದು, ರಾಜಯೋಗದ ಮೇಲೆ ನಡೆವ, ನುಡಿವ ಕಾಣಿರೋ!
ಸಾಕ್ಷಿ : ವಾಗತೀತಂ ಮನೋಽತೀತಂ ಭಾವಾತೀತಂ ನಿರಂಜನಂ ।
ಸರ್ವಶೂನ್ಯಂ ನಿರಾಕಾರಂ ನಿತ್ಯತ್ವಂ ಪರಮಂ ಪದಂ ॥ ಎಂದುದಾಗಿ,
ಮಹಲಿಂಗೈಕ್ಯರ ನಿಲವ ಅನುಮಾನಿಗಳೆತ್ತಬಲ್ಲರು, ಕೂಡಲಚನ್ನಸಂಗಮದೇವಾ?[೯]

ಆರಂಭದ ಯೋಗಗಳನ್ನೆಲ್ಲ ದಾಟಿ, ಭಕ್ತಿಯೋಗದ ಮೇಲೆ ನಿಂದು, ರಾಜಯೋಗದ ಮೇಲೆ ನಡೆವ, ನುಡಿವ ಸಮರಸ್ಯೈಕ್ಯನ ಸ್ಥಿತಿಯನ್ನು ವರ್ಣಿಸುತ್ತಾರೆ.

ಇದ್ದು ಬುದ್ಧನಲ್ಲ, ಸುಳಿದುಸೂತಕಿಯಲ್ಲ,
ಆವ ಸಂಗವೂ ಇಲ್ಲದ ನಿಜೈಕ್ಯನು.
ಬೇಕು ಬೇಡೆನ್ನದೆ, ಅಳಿದುಳಿದು
ಕರ್ಪೂರದ ಗಿರಿಯನುರಿ ತಾಗಿದಂತೆ
ಕೂಡಲಚನ್ನಸಂಗಯ್ಯನಲ್ಲಿ ಲಿಂಗ್ಯಕೈನುಳ
ಮುಟ್ಟದ ಮುನ್ನ ಗುರು ಉಂಟು,
ಲಿಂಗ ಉಂಟು, ಜಂಗಮ ಉಂಟು,
ಪಾದೋದಕ ಉಂಟು, ಪ್ರಸಾದವುಂಟು.
ಮುಟ್ಟಿದ ಬಳಿಕ ಗುರುವಿಲ್ಲ,
ಲಿಂಗವಿಲ್ಲ, ಜಂಗಮವಿಲ್ಲ,
ಪಾದೋದಕವಿಲ್ಲ, ಪ್ರಸಾದವಿಲ್ಲ,
ಇದು ಕಾರಣ ಕೂಡಲಚನ್ನಸಂಗಯ್ಯನಲ್ಲಿ
ಸ್ವಯವಲ್ಲದೆ ಪರವಿಲ್ಲ......[೧೦]

ಹೀಗಾಗಿ ಆತ ಎಲ್ಲ ಕ್ರಿಯೆಗಳನ್ನೂ ಕಳೆದುಕೊಂಡವನು.

ತನು ಬಯಲು ನಿರವಯದೊಳಡಗಿತ್ತು;
ಮನ ಬಯಲು ನಿರವಯದೊಳಡಗಿತ್ತು;
ಭಾವ ಬಯಲು ನಿರವಯದೊಳಡಗಿತ್ತು
ಬಯಲು ಬಯಲು ಬೆರಸಿ ಬಯಲೆ ಆಯಿತ್ತು.
ಕೂಡಲ ಚನ್ನಸಂಗಯ್ಯನೆಂಬ ನುಡಿ ಅಡಗಿತ್ತು. [೧೧]

ತನು ಮನ ಭಾವಗಳು ಬಯಲಾಗಿ ನಿರವಯದೊಳಗೆ ಅಡಗಿಹೋಗುತ್ತವೆ. ಕೂಡಲಚನ್ನಸಂಗಯ್ಯನೆಂಬ ನುಡಿಯೂ ಅಡಗಿ ಹೋಗುತ್ತದೆ.

ಹೀಗೆ ಷಟ್ಸ್ಥಲ ಸಾಧನೆಯ ಉದ್ದಗಲಕ್ಕೂ ಭಕ್ತಿ ಜ್ಞಾನ ಕರ್ಮಯೋಗಗಳು ಒಂದರೊಡನೊಂದು ಮಿಳಿತವಾಗಿ, ಜೀವಿಯನ್ನು ಹಂತ-ಹಂತವಾಗಿ ಸಾಧನಾಮಾರ್ಗದಲ್ಲಿ ಎಚ್ಚರದಪ್ಪದಂತೆ ಮೇಲು – ಮೇಲಕ್ಕೆ ಕೊಂಡೊಯ್ಯುತ್ತ ಸಮರಸದಲ್ಲಿ ನಿಲ್ಲಿಸಿ ಲಿಂಗಾಂಗ ಸಾಮರಸ್ಯವನ್ನುಂಟುಮಾಡುತ್ತವೆ. ಷಟ್ಸ್ಥಲದ ಗಂತವ್ಯದಲ್ಲಿ ಗಮಿಸಿ ಬಯಲಾಗುತ್ತವೆ.

ಚೆನ್ನಬಸವಣ್ಣನವರು ಸಾಮಾನ್ಯರಲ್ಲ, ಪ್ರಭುವಿನಂತೆ, ಒಮ್ಮೊಮ್ಮೆ ಅವಿರಗೂ ಮೀರಿದ ನಿಷ್ಠುರಿ, ನಿರ್ದಾಕ್ಷಿಣ್ಯ ವ್ಯಕ್ತಿ. ಸಾಧನೆಯ ಮಾರ್ಗದಲ್ಲಿ ಚರಿಸುವವರನ್ನು ಸುಲಭದಲ್ಲಿ ಒಪ್ಪುವವರಲ್ಲ. ಅಚ್ಚ ಅವಿರಳ ಜ್ಞಾನಿಯಾದ ಇವರು ನಿರ್ದಾಕ್ಷಿಣ್ಯವಾಗಿ ಸಮಾಜವನ್ನು, ಭಕ್ತರನ್ನು, ಮೈಗಳ್ಳರನ್ನು, ಢೋಂಗಿಗಳನ್ನು, ಅನಾಚಾರಿ-ಸಮಯಾಚಾರಿಗಳನ್ನು ಖಂಡಿಸುತ್ತಾರೆ. ಅವರ ಖಂಡನೆ ಹರಿತವಾದ ಖಂಡೆಯದಂತೆ. ಕಾಯಕವನ್ನು ಕುರಿತು ಹೇಳುವಾಗ, ಸತ್ಯ

ಶುದ್ಧ ಮನಸ್ಸಿನಿಂದ, ಮೈಮುರಿದು ಬೆವರುಸುರಿಸಿ ಕಷ್ಟಪಟ್ಟು ಮಾಡುವ ಕಾಯಕ ಶುದ್ಧ ಕಾಯಕ, ಅಂತಲ್ಲದ ಕಾಯಕ–

ತನು ಮನ ಬಳಲದೆ ಉದ್ದಂಡವೃತ್ತಿಯಲ್ಲಿ ಧನವ ಗಳಿಸಿ.
ಗುರು ಲಿಂಗ ಜಂಗಮಕ್ಕೆ ವೆಚ್ಚಿಸಿ, ದಾಸೋಹವ ಮಾಡಿ,
ಭಕ್ತನಾದೆನೆಂಬವನ ತೋಱದಿರಯ್ಯಾ!
ಅದೇಕೆಂದಡೆ : ಅವ ಪರಧಣಚೋರಕ, ಆವ ಪಾಪಿ, ಕೋಪಿ, ಪರಿಭ್ರಷ್ಟಾ!
ಅವರಿಗೆ ವಿಚಾರಿಸದೆ ಉಪದೇಶವ ಕೊಟ್ಟ ಗುರುವಿಂಗೆ ರೌರವ ನರಕ !
ಅವನ ಕಾಯಕವ ವಿಚಾರಿಸದೆ ಅವನ ಮನೆಯ ಹೊಕ್ಕು
ಲಿಂಗಾರ್ಚನೆಯ ಮಾಡುವ ಜಂಗಮಕ್ಕೆ ಏಲಣೆಯ ಪಾತಕ!
ಇಂತಿವರ ಬದುಕು ಹುಲಿ ಕಪಿಲೆಯ ತಿಂದು ಮಿಕ್ಕುದ
ನರಿ ತಿಂಬಂತೆ ಕಾಣಾ, ಕೂಡಲಚನ್ನಸಂಗಮದೇವಾ! [೧೨]

ಎಂದು ಖಂಡಿಸುತ್ತಾ ಇಂಥ ಭಂಡರಿಗೆ ಉಪದೇಶ ಕೊಡುವ ಗುರುವಿಗೆ ರೌರವ ನರಕ, ಅಲ್ಲಿ ಲಿಂಗಾರ್ಚನೆಯ ಮಾಡುವ ಜಂಗಮಕ್ಕೆ ಏಳನೆಯ ನರಕ. ಇವರ ಬದುಕು ಹುಲಿ ತಿಂದು ಬಿಟ್ಟ ಹಸುವಿನ ಮಾಂಸದ ಎಂಜಲನ್ನು ನರಿ ತಿಂದಂತೆ ಎಂದು ಧಿಕ್ಕರಿಸುತ್ತಾರೆ. ಚನ್ನಬಸವಣ್ಣನವರು.

ಭಕ್ತನಾದವನು ಹೇಗಿರಬೇಕು? ಹಮ್ಮು–ಬಿಮ್ಮುಗಳನ್ನು ಬಿಟ್ಟು ಕಿಂಕರನಾಗಿರಬೇಕು ಎಂದು ಹೇಳುತ್ತಾ –

ಭಕ್ತನಾದಡೆ ಕಿಂಕಿಲನಾಗಿರಬೇಕು.
ಮಹೇಶ್ವರನಾದಡೆ ಆದಿ ಅನಾದಿಯನಱಿದಿರಬೇಕು.
ಪ್ರಸಾದಿಯಾದಡೆ ಒಡಲಗುಣ ವಿರಹಿತನಾಗಿರಬೇಕು.
ಪ್ರಾಣಲಿಂಗಿಯಾದಡೆ ಬಾಹ್ಯ ಆಚಾರವಿಲ್ಲದಿರಬೇಕು.
ಶರಣನಾದಡೆ ನಿಸ್ಸಂಗಿಯಾಗಿರಬೇಕು.
ಐಕ್ಯನಾದಡೆ ಬಯಲು ಬಯಲಾಗಿರಬೇಕು.
ಇಂತಪ್ಪ ಸ್ಥಳವನಱಿದಲ್ಲದೆ ಕೂಡಲಚನ್ನಯ್ಯನಲ್ಲಿ
ಸುಸಂಗಿ ಎನಿಸಬಾರದು [೧೩]

ಎಂದು ಆರೂ ಸ್ಥಲದ ಶರಣಭಕ್ತ ಹೇಗಿರಬೇಕೆಂಬುದನ್ನು ಸೂತ್ರಪ್ರಾಯವಾಗಿ ಹೇಳಿದ್ದಾರೆ. ಭಕ್ತಿಯನ್ನು ಕುರಿತು –

ಭಕ್ತಿಗೆ ಅನುಭಾವವೇ ಬೀಜ ಕಾಣಿರೋ ;
ಭಕ್ತಿಗೆ ಅನುಭಾವವೇ ಆಚಾರ ಕಾಣಿರೋ;
ಅನುಭಾವವಿಲ್ಲದವನ ಭಕ್ತಿ ಎಳತಟಗೊಳಿಸಿತ್ತು.
ಅನುಭಾವವ ಮಾಡುವಲ್ಲಿ ವಿನಯದಿಂದ ಕೇಳದಿರ್ದಡೆ,
ಕೂಡಲಚನ್ನಸಂಗಮದೇವ ಅಘೋರನರಕದಲ್ಲಿಕ್ಕುವ. [೧೪]

ಎಂದು ಭಕ್ತಿಗೆ ಅನುಭಾವವೇ ಬೀಜ, ಅನುಭಾವವೇ ಆಚಾರ. ಅನುಭಾವವಿಲ್ಲದ ಭಕ್ತಿ ವ್ಯರ್ಥ. ಅನುಭಾವವ ಮಾಡುವಲ್ಲಿ ವಿನಯದಿಂದ ಕೇಳದಿದ್ದರೆ ಅಘೋರ ನರಕದಲ್ಲಿಕ್ಕುವ ಎಂದು ಝುಂಕಿಸುತ್ತಾರೆ.

ತಾನು ಹೇಳಬೇಕೆಂದಿರುವ ವಿಷಯವನ್ನು ಆಮೂಲಾಗ್ರವಾಗಿ ತಿಳಿದುಕೊಂಡವನು

ಅದನ್ನು ಸರಳವಾಗಿ, ಸ್ಪಷ್ಟವಾಗಿ, ಸಂಕ್ಷೇಪವಾಗಿ, ಸಾರ್ಥಕವಾಗಿ ಹೇಳುವ ಕೌಶಲವನ್ನು ಪಡೆದಿರುತ್ತಾನೆ. ಷಟ್ಸ್ಥಲ ಸಿದ್ಧಾಂತವನ್ನು ಕರತಲಾಮಲಕ ಮಾಡಿಕೊಂಡಿದ್ದ, ಅದರಿಂದಲೇ ಅದಕ್ಕೆ ರೂಪುಕೊಡಲೆಂದು ನೇಮಿಸಲ್ಪಟ್ಟ ಚನ್ನಬಸವಣ್ಣನವರು, ಷಟ್ಸ್ಥಲದ ಸ್ವರೂಪವನ್ನು ಸೂತ್ರಬದ್ಧವಾಗಿ ಇಲ್ಲಿ ಹೇಳಿದ್ದಾರೆ–

ಕಿಂಕುರ್ವಾಣತೆಯಿಂದ, ಬಂದ ಜಂಗಮವೆ ಲಿಂಗವೆಂದು
ತನಗುಳ್ಳುದನಜಿತು ಮಾಡುವಲ್ಲಿ ಭಕ್ತ.
ನಿಷ್ಠೆ ನಿಬ್ಬೆರಸಿ ಗಟ್ಟಿಗೊಂಡು, ಅಭಿಲಾಷೆ ಸಮನಿಸದೆ.
ಪರಿಚ್ಛೇದ ಬುದ್ಧಿಯುಳ್ಳಲ್ಲಿ ಮಾಹೇಶ್ವರ.
ಅನರ್ಪಿತವ ಸಮನಿಸದೆ, ಬಂದುದ ಕಾಯಕದ ಕರಣದ ಕೈಯಲ್ಲಿ ಕೊಟ್ಟು,
ಲಿಂಗಸಹಿತ ಭೋಗಿಸುವಲ್ಲಿ ಪ್ರಸಾದಿ.
ಪ್ರಾಣಕ್ಕೆ ಪ್ರಾಣವಾಗಿರ್ದು ಕಾಲಸ್ಥಿತಿಯನಜಿದು
ಎಚ್ಚಱಿಕೆಗುಂದದಿಪ್ಪಲ್ಲಿ ಪ್ರಾಣಲಿಂಗಿ.
ತನಗೆ ಲಿಂಗವಾಗಿ, ಲಿಂಗಕ್ಕೆ ತಾನಾಗಿ ಬೆಚ್ಚು ಬೇಜೆಲ್ಲದಿರ್ದಡೆ ಶರಣ.
ಸದಾಚಾರ ಸಂಪತ್ತಿನಲ್ಲಿ ಬಂದ ಅನುಭಾವವನು ಮೀಜಿ
ಹೆಸರಡಗಿದ ಸುಖವದು ಲಿಂಗೈಕ್ಯ.
ಇದು ಕಾರಣ, ಕೂಡಲಚನ್ನಸಂಗಯ್ಯನಲ್ಲಿ ಬಸವಣ್ಣಂಗಲ್ಲದೆ ಷಟ್ಸ್ಥಲವಪೂರ್ವ [೧೫]

ಬಸವಣ್ಣನವರಂತೆ ದೈನ್ಯಸ್ಥರ ಚನ್ನಬಸವಣ್ಣನವರಲ್ಲಿ ಕಾಣದಿದ್ದರೂ ನಿಷ್ಕರುಣಿಯಲ್ಲ. ಸಾಧನೆಯ ಕಷ್ಟ, ಸಾಧಕರ ಪರಿಮಿತ ಶಕ್ತಿಯನ್ನು ಅರಿತಿದ್ದುದರಿಂದ ಅವರಲ್ಲಿ ಧೈರ್ಯ ಸಾಹಸಗಳನ್ನು ತುಂಬುತ್ತಿದ್ದರು –

"ನಿಧಾನವನಗೆವೆನೆಮದು ಹೋದರೆ, ವಿಘ್ನ ಬಪ್ಪುದು ಮಾಬುದೇ ಅಯ್ಯ? ಸದಾಶಿವನ ಪೂಜಿಸುವೆನೆಂದು ಹೋದರೆ ತುರುಬಿ ಹಿಡಿವವಯ್ಯ ಸಕಲ ವಿಪತ್ತುಗಳು. ಎದೆ ಭಂಗವಿಲ್ಲದೆ ನಿಲ್ಲಬಲ್ಲಡೆ ಸದಮಲ ಸುಖವನೀವ ನಮ್ಮ ಕೂಡಲ ಚನ್ನಸಂಗಮ ದೇವಯ್ಯ" ಎಂದು ಪ್ರೋತ್ಸಾಹಿಸಿ ವಿಪತ್ತುಗಳು ಬರುತ್ತವೆ, ನಿಜ, ಹಾಗೆ ಬಂದಾಗ ಎದೆಗುಂದದೆ ಧೈರ್ಯವಾಗಿ ಮುನ್ನುಗ್ಗಿದರೆ ಸಿದ್ಧಿ ಖಂಡಿತ ಎಂದೂ ಹೇಳುತ್ತಾರೆ.

ಸತ್ಯ ನಿಷ್ಠುರಿ, ಶರಣನಾರಿಗೂ ಅಂಜುವವನಲ್ಲ. ಈ ಗುಣ ಇವರಲ್ಲಿ ಮಡುಗಟ್ಟಿ ನಿಂತಿದೆ.

ಸರ್ವಸಂಗ ಪರಿತ್ಯಾಗ ಮಾಡಿದ ಶಿವಶರಣನ
ಲೋಕದ ಸಂಸಾರಿಗಳೆಂತು ಮೆಚ್ಚುವರಯ್ಯಾ!
ಊರೊಳಗಿರ್ದಡೆ ಉಪಾಧಿಕನೆಂಬರು;
ಅಡವಿಯೊಳಗಿರ್ದಡೆ ಮೃಗನೆಂಬರು;
ಹೊನ್ನ ಬಿಟ್ಟಡೆ ದರಿದ್ರನೆಂಬರು;
ಹೆಣ್ಣ ಬಿಟ್ಟಡೆ ನಪುಂಸಕನೆಂಬರು;
ಮಣ್ಣಬಿಟ್ಟಡೆ ಪೂರ್ವಕರ್ಮಿ ಎಂಬರು;
ಮಾತನಾಡದಿರ್ದಡೆ ಮೂಗನೆಂಬರು;
ಮಾತನಾಡಿದಡೆ ಜ್ಞಾನಿಗೇಕಯ್ಯಾ ಮಾತೆಂಬರು;
ನಿಜವನಾಡಿದಡೆ ನಿಷ್ಠುರಿ ಎಂಬರು;
ಸಮತೆಯ ನುಡಿದಡೆ ಅಂಜುವನೆಂಬರು ;

ಇದು ಕಾರಣ, ಕೂಡಲಚನ್ನಸಂಗಯ್ಯಾ,
ನಿಮ್ಮ ಸೃನ ಲೋಕದಿಚ್ಛೆಯ ನುಡಿಯ ; ಲೋಕದಿಚ್ಛೆಯ ನಡೆಯ । [೧೬]

ಲೋಕವನ್ನು ಲಕ್ಷಿಸದೆ, ಲೋಕದ ಹಂಗಿಗೆ ಬೀಳದೆ, ಲೋಕದಿಚ್ಛೆಯಂತೆ ನುಡಿಯದೆ, ಲೋಕದಿಚ್ಛೆಯಂತೆ ಅಡೆಯದೆ ನಿರ್ದಾಕ್ಷಿಣ್ಯವಾಗಿ ತಮ್ಮ ಹಾದಿಯನ್ನು ತಾವು ಹಿಡಿಯುತ್ತಾರೆ. ಇನ್ನು ಬಸವಣ್ಣನವರ ಮಹಾಮನೆಯ ಭೋಜನದಿಚ್ಛೆಗೆ ಕಂಡ ಕಂಡವರೆಲ್ಲ ಭಕ್ತರಾದರು. ಕೇವಲ ಲಾಂಛನದ ಧರಿಸಿದ ಮಾತ್ರಕ್ಕೆ ಭಕ್ತರಹರೆ? ಅಂಥವರನು ಚನ್ನಬಸವಣ್ಣ ತರಾಟೆಗೆ ತೆಗೆದುಕೊಳ್ಳುತ್ತಾರೆ –

ಬಟ್ಟಬಯಲೆಲ್ಲ ಗಟ್ಟಿಗೊಂಡಡೆ, ಸ್ವರ್ಗ ಮರ್ತ್ಯ ಪಾತಾಳಕ್ಕೆ ಠಾವಿನ್ನೆಲ್ಲಿಯದೊ?
ಮೇಘ ನಿರ್ಮಲ ಜಲವೆಲ್ಲ ಮುತ್ತಾದಡೆ, ಸಪ್ತಸಾಗರಂಗಳಿಗೆ ಉದಕವಿನ್ನೆಲ್ಲಿಯದೊ?
ಕಷ್ಟಜೀವಿ ಮನುಜರೆಲ್ಲ ನೆಟ್ಟನೆ ಶಿವಜ್ಞಾನಿಗಳಾದಡೆ,
ಮುಂದೆ ಭವದ ಬಳ್ಳಿ ಬೆಳೆಯಲಿನ್ನೆಲ್ಲಿಯದೊ? [೧೭]

ಸಾಕ್ಷಿ : ಗುರುಭಕ್ತಿಂ ಪರಿತ್ಯಜ್ಯ ಸದ್ಯೋsಪಿ ನರಕಂ ವ್ರಜೇತ್' ಇಂತೆಂದುದಾಗಿ, ಕೂಡಲಚನ್ನಸಂಗಯ್ಯ, ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ [೧೮]

ಲಿಂಗಲಾಂಛನ ಧರಿಸಿದ ಕಷ್ಟಜೀವಿಗಳೆಲ್ಲ ನೆಟ್ಟನೆ ಭಕ್ತರಾಗಿಬಿಟ್ಟರೆ ಪ್ರಪಂಚ ಬರಿದಾಗಿ ಬಿಟ್ಟೀತು. ಭಕ್ತರಾಗುವುದು ಅಷ್ಟುಸುಲಭವಲ್ಲ. ಸಾಧಕರು ಮಾತ್ರ ಭಕ್ತರಾಗಬಲ್ಲರು ಎಂದು ಹೇಳುತ್ತಾರೆ. ಹೀಗೆ ಭಕ್ತನಾದವನು ಹೇಗಿರಬೇಕು?

ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ,
ಭವಿಯ ಸಂಗ ಭಂಗವೆಂದರಿಯರು.
ಕೂಡಲಚನ್ನಸಂಗಯ್ಯಾ,
ಅವರತ್ತಲೂ ಅಲ್ಲ; ಇತ್ತಲೂ ಅಲ್ಲ [೧೯]
ಮಡಿಲಸುತ್ತಿದ ಹಾವಿನಂತೆ ಮಡಿಲಲ್ಲಿ ಕಟ್ಟಿದಡೇನು?
ಕೊರಳ ಸುತ್ತಿದ ಹಾವಿನಮತೆ ಕೊರಳಲ್ಲಿ ಕಟ್ಟಿದಡೇನು?
ಕಳವು ಹಾದರ ಅನ್ಯದಯವ ಭವಿಸಂಗ ಬಿಡದನ್ನಕ್ಕರ ಲಿಂಗಭಕ್ತನೆನಿಸಬಾರದು.
ಆಚಾರಸಹಿತ ಭಕ್ತ; ಅನಾಚಾರಸಹಿತ ನರಕಿ !
ಕೂಡಲಚನ್ನಸಂಗಯ್ಯನವರ ಬಲ್ಲನಾಗಿ ಒಲ್ಲನು [೨೦]

ಕಳವು, ಹಾದರ, ಅರಿಷಡ್ವರ್ಗಗಳನ್ನು ಜಯಿಸದವನು, ಭಕ್ತನಾದರೂ ಭವಿಯೆ, ಒಮ್ಮೆ ಭಕ್ತನಾದವನು ಅಂಥವರ ಸಹವಾಸ ಮಾಡಬಾರದು ಎಂದು ಭಕ್ತರಿಗೆ ಎಚ್ಚರಿಕೆಯನ್ನು ಕೊಡುತ್ತಾರೆ. ಹೀಗೆ ಭಕ್ತನಾದವನು ಹೇಗಿರಬೇಕು? ಆಯಾ ಸ್ಥಲದ ಲಕ್ಷಣಗಳನ್ನು ಪಡೆದುಕೊಂಡವನಾಗಿರಬೇಕು :

ಭಕ್ತ ಶಾಂತನಾಗಿರಬೇಕು;
ತನ್ನ ಕುರಿತು ಬಂದ ಠಾವಿನಲ್ಲಿ ಸತ್ಯವಾಗಿ ನುಡಿಯಬೇಕು;
ಗುರುಲಿಂಗಜಂಗಮದೆಡೆಯಲ್ಲಿ ನಿಂದೆಯಿಲ್ಲದಿರಬೇಕು;
ಭೂತಹಿತವಹ ವಚನವ ನುಡಿಯಬೇಕು;
ಸಕಲಪ್ರಾಣಿಗಳ ತನ್ನಂತೆ ಕಾಣಬೇಕು;
ತನುಮನಧನವ ಗುರುಲಿಂಗಜಂಗಮಕ್ಕೆ ಸವೆಸಬೇಕು;
ಅಪಾತ್ರದಾನವ ಮಾಡಲಾಗದು ;

ಸಕಲೇಂದ್ರಿಯಂಗಳ ತನ್ನ ವಶವ ಮಾಡಬೇಕು;
ಇದೇ ಮೊದಲಲ್ಲಿ ಬೇಹಶೌಚ ನೋಡಾ!
ಲಿಂಗವ ಪೂಜಿಸಿ ಪ್ರಸಾದದ ಪಡೆವಡೆ, ಇದೇ ಸಾದನ
ಕೂಡಲಚನ್ನಸಂಗಮದೇವಾ![೨೨]

ಹೀಗೆ ಸಾಧನಮಾರ್ಗದಲ್ಲಿ ನಡೆವ ಭಕ್ತನ ಕಾಯ, ಮಮಕಾಯವಯ್ಯಾ ಎಂದು ಉದ್ಗರಿಸುತ್ತಾರೆ. ಸಾಧನಾ ನಿರತನಾದ ಭಕ್ತನಿಗೆ ಅಂತರಂಗಶುದ್ಧಿ, ಸನ್ನಡತೆ ನಿಷ್ಕೃಷ್ಟ ಜ್ಞಾನ ಅವಶ್ಯಕ ಎಂಬುದನ್ನು ಬಹಳ ಚೆನ್ನಾಗಿ ಹೇಳಿದ್ದಾರೆ :

ಹೊನ್ನಬಿಟ್ಟು, ಹೆಣ್ಣ ಬಿಟ್ಟು, ಮಣ್ಣ ಬಿಟ್ಟು,
ಮಂಡೆಯ ಬೋಳಿಸಿಕೊಂಡು ಬೋಳಾದ ಬಳಿಕ
ನಿರಾಸಕ್ತನಾಗಿ, ಭಿಕ್ಷಾಹಾರಿಯಾಗಿ, ಶಿವಧ್ಯಾನಪರಾಯಣನಾಗಿಪ್ಪುದೀಗ ಪ್ರಥಮ ಬೋಳು,
ಲಿಂಗಾಣತಿಯಿಂದ ಬಂದುದ ಕೈಕೊಂಡು ಲಿಂಗಸಾವಧಾನವಾಗಿಪ್ಪುದೀಗ ದ್ವಿತೀಯ ಬೋಳು.
ಶರಣಸತಿ ಲಿಂಗಪತಿ ಎಂಬುಭಯವಳಿದು ಪರಮಾನಂದದಲ್ಲಿಪ್ಪುದೀಗ ತೃತೀಯ ಬೋಳು.
ಈ ಬೋಳಿನ ಅನುವ, ಕೂಡಲಚನ್ನಸಂಗಯ್ಯನಲ್ಲಿ ಅಲ್ಲಯ್ಯ ಬಲ್ಲ[೨೩]

ಅಂತರಂಗಶುದ್ಧಿಗೆ ಒತ್ತುಕೊಟ್ಟ ಚನ್ನಬಸವಣ್ಣನವರು ವೇಷ ಭೂಷಣಗಳಿಂದ ಪ್ರಯೋಜನವಿಲ್ಲ. ಅರಿವು, ಆಚಾರ ಮುಖ್ಯ ಎಂದು ಹೇಳುತ್ತಾರೆ :

ಕೇಶ ಕಾಷಾಯಾಂಬರವನಕ್ಕಿದಡೇನು?
ವಿಭೂತಿ ರುದ್ರಾಕ್ಷಿಯ ಮಕುಟವ ಧರಿಸಿದಡೇನು?
ಸಾಕಾರದಲ್ಲಿ ಸನ್ಮತರಲ್ಲ, ನಿರಾಕಾರದಲ್ಲಿ ನಿರತರಲ್ಲ,
ಪರಮಾರ್ಥದಲ್ಲಿ ಪರಿಣಾಮಿಗಳಲ್ಲ
ಇದು ಕಾರಣ ಕೂಡಲಚನ್ನಸಂಗಮದೇವಾ,
ತುಱುಬಾಗಲಿ, ಬೋಳಾಗಲಿ, ಜಡೆಯಾಗಲಿ ಅಱಿವುಳ್ಳಡೆ ಜಂಗಮ [೨೪]

ಅಂತರಂಗದಲ್ಲಿ ಅರಿವು ಬಹಿರಂಗಕ್ರಿಯೆ ಪರಸ್ಪರ ಸಮರಸದಿಂದ ಕೂಡಿರಬೇಕು. ಜಂಗಮಕ್ಕೆ ಇದೇ ಲಕ್ಷಣ. ನಿಷ್ಕೃಷ್ಟಜ್ಞಾನವಿಲ್ಲದೆ ಕೇವಲ ಆಚರಣೆ ಇದ್ದರೆ ಅದು ಕರ್ಮದ ಬೆಳೆಸು –

ಮಾಡುವರಯ್ಯಾ ಮಾಡುವರಯ್ಯಾ ಮರುಳುಗೊಂಡಂತೆ!
ಮರ್ಮವನಱಿಯದೆ ಮಾಡುವ ಮಾಟ
ಸಯಧಾನದ ಕೇಡು, ಕರ್ಮದ ಬೆಳಸು.
ಕೂಡಲಚನ್ನಸಂಗನ ಶರಣರ ಅನುವಱಿದು ಮಾಡದ ಮಾಟ ಭವದ ಮಾಟ![೨೫]

ಕೇವಲ ಆಚರಣೆ ಸಾಲದು, ಅದು ಸತ್ಕ್ರಿಯಾಚರಣೆಯಾಗಿರಬೇಕು. ಇಂಥ ಆಚರಣೆಗೆ ಅಂತರಂಗಶುದ್ಧಿ ಬೇಕು. ಅಂತರಂತಶುದ್ಧಿಗೆ ಶೀಲ ತಳಹದಿಯಾಗಬೇಕು. ಆ ಶೀಲ ಹೇಗಿರಬೇಕು: ಚೆನ್ನಬಸವಣ್ಣನವರು ಹೇಳುತ್ತಾರೆ –

ಶೀಲ ಶೀಲವೆಂದು ಗರ್ವಿಸಿ ನುಡಿಯುತಿಪ್ಪಿರಿ; ಶೀಲವಾವುದೆಂದಱಿಯಿರಿ.
ಇದ್ದುದಕ್ಕೆ ವಂಚನೆಯ ಮಾಡದಿಪ್ಪುದೆ ಶೀಲ;
ಇಲ್ಲದುದಕ್ಕೆ ಕಡನ ಬೇಡದಿಪ್ಪುದೆ ಶೀಲ;
ಪರಧನ ಪರಸ್ತ್ರೀಗಳುಪದಿಪ್ಪುದೆ ಶೀಲ;
ಪರದೈವ ಪರಸ್ತ್ರೀಗಳಪದಿಪ್ಪುದೆ ಶೀಲ;

ಪರದೈವ ಪರಸಮಯಕ್ಕೆ ಎಳಸದಿಪ್ಪುದಿ ಶೀಲ;
ಗುರುನಿಂದೆ ಶಿವನಿಂದೆ ಜಂಗಮನಿಂದೆಯ ಕೇಳದಿಪ್ಪುದೆ ಶೀಲ;
ಕೂಡಲಚನ್ನಸಂಗಯ್ಯನ ಶರಣರ ಬರವಿಂಗೆ ಮುಯ್ಯಾಂತು
ಪರಿಣಾಮಿಸಬಲ್ಲುದೆ ಅಚ್ಚಶೀಲ[೨೬]

ಎಂದು ಶೀಲದ ಬೇಕು – ಬೇಡಗಳನ್ನು ಸರಳವಾಗಿ, ನೇರವಾಗಿ, ಸ್ಪಷ್ಟವಾಗಿ ಹೇಳಿದ್ದಾರೆ. ಇವು ಅವರ ನುಡಿಯ ಸಾಮಾನ್ಯ ಗುಣಗಳು. ಇನ್ನೂ ಮುಂದುವರಿದು :

ಶೀಲವಾದಡೆ ಪ್ರಪಂಚು ನಾಸ್ತಿಯಾಗಿರಬೇಕು.
ಸೀಮೆಯಾದಡೆ ಪಂಚೇಂದ್ರಿಯ ನಾಸ್ತಿಯಾಗಿರಬೇಕು.
ಇಂತಪ್ಪ ಶೀಲಕ್ಕೆ ಭವ ನಾಸ್ತಿ; ಸೀಮೆಗೆ ಭವ ನಾಸ್ತಿ.
ಈ ದ್ವಿವಿಧ ನಾಸ್ತಿಯಾದಲ್ಲದೆ, ಕೂಡಲಚನ್ನಸಂಗಯ್ಯನಲ್ಲಿ
ಶೀಲವಂತನೆನಿಸಬಾರದು [೨೭]

ಸಾಧನೆಯಲ್ಲಿ ತೊಡಗಿದ ಭಕ್ತ ಅಂತರಂಗಶುದ್ಧಿಗೆ ಅಚ್ಚ ಶೀಲವನ್ನು ಬೆಳಸಿಕೊಳ್ಳಬೇಕು. ಆ ಶೀಲ ಪ್ರಪಂಚುವಿಗೆ ಸಿಗಬಾರದು, ಪಂಚೇಂದ್ರಿಯಗಳಿಗೆ ಒಳಗಾಗಬಾರದು. ಇವುಗಳ ಕೋಟಲೆಗಳಿಂದ ಮುಕ್ತವಾಗಿರಬೇಕು. ಆಗ ಲಿಂಗಭಕ್ತನನ್ನು ಶೀಲವಂತನೆಂಬೆ ಎನ್ನುತ್ತಾರೆ ಚನ್ನಬಸವಣ್ಣನವರು.

ಇವರು ಬೌದ್ಧಿಕ ಸಾಮ್ರಾಜ್ಯದ ಚಕ್ರವರ್ತಿ. ಶಾಸ್ತ್ರಜ್ಞಾನದ ಮೇರು, ಅಚ್ಚ ಅವಿರಳಜ್ಞಾನಿ ಎಂದು ಮುಂತಾಗಿ ಹಿಂದೆ ಹೇಳಿದೆ. ತಾನು ರಿಮಿಸುವ ವಿಷಯದಲ್ಲಿ ಪರಿಪೂರ್ಣ ಜ್ಞಾನಿ, ಜ್ಞಾನಿ ತುಂಬಿದ ಕೊಡ. ಗಂಭೀರ, ಅಂತರ್ಮುಖಿ ಎಂದು ಬಯಸುವವ. ಆದರೆ ಅಲ್ಪಜ್ಞಾನಿಗಳಿಗೆ ಸಮತೂಕವಿರುವುದಿಲ್ಲ. ಬಾಯಿಬಡಿಯುವುದೇ ಅವರ ಸ್ವಭಾವ. ಹೊಸದಾಗಿ ವಿಷಯಪ್ರವೇಶ ಮಾಡಿದವನ ಬುದ್ಧಿಗೆ ಸೊಕ್ಕು ಪ್ರವೇಶಿಸಿದರೆ, ಅಹಂಕಾರ ಹೆಡೆಬಿಚ್ಚಿದರೆ ಅಪಾಯ. ಅಂಥ ಅಲ್ಪಮತಿಗಳ ಜಲ್ಪನೆಗಳನ್ನು ಕೇಳಿದ ಚನ್ನಬಸವಣ್ಣನವರು ಕಿಡಿಕಿಡಿಯಾಗುತ್ತಾರೆ. ಅಂಥವರನ್ನು ವಿಷಯ ವಿವರ ಸಹಿತ ಖಂಡತುಂಡವಾಗಿ ಹರಿತವಾದ ಮಾತುಗಳಿಂದ ಖಂಡಿಸುತ್ತಾರೆ:

ತಾಳು ಬೋಳು ಕಪ್ಪರವೆಂದೆಂಬರು :
ತಾಳಾವುದು, ಬೋಳಾವುದು, ಕಪ್ಪರವಾವುದೆಂದರಿಯರು.
ಕಾಯದ ಕಳವಳದವಗುಣವ ತಾಲಬಲ್ಲಡೆ ತಾಲು;
ಸಂಸಾರವಿಷಯವ ಬೋಳಯಿಸಬಲ್ಲಡೆ ಬೋಳು;
ಪದದಲ್ಲಿ ಪರಿಣಾಮಸಬಲ್ಲಡೆ ಕಪ್ಪರ.
ಅಂತಲ್ಲದಿರ್ದಡೆ,
ಕೂಡಲಚನ್ನಸಂಗಮದೇವರಲ್ಲಿ ಡೊಂಬರ ಬೋಲುಗಿ
ದೇಹ ನಿರ್ದೇಹವೆನುತಿಪ್ಪರಯ್ಯಾ;
ದೇಹ ನಿರ್ದೇಹವನಪ್ಪ ಮರ್ಮವನರಿಯರು.
ಅಹಂ ಎಂಬುದೆ ದೇಹ ನೋಡಾ,
ದಾಸೋಹಂ ಎಂಬುದೆ ನಿರ್ದೇಹ ನೋಡಾ,
'ಆಕಾಯೋ ಭಕ್ತಕಾಯಸ್ತು' ಎಂದುದಾಗಿ,
ಅಹಂಭಾವವಳಿದುಳಿದು ದಾಸೋಹಿಗಳಾದವರ
ಕೂಡಲಚನ್ನಸಂಗಯ್ಯನಲ್ಲಿ ನಿರ್ದೇಹಿಗಳೆಂಬೆನು೨
ಪದಾರ್ಥ ಪದಾರ್ಥವೆಂದೆಂಬಿರಿ;

ಪದವಾವುದು ಅರ್ಥವಾವುದೆಂದರಿಯಿರಿ
ಪದವೇ ಲಿಂಗ, ಅರ್ಥವೇ ಭಕ್ತ.
ಇದನರಿದು ಪದಾರ್ಥವ ತಂದು ಅರ್ಪಿತವ ಮಾಡಬಲ್ಲಡೆ.
ಕೂಡಿಕೊಂಡಿಪ್ಪ ನಮ್ಮ ಕೂಡಲಚನ್ನಸಂಗಮದೇವ ೩೮

ಖಂಡಿಸುವುದು ಒಂದು ಗುಣವಾಗಿ ಕಾಣುತ್ತದೆ. ಖಂಡನೆಯಲ್ಲಿ ವಿಷಯದ ವಿವರಗಳು ವಿವರವಿವರವಾಗಿ ನೇರವಾಗಿ ಮೂಡಿಬಂದಿವೆ. ಶಾಸ್ತ್ರಜ್ಞಾನಕ್ಕೆ, ಆಚಾರ –ಸತ್ಕ್ರಿಯಾಚರಣೆಗೆ ಸಹಕಾರಿಯಾಗುತ್ತವೆ. ಸಾಧಕನ ಮಾರ್ಗ ಅಭಾಧಗತಿಯಿಂದ ಸಾಗಲು ಸಹಾಯಕವಾಗುತ್ತದೆ. ಶಾಸ್ತ್ರ, ಸಿದ್ಧಾಂತ ಎಂದ ಮೇಲೆ ಕೆಲವು ವಿಧಿ–ನಿಷೇಧಗಳಿರುತ್ತವೆ. ಸಾಧನೆಗೆ ಮಹತ್ವಕೊಡುವ ಚನ್ನಬಸವಣ್ಣನವರು ಒಮ್ಮೊಮ್ಮೆ ಅರ್ಥರಹಿತವಾದ ವಿಧಿಗಳನ್ನು ಲಕ್ಷಿಸದೆ ಖಂಡಿಸುತ್ತಾರೆ. ಅದಕ್ಕೆ ಮಾರ್ಗೋಪಾಯವನ್ನೂ ಸೂಚಿಸುತ್ತಾರೆ. ಇಂತಲ್ಲದೆ ಧರ್ಮಕ್ಕೆ ನೆಲೆಯಿಲ್ಲ. ಬೆಲೆಯಿಲ್ಲ ಧರ್ಮ ಗೊಡ್ಡು ಸಂಪ್ರದಾಯವಲ್ಲ, ವೈಚಾರಿಕ ಅನುಭವದ ನೆಲಗಟ್ಟಿನ ಮೇಲೆ ನಿಂತು, ಪರಿವರ್ತನೆ ಬಯಸುವಂಥದು. ಇದನ್ನು ಚೆನ್ನಾಗಿ ಅರಿತ ಚನ್ನಬಸವಣ್ಣನವರು:

ಸೃಷ್ಟಿಯ ಮೇಲಣ ಕಣಿಯ ತಂದು, ಇಷ್ಟಲಿಂಗವೆಂದು ಮಾಡಿ, ಅಷ್ಟ ತನುವಿನ ಕೈಯಲ್ಲಿ ಕೊಟ್ಟು,

ಆ ಅಷ್ಟ ತನುವಿನ ಕೈಯ ತಪ್ಪಿ ಸೃಷ್ಟಿಯ ಮೇಲೆ ಬಿದ್ದಿತೆಂದು
ಮೆಟ್ಟಿ ಮೆಟ್ಟಿ ಹೊಳಿಸಿಕೊಂಬ ಗುರುದ್ರೋಹಿಗಳ ಮುಖವ ನೋಡಲಾಗದು,
ಅವರ ನುಡಿಯ ಕೇಳಲಾಗದು.
ಇದಕ್ಕೆ ದೃಷ್ಟಾಂತ : ಗಾರುಡಪುರಾಣೇ:
ಲಿಂಗಮಧ್ಯೇ ಜಗತ್ಸರ್ವಂ ತ್ರೈಲೋಕ್ಯಂ ಸಚರಾಚರಂ !
ಲಿಂಗಬಾಹ್ಯಾತ್ಪರಂ ನಾಸ್ತಿ ತಸ್ಮಾಲ್ಲಿಂಗಂ ಪ್ರಪೂಜಯೇತ್ ॥ ಇಂತೆಂದುದಾಗಿ,
ಇಷ್ಟಲಿಂಗ ಬಿದ್ದಡೆ ಆಚಾರಲಿಂಗ ಬಿದ್ದತೆ?
ಆಚಾರಲಿಂಗ ಬಿದ್ದಡೆ ಗುರುಲಿಂಗ ಬಿದ್ದಿತೆ?
ಗುರುಲಿಂಗ ಬಿದ್ದಡೆ ಶಿವಲಿಂಗ ಬಿದ್ದಿತೆ?
ಶಿವಲಿಂಗ ಬಿದ್ದಡೆ ಜಂಗಮಲಿಂಗ ಬಿದ್ದಿತೆ?
ಜಂಗಮಲಿಂಗ ಬಿದ್ದಡೆ ಪ್ರಸಾದಲಿಂಗ ಬಿದ್ದಿತೆ?
ಪ್ರಸಾದಲಿಂಗ ಬಿದ್ದಡೆ ಮಹಾಲಿಂಗ ಬಿದ್ದಿತೆ?
ಅಕಟಕಟ, ಷಡ್ವಿಧ ಲಿಂಗದ ಭೇದವನರಿಯದೆ ಕೆಟ್ಟ ಕೇಡ ನೋಡಾ!
ಅಭ್ಯಾಸಮಾಡುವಲ್ಲಿ ಕೋಲು ಬಿದ್ದಡೆ
ತನ್ನ ತಾನೆ ಇರಿದುಕೊಂಡು ಸಾಯಬಹುದೆ,
ಆ ಕೋಲಿನಲ್ಲಿ ಅಭ್ಯಾಸವನೆ ಮಾಡಿ
ಸುರಗಿಯ ಮೊನೆಯನೆ ಗೆಲಬೇಕಲ್ಲವೆ?
ಇದು ಕಾರಣ, ಜಲ ಅಗ್ನಿ ನೇಣು ವಿಷ ಅಸಿಪತ್ರ ಸಮಾಧಿ ಇಂತಿವರಿಂದ
ಪ್ರಾಣಹಿಂಸೆಯ ಮಾಡುವವರನು ಅಘೋರ ನರಕದಲ್ಲಿ ಅದ್ದಿ ಅದ್ದಿಕ್ಕುವ
ನಮ್ಮ ಕೂಡಲಚನ್ನಸಂಗಮದೇವ 32

ತಾರ್ಕಿಕವಾಗಿ, ಆಧಾರಸಹಿತವಾಗಿ, ವಿಚಾರಪೂರ್ವಕವಾಗಿ ವಿಚಾರಿಸಿ ನೋಡಿ ಪ್ರಸಂಗಗಳನ್ನು ವಿಸ್ತರಿಸುವುದನ್ನು ಕಂಡಾಗ ಚನ್ನಬಸವಣ್ಣನವರ ನಿಶಿತಮತಿ, ಅಪಾರ ಲೌಕಿಕಶಾಸ್ತ್ರಜ್ಞಾನ, ಸಮತೆ, ಸ್ಥೈರಣೆಗಳನ್ನು ಕಂಡು ಸಾಮಾನ್ಯಮತಿಯೇನು, ಪ್ರಬುದ್ಧ ಬುದ್ಧಿಯೂ ತತ್ತರಿಸುತ್ತದೆ!

ಷಟ್ಸ್ಥಲ ಸಿದ್ಧಿಯ ಸಾಧನೆಯಲ್ಲಿ ಭಕ್ತಿಯೋಗ – ಕರ್ಮಯೋಗಗಳು ಉದ್ದಕ್ಕೂ ಜ್ಞಾನಯೋಗದೊಂದಿಗೆ ಸೇರಿ, ಭಕ್ತನನ್ನು ಸದಾ ಜಾಗ್ರದವಸ್ಥೆಯಲ್ಲಿರಿಸಿ, ತಪ್ಪಿದಲ್ಲಿ ಎಚ್ಚರಿಸಿ, ಸರಿಮಾರ್ಗದಲ್ಲಿ ಕೊಂಡೊಯ್ಯುತ್ತಾ, ಜಂಗಮಶಿಲನನ್ನಾಗಿ ಮಾಡುತ್ತಾ ಶಿವಯೋಗಪ್ರಾಪ್ತಿಗೆ ಅಣಿಮಾಡಿರುವುದನ್ನು ಕಾಣುತ್ತೇವೆ. ಇಲ್ಲಿ ಈ ಯೋಗಗಳು ಕೇವಲ ಧಾರ್ಮಿಕ ಸಿದ್ಧಾಂತಗಳಲ್ಲ. ಸಾಧಕನಲ್ಲಿ ಮಿಳಿತವಾಗಿ, ಅವನೊಂದಿಗೆ ತಾವೂ ಜಂಗಮಶೀಲವಾಗಿ ಕ್ರಿಯಾಚರಣೆಯಲ್ಲಿ ತೊಡಗಿರುತ್ತ ತಾನು ತಾನಾಗುವಲ್ಲಿ, ಲಿಂಗಾಂಗ ಸಾಮರಸ್ಯದಲ್ಲಿ ಕರಗಿಹೋಗುವ ಕ್ರಿಯಾಶೀಲ ಚೈತನ್ಯಗಳು ಎಂಬುದು ಇಲ್ಲಿ ಗಮನಿಸಬೇಕಾದ ಅಂಶ. ಇವುಗಳ ಈ ಸ್ವಭಾವದಿಂದಾಗಿಯೇ ಷಟ್ಸ್ಥಲವು ಚಲನಾತ್ಮಕ ಮಾನವತಾವಾದ (A dynamic humanism) ಎಂದು ಕರೆಸಿಕೊಂಡಿರುವುದು. ಇಲ್ಲಿ ಜಡವೆಂದರೆ ಸಾವು, ಜಂಗಮವೆಂದರೆ ಬದುಕು, ಈ ಜಡ–ಜಂಗಮಗಳ ಸಾರ್ಥಕತೆ ಇಲ್ಲಿನ ಕರ್ಮ, ಭಕ್ತಿ, ಜ್ಞಾನಯೋಗಗಳು. ಚನ್ನಬಸವಣ್ಣನವರಲ್ಲಿ ಈ ಅರ್ಥದಲ್ಲಿ, ಈ ಹಿನ್ನೆಲೆಯಲ್ಲಿ ಕರ್ಮಯೋಗ – ಭಕ್ತಿಯೋಗಗಳು ಕಾರ್ಯಪ್ರವೃತ್ತವಾಗಿರುವುದನ್ನು ಇದರುವರೆಗಿನ ವಿವರಣೆಯಲ್ಲಿ ಕಂಡುಕೊಳ್ಳಬಹುದು.

ಹೀಗೆ ಚನ್ನಬಸವಣ್ಣನವರು ಬಸವಣ್ಣನವರ ಬಲಗೈ ಬಂಟರಾಗಿ, ತಪ್ಪಿದಾಗ, ಮೈಮರೆತಾಗ ಅವರನ್ನು ಮೃದುವಾಗಿ ಎಚ್ಚರಿಸಿ, ಅನುಭವಮಂಟಪದ ಕಾರ್ಯಕಲಾಪಗಳಲ್ಲಿ ನಿಜವಾದ ಅರ್ಥದಲ್ಲಿ ಜಂಗಮಶಕ್ತಿಯಾಗಿ ಸುಳಿದಾಡಿ, ಅಲ್ಲಿನ ಕಾರ್ಯ ಕಲಾಪಗಳನ್ನು ಸುಸೂತ್ರವಾಗಿ ನಿಯಂತ್ರಿಸಿ–ನಿರ್ವಹಿಸುತ್ತ, ಮೇಲಿಂದ ಮೇಲೆ ತಮ್ಮ ನಿಶಿತಾಗ್ರಮತಿಯನ್ನು ಪರಿಚಯಿಸುತ್ತ, ವಿಸ್ತಾರವಾದ ಅಚ್ಚ ಅವಿರಳಜ್ಞಾನಮೇರುವಾಗಿ ಷಟ್ಸ್ಥಲ ಸಿದ್ಧಾಂತಕ್ಕೆ ರೂಪಿಟ್ಟು, ಆಚಾರ–ವಿಚಾರ–ವ್ಯವಹಾರಗಳನ್ನು ಸಮತೋಲ ಗೊಳಿಸುತ್ತ ಚಿಕ್ಕದಣ್ಣಾಯಕರಾದ ಜ್ಞಾನಸುಮೇರು ಚನ್ನಬಸವಣ್ಣನವರು ಅನುಭವ ಮಂಟಪದ ಇತಿಹಾಸದಲ್ಲಿ, ಶರಣರ ಮಧ್ಯದಲ್ಲಿ, ಶರಣಧರ್ಮದ ಇತಿಹಾಸದಲ್ಲಿ ವೀರಶೈವ ಧರ್ಮದಲ್ಲಿ ಅಚ್ಚಳಿಯದ ಧ್ರುವತಾರೆಯಾಗಿ ಮಿಂಚಿ, ಪರಮ ಪರಂಜ್ಯೋತಿಸ್ವರೂಪರಾಗಿದ್ದಾರೆ. ಉರಿಕೊಂಡ ಕರ್ಪೂರವಾಗಿದ್ದಾರೆ.

ಗ್ರಂಥಸೂಚಿ:

೧. ಚೆನ್ನಬಸವಣ್ಣನವರ ವಚನಗಳು, ವ. ೨೩.
೨. ಅದೇ, ವ. ೩೩.
೩. ಚೆನ್ನಬಸವಣ್ಣನವರ ವಚನಗಳು, ವ. ೮೭೭.
೪. ಅದೇ, ವ. ೭೫೫.
೫. ಚೆನ್ನಬಸವಣ್ಣನವರ ವಚನಗಳು, ವ. ೧೪೩೯.
೬. ಅದೇ, ವ. ೭೯೮.
೭. ಅದೇ, ವ. ೭೪೩.
೮. ಚೆನ್ನಬಸವಣ್ಣನವರ ವಚನಗಳು, ವ. ೧೦೮೧.
೯. ಚೆನ್ನಬಸವಣ್ಣನವರ ವಚನಗಳು, ವ. ೧೩೧೯.
೧೦. ಅದೇ, ವ. ೧೩೬೬.
೧೧. ಅದೇ, ವ. ೧೪೫೬.

೧೨. ಅದೇ, ವ. ೧೪೭೬.
೧೩. ಚೆನ್ನಬಸವಣ್ಣನವರ ವಚನಗಳು, ವ. ೧೦೩೯.
೧೪. ಅದೇ, ವ. ೧೪೯೯
೧೫. ಚೆನ್ನಬಸವಣ್ಣನವರ ವಚನಗಳು, ವ. ೬೭.
೧೬. ಅದೇ, ವ. ೧೩೯.
೧೭. ಅದೇ, ವ. ೮೪೦.
೧೮. ಚೆನ್ನಬಸವಣ್ಣನವರ ವಚನಗಳು, ವ. ೧೩೪೧.
೧೯. ಚೆನ್ನಬಸವಣ್ಣನವರ ವಚನಗಳು, ವ. ೫೨೫.
೨೦. ಅದೇ, ವ. ೩೭೭.
೨೧. ಅದೇ, ವ. ೮೮.
೨೨. ಅದೇ, ವ. ೮೯.
೨೩. ಚೆನ್ನಬಸವಣ್ಣನವರ ವಚನಗಳು, ವ. ೮೬.
೨೪. ಅದೇ, ವ. ೧೨೮೪.
೨೫. ಅದೇ, ವ. ೯೯೧.
೨೬. ಚೆನ್ನಬಸವಣ್ಣನವರ ವಚನಗಳು, ವ. ೭೧೦.
೨೭. ಅದೇ, ವ. ೫೮೮.
೨೮. ಅದೇ, ವ. ೧೧೧೪.
೨೯. ಚೆನ್ನಬಸವಣ್ಣನವರ ವಚನಗಳು, ೧೨೨೬.
೩೦. ಅದೇ, ವ. ೧೧೨೩.
೩೧. ಅದೇ, ವ. ೭೫೨.
೩೨. ಚೆನ್ನಬಸವಣ್ಣನವರ ವಚನಗಳು, ವ. ೯೧೪.

❒

---

* ಚೆನ್ನಬಸವಣ್ಣನವರು ಸಂ. ಜಗದಾಂಬಾ ಮಲ್ಲೇದೇವರು, ಪ್ರ. ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ, ರಾಮಾನುಜ ರಸ್ತೆ, ಮೈಸೂರು–೫೭೦ ೦೦೪, ಪು. ೧೦೪ ರಿಂದ ೧೨೩, ೧೯೯೧

ಚಿನ್ಮಯಾನಂದ ಚೆನ್ನಬಸವಣ್ಣ

ಸಿದ್ಧಯ್ಯ ಪುರಾಣಿಕ್

ವೀರಶೈವಾಚಾರ ಮಾರ್ಗ ವಿ
ಚಾರವಭ್ಯಂತರದೊಳೀಪರಿ
ಯೋರಣಿಸಿ ಹರಕರ್ಮಭಕ್ತಿಜ್ಞಾನವಿಹುದೆಂದು
ಧಾರುಣಿಯಲರಿವಂತೆ ಕರುಣಾ
ಕಾರನಾಗಿ ಷಡುಸ್ಥಲವನು
ದ್ಧಾರಿಸಿದ ಗುರು ಚೆನ್ನಸಂಗನ ಬಸವ ಶರಣಾರ್ಥಿ॥

—ಚಾಮರ

ಮೂರು ಮಗಮಗಿಸುವ ಹೂಗಳ ಮಧ್ಯದಲ್ಲಿ ಬಸವಣ್ಣನೆಂಬ ಹಣ್ಣು ಬಿಟ್ಟಿತು. ಅವರಲ್ಲಿ ಎರಡು ಹೂಗಳಿಂದ– ಗಂಗಾಂಬಿಕೆ ನೀಲಾಂಬಿಕೆಯರೆಂಬ ಹೂಗಳಿಂದ ಸತೀತ್ವದ ಅಮಂದ ಸುಗಂಧ ಸೂಸುತ್ತಿದ್ದಿತು; ಮೂರನೆಯ ಹೂವಿನಿಂದ ನಾಗಲಾಂಬಿಕೆಯೆಂಬ ಹೂವಿನಿಂದ ಅಕ್ಕನ ಅಕ್ಕರತೆಯ ಮಕರಂದ ತೊಟ್ಟಿಕ್ಕುತ್ತಿದ್ದಿತು ಗಂಗಾಂಬೆ ನೀಲಾಂಬೆಯರು ಬಸವಣ್ಣನ ಒಲವಿನ ಹೊನಲಿಗೆ ಎರಡು ದಂಡೆಗಳಾಗಿದ್ದರೆ ಅಕ್ಕ ನಾಗಾಂಬೆ ಆ ಹೊನಲಿಗೆ ತಾಯಿಮರಳಿ ನಂತಿದ್ದಳು. ಈ ಮೂವರಲ್ಲಿ ಒಬ್ಬೊಬ್ಬರಿಗೂ ಒಂದೊಂದು ಮಧುರ ವ್ಯಕ್ತಿತ್ವವಿದೆ.

ಬಸವಣ್ಣನ ತಾಯಿ ಮಾದಲಾಂಬಿಕೆಗೆ ಬಲದೇವ ಸಿದ್ಧರಸರು ಸಹೋದರರಾಗಿದ್ದರು. ಇಬ್ಬರೂ ಚಾಳುಕ್ಯ ರಾಜ್ಯದಲ್ಲಿ ಉನ್ನತಾಧಿಕಾರದಲ್ಲಿದ್ದರು. ಬಲದೇವನು ಬಿಜ್ಜಳನ ಮಹಾಮಂತ್ರಿಯಾಗಿದ್ದರೆ ಸಿದ್ಧರಸನು ಬಿಜ್ಜಳನು ಪ್ರಾಪ್ತ ವಯಸ್ಕನಾಗುವವರೆಗೆ ಅವನ ರಾಜಧರ್ಮದರ್ಶಿಯಾಗಿದ್ದು ಅವನನ್ನು ಊರ್ಜಿತ ಸ್ಥಿತಿಗೆ ತಂದವನು. ಬಲದೇವನ ಮಗಳು ಗಂಗಾಂಬಿಕೆ, ಸಿದ್ಧರಸನ ಮಗಳು ನೀಲಲೋಚನೆ. ಬಲದೇವನು ತಾನು ಜೀವಿಸಿರುವಾಗಲೆ ತನ್ನ ಮಗಳು ಗಂಗಾಂಬಿಕೆಯ ವಿವಾಹವನ್ನು ಬಸವಣ್ಣನೊಡನೆ ನೆರವೇರಿಸಿದ್ದನು. ಆದರೆ ಸಿದ್ಧರಸನು ಶಿವೈಕ್ಯನಾದ ಮೇಲೆ ನೀಲಾಂಬಿಕೆಯನ್ನು ತನ್ನ ತಂಗಿಯೆಂದೇ ತಿಳಿದು ಬೆಳೆಸಿದ್ದ ಬಿಜ್ಜಳನು ತಾನೇ ಮುಂದಾಗಿ ಅವಳ ವಿವಾಹವನ್ನು ಬಸವಣ್ಣನೊಡನೆ ಮಾಡಿದ್ದನು. ಗಂಗಾಂಬೆ ನೀಲಾಂಬೆಯರು ಆದರ್ಶ ಅಕ್ಕತಂಗಿಯರಾಗಿ,

ಆದರ್ಶ ಸತಿಯರಾಗಿ, ಉಚ್ಚ ಶರಣೆಯರಾಗಿ, ವಚನಕಾರ್ತಿಯರಾಗಿ, ಬಸವಣ್ಣನವರ ನಿತ್ಯ ದಾಸೋಹದ ದಕ್ಷಸಂಯೋಜಕರಾಗಿ, ಶರಣರಿಗೆಲ್ಲ ತನಿವಗೆಯ ತಾಯಂದಿರಾಗಿ ಬಾಳಿದರು.

ಇವರಿಬ್ಬರಲ್ಲಿ ನೀಲಾಂಬಿಕೆ ಬಸವ ಭಕ್ತರಿಗೆಲ್ಲ ಅಚ್ಚುಮೆಚ್ಚಿನ ತಾಯಿಯೆನಿಸಿದ್ದಾಳೆ. ಇಂದಿಗೂ ಹಳ್ಳಿಗಳಲ್ಲಿ ಹೆಣ್ಣುಮಕ್ಕಳು, 'ಲಿಂಗಪೂಜೆಯ ಮಾಡುತ್ತಿದ್ದಳು– ನಿಜ ಭಕ್ತಿ ನೀಲಾ' ಎಂಬ ಹಾಡನ್ನು ಭಕ್ತಿಭಾವಭರಿತರಾಗಿ ಹಾಡುತ್ತಾರೆ. ಆಕೆಯ ಶಾಂತಿ–ಸಹನೆಗಳು ಪೃಥ್ವಿಗೆ ಸಮಾನವಾದುವುಗಳು; ಆಕೆಯ ಹೃದಯ ಹಿಂದೂಮಹಾಸಾಗರದಷ್ಟು ವಿಶಾಲವಾದುದು; ಆಕೆಯ ದೃಷ್ಟಿ ಹಿಮಾಲಯದಷ್ಟು ವ್ಯಾಪಕವಾದುದು! ಬಸವಣ್ಣನವರ ದಾಸೋಹಕ್ಕೆ ನಾನಾಪ್ರಕಾರದ, ನಾನಾ ಸ್ವಭಾವಗಳ, ನಾನಾ ಅಭಿರುಚಿಗಳ ಜನರು ಬರುತ್ತಿದ್ದರು. ಅವರೆಲ್ಲರಿಗೂ ಅವರವರು ಬಯಸಿ ಬೇಡಿದುವನ್ನು ಮಾಡಿ ನೀಡುವುದು ಆ ಮಾತಾಯಿಯ ಪಾಲಿಗೆ ಬಂದ ಕಠೋರ ಕರ್ತವ್ಯವಾಗಿದ್ದಿತು. ಅದನ್ನಾಕೆ ಅಸದೃಶವಾಗಿ ನಿರ್ವಹಿಸಿ ನಾಡ ಜನರ ನೆನಹಿನಲ್ಲಿ ನಂದಾದೀಪವಾಗಿ ಬೆಳಗುತ್ತಲಿರುವಳು.

ಇಷ್ಟಿದ್ದರೂ ಆಕೆಯ ಶಾಲೀನತೆ ವಿನಯಪರತೆಗಳು ಅನಿರ್ವಚನೀಯ ವಾದುವುಗಳು. ಇದನ್ನು ಆಲಿಸಿ: "ಇಷ್ಟಲಿಂಗವೇ ಬಸವಣ್ಣನೆಂದರಿದು ತಮ್ಮ ಇಷ್ಟಲಿಂಗದಲ್ಲಿ ನಿರವಯಲನೈಯ್ದಿದರು ಅಕ್ಕಮಹಾದೇವಿಯಮ್ಮನರು; ಪ್ರಸಾದಲಿಂಗವೇ ಬಸವಣ್ಣನೆಂದರಿದು ತಮ್ಮ ಪ್ರಸಾದಲಿಂಗದಲ್ಲಿ ನಿರವಯಲನೈಯ್ದಿದರು ಮುಕ್ತಾಯಕ್ಕಗಳು; ಆಚಾರಲಿಂಗವೇ ಬಸವಣ್ಣನೆಂದರಿದು ತಮ್ಮ ಆಚಾರಲಿಂಗದಲ್ಲಿ ನಿರವಯಲನೈಯ್ದಿರು ಅಸಂಖ್ಯಾತ ಮಹಾಗಣಂಗಳೆಲ್ಲರು. ಗುಹೇಶ್ವರಲಿಂಗದಲ್ಲಿ ಪ್ರಭುದೇವಸಾಕ್ಷಿಯಾಗಿ ಬಸವಪ್ರಿಯ ಕೂಡಲ ಸಂಗಮದೇವಾ, ಬಸವಣ್ಣನವರಿಂದ ನಿರವಯಲ ಲಿಂಗವ ಕಂಡೆನು."

ಈ ವಚನದಲ್ಲಿ ಒಡಮೂಡಿರುವ ನೀಲಾಂಬಿಕೆಯ ಪತಿಭಕ್ತಿಗೆ ತಲೆದೂಗಬೇಕೊ, ಅನ್ಯ ಶರಣೆಯರ ಬಗ್ಗೆ ಆಕೆಗಿರುವ ಅಕೃತಕ ಆದರಕ್ಕಾಗಿ ಅಭಿಮಾನಪಡಬೇಕೊ, ಇಲ್ಲವೆ ಅವರ ಅನುಭಾವದ ಎತ್ತರಕ್ಕೆ ಕೈಮುಗಿಯಬೇಕೋ ತಿಳಿಯದು. ಆ ಮಹಾಮಾತೆಗೆ ಎತ್ತೆತ್ತ ನೋಡಿದಡೆ ಅತ್ತತ್ತ ಬಸವಣ್ಣನೇ ಕಣ್ಣಿಗೆ ಕಾಣುತ್ತಿರಬೇಕು. ಇಲ್ಲದಿದ್ದರೆ–

"ಬಸವಣ್ಣನೆಂಬ ಆಚಾರಲಿಂಗವ ಪಿಡಿದು ಅನುಮಿಷ ಬಸವಣ್ಣನಂತಾದ;
ಬಸವಣ್ಣನೆಂಬ ಗುರುವ ಪಿಡಿದು ಮಡಿವಾಳಯ್ಯ ಬಸವಣ್ಣನಂತಾದ;
ಬಸವಣ್ಣನೆಂಬ ಲಿಂಗವ ಪಿಡಿದು ಚೆನ್ನಬಸವಯ್ಯ ಬಸವಣ್ಣನಂತಾದ;
ಬಸವಣ್ಣನೆಂಬ ಜಂಗಮವ ಪಿಡಿದು ಸಿದ್ಧರಾಮಯ್ಯ ಬಸವಣ್ಣನಂತಾದ;
ಪ್ರಭುದೇವ ಬಸವಣ್ಣನೆಂಬ ಗುಹೇಶ್ವರ ಲಿಂಗವ ಪಿಡಿದು ಜ್ಯೋತಿರ್ಮಯನಾದ;
ಅಸಂಖ್ಯಾತ ಮಹಾಗಣಂಗಳೆಲ್ಲರು ಬಸವಣ್ಣನೆಂಬ ನಿರವಯ ಲಿಂಗವ ಪಿಡಿದು
ಶರಣಸತಿ ಲಿಂಗಪತಿಯಾದರು. ಗುಹೇಶ್ವರಲಿಂಗದಲ್ಲಿ
ಪ್ರಭುದೇವರ ಸಾಕ್ಷಿಯಾಗಿ ಬಸವಪ್ರಿಯ ಕೂಡಲ ಸಂಗಮದೇವಾ,
ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು!"

ಎಂಬ ಉದ್ಗಾರ ಅವರಿಂದ ಹೊರಡುತ್ತಿರಲಿಲ್ಲ.

ಆ ಮಾತಾಯಿಯ ಅವಸಾನವೂ ಆಕೆಯ ಜೀವನದಷ್ಟೇ ಅನುಪಮವಾಗಿದೆ. 'ಶರಣರ ಮಹಿಮೆಯನ್ನು ಮರಣದಲ್ಲಿ ನೋಡು' ಎನ್ನುವುದು ಸುಳ್ಳಲ್ಲ. ಬಸವಣ್ಣನವರು ಕಲ್ಯಾಣ ಬಿಟ್ಟು ಕೂಡಲಸಂಗಮಕ್ಕೆ ಹೊರಟು ಮಹಾಸತಿ ನೀಲಾಂಬಿಕೆಯನ್ನು ಕರೆದುತರಲು

ಆತ್ಮೀಯರಾದ ಅಪ್ಪಣ್ಣನನ್ನು ಕಳಿಸುತ್ತಾರೆ. ಪತಿಯ ಆಜ್ಞೆಯಂತೆ ಕಲ್ಯಾಣವನ್ನು ತೊರೆದು ಕಪ್ಪಡಿ ಸಂಗಮಕ್ಕೆಂದು ಹೊರಟಿದ್ದ ಆಕೆ ತಂಗಡಿಯನ್ನು ತಲುಪುವಷ್ಟರಲ್ಲಿ ಬಸವಣ್ಣನವರು ಸಂಗಮನಾಥನನ್ನು ಬೆರೆದು ಬಿಟ್ಟರೆಂಬ ಸುದ್ದಿ ತಿಳಿಯುತ್ತದೆ. ನೀಲಾಂಬಿಕೆ ಅಧೀರಳಾಗದೆ ಅಲ್ಲಿಯೇ ಇಷ್ಟ. ಲಿಂಗಪೂಜೆಗೆ ಕುಳಿತು ಇಷ್ಟಲಿಂಗದಲ್ಲಿಯೇ ಅಡಗುತ್ತಾಳೆ. ಭಕ್ತರು ಅಲ್ಲಿಯೇ ಆಕೆಯ ಮತ್ತು ಆಕೆಯ ಅಂಗರಕ್ಷಕನಾಗಿ ಹಿಂಬಾಲಿಸಿದ್ದ ಹಡಪದ ಅಪ್ಪಣ್ಣನ ಮಂದಿರಗಳನ್ನು ಕಟ್ಟಿದ್ದಾರೆ. ಇಂದಿಗೂ ಹಳ್ಳಿಯ ಹೆಂಗಸರು ಹೃದಯ ಕರಗುವಂತೆ ಈ ಹಾಡನ್ನು ಹಾಡಿ ಕಂಬನಿಗರೆಯುತ್ತಾರೆ:

ನೋಡು ನೋಡು ನೋಡು ನೋಡು ನೋಡು ಲಿಂಗವೆ
ನೋಡು ಬಸವಯ್ಯನವರು ಮಾಡಿದಾಟವ! ॥ಪ॥
ಹರಳಯ್ಯ ಮಧುವಯ್ಯನವರಿಗೆ ಎಳಹೂಟಿ
ದುರುಳ ಬಿಜ್ಜಳನು ಕಟ್ಟಿದನೆಂದರೆ।
ಇರಬಾರದಿಲ್ಲೀಗ ಶರಣರಿಗರುಹಿರೆ
ದರಸು ಬಸವರಾಜ ಪೇಳ್ದನಂತೆ ॥
ನುಡಿಯಲಾಲಿಸು ಬೇಗ ಕೆಡುವುದೀ ಕಲ್ಯಾಣ
ಒಡೆಯ ಸಂಗಮನೊಳು ಬೆರೆದನಂತೆ!
ತಡಮಾಡಬೇಡಿರಿ ಮಡದಿಯರಿಗರುಹಿರೆಂದು
ಒಡೆಯ ಬಸವರಾಜ ನುಡಿದನಂತೆ॥
ಅಲ್ಲಿಗೆ ಎಮ್ಮನ್ನು ಬರಲು ಹೇಳಿದರಂತೆ
ಅಲ್ಲಿರ್ಪ ಸಂಗಯ್ಯನಿಲ್ಲಿಲ್ಲವೆ?
ಅಲ್ಲಿ ಇಲ್ಲಿ ಎಂಬ ಉಭಯ ಸಂದೇಗವೇಕೆ
ಬಲ್ಲ ಮಹಾತ್ಮರಿಗಿದು ತರವೆ?
ಅಪ್ಪ ಅಣ್ಣಯ್ಯಗಳು ಕರೆಯಲು ಬಂದಿಹರು
ಕಪ್ಪಡಿ ಸಂಗಮನಾಥ ಕೇಳೋ!
ಪುಷ್ಪಕ್ಕೆ ಪರಿಮಳ ಬೆರೆದಂತೆ ಎನ್ನ
ನಪ್ಪಿದ ಲಿಂಗವೆ ಮಾತನಾಡೋ!
ಸಂಗನ ಬಸವನ ನಿರೂಪವ ತಾಳುತೆ
ಹಿಂಗದೆ ಕರವೆತ್ತಿ ನಮಿಸುತಲಿ
ಸಂಗನ ಬಸವಯ್ಯನಾತನೆ ಈತನೆ
ನ್ನಂಗಯ್ಯ ಲಿಂಗವೆ ಮಾತನಾಡೋ!

ಹಳ್ಳಿಗರಷ್ಟೇ ಅಲ್ಲ, ಬಲ್ಲಿದರಲ್ಲಿ ಬಲ್ಲಿದರೂ ಆಕೆಯ ನಿಜಭಕ್ತಿಯ ನಿಲವನ್ನು ಭಕ್ತಿನಿರ್ಭರರಾಗಿ ಬಣ್ಣಿಸಿದ್ದಾರೆ. ಉಭಯ ಕವಿತಾ ವಿಶಾರದ ಷಡಕ್ಷರದೇವ,

"ನಿಜೇಷ್ಟಲಿಂಗ ಸಾಂಗಪೂಜನೋತ್ಸವೇ ಸಮುತ್ಸುಕಾಂ
ಗುರೂಕ್ತ ಶೀಲ ಪಾಲನಾ ಪಟೀಯಸೀಂ ಮಹೀಯಸೀಂ
ಕಲಾತರಂಗಿಣೀಂ ಸಮಸ್ತ ಸದ್ಗುಣಾವಭಾಸಿನೀಂ
ವೃಷಾಧಿರಾಜ ವಲ್ಲಭಾಂ ನಮಾಮಿ ನೀಲಲೋಚನಾಂ"

ಎಂದು ತನ್ನ 'ನೀಲಾಂಬಿಕಾ ಸ್ತೋತ್ರ'ದಲ್ಲಿ ತನ್ನ ಭಕ್ತಿಯ ಮುಡಿಪನ್ನು ಸಲ್ಲಿಸಿದ್ದಾನೆ. ಬೀಸುವ ಹೆಣ್ಣುಮಕ್ಕಳು ಬೀಸುವುದನ್ನು ಮುಗಿಸುವಾಗ

"ಅದಾವ ಮುಕ್ಕಿಗೆ ನಾನ್ಯಾರ ಹಾಡಲಿ
ರಾಜ್ಯಾವ ಸಲುವಾ ಬಸವಣ್ಣನ್ಹೇಳುತಿ
ನೀಲವ್ವ ನಿನ ಹಾಡಿ ನಿಲಿಸೇನಃ"

ಎಂದು ಹಾಡಿ ಕಲ್ಲು ನಿಲ್ಲಿಸುತ್ತಾರೆ. ಅವರು ಇತ್ತಿರುವ ತೀರ್ಪು ಇದು:

"ಬಸವಣ್ಣನಂತಹ ಭಕ್ತಿವಂತರಿಲ್ಲ
ನೀಲಮ್ಮನಂತಹ ಶರಣೆಯರಿಲ್ಲ
ಹೇಮರೆಡ್ಡಿ ಮಲ್ಲಮ್ಮನಂಥ ಸೂಸೆಯರಿಲ್ಲ"

ನೀಲಾಂಬೆ ಲಿಂಗಪ್ರಾಣಿಯಾದರೆ ಗಂಗಾಂಬೆ ಗುರುಪ್ರಾಣಿ. ಜಂಗಮ ಪ್ರಾಣಿ ಬಸವಣ್ಣನಿಗೆ ಗುರುಪ್ರಾಣಿ ಗಂಗಾಂಬೆ, ಲಿಂಗಪ್ರಾಣಿ ಲಿಂಗಾಂಬೆಯರು ಸತಿಯರಾದುದು ಗಮನಾರ್ಹ ವಾದುದಾಗಿದೆ. ಗುರುಲಿಂಗ ಜಂಗಮದ ತ್ರಿಕೂಟದಲ್ಲಿ ತಲೆದೋರಿದ್ದಿತು. ಗಂಗಾಂಬಿಕೆ ಕಪ್ಪಡಿ ಸಂಗಮಕ್ಕೆ ಹೋಗಲಿಲ್ಲ. ತನ್ನ ಗುರು ರುದ್ರಮುನಿಯ ಆದೇಶದಂತೆ ಉಳಿವೆಯತ್ತ ಹೊರಟಿದ್ದ ಶರಣ ಸಮೂಹದೊಡನೆ ಹೊರಟು ಅವರು ಎದುರಿಸಿದ ದುರ್ಧರ ಪ್ರಸಂಗಗಳನ್ನೆಲ್ಲ ಎದುರಿಸಿದಳು. ತಾನೂ ಶಸ್ತ್ರತಾಳಿ ಕಲಿತನದಿಂದ ಕಾದಿದಳು. ಕಾದರವಳ್ಳಿಯಲ್ಲಿ ಕೊನೆಯ ಕಾಳಗವಾದ ಮೇಲೆ ಅಲ್ಲಿಗೆ ಮೂರು ನಾಲ್ಕು ಮೈಲಿಗಳಲ್ಲಿರುವ ಮುಗಟಖಾನ ಹುಬ್ಬಳ್ಳಿಯಲ್ಲಿ ಸಮಾಧಿಸ್ಥಳಾದಳೆಂದು ಹೇಳುತ್ತಾರೆ. 'ಗಂಗಾಪ್ರಿಯ ಕೂಡಲ ಸಂಗಮದೇವಾ' ಎಂಬ ಅಂಕಿತವುಳ್ಳ ಆಕೆಯ ವಚನಗಳು ಎಲ್ಲ ಸಿಕ್ಕಿಲ್ಲ. ಸಿಕ್ಕ ಒಂದೆರಡು ವಚನಗಳಲ್ಲಿ ಆಕೆಯ ಅಂತರಂಗದ ಅವಿರಳ ಪ್ರಕಾಶ ಪಡಿಮೂಡಿದೆ. "ಸಾಂದ್ರವಾಗಿ ಹರಗಣ ಭಕ್ತಿಯ ಮಾಳ್ಪನೆಂತವ್ವ ಮಾದಲಾಂಬಿಕಾ ನಂದನನು! ಸಾಂದ್ರವಾಗಿ ಬಿಜ್ಜಳನರಮನೆಯ ನ್ಯಾಯವ ಮಾಳ್ಪನೆಂತವ್ವ ಮಾದರಸದ ಮೋಹದ ಮಗನು! ಲಿಂಗಾರ್ಚನೆ ಲಿಂಗತೃಪ್ತಿ ಅನುಗೈವನೆಂತವ್ವ ಗಂಗಾಪ್ರಿಯ ಕೂಡಲ ಸಂಗನ ಶರಣ!"

ದೊರೆತ ಇನ್ನೊಂದು ವಚನದಲ್ಲಿ ಬಿಜ್ಜಳನ ಕೊಲೆಗೆ ಬಸವಣ್ಣ ಕಾರಣನಲ್ಲ, ಮಡಿವಾಳ ಮಾಚಯ್ಯ ಮೊದಲಾದ ಗಣಾಚಾರದ ಗಣಂಗಳು- ಎಂಬುದು ಧ್ವನಿತವಾಗುತ್ತದೆ: "ಮಡಿವಾಳಣ್ಣಂಗ್ಯಾಕೆ ಬಾರದವ್ವ ಕರುಣರಸ? ಮಡಿವಾಳಣ್ಣಂಗ್ಯಾಕೆ ಬಾರದವ್ವ ಸೈರಣೆಯರಸ? ಮಡಿವಾಳಣ್ಣಂಗ್ಯಾಕೆ ಬಾರದವ್ವಾ ಗಂಗಾಪ್ರಿಯ ಕೂಡಲಸಂಗನ ಶರಣನ ಪ್ರಾಣದಾನರಸ?"

ಅಕ್ಕ ನಾಗಮ್ಮ ಇವರಿಬ್ಬರಿಗೂ ವಯಸ್ಸಿನಲ್ಲಿ ಅಷ್ಟೇ ಅಲ್ಲ- ಅನುಭವ, ಸಾಧನೆ ಸಿದ್ಧಿಗಳೆಲ್ಲದರಲ್ಲಿಯೂ ಹಿರಿಯಳು. ಬಸವಣ್ಣನನ್ನು ನೆರಳಿನಂತೆ ಹಿಂಬಾಲಿಸಿ, ತಾಯಿಯಂತೆ ಆತನನ್ನು ಪಾಲಿಸಿ ಪೋಷಿಸಿ, ಅಕ್ಕನಾಗಿ ಅಕ್ಕರತೆಯ ಸಕ್ಕರೆಯನ್ನು ಉಣಿಸಿ ತಣಿಸಿ, ಮುಂದೆ ಆತನನ್ನೇ ಗುರುವೆಂದು ಅಂಗೀಕರಿಸಿ ಆಧ್ಯಾತ್ಮದ ಅಮೃತ ಸರಸಿಯಲ್ಲಿ ಆತ್ಮ ಹಂಸನಾಗಿ ಆನಂದದಿಂದ ಓಲಾಡಿ, ತೇಲಾಡಿ, ಕೊನೆಗೆ ಬಸವನ ಬಳಗವನ್ನು ರಕ್ಷಿಸಲು ಖಡ್ಗಧಾರಿಯಾಗಿ ಕಲಿಗಿಂತ ಕಲಿಯಾಗಿ ಕಾದಿದ ವೀರಮಾತೆಯಾಕೆ. ಸಿಂಗರಾಜಪುರಾಣದ ಪ್ರಕಾರ ಶಿವಸ್ವಾಮಿಯ ಸತಿಯಾಗಿ, ಬಸವಣ್ಣನೊಡನೆ ಕಪ್ಪಡಿಸಂಗಮಕ್ಕೆ ಹೋಗುವ ಹೊತ್ತಿಗೆ ಬಹುಶಃ ಚೆನ್ನಬಸವನ ತಾಯಿಯಾಗಿದ್ದು, ಅಲ್ಲಿ ತಾನೂ ಗುರುಕುಲ ವಾಸದ ಉದಾತ್ತ. ಜೀವನವನ್ನು ಸಾಗಿಸಿ, ಇಂಗುಳೇಶ್ವರದ ಗುಹೆಯಲ್ಲಿ ಯೋಗ ಸಾಧನೆಯನ್ನು ಪೂರೈಸಿ, ಕಲ್ಯಾಣಕ್ಕೆ ಬಸವಣ್ಣನೊಡನೆ ಪರವನೊಳಗೊಂಡ ಪರಿಣಾಮಿಯಾಗಿ ಹೋಗಿ, ಅಲ್ಲಿ ಆತನ ಎಲ್ಲ ಕಾರ್ಯಗಳಿಗೆ

ಆಧಾರಸ್ತಂಭಳಾಗಿ ಬಾಳಿ ಬೆಳಗಿದಳಾಕೆ. ಅಲ್ಲಿಯೂ ಆಕೆಯ ಅವಿರತ ಯೋಗಸಾಧನೆ ಮುಂದುವರೆಯಿತು. ಇಂದಿಗೂ ಅಂದಗೆಡದೆ ಕಲ್ಯಾಣದಲ್ಲಿ ಕಂಗೊಳಿಸುತ್ತಲಿರುವ ಅಕ್ಕ ನಾಗಮನ ಗವಿ ಆಕೆಯ ಯೋಗಸಾಧನೆಯ ಅಮರ ಪ್ರತೀಕವಾಗಿದೆ. ಅದೊಂದು ರುದ್ರ ಮನೋಹರವಾದ ಗುಹೆ. ಈಗಲ್ಲಿ ಆಕೆಯ ಸುಂದರಮೂರ್ತಿಯೂ ಸ್ಥಾಪಿತವಾಗಿದೆ. ಕಲ್ಯಾಣದ ಇನ್ನುಳಿದ ಅನೇಕ ಕುರುಹುಗಳು ಕಾಣದಾಗಿದ್ದರೂ ಅಕ್ಕ ನಾಗಮ್ಮನ ಗವಿ ಅಚ್ಚಳಿಯದೆ ಉಳಿದಿರುವುದು ಅಚ್ಚರಿಯಲ್ಲವೆ?

ಆಕೆಯ ಬಸವಣ್ಣನ ಮೇಲಿನ ಪ್ರೀತಿ ಅಸದೃಶವಾದುದು. ತಾಯಿಯನ್ನಗಲಿ ಬಂದಿದ್ದ ಬಸವಣ್ಣನಿಗೆ ಆಕೆಯೇ ತಾಯಿಯಾದಳು.

"ಬಸವನೇ ಮುಖಸೆಜ್ಜೆ, ಬಸವನೇ ಅಮಳೋಕ್ಯ.
ಬಸವನ ನಾನೆತ್ತಿ ಮುದ್ದಾಡಿಸಿದೆನು!
ಬಸವ, ಸಂಗನಬಸವದೇವಾ ಜಯತು!
ಬಸವ, ಸಂಗನಬಸವಲಿಂಗಾ ಜಯತು?
ಬಸವಗೂ ಎನಗೂ ಭಾವಬೇಧವಿಲ್ಲ!
ಬಸವ ಪ್ರಿಯ ಚೆನ್ನಸಂಗಯ್ಯನಲ್ಲಿ
ಬಸವನ ಬೆಸಲಾದ ಬಾಣತಿ ನಾನಯ್ಯ –ಬಸವಾ, ಬಸವಾ, ಬಸವಾ!"

ಹೀಗೆ ತಾಯಿಯಾಗಿ ತಮ್ಮನನ್ನು ಮುದ್ದಾಡಿ ಬೆಳೆಸಿದ ಅಕ್ಕನೇ ಮುಂದೆ–

"ಎನ್ನ ಕುಲಸೂತಕವ ಕಳೆದಾತ ಬಸವಣ್ಣ;
ಎನ್ನ ಛಲಸೂತಕವ ಕಳೆದಾತ ಬಸವಣ್ಣ;
ಎನ್ನ ತನುಸೂತಕವ ಕಳೆದಾತ ಬಸವಣ್ಣ;
ಎನ್ನ ಮನಸೂತಕವ ಕಳೆದಾತ ಬಸವಣ್ಣ;
ಎನ್ನ ನೆನಹುಸೂತಕವ ಕಳೆದಾತ ಬಸವಣ್ಣ;
ಎನ್ನ ಭಾವಸೂತಕವ ಕಳೆದಾತ ಬಸವಣ್ಣ;
ಎನ್ನ ಕುರುಹು ಮರಹಿನ ಸಂದು ಸಂಶಯವ ಬಿಡಿಸಿದಾತ ಬಸವಣ್ಣ;
ಎನ್ನ ತನ್ನೊಳಗೆ ಇಂಬಿಟ್ಟುಕೊಂಡಾತ ಬಸವಣ್ಣ
ಬಸವಣ್ಣ ಪ್ರಿಯ ಚೆನ್ನಸಂಗನ ಹೃದಯದಲ್ಲಿ
ನಿಜನಿವಾಸಿಯಾಗಿ ಇರಿಸಿದ ಎನ್ನ ತಂದೆ ಸಂಗನ ಬಸವಣ್ಣ"

ಎಂದು ಬಸವಣ್ಣನನ್ನೇ ಗುರುವನ್ನಾಗಿ, ತಂದೆಯನ್ನಾಗಿ ಭಾವಿಸಿದಳು. ಜ್ಯೋತಿಯಾಗಿ ಬೆಳಗಿದಳು, ತಾರೆಯಾಗಿ ತೊಳಗಿದಳು, ಪರಾಶಕ್ತಿಯಾಗಿ ಪ್ರಕಾಶಿಸಿದಳು. ಕೂಡಲ ಸಂಗಮದೇವಾ, ಬಸವಣ್ಣನವರಿಂದ ನಿರವಯಲ ಲಿಂಗವ ಕಂಡೆನು.

ಈ ವಚನದಲ್ಲಿ ಒಡಮೂಡಿರುವ ನೀಲಾಂಬಿಕೆಯ ಪತಿಭಕ್ತಿಗೆ ತಲೆದೂಗಬೇಕೊ, ಅನ್ಯ ಶರಣೆಯರ ಬಗ್ಗೆ ಆಕೆಗಿರುವ ಅಕೃತಕ ಆದರಕ್ಕಾಗಿ ಅಭಿಮಾನಪಡಬೇಕೊ, ಇಲ್ಲವೆ ಅವರ ಅನುಭಾವದ ಎತ್ತರಕ್ಕೆ ಕೈಮುಗಿಯಬೇಕೋ ತಿಳಿಯದು. ಆ ಮಹಾಮಾತೆಗೆ ಎತ್ತೆತ್ತ ನೋಡಿದಡೆ ಅತ್ತತ್ತ ಬಸವಣ್ಣನೇ ಕಣ್ಣಿಗೆ ಕಾಣುತ್ತಿರಬೇಕು. ಇಲ್ಲದಿದ್ದರೆ–

"ಬಸವಣ್ಣನೆಂಬ ಆಚಾರಲಿಂಗವ ಪಿಡಿದು ಅನುಮಿಷ ಬಸವಣ್ಣನಂತಾದ;
ಬಸವಣ್ಣನೆಂಬ ಗುರುವ ಪಿಡಿದು ಮಡಿವಾಳಯ್ಯ ಬಸವಣ್ಣನಂತಾದ;
ಬಸವಣ್ಣನೆಂಬ ಲಿಂಗವ ಪಿಡಿದು ಚೆನ್ನಬಸವಯ್ಯ ಬಸವಣ್ಣನಂತಾದ;

ಬಸವಣ್ಣನೆಂಬ ಜಂಗಮವ ಪಿಡಿದು ಸಿದ್ಧರಾಮಯ್ಯ ಬಸವಣ್ಣನಂತಾದ?
ಪ್ರಭುದೇವ ಬಸವಣ್ಣನೆಂಬ ಗುಹೇಶ್ವರ ಲಿಂಗವ ಪಿಡಿದು ಜ್ಯೋತಿರ್ಮಯನಾದ;
ಅಸಂಖ್ಯಾತ ಮಹಾಗಣಂಗಳೆಲ್ಲರು ಬಸವಣ್ಣನೆಂಬ ನಿರವಯ ಲಿಂಗವ ಪಿಡಿದು
ಶರಣಸತಿ ಲಿಂಗಪತಿಯಾದರು. ಗುಹೇಶ್ವರಲಿಂಗದಲ್ಲಿ ಪ್ರಭುದೇವರ ಸಾಕ್ಷಿಯಾಗಿ ಬಸವಪ್ರಿಯ
ಕೂಡಲ ಸಂಗಮದೇವಾ,
ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು!"

ಎಂದು ಉದ್ಗಾರ ಅವರಿಂದ ಹೊರಡುತ್ತಿರಲಿಲ್ಲ.

ಆ ಮಾತಾಯಿಯ ಅವಸಾನವೂ ಆಕೆಯ ಜೀವನದಷ್ಟೇ ಅನುಪಮವಾಗಿದೆ. 'ಶರಣರ ಮಹಿಮೆಯನ್ನು ಮರಣದಲ್ಲಿ ನೋಡು' ಎನ್ನುವುದು ಸುಳ್ಳಲ್ಲ. ಬಸವಣ್ಣನವರು ಕಲ್ಯಾಣ ಬಿಟ್ಟು ಕೂಡಲಸಂಗಮಕ್ಕೆ ಹೊರಟು ಮಹಾಸತಿ ನೀಲಾಂಬಿಕೆಯನ್ನು ಕರೆದುತರಲು ಆತ್ಮೀಯರಾದ ಅಪ್ಪಣ್ಣನನ್ನು ಕಳಿಸುತ್ತಾರೆ. ಪತಿಯ ಆಜ್ಞೆಯಂತೆ ಕಲ್ಯಾಣವನ್ನು ತೊರೆದು ಕಪ್ಪಡಿ ಸಂಗಮಕ್ಕೆಂದು ಹೊರಟ್ಟಿದ್ದ ಆಕೆ ತಂಗಡಿಯನ್ನು ತಲುಪುವಷ್ಟರಲ್ಲಿ ಬಸವಣ್ಣನವರು ಸಂಗಮನಾಥನನ್ನು ಬೆರೆದು ಬಿಟ್ಟರೆಂಬ ಸುದ್ದಿ ತಿಳಿಯುತ್ತದೆ. ನೀಲಾಂಬಿಕೆ ಅಧೀರಳಾಗದೆ ಅಲ್ಲಿಯೇ ಇಷ್ಟ ಲಿಂಗಪೂಜೆಗೆ ಕುಳಿತು ಇಷ್ಟಲಿಂಗದಲ್ಲಿಯೇ ಅಡಗುತ್ತಾಳೆ. ಭಕ್ತರು ಅಲ್ಲಿಯೇ ಆಕೆಯ ಮತ್ತು ಆಕೆಯ ಅಂಗರಕ್ಷಕನಾಗಿ ಹಿಂಬಾಲಿಸಿದ್ದ ಹಡಪದ ಅಪ್ಪಣ್ಣನ ಮಂದಿರಗಳನ್ನು ಕಟ್ಟಿದ್ದಾರೆ. ಇಂದಿಗೂ ಹಳ್ಳಿಯ ಹೆಂಗಸರು ಹೃದಯ ಕರಗುವಂತೆ ಈ ಹಾಡನ್ನು ಹಾಡಿ ಕಂಬನಿಗರೆಯುತ್ತಾರೆ:

ನೋಡು ನೋಡು ನೋಡು ನೋಡು ನೋಡು ಲಿಂಗವೆ
ನೋಡು ಬಸವಯ್ಯನವರು ಮಾಡಿದಾಟವ! ॥ಪ॥
ಹರಳಯ್ಯ ಮಧುವಯ್ಯನವರಿಗೆ ಎಳಹೂಟೆ
ದುರುಳ ಬಿಜ್ಜಳನು ಕಟ್ಟಿದನೆಂದರೆ।
ಇರಬಾರದಿಲ್ಲೀಗ ಶರಣರಿಗರುಹಿರೆ
ದರಸು ಬಸವರಾಜ ಪೇಳ್ದನಂತೆ॥
ನುಡಿಯಲಾಲಿಸು ಬೇಗ ಕೆಡುವುದೀ ಕಲ್ಯಾಣ
ಒಡೆಯ ಸಂಗಮನೊಳು ಬೆರೆದನಂತೆ!
ತಡಮಾಡಬೇಡಿರಿ ಮಡದಿಯರಿಗರುಹಿರೆಂದು
ಒಡೆಯ ಬಸವರಾಜ ನುಡಿದನಂತೆ॥
ಅಲ್ಲಿಗೆ ಎಮ್ಮನ್ನು ಬರಲು ಹೇಳಿದರಂತೆ
ಅಲ್ಲಿರ್ಪ ಸಂಗಯ್ಯನಿಲ್ಲಿಲ್ಲವೆ?
ಅಲ್ಲಿ ಇಲ್ಲಿ ಎಂಬ ಉಭಯ ಸಂದೆಗವೇಕೆ
ಬಲ್ಲ ಮಹಾತ್ಮರಿಗಿದು ತರವೆ?
ಅಪ್ಪ ಅಣ್ಣಯ್ಯಗಳು ಕರೆಯಲು ಬಂದಿಹರು
ಕಪ್ಪಡಿ ಸಂಗಮನಾಥ ಕೇಳೋ!
ಪುಷ್ಪಕ್ಕೆ ಪರಿಮಳ ಬೆರೆದಂತೆ ಎನ್ನ
ನಪ್ಪಿದ ಲಿಂಗವೆ ಮಾತನಾಡೋ!
ಸಂಗನ ಬಸವನ ನಿರೂಪವ ತಾಳುತೆ

ಹಿಂಗದೆ ಕರವೆತ್ತಿ ನಮಿಸುತಲಿ
ಸಂಗನ ಬಸವಯ್ಯನಾತನೆ ಈತನೆ–
ನ್ನಂಗಯ್ಯ ಲಿಂಗವೆ ಮಾತನಾಡೋ!

ಹಳ್ಳಿಗರಷ್ಟೇ ಅಲ್ಲ, ಬಲ್ಲಿದರಲ್ಲಿ ಬಲ್ಲಿದರೂ ಆಕೆಯ ನಿಜಭಕ್ತಿಯ ನಿಲವನ್ನು ಭಕ್ತಿನಿರ್ಭರರಾಗಿ ಬಣ್ಣಿಸಿದ್ದಾರೆ. ಉಭಯ ಕವಿತಾ ವಿಶಾರದ ಷಡಕ್ಷರದೇವ,

"ನಿಜೇಷ್ಟಲಿಂಗ ಸಾಂಗಪೂಜನೋತ್ಸವೇ ಸಮುತ್ಸುಕಾಂ
ಗುರೂಕ್ತ ಶೀಲ ಪಾಲನಾ ಪಟೀಯಸೀಂ ಮಹೀಯಸೀಂ
ಕಲಾತರಂಗಿಣೀಂ ಸಮಸ್ತ ಸದ್ಗುಣಾವಭಾಸಿನೀಂ
ವೃಷಾಧಿರಾಜ ವಲ್ಲಭಾಂ ನಮಾಮಿ ನೀಲಲೋಚನಾಂ"

ಎಂದು ತನ್ನ 'ನೀಲಾಂಬಿಕಾ ಸ್ತೋತ್ರ'ದಲ್ಲಿ ತನ್ನ ಭಕ್ತಿಯ ಮುಡಿಪನ್ನು ಸಲ್ಲಿಸಿದ್ದಾನೆ. ಬೀಸುವ ಹೆಣ್ಣುಮಕ್ಕಳು ಬೀಸುವುದನ್ನು ಮುಗಿಸುವಾಗ

"ಆದಾವ ಮುಕ್ಕಿಗೆ ನಾನ್ಯಾರ ಹಾಡಲಿ
ರಾಜ್ಯಾವ ಸಲುವಾ ಬಸವಣ್ಣನ್ಹೇಣುತಿ
ನೀಲವ್ವ ನಿನ ಹಾಡಿ ನಿಲಿಸೇನs"

ಎಂದು ಹಾಡಿ ಕಲ್ಲು ನಿಲ್ಲಿಸುತ್ತಾರೆ. ಅವರು ಇತ್ತಿರುವ ತೀರ್ಪು ಇದು:

"ಬಸವಣ್ಣನಂತಹ ಭಕ್ತಿವಂತರಿಲ್ಲ
ನೀಲಮ್ಮನಂತಹ ಶರಣೆಯರಿಲ್ಲ
ಹೇಮರೆಡ್ಡಿ ಮಲ್ಲಮ್ಮನಂಥ ಸೊಸೆಯರಿಲ್ಲ"

ಈ ನಾಲ್ವರ ಬಸವಣ್ಣ, ಅಕ್ಕನಾಗಮ್ಮ, ಗಂಗಾಂಬೆ, ನೀಲಾಂಬೆಯರ ಪುಣ್ಯಪ್ರಭಾವದ ಪ್ರಭಾವಳಿಯಲ್ಲಿ ಬೆಳೆದಾತ ಚೆನ್ನಬಸವಣ್ಣ. ಅವನೆಂಥ ಸುಕೃತಶಾಲಿ! ಆತನು ಕತ್ತೆತ್ತಿ ನೋಡಿದರೆ ಎತ್ತಲೂ, ಸುತ್ತಲೂ ಲಿಂಗ ಪೂಜೆಯನ್ನೇ, ಜಂಗಮಾರಾಧನೆಯನ್ನೇ ಕಾಣುತ್ತಿರಬೇಕು; ಆತನು ಕಿವಿಗೊಟ್ಟು ಕೇಳಿದರೆ ಶಿವಾನುಭವ ಗೋಷ್ಠಿಯನ್ನೇ ಕೇಳುತ್ತಿರಬೇಕು; ಆತನು ನಾಸಿಕದಿಂದ ವಾಸಿಸುತ್ತಿರಬೇಕು; ಆತನು ಸ್ಪರ್ಶಿಸಿದರೆ ಗುರುಗಳ, ಶರಣರು ಬಸವಣ್ಣ ಅಕ್ಕನಾಗಮ್ಮಾದಿಗಳ ಶ್ರೀಪಾದ ಶುಭಹಸ್ತಗಳನ್ನೇ ಸ್ಪರ್ಶಿಸುತ್ತಿರಬೇಕು; ಆತನು ಸೇವಿಸಿದರೆ ಶಿವಪ್ರಸಾದವನ್ನೇ ಸೇವಿಸುತ್ತಿರಬೇಕು!

ಇಂಥ ಆವರಣದಲ್ಲಿ ಬೆಳೆದ ಚೆನ್ನಬಸವಣ್ಣ ಚಿಕ್ಕಂದಿನಲ್ಲಿಯೇ ಚಿನ್ಮಯ ಮೂರ್ತಿಯಾಗಿದ್ದರೆ ಆಶ್ಚರ್ಯವೇನು? ಅವನು ಅರಿವಿನ ಗರುವನಾದುದು ಅಚ್ಚರಿಯಲ್ಲ– ತಿಳಿವಿನ ತುತ್ತತುದಿಯನ್ನು ಮೆಟ್ಟಿ ನಿಂತುದು ಆಶ್ಚರ್ಯ. ಬಸವಣ್ಣನವರೇ ಬೆರಗಾಗಿ ನುಡಿದರು: 'ಇಂದು ಹುಟ್ಟಿದ ಕೂಸಿಗೆ ಇಂದೇ ಜವ್ವನವಾಯಿತ್ತಯ್ಯ!' ಎಂದು; 'ಬಿತ್ತದೆ ಬೆಳೆಯದೆ ಬೆಳೆದ ಹೆಬ್ಬೆಳಸಿನ ರಾಶಿಯ ನೋಡಾ! ಸುಗಂಧ ಬಂಧುರದಂತೆ ಹುಟ್ಟುತ್ತವೆ ಪರಿಮಳ!' ಎಂದು.

ಅಷ್ಟೇಕೆ, ಹಡೆದ ತಾಯಿ ಅಕ್ಕನಾಗಮ್ಮನೂ ಬೆಕ್ಕಸ ಬೆರಗಾಗಿ ನುಡಿದಳು:

"ಎನ್ನ ತನು ಚೆನ್ನಬಸವಣ್ಣನ ಬಯಲು ಬೆರಿಸಿತ್ತು;
ಎನ್ನ ಮನ ಸಂಗನ ಬಸವಣ್ಣನ ನಿಜಪದವ ಬೆರಿಸಿತ್ತು;
ಎನ್ನ ಪ್ರಾಣ ಅಲ್ಲಮ ಪ್ರಭುದೇವರ ಅರಿವ ಬೆರಿಸಿತ್ತು
ಇಂತೀ ಮೂವರೂ ಒಂದೊಂದ ಹಂಚಿಕೊಂಡ ಕಾರಣ

ಎನಗೇನೂ ಇಲ್ಲದೆ ಬಸವಣ್ಣ ಪ್ರಿಯ ಚೆನ್ನಸಂಗಯ್ಯನ
ಹೃದಯ ಕಮಲದಲ್ಲಿ ನಿಜನಿವಾಸಿಯಾಗಿರ್ದೆನು!"

ಇನ್ನೂ ಮುಂದೆ ಸಾಗಿ,

"ಎನ್ನ ಭವದ ಬಳ್ಳಿಯ ಬೇರು ಹರಿದಿತ್ತಯ್ಯ–
ಸಂಗನ ಬಸವಣ್ಣನ ಒಕ್ಕುದ ಕೊಂಡೆನಾಗಿ;
ಎನ್ನ ಮನದ ಕಪಟ ಹಿಂಗಿತ್ತಯ್ಯ–
ಚೆನ್ನಬಸವಣ್ಣನ ಕರುಣವ ಪಡೆದನಾಗಿ;
ಎನ್ನ ಅಂತರಂಗದ ಸಂದೇಗಸಂಶಯ ತೊಲಗಿತ್ತಿಂದು–
ಬಸವಣ್ಣ ಪ್ರಿಯ ಚೆನ್ನಸಂಗಯ್ಯನಲ್ಲಿ
ಎನ್ನ ಪರಮಗುರು ಅಲ್ಲಮಪ್ರಭುದೇವರ
ಶ್ರೀಚರಣವ ಕಂಡೆನಾಗಿ!"

ಎಂದು ಪ್ರಾಂಜಲಮನದಿಂದ ಮಗನ ಕರುಣದಿಂದ ಮನದ ಕಪಟ ಹಿಂಗಿದುದನ್ನು ಒಪ್ಪಿಕೊಂಡಿದ್ದಾಳೆ. ನುಡಿಯಲ್ಲಿ ನಿಷ್ಠುರ, ನಡೆಯಲ್ಲಿ ಕಠೋರನೆನಿಸಿದ ಮಡಿವಾಳ ಮಾಚಯ್ಯ ಸಹ ಚೆನ್ನಬಸವಣ್ಣನನ್ನು ಮುಕ್ತಕಂಠದಿಂದ ಕೊಂಡಾಡಿದ:

"ಪಾಯದ ಮಾಯದ ಸಂಭ್ರಮದೊಳಗೆ ಸಿಲುಕಿತ್ತು ನೋಡಾ ಭುವನವೆಲ್ಲ
ಮಾಯೆಗೆ ಹೊರಗಾದ ನಿರ್ಮಾಯನ ಕಂಡೆನು!
ತಾನೆಂಬ ನುಡಿಗೆ ನಾಚಿ, ನೀನೆಂಬ ನುಡಿಗೆ ಹೇಸಿ,
ತಾನೆತಾನಾದ ಘನಮಹಿಮನು!
ಕಾಯದಲ್ಲಿ ಕುರುಹಿಲ್ಲ, ಭಾವದಲ್ಲಿ ಭ್ರಮೆಯಿಲ್ಲ,
ಜ್ಞಾನತಾನೆಂಬ ಭೇದವಿಲ್ಲ;
ಸಾವಯನಲ್ಲ, ನಿರವಯನಲ್ಲ
ಕಲಿದೇವರದೇವಾ, ನಿಮ್ಮ ಶರಣ ಚೆನ್ನಬಸವಣ್ಣನು!"

ಸಿದ್ಧರಾಮಯ್ಯ ಸ್ತುತಿಸಿದ:

"ಅಧ್ಯಾತ್ಮ ಅಧ್ಯಾತ್ಮವೆಂದೆಂಬಿರಿ: ಅಧ್ಯಾತ್ಮವಾರಿಗೆ?
ಶ್ರೀ ಗುರುಸ್ವಾಮಿ ಬಹಳವಪ್ಪ ಶಿವಲಿಂಗವ ಸೂಕ್ಷ್ಮವ ಮಾಡಿ
ಕರಸ್ಥಳಕ್ಕೆ ಕೊಟ್ಟ ಬಳಿಕ ಬೇರೆ ಯೋಗ ಉಂಟೆ?
ತನ್ನ ಹಸ್ತವ ಮಸ್ತಕದಲ್ಲಿಟ್ಟು
ವಾಯುಪ್ರಾಣಿಯಾಗಿದ್ದುದಕೊಂದು ಲಿಂಗಪ್ರಾಣಿಯ ಮಾಡಿದ ಬಳಿಕ
ಮರಳಿಯೋಗವುಂಟೆ ಶಿವಯೋಗವಲ್ಲದೆ?
ಲಿಂಗಾರ್ಚನೆಯಮಾಡಿ ಜಂಗಮ ಪ್ರಸಾದವ ಕೊಂಡುಬಳಿಕ
ಮರಳಿ ಯೋಗಕ್ಕೆ ಒಡಂಬಡುವುದೆ ಅರಿವು?
ಇಂತಪ್ಪವನತಿಗಳಿದು ಶುದ್ಧಶಿವಯೋಗಿಯ ಮಾಡಿದಾತ ಚೆನ್ನಬಸವಣ್ಣ
ಅನು ಚೆನ್ನಬಸವಣ್ಣನ ಕರುಣದಿಂದ
ಅಭ್ಯಾಸಯೋಗವನತಿಗಳಿದು ಶಿವಯೋಗದಲ್ಲಿ ನಿತ್ಯನಾಗಿ
ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣೈಕ್ಯನೆಂಬ
ಷಡುಸ್ಥಲಕ್ಕಧಿಕಾರಿಯಾದೆ: ನಿನ್ನವರ ಸಲುಗೆಗೆ ಸಂದೆ!"

ಅಕ್ಕಮಹಾದೇವಿ ಅಳ್ತಿಯಿಂದ ಹಾಡಿದಳು:

"ಮಾಟಕೂಟವಿಲ್ಲ ಬಸವಣ್ಣಂಗೆ;
ನೋಟಕೂಟವೆಂಬುದಿಲ್ಲ ಪ್ರಭುದೇವರಿಗೆ;
ಭಾವಕೂಟವೆಂಬುದಿಲ್ಲ ಅಜಗಣ್ಣಂಗೆ;
ಸ್ನೇಹಕೂಟವೆಂಬುದಿಲ್ಲ ಬಾಚರಸರಿಗೆ;
ಇವರೆಲ್ಲರ ಕೂಟವೆಂಬುದಿಲ್ಲ ಚೆನ್ನಬಸವಣ್ಣಂಗೆ."
ಪೂರ್ಣಯೋಗಿ ಪ್ರಭುದೇವರು ಸಹ:
"ಕಿರಿಯರಾದಡೇನು? ಹಿರಿಯರಾದಡೇನು?
ಅರಿವಿಂಗೆ ಹಿರಿದು ಕಿರಿದುಂಟೆ?
ಆದಿಯನಾದಿ ಇಲ್ಲದಂದು,
ಅಜಾಂಡ ಬ್ರಹ್ಮಾಂಡ ಕಟಿಗಳುದಯವಾಗದಂದು
ಗುಹೇಶ್ವರಲಿಂಗದಲ್ಲಿ ನೀನೊಬ್ಬನೆ ಮಹಾಜ್ಞಾನಿ
ಎಂಬುದು ಕಾಣಬಂದಿತ್ತು ಕಾಣಾ, ಚೆನ್ನಬಸವಣ್ಣಾ"

ಎಂದೂ, 'ಸ್ವಯಂಭೂಜ್ಞಾನಿ ಗುಹೇಶ್ವರಲಿಂಗದಲ್ಲಿ ಚೆನ್ನಬಸವಣ್ಣನೊಬ್ಬನೇ' ಎಂದೂ, 'ಅವಿರಳಜ್ಞಾನಿ ಚೆನ್ನಬಸವಣ್ಣ', 'ಸರ್ವಸಂದೇಹವ ಕಳೆದಿಪ್ಪ ಚೆನ್ನಬಸವಣ್ಣ', 'ಸರ್ವ ಸಂಸಾರವಿರಹಿತ ಚೆನ್ನಬಸವಣ್ಣ', 'ಬಯಲ ಬಣ್ಣಕ್ಕೆ ತಂದು ನೆಳಲ ಶೃಂಗಾರವ ಮಾಡಿದ ಗುಹೇಶ್ವರನ ಶರಣ ಚೆನ್ನಬಸವಣ್ಣ', 'ಸುಷುಮ್ನ ಸೂಕ್ಷ್ಮನಿಧಿಯ ಮಧ್ಯದ ಕೂಪದ ಕಂಭದ ಮೇಲೆ ಪಂಚೇಂದ್ರಿಯಗುಹ್ಯವ ತೊಡೆದು ರಸವ ಕಟ್ಟಬಲ್ಲ ಗುಹೇಶ್ವರನ ಶರಣ ಚೆನ್ನಬಸವಣ್ಣ' 'ಲೋಕಲೋಕ ವನತಿಗಳೆದು ನಿಜದಲ್ಲಿ ನಿವಾಸಿಯಾಗಿಪ್ಪ ಗುಹೇಶ್ವರನ ಶರಣ ಚೆನ್ನಬಸವಣ್ಣ'ನೆಂದೂ ಕೀರ್ತಿಸಿ, "ಪ್ರಕೃತಿಗುಣವುಳ್ಳನ್ನಕ್ಕರ ಭಕ್ತನಲ್ಲ; ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರವುಳ್ಳನ್ನಕ್ಕರ ಶರಣನಲ್ಲ; ಹಸಿವು, ತೃಷೆ, ನಿದ್ರೆ, ವಿಷಯವುಳ್ಳನ್ನಕ್ಕರ ಪ್ರಸಾದಿಯಲ್ಲ; ಆಚಾರದಲ್ಲಿ ಅನುಭಾವಿ, ಪ್ರಸಾದದಲ್ಲಿ ಪರಿಣಾಮಿ, ಗುಹೇಶ್ವರಲಿಂಗದಲ್ಲಿ ಚೆನ್ನಬಸವಣ್ಣನೆಂಬ ಪ್ರಸಾದಿಗೆ ನಮೋ ನಮೋ ಎನುತಿರ್ದೆನು" ಎಂದು ತಮ್ಮ ಮೆಚ್ಚುಗೆಯ ಹೆಚ್ಚುಗೆಯನ್ನು ಬಿತ್ತರಿಸಿದ್ದಾರೆ.

ಈ ಹೊಗಳಿಕೆಯ ಹೊನಲಿನಲ್ಲಿ ಹರಿದುಹೋಗಲಿಲ್ಲ ಚೆನ್ನಬಸವಣ್ಣ. ಅಹಂಕಾರ ಅಜ್ಞಾನಿಯ ಲಕ್ಷಣ; ವಿನಯ ಜ್ಞಾನಿಯ ಲಕ್ಷಣ. ಇದು ಚೆನ್ನಬಸವಣ್ಣನ ವಿನಯ ಸಂಪತ್ತು:

"ನರಸುರಾದಿಗಳೆಲ್ಲರೂ ನಿಮ್ಮ ಹೊಳೆಯಲಿದ್ದರು;
ಮನಮುನಿ ಯತವ್ರತಿಗಳೆಲ್ಲರೂ ನಿಮ್ಮ ತೋಹಿನೊಳಡಗಿದ್ದರು,
ಗಂಗೆವಾಳುಕರೆಲ್ಲರೂ ನಿಮ್ಮ ಮಡಿಯೊಳಡಗಿದರು;
ಗಂಗೆಗೌರೀವಲ್ಲಭರೆಲ್ಲರೂ ಚತುರ್ಮುಖ ಪಂಚಮುಖ ಷಣ್ಮುಖ
ದಶಮುಖರೆಲ್ಲರೂ
ನಿಮ್ಮ ಮಡಿಯ ಗಳಿಗೆಯೊಳಡಗಿದರು!
ಕೂಡಲ ಚೆನ್ನಸಂಗಮದೇವರು ಸಾಕ್ಷಿಯಾಗಿ
ನಿಮ್ಮ ನಿರಾಳ ಪ್ರಸಾದದಿಂದ ನಿರವಯಲ ಹಾದಿಯ ಕಂಡೆನಲ್ಲದೆ
ನಿಮ್ಮಿಂದಲಾನು ಘನವೆ ಮಡಿವಾಳ ಮಾಚಯ್ಯ?"

ಎಂದು ಮಡಿವಾಳಯ್ಯನ ಮಹಿಮೆಯನ್ನು ಕೊಂಡಾಡಿದ ವಿನಯ–

"ಅಜಕೋಟಿ ವರುಷದವರೆಲ್ಲರೂ ಹಿರೆಯರೆ?
ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೆ?
ನಡು ಮುರಿದು, ಗೂಡುಗೂರಿ, ತಲೆ ನಡುಗಿ, ನೆರೆತೆರೆಹಚ್ಚಿ,
ಮತಿಗೆಟ್ಟು, ಒಂದನಾಡ ಹೋಗಿ ಒಂಬತ್ತನಾಡುವ
ಅಜ್ಞಾನಿಗಳೆಲ್ಲರೂ ಹಿರಿಯರೆ?
ಅನುವರಿದು, ಘನವಬೆರಿಸಿ, ಹಿರಿದುಕಿರಿದೆಂಬ ಭೇದವ ಮರೆದು,
ಕೂಡಲ ಚೆನ್ನಸಂಗಯ್ಯನಲ್ಲಿ ಬೆರಿಸಿಬೇರಿಲ್ಲದಿಪ್ಪ ಹಿರಿಯತನ ನಮ್ಮ
ಮಹಾದೇವಿಯಕ್ಕಂಗಾಯಿತ್ತು!"

ಎಂದು ಅಕ್ಕನ ಅಗ್ಗಳಿಕೆಯನ್ನು ಹೊಗಳಿದ ವಿನಯ–

"ಭಾವದಲ್ಲಿ ಗಮನ, ಪ್ರಾಣದಲ್ಲಿ ಲೋಭ, ಜಿಹ್ವೆಯಲ್ಲಿ ರುಚಿ,
ಶ್ರೋತ್ರದಲ್ಲಿ ಕುಶಬ್ದ,
ನಾಸಿಕದಲ್ಲಿ ದುರ್ಗಂಧ, ನೋಟದಲ್ಲಿ ಕಾಮ, ಶಬ್ದದಲ್ಲಿ ವಿರೋಧ–
ಇಂತಹ ಭವಿಯ ಕಳೆದು ಭಕ್ತನಮಾಡಿದ ಪರಿ ಎಂತೆಂದೊಡೆ,
ಆಕಾರವಿಲ್ಲದಂದಿನ, ನಿರಾಕಾರವಿಲ್ಲದಂದಿನ,
ಕಾಮನ ಸುಟ್ಟ ಭಸ್ಮವಿಲ್ಲದಂದಿನ,
ತ್ರಿಪುರವ ಸುಟ್ಟ ಭಸ್ಮವಿಲ್ಲದಂದಿನ,
ಕಾಲನ ಸುಟ್ಟ ಭಸ್ಮವಿಲ್ಲದಂದಿನ,
ಆದಿ ಆಧಾರವಿಲ್ಲದಂದಿನ ಚಿದ್ವಿಭೂತಿಯನೆ
ತಂದು ಪಟ್ಟವ ಕಟ್ಟಿದರೆ ಭಾವಕ್ಕೆ ಗುರುವಾಯಿತ್ತು,
ಪ್ರಾಣಕ್ಕೆ ಲಿಂಗವಾಯಿತ್ತು, ಜಿಹ್ವೆಗೆ ಪ್ರಸಾದವಾಯಿತ್ತು,
ಶ್ರೋತ್ರಕ್ಕೆ ಶಿವಮಂತ್ರವಾಯಿತ್ತು,
ನಾಸಿಕಕ್ಕೆ ಸುಗಂಧವಾಯಿತ್ತು, ನೋಟಕ್ಕೆ ಜಂಗಮವಾಯಿತ್ತು, ಶಬ್ದಕ್ಕೆ
ಸಂಭಾಷಣೆಯಾಯಿತ್ತು. ಇಂತು ಪೂರ್ವದ ಗುಣಂಗಳೆಲ್ಲವ ಕಳೆದು
ಪುನರ್ಜಾತನಾದ ಕಾರಣ, ಕೂಡಲ ಚೆನ್ನಸಂಗಯ್ಯನಲ್ಲಿ
ಬಸವಣ್ಣನಿಂದ ಸರ್ವಾಂಗಲಿಂಗವಾದೆನು"

ಎಂದು ಬಸವನ ಬೆಳಕನ್ನು ಬಣ್ಣಿಸಿದ ವಿನಯ–

"ಇಲ್ಲದ ಸಂಸಾರ ಕಣ್ಣ ಮುಂದೆ ರೂಪಾಗಿ ಕಾಡುತಿರ್ದರೆ
ಸುಜ್ಞಾನವೆಂಬ ಅಂಜನವನೆಚ್ಚಿ, ಸಕಲ ಭ್ರಮೆಯೆಂಬ ಕತ್ತಲೆಯ ಕಳೆದು,
ನಿಜಸಂಬಂಧವ ನೆಲೆಗೊಳಿಸಿ, ನಿತ್ಯದಲ್ಲಿ ಅಚ್ಚೊತ್ತಿದನಾಗಿ,
ಕೂಡಲ ಚೆನ್ನಸಂಗಯ್ಯನಲ್ಲಿ ಪ್ರಭುದೇವರ ಶ್ರೀಪಾದಕ್ಕೆ
ನಮೋ ನಮೋ ಎಂಬೆನು."

ಎಂದು ಪ್ರಭುವಿನ ಪ್ರಭೆಯನ್ನು ಪ್ರಶಂಸಿಸಿದ ವಿನಯ– ಕೊನೆಗೆ,

"ಕಬ್ಬುನಗಿದ ಗುಣ ಬಲ್ಲುದೆ ಹಾಲ ಸವಿಯ?
ಗಗನದಲಾಡುವ ಪಕ್ಷಿ ಬಲ್ಲುದೆ ರವಿಯ ನಿಲವ?
ಹಗರಣಕ್ಕೆ ಪೂಜಿಸುವರು ಬಲ್ಲರೆ ನಿಮ್ಮ ಶರಣರ ಸುಳುಹ?
ನಡು ಮುರಿದು ಗೂಡು ಗೊರಿದರೇನು ಲಿಂಗದ ನಿಜವನರಿಯದನ್ನಕ್ಕ?
ಸಾವನ್ನಕ್ಕ ಜಪವಮಾಡಿದರೇನು– ಲಿಂಗದ ಪ್ರಾಣ ತನ್ನ ಪ್ರಾಣ ಒಡಗೂಡದನ್ನಕ್ಕ?

ಇಂತಿವರೆಲ್ಲರೂ ಅಭ್ಯಾಸಶಕ್ತಿಗರುಹಿಗರು ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ
ಮಾಯಾಕೋಳಾಹಳ ಸಿದ್ಧರಾಮಯ್ಯದೇವರಿಗೆ ಅಹೋರಾತ್ರಿಯಲ್ಲಿ
ನಮೋ ನಮೋ ಎಂದು ಬದುಕಿರ್ದೆನು ಕಾಣಾ ಪ್ರಭುವೆ"

ಎಂದು ಶಿಷ್ಯ ಸಿದ್ಧರಾಮಯ್ಯನ ಶ್ರೇಷ್ಠತೆಯನ್ನೂ ಸಾರಿದ ವಿನಯ ಚೆನ್ನಬಸವಣ್ಣನದು. ಕೂಡಲ ಚೆನ್ನಸಂಗಯ್ಯನರುಹಿದರೆ ಅರಿದೆನಲ್ಲದೆ ನನಗೆ ಬೇರೆ ಸ್ವತಂತ್ರಜ್ಞಾನವಿಲ್ಲ ಕೇಳಯ್ಯ ಎಂಬ ವಿಶುದ್ಧವಿನಯ ಅವನದು. 'ನಾನು ಬಲ್ಲೆನೆಂಬ ಗರ್ವವಿಲ್ಲದೆ, ನೀವು ಕೊಟ್ಟ ಅನುಗ್ರಹದ ಬಿನ್ನ ಪವನವಧರಿಸುವುದು' ಎಂಬ ಕೈಂಕರ್ಯ ಅವನದು. ಅವನ ಸುಜ್ಞಾನದ ಶಸ್ತ್ರಕ್ಕೆ ಸದುವಿನಯವೇ ಸಾಣೆಯಾಗಿದ್ದಿತು. ಯಾರಾದರೂ ಅವನ ಘನತೆಯನ್ನು ಕೊಂಡಾಡಿದರೆ:

"ಎನಗಿಲ್ಲದ ಘನವನೇರಿಸಿ ನುಡಿದರೆ ಅದು ನಿಮ್ಮ ಲೀಲೆ:
ನಾನದ ಬೇಕೆನ್ನೆ, ಬೇಡೆನ್ನೆನದಂತಿರಲಿ
ನಮ್ಮ ಶ್ರೀಪಾದದ ಕೃಪೆಯಿಂದ ನಿಮ್ಮ ನಿಲವನರಿದೆನು"

ಎಂದು ಬಿನ್ನವಿಸಿಕೊಳ್ಳುತ್ತಿದ್ದನಾ ಚಿದ್ವಿಭೂತಿ, ಚಿನ್ಮಯಮೂರ್ತಿ.

ಬಸವಣ್ಣ ಗುರು, ಚೆನ್ನಬಸವಣ್ಣ ಲಿಂಗ, ಪ್ರಭುದೇವ ಜಂಗಮ; ಬಸವಣ್ಣ ಸದ್ರೂಪ, ಚೆನ್ನಬಸವಣ್ಣ ಜ್ಞಾನ, ಪ್ರಭುದೇವ ಆನಂದರೂಪ; ಬಸವಣ್ಣ ಭಕ್ತಿ, ಚೆನ್ನಬಸವಣ್ಣ ಜ್ಞಾನ, ಪ್ರಭುದೇವ ವೈರಾಗ್ಯ; ಬಸವಣ್ಣ ಕಾಯ, ಚೆನ್ನಬಸವಣ್ಣ ಪ್ರಾಣ, ಪ್ರಭುದೇವ ಆತ್ಮ; ಬಸವಣ್ಣ ಪ್ರಣತಿ, ಚೆನ್ನಬಸವಣ್ಣ ತೈಲ, ಪ್ರಭುದೇವ ಜ್ಯೋತಿ –ಹೀಗೆ ಯಾವ ದೃಷ್ಟಿಯಿಂದ ನೋಡಿದರೂ ಈ ಮೂವರ ಸಂಬಂಧ ಮನೋಜ್ಞವಾದುದು. ಈ ಸೊಲ್ಲಿಸಲಾಗದ ಸಂಬಂಧವನ್ನೂ ಸೊಲ್ಲಿಸಿದ್ದಾನೆ ಚೆನ್ನಬಸವಣ್ಣ:

ಅನುಮಿಷಂಗೆ ಲಿಂಗವ ಕೊಟ್ಟಾತ ಬಸವಣ್ಣ
ಆ ಲಿಂಗ ನಿನಗೆ ಸೇರಿತ್ತಾಗಿ ಬಸವಣ್ಣನ
ಸಾಂಪ್ರದಾಯದ ಕಂದನು ನೋಡಾ ನೀನು.
ಭಕ್ತಿ ದಳದುಳದಿಂದ ಚೆನ್ನಸಂಗಮನಾಥನೆಂಬ ಲಿಂಗವನಗ್ರಹಿಸಿಕೊಂಡೆನಾಗಿ
ಬಸವಣ್ಣನ ಸಂಪ್ರದಾಯಸ ಕಂದನು ನೋಡಾ ನಾನು.
ಇಂತಿಬ್ಬರಿಗೆಯೂ ಒಂದೇ ಸ್ಥಳಕುಳವಾದ ಕಾರಣ
ಕೂಡಲ ಚೆನ್ನಸಂಗಯ್ಯನಲ್ಲಿ ಬಸವಣ್ಣನ ಮಹಾಮನೆಯ ಪ್ರಸಾದ
ಇಬ್ಬರಿಗೆಯು ಒಂದೇ ಕಾಣಾ, ಪ್ರಭುವೆ!"
ಕಾಯ ಒಂದು ಪ್ರಾಣ ಒಂದು, ಭಾವ ಒಂದು,
ನಿರ್ಭಾರ ಒಂದು, ಒಂದಲ್ಲದೆ ಎರಡುಂಟೆ?
ಗುರು ಒಂದು, ಲಿಂಗ ಒಂದು, ಉಪದೇಶ ಒಂದು–
ಕೂಡಲ ಚೆನ್ನಸಂಗಯ್ಯನ ಶರಣ ಬಸವಣ್ಣನ ಗರುಡಿಯಲ್ಲಿ
ಇಬ್ಬರಿಗೂ ಅಭ್ಯಾಸ ಒಂದೇ ಕಾಣಾ ಪ್ರಭುವೆ!

ಇಂಥ ದಿವ್ಯಜ್ಞಾನಿಯಾದ ಚೆನ್ನಬಸವಣ್ಣ ಎರಡುಪಟ್ಟಿ (೨೪ ವರ್ಷ) ಮಾತ್ರ ಬದುಕಿದ್ದನೆಂದರೆ 'ಇದು ಸಾಧ್ಯವಿಲ್ಲ'ವೆನಿಸಬಹುದಲ್ಲವೆ? ಆದರೆ ಸೋಜಿಗವೆನಿಸಿದರೂ ಸತ್ಯಸಂಗತಿಯಿದು. ಬಸವಣ್ಣನವರಿಗೆ ಮೂರುಪಟ್ಟ, ಚೆನ್ನಬಸವಣ್ಣನವರಿಗೆ ಎರಡುಪಟ್ಟವೆಂಬುದು ಕಾಲನ ನಾಲಗೆಯ ಮೇಲೆ ನೆಲೆಸಿ ನಿಂತಿರುವ ಸತ್ಯ. ಈ ಇಪ್ಪತ್ತು ವರ್ಷಗಳ ಯುವಕ 'ಅರಿವರತು, ಮೆರಹು ನಷ್ಟವಾಗಿ, ಸ್ವತಂತ್ರ ಶಿವಾಚಾರಿಯಾದ ಸ್ವಯಂಭು ಜ್ಞಾನಿ'ಯಾದುದು, 'ಮಾಯದ

ಹೊಡೆಗಿಚ್ಚಗೆದ್ದ' ವೀರನಾದುದು, 'ಕೂಡಲ ಚೆನ್ನಸಂಗಯ್ಯನಲ್ಲಿ ಅನುಮಿಷ ಪ್ರಭುವಿಂಗೆ ಬಸವಣ್ಣ ಗುರುವಾದ ಕಾರಣ ನಾನು ನಿನಗೆ ಚಿಕ್ಕ ತಮ್ಮ ಕೇಳಾ, ಪ್ರಭುವೆ!' ಎಂದು ಪ್ರಭುದೇವರಿಗೆ ಹೇಳುವಷ್ಟು ಸಮರ್ಥನಾದುದು ಪವಾಡಗಳಲ್ಲಿ ಪವಾಡ.

ನಿಜ, ಚೆನ್ನಬಸವಣ್ಣ ಪ್ರಭುದೇವ ಅನುಜಾಗ್ರಜರು. ಇಬ್ಬರದೂ ಅದೇ ಪ್ರಸನ್ನ ಗಂಭೀರ ವಚನರಚನಾವಿನ್ಯಾಸ, ಅದೇ ನಿಜದ ನಿಷ್ಠುರತೆ, ಅದೇ ಒರೆದೊರೆದು ಕಾಸಿ ಸೋಸಿ ನೋಡುವ ರೀತಿನೀತಿಗಳು, ಅದೇ ಪಾದರಸದಂಥ ಪ್ರತಿಭೆ. ಅಲಗಿನ ಮೊನೆಯಂತೆ ನಿಶಿತವಾದ ಮತಿ, ಆಕಾಶದಂತೆ ಅನಂತವೂ ನಿರ್ಲಿಪ್ತವೂ ಆದ ಮನಸ್ಸು, ಅದೇ ನಿರಹಂಭಾವದ ನಿಲವು. ಇಬ್ಬರ ಕೈಯಲ್ಲಿಯೂ ಕನ್ನಡ ಮಾತು 'ಹೊಸಮಸೆಯ ತಿಸುಳ'ದಂತೆ ಥಳಥಳಿಸಿ ಹೊಳೆದುವು. ಇಲ್ಲಿ ನೋಡಿ:

'ಅರಿದಾಗಲಿದ್ದಿತ್ತು, ಮರೆದಾಗ ಬಿದ್ದಿತ್ತು'
'ಅರಿವುಳ್ಳಾತಂಗೆ ಅಗ್ಘವಣಿಯ ಹಂಗೇಕೆ?'
'ಅಂಗವೆ ಸೆಜ್ಜೆ, ಆಚಾರವೆ ಶಿವದಾರ, ತ್ರಿಕರಣಶುದ್ಧಿಯೇ ಕುಳಿಕೆ'
'ಅಹಂ ಎಂಬುದೇ ದೇಹ, ದಾಸೋಹಂ ಎಂಬುದೇ ನಿರ್ದೇಹ'
'ಅಂಗಸಂಗವೆಂಬುದೇ ಅನಾಚಾರ, ಲಿಂಗಸಂಗವೆಂಬುದೇ ಸದಾಚಾರ'
'ಅಂಗವೇ ಮಣ್ಣು, ಲಿಂಗವೇ ಮರನು, ಫಲವೇ ಜಂಗಮ, ರುಚಿಯೇ ಪ್ರಸಾದ'
'ಆಚಾರವೇ ಅಂಗ, ಅರಿವೇ ಪ್ರಾಣ'
'ಆಚಾರ ಸಹಿತ ಭಕ್ತ, ಅನಾಚಾರ ಸಹಿತ ನರ'
'ಇದ್ದುದ ವಂಚನೆ ಮಾಡದಿಪ್ಪುದೇ ಶೀಲ, ಇಲ್ಲದುದಕ್ಕೆ ಕಡನ
ಮಾಡದಿಪ್ಪುದೇ ಶೀಲ'
'ಒಕ್ಕುದೆಂಬುದೆ ಕಾಯ, ಮಿಕ್ಕುದೆಂಬುದೇ ಪ್ರಾಣ'
'ಕಾಯ ಗುರು, ಪ್ರಾಣ ಲಿಂಗ, ಜ್ಞಾನ ಜಂಗಮ'
'ಕಾಯದಲ್ಲಿ ಶುದ್ಧಪ್ರಸಾದ, ಪ್ರಾಣದಲ್ಲಿ ಸಿದ್ಧಪ್ರಸಾದ, ಜ್ಞಾನದಲ್ಲಿ ಪ್ರಸಿದ್ಧ ಪ್ರಸಾದ'
'ಜಂಗಮ ಪ್ರೇಮಿಗೆ ಜಡಮತಿಯುಂಟೆ?'
'ತನುವಿನ ಪ್ರಾಣ ಆಚಾರ, ಮನದ ಪ್ರಾಣ ಅನುಭಾವ'
'ದೇವಾ, ನೀವು ನಿಮ್ಮಂತೆ; ಉಳಿದುದೆಲ್ಲವೂ ನೀವಿರಿಸಿದಂತೆ'
'ನಾನಿಲ್ಲದ ಮುನ್ನ ನೀನಿರ್ದುದಿಲ್ಲವಯ್ಯ!'
'ನಿಮ್ಮನುಭಾವಿಯ ನೀವೆಂಬೆನಯ್ಯ'
'ಪದವೇ ಲಿಂಗ, ಅರ್ಥವೇ ಭಕ್ತಿ'
'ಬಯಸಿ ಬಂದುದು ಅಂಗಭೋಗ, ಬಯಸದೆ ಬಂದುದು ಲಿಂಗಭೋಗ'
'ಬೇಕೆಂಬುದು ಕಾಯಗುಣ, ಬೇಡೆಂಬುದು ವೈರಾಗ್ಯ'
'ಮರ್ಮವಿಡಿದು ಮಾಡುವಂಗೆ ಕರ್ಮವಿಲ್ಲ'
'ಮನಶುದ್ಧವುಳ್ಳಾತಂಗೆ ಮಂತ್ರದ ಹಂಗೇಕೆ?'
'ಮುತ್ತು ನೀರಿನಲ್ಲಿ ಹುಟ್ಟಿ ಮತ್ತೆ ನೀರಪ್ಪುದೆ?'
'ವ್ಯಾಕುಳವೆ ಭವಿ, ನಿರಾಕುಳವೆ ನಿರ್ಭವಿ!'
'ಸಂತೆಯೊಳಗೆ ಸಮಾಧಿಯುಂಟೆ?'
'ಸುರೆಯ ಮಡಕೆಗೆ ಬೂದಿಯ ಹೂಸಿದರೇನು; ಒಳಗೆ ಶುದ್ಧವಾಗದನ್ನಕ್ಕರ?'
'ಜ್ಞಾನಿಗೆ ಕತ್ತಲಿಲ್ಲ, ಅಜಾತಂಗೆ ಹೊಲೆಯಿಲ್ಲ' –ಇತ್ಯಾದಿ

ಚೆನ್ನಬಸವನ ಬೆಳಕಿನ ಬಿತ್ತುಗಳು ಅಲ್ಲಮನ ಅರಿವಿನ ಆಣಿಮುತ್ತುಗಳನ್ನೇ ಹೋಲುತ್ತಿವೆಯಲ್ಲವೆ? ಅದೇ ಸೂತ್ರಪ್ರಾಯ ಸಂಕ್ಷಿಪ್ತತೆ, ಅದೇ ನಿಶ್ಚಿತತೆ– ಖಚಿತತೆಗಳು, ಅದೇ ಔಚಿತ್ಯಪ್ರಿಯತೆಗಳು ಒಡೆದು ಕಾಣುವುದಿಲ್ಲವೆ ಇಲ್ಲಿಯೂ?

ಶಿವದೀಕ್ಷೆ ಹೊಂದಿದವರೆಲ್ಲ ಸದ್ಭಕ್ತರಾಗರೆಂಬ ನಿಲವಿನಲ್ಲಿಯೂ ಇಬ್ಬರದೂ ಒಂದೇ ಮತ. ಬಸವಣ್ಣನವರಂತೆ 'ಸರ್ವರೂ ಸದ್ಭಕ್ತರೆಂಬ' ಎನ್ನುವ ದೃಷ್ಟಿ ಇವರದಲ್ಲ.

> **"ಸತ್ಯವ ನುಡಿಯದ, ಸದಾಚಾರದಲ್ಲಿ ನಡೆಯದ, ಸದ್ಭಕ್ತಿಯ ಹಿಡಿಯದ, ನಿಜ**
> **ಮುಕ್ತಿ ಪಡೆಯದ, ಸತ್ಕ್ರಿಯೆ ವಶವಾಗದ, ಸಮ್ಯಕ್ ಜ್ಞಾನವ ಮುಟ್ಟದ--**
> **ಸುಡು, ಸುಡು! ಈ ವೇಷದ ಭಾಷೆಯ ನೋಡಿ ಗುಹೇಶ್ವರಲಿಂಗದಲ್ಲಿ**
> **ನಗುತ್ತಿದ್ದಾನೆ ಕಾಣಾ, ಚೆನ್ನಬಸವಣ್ಣಾ!"**

ಎಂದು ಪ್ರಭುದೇವರು ನುಡಿದರೆ,

> **"ಅಂಗದ ಮೇಲೆ ಲಿಂಗವುಳ್ಳುದೆಲ್ಲವೂ ಸಂಗಮನಾಥನೆಂಬ ಭಾವನೆ**
> **ಬಸವಣ್ಣಂಗಾಯಿತ್ತಲ್ಲದೆ ಎನಗೆ ಆ ಭಾವವಿಲ್ಲ ನೋಡಾ!**
> **ಲಿಂಗೈಕ್ಯ ಶರಣರ ಕಂಡರೆ ನಂಬಿನೆಚ್ಚಿ ಅವರ ಪಾದಕ್ಕೆ ಎರಗುವುದೆನ್ನ ಮನವು"**

ಎಂದು ಚೆನ್ನಬಸವಣ್ಣ ಮಾರ್ನುಡಿಯುತ್ತಾನೆ. ಇನ್ನೂ ಮುಂದೆ ಸಾಗಿ,

> **"ಬಟ್ಟಬಯಲೆಲ್ಲ ಗಟ್ಟಿಗೊಂಡಡೆ ಸ್ವರ್ಗಮರ್ತ್ಯ ಪಾತಾಳಕ್ಕೆ ಠಾವಿನ್ನೆಲ್ಲಿಯದೊ?**
> **ಮೇಘಜಲವೆಲ್ಲ ಮುತ್ತಾದಡೆ ಸಪ್ತಸಾಗರಂಗಳಿಗೆ ಉದಕವಿನ್ನೆಲ್ಲಿಯದೊ?**
> **ಕಷ್ಟಜೀವಿ ಮನುಜರೆಲ್ಲ ನೆಟ್ಟನೆ ಶಿವಜ್ಞಾನಿಗಳಾದೊಡೆ**
> **ಮುಂದೆ ಭವದ ಬಳ್ಳಿಗೆ ಬೀಜವಿನ್ನೆಲ್ಲಿಯದೊ?**
> **ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ ಸಾವಿರಕ್ಕೊಬ್ಬ ಸತ್ಯ, ಲಕ್ಷಕ್ಕೊಬ್ಬ ಭಕ್ತ,**
> **ಕೋಟಿಗೊಬ್ಬ ಶರಣ!"**

ಎಂದು ತನ್ನ ತೀರ್ಪನ್ನೇ ತಿಳಿಸಿಬಿಟ್ಟಿದ್ದಾನೆ! ಎಂಥ ತ್ರಿಕಾಲಾಬಾಧಿತವಾದ ತೀರ್ಪು ಇದು!

ನೋಡುವ ದೃಷ್ಟಿ ಎರಡು ವಿಧ: ಒಂದು ಸಮನ್ವಯ ದೃಷ್ಟಿ, ಎರಡನೆಯದು ವಿಶ್ಲೇಷಣಾದೃಷ್ಟಿ. ಮೊದಲನೆಯ ದೃಷ್ಟಿಗೆ ಎಲ್ಲೆಡೆಯಲ್ಲಿಯೂ ಒಳ್ಳೆಯದು ಮಾತ್ರ, ಲೇಸು ಮಾತ್ರ, ಶಿವಮಾತ್ರ ಕಾಣುತದೆ; ಎರಡನೆಯ ದೃಷ್ಟಿಗೆ ಒಳಿತಿನ ಹಿಂದೆ ಕಳ್ಳನಂತೆ ಅಡಗಿ ಕುಳಿತಿರುವ ಅಲ್ಲವಾದುದೂ ಕಾಣುತ್ತದೆ. ಮೊದಲನೆಯದು ಏಕೀಕರಿಸಿ, ಸಮೀಕರಿಸಿ ನೋಡುವ ದೃಷ್ಟಿ: ಎರಡನೆಯದು ವಿಭಜಿಸಿ, ವಿಶ್ಲೇಷಿಸಿ, ವಿವೇಚಿಸಿ ನೋಡುವ ದೃಷ್ಟಿ. ಬಸವಣ್ಣನವರದು ಮೊದಲನೆಯ ದೃಷ್ಟಿ. ಆ ದೃಷ್ಟಿಗೆ ಕಂಡುಬಂದುದು ಮನುಜ ಸೃಷ್ಟಿಯ ಒಂದು ಮಗ್ಗಲು. ಅದರ ಇನ್ನೊಂದು ಮಗ್ಗಲನ್ನು ಕಾಣಲು ಎರಡನೆಯ ದೃಷ್ಟಿಯೂ ಬೇಕಾಗಿದ್ದಿತು. ಅಲ್ಲಮ ಚೆನ್ನಬಸವರು ಈ ಎರಡನೆಯ ದೃಷ್ಟಿಯನ್ನು ಪಡೆದುಕೊಂಡು ಬಂದಿದ್ದ ಕಾರಣ ಬಸವಣ್ಣನು ಬಿತ್ತಿದ ಬೆಳೆಯಲ್ಲಿ ಕಳೆ ಬೆಳೆದಾಗ, ಕಸ ಬೆಳೆದಾಗ, ಅದನ್ನು ಕಳೆಯಲು ಎಡೆ ಹೊಡೆವ ಕಾರ್ಯವನ್ನವರು ಮಾಡಿದರು. ಅವರು ಆ ಕಾರ್ಯ ಮಾಡದೇ ಹೋಗಿದ್ದರೆ ಬೆಳೆಗಿಂತ ಕಳೆ ಹೆಚ್ಚಾಗಿ ಕಳೆಗೆಟ್ಟು ಹೋಗುತ್ತಿದ್ದಿತು, ಬಸವಣ್ಣನ ಭಕ್ತಿ ಕ್ಷೇತ್ರದ ಕೃಷಿಕಾಯಕ.

ಇನ್ನೂ ಒಂದು ಉದಾಹರಣೆಯಿಂದ ಬಸವ–ಚೆನ್ನಬಸವರಲ್ಲಿದ್ದ ದೃಷ್ಟಿಭೇದವನ್ನು ಸ್ಪಷ್ಟಗೊಳಿಸಬಹುದು. ಇಬ್ಬರೂ ಕಾಯಕದ ಮಹತ್ವವನ್ನು ಕೀರ್ತಿಸಿದ್ದಾರೆ. ಆದರೆ ಒಬ್ಬರು ಅದರ ಒಪ್ಪಿನ ಮುಖವನ್ನು ಕಂಡರೆ, ಇನ್ನೊಬ್ಬರು ಅದರ ತಪ್ಪಿನ ಮುಖವನ್ನು ಕಂಡಿದ್ದಾರೆ:

"ಕೃಷಿಕೃತ್ಯ ಕಾಯಕದಿಂದಾದಡೇನು?
ತನುಮನ ಬಳಲಿಸಿ ತಂದು ದಾಸೋಹವ ಮಾಡುವ
ಪರಮ ಸದ್‌ಭಕ್ತರ ಪಾದವ ತೋರಯ್ಯಾ ಎನಗೆ!
ಅದೆಂತೆನೆ: ಆತನ ತನುಶುದ್ಧ ಆತನ ಮನಶುದ್ಧ,
ಆತನ ನಡೆಶುದ್ಧ, ನುಡಿಯೆಲ್ಲ ಪಾವನವು!
ಆತಂಗೆ ಉಪದೇಶವ ಮಾಡಿದಾತನೇ ಪರಮ ಸದ್ಗುರು!
ಅಂತಪ್ಪ ಸದ್‌ಭಕ್ತನ ಮನೆಯ ಕೈಲಾಸವೆಂದು ಹೊಕ್ಕು
ಲಿಂಗಾರ್ಚನೆಯ ಮಾಡುವ ಜಂಗಮವೇ ಜಗತ್ ಪಾವನ!
ಇಂತಪ್ಪವರ ನಾನು ನೆರೆನಂಬಿ 'ನಮೋ ನಮಃ' ಎಂಬೆನಯ್ಯ
ಕೂಡಲ ಸಂಗಮದೇವಾ"

ಎಂದು ಬಸವಣ್ಣನವರು ಹೃದಯವುಕ್ಕಿ ಹಾಡಿದರೆ,

"ತನುಮನ ಬಳಲದೆ, ಉದ್ದಂಡ ವೃತ್ತಿಯಲ್ಲಿ ಧನವ ಗಳಿಸಿ
ಗುರುಲಿಂಗ ಜಂಗಮಕ್ಕೆ ವೆಚ್ಚಿಸಿ ದಾಸೋಹವ ಮಾಡಿ
ಭಕ್ತರಾದೆವೆಂಬವರ ಮುಖವ ತೋರದಿರಯ್ಯಾ ಎನಗೆ!
ಅವ ಪರಧನಚೋರ; ಅವಪಾಪಿ, ಕೋಪಿ, ಪರಿಭ್ರಷ್ಟ!
ಅವನ ಕಾಯಕವ ವಿಚಾರಿಸದೆ ಉಪದೇಶ ಕೊಟ್ಟ
ಗುರುವಿಂಗೆ ರೌರವ ನರಕ!
ಅವನ ಆಯತವ ವಿಚಾರಿಸದೆ ಅವನ ಮನೆಯಲ್ಲಿ ಹೊಕ್ಕು
ಲಿಂಗಾರ್ಚನೆಯ ಮಾಡುವ ಜಂಗಮಕ್ಕೆ ಏಳನೆಯ ಪಾತಕ!
ಇಂತಪ್ಪ ಗುರು-ಶಿಷ್ಯ-ಜಂಗಮದ ಬಾಳುವೆ
ಹುಲಿ ಕಪಿಲೆಯ ತಿಂದು ಮಿಕ್ಕಿದುದ ನರಿ ತಿಂದಂತಾಯಿತ್ತು,
ಕೂಡಲ ಚೆನ್ನಸಂಗಮದೇವಾ!"

ಲೇಸಿನ ಬಸವಾಯಣವೊಂದು ಕಡೆಗೆ; ಆ ಲೇಸಿನ ಬಟ್ಟೆಯನ್ನು ಬಿಟ್ಟು ಕೆಟ್ಟ, ದಾರಿಯನ್ನು ತುಳಿಯುವವರಿಗೆ ಚಾಟಿಯೇಟನ್ನು ಕೊಡುವ ಚೆನ್ನಬಸವಣ್ಣನಿನ್ನೊಂದು ಕಡೆಗೆ. 'ಸುರೆಯ ಮಡಕೆಗೆ ಹೊರಗೆ ಬೂದಿಯ ಹೂಸಿದರೇನು? ಒಳಗೆ ಶುದ್ಧವಾಗದನ್ನಕ್ಕರ?' ಎಂಬುದು ಚೆನ್ನಬಸವಣ್ಣನ ಚಿರಂತನ ಪ್ರಶ್ನೆ. ಪರುಷ ಸೋಂಕಿದರೆ ಕಬ್ಬುನವೂ ಕಡವರವಾಗುವುದೆಂದು ಇದಕ್ಕೆ ಯಾರಾದರೂ ಉತ್ತರವಿತ್ತರೆ ಅದಕ್ಕೆ ಅವನು 'ಕಬ್ಬುನದ ಶುಸಕನ ತಂದು ಪರುಷವ ಮುಟ್ಟಿಸಲೊಡನೆ ಹೊನ್ನ ಶುನಕವಪ್ಪುದಲ್ಲದೆ ಪರುಷವಾಗಲರಿಯದು ನೋಡಾ!' ಎಂದು ಖಂಡಿತವಾಗಿ ಹೇಳಿಬಿಡುತ್ತಾನೆ. ಅಲ್ಲಮನ ಉತ್ತರ ಇನ್ನೂ ನಿಖರವಾದುದು. ಮಾಯೆಯ ಪಕ್ಷವಹಿಸಿ ಮಾತನಾಡುತ್ತ,

'ಕೀಳುಗಬ್ಬುನವೆಣ್ಣ ಕೋಪಿಸಿ
ಕಾಲಲೊದೆದೊಡೆ ಮೇಣು ಕರುಣಿಸಿ
ತೋಳಲಪ್ಪಿದಡೇನು ಪರುಷದ ಗಂಡನದರಂತೆ
ಬಾಲೆಗೆಂತಾದೊಡೆಯ ನಿನ್ನ ಸ
ಮೇಳ ಘಟಿಸಿದ ಬಳಿಕ ಮಾಯೆಯ
ಪಾಲಿಸಲು ಬೇಕೆನುತ" ಬಿನ್ನವಿಸಿಕೊಂಡ ವಿಮಳೆಗೆ
ಉತ್ತರವೀಯುತ್ತಾ ಅಲ್ಲಮ ;

"ವನಿತೆ, ನಿನ್ನಯ ಮಾತಹುದು; ಕ
ಬ್ಬುನವದಾದೊಡೆ ಪರುಷ ಮುಟ್ಟಲು
ಕನಕವಹುದಲ್ಲದೆ ವೃಥಾ ಹಳೆ ಹಂಚು ಹೊನ್ನಹುದೆ?"

ತಾನೂ ಪರುಷದ ಸ್ಪರ್ಶದಿಂದ ಹೊನ್ನಾಗಬೇಕೆಂದು ಹಾರೈಸುವ ವಸ್ತು ಕನಿಷ್ಠ ಕಬ್ಬುನವಾದರೂ ಆಗಿರಬೇಡವೆ? ಹಳೆ ಹಂಚು ಮುಂದೆ ಬಂದು ನನ್ನನ್ನೂ ಹೊನ್ನನ್ನಾಗಿ ಮಾರ್ಪಡಿಸೆಂದು ಪರುಷಕ್ಕೆ ಪ್ರಾರ್ಥಿಸಿಕೊಂಡರೆ ಪರುಷವೇನು ಹೇಳಬೇಕು? "ಮೊದಲು ಕಬ್ಬನವಾದರೂ ಆಗಿ ಬಾ!" ಎಂದಲ್ಲವೆ?

ಪ್ರಭು–ಚೆನ್ನಬಸವಣ್ಣನವರಲ್ಲಿ ಈ ವಿಷಯದಲ್ಲಿಯೂ ವಿಚಾರಸಾಮ್ಯವಿದೆ; ಬೇರೆ ಹಲವು ವಿಷಯಗಳಲ್ಲಿಯೂ ಮತೈಕ್ಯವಿದೆ. ಇಬ್ಬರೂ ಬಹಿರಂಗಕ್ಕಿಂತ ಅಂತರಂಗಕ್ಕೆ ಹೆಚ್ಚು ಮಹತ್ವ ಕೊಡುವವರು :

"ಹೊರಗನೇ ಕೊಯ್ದು ಹೊರಗನೇ ಪೂಜಿಸಿದೊಡೆ
ಪ್ರಯೋಜನವಿಲ್ಲ, ಪರಿಣಾಮವಿಲ್ಲ, ಸುಖ ದೊರೆಕೊಳ್ಳದು ನೋಡಾ!
ಆದೆಂತೆಂದೊಡೆ : ಸರ್ವ ಜೀವಂಗಳಲ್ಲಿ ಹಿಂಸೆಯ ಮಾಡದಿಪ್ಪುದೇ ಪ್ರಥಮ ಪುಷ್ಪ;
ಸರ್ವೇಂದ್ರಿಯಂಗಳ ನಿಗ್ರಹಿಸಿಕೊಂಡಿರಬಲ್ಲಡೆ ದ್ವಿತೀಯ ಪುಷ್ಪ;
ಸರ್ವಾಹಂಕಾರವ ಮರೆತು ಶಾಮತನಾಗಿರಬಲ್ಲಡೆ ತೃತೀಯ ಪುಷ್ಪ;
ಸರ್ವ ವ್ಯಾಪಾರವಳಿದು ನಿರ್ವ್ಯಾಪಾರಿಯಾಗಿರಬಲ್ಲಡೆ ಚತುರ್ಥ ಪುಷ್ಪ;
ದುರ್ಭಾವ ಪ್ರಕೃತಿಯಳಿದು ಸದ್ಭಾವ ಎಡೆಗೊಂಡಿರಬಲ್ಲಡೆ ಪಂಚಮ ಪುಷ್ಪ;
ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿಯಾಗಿರಬಲ್ಲೊಡೆ ಷಷ್ಠಮ ಪುಷ್ಪ;
ಅನೃತವ ಮರೆದು ಸತ್ಯವ ನುಡಿಯಬಲ್ಲೊಡೆ ಸಪ್ತಮ ಪುಷ್ಪ;
ಸಕಲ ಪ್ರಪಂಚವಳಿದು ಶಿವಜ್ಞಾನಸಂಪನ್ನನಾಗಿರಬಲ್ಲಡೆ ಅಷ್ಟಮ ಪುಷ್ಪ.
"ಇಂತೀ ಅಷ್ಟಕಮಲದಲ್ಲಿ ಸಹಸ್ರಪೂಜೆಯ ಮಾಡಬಲ್ಲ ಶರಣರು
ನಿಮ್ಮ ಪ್ರತಿಬಿಂಬದಂತಿಪ್ಪರು ಕಾಣಾ ಕೂಡಲ ಚೆನ್ನಸಂಗಮದೇವಾ!"

ಈ ಅಷ್ಟಕಮಲದ ಸಹಸ್ರಪೂಜೆ ಅದೆಷ್ಟು ಅನುಪಮವಾದುದು! 'ಬಂಡಿ ತುಂಬ ಪತ್ರೆಯ ತಂದು ಕಂಡ ಕಂಡಲ್ಲಿ ಪೂಜೆಯ ಮಾಡುವ' ಬಾಹ್ಯಕರ್ಮದಿಂದ ಪರಿಣಾಮವಿಲ್ಲವೆಂದು ಬಸವಣ್ಣನವರೂ ಎಚ್ಚರಿಸಿದರಾದರೂ ಬಹಿರಂಗದ ಕ್ರಿಯೆಗೆ ಅಂತರಂಗದ ಅನುಸಂಧಾನವನ್ನು ಹೊಂದಿಸಿ ಮುಂದುವರಿವ ಹವಣವನ್ನು ಹುಡುಕುವ ಗೋಜಿಗೆ ಅವರು ಹೋಗಲಿಲ್ಲ. ಅಲ್ಲಮಪ್ರಭುಗಳಿಗೂ ಚೆನ್ನಬಸವಣ್ಣನವರಿಗೂ ಆ ಕಾರ್ಯವನ್ನು ಬಿಟ್ಟುಕೊಟ್ಟು ತಾವು ಮಾತ್ರ ಸಹಜ ಭಕ್ತಿಯ ಸುಖಸಮುದ್ರದಲ್ಲಿ ಲೋಲಾಡಿ ತೇಲಾಡಿದರು. ಇವರಿಬ್ಬರಲ್ಲಿ ಅಲ್ಲಮಪ್ರಭುದೇವ ಷಟ್‌ಸ್ಥಲವನ್ನೂ ಮೀರಿ ಮಹದಲ್ಲಿ ಮನೆಮಾಡಿಕೊಂಡಿದ್ದ ಕಾರಣ ಷಟ್‌ಸ್ಥಲ ಸಿದ್ಧಾಂತಕ್ಕೆ ಸರಿಯಾದ ತಳಹದಿಯನ್ನು ಹಾಕುವ ಕೆಲಸವನ್ನು ಹೆಚ್ಚಾಗಿ ಚೆನ್ನಬಸವಣ್ಣನೇ ಮಾಡಬೇಕಾಯಿತು–ಅದೂ ಅಂತರಂಗದ ಅರಿವು; ಬಹಿರಂಗದ ಕ್ರಿಯೆ ಎರಡೂ ಸಮರಸವಾಗಿ ಸಾಗುವ ರೀತಿಯಲ್ಲಿ ಹೀಗೆ:

"ಅಂತರಂಗದ ಅರಿವು, ಬಹಿರಂಗದ ಕ್ರಿಯೆ
ಈ ಉಭಯಸಂಪುಟ ಒಂದಾದ ಶರಣಂಗೆ ಹಿಂಗಿತ್ತು ತನು ಸೂತಕ,
ಹಿಂಗಿತ್ತು ಮನಸೂತಕ, ಕೂಡಲ ಚನ್ನಸಂಗಯ್ಯನಲ್ಲಿ
ಸಂಗವಾದದ್ದು ಸರ್ವೇಂದ್ರಿಯ"

ಅರಿವು, ಕ್ರಿಯೆ – ಎರಡೂ ಬೇರೆ ಬೇರೆ ಅಲ್ಲವೇ ಅಲ್ಲ; ಎರಡೂ ಒಂದೇ:

"ಕ್ರಿಯೆಯ ಜ್ಞಾನ, ಜ್ಞಾನವೇ ಕ್ರಿಯೆ :
ಜ್ಞಾನವೆಂದರೆ ತಿಳಿಯುವುದು, ಕ್ರಿಯೆಯೆಂದರೆ ತಿಳಿದಂತೆ ಮಾಡುವುದು.
ಪರಸ್ತ್ರೀ ಭೋಗಿಸಬಾರದೆಂಬುದೇ ಜ್ಞಾನ ;
ಅದರಂತೆ ಆಚರಿಸುವುದೇ ಕ್ರಿಯೆ; ಅಂತು ಆಚರಿಸದಿದ್ದರೆ
ಅದೇ ಅಜ್ಞಾನ ನೋಡಾ. ಕೂಡಲ ಚೆನ್ನಸಂಗಮದೇವಾ!"

ಆದುದರಿಂದ ಷಟ್‌ಸ್ಥಲದ ಸೌಪಾನಿಕ ವಿಕಾಸಕ್ರಮದಲ್ಲಿ ಮಾಡುವ ಭಕ್ತನಿಗೆಯೇ ಮೊದಲನೆಯ ಸ್ಥಾನ:

"ಕಿಂಕುರ್ವಾಣತೆಯಿಂದ ಉಳ್ಳುದನರಿತು ಮಾಡುವಲ್ಲಿ ಭಕ್ತ; ನಿಷ್ಠೆ ನಿಬ್ಬೆರಸಿ ಗಟ್ಟಿಗೊಂಡು, ಅಭಿಲಾಷೆ ಸಮನಿಸದೆ, ಪರಿಚ್ಛೇದ ಬುದ್ಧಿಯುಳ್ಳಲ್ಲಿ ಮಾಹೇಶ್ವರ, ಅನರ್ಪಿತವ ಸಮನಿಸದೆ ಬಂದು ಕಾಯದ ಕರಣದ ಕೈಗಳಲ್ಲಿ ಕೊಟ್ಟು ಲಿಂಗಸಹಿತ ಭೋಗಿಸುವಲ್ಲಿ ಪ್ರಸಾದಿ; ಪ್ರಾಣಕ್ಕೆ ಪ್ರಾಣವಾಗಿ, ಕಾಲಸ್ಥಿತಿಯನರಿದು, ಎಚ್ಚರಿಕೆ ಕುಂದದಿಪ್ಪಲ್ಲಿ ಪ್ರಾಣಲಿಂಗಿ; ತನಗೆ ಲಿಂಗವಾಗಿ ಲಿಂಗಕ್ಕೆ ತಾನಾಗಿ ಹೆಚ್ಚು ಬೇರಿಲ್ಲದಿರ್ದಡೆ ಶರಣ; ಸದಾಚಾರ ಸಂಪತ್ತಿನಲ್ಲಿ ಬಂದ ಅನುಭಾವವನು ಮೀರಿ ಹೆಸರಡಗಿದ ಸುಖವದು ಲಿಂಗೈಕ್ಯ, ಕೂಡಲ ಚೆನ್ನಸಂಗಮದೇವಾ."

ಈ ಸದಾಚಾರ ಸಂಪತ್ತು ಯಾವುದು?

"ಸದಾಚಾರಿಯಾದೊಡೆ...ಒಬ್ಬರಿಗೊಬ್ಬರು ಶರಣೆಂಬುದೇ ಸರ್ವತೀರ್ಥ;
ಆ ಭಕ್ತನ ದೇಹವೇ ತ್ರಿಕೂಟದ ಶಿವಾಲಯ, ವಿನಯವೇ ಅಗ್ಗವಣಿ,
ಸಜ್ಜನವೇ ಮಜ್ಜನ, ಸದಾನಂದ ಹಿತವೇ ಲಿಂಗಪೂಜೆ, ಸತ್ಯವೇ
ಅಡ್ಡಣಿಗೆ, ಸಮತೆ ಹರಿವಾಣ, ಮನವೇ ಮೀಸಲು, ಗುರುವು
ಲಿಂಗವಾರೋಗಣೆಯ ಮಾಡುತ್ತಲಿರಲು ಹರುಷವೇ ಹಸ್ತಮಜ್ಜನ,
ಪ್ರೀತಿಯೇ ಕರ್ಪೂರವೀಳ್ಯ, ಕಲಿತನವೇ ಜಾಗಟೆ, ವಿರಕ್ತಿ ಮದ್ದಳೆ"

ಹೀಗೆ ದೇಹದಲ್ಲಿ ನಡೆಯುವ ವ್ಯಾಪಾರಗಳನ್ನೇ ಶುದ್ಧೀಕರಿಸಿ, ಉದಾತ್ತೀಕರಿಸಿ, 'ಒಡಲುಗೊಂಡು, ಒಡಲುಪಿಡಿಯದೆ, ಒಡಲಿಲ್ಲದ ನಿಜವ ಬೆರಿಸುವ' ಭೇದವನ್ನು ತಿಳಿಸುವವರಲ್ಲಿ ಗಣ್ಯನೆನೆಸಿದ್ದಾನೆ ಚೆನ್ನಬಸವಣ್ಣ. ಇದೊಂದು ಅದ್ಭುತರೂಪಕ:

"ಕಾಯಪುರವೆಂಬ ಪಟ್ಟಣದೊಳಗೆ ಮನವೆಂಬರಸು, ತ್ರಿಕರಣವೆಂಬ ಪ್ರಧಾನಿ, ವಶೀಕರಣವೆಂಬ ಶಾನುಭೋಗ, ಆಶೆ ರೋಷವೆಂಬ ದ್ವಾರಪಾಲಕರು, ತ್ರಿಮಲವೆಂಬ ಕೋಟೆ, ಬಂಧಿಸುವ ಹಸಿವು–ತೃಷೆ–ವಿಷಯಾದಿಗಳ ಬೊಬ್ಬೆಯಬ್ಬರ! ಪಂಚೇಂದ್ರಿಯಗಳೆಂಬ ಕಾಹುಲು ಕವಿವುತ್ತಿದೆ; ಅರಿಷಡ್ವಾದಿಗಳ ಪೆರ್ಬಲದ ಗುಂಪಿನ ಆರ್ಭಟಿಸುವ ಸಂಚಲವೆಂಬ ತೇಜಿ, ಅಷ್ಟಮದವೆಂಬ ಎಂಟಾನೆ, ಮೊದಲ ನಾಯಕರಿಪ್ಪತ್ತೈದು ಮಂದಿ, ಪ್ರಜೆ ಪಸಾಯತರು ನೂರನಾಲ್ವತ್ತೆಂಟು, ದೇಹ ವಿಕಾರದ ಸರಿಗಳ ಸಂದಣಿ, ಈರೈದು ಮೂವರ ಕಂಟಕವತ್ತುಗ್ರ, ಮುದುವರಿದ ಕಹಳೆಯ ಮೋಹರದ ಸಂಭ್ರಮ! ದುರ್ಮದವೆಂಬ ರಾಜೇಂದ್ರನು ನಿತ್ಯತ್ವದಿಂದ ರಾಜ್ಯಂ ಗೈಯ್ಯುತ್ತಿರಲು ಶೂನ್ಯವೆಂಬ ಪಟ್ಟಣದೊಳಗೆ ಅನಾಮಯನೆಂಬ ಶರಣ ಸುಸ್ವತಂತ್ರ ಲೀಲೆಯಿಂದೆಚ್ಚತ್ತು ನೋಡಿ ಗಹಗಹಿಸಿ ನಗುತ್ತಿಹನು!" ಹೀಗೆ ಇನ್ನೂ ಮುಂದುವರಿದು ಪ್ರಣವದ ಪ್ರಭೆಯ ಜ್ಯೋತಿರ್ಮಯ ಲಿಂಗದಲ್ಲಿ ಸ್ವೈರಗಾದ ನಿಜಶರಣನ ವಿಜಯಘೋಷದಲ್ಲಿ ಮುಗಿವ ಈ ವಚನವನ್ನೋದಿ ಚೆನ್ನಬಸವಣ್ಣನ ಬಗ್ಗೆ ಅವನ ಮಾತಿನಲ್ಲಿಯೇ,

"ಸಿಡಿಲ ಮಿಂಚಿನ ಬೆಳಗನೊಂದೆಡೆಯಲ್ಲಿ ಹಿಡಿಯಲುಂಟೆ?
ಈ ಉಭಯ ಒಂದಾದವರ ಕಂಡರೆ ನೀನೆಂಬೆ, ಚೆನ್ನಸಂಗಯ್ಯ"

ಎಂದು ನುಡಿಯಬೇಕೆನ್ನಿಸುತ್ತದೆ. 'ಆತನು ಬೌದ್ಧಿಕ ಸಾಮ್ರಾಜ್ಯದ ನಿರಂಕುಶ ಚಕ್ರವರ್ತಿ. ಪ್ರತಿವಾದಿಗಳು ತಲ್ಲಣಿಸಿ ಹೋಗುವಂತಹ ಪ್ರತಿಭೆ–ಪ್ರಚಂಡತೆ ಆತನದು' ಎಂದ ವಚನ ವಿದ್ಯಾಶ್ರೀ ಎಂ. ಆರ್. ಶ್ರೀ ಅವರ ಮಾತು ಅಕ್ಷರಶಃ ನಿಜವಾದುದು.

ಷಟ್‌ಸ್ಥಲ ಸಿದ್ಧಾಂತಕ್ಕೆ ಸುಭದ್ರವಾದ ಶಾಸ್ತ್ರೀಯವಾದ ತಳಹದಿಯನ್ನು ಹಾಕಲು ಹೊರಟಿದ್ದ ಚೆನ್ನಬಸವಣ್ಣ ಬಿಡಿವಚನಗಳನ್ನು ಬರೆದು ತೃಪ್ತನಾಗಲಿಲ್ಲ. ಕರಣಹಸುಗೆ, ಮಿಶ್ರಾರ್ಪಣ, ಪದಮಂತ್ರಗೋಪ್ಯ, ಮಂತ್ರಗೋಪ್ಯ, ಕಾಲಜ್ಞಾನಗಳನ್ನೂ ಬರೆದು ಅದಕ್ಕೆ ಶಾಶ್ವತವಾದ ಸ್ವರೂಪವನ್ನು ತಂದು ಕೊಟ್ಟಿದ್ದಾನೆ. ಷಟ್‌ಚಕ್ರದ ವಚನ, ರಾಜಯೋಗದ ವಚನ, ರುದ್ರಭಾರತ ಸೃಷ್ಟಿ–ಎಂಬ ಕೃತಿಗಳನ್ನು ರಚಿಸಿದನೆಂದು ವದಂತಿಯಿದೆ. ಇವುಗಳೆಲ್ಲ ಮಹತ್ವದ ಕೃತಿಗಳು. ಇಂದಿಗೂ ಷಟ್‌ಸ್ಥಲ ರಹಸ್ಯವನ್ನು ಅರಿಯಲೆಳಸುವವರಿಗೆ ಇವು ಕೈದೀವಿಗೆಗಳು. ಕರಣಹಸಿಗೆ, "ಒಬ್ಬಾನೊಬ್ಬ ಒಕ್ಕಲಿಗನು ಮಳೆಯ ಹದದಿ ಭೂಮಿಯ ಬೆಳೆಯ ನರಿದು ಹರಗಿ, ಹಸನುಮಾಡಿ, ಹದಿನೆಂಟು ಧಾನ್ಯಗಳನ್ನು ಬಿತ್ತಿ, ಸುರಕ್ಷಿತವಾಗಿ ಸಲಹಿ, ಫಲಪೂರಿತವಾದ ಬಳಿಕ ಕೊಯ್ದು, ಕಟ್ಟಿ, ಬಣವೆಯನೊಟ್ಟಿ, ಕಣಮಾಡಿ ಒಕ್ಕಿ ರಾಶಿಯಂ ಮಾಡಿದ ಬಳಿಕ–ಇಷ್ಟು ಗೋಧಿ, ಇಷ್ಟು ಜೋಳ–ಸೆಜ್ಜೆ, ಇಷ್ಟು ತೊಗರಿ, ಅವರಿ, ಹೆಸರು ಇಷ್ಟಿಷ್ಟಾದುವೆಂದು ಅಳೆದಳೆದು ಬೇರೆಮಾಡುವ ಹಾಗೆ–ಈ ಬ್ರಹ್ಮಾಂಡವೆಂಬ ಕ್ಷೇತ್ರಕ್ಕಧಿಪತಿಯಪ್ಪ ಪರಶಿವನೆಂಬ ಹಲಾಯುಧನು (ಒಕ್ಕಲಿಗನು) ಬಿತ್ತಿದ ತತ್ತ್ವಂಗಳ" ವಿಭಾಗಮಾಡಿ ತೋರಿಸಿದ ಗ್ರಂಥ. ಅದರಲ್ಲಿ ದೇಹದ ರಚನೆ, ಮನಸ್ಸಿನ ವ್ಯಾಪಾರ, ಇಂದ್ರಿಯಾದಿಗಳ ಕಾರ್ಯ, ಸಪ್ತವ್ಯಸನಗಳು, ಷಡೂರ್ಮಿಗಳು ಮೊದಲಾದುವನ್ನೆಲ್ಲ ವಿಶದವಾಗಿ ವರ್ಣಿಸಲಾಗಿದೆ. ಷಟ್‌ಸ್ಥಲಕ್ಕೆ ಪೀಠಿಕೆಯಾಗಿ ಪರವಸ್ತುವಿನ ಸ್ವರೂಪ, ನಿಷ್ಕಲ, ಸಕಲನಿಷ್ಕಲ ಮತ್ತು ಸಕಲಗಳನ್ನೂ ಸಾದಾಖ್ಯಗಳನ್ನೂ ಮೂವತ್ತಾರು ತತ್ತ್ವಗಳನ್ನೂ ವಿವರಿಸಿ ಲಿಂಗದ ಉತ್ಪತ್ತಿ, ಪ್ರವೃತ್ತಿ ಮಾರ್ಗದಲ್ಲಿ ದೇಹೋಪಾದಿಗಳು ಬಂದು ಸೇರುವ ಕ್ರಮ, ನಿವೃತ್ತಿ ಮಾರ್ಗದಲ್ಲಿ ಅವುಗಳಿಂದ ಬಿಡುಗಡೆ ಹೊಂದುವ ಕ್ರಮ–ಇತ್ಯಾದಿಗಳನ್ನೆಲ್ಲ ಮನಂಬುಗುವ ಶೈಲಿಯಲ್ಲಿ ನಿರೂಪಿಸಿದ್ದಾನೆ. 'ವಿಜಯ ಬೈರವಿ'ಯೆಂಬ ಆಗಮ ಇದಕ್ಕೆ ಆಕರವಾಗಿ ಇದ್ದಿರಬಹುದಾದರೂ ಕನ್ನಡದಲ್ಲಿ ಇಂಥ ಗಡುಚಾದ ವಿಷಯವನ್ನು ಇಷ್ಟು ಲೀಲಾಜಾಲವಾಗಿ ಪ್ರಥಮತಃ ವಿವರಿಸಿದ ಶ್ರೇಯಸ್ಸು ಚೆನ್ನಬಸವಣ್ಣನದೇ. ಮುಂದೆ ಬಂದವರೆಲ್ಲ ಈ ವಿಷಯದಲ್ಲಿ ಈತನ ಹೆಜ್ಜೆಯಲ್ಲಿ ಹೆಜ್ಜೆಯನ್ನಿಟ್ಟು ಸಾಗಿದ್ದಾರೆ. ಶತಮಾನಗಳ ತರುವಾಯ ಬಂದ ಮರಿತೋಂಟದಾರ್ಯರಂಥ ಮಹಾ ಜ್ಞಾನಿಗಳೂ–

"ಶಿವತತ್ವಾಮೃತಾಸ್ವಾದ ಚೇತಸೇ ಯೋಗಿನೇ ನಮಃ
ಶ್ರೀ ಚೆನ್ನಬಸವೇಶಾಯ ಷಟ್‌ಸ್ಥಲ ಬ್ರಹ್ಮವಾದಿನೆ"

ಎಂದವನನ್ನು ಮುಕ್ತಕಂಠದಿಂದ ಕೀರ್ತಿಸಿದ್ದಾರೆ.

"ಮಿಶ್ರಾರ್ಪಣದಲ್ಲಿ ತ್ರಿವಿಧಾರ್ಪಣದ ಸ್ವರೂಪ, ಸುಬುದ್ಧಿ–ನಿರಂಹಕಾರ–ಸೌಮನಸ್ಯ–ಸುಜ್ಞಾನ–ಸದ್ಭಾವಗಳ ನೆಲೆಗಳು, ತ್ರಯಾಂಗ–ತ್ರಿಲಿಂಗಗಳ ವಿವರಣೆ ಇತ್ಯಾದಿಗಳಿವೆ. 'ಪದಮಂತ್ರ ಗೋಪ್ಯ'ದಲ್ಲಿ ಸಿದ್ಧರಾಮಣ್ಣನಿಗೆ ಶಿವಯೋಗದ ಸ್ವರೂಪವನ್ನು ವಿವರಿಸಲಾಗಿದೆ. ಘಟಚಕ್ರದಲ್ಲಿ

ಸೃಷ್ಟಿಯ ಉತ್ಪತ್ತಿ–ಸ್ಥಿತಿ–ಲಯಗಳು, ಶರೀರದ ರಚನೆ, ಜೀವ–ದೇಹಗಳ ವಿವಿಧ ಚೇಷ್ಟೆಗಳು, ಯೋಗ ಚತುಷ್ಟಯದ ಲಕ್ಷಣಗಳು, ಶಿವಯೋಗದ ಲಕ್ಷಣ ಮೊದಲಾದವುಗಳ ವಿಸ್ತೃತ ಉಲ್ಲೇಖವಿದೆ. ಕಾಲಜ್ಞಾನ, ಕಲ್ಯಾಣ ವರ್ಣನೆಗಳಲ್ಲಿ ಗಂಭೀರ ಗದ್ಯದ ಗತಿ ವಿಲಾಸವಿದೆ. ಈ ಆರು ಕೃತಿಗಳಲ್ಲಿ ತನ್ನ ತಿಳಿವಿನ ಹೆಬ್ಬೆಳಸನ್ನು ತೂರಿಬಿಟ್ಟಿದ್ದಾನೆ ಚೆನ್ನಣ್ಣ. 'ಒಬ್ಬರ ಕಂಡೊಬ್ಬರು ಮಾಡುವರಲ್ಲದೆ ತಮ್ಮ ತಾವು ವಿಚಾರಿಸಿಕೊಳ್ಳಲರಿಯರು. ಇಂತೀ ವಿವರವನರಿಯದ ಅಜ್ಞಾನಿಗಳ ಭಕ್ತ ಮಾಹೇಶ್ವರರೆನಲಾಗದಯ್ಯ' ಎಂದು 'ಛೀ' ಎಂದು ಚೆನ್ನಣ್ಣನು ಈ ಆರು ಕೃತಿಗಳಲ್ಲಿ ವಿವರಗಳನ್ನು ಒದಗಿಸಿ ಎಲ್ಲರೂ ತಮ್ಮ ಅಜ್ಞಾನವನ್ನೂ ಅಲ್ಪಜ್ಞಾನವನ್ನೂ ನೀಗಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾನೆ. ಅರ್ಥಮರ್ಥ ಜನರೆಂದರೆ ಅವನಿಗಾಗದು. 'ಅರೆ ಭಕ್ತರಾದವರ ನೆರೆಯಲ್ಲಿರಲಾಗದು!' ಎಂದು ಸ್ಪಷ್ಟವಾಗಿ ಹೇಳಿದ್ದಾನೆ.

ಆದರೆ ಸಾಧಕರ ಬಗ್ಗೆ ಸಹಾನುಭೂತಿ ಸಾಕಷ್ಟಿದೆ ಅವನಲ್ಲಿ. "ನಿಧಾನವನಗಿವೆನೆಂದು ಹೋದರೆ ವಿಘ್ನಬಪ್ಪುದು ಮಾಬುದೇ ಅಯ್ಯ? ಸದಾಶಿವನ ಪೂಜಿಸುವೆನೆಂದು ಹೋದರೆ ತುರುಬಿ ಹಿಡಿವವಯ್ಯ ಸಕಲ ವಿಪತ್ತುಗಳು! ಎದೆ ಭಂಗವಿಲ್ಲದೆ ನಿಲ್ಲಬಲ್ಲಡೆ ಸದಮಲ ಸುಖವೀವ, ನಮ್ಮ ಕೂಡಲ ಚೆನ್ನಸಂಗಮದೇವ" ಎಂದು ಸಾಧಕರಿಗೆ ಧೈರ್ಯವಿತ್ತನಾತ. ಲೋಕದ ಲೋಗರ ಮಾತಿಗೆ ಕಿವಿಗೊಡಬೇಡಿರಿ. ಅವರಿಗೆ ಶರಣರ ನಡೆ ಅರ್ಥವಾಗದು. ಅವರನ್ನು ಮೆಚ್ಚಿಸುವುದು ಆಗದ ಮಾತು.

"ಸರ್ವಸಂಗ ಪರಿತ್ಯಾಗ ಮಾಡಿದ ಶಿವಶರಣನ ಲೋಕದ
ಸಂಸಾರಿಗಳೆಂತು ಮೆಚ್ಚುವರಯ್ಯ?
ಊರೊಳಗಿದ್ದರೆ ಉಪಾಧಿಕನೆಂಬರು, ಅಡವಿಯೊಳಗಿದ್ದರೆ ಮೃಗನೆಂಬರು,
ಹೊನ್ನಬಿಟ್ಟರೆ ದರಿದ್ರನೆಂಬರು, ಹೆಣ್ಣಬಿಟ್ಟರೆ ನಪುಂಸಕನೆಂಬರು,
ಪುಣ್ಯವಬಿಟ್ಟರೆ ಪೂರ್ವಕರ್ಮಿಯೆಂಬರು, ಮಾತನಾಡದಿದ್ದರೆ ಮೂಗನೆಂಬರು,
ಮಾತನಾಡಿದರೆ 'ಜ್ಞಾನಿಗೇಕಯ್ಯ ಮಾತು?' ಎಂಬರು,
ನಿಜವನ್ನಾಡಿದರೆ ನಿಷ್ಠುರಿ ಎಂಬರು, ಸಮತೆಯ ನುಡಿದರೆ ಅಂಜುವನೆಂಬರು,
ಇದು ಕಾರಣ ಕೂಡಲ ಚನ್ನಸಂಗಯ್ಯ–ನಿಮ್ಮ ಶರಣ
ಲೋಕದಿಚ್ಛೆಗೆ ನುಡಿಯ, ಲೋಕದಿಚ್ಛೆಗೆ ನಡೆಯ!"

ಲೋಕದಿಚ್ಛೆಗೆ ನುಡಿಯದೆ ಲಿಂಗದ ನುಡಿಯಾಗಿ, ಲಿಂಗಮೆಚ್ಚಿ ಅಹುದೆನ್ನುವಂತೆ ನುಡಿಯಿರಿ; ಲೋಕದಿಚ್ಛೆಗೆ ನಡೆಯದೆ ಸ್ವತಂತ್ರಶೀಲರಾಗಿ ಶಿವಾಚಾರದ ಪಥದಲ್ಲಿ ಮುನ್ನೆಡೆಯಿರಿ. ಸದಾಚಾರವೇ ಶಿವಾಚಾರ, ಅನಾಚಾರವೇ ಭವಾಚಾರ. ಶಿವಾಚಾರಿಯಾದವನು 'ಅನ್ಯರ ಕೈಯಾಂತು ಬೇಡ; ಲಿಂಗವ ಮುಟ್ಟಿದ ಕೈ ಮೀಸಲು, ಕಂಗಳಲ್ಲಿ ಒಸೆದು ನೋಡ ಪರವಧುವ; ಮನದಲ್ಲಿ ನೆನೆಯ ಪರಹಿಂಸೆಯ; ಲಿಂಗವ ಪೂಜಿಸಿ ಲಿಂಗವ ಬೇಡ; ಆ ಲಿಂಗದ ಹಂಗನೊಲ್ಲ." ಪರಧನ, ಪರಸ್ತ್ರೀ, ಪರನಿಂದೆ, ಪರಹಿಂಸೆ, ಹುಸಿ; ಕಳವು, ವಿಷಯಾದಿಗಳನ್ನು ಹೊದ್ದಲೀಯದೆ ಸದಾಚಾರದ ಹೆದ್ದಾರಿಯಲ್ಲಿ ನಡೆದು, ಗತಿ–ಪಥ ಮುಕ್ತಿಯ ಬಯಸಿ ಮಾಡದೆ, ಕೈಲಾಸವೆಂಬುದೊಂದು ಹುಲುಮೊರಡಿಯ ಹಾಗೆಂದು ತಿಳಿದು, ಮನದ ಮತ್ಸರವ ಕಳೆದು, ಮನದ ಕೊನೆಯ ಮನೆಯ ಮೇಲೆ ಲಿಂಗವ ಕುಳ್ಳಿರಿಸಿ, ತನುಗುಣವ ಕಳೆದು ಪ್ರಸಾದ ಕಾಯವ ಮಾಡಿ, ಧನಗುಣವ ಕಳೆದು ಮಮಕಾಯವೆನಿಸಿ,

ಅರಿಷಡ್ವರ್ಗಮಲತ್ರಯಗಳೆಂಬ ಭವಿಗಳನು ಅತಿಗಳೆದು, ಅನ್ನಪಾನಾದಿಗಳ ಹಂಗನಳಿದು, ಅಹಂಕಾರ ಮಮಕಾರಂಗಳನಳಿದು, ಮಹದಾಶ್ರಯದಲ್ಲಿ ಮನಲೀಯವಾಗಿ. ಲಿಂಗವನೊಂದನೇ ನೆನೆದು, ಲಿಂಗಕ್ಕೆಂದೇ ಭಾವಿಸಿ, ಲಿಂಗಕ್ಕೆಂದೇ ನಿಃಕಾಮಿಯಾಗಿ ಕಾಮಿಸಿ, ಲಿಂಗಕ್ಕೆಂದೇ ಬಯಸಿ ಲಿಂಗಪ್ರಾಣಿ ಮಾಗಬೇಕು. 'ನಿಮ್ಮ ಕರಣಂಗಳೇ ಎನ್ನ ಹರಣಂಗಳಾಗಿ, ಎನ್ನ ಹರಣ ಕರಣಂಗಳೇ ನಿಮ್ಮ ಕಿರಣಂಗಳಾಗಿ ಇರುವ ಕಾರಣ ಕೂಡಲ ಚೆನ್ನಸಂಗಮದೇವಾ, ನೀನಾಡಿದಂತೆ ನಾನಾಡಿದೆನಯ್ಯ!' ಎಂದು ಹೇಳುವಂತಾಗಬೇಕು. ಕೊನೆಗೆ,

> **"ನಿಷ್ಠೆಯುಳ್ಳಾತಂಗೆ ನಿತ್ಯ ನೇಮದ ಹಂಗೇಕೆ?**
> **ಸತ್ಯವುಳ್ಳಾತಂಗೆ ತತ್ವವಿಚಾರದ ಹಂಗೇಕೆ?**
> **ಮನಶುದ್ಧವುಳ್ಳಾತಂಗೆ ಮಂತ್ರದ ಹಂಗೇಕೆ?**
> **ಅರಿವುಳ್ಳಾತಂಗೆ ಅಗ್ಗವಣಿಯ ಹಂಗೇಕೆ?**
> **ಭಾವಶುದ್ಧವುಳ್ಳಾತಂಗೆ ಹೂವಿನ ಹಂಗೇಕೆ?**
> **ಕೂಡಲ ಚೆನ್ನಸಂಗಯ್ಯ, ನಿಮ್ಮನರಿದಾತಂಗೆ ನಿಮ್ಮ ಹಂಗೇಕೆ?"**

ಎಂದು ಕೇಳುವ ಕೆಚ್ಚು ಬರಬೇಕು. ಇದು ಚೆನ್ನಬಸವಣ್ಣನ ಪ್ರಸನ್ನವಾಣಿ.

ಈ ಉದಾರವಾಣಿಯನ್ನು ಕೇಳಿದ ಕಿವಿಗಳು ಕೃತಾರ್ಥವಾದುವು. 'ತಾನಳಿದು, ತಾನುಳಿದು, ಸಹಜ ನಿಜಪದವಿಯಲ್ಲಿ ಕೂಡಲ ಚೆನ್ನ ಸಂಗಯ್ಯನಲ್ಲಿ ತಾನು ತಾನಾದ' ಚೆನ್ನಬಸವಣ್ಣನನ್ನು 'ಷಟ್‌ಸ್ಥಲ ಚಕ್ರವರ್ತಿ'ಯೆಂದು, 'ಯುಗಜಗವ ಮೀರಿದ ಶರಣ'ನೆಂದು ಗೌರವಿಸಿದರು ಶರಣರು. 'ಕೂಡಲ ಚೆನ್ನ ಸಂಗಯ್ಯನಲ್ಲಿ ಸಾಹಿತ್ಯವನರಿದ ಪ್ರಸಾದಿಶರಣ'ನಾತ, 'ಆರಾದರೂ ನಿಮ್ಮ ನೆನೆವರಯ್ಯ. ನಾ ನಿಮ್ಮ ನೆನೆವನಲ್ಲ, ಅದೇನು ಕಾರಣವೆಂದರೆ, ನಿಮ್ಮ ನೆನೆವ ಮನ ನೀವೆಯಾದಿರಾಗಿ!' ಎಂದು ಸಾರುವ ಆತನ ನಿಲವನ್ನು ಯಾರು ಬಣ್ಣಿಸಬಲ್ಲರು?

> **"ತನು ನಿಮ್ಮನಪ್ಪಿ ಮಹಾತನುವಾದ ಬಳಿಕ ಮನವೆಂಬುದು ಮತ್ತೆಲ್ಲಿಯದೋ?**
> **ಮನ ನಿಮ್ಮನಪ್ಪಿ ಘನಮನವಾದ ಬಳಿಕ ಮನವೆಂಬುದು ಮತ್ತೆಲ್ಲಿಯದೋ?**
> **ಪ್ರಾಣ ನಿಮ್ಮನಪ್ಪಿ ಪ್ರಾಣಪಥದಲ್ಲಿ ಸಿಲುಕಿದ ಬಳಿಕ**
> **ಪ್ರಾಣವೆಂಬುದು ಮತ್ತೆಲ್ಲಿಯದೊ?"**

ಎಂದು ಕೇಳುವ ಆತನ ಎತ್ತರವನ್ನು ಯಾರು ಅಳೆಯಬೇಕು?

"ಎಲ್ಲರ ವರ್ಣಿಸಬಹುದು; ಎನ್ನ ನಲ್ಲ ಗುರುದೇವನ ವರ್ಣಿಸಲಾರದು. ಅಲ್ಲನ ನುಡಿಸಬಹುದು; ಎನನಲ್ಲ ಕಪಿಲಸಿದ್ದೇಂದ್ರನ ರೂಪು, ಚೆನ್ನಬಸವನ ನುಡಿಸಿ ಗೆಲ್ಲಬಾರದು ಖುಲ್ಲತನದಿಂದಲಾದರೂ ಕಲ್ಲಯ್ಯ" ಎಂದು ಸಿದ್ಧರಾಮಯ್ಯನಂಥವರು ನುಡಿದಿರುವಾಗ ಸಿದ್ದಯ್ಯನ ಪಾಡೇನು?

ಅನುಭವ ಮಂಟಪದಿಂದ ಅಮೃತ ಹರಿಯುತ್ತಿತ್ತು. ಅದನ್ನುಂಡವರು ಅಮರರಾಗುತ್ತ ನಡೆದಿದ್ದರು. ಚೆನ್ನಬಸವಣ್ಣನಿಗೆ ಸಂತಸವೇ ಸಂತಸ, ಸಂಭ್ರಮವೇ ಸಂಭ್ರಮ. 'ಸತ್ಯಸದಾಚಾರವ ಹರಹಿ ಮರ್ತ್ಯರ ಪಾವನ ಮಾಡಿದ' ಬಸವಣ್ಣ ಭುವಿಗೆ ಬರಲು 'ಮರ್ತ್ಯಲೋಕ ಶಿವಲೋಕವೆಂಬುದೊಂದು ನಿಚ್ಚಣಿಗೆಯಾದುವು ನೋಡಾ!' ಎಂದೆನಿಸಿತವನಿಗೆ. 'ಸಕಲ ಧರ್ಮಂಗಳಂ ತೀವುವ ಕರಂಡಗೆಯನಿಸಿಪ್ಪ ಸತ್ಯದ ಸಾಗರ, ಭಕ್ತಿಯ ತವರ್ಮನೆ, ಮುಕ್ತಿಗೆ ಮುಖ, ಪುಣ್ಯದ ಪುಂಜ, ಅಭಿನವ ಕೈಲಾಸ'ಕಲ್ಯಾಣದಲ್ಲಿ ರುದ್ರಲೋಕವೆ ಮರ್ತ್ಯಲೋಕಕ್ಕಿಳಿದಂತಿದ್ದಿತು. ಅಲ್ಲಿ ಸತ್ಯರು ಸಾತ್ವಿಕರು, ನಿತ್ಯರು, ನಿಜೈಕ್ಯರು, ಮಹಾಜ್ಞಾನಿಗಳು,

ಪರಮಶಿವಯೋಗಿಗಳು, ಶಿವಾನುಭಾವಸಂಪನ್ನರು, ಶಿವಲಿಂಗಪ್ರಾಣಿಗಳು, ಶಿವಪ್ರಸಾದ ಪಾದೋದಕ ಸಂಬಂಧಿಗಳು, ಶಿವಾಚಾರವೇದ್ಯರು, ಶಿವಾಗಮಸಾಧ್ಯರು ಸಾವಿರ ಸಾವಿರ ಸಂಖ್ಯೆಯಲ್ಲಿ ಸೇರಿದ್ದರು. ಅವರನ್ನು ಕಂಡು, 'ಗುರುಸ್ಥಲವೆಂಬುದು ತಾನು ಸ್ವಯಂಜ್ಯೋತಿ ಪ್ರಕಾಶವು. ಅಂತಪ್ಪ ಸ್ವಯಂಜ್ಯೋತಿ ಪ್ರಕಾಶವಂ ತಂದು ಉರಿಜ್ಯೋತಿಯ ಹೊತ್ತಿಸಿದೊಡೆ ಆ ಜ್ಯೋತಿತನ್ನಂತೆ ಮಾಡಿತ್ತು!' ಎಂದು ಹಾಡಿದ ಚೆನ್ನಬಸವಣ್ಣ–'ದೀಪಾದ್ದೀಪ ಇವೋತ್ಸಿತಃ' ಎಂದು ಕಾಳಿದಾಸ ಹಾಡಿದಂತೆ.

ಬಸವ–ಬಿಜ್ಜಳರ ಸಂಬಂಧವನ್ನು ಚೆನ್ನಣ್ಣ ಬಣ್ಣಿಸಿದಂತೆ ಇನ್ನಾರೂ ಬಣ್ಣಿಸಿಲ್ಲ, ಇಂತೀ ಅಸಂಖ್ಯಾತರಿಗೆ ಒಡನಾಡಿಯಾಗಿದ್ದತ ಸಂಗನ ಬಸವಣ್ಣ–ಸತ್ಯಸಾತ್ವಿಕ ಬಸವಣ್ಣ, ನಿತ್ಯನಿಜೈಕ್ಯ ಬಸವಣ್ಣ. ಇಂತಹ ಬಸವಣ್ಣನ ಭಕ್ತಿಯನು ಒರೆಮೊರೆದು ನೋಡಿ ಪ್ರಬಲಿತವ ಮಾಡುವ ಅಶ್ವಪತಿ ಗಜಪತಿ ನರಪತಿರಾಯ ರಾಜಾಧಿರಾಜ ಬಿಜ್ಜಳರಾಯನು. 'ಪರವಾದಿ ಬಿಜ್ಜಳನು ಒರೆಗಲ್ಲ ಹಿಡಿದು ಶಿವಭಕ್ತಿಯ ಸಂಪಾದನೆಯ ಮಾಡುವಲ್ಲಿ ಮೂವತ್ತಾರು ಕೊಂಡೆಯರ ಪರಿಹರಿಸಿ, ಶಿವಾಚಾರದ ಧ್ವಜವನೆತ್ತಿಸಿದನಯ್ಯಾ ಬಸವಣ್ಣನು!' ಅವರಿಬ್ಬರಲ್ಲಿ ಘರ್ಷಣವಿದ್ದಿತೆಂಬುದು ಗಾಳಿಗೋಪುರವಾಗುವುದಿಲ್ಲವೆ ಇದನ್ನೋದಿ?

"ನಿಮ್ಮ ಸಂಗನ ಬಸವಣ್ಣ ಬಂದು ಕಲ್ಯಾಣದಲ್ಲಿ ಒಂದು ಮನೆಯ ಕಟ್ಟಿದರೆ ಮರ್ತ್ಯಲೋಕವೆಲ್ಲವೂ ಭಕ್ತಿಸಾಮ್ರಾಜ್ಯವಾಯಿತು. ಆ ಮನೆಗೆ ತಲೆಬಾಗಿ ಹೊಕ್ಕವರೆಲ್ಲರೂ ನಿಜಲಿಂಗ ಪದಮಂ ಪಡೆದರು" ಎಂದು ಸಿದ್ಧರಾಮಯ್ಯನೂ ಹಿಗ್ಗಿ ಹಾಡಿದ. ಆದರೆ ಕರಣೆಯಿಲ್ಲದ ಕಾಲ ಹೊಂಚು ಹಾಕಿ ಕುಳಿತಿದ್ದ. ಕಲ್ಯಾಣಮೂರ್ತಿ ಬಸವಣ್ಣನವರೇ ಕಲ್ಯಾಣ ಬಿಟ್ಟು ಹೊರಡಬೇಕಾಯಿತು. ಭಾರವಾದ ಹೃದಯದಿಂದ ಹೇಳಿದರು ಚೆನ್ನಬಸವಣ್ಣನಿಗೆ–

"ನಾನು ಬಂದ ಕಾರ್ಯಕ್ಕೆ ನೀವು ಬಂದಿರಿ,
ನೀವು ಬಂದ ಕಾರ್ಯಕ್ಕೆ ನಾನು ಬಂದೆ,
ನಾನೂ ನೀವೂ ಬಂದ ಕಾರ್ಯಕ್ಕೆ ಬಂದಾತನಲ್ಲವಾ ಪ್ರಭುದೇವರು;
ಮುಂದೆ ಕೆಲವು ದಿವಸಕ್ಕೆ
ಕಲ್ಯಾಣವೆಂಬುದು ಪ್ರಣತಿಯಾಯಿತ್ತು,
ನಾನು ತೈಲವಾದೆನು, ನೀವು ಬತ್ತಿಯಾದಿರಿ,
ಪ್ರಭುದೇವರು ಜ್ಯೋತಿಯಾದರು!
ಪ್ರಣತಿ ಒಡೆಯಿತ್ತು, ತೈಲವರತಿತ್ತು, ಜ್ಯೋತಿ ಬಯಲಾಗಿತ್ತು!"

ಹೌದು, ಕಲ್ಯಾಣವೆಂಬ ಪ್ರಣತಿ ಒಡೆಯಿತು! ಭಕ್ತಿಯೆಂಬ ತೈಲವರತಿತು! ಆಚಾರವೆಂಬ ಬತ್ತಿ ಸುಟ್ಟು ಕರಿಕಾಯಿತು! ಶಿವಪ್ರಕಾಶದ ಜ್ಯೋತಿ ಬಯಲಾಯಿತು!

ಶರಣರ ಯೋಗಕ್ಷೇಮದ ಹೊಣೆಯನ್ನು ಚೆನ್ನಬಸವಣ್ಣನ ಉಡಿಯಲ್ಲಿರಿಸಿ, ಮಡಿವಾಳ ಮಾಚಿದೇವ, ಕಿನ್ನರಿ ಬ್ರಹ್ಮಯ್ಯಾದಿಗಳ ಕಾವಲಿರಿಸಿ, ಕಲ್ಯಾಣ ತೊರೆದು ಹೋದರು ಬಸವಣ್ಣನವರು. 'ಲಿಂಗಜಂಗಮ, ಜಂಗಮಲಿಂಗವೆಂಬುದ ತೋರಿ ನಿಜೈಕ್ಯನಾದೆಯಲ್ಲ ನಿಜಗುರು ಬಸವಣ್ಣ! ಪ್ರಸಾದಕಾಯ, ಕಾಯ ಪ್ರಸಾದವೆಂಬುದ ಎನ್ನ ಸರ್ವಾಂಗದಲ್ಲಿ ಪ್ರತಿಷ್ಠಿಸಿ, ಎನ್ನನಾಗುಮಾಡಿ ಮುಂದುವರಿದಿಯಯ್ಯ ಬಸವಣ್ಣ! ಲಿಂಗಪ್ರಾಣ, ಪ್ರಾಣಲಿಂಗವೆಂಬುದ ಎನ್ನಂತರಂಗದಲ್ಲಿ ಸ್ಥಿರಪ್ಯವ ಮಾಡಿ, ಎನ್ನ ನಿನ್ನಂತೆಮಾಡಿ, ನಿಜಲಿಂಗದೊಳಗೆ ನಿರವಯವಾದೆಯಲ್ಲ ಬಸವಣ್ಣ! ಎನ್ನ ಮನವ ಮಹಾತತ್ತ್ವದಲ್ಲಿ ಲಯವ ಮಾಡಿ

ನಿರ್ವಯಲಾದೆಯಲ್ಲಾ ಬಸವಣ್ಣಾ! ನಿನ್ನ ಒಕ್ಕುಮಿಕ್ಕ ಶೇಷವನಿಕ್ಕಿ ಆಗುಮಾಡಿ, ನಿನ್ನಂತರಂಗದಲ್ಲಿ ಅವ್ವೆ ನಾಗಾಯಿಯ ನಿಂಬುಗೊಂಡಡೆ ಎನ್ನ ಮನ ನಿಮ್ಮ ಪಾದದಲ್ಲಿ ಕರಗಿ ಕೊರೆಗಿತ್ತಯ್ಯ ಸಂಗನ ಬಸವಣ್ಣ! ಕೂಡಲ ಚೆನ್ನಸಂಗಯ್ಯಂಗೆ ಸುಜ್ಞಾನ ವಾಹನವಾಗಬೇಕೆಂದು ನಿರವಯವಾದೆಯಲ್ಲಾ ಸಂಗನಬಸವಣ್ಣಾ!" ಎಂದು ಚೆನ್ನಬಸವಣ್ಣ ವಿಲಾಪಿಸಿದನು:

> **"ಬಸವಣ್ಣಾ, ನೀವು ಮರ್ತ್ಯಕ್ಕೆ ಬಂದು ನಿಂದರೆ**
> **ಭಕ್ತಿಯ ಬೆಳವಿಗೆ ದೆಸೆದೆಸೆಗೆಲ್ಲ ಪಸರಿಸಿತಯ್ಯ!**
> **ಸ್ವರ್ಗಮರ್ತ್ಯ ಪಾತಾಳದೊಳಗೆ**
> **ನಿಮ್ಮ ಭಕ್ತಿಯ ಬೆಳವಿಗೆಯ ಘನವವನಾರು ಬಲ್ಲರೂ ಅಣ್ಣಾ!**
> **ಶಶಿಧರನಟ್ಟಿದ ಮಣಿಹ ಪೂರೈಸಿತ್ತೆಂದು ನೀವು ಲಿಂಗೈಕ್ಯವಾದರೆ**
> **ನಿಮ್ಮೊಡನೆ ಭಕ್ತಿಹೋಯಿತ್ತಯ್ಯ! ನಿಮ್ಮೊಡನೆ ಸದಾಚಾರ ಹೋಯಿತ್ತಯ್ಯ!**
> **ನಿಮ್ಮೊಡನೆ ಅಸಂಖ್ಯಾತರು ಹೋದರು ಅಣ್ಣಾ!**
> **ಮರ್ತ್ಯಲೋಕದ ಮಹಾಮನೆ ಶೂನ್ಯವಾಯಿತ್ತು ಬಸವಣ್ಣಾ!**
> **ಎನ್ನನೊಯ್ಯದೆ ಹೋದೆಯಲ್ಲ ಪಂಚಪುರುಷ ಮೂರುತಿ ಬಸವಣ್ಣಾ!**
> **ಬಸವಣ್ಣ ಪ್ರಿಯ ಚೆನ್ನಸಂಗಯ್ಯಂಗೆ**
> **ಪ್ರಾಣಲಿಂಗವಾಗಿ ಹೋದೆಯಲ್ಲಾ ಸಂಗನಬಸವಣ್ಣಾ!"**

ಎಂದು ಅಕ್ಕನಾಗಮ್ಮ ಪ್ರಲಾಪಿಸಿದಳು. ತಮಗೆ ಆಧಾರವಾಗಿದ್ದ ಬಸವಣ್ಣ ಹೊರಟು ಹೋಗಲು ಆ ತಾಯಿ–ಮಗನ ಸ್ಥಿತಿ ಏನಾಗಿರಬೇಡ?

ಆದರೂ ಅಳುತ್ತ ಕೂರುವ ಕಾಲವದಾಗಿರಲಿಲ್ಲ; ಅಳುತ್ತ ಕೂರುವವರೂ ಅವರಾಗಿರಲಿಲ್ಲ. ಕ್ರೂರವಿಧಿಯು ಅಪ್ಪಳಿಸಿದಷ್ಟೂ ಕಲ್ಲಾಗಿ ನಿಂತರವರು. ಧೈರ್ಯದಿಂದ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಿದರು. ಪರಿಸ್ಥಿತಿಯನ್ನು ಹತೋಟಿಗೆ ತರಲು ಹೆಣಗಿದರು. ಶಾಂತಿ ಸ್ಥಾಪಿತವಾಗುವ ಸುಲಕ್ಷಣಗಳೂ ತೋರತೊಡಗಿದ್ದುವು. ಆದರೆ ಉಗ್ರವಾದಿಗಳ ದುಡುಕಿನಿಂದ ಬಿಜ್ಜಳನ ಕೊಲೆಯಾಗಿ ಹೋಯಿತು. ಕಾಲ ಕೈಮೀರಿ ಹೋಯಿತು! ಕಲ್ಯಾಣದಲ್ಲಿ ನಿಲ್ಲಲು ಶರಣರಿಗೆ ಸಾಧ್ಯವಾಗದೆ ಹೋಯಿತು. ಆ ಪ್ರಸಂಗದಲ್ಲಿ ಅಕ್ಕನಾಗಮ್ಮ, ಚೆನ್ನಬಸವಣ್ಣ, ಗಂಗಾಂಬೆಯರು ತೋರಿದ ಧೀರತನ ಯಾವ ಇತಿಹಾಸಕ್ಕಾದರೂ ಅಲಂಕಾರವಾಗಬಲ್ಲುದು.

"ಭಕ್ತನು ಶಾಂತನಾಗಿರಬೇಕು; ತನ್ನ ಕುರಿತು ಬಂದ ಠಾವಿನಲ್ಲಿ ಸತ್ಯನಾಗಿರಬೇಕು; ಭೂತಹಿತವಚನವ ನುಡಿಯಬೇಕು; ಸಕಲ ಪ್ರಾಣಿಗಳ ತನ್ನಂತೆ ಭಾವಿಸುವುದು; ಸಕಲೇಂದ್ರಿಯಗಳ ತನ್ನ ವಶವ ಮಾಡಬೇಕು" ಎಂದು ಶಾಂತಿ–ಮೈತ್ರಿ ಸೈರಣೆ–ಸಂಯಮಗಳ ಸಂದೇಹವನ್ನಿತ್ತಿದ್ದ ಚೆನ್ನಬಸವಣ್ಣನೇ ಶಸ್ತ್ರಧಾರಿಯಾಗಿ ಶರಣರ ಸೇನಾಪತಿಯಾದ–ಶಾಪಾದಪಿ ಶರಾದಪಿ ಎನ್ನುವ ಉಕ್ತಿಗೆ ಸಾಕ್ಷಿಯಾಗಿ! ಶರಣರನ್ನು ಕೂಡಿಕೊಂಡು ಸಾವಿನ ಬಾಯಿಂದ ಹೊರಬೀಳುವಂತೆ ಕಲ್ಯಾಣದಿಂದ ಹೊರಬಿದ್ದ. ಅದುವರೆಗೆ ಆರಾಧನೆ ಮಾಡಿದ ಕೈಗಳು ಆಯುಧ ಧರಿಸಿದುವು ಆತ್ಮರಕ್ಷಣೆಗಾಗಿ! ಶಿವಾಚಾರಿಗಳು ಗಣಾಚಾರಿಗಳಾದರು ಶಿವಗಣದ ರಕ್ಷಣೆಗಾಗಿ! ಅಳಿಯ ಬಿಜ್ಜಳನ ಸೇನೆ ಬೆನ್ನಟ್ಟಿ ಬಂದಿತು ಸೇಡಿಗಾಗಿ! ಮೊದಲು ಮುರಗೋಡದ ಬಳಿಯಲ್ಲಿ ಸಣ್ಣಪುಟ್ಟ ಕದನಗಳಾದವು. ಕೊನೆಗೆ ಕಾತರವಳ್ಳಿಯಲ್ಲಿ ಕಡುತರವಾದ ಕಾಳಗವಾಯಿತು. ಯುದ್ಧರಂಗದಲ್ಲಿ ಅಳಿಯ ಬಿಜ್ಜಳ ಎಚ್ಚರ ತಪ್ಪಿ ಬಿದ್ದುಬಿಟ್ಟನು. ಇನ್ನೇನು ಅವನ ವಧೆಯಾಗಬೇಕು. ಅಕ್ಕ ನಾಗಮ್ಮ ಅಡ್ಡಬಂದು ಅವನ ಪ್ರಾಣ ಉಳಿಸಿದಳು! ಮತ್ತೆ ಹಿಂಸೆಯ ಮೇಲೆ ಅಹಿಂಸೆ ವಿಜಯವನ್ನು ಪಡೆಯಿತು.

ಅಳಿದುಳಿದು ಶರಣರು ಉಳಿವೆಯತ್ತ ನಡೆದರು. ಅಲ್ಲಿ ಪರ್ವತಶ್ರೇಣಿಗಳ ಮಧ್ಯದಲ್ಲಿ ಕಿನ್ನರಿಬ್ರಹ್ಮಯ್ಯನ ನದಿ ಕಲಕಲನಿನಾದ ಮಾಡುತ್ತ ಹರಿಯುತ್ತಿದೆ. ಅದರ ಕಲಕಲರವ ಕಾಡಿನ ಕಂಠದಿಂದ ಹೊರಟ ಕಿನ್ನರಗಾನವೋ ಎಂಬಂತಿದೆ. ಅದರ ದಂಡೆಗಿರುವ ಅದ್ಭುತ ಗುಹೆ ಮಹಾಮನೆಯಲ್ಲಿ ಅವರು ಆಶ್ರಯ ಪಡೆಯುತ್ತಾರೆ. ನದಿಯ ದಿಕ್ಕನ್ನು ತಿರುಗಿಸಿ ಗುಹೆಯ ಬಾಗಿಲ ಮುಂದೆ ಬೀಳ್ ನೀರಾಗಿ ಬೀಳುವಂತೆ ಮಾಡುತ್ತಾರೆ. ಕಂದಕವನ್ನು ತೋಡಿಕೊಂಡು ಸಾಧ್ಯವಿರುವಷ್ಟು ಸುರಕ್ಷಿತತೆಯನ್ನು ಸಾಧಿಸಿಕೊಂಡು ಸಾಧನೆಯಲ್ಲಿ ಕಾಲಕಳೆಯುತ್ತಾರೆ. ಅಲ್ಲಿ ಉಳಿದವರೆಷ್ಟು? ಅಳಿದವರೆಷ್ಟು? ಉಳಿದವರು ಎಷ್ಟು ದಿನ ಬದುಕಿದ್ದರು? ಏನು ಮಾಡಿದರು? ಈ ಪ್ರಶ್ನೆಗಳಿಗೆ ಇನ್ನೂ ಸರಿಯಾದ ಉತ್ತರ ಸಿಕ್ಕಿಲ್ಲ.

'ನಮ್ಮ ಪುರಾತನರು ಬೀಜಕ್ಕೊಬ್ಬರುಳದಾರು!' ಎಂದು ಚೆನ್ನಬಸವಣ್ಣನೇ ತನ್ನ ಕಾಲಜ್ಞಾನದಲ್ಲಿ ಸಾರಿದ್ದ. ಆತನ ನುಡಿ ನಿಜವಾಯಿತು. ನಾಗಲಾಂಬಿಕೆ, ಹಡಪದ ರೇಚಯ್ಯ, ನುಲಿಯ ಚಂದ್ರಯ್ಯ, ಮೋಳಿಗೆಯ ಮಾರಯ್ಯ, ಹಿಪ್ಪರಿಗೆಯ ಮಲ್ಲಿಕಾರ್ಜುನ, ರುದ್ರಮುನಿ, ಮುಕ್ತಿಮುನಿ, ಚೆನ್ನಬಸವಣ್ಣ, ಗಂಗಾಂಬೆ, ಅಲ್ಲಮಪ್ರಭು, ಅಕ್ಕಮಹಾದೇವಿ ಮೊದಲಾದವರು ಮಾತ್ರ ಉಳಿದರು ಆ ಕಲ್ಯಾಣದ ಕಗ್ಗೊಲೆಯಲ್ಲಿ, ಆ ತರುವಾಯದ ಕಾಳಗಗಳಲ್ಲಿ ! ಪ್ರಭುದೇವರೂ ಅಕ್ಕಮಹಾದೇವಿಯೂ ಶ್ರೀಗಿರಿಯ ಕದಳೀವನವನ್ನು ಆಶ್ರಯಿಸಿದರು. ಅಲ್ಲಿಯೇ ಬಯಲಾದರು. ಇತ್ತೀಚೆಗೆ ಹಿರಿಯ ಪಂಡಿತರಾದ ಟಿ.ಹೆಚ್.ಎಂ.ಸದಾಶಿವಯ್ಯನವರ ನೇತೃತ್ವದಲ್ಲಿ ಸಾಹಸಿಗಳ ತಂಡವೊಂದು ದುರ್ಗಮವಾದ ಕದಳೀವನವನ್ನು ಕಂಡುಹಿಡಿದು ಬಂದಿರುವುದೊಂದು ಆನಂದದ ಸಂಗತಿ. ಅಲ್ಲಿ ಅಲ್ಲಮಪ್ರಭುಗಳ ಮತ್ತು ಅಕ್ಕಮಹಾದೇವಿಯರ ಸುಂದರವಿಗ್ರಹಗಳೂ ಅಕ್ಕನ ಯೋಗಮಂಟಪವೂ, ಕದಳಿಯ ಅವಿನಾಶಿಯಾದ ವನವೂ ಇವೆಯಂತೆ. ನಾಗಲಾಂಬಿಕೆಯ ಮುಂದೆ ತರೀಕೆರೆಯ ಹತ್ತಿರ ಎಣ್ಣೆ ಹೊಳೆಯೆಂಬ ಹೆಸರಿನ ನದೀಭಾಗಕ್ಕೆ ಹೋಗಿ ಅಲ್ಲಿ ಶರಣಧರ್ಮವನ್ನುಳಿಸಲು ಹೆಣಗಿ ಅಲ್ಲಿಯೇ ಲಿಂಗೈಕ್ಯಳಾದಳೆಂದೂ ನುಲಿಯ ಚಂದಯನು ಅಲ್ಲಿಗೆ ಎಂಟು ಹತ್ತು ಮೈಲಿಗಳ ಮೇಲಿರುವ ನಂದೀಗ್ರಾಮದಲ್ಲಿದ್ದು ಅಲ್ಲಿಯೇ ಬಯಲಾದನೆಂದೂ ಉಳಿದವರು ಉಳಿವೆಯ ಮಹಾಮನೆಯಲ್ಲಿಯೇ ನಿರವಯರಾದರೆಂದೂ, ರುದ್ರಮುನಿ-ಮುಕ್ತಿಮುನಿಯರ ಪರಾಕ್ರಮದಿಂದ ಶರಣಧರ್ಮ ಸಂಪೂರ್ಣ ನಷ್ಟವಾಗದೆ ಉಳಿಯಿತೆಂದೂ ಹೇಳುತ್ತಾರೆ. ಊಹೆಯ ಊರುಗೋಲನ್ನು ಹಿಡಿದು ಕಾಲಗರ್ಭದಲ್ಲಿ ಅಡಗಿರುವ ಶರಣರ ಕೊನೆಯ ದಿನಗಳ ಕಥೆಯನ್ನು ಕಟ್ಟಿದ ಪರಿಯಿದು.

ಒಂದು ಮಾತು ಮಾತ್ರ ನಿಜ. ಬಸವಣ್ಣನವರ 'ಮಹಾಮನೆ'ಯಲ್ಲಿ ಉದಯವಾದ ಶರಣಧರ್ಮ ದಿವಾಕರನು ಉಳಿವೆಯ ಹತ್ತಿರದ 'ಮಹಾಮನೆ'ಯಲ್ಲಿ ಅಸ್ತಂಗತನಾದನು! ಕಾಲಾಯ ತಸ್ಮೈ ನಮಃ! ಕಲ್ಯಾನ ಶರಣರ ಕೊನೆ ಆದಂತೇ ಆಗಿರಲಿ. ಒಂದು ಮಾತನ್ನು ಎಲ್ಲರೂ ಒಪ್ಪಲೇಬೇಕು. ಅಂದು ಅವರು ಆತ್ಮಯಜ್ಞದಲ್ಲಿ ಧುಮುಕಿ ಧರ್ಮಕ್ರಾಂತಿಯನ್ನೂ ಸಮಾಜ ಕ್ರಾಂತಿಯನ್ನೂ, ಕಾಯಕ ಕ್ರಾಂತಿಯನ್ನೂ, ಸಾಹಿತ್ಯ ಕ್ರಾಂತಿಯನ್ನೂ ಮಾಡದೆ ಹೋಗಿದ್ದರೆ ನಾವಿಂದು ಇರುವ ಸ್ಥಿತಿಯಲ್ಲಿ ಇರುತ್ತಿರಲಿಲ್ಲ. ಇನ್ನೂ ಕಾಡುಸ್ಥಿತಿಯಲ್ಲಿ ಇರುತ್ತಿದ್ದೆವು. ನಮ್ಮನ್ನು ಶತಮಾನಗಳ ಹಿಂದೆಯೇ ಮನುಷ್ಯರನ್ನಾಗಿ ಮಾಡಿದ ಮಹಾತ್ಮರವರು.

ಇನ್ನೊಂದು ಚೆನ್ನಣ್ಣನ ವಚನವನ್ನು ಓದಿಯೇ ವಿರಮಿಸೋಣ:

"ಶಿವಭಕ್ತಿಯುಳ್ಳವಂಗೆ ಕಾಮಬೇಡ, ಕ್ರೋಧಬೇಡ, ಲೋಭಬೇಡ,
ಮೋಹಬೇಡ, ಮದಬೇಡ, ಮತ್ಸರಬೇಡ.
ಶಿವಭಕ್ತಿಯುಳ್ಳವಂಗೆ ಕಾಮಬೇಕು, ಕ್ರೋಧಬೇಕು, ಲೋಭಬೇಕು,
ಮೋಹಬೇಕು, ಮದಬೇಕು, ಮತ್ಸರಬೇಕು,
ಬೇಕೆಂಬುದಕ್ಕಾವ ಗುಣ?
ಕಾಮಬೇಕು ಲಿಂಗದಲ್ಲಿ, ಕ್ರೋಧಬೇಕು ಕರಣಂಗಳ್ಲಿ,
ಲೋಭಬೇಕು ಪಾದೋದಕ ಪ್ರಸಾದದಲ್ಲಿ,
ಮೋಹಬೇಕು ಗುರುಲಿಂಗಜಂಗಮದಲ್ಲಿ,
ಮದಬೇಕು ಶಿವಾಚಾರ ಘನವೆಂಬಲ್ಲಿ
ಮತ್ಸರಬೇಕು ಹೆಣ್ಣು ಹೊನ್ನು ಮಣ್ಣಿನಲ್ಲಿ!
ಬೇಡೆಂಬುದಕ್ಕಾವಗುಣ?
ಕಾಮಬೇಡ ಪರಸ್ತ್ರೀಯರಲ್ಲಿ
ಕ್ರೋಧಬೇಡ ಗುರುವಿನಲ್ಲಿ
ಲೋಭಬೇಡ ತನುಮನದಲ್ಲಿ
ಮೋಹಬೇಡ ಸಂಸಾರದಲ್ಲಿ
ಮದಬೇಡ ಶಿವಭಕ್ತರಲ್ಲಿ
ಮತ್ಸರಬೇಡ ಸಕಲ ಪ್ರಾಣಿಗಳಲ್ಲಿ!
ಇಂತೀ ಷಡ್ವಿಧಗುಣವನರಿದು ಮೆರೆಯಬಲ್ಲಡೆ
ಆತನೆ ಸದ್ಭಕ್ತ ಕಾಣಾ ಕೂಡಲ ಚೆನ್ನಸಂಗಮದೇವಾ!

ಇಂಥ ಅರಿವಿನ ಅಣಿಮುತ್ತುಗಳನ್ನು ಸರಮಾಡಿ ಕನ್ನಡಿಗರ ಕೊರಳಿಗೆ ತೊಡಿಸಿ ಹೋದೆನೆಂದೇ ಇಂದಿಗೂ ಹಳ್ಳಿಯ ಹೆಂಗಸರು—

ಸೋಬಾನವೆನ್ನೂದು ಯಾರು ಮಾಡ್ಯಾರ ಗುರುವೆ
ದೇವ ಶ್ರೀ ಚೆನ್ನಬಸವಯ್ಯನ। ಸೋ। ಸೊಗಲದ
ಸೋಮಯ್ಗೆ ಮದಿವಿ ಮಾಡ್ಯಾರ। ಸೋ॥
ಸೋಅನ್ನು ಸಬುದವ ಯಾರು ಕಲಿಸ್ಯಾರ ಗುರುವೆ
ದೇವಗುರು ಚೆನ್ನಬಸವಯ್ಯ। ಸೋ। ಸೋಗಲದ
ಸೋಮಯ್ಗೆ ಮದಿವಿಮಾಡಿದರ। ಸೋ॥ ಎಂದು ಹಾಡುತ್ತಾರೆ.

ಅವರ ಮಾತಿನಲ್ಲಿಯೇ ಮುಗಿಸೋಣ:

ಚೆನ್ನಾದ ಚಿದ್ಬಿಂದು ಚಿತ್ಕಳೆಯ ಮೀರಿದ
ಚಿನ್ಮಯ ಮೂರ್ತಿ ನೀನಿರುವಿ। ಸೋ
ಚೆನ್ನಬಸವಂಗೆ ಜಯಜಯ। ಸೋ॥

❐

---

* ಶರಣ ಪಂಚಾಮೃತ, ಲೇ. ಸಿದ್ಧಯ್ಯ ಪುರಾಣಿಕ್, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು, ೧೯೬೨.

ಚೆನ್ನಬಸವಣ್ಣ

●

ಡಾ। ಎಸ್. ವಿದ್ಯಾಶಂಕರ

'ಗಗನಪವನದ ಮೇಲೆ ಉದಯಮುಖದನುಭಾವ.
ಸದಮದದ ಗಜವ ನಿಲಿಸುವ ಮಾವತಿಗ ಬಂದ.
ಅಷ್ಟದಳಕಮಲದೊಳು ಸೃಷ್ಟಿಯಂಕುರ ಭಜನೆ;
ಮೆಟ್ಟಿ ನಿಂದಾತ ಪರಮಯೋಗಿಯಾಗದೆ ಮಾಣ !
ಬಯಲ ಬಣ್ಣಕೆ ತಂದು ನೆಳಲ ಶೃಂಗಾರವ ಮಾಡಿದ
ಗುಹೇಶ್ವರನ ಶರಣ ಚೆನ್ನಬಸವಣ್ಣಂಗೆ ಶರಣೆನುತಿರ್ದೆನು.'

–ಪ್ರಭುದೇವರು

'ಚೆನ್ನಬಸವಣ್ಣನೆನ್ನ ಪರಮಾರಾಧ್ಯರು'
'ಚೆನ್ನಬಸವಣ್ಣನ ಪ್ರಸಾದವ ಕೊಂಡು ಜ್ಞಾನಸಂಪನ್ನನಾದೆನಯ್ಯಾ'
'ಚೆನ್ನಬಸವಣ್ಣನ ಪಾದವ ಕಂಡೆನಾಗಿ ಎನ್ನ ಪ್ರಾಣ ಬಯಲಾಯಿತ್ತು;

–ಮಹಾದೇವಿಯಕ್ಕ

'ಎನ್ನ ಲಲಾಟದಲ್ಲಿ ಓಂಕಾರವಾಗಿದ್ದಾತ ಚೆನ್ನಬಸವ'
'ಜ್ಞಾನ ಕ್ರೀಯೆ ಲಿಂಗಪೂಜೆಯಾಗಿ ಅಳವಡಿಸಿಕೊಂಡ ಚೆನ್ನಬಸವೇಶ'
'ಶಿಷ್ಯನೆಂಬ ವನಕ್ಕೆ ವಸಂತ ನೋಡಾ ಗುರು.
ಶಿಷ್ಯನೆಂಬ ತಿಮಿರಕ್ಕೆ ಜ್ಯೋತಿ ನೋಡಾ ಗುರು.
ಶಿಷ್ಯನೆಂಬ ರಾತ್ರಿಗೆ ಸೂರ್ಯ ನೋಡಾ ಗುರು.
ಶಿಷ್ಯನೆಂಬ ನನಗೆ ಪ್ರಕೃಷ್ಟ ಪ್ರಮಥ ಚಿಂತಾಮಣಿ ಚೆನ್ನಬಸವ ಗುರು...'
'ಲೋಕದಲ್ಲಿಹ ನೂರಾರು ಗುರುಗಳ ನೋಡಿ ನೋಡಿ
ನಾನು ಬೇಸರುಗೊಂಡೆನಯ್ಯಾ.
ವಿತ್ತಾಪಹಾರಿ ಗುರುಗಳು ನೂರಾರು;
ಮಂತ್ರತಂತ್ರದಿಂದುಭಯ ಲೋಕದಲ್ಲಿ
ಸುಖದುಃಖವೀವ ಗುರುಗಳು ನೂರಾರು;
ಸತ್ಕರ್ಮೋಪದೇಶವನರುಹಿ
ಸ್ವರ್ಗಮರ್ತ್ಯದಲ್ಲಿ ಸುಖವೀವ ಗುರುಗಳು ನೂರಾರು;
ವಿಚಾರಮುಖದಿಂದ ಷಟ್‌ಸಾಧನೆಯನರುಹುವ ಗುರುಗಳುನೂರಾರು.

ವಿಷಯಂಗಳೆಲ್ಲ ಮಿಥ್ಯಂಗಳೆಂದರುಹಿ
ಆತ್ಮನುರಾಗತ್ವನೀವ ಗುರುಗಳು ನೂರಾರು;
ಶಿವ–ಜೀವರ ಏಕತ್ವವನರುಹಿ
ನಿರ್ಮಲಜ್ಞಾನವೀವ ಗುರುಗಳು ಪ್ರಮಥರು.
ಸಂಶಯಾಳಿಗಳನೆಲ್ಲ ಜ್ಞಾನಾಗ್ನಿಯಿಂದ ದಹಿಸಿ
ಮುಕ್ತಿಯ ಹಂಗೆಂಬುದ ಅರುಹಿನ ಬಂಥದಲ್ಲಿರಿಸಿದ ಗುರು
ಚೆನ್ನಬಸವಣ್ಣನಲ್ಲದೆ ಮತ್ತೋರ್ವನ ಕಾಣೆ ನೋಡಾ
ಕಪಿಲಸಿದ್ಧಮಲ್ಲಿಕಾರ್ಜುನಾ. –ಸಿದ್ಧರಾಮ

ಮೇಲಿನ ಶಿವಶರಣರ ಮನದಾಳದ ಗೌರವದ ನುಡಿಗಳನ್ನು ಕೇಳಿದಾಗ ಚೆನ್ನಬಸವಣ್ಣನವರ ಭವ್ಯ ವ್ಯಕ್ತಿತ್ವ ಪರಿಚಯವಾಗುತ್ತದೆ. ಬಸವಣ್ಣನ ತಂಗಿ ನಾಗಲಾಂಬಿಕೆಯ ಮಗನಾದ ಚೆನ್ನಬಸವಣ್ಣ ಬೆಳೆದುದು ಬಸವಣ್ಣನ ನೆರಳಾಗಿ. ಚೆನ್ನಬಸವಣ್ಣನಿಗೆ ಬಸವಣ್ಣ ಸೋದರಮಾವನಷ್ಟೇ ಅಲ್ಲ ಗುರುವೂ ಕೂಡ. ಚೆನ್ನಬಸವಣ್ಣನನ್ನು ರೂಪಿಸುವಲ್ಲಿ ಬಸವಣ್ಣನ ಪಾತ್ರ ಮಹತ್ತರವಾದುದು. ಅಪ್ರತಿಮ ಬಾಲಪ್ರತಿಭೆಯ (chid genious) ಚೆನ್ನ ಬಸವಣ್ಣ ತನ್ನ ೧೧–೧೨ನೆಯ ವಯಸ್ಸಿನಲ್ಲಿಯೇ ಪ್ರಕಾಂಡ ಜ್ಞಾನಿಯಾಗಿದ್ದಂತೆ ತೋರುತ್ತದೆ. 'ಚೆನ್ನಬಸವಣ್ಣನ ಜ್ಞಾನ' ಅವನ ವ್ಯಕ್ತಿತ್ವದ ಪ್ರಮುಖ ಗುಣವಾಗಿ ಮಹಾದೇವಿಯಕ್ಕ ಗುರುತಿಸುವಳು. ಅಪೂರ್ವ ಪ್ರತಿಭಾಶಾಲಿಯಾದ ಅವನ ಬುದ್ಧಿಶಕ್ತಿ ತೀಕ್ಷ್ಣವಾದುದು. ಎಂ.ಆರ್.ಶ್ರೀ. ಅವರು ಹೇಳುವಂತೆ ಅವನು 'ಬೌದ್ಧಿಕ ಸಾಮ್ರಾಜ್ಯದ ನಿರಂಕುಶ ಚಕ್ರವರ್ತಿ. ಪ್ರತಿವಾದಿಗಳು ತಲ್ಲಣಿಸಿ ಹೋಗುವಂತಹ ಪ್ರತಿಭೆ, ಪ್ರಚಂಡತೆ ಆತನದು'. ಚೆನ್ನಬಸವಣ್ಣನಲ್ಲಿ ಬಸವಣ್ಣನಂತೆ ಭಕ್ತಿಸಾಧನೆಯ ಹೋರಾಟವಿಲ್ಲ, ತನ್ನ ಅಂತರಂಗದ ತಳಮಳವನ್ನು ಮನಂಬುಗುವಂತೆ ಹೇಳುವ ಉದ್ದೇಶವಿಲ್ಲ, ಸಂಸಾರವೆಂಬ ಬಂಧನದಿಂದ ಬಿಡುಗಡೆ ಮಾಡೆಂಬ ಮೊರೆಯೂ ಇಲ್ಲ. ಚೆನ್ನಬಸವಣ್ಣ ಜ್ಞಾನಿಯಾಗಿರುವುದರಿಂದ ಆ ನೆಲೆಯಲ್ಲಿ ನಿಂತು ಲೋಕೋದ್ಧಾರಕಾರ್ಯ ನಡೆಸಿರುವನು. ಅವನು ಶರಣ ಸ್ಥಿತಿಯನ್ನು ತಲುಪಿರುವುದರಿಂದ ಲೋಕವನ್ನು ಮೆಚ್ಚಿಸುವ ಉದ್ದೇಶವೂ ಅವನಿಗಿಲ್ಲ. ಲೋಕದ ಮಾನವರ ಬಗೆಗೆ ಅವನು ಖಂಡಿತವಾದಿ. ಅವನ ಕೆಳಗಿನ ಈ ವಚನ ಅವನ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ:

'ಸರ್ವಸಂಗ ಪರಿತ್ಯಾಗವ ಮಾಡಿದ ಶಿವಶರಣನ
ಲೋಕಸಂಸಾರಿಗಳೆಂತು ಮೆಚ್ಚುವರಯ್ಯ?
ಊರೊಳಗಿದ್ದರೆ ಉಪಾಧಿಕನೆಂಬರು,
ಅಡವಿಯೊಳಗಿದ್ದರೆ ಮೃಗನೆಂಬರು,
ಹೊನ್ನ ಬಿಟ್ಟರೆ ದರಿದ್ರನೆಂಬರು,
ಹೆಣ್ಣ ಬಿಟ್ಟರೆ ನಪುಂಸಕನೆಂಬರು,
ಪುಣ್ಯವ ಬಿಟ್ಟರೆ ಪೂರ್ವಕರ್ಮಿ ಎಂಬರು,
ಮಾತನಾಡದಿದ್ದರೆ ಮೂಗನೆಂಬರು,
ಮಾತನಾಡಿದರೆ ಜ್ಞಾನಿಗೇಕಯ್ಯ ಮಾತೆಂಬರು,
ನಿಜವನ್ನಾಡಿದರೆ ನಿಷ್ಠುರಿಯೆಂಬರು,
ಸಮತೆಯ ನುಡಿದರೆ ಅಂಜುವನೆಂಬರು.
ಇದು ಕಾರಣ ಕೂಡಲಚನ್ನಸಂಗಯ್ಯ,
ನಿಮ್ಮ ಶರಣ ಲೋಕದಿಚ್ಛೆಯ ನಡೆಯ.'

ಚೆನ್ನಬಸವಣ್ಣ ಪ್ರಧಾನವಾಗಿ ಧರ್ಮದ ಕಡೆ ಒಲವುಳ್ಳ ವ್ಯಕ್ತಿ. ಆ ಕಾಲಕ್ಕೆ ರೂಪುಗೊಳ್ಳುತ್ತಿದ್ದ ವೀರಶೈವ ಧರ್ಮಕ್ಕೆ ಒಂದು ನಿರ್ದಿಷ್ಟವಾದ ತಾತ್ವಿಕ ಚೌಕಟ್ಟನ್ನು ಕೊಡಲು ತ್ರಿಕರಣಪೂರ್ವಕವಾಗಿ ದುಡಿದವನು ಇವನು. ಶೈವದಿಂದ ವೀರಶೈವಕ್ಕೆ ಪರಿವರ್ತಿತವಾಗುತ್ತಿದ್ದ ಧರ್ಮಕ್ಕೆ ಭದ್ರವಾದ ತಾತ್ವಿಕ ಸಿದ್ಧಾಂತವನ್ನು ರೂಪಿಸುವುದು ಅಂದು ಅಗತ್ಯವಾಗಿದ್ದಿತು. ಚೆನ್ನಬಸವಣ್ಣ ಹೇಳುವಂತೆ, ವೀರಶೈವರಿಗೆ ವೀರಶೈವವು ಪಿತೃಧರ್ಮ. ಭಸ್ಮಾಂಗಿಯನ್ನು ಕಂಡರೆ (=ಜಂಗಮವನ್ನು) ಹೇಗೆ ಗೌರವವನ್ನು ತೋರಬೇಕು (ಹೇಗೆ ನಡೆದುಕೊಳ್ಳಬೇಕು) ಎಂಬುದನ್ನು ಹೇಳುವಾಗ ಚೆನ್ನಬಸವಣ್ಣ ಒಂದು ಶ್ಲೋಕವನ್ನು ಉಲ್ಲೇಖಿಸಿರುವನು. ಆ ಶ್ಲೋಕ ಹೀಗಿದೆ.

'ಭಸ್ಮಾಂಗಮಾಗತಂ ದೃಷ್ಟ್ವಾ ಆಸನಂ ಪರಿತ್ಯಜೇತ್
ಸ್ವಧರ್ಮಃ ಪಿತೃಧರ್ಮಶ್ಚ ಸರ್ವಧರ್ಮೋ ವಿನಶ್ಯತಿ ॥
ಕುಲೀನಮಕುಲೀನಂ ವಾ ಭೂತಿರುದ್ರಾಕ್ಷಿಧಾರಿಣಂ
ದೃಷ್ಟ್ವೋನ್ನತಾಸನೇ ತಿಷ್ಠನ್ ಶ್ವಾನಯೋನಿಷು ಜಾಯತೇ'

ಚೆನ್ನಬಸವಣ್ಣ ನಂಬಿರುವಂತೆ, ವೀರಶೈವ ಧರ್ಮವು ಬರಿಯ ಒಂದು ಮತವಲ್ಲ, ಇದೊಂದು ಭದ್ರವಾದ ನೆಲಗಟ್ಟುಳ್ಳ ಧರ್ಮ; ಇದೊಂದು ಪಿತೃಧರ್ಮ. ಇದಕ್ಕೆ ವಿಶಿಷ್ಟವಾದ ಆಚಾರ ಸಂಹಿತೆಯಿದೆ (ಅವನು ಹೇಳುವ ೫೨ ಆಚಾರಗಳನ್ನು ನೋಡಬಹುದು). ಅವನು ಈ ಧರ್ಮಕ್ಕೆ ಇರುವ ತಾತ್ವಿಕ ಚೌಕಟ್ಟನ್ನು ಷಟ್ಸ್ಥಲ, ಅಷ್ಟಾವರಣ, ಪಂಚಾಚಾರಗಳ ಮೂಲಕ ತಿಳಿಯ ಪಡಿಸುವನು; ಕರಣಹಸಿಗೆ, ಮಿಶ್ರಾರ್ಪಣ, ಹಿರಿಯ ಮಂತ್ರಗೋಪ್ಯ, ಪದಮಂತ್ರಗೋಪ್ಯ, ತೊಂಬತ್ತಾರು ಸಕೀಲಗಳು–ಇವುಗಳ ಮೂಲಕ ವಿವರಿಸುವನು. ಸಾಧನೆಯ ಹಂತದಲ್ಲಿರುವ ಭಕ್ತನು ಯಾವ ಸ್ಥಲದಲ್ಲಿ ನಿಂತರೂ ಆ ಸ್ಥಲದಲ್ಲಿಯೇ ಷಡುಸ್ಥಲ ಅಳವಡಬೇಕು ಎನ್ನುವನು. ಷಡುಸ್ಥಲವು ಕ್ರಮಾಗತವಾಗಿ ಮೂವತ್ತಾರು ಆಗಿ, ಆ ಮೂವತ್ತಾರು ನೂರ ಒಂದು, ಆ ನೂರ ಒಂದು ಇನ್ನೂರ ಹದಿನಾರು ಆಗುವ ವಿಧಾನವನ್ನು ಶಾಸ್ತ್ರೀಯವಾಗಿ ತಿಳಿಯಪಡಿಸುವನು. ಈ ಹಿನ್ನೆಲೆಯಲ್ಲಿಯೇ ಅವನನ್ನು 'ಷಟ್‌ಸ್ಥಲ ಜ್ಞಾನಿ' ಎಂದು ಮುಂದಿನವರು ಕರೆದದ್ದು.

ಶೈವದಿಂದ ವೀರಶೈವಕ್ಕೆ ಹೊರಳುತ್ತಿದ್ದ ಸಮಾಜಕ್ಕೆ ಹನ್ನೊಂದು ಮತ್ತು ಹನ್ನೆರಡನೆಯ ಶತಮಾನವು ಒಂದು ರೀತಿಯಲ್ಲಿ ಪರಿವರ್ತನ ಕಾಲಾವಧಿ (Transitional Period). ಇಷ್ಟಲಿಂಗಧಾರಣೆ ಹಾಗೂ ಮಂತ್ರೋಪದೇಶವು ವೀರಶೈವ ಧರ್ಮದ ಪ್ರವೇಶಕ್ಕೆ ಅನಿವಾರ್ಯ ಅಂಶವಾಗಿದ್ದಾಗ, ಯಾರಿಂದ ಅದನ್ನು ಪಡೆಯಬೇಕೆಂಬುದೂ ಮುಖ್ಯವಾಗಿದ್ದಿತು. ಶೈವ ಗುರುವಿನಿಂದ ಅದನ್ನು ಪಡೆಯುವುದು ನಿಷಿದ್ಧವಾಗಿದ್ದಿತು. ಗುರುವು ಸಕಲ ಆಗಮಗಳನ್ನು ತಿಳಿದವನಾಗಿದ್ದು, ತನ್ನನ್ನು ತಾನರಿದು, ಸರ್ವಾಚಾರ ಸಂಪನ್ನನಾಗಿರಬೇಕು. ಶಿಷ್ಯನನ್ನು ಸ್ವೀಕರಿಸುವ ಸಂದರ್ಭದಲ್ಲಿ ಗುರುವು ಬ್ರಾಹ್ಮಣನನ್ನು ಮೂರು ವರುಷವೂ, ಕ್ಷತ್ರಿಯನನ್ನು ಆರು ವರುಷವೂ, ವೈಶ್ಯನನ್ನು ಒಂಬತ್ತು ವರುಷವೂ, ಶೂದ್ರನನ್ನು ಹನ್ನೆರಡು ವರುಷವೂ ನೋಡಿ ಪರೀಕ್ಷಿಸಿ ಅರ್ಹನೆಂದು ಕಂಡುಬಂದ ಮೇಲೆ ವೀರಶೈವ ಗುರುವು ಅವನಿಗೆ ದೀಕ್ಷೆ ನೀಡಬೇಕೆಂಬ (ವ. ೬೫೧) ಕಟ್ಟುಪಾಡಿದ್ದರೂ ಅತ್ಯಂತ ಕಟ್ಟುನಿಟ್ಟಾಗಿ ಇದನ್ನು ಪಾಲಿಸುತ್ತಲಿರಲಿಲ್ಲವೆಂದು ತೋರುತ್ತದೆ. ಶೈವಗುರುವಿನಿಂದ ದೀಕ್ಷೆ ಪಡೆಯುವುದನ್ನು ಚೆನ್ನಬಸವಣ್ಣ ಉಗ್ರವಾಗಿ ಖಂಡಿಸಿರುವನು. ಶೈವಗುರುವಿನ ಅಂಗದ ಮೇಲೆ ಲಿಂಗವಿಲ್ಲ, ಅವನ ಪಂಚಭೂತಕಾಯವು ಪ್ರಸಾದಕಾಯವಾಗಿಲ್ಲದಿರುವುದರಿಂದ ಅವನು ಗುರುವೇ ಅಲ್ಲ (ವ.೫೫೫). ಶೈವಗುರುವಿನಿಂದ ಲಿಂಗದೀಕ್ಷೆ ಹೊಂದುವುದು 'ಅಂಧಕನು ಓಡ

ಹಿಡಿದು ತನ್ನ ಸ್ವರೂಪವ ತಾ ನೋಡುವಂತೆ' ವ್ಯರ್ಥ. ಈ ಗುರು–ಶಿಷ್ಯರಿಗೆ ನರಕ ತಪ್ಪದು (ವ.೬೮). ಒಂದು ಘಟ್ಟದಲ್ಲಿ ಚೆನ್ನಬಸವಣ್ಣ ಬೇಸರಗೊಂಡು ಶೈವಗುರುವಿನಿಂದ ಲಿಂಗಸಾಹಿತ್ಯವಾಗುವುದರ ಬದಲು ಸಾವೇ ಲೇಸು (ವ.೪೬೮ ಎಂದಿರುವನು. ಚೆನ್ನಬಸವಣ್ಣನ ಸಾಂಪ್ರದಾಯಿಕ ಮನೋಭಾವ ಅವನ ಈ ನಿಲುವಿನಲ್ಲಿ ಕಾಣಬಹುದಾಗಿದೆ. ಶೈವಗುರುವಿನಿಂದ ಮಂತ್ರೋಪದಿಷ್ಟನಾದ ಶಿಷ್ಯನಿಗೆ ಮರಳಿ ವೀರಶೈವ ಗುರುವು ಮಂತ್ರೋಪದೇಶ ಮಾಡಿ ಇಷ್ಟಲಿಂಗವನ್ನು ಅನುಗ್ರಹಿಸಬಹುದೆಂದು ಹೇಳುವಲ್ಲಿ (ವ.೪೨) ಚೆನ್ನಬಸವಣ್ಣ ತೋರುವ ರಿಯಾಯಿತಿ ವೀರಶೈವ ಸಮಾಜ ಸಂಘಟನೆಯಲ್ಲಿ ಅದು ಅನಿವಾರ್ಯವಾಗಿದ್ದಿತೊ ಏನೋ ಹಲವು ದೈವಗಳನ್ನು ಪೂಜಿಸುತ್ತಲಿದ್ದ ಗೊರವ (ಶೈವ ಪೂಜಾರಿ)ರನ್ನು 'ಗುರುದೇವ' ಎಂದು ಕರೆಯುತ್ತಿದ್ದದನ್ನು ಚೆನ್ನಬಸವಣ್ಣ ಒಪ್ಪುವುದಿಲ್ಲ. ಆ 'ವಿವೇಕಹೀನ ದುರಾಚಾರಿಯ ಮುಖವ ನೋಡಲಾಗದು' ಎಂದಿರುವನು. ಅವನ ಪ್ರಕಾರ, 'ಗುರುದೇವ' ಎನ್ನುವ ಪದ 'ವೀರಮಾಹೇಶ್ವರ ಜಂಗಮದೇವರಿಗೆ' ಒಪ್ಪುವಂತಹದು. ವಿಪ್ರ, ಭ್ರಷ್ಟ, ನಂಟ, ಶ್ವಪಚೆ ಮಾನವರ ವೇಷ ಧರಿಸಿ ಹಲವರನ್ನು ಹೊಗಳಿ, ಕೀಳು ದೈವದ ಕಾಲು ತೊಳೆದು, ಎಂಜಲು ತಿನ್ನುವ ಭ್ರಷ್ಟ ಜಾತಿಯುವನನ್ನು 'ಗುರುದೇವ' ಎಂದು ಕರೆದರೆ, ಕರೆಯಿಸಕೊಂಡವನಿಗೂ ಕರೆದವನಿಗೂ ನರಕ ತಪ್ಪದೆಂದು ಚೆನ್ನಬಸವಣ್ಣ ಎಚ್ಚರಿಸಿರುವನು (ವ.೪೦೫)

ವೀರಶೈವ ಸಮಾಜದಲ್ಲಿ ಗುರು – ಜಂಗಮರ ಸ್ಥಾನವು ಅತ್ಯುನ್ನತವಾದುದು. ಗುರುವು ಶಿಷ್ಯನನ್ನು ದೀಕ್ಷೆಯ ಮೂಲಕ ಪುನರ್ಜಾತನನ್ನಾಗಿ ಮಾಡಿದರ, ಜಂಗಮವು ಒಂದೆಡೆ ನಿಲ್ಲದೆ ಲೋಕಸಂಚಾರಿಯಾಗಿ ಭಕ್ತರುಗಳಿಗೆ ಸಚ್ಚಾರಿತ್ರ ಸುಜ್ಞಾನ ಬೋಧೆ ಮಾಡಿ ಅವರನ್ನು ಉದ್ಧರಿಸುವನು. ಅವರಿಬ್ಬರೂ ವೀರಶೈವ ಸಮಾಜದ ಎರಡು ಕಣ್ಣುಗಳು. ಇಬ್ಬರೂ ಕ್ರಿಯೆ – ಆಚಾರಗಳಲ್ಲಿ ಶುದ್ಧವಿರಬೇಕಾದುದು ತೀರಾ ಅಗತ್ಯ. ಇವುಗಳಿಲ್ಲದ ಗುರುವಿನಿಂದ ದೀಕ್ಷೆ ಉಪದೇಶಗಳನ್ನು ಸ್ವೀಕರಿಸಲಾಗದು. ಜಂಗಮದಿಂದ ಪಾದೋದಕ ಪ್ರಸಾದವನ್ನು ಕೊಳಲಾಗದು. ಕೊಂಡದ್ದೇ ಆದರೆ ಅಘೋರ ನರಕ ಎಂದು ಚೆನ್ನಬಸವಣ್ಣ ಎಚ್ಚರಿಸುವನು (ವ. ೧೧೯). ಗುರುವಿನ ಕರುಣವನ್ನು ಪಡೆಯಲೆಂದು ಬಂದ ಭಕ್ತನು ಗುರುವಿನ ಸೇವೆಯಲ್ಲಿರುತ್ತಾ ಅವನಲ್ಲಿ ಜ್ಞಾನಾಚಾರಗಳಿಲ್ಲದಿರುವುದನ್ನು ಕಂಡರೆ ಅವನನ್ನು ತ್ಯಜಿಸಿ, ಯೋಗ್ಯನಾದ ಮತ್ತೋರ್ವ ಗುರುವಿನ ಬಳಿಗೆ ಹೋಗಿ ಅವರನ್ನು ಪರೀಕ್ಷಿಸಿ, ಆತ ಗುರುವಾಗಲು ಅರ್ಹನೆನ್ನಿಸಿದ ಬಳಿಕವೇ ಅವನಿಂದ ಜ್ಞಾನದೀಕ್ಷೆಯನ್ನು ಪಡೆಯಬೇಕು (ವ.೧೨೯) ಎಂದು ಹೇಳುವಲ್ಲಿ ಚೆನ್ನಬಸವಣ್ಣನ ಪ್ರಗತಿಪರ ನಿಲುವನ್ನು ನಾವು ಕಾಣಬಹುದು. ಶಿಷ್ಯತ್ವವನ್ನು ಪಡೆದ ಮೇಲೆ ಗುರುವಿನಲ್ಲಿ ಅನಾಚಾರ ದುರಾಚಾರಗಳು ಕಂಡುಬಂದಲ್ಲಿ – ಅವು ಸೂಕ್ಷ್ಮವಿದ್ದರೆ ತಿದ್ದಿಕೊಳ್ಳಬೇಕು. ಸ್ಥೂಲವಿದ್ದರೆ ಆ ಗುರುವನ್ನು ತ್ಯಜಿಸಿ ತಾನು ತಿಳಿದ ಗುರುತತ್ವವ ನಂಬಿ ಸದಾಚಾರವನ್ನು ಸಾಧಿಸುತ್ತಿರಬೇಕೆಂದು ಚೆನ್ನಬಸವಣ್ಣ ಹೇಳುವನು (ವ.೧೨೩). ಇಲ್ಲಿಯೂ ಅವನ ಪ್ರಗತಿಪರ ನಿಲುವನ್ನು ನಾವು ಗುರುತಿಸಬಹುದು.

ಹಣಕ್ಕಾಗಿ ಯಾರಿಗೆ ಬೇಕಾದರೂ ಲಿಂಗವನ್ನು ಅನುಗ್ರಹಿಸುವ ಗುರುಗಳಿದ್ದರು. ಶಿಷ್ಯನ ಪೂರ್ವೋತ್ತರಗಳನ್ನು ವಿಚಾರಿಸದೆ ಲಿಂಗವನ್ನು ಅನುಗ್ರಹಿಸಬಾರದೆನ್ನುವುದು ಚೆನ್ನಬಸವಣ್ಣನ ನಿಲುವು. ಮದ್ಯಪಾನಿಗೆ ಲಿಂಗವನ್ನು ಕೊಟ್ಟಲ್ಲಿ ನರಕ ತಪ್ಪದು. ಮಾಂಸಾಹಾರಿಗೆ ಕೊಟ್ಟಲ್ಲಿ

ವಂಶ ಕ್ಷಯವಾಗುವುದು. ಜೂಜುಗಾರನಿಗೆ ಕೊಟ್ಟಲ್ಲಿ ರೌರವ ನರಕಕ್ಕೆ ಹೋಗುವನು. ಸೂಳೆಗೆ ಕೊಟ್ಟಲ್ಲಿ ನಾಯಿಯ ಹೊಟ್ಟೆಯಲ್ಲಿ ಹುಟ್ಟುವನು. ಅಂಗಹೀನನಿಗೆ ಕೊಟ್ಟಲ್ಲಿ ಲಿಂಗದ್ರೋಹಿಯಾಗುವನು (ವ.೪೦೭) ಎಂದು ಹೇಳುವಲ್ಲಿ ಇವರುಗಳಿಗೆ ಲಿಂಗಧಾರಣೆ ಮಾಡುತ್ತಿದ್ದ ಗುರುಗಳೂ ಇದ್ದರೆಂಬುದು ವೇದ್ಯವಾಗುತ್ತದೆ. ಚೆನ್ನಬಸವಣ್ಣನ ಪ್ರಕಾರ ಇವರುಗಳು ಲಿಂಗಧಾರಣೆಗೆ ಅನರ್ಹರು.

ಚೆನ್ನಬಸವಣ್ಣ, 'ಜಂಗಮ'ದ ಬಗೆಗೆ ವ್ಯಾಪಕವಾದ ವಿವರಗಳನ್ನು ನೀಡಿರುವನು. ಗಮನವುಳ್ಳದು 'ಜಂಗಮ'. ಜಂಗಮವು ಒಂದೆಡೆ ನಿಲ್ಲದೆ ಎಲ್ಲೆಡೆ ಸಂಚರಿಸುವವನು. 'ಅಯ್ಯ' (ವ. ೪೦೫), 'ವೀರಮಾಹೇಶ್ವರ' (ವ. ೪೦೫), 'ಶಿವಮಾಹೇಶ್ವರ' (ವ. ೪೦೫), 'ಹಿರಿಯ ಹರಿಕಾರ' (ವ.೫೦) – ಎಂದೆಲ್ಲಾ ಕರೆಯಲ್ಪಡುವ ಜಂಗಮವ ಲಿಂಗ, ಲಿಂಗವೆ ಜಂಗಮ (ವ. ೯೬೮). ಲಿಂಗವು ಜಂಗಮದ ಮುದ್ರೆ. ಲಿಂಗಕ್ಕೆ ಜಂಗಮವೆ ಮುದ್ರಾಪತಿ. ಆದಕಾರಣ ಜಂಗಮದೊಳಗೆ ಲಿಂಗವಿರುವುದಲ್ಲದೆ, ಲಿಂಗದೊಳಗೆ ಜಂಗಮವಿಲ್ಲ. ವೃಕ್ಷದ ಬೇರಿಗೆ ನೀರನ್ನೆರೆದರೆ ಫಲವಲ್ಲದೆ, ತುದಿಗೆ ಎರೆದರೆ ಫಲವಿರುವುದೆ. ವೃಕ್ಷದ ಆಧಾರ ಪೃಥ್ವಿ. ಆ ಪೃಥ್ವಿಯೇ ಜಂಗಮ. ಶಾಖೆಯೇ ಲಿಂಗ (ವ. ೨೮೩). ಜಂಗಮಕ್ಕೆ ಜಾತಿಯಿಲ್ಲ. ಜಂಗಮದಲ್ಲಿ ಜಾತಿ ಕುಲವನ್ನು ಅರಸುವಾತ ಗುರುದ್ರೋಹಿ ಎಂದು ಚೆನ್ನಬಸವಣ್ಣ ಹೇಳುವನು.

೧೨ನೇ ಶತಮಾನದ ಜಂಗಮರು ಹುಟ್ಟಿನಿಂದ ಯಾವುದೇ ಜಾತಿಗೆ ಸೇರಿದವರಾಗ ಬಹುದಿತ್ತು. ಭವಿಯೊಬ್ಬನು ಗುರುವಿನಿಂದ ದೀಕ್ಷೆ ಸ್ವೀಕರಿಸಿದ ಮೇಲೆ ತನ್ನ ವೈಯಕ್ತಿಕ ಸಾಧನೆ ಸಿದ್ಧಿಗಳ ಮೂಲಕ 'ಜಂಗಮ'ನಾಗುವ ಅರ್ಹತೆ ಪಡೆಯುತ್ತಿದ್ದನು. ಮೇಲ್ಜಾತಿಯವರೇ ಜಂಗಮರಾಗಬೇಕೆಂಬ ನಿಯಮವೇನಿರಲಿಲ್ಲ. ಬಹುತೇಕ ವಚನಕಾರರು ಜಂಗಮನಲ್ಲಿ ಜಾತಿಕುಲವನ್ನರಸುವವರನ್ನು ಆಕ್ಷೇಪಿಸಿರುವುದು ಲಕ್ಷಿಸಬೇಕಾದ ಸಂಗತಿ. ವರ್ಣಾಶ್ರಮ ವ್ಯವಸ್ಥೆಯನ್ನು ನಿರಾಕರಿಸಿದ ಶಿವಶರಣರು ಜಂಗಮತ್ವಕ್ಕೆ ಜ್ಞಾನವೇ ಮುಖ್ಯವೆಂದೂ, ಸತ್ಯ ಸದಾಚಾರಗಳು ಅಪೇಕ್ಷಣೀಯವೆಂದೂ ಬಯಸಿದುದು ಪ್ರಗತಿಪರವಾದುದು.

ಗುರುವಿಗಿಂತಲೂ ಜಂಗಮ ಶ್ರೇಷ್ಠನೆನ್ನುವ ಚೆನ್ನಬಸವಣ್ಣ ಕೆಲವೊಂದು ಧರ್ಮಸೂಕ್ಷ್ಮ ಗಳನ್ನೂ ಪ್ರಸ್ತಾಪಿಸುವನು. ಉದಾಹರಣೆಗೆ ಭವಿಯೊಬ್ಬನು ಗುರುವಿನಿಂದ ದೀಕ್ಷೆ ಪಡೆದು ಭಕ್ತನಾದ ಬಳಿಕ, ದೇಶಸಂಚಾರ ಮಾಡಿ ಜಂಗಮನಾದ ಮೇಲೆ, ಅವನು ತನಗೆ ದೀಕ್ಷೆ ಕೊಟ್ಟ ಗುರುವಿನ ಮಠಕ್ಕೆ ಬಂದಾಗ, ಗುರುವು ಅವನು ತನ್ನ ಶಿಷ್ಯನೆಂದು ಅಹಂಕರಿಸದೆ ಇರಬೇಕು. ಜಂಗಮನಿಗೆ ಹಿಂದೆ ಅವನು ತನ್ನ ಗುರುವಾಗಿದ್ದವನೆಂಬ ಶಂಕೆಯಿರಬಾರದು. ಮಠಕ್ಕೆ ಬಂದ ಜಂಗಮನು ಗುರುವೆಂದು ಭಾವಿಸಿ ಪಾದಾರ್ಚನೆಯನ್ನು ಮಾಡುವುದು ಆಚಾರ, ನಾಚಿ ಪಾದಾರ್ಚನೆ ಮಾಡದಿದ್ದರೆ ನಾಯಕ ನರಕ. ಆ ಜಂಗಮವು ಶಂಕೆಯಲ್ಲಿದೆ ಪಾದಾರ್ಚನೆ ಮಾಡಿಸಿಕೊಳ್ಳುವುದೆ ಕರ್ತೃತ್ವ; ಶಂಕೆಗೊಂಡಿದ್ದೇ ಆದರೆ ಪಂಚಮಹಾಪಾತಕ. ಗುರುವೆಂಬ ಹಮ್ಮು, ಶಿಷ್ಯನೆಂಬ ಶಂಕೆ ಈರ್ವರಲ್ಲೂ ಇರಬಾರದು. ಅದಿದ್ದದ್ದೇ ಆದರೆ ಕೂಡಲ ಚೆನ್ನಸಂಗಮದೇವನು ಅವರನ್ನು ರೌರವ ನರಕದಲ್ಲಿಕ್ಕುವನೆಂದು ಚೆನ್ನಬಸವಣ್ಣ ಎಚ್ಚರಿಸುವನು. ಗುರು–ಜಂಗಮರ ಕಾರ್ಯಾಕ್ಷೇತ್ರಗಳನ್ನೂ ಚೆನ್ನಬಸವಣ್ಣ ಸ್ಪಷ್ಟೀಕರಿಸುವನು. ವೇದವೇದಾಂತವನೋದಿ ಜ್ಞಾನಸೂರೆಯ ಮಾಡುವ ಜಂಗಮನೆನ್ನುವಲ್ಲಿ (ವ. ೪೫೫) ಜಂಗಮನದು ಜ್ಞಾನಿಯ ಲಕ್ಷಣ. ಜ್ಞಾನಿಯಾಗಿ ಅವನು ಲೋಕಸಂಚಾರ ಮಾಡುತ್ತ

ಭಕ್ತರನ್ನು ಉದ್ಧರಿಸಬೇಕು. 'ಗುರುವಿನ ಗುರು ಜಂಗಮ'ವಾಗಿರುವುದರಿಂದ ಉಪದೇಶ (ದೀಕ್ಷೆ) ಕೊಡುವ ಕರ್ತವ್ಯ ಜಂಗಮನದಲ್ಲ. ಪ್ರಾಣಲಿಂಗಾನುಗ್ರಹಣೆ ಮಾಡುವುದು ಗುರುವಿನ ಕರ್ತವ್ಯ. ಜಂಗಮವು 'ಗುರು'ವಿನ ಕರ್ತವ್ಯ ನಿರ್ವಹಿಸಿದರೆ ಅವನ ಜಂಗಮ ಸ್ಥಲಕ್ಕೆ ಭಂಗವೆಂದು ಹೇಳುವನು. ಜಂಗಮರಲ್ಲಿ ಸಂಸಾರಿಕರು, ನಿಸ್ಸಂಸಾರಿಕರು ಎಂದು ಎರಡು ಬಗೆ. ಚೆನ್ನಬಸವಣ್ಣ ಜಂಗಮವು ಸಂಸಾರ ಛೇದನ ಮಾಡಿ, ಒಂದೆಡೆ ನಿಲ್ಲದೆ, ಜ್ಞಾನವನ್ನು ಬಿತ್ತರಿಸಲು ಸದಾ ಸಂಚಾರಿ ಯಾಗಿರಬೇಕೆಂಬುದರ ಕಡೆಗೆ ಚೆನ್ನಬಸವಣ್ಣನ ಒಲವು. ಸಂಸಾರಿ ಜಂಗಮನಾದಲ್ಲಿ ಸತಿ-ಪುತ್ರರೆನ್ನುವ ಮಾಯಾಪಾಶಗಳಿಗೆ ಒಳಗಾಗಿ ಜಂಗಮದ ನಿಜವಾದ ಅರ್ಥಕ್ಕೆ ವ್ಯತಿರಿಕ್ತವಾಗಿ ಬದುಕು ನಡೆಸಬಹುದೆಂಬ ದೂರಾಲೋಚನೆ ಚೆನ್ನಬಸವಣ್ಣನದು. ಸಂಸಾರಿಗಳಾಗಿದ್ದ ಜಂಗಮರಿಗೆ ಮಕ್ಕಳಾದಲ್ಲಿ ಆ ಮಕ್ಕಳಿಗೆ ದೀಕ್ಷೆಯಿಲ್ಲದೆ ಜಂಗಮತ್ವವು ಹುಟ್ಟಿನಿಂದಲೇ ಪ್ರಾಪ್ತವಾಗುವುದಿಲ್ಲವೆನ್ನುವ (ವಂಶಪಾರಂಪರ್ಯವಾಗಿ ಜಂಗಮತ್ವವು ಬರುವುದಿಲ್ಲವೆನ್ನುವ) ಅಂಶವು ಗಮನಿಸಬೇಕಾದುದು. ಜಂಗಮನ ಮಗ ದೀಕ್ಷೆಯಿಲ್ಲದೆ ಭಕ್ತರಲ್ಲಿಗೆ ಹೋಗಿ ಅರ್ಪವಣೆಯನ್ನು ಮುಕ್ಕಳಿಸಿದ್ದೇ ಆದರೆ 'ಹಾದಿಗೊಂಡು ಹೋಗುವ ನಾಯಿ ಗಿಡದ ಮೇಲೆ ಉಚ್ಚೆಯ ಹೊಯ್ದಂತಾಯಿತ್ತು' (ವ. ೧೧೫) ಎಂದು ಚೆನ್ನಬಸವಣ್ಣ ವ್ಯಂಗ್ಯವಾಡುವನು.

ಚೆನ್ನಬಸವಣ್ಣನು ಷೋಡಶ ಕಲೆಯುಳ್ಳ ಜಂಗಮ, ವಿಷಯವಾಸನೆಯುಳ್ಳ ಜಂಗಮ, ರಸವಿದ್ಯೆಯುಳ್ಳ ಜಂಗಮ, ವೇಷಧಾರಿ ಜಂಗಮ, ಜ್ಞಾನಿ ಜಂಗಮ – ಹೀಗೆ ಹಲವು ರೂಪಗಳಲ್ಲಿ ಜಂಗಮರನ್ನು ಕಂಡಿರುವನು. ಅವನ ಪ್ರಕಾರ ಷೋಡಶ ಕಲೆಯುಳ್ಳ ಜಂಗಮವನ್ನು ರಾಜರೂ, ವಿಷಯಿಯಾದ ಜಂಗಮವನ್ನು ವೇಶಿಯರೂ, ರಸವಿದ್ಯೆಯುಳ್ಳ ಜಂಗಮವನ್ನು ಅಕ್ಕಸಾಲಿಯೂ, ವೇಷಧಾರಿ ಜಂಗಮವನ್ನು ಭಕ್ತರೂ ಪೂಜಿಸುವರು. ಆದರೆ ಜ್ಞಾನಿ ಜಂಗಮನನ್ನು ಯಾರೂ ಗಮನಿಸುತ್ತಿಲ್ಲವೆನ್ನುವ ವಿಷಾದದ ದನಿ ಅವನದು. ಜಂಗಮವು ಬೇಡುವವನಲ್ಲ. ಆದರೂ ಕೆಲವರು ಹೊನ್ನಿಗಾಗಿ ಹಣವುಳ್ಳವರಲ್ಲಿ ಕೈಚಾಚುತ್ತಿದ್ದಿರಬೇಕು. ಅಂತಹವರನ್ನು 'ಲಾಂಛನ ಭಂಡ'ರೆಂದು ಚೆನ್ನಬಸವಣ್ಣ ಟೀಕಿಸುವನು (ವ.೪೨೭). ಸುರೆಯನ್ನು ಕುಡಿಯುವ, ಮಾಂಸ, ಭಂಗಿ, ಜಾಯಿಕಾಯಿ, ಜಾಯಿಪತ್ರೆ-ಇವನ್ನು ತಿನ್ನುವ ಜಂಗಮರೂ ಇದ್ದರು. ಇವರನ್ನು ಜಂಗಮರೆಂದರೆ ನಾಯಕ ನರಕ ತಪ್ಪದು ಎಂದು ಚೆನ್ನಬಸವಣ್ಣ ಹೇಳುವನು (ವ. ೫೦೧)

ಭಕ್ತನಾದವನು ವರ್ಣಾಶ್ರಮ ವ್ಯವಸ್ಥೆಗೆ ಒಳಪಡುವವನಲ್ಲವೆನ್ನುವ ಚೆನ್ನಬಸವಣ್ಣ (ವ. ೪೧೮), 'ಶ್ವಪಚನಾದಡೆಯೂ ಲಿಂಗಭಕ್ತನೆ ಕುಲಜ' (ವ. ೧೩೭), 'ಅಂಗದ ಮೇಲೆ ಶಿವಲಿಂಗವಿದ್ದ ಶ್ವಪಚನಾದಡೆಯೂ ಆತನೆ ಸದ್ಬ್ರಾಹ್ಮಣ. ಅಂಗದ ಮೇಲೆ ಶಿವಲಿಂಗವಿಲ್ಲದ ಬ್ರಾಹ್ಮಣರೊಂದು ಕೋಟಿಯಾದದೂ ಶ್ವಪಚರಿಂದ ಕರಕಷ್ಟ; (ವ. ೧೩೭) ಎನ್ನುವನು. ಅವನು ಆಗಿನ ಸಾಮಾಜಿಕ ವ್ಯವಸ್ಥೆಯಲ್ಲಿ ವರ್ಣಾಶ್ರಮಧರ್ಮದ ಕಟ್ಟುಪಾಡುಗಳಿದ್ದರೂ ಅದಕ್ಕೆ ಹೊರತಾಗಿರುವ ಸಮಾಜವನ್ನು ಕಟ್ಟಿಹೊರಟಾಗ ಲಿಂಗವಂತರನ್ನು 'ಭಕ್ತ'ರೆಂದೂ ಲಿಂಗವಂತರಲ್ಲದವರನ್ನು 'ಭವಿ'ಗಳೆಂದೂ ಕರೆಯಲಾಯಿತು. ಚೆನ್ನಬಸವಣ್ಣ ಗುರುತಿಸುವುದು ಹದಿನೆಂಟು ಕುಲವನ್ನಲ್ಲ. ಭವಿಯೊಂದು ಕುಲ-ಭಕ್ತನೊಂದು ಕುಲವನ್ನಷ್ಟೆ. (ವ. ೪೨೬). ಭಕ್ತನಾದ ಮೇಲೂ ಭವಿಯ ಸಂಗ ಬಿಡದ ಒಂದು ಬಗೆಯ ಅತಿರೇಕವನ್ನು ಸಾಮಾಜಿಕ

ವ್ಯವಸ್ಥೆಯಲ್ಲಿ ಕಂಡರೆ, ಕುಲಹೀನ ಶಿಷ್ಯನಿಗೆ ದೀಕ್ಷೆಯಿತ್ತು ಗುರುವು ಅವನ ಮನೆಯನ್ನು ಪ್ರವೇಶಿಸಲೊಲ್ಲದೆ ಅವನಿಂದ ಅಕ್ಕಿ ತುಪ್ಪವನ್ನು ತೆಗೆದುಕೊಂಡು ಹೊಟ್ಟೆಹೊರೆಯುತ್ತಿದ್ದ ಮತ್ತೊಂದು ಅತಿರೇಕವನ್ನೂ ಚೆನ್ನಬಸವಣ್ಣ ಗುರುತಿಸುವನು. (ವ. ೬೪೯). 'ಉಂಬುದು ಉಡುವುದು ಶಿವಾಚಾರ, ಕೊಂಬುದು ಕೊಡುವುದು ಕುಲಾಚಾರ'ವೆನ್ನುವ ಅನಾಚಾರಿಗಳಿದ್ದರು (ವ. ४೧೧). ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರೆಲ್ಲರೂ ಒಂದೇ ಎಂದು ಭಾವಿಸದೆ ಅಲ್ಲೂ ಭೇದಭಾವ ಮಾಡುವ ವ್ಯಕ್ತಿಗಳಿದ್ದರು. ಅಂತಹವರನ್ನು ಚೆನ್ನಬಸವಣ್ಣ 'ಒಚ್ಚೆ ಒಚ್ಚೆ ಭಕ್ತರು ಒಚ್ಚೆ ಒಚ್ಚೆ ಭವಿಗಳು' ಎಂದು ವ್ಯಂಗ್ಯವಾಡಿರುವನು (ವ. ४೬೨).

ಭಕ್ತನಾದವನಿಗೆ ಪಂಚಸೂತಕಗಳಿಲ್ಲ. ಆದರೂ ರಜಸ್ಸೂತಕ, ಕುಲಸೂತಕ, ಜನನ ಸೂತಕ, ಪ್ರೇತಸೂತಕ, ಉಚ್ಚಿಷ್ಟಸೂತಕಗಳೆಂಬ ಪಂಚಸೂತಕಗಳನ್ನು ಭಕ್ತನಾದವನು ಆಚರಿಸುತ್ತಿದ್ದನು (ವ. ४೧೧). ಭಕ್ತರಾದ ಮೇಲೂ ಪುಣ್ಯತೀರ್ಥಗಳಿಗೆ ಹೋಗುತ್ತಿದ್ದರು (ವ. ४೨೮). ಸೋಮವಾರ,ಮಂಗಳವಾರ, ಶಿವರಾತ್ರಿ ಎಂದು ಮಾಡುವವರಿದ್ದರು (ವ. ೧೧೩). ವಾರ, ತಿಥಿ, ಸುಮುಹೂರ್ತ ಎಂದು ಆಚರಿಸುವವರಿದ್ದರು (ವ. ४೩೫) – ಇವನ್ನೆಲ್ಲಾ ಬಿಡಬೇಕೆಂದು ಚೆನ್ನಬಸವಣ್ಣ ಹೇಳುವನು. ಲಿಂಗವಂತರಲ್ಲದವರಷ್ಟೇ ಭವಿಗಳಲ್ಲ. ಅರಿಷಡ್ವರ್ಗಗಳು, ಆಸೆ, ಆಮಿಷ, ಹೊನ್ನು, ಮಣ್ಣು – ಇವೂ ಭವಿಗಳೇ. ಆದರೆ ಇವು ಅಂತರಂಗದ ಭವಿಗಳೆಂದು ಚೆನ್ನಬಸವಣ್ಣ ಕರೆದಿರುವನು (ವ. ೫೬೧).

ಇಷ್ಟಲಿಂಗವು ಲಿಂಗದ ಮೇಲಿಂದ ಹಿಂಗಿತ್ತೆಂದು ಆತ್ಮಬಲಿ ಮಾಡಿಕೊಳ್ಳುತ್ತಿದ್ದ ಅಜ್ಞಾನಿಭಕ್ತರುಗಳಿದ್ದರು (ವ. ೬೭೮). ಆಗಿನ ಸಮಾಜದಲ್ಲಿ ಭಕ್ತನ ಅಂಗದ ಮೇಲಣ ಇಷ್ಟಲಿಂಗವು ಬೇರ್ಪಟ್ಟಾಗ, ಕೆಳಗೆ ಬಿದ್ದಾಗ ಇರಿದುಕೊಂಡು ಪ್ರಾಣ ಕಳೆದುಕೊಳ್ಳುವ ಭಾಷೆ ತೊಡುತ್ತಿದ್ದರು (ವ. ೬೭೬). ಇಷ್ಟಲಿಂಗವು ಕೆಳಕ್ಕೆ ಬಿದ್ದಿತ್ತೆಂದು ಜಲ, ಅಗ್ನಿ, ನೇಣು, ವಿಷ, ಅಸಿಪತ್ರ, ಸಮಾಧಿ – ಈ ಷಡ್‌ಪ್ರಕಾರಗಳಲ್ಲಿ ಪ್ರಾಣ ತ್ಯಜಿಸುತ್ತಿದ್ದರು (ವ. ೯೧४). ಶಸ್ತ್ರ, ಸಮಾಧಿ, ಜಲ, ತಾಡನ, ದಿಗ್ಬಲಿ, ದಹನ – ಈ ಆರು ಪ್ರಕಾರಗಳಲ್ಲಿಯೂ ಸಾಯುವವರಿದ್ದರು (ವ. ೬೫೭), ಅಮಾನುಷವಾದ ಈ ವರ್ತನೆಯನ್ನು ಚೆನ್ನಬಸವಣ್ಣ ಉಗ್ರವಾಗಿ ವಿರೋಧಿಸಿರುವನು.

ತನ್ನ ಕಾಲದ ವೀರಶೈವ ಸಮಾಜದಲ್ಲಿ ಶೀಲವಂತರು ಆಚರಿಸುತ್ತಿದ್ದ ಹಲವು ಬಗೆಯ ಶೀಲಗಳನ್ನು ಚೆನ್ನಬಸವಣ್ಣ ಉಲ್ಲೇಖಿಸಿರುವನು. ಭವಿ ಮಾಡಿದ ಮಡಕೆಯನ್ನು ಸ್ವೀಕರಿಸದಿರುವುದು, ಕೆರೆ, ಬಾವಿಗಳನ್ನು ಬಳಸದಿರುವುದು, ಅಲ್ಲಲ್ಲಿ ಒಸರುವ ನೀರನ್ನು ತರುವುದು ಶೀಲವೆ? ಲಿಂಗಕ್ಕೆ ಒಳ್ಳೆಯ ಅಗ್ಘವಣಿಯನ್ನು, ಪುಷ್ಪಗಳನ್ನು ತನ್ನಿ; ಒಳ್ಳೆಯ ಓಗರವ ಮಾಡಿ ಎನ್ನುವುದು ಶೀಲವೆ? ಎಂದು ಚೆನ್ನಬಸವಣ್ಣ ಪ್ರಶ್ನಿಸುವನು (ವ. ೧೧೧೨, ೧೧೧೩). ಅವನ ಪ್ರಕಾರ, ಚಿತ್ತದ ಕಳವಳವ ಕಳೆದು ಮನವು ಮಹಾಘನದಲ್ಲಿ ನೆಲಗೊಂಡುದೆ ಶೀಲ; ಪರಮ ಪರಿಣಾಮಗೊಂಡುದೆ ಶೀಲ (ವ. ೧೧೧೫); ಇರುವುದರಲ್ಲಿ ವಂಚನೆಯ ಮಾಡದಿರುವುದು, ಸಾಲ ಮಾಡದಿರುವುದು, ಪರಧನ, ಪರಸತಿಯರನ್ನು ಇಷ್ಟಪಡದಿರುವುದು, ಪರದೈವ ಪರಧರ್ಮಕ್ಕೆ ಒಲಿಯದಿರುವುದು, ಗುರು – ಶಿವ – ಜಂಗಮ ನಿಂದೆಯನ್ನು ಕೇಳದಿರುವುದು ಶೀಲ (ವ. ೫೮೮); ಪಂಚೇಂದ್ರಿಯ ಸಪ್ತಧಾತು, ಅರಿಷಡ್ವರ್ಗಗಳನ್ನು ಅತಿಗಳೆಯುವುದು ಶೀಲ (ವ. ೫೯४); ಅರ್ಥೇಷಣ, ದಾರೇಷಣ, ಪುತ್ರೇಷಣಗಳೆಂಬ

ಈಷಣತ್ರಯಗಳ ಆಕರ್ಷಣೆಯನ್ನು ಮೆಟ್ಟಿ ನಿಲ್ಲುವುದು ಶಿಲ (ವ. ೧೧೧೫) – ಹೀಗೆ ಚೆನ್ನಬಸವಣ್ಣನು ಶೀಲವಂತರ ೬೪ ಶೀಲಗಳಿಗೆ ಪ್ರತಿಯಾಗಿ ಭಕ್ತನಾದವನು ಆಚರಿಸಬೇಕಾದ ಶೀಲಗಳನ್ನು ಉಲ್ಲೇಖಿಸುವನು. ಶೀಲವಂತರು ತಮ್ಮ ಕಟ್ಟುನಿಟ್ಟಾದ ನೇಮ, ಆಚಾರಗಳಿಂದ ವೀರಶೈವ ಸಮಾಜದಲ್ಲಿಯೇ ಒಂದು ಪ್ರತ್ಯೇಕ ದ್ವೀಪವಾಗಿ ಹೋಗಿದ್ದಾಗ ಅವರು ಆಚರಿಸುತ್ತಿದ್ದ ಶೀಲಗಳ ಬಗೆಗೆ ಚೆನ್ನಬಸವಣ್ಣ ಕಟುವಾಗಿ ಟೀಕಿಸಿರುವುದು ಅವನ ಪ್ರಗತಿಪರ ಧೋರಣೆಗೆ ನಿದರ್ಶನವಾಗಿದೆ.

ಚೆನ್ನಬಸವಣ್ಣನದು ವಿಶಿಷ್ಟವಾಗಿ ಧಾರ್ಮಿಕ ಪ್ರವೃತ್ತಿ. ತನ್ನ ಕಾಲದ 'ವೀರಶೈವ'ಕ್ಕೆ ಒಂದು ನಿರ್ದಿಷ್ಟ ತಾತ್ವಿಕ ಚೌಕಟ್ಟನ್ನು ಒದಗಿಸಲು ವಿಶೇಷವಾಗಿ ಶ್ರಮಿಸಿದ ಜ್ಞಾನಿ, ವೀರಶೈವ ಧರ್ಮಕ್ಕೆ ಅದರ ಸಿದ್ಧಾಂತವನ್ನು ರೂಪಿಸಿದ ಕಾರಣಕ್ಕಾಗಿ ಅವನನ್ನು ಆಧುನಿಕ ಮನು ಎಂದು ಕರೆದರೂ ತಪ್ಪಾಗಲಾರದು. ಇವನು–ಶರಣರ ವೈಚಾರಿಕ ಧೋರಣೆಯ ಫಲವಾಗಿ ಬದಲಾವಣೆಗೊಂಡಿದ್ದ ಸಮಾಜವನ್ನು, ಸಂಪ್ರದಾಯನಿಷ್ಠ ಜಡವ್ಯಕ್ತಿಗಳಿಂದಾಗಿ ಪ್ರಗತಿಗೆ ಹಿಮ್ಮುಖವಾಗಿ ಸಾಗಿದ್ದ ಸಮಾಜವನ್ನು – ಹೀಗೆ ಎರಡೂ ನೆಲೆಗಳಲ್ಲಿ ಕಂಡಿರುವನು. ಈ ಸಂಧಿಕಾಲದಲ್ಲಿಯೇ ಚೆನ್ನಬಸವಣ್ಣ ಸಮಾಜದ ಲೋಪ ದೋಷಗಳನ್ನು ತಿದ್ದ ಹೊರಟದ್ದು, ಅದಾಗತಾನೇ ರೂಪುಗೊಳ್ಳುತ್ತಿದ್ದ ವೀರಶೈವ ಸಮಾಜಕ್ಕೆ ಒಂದು ನಿಶ್ಚಿತವಾದ ಆಚಾರ ಸಂಹಿತೆಯನ್ನು ಕೊಡಹೊರಟದ್ದು. ಚೆನ್ನಬಸವಣ್ಣ ಮಹಾಜ್ಞಾನಿ; ಪರಂಪರೆಯಲ್ಲಿನ ಒಳಿತನ್ನೆಲ್ಲ ಸ್ವೀಕರಿಸುವ ಉದಾರ ಮನೋಭಾವಿ; ತನಗೆ ಕೆಟ್ಟದೆನ್ನಿಸಿದ್ದನು ನಿಷ್ಠುರವಾಗಿ ಹೇಳುವ ನಿರ್ಭೀತ, ಭಕ್ತರು ತಪ್ಪಿ ನಡೆದಲ್ಲಿ ರೌರವ ನರಕ, ಕುಂಭೀಪಾಕ ನರಕ, ಪಂಚಮಹಾಪಾತಕಗಳ ಬೆದರಿಕೆಯೊಡ್ಡುವವ. ಅವನದು ಶಾಸ್ತ್ರದ ಶಿಸ್ತು; ವೈಚಾರಿಕ ಮನೋಭಾವದಿಂದ ಪಾಕಗೊಂಡ ವಿವೇಕ. ೧೨ನೇ ಶತಮಾನದ ಸಮಾಜೋ ಧಾರ್ಮಿಕ ಜೀವನವನ್ನು ತಿಳಿಯಲು ಇವನ ವಚನಗಳು ಒಂದು ಚಿನ್ನದ ಗಣಿ. ಹಾಗೆಯೇ ಅವನ ಒಲವು–ನಿಲವುಗಳನ್ನು ಆ ಮೂಲಕ ಅವನ ವ್ಯಕ್ತಿತ್ವವನ್ನು ಗ್ರಹಿಸಲೂ ಅವನ ವಚನಗಳು ಬಹಳ ಅಮೂಲ್ಯ ಆಕರಗಳು.

❐

---

* ವಚನಕಾರರು ವ್ಯಕ್ತಿ ಹಾಗೂ ಅಭಿವ್ಯಕ್ತಿ, ಸಂ. ಡಾ. ಸಿ. ಯು. ಮಂಜುನಾಥ, ಬಿ.ಸಿ. ವೀರಪ್ಪ, ಶ್ರೀ ಸರ್ಪಭೂಷಣ ಶಿವಯೋಗೀಶ್ವರ ಮಠ, ಕೆಂಪೇಗೌಡ ವೃತ್ತ, ಬೆಂಗಳೂರು–೯, ೧೯೯೩.

ಮಹಾಪ್ರಸಾದಿ ಶರಣ ಚೆನ್ನಬಸವಣ್ಣ

ಹೆಚ್. ಗಂಗಾಧರನ್

ಬೆಳಗಿನೊಳಗಣ ಬೆಳಗು ಮಹಾ ಬೆಳಗು
ಪ್ರಸಾದದಲ್ಲಿ ಒದಗಿದ ಪ್ರಸಾದಿಯಪರಿಣಾಮದ
ಪರಮಾನಂದವೇನೆಂದುಪಮಿಸುವೇನಯ್ಯ?
ಪರಮಾಶ್ರಯವೆ ತಾನಾಗಿ ಕೂಡಲಸಂಗಮದೇವಯ್ಯಾ
ಚನ್ನಬಸವಣ್ಣನೆಂಬ ಮಹಾಪ್ರಸಾದಿ
ಎನ್ನವಾಙ್ಮನಕ ಗೋಚರವಾಗಿ ನಾನೇನೆಂಬೆನಯ್ಯಾ?[1]

ಇದು ಜಗಜ್ಯೋತಿಯೆನಿಸಿದ ಬಸವಣ್ಣನವರು ಕಿರಿಯರಾದರೂ ಹಿರಿತನದರಿವನ್ನು ಪಡೆದ ಚನ್ನಬಸವಣ್ಣನವರನ್ನು ಕಂಡ ಬಗೆ. ಚನ್ನಬಸವಣ್ಣನವರನ್ನು ಅವರು ಮಹಾಪ್ರಸಾದಿ ಎಂದಿರುವುದರಲ್ಲಿ ಅಪರಿಮಿತ ಅರ್ಥವಿದೆ. ನಾವು ದಿನಿತ್ಯ ಬೆಳಕಿನ ಅನುಭವ ಪಡೆಯುತ್ತೇವೆ. ಮೋಡಕವಿದ ಮೇಲೆ ಸೂರ್ಯನು ಕಾಣುವುದಿಲ್ಲ. ಕಿರಣಗಳು ಇರುವುದಿಲ್ಲ. ಸೂರ್ಯ ಮತ್ತು ಕಿರಣಗಳು, ಅಂತೆಯೇ ಚಂದ್ರ ಮತ್ತು ಬೆಳಕು. ಇವುಗಳಲ್ಲಿ ನಿಜವಾದ ಬೆಳಕಾವುದು? ಸೂರ್ಯ ಚಂದ್ರರೋ ಅಥವಾ ಅದರ ಕಿರಣಗಳೋ? ಸೂರ್ಯ ಚಂದ್ರರನ್ನು ಬಿಟ್ಟು ಕಿರಣಗಳಿಲ್ಲ. ಅವು ಅಸ್ವತಂತ್ರ. ಕಿರಣಗಳಿಂದಲ್ಲದೆ ಬೆಳಕಿನ ಅನುಭವವಾಗದು. ಆದುದರಿಂದ ಕಿರಣಂಗಳೊಳಗಿನ ಬೆಳಗೇ ಸೂರ್ಯಚಂದ್ರರು. ಅವರೇ ಸ್ವತಂತ್ರರೋ? ಪರಿಪೂರ್ಣರೋ? ಇಲ್ಲೆನ್ನುತ್ತಾರೆ ದಾರ್ಶನಿಕರು. "ಇದಂ ಶ್ರೇಷ್ಠಂ ಜ್ಯೋತಿಷಾಂ ಜ್ಯೋತಿರುತ್ತಮಂ"[2] ಇದು ಎಲ್ಲ ಬೆಳಗಿಗಿಂತ ಶ್ರೇಷ್ಠವಾದ ಮಹಾ ಬೆಳಗು ಎಂದಿದೆ. ಜನ್ಮದತ್ತವಾದ ಕಣ್ಣುಗಳಿಂದ ಸೂರ್ಯಚಂದ್ರರ ಬೆಳಕನ್ನು ಕಂಡ ನಾವು ಸೂರ್ಯಚಂದ್ರರೇ ಈ ಬೆಳಕಿಗೆ ಕಾರಣರೆಂದು ಭಾವಿಸುತ್ತೇವೆ. ಆದರೆ ಅವರಿಗೆ ಬೆಳಕುಕೊಡುವ ಚೇತನವೇ ಬೇರೆ ಎಂಬುದರ ಅರಿವಿಲ್ಲ. ಅದು ಮಹಾಬೆಳಕು. ಅದನ್ನು ಚರ್ಮಚಕ್ಷುಗಳಿಂದ ಕಾಣಲಾಗುವುದಿಲ್ಲ.

ಏಕೆಂದರೆ ಅದು "ಏಕಸ್ತಥಾ ಸರ್ವಭೂತಾಂತರಾತ್ಮ ರೂಪಂ ರೂಪಂ ಪ್ರತಿರೂಪೋಭಭೂವ" ಎಂಬಂತೆ ಅದು ಸಮೂಹದ ಅಂತರಾತ್ಮನಾಗಿ ಸರ್ವರೂಪದಲ್ಲಿರುವುದನ್ನು ಯಾವ ಬಾಹ್ಯಕರಣಗಳಿಂದ ತಿಳಿಯಲು ಸಾಧ್ಯವಿಲ್ಲ. ಅದನ್ನೇ ಕಠೋಪನಿಷತ್ತಿನಲ್ಲಿ[3] "ನ ತತ್ರ ಸೂರ್ಯೋಭಾತಿ ನ ಚಂದ್ರತಾರಕಂ ನೇಮಾವಿದ್ಯತೋ ಭಾಂತಿ ಕುತೋಯಮಗ್ನಿಃ ತಮೇವ

ಭಾಂತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ" ಎಂದಿದೆ. ಎಲ್ಲರ ಪ್ರಕಾಶಕ್ಕೆ ಹಿನ್ನೆಲೆಯಾಗಿ ಯಾವುದೋ ಚೇತನವಿದೆಯೆಂಬುದು ಖಚಿತವಾಗುತ್ತದೆ. ಅದರ ಕೃಪೆಯಿಂದ ಅವು ಬೆಳಗುತ್ತವೆ. ಈ ಕೃಪೆ ಅವಕ್ಕೆ ದೊರೆತ ಪ್ರಸಾದ. ಸೂರ್ಯ ಚಂದ್ರರು ತಾವು ಪಡೆದ ಪ್ರಸಾದವನ್ನು ಲೋಕಕ್ಕೆ ನೀಡುತ್ತಾರೆ. ಲೋಕವನ್ನುದ್ಧರಿಸುತ್ತಾರೆ. ಸೂರ್ಯ ಚಂದ್ರರು ಮಹಾಪ್ರಸಾದಿಗಳು. ಸೂರ್ಯ ಚಂದ್ರರ ಬೆಳಕಿನ ಪ್ರಸಾದದಿಂದ ನಾವು ಬದುಕುತ್ತೇವೆ. ನಾವೂ ಪ್ರಸಾದಿಗಳೇ. ಚನ್ನಬಸವಣ್ಣನವರು ಎಲ್ಲರಿಗೆ ಪ್ರಸಾದವನ್ನಿತ್ತ ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಂಡು ಮಹಾಪ್ರಸಾದಿಯಾದವರು. ಅವರ ಸಂಸರ್ಗದಲ್ಲಿರುವುದೇ ತಮಗೆ ಪರಮಾನಂದ. ಅವರೇ ಪರಮಾಶ್ರಯ. ಚನ್ನಬಸವಣ್ಣನವರ ಹಿರಿಮೆಯನ್ನು ಮಾತು ಮತ್ತು ಮನಸ್ಸಿನಿಂದ ಅಳೆಯಲು ಸಾಧ್ಯವಿಲ್ಲವೆನ್ನುತ್ತಾರೆ ಬಸವಣ್ಣ.

ಮಹಾಪ್ರಸಾದಿಯಾರೆಂಬುದನ್ನು ಚನ್ನಬಸವಣ್ಣನವರ ನುಡಿಯಲ್ಲೇ ಕೇಳಬೇಕು. 'ಆಯತ, ಸ್ವಾಯುತ ಸಂಭಾವಿತವ ಅನಾಯುತಂಗಳು ಮುಟ್ಟಲಮ್ಮವು ನೋಡಾ, ಆತ ವಿಪರೀತ ಚಾರಿತ್ರ. ಅಂದೆಂತೆಂದೊಡೆ ಶ್ರೋತ್ರದ ಕೈಯಲರ್ಪಿಸುವ, ನೇತ್ರದ ಕೈಯಲರ್ಪಿಸುವ, ಘ್ರಾಣದ ಕೈಯಲರ್ಪಿಸುವ, ಜಿಹ್ವೆಯ ಕೈಯಲರ್ಪಿಸುವ, ತ್ವಕ್ಕಿ ಏ ಕೈಯಲರ್ಪಿಸುವ, ಮನದ ಕೈಯಲರ್ಪಿಸುವ, ಅಲ್ಲಲ್ಲಿಗೆ ತಟ್ಟದ, ಮುಟ್ಟದ, ಸೋಂಕದ, ಸುಖಂಗಳೆಲ್ಲವನು ಆ ಶರಣನು ವಿಚಾರದಿಂದಲ್ಲಲ್ಲಿಗೆ ಲಿಂಗಾರ್ಪಿತವ ಮಾಡುವ ಮರ್ಮವಬಲ್ಲನಾಗಿ ನಮ್ಮ ಕೂಡಲಚನ್ನ ಸಂಗಯ್ಯನಲ್ಲಿ "ಆತನೇ ಮಹಾಪ್ರಸಾದಿಯಯ್ಯಾ." ಜೀವನದ ಆಗುಹೋಗುಗಳಲ್ಲಿ ಇಂದ್ರಿಯಗಳು ಪ್ರಮುಖ ಪಾತ್ರವಹಿಸುತ್ತವೆ. ದೈವದತ್ತವಾದ ಪ್ರಕೃತಿ ಸಂಪತ್ತನ್ನು ಅನುಭವಿಸಿ ಆನಂದಿಸುವುದಕ್ಕೆ ಇಂದ್ರಿಯಗಳೇ ಮಾಧ್ಯಮಗಳು. ಇಂದ್ರಿಯಗಳ ಮೂಲಕ ಬರುವ ಆನಂದಾನುಭವ ದೇಹದ ಆನಂದಕ್ಕೆ ಅರ್ಪಿತವಾದರೆ ಅದು ವ್ಯರ್ಥ. ಅರ್ಥಹೀನ. ಅಂತಹ ಅನುವ ಮರುಘಳಿಗೆಯಲ್ಲಿ ದುಃಖಕ್ಕೆ ಕಾರಣವಾಗುತ್ತದೆ. ಅದನ್ನು ದೈವಪ್ರಸಾದವೆಂದು ಭಾವಿಸಿ ದೈವಕ್ಕೆ ಅರ್ಪಿಸುವುದು ಪ್ರಸಾದ ತತ್ವದ ಅರ್ಥ. ಅದರ ಸಾಧನೆ ಸುಲಭಸಾಧ್ಯವಲ್ಲ. ಅದು ಮಹಾಯೋಗ. ಇಂದ್ರಿಯಗಳಿಗೆ ಸಂದ ಸಂಪತ್ತನ್ನು ಸರ್ವೇಶ್ವರನಿಗೆ ಸಮರ್ಪಿಸುವ ಶಕ್ತಿ ಅನುಭಾವಿಗೆ, ಸಿದ್ಧಪುರುಷರಿಗೆ ಮಾತ್ರ ಸಾಧ್ಯ. ಇಂದ್ರಿಯಗಳಿಗೆ ಲಭ್ಯವಾಗುವ ಎಲ್ಲವೂ ಸುಖದಾಯಕವಾಗಿರುವುದಿಲ್ಲ. ನಷ್ಟದಾಯಕ ಸಂಗತಿಗಳಿರುತ್ತದೆ. ಸುಖದ ಸಂತೋಷವನ್ನು ತನ್ನದೆಂದೂ, ಕಷ್ಟಗಳು ದೈವದತ್ತ ದುಃಖಗಳೆಂದೂ ಭಾವಿಸುವುದು ಮಾನವನ ಸ್ವಭಾವ. ಅದನ್ನು ಮೀರಿ ನಿಲ್ಲುವುದೇ ಅನುಭಾವ. ಅದು ಮಹಾಪ್ರಸಾದ. ಅದನ್ನು ಸಿದ್ದಿಸಿಕೊಂಡವರು ಮಹಾಪ್ರಸಾದಿ. ಅವರು ಚನ್ನಬಸವಣ್ಣನವರು ಎಂಬುದು ಎಲ್ಲ ಶರಣರ ಅಭಿಮತ. ಪ್ರಸಾದ ತತ್ವ ಎಷ್ಟೇ ಮಹತ್ವದ ಎತ್ತರದ ಚಿಂತನೆ. ಇಲ್ಲಿ ಕ್ಷುದ್ರಚಿಂತನೆಗೆ ಅವಕಾಶವಿಲ್ಲ. ಆದರೂ ಮಾನವನಲ್ಲಿ ಅರ್ಥಹೀನ ಚಿಂತನೆ ಮೂಡಲು ಕಾರಣವಾದರೂ ಏನು? ಭರ್ತೃಹರಿಯು ಹೇಳುವಂತೆ ಚಿಂತಕನು ಹುಟ್ಟಿ ಬೆಳೆದ ಪರಿಸರ ಕಾರಣವಿರಬಹುದೆ? ಮಾನವನ ಚಿಂತನಧಾರೆಯ ವಿಧಾನವನ್ನು ಕುರಿತು ಅನೇಕ ವಿದ್ವಾಂಸರು ವಿಶ್ಲೇಷಿಸಿದ್ದಾರೆ. ಅಮೇರಿಕಾದ ಪ್ರಸಿದ್ಧ ಮನೋವಿಜ್ಞಾನಿ ಹಾಗೂ ದಾರ್ಶನಿಕ ಪ್ರೊ. ಸ್ಟೆಬ್ಬಿಂಗ್ ತಮ್ಮ ಕೃತಿಯಲ್ಲಿ ಮಾನವನ ಸ್ವಾಭಾವಿಕ ಚಿಂತನಮಂಥನದ ಸ್ವರೂಪವನ್ನು ವಿವರಿಸುತ್ತಾರೆ. ಪ್ರಚಲಿತ ಸಮಾಜದಲ್ಲಿ 'Twisted thinking' and 'Crooked arguements' ಪ್ರವೃತ್ತಿ ಇರುವುದನ್ನು ಗುರ್ತಿಸಿದ್ದಾರೆ.

ಇವುಗಳ ಅಂತರಾರ್ಥವನ್ನು ವಿವರಿಸುತ್ತಾ 'My thinking is twisted when I believe that I am thinking effectively and have discovered sound reasons for my conclusion but I am mistaken in this belief. The twist may be due to my supposing that I am in possession of all the relevant information, but in fact I am not. It may be due to my failure to see that my arguement is invalid. It may be due to inability to rid myself of some habit of thought that keeps my mind in blinkers. When I use a crooked arguement I am in a quite different frame of mind. Then I am trying to persuade you to accept a conclusion, although I know that I have not offered you reasonable grounds for its acceptance. I try to persuade you by a trick that is, by some dishonest device calculated to impress you'[5] ಜನಜೀವನದಲ್ಲಿ ಸರ್ವೇಸಾಮಾನ್ಯವಾದ ಸಂಗತಿಗಳೂ ಹೇಗೆ ವಿಕೃತಚಿಂತನೆಗೆ ಒಳಗಾಗಿವೆ ಎಂಬುದನ್ನು ಸೋದಾಹರಣಗಳಿಂದ ಪರಿಚಯಿಸುತ್ತಾರೆ. ಅಜ್ಞಾನಿಗಳಲ್ಲಿ ಚಿಂತನ ಮಂಥನ ಶಕ್ತಿಯಲ್ಲಿ ಕೊರತೆ ಬಂದರೆ ಸಹನೀಯ. ಜ್ಞಾನದಿಂದ ಅವರನ್ನು ತಿದ್ದಬಹುದು. ಅವಿವೇಕಿಗಳಲ್ಲಿ ಬರುವ ಚಿಂತನದ ವಿಕೃತಿಯನ್ನು ತಿದ್ದಲು ಸಾಧ್ಯವಾಗದೆಂದು ಮನಶ್ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ನಮ್ಮ ಕಣ್ಣೆದುರಿನಲ್ಲಿ ನಡೆಯುವ ಎಷ್ಟೋ ಸಂಗತಿಗಳಿಗೆ ಪೂರ್ಣ ಮಾಹಿತಿ ದೊರೆಯುವುದು ದುರ್ಲಭ. ಶತಶತಮಾನಗಳ ಹಿಂದಿನ ಸಂಗತಿಗಳನ್ನು ಕುರಿತು ನಿಶ್ಚಿತವಾಗಿ, ಆಧಾರಗಳಿಲ್ಲದೇ ಹೇಳಲು ಸಾಧ್ಯವಿಲ್ಲ. ಪ್ರಕೃತಿಗೆ ವಿರೋಧಿ ಸಂಗತಿಗಳನ್ನೂ ಸಾಮಾಜಿಕ ಸಾಂಪ್ರದಾಯಿಕ ಸಂಗತಿಗಳನ್ನೂ ಚಿತ್ರಿಸುವಾಗ ಮಾನವನ ಬುದ್ಧಿ ವಿಚಿತ್ರರೂಪ ತಳೆಯುವುದು ಸಹಜ. ಅಂತಹ ಪ್ರಸಂಗದಲ್ಲೂ ನವ್ಯವಾದ, ಕ್ರಿಯಾತ್ಮಕ ವಿವರಣೆ ಕೊಡುವೆವೆಂಬ ಅಹಂಕಾರ ತುಂಬಿದ್ದರೆ ಅಂತಹವರು ಎಷ್ಟೇ ವಿದ್ವಾಂಸರಾದರೂ ಸರ್ವಸಮರ್ಥನೀಯ ಸಂಗತಿಗಳನ್ನು ಬಿತ್ತರಿಸಲಾರರು. ಜಗತ್ತಿನಲ್ಲಿ ಮಾನವನ ಬುದ್ಧಿಯಿಂದಲೇ ಬಗೆಹರಿಸಲಾರದಂತಹ ಸಾವಿರಾರು ಸಮಸ್ಯೆಗಳಿವೆ. ವಿಜ್ಞಾನವೂ ವಿಫಲವಾದ ಪ್ರಸಂಗಗಳಿವೆ. ಹೀಗೆ ಜೀವಂತ ಸಮಸ್ಯೆಗಳನ್ನೇ ಬಗೆಹರಿಸಲು ಅಸಾಧ್ಯವಾಗಿರುವಾಗ ಐತಿಹಾಸಿಕ ಸಂಗತಿಗಳನ್ನು ಊಹಿಸಿ, ತಿರುಚಿ ಹೇಳುತ್ತಾ ಕುಹಕವಾದ ಮಾಡುವುದು, ಕ್ಷುದ್ರಬುದ್ಧಿಯ ದ್ಯೋತಕವಾಗುತ್ತದೆ. ಆದುದರಿಂದ ನಾವು ಸ್ವಕಪೋಲ ಕಲ್ಪನೆಯಿಂದ ಐತಿಹಾಸಿಕ ಪುರುಷರ ಜೀವನವನ್ನು ಅಳೆಯುವುದು ಹೃದಯದೌರ್ಬಲ್ಯದ ದುರಂತ ಎಂದಿದ್ದಾರೆ ವಿದ್ವಾಂಸರು. ಇಂತಹ ಮಾತುಗಳು ಚನ್ನಬಸವಣ್ಣನವರ ಜೀವನದ ಉಲ್ಲೇಖನ ಮಾಡುವ ಸಂದರ್ಭದಲ್ಲಿ ನೆನಪಿನಲ್ಲಿರುವುದು ಅಗತ್ಯ. 'ಲೋಕೋಭಿನ್ನರುಚಿ' ಎಂಬ ಲೋಕೋಕ್ತಿಯಿದೆ. ಆದರೆ ರುಚಿ ನೀಚ ಅಭಿರುಚಿಯಾಗಬಾರದಷ್ಟೆ! ಏಕನಾಥ ರಾಮಾಯಣದಲ್ಲಿ ಒಂದು ಸಗತಿಯನ್ನು ಪ್ರಸ್ತಾಪಿಸಿದ. ಅದನ್ನು ಇಲ್ಲಿ ಸ್ಮರಿಸಬಹುದು. ಸಂತ ಏಕನಾಥನಾ ರಾಮಾಯಣದ ಪ್ರವಚನ ಮಾಡುತ್ತಿದ್ದರು. ಅಲ್ಲಿ ಹನುಮಂತ ಸಾಮಾನ್ಯ ಶ್ರೋತೃವಾಗಿ ಕುಳಿತು ಕೇಳುತ್ತಿದ್ದ. ಸೀತಾಮಾತೆ ಅಶೋಕವನದಲ್ಲಿರುವ ಪ್ರಸಂಗವನ್ನು ವರ್ಣಿಸುತ್ತಾ ಅಲ್ಲಿನ ಹೂಗಳು ಬೆಳ್ಳಿಯಂತೆ ಬೆಳ್ಳಗೆ ಹೊಳೆಯುತ್ತಿದ್ದವು ಎಂದರು. ಆಗ ಹನುಮಂತ ಎದ್ದು ನಿಂತು. ಇದು ಸರಿಯಲ್ಲ. ಅಲ್ಲಿ ಹೂಗಳೆಲ್ಲಾ ಕೆಂಪಾಗಿದ್ದವು ಎಂದ. ಏಕನಾಥರಿಗೆ ಇವನು ಸಾಕ್ಷಾತ್ ಹನುಮಂತನೆಂಬ ಅರಿವಾಯಿತು. ಶ್ರೀರಾಮನೇ ಹೇಳಿಸಿದಂತೆ ಹೇಳಿದ್ದೇನೆ. ಇದರಲ್ಲಿ ಅಸತ್ಯವಿರಲಾರದು

ಎಂದರು ಏಕನಾಥರು. ಈ ಸಮಸ್ಯೆ ಬಗೆಹರಿಸಲು ಸೂಕ್ಷ್ಮದೇಹಿಗಳಾಗಿ ಇಬ್ಬರೂ ಶ್ರೀರಾಮನ ಸನ್ನಿಧಿಗೆ ತೆರಳಿದರು. ಶ್ರೀರಾಮನು ಇಬ್ಬರು ಹೇಳಿದ್ದೂ ಸರಿ ಎಂದರು ಇಬ್ಬರಿಗೂ ಆಶ್ಚರ್ಯವಾಯಿತು. ಇದರ ರಹಸ್ಯವೇನೆಂದು ಕೇಳಿದರು. ಅದಕ್ಕೆ ಉತ್ತರಿಸುತ್ತ ಶ್ರೀರಾಮಚಂದ್ರನು ಅಂದು ಹನುಮಂತ ಅಶೋಕವನ ಪ್ರವೇಶಿಸಿದಾಗ ಇದ್ದ ಅವನ ಮನೋಭೂಮಿಕೆಯನ್ನು ವಿವರಿಸಿದರು. ಸೀತಾಮಾತೆಗೆ ಬಂದೊದಗಿದ ಪರಿತಾಪ, ಶ್ರೀರಾಮಲಕ್ಷ್ಮಣರ ಅನುತಾಪ, ರಾವಣನು ಮಾಡಿದ ಪಾಪ ಇವುಗಳಿಂದ ಹನುಮಂತನ ತನುಮನದಲ್ಲಿ ಕೋಪ ತುಂಬಿತ್ತು. ಕೋಪದಿಂದ ರಕ್ತವಾಹಿನಿ ಉಲ್ಬಣವಾಗಿ ನೇತ್ರವನ್ನು ಆವರಿಸಿತ್ತು. ಆದಕಾರಣ ಅಲ್ಲಿನ ಹೂಗಳೆಲ್ಲಾ, ಕೆಂಪಾಗಿ ಕಾಣಿಸಿದವು. ಪ್ರಶಾಂತಮಾನದಿಂದ ನೋಡಿದರೆ ಅಲ್ಲಿನ ಹೂಗಳು ಸಹಜವಾಗಿ ಬೆಳ್ಳಗಿದ್ದವು ಎಂದರು. ಇಲ್ಲಿ ಕಥೆಯ ಐತಿಕಾಸಿಕತೆಯನ್ನು ಚರ್ಚಿಸಬೇಕಾಗಿಲ್ಲ. ಆದರೆ ಮನೋವೈಜ್ಞಾನಿಕ ಸತ್ಯವನ್ನು ಮನಗಾಣಬೇಕು. ಮಾನವನ ಮಸ್ತಿಷ್ಯದಿಂದ ಹೊರಹೊಮ್ಮುವ ಸಂಗತಿಗಳಿಗೆಲ್ಲಾ ಅವನ ಅಂತರಂಗದ ಸಂಸ್ಕಾರ ಕಾರಣವೆಂಬುದು ವಿಜ್ಞಾನಿಗಳ ಮತ. ಸಜ್ಜನಿಕೆಯು ಸುಸಂಸ್ಕೃತರು ಎಲ್ಲದರಲ್ಲೂ ಶ್ರೇಷ್ಠತೆಯನ್ನು ಕಾಣಬಯಸುತ್ತಾರೆ. ಅಸಂಸ್ಕಾರಿಗಳು ಎಲ್ಲದರಲ್ಲೂ ಕ್ಷುದ್ರತೆಯನ್ನು ಕಂಡು ಸಂತೋಷಿಸುತ್ತಾರೆ. ಸಾಹಿತಿ, ಸಂಶೋಧಕ ಅದರಲ್ಲೂ ಧಾರ್ಮಿಕ ಸಂಗತಿಗಳನ್ನು ಕುರಿತು ಚಿಂತಿಸುವ ಮಹಾನುಭಾವರು, ಜನತೆಯ ಮಾರ್ಗದರ್ಶಕರು. ಲೋಕಕಲ್ಯಾಣವೇ ಅವರ ಜೀವನದ ಗುರಿ. ಈ ಗುರಿತಪ್ಪಿದವರು ಜನಹಿತದ ವಿರೋಧಿಗಳಾಗಿರುತ್ತಾರೆ. ಜಗತ್ತಿನ ಇತಿಹಾಸದಲ್ಲಿ, ಏಸು, ಬುದ್ಧ, ಮಹಾವೀರ, ರಾಮಕೃಷ್ಣ ಪರಮಹಂಸರು, ಮಹಾತ್ಮ ಗಾಂಧೀಜಿಯವರಂತಹವರಲ್ಲೂ ಕ್ಷುದ್ರ ಸಂಗತಿಗಳನ್ನು ಕಾಣಬಯಸಿರುವ ಲೇಖಕರು ದೊರೆಯುತ್ತಾರೆ. ಅವರ ಬಗೆಗೆ ಅನುತಾಪವನ್ನು ವ್ಯಕ್ತಪಡಿಸಿದರೆ ಸಾಕೆಂದು ತೋರುತ್ತದೆ. ಆದರೆ ಮಹಾನುಭಾವರ ಮಹಾನುಭಾವತ್ವವನ್ನು ಕಂಡವರ ಚರಣಾರವಿಂದಕ್ಕೆ ಪ್ರಣಾಮ ಸಲ್ಲಿಸುತ್ತದೆ ಸಮಾಜ. ಜಗದ ಪ್ರತಿಯೊಬ್ಬ ಮಾನವನೂ ಒಂದಿಲ್ಲೊಂದು ಸಂಸ್ಕೃತಿಗೆ ಸಂಪ್ರದಾಯಕ್ಕೆ ಹೊಂದಿಕೊಂಡಿರುತ್ತಾನೆ. ಅಥವಾ ಮತ್ತೊಂದು ಸಂಸ್ಕೃತಿಯನ್ನು ಸಂಸ್ಕಾರವನ್ನು ವಿರೋಧಿಸುವ ಸ್ವಭಾವದ ಸಂಪ್ರದಾಯಕ್ಕೆ ಸೇರಿದವರಾಗಿರುತ್ತಾನೆ. ಮಹಾನುಭಾವರು ಸ್ವತಃ ಯಾವುದೇ ಲೋಕಕಲ್ಯಾಣಕರ ಸಂಸ್ಕೃತಿಯನ್ನು ಅಲ್ಲಗಳೆದಿಲ್ಲ. ಸಂಪ್ರದಾಯಗಳು, ಸಾಂಸ್ಕೃತಿಕ ಅಂಶಗಳಲ್ಲಿ ಒಂದು ಕಾಲದಲ್ಲಿ ಒಂದೆಡೆಗೆ ಅವಶ್ಯಕವಿದ್ದಂತೆ ಎಲ್ಲಾ ಕಾಲಕ್ಕೂ ಎಲ್ಲಾ ಸ್ಥಾನಕ್ಕೂ ಅವಶ್ಯಕವೆನಿಸುವುದಿಲ್ಲ. ಆದಕಾರಣ ಅವುಗಳಲ್ಲಿ ಪರಿವರ್ತನೆ, ಪುನರುಜ್ಜೀವನ ಕಾರ್ಯಗಳು ಮಹಾನುಭಾವರಿಂದ ಜರುಗುತ್ತವೆ. ಸಾಮಾನ್ಯರು ತಮ್ಮ ಸಂಸ್ಕೃತಿಯೇ ಲೋಕೋತ್ತರವೆಂದು ಹೇಳುವ ಅಮಲಿನಲ್ಲಿ ಅನ್ಯರನ್ನು ತೆಗಳಿ ಮನನೋಯಿಸುವ ಕಾರ್ಯಮಾಡುವುದುಂಟು. ಇದರಿಂದ ಧಾರ್ಮಿಕ ಕ್ಷೇತ್ರದಲ್ಲಿ ದ್ವೇಷ ಮೂಡಿ ಬಂದು ಸಂಗ್ರಾಮಗಳೇ ಜರುಗಿವೆ. ಉದಾತ್ತವಾಗಿ ಚಿಂತನ ಮಾಡಿದರೆ ಎಲ್ಲರ ಸಂಪ್ರದಾಯದಲ್ಲೂ ಪ್ರಶಂಸನೀಯ ಅಂಶಗಳಿರುತ್ತವೆ. ಅವುಗಳನ್ನು ಸ್ವಾಗತಿಸುವ ಮನೋಧರ್ಮವಿರಬೇಕು. ಸಮನ್ವಯ ದೃಷ್ಟಿ ನಮ್ಮಲ್ಲಿ ಬೆಳೆಯಬೇಕು. ಅಸಂಗತವಾದುದನ್ನು ಅರಿವಿನಿಂದ ಬಗೆಹರಿಸುವ ಭಾಗ್ಯ ನಮ್ಮದಾಗಬೇಕು. ಅದು ಶರಣರ ದೃಷ್ಟಿ ಮತ್ತು ಶರಣ ಸಂಸ್ಕೃತಿಯ ಸಂದೇಶ. ಈ ಹಿನ್ನೆಲೆಯಲ್ಲಿ ಶರಣರು ಸಾಧಿಸಿದ ಸಾಧನೆಗಳನ್ನು ನೀಡಿದ ಬೋಧನೆಗಳನ್ನು ಅವಲೋಕಿಸುವುದು ಅಗತ್ಯ.

ಚನ್ನಬಸವಣ್ಣನವರು ಸಮಕಾಲೀನ ಶರಣರಲ್ಲಿ ಅಪಾರ ಗೌರವ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದವರು. ವಯಸ್ಸಿನಲ್ಲಿ ಕಿರಿಯರಾದರೂ ತಮ್ಮ ಅಪರಿಮಿತ ಜ್ಞಾನಸಂಪತ್ತಿನಿಂದ ಹಿರಿಯರೆಂಬ ಮನ್ನಣೆಗೆ ಪಾತ್ರರಾಗಿದ್ದರು. ಶರಣಸಮುದಾಯದಲ್ಲಿ ವೈರಾಗ್ಯ ಚಕ್ರವರ್ತಿ ಅಲ್ಲಮಪ್ರಭುವಿನ ಸ್ಥಾನ ಹಿರಿದು. ಜಗತ್ತಿನ ಎಲ್ಲ ಮಹಾನುಭಾವರ ಸರಿಸಮವೆನಿಸಬಲ್ಲ ದಿವ್ಯಚೇತನ. ಅವರು ತಮ್ಮ ನಡೆಯಿಂದ ನುಡಿಯಿಂದ ಸರ್ವಜನಮಾನ್ಯರೆನಿಸಿದ್ದಾರೆ. ಅಂದಿಗೂ ಇಂದಿಗೂ ಪೂಜ್ಯರೆನಿಸಿದ್ದಾರೆ. ಅವರು ಚನ್ನಬಸವಣ್ಣನವರನ್ನು ಜಗತ್ತಿಗೆ ಪರಿಚಯಿಸಿದ ಸಂಗತಿ ಇತಿಹಾಸದಲ್ಲೆ ಅತ್ಯದ್ಭುತವಾದುದು.

"ಈ ಲೋಕಾಲೌಕಿಕವನತಿಗಳೆದು ನಿಜದಲ್ಲಿ ನಿವಾಸಿಯಾಗಿಪ್ಪ ಗೊಹೇಶ್ವರನ ಶರಣ ಚೆನ್ನ ಬಸವಣ್ಣನ ಘನವನು ಬಸವಣ್ಣನ ಕೃಪೆಯಿಂದಲಾನರಿದು ನಮೋ ನಮೋ ಎನುತಿರ್ದೆನು.[೬]

"ಬಸವಣ್ಣ ಎಂಬಲ್ಲಿ ಎನ್ನ ತನು ಬಯಲಾಯಿತ್ತು. ಚನ್ನಬಸವಣ್ಣ ಎಂಬಲ್ಲಿ ತನ್ನ ಪ್ರಾಣ ಬಯಲಾಯಿತು. ಉಭಯ ಸ್ಥಲ ನಿರ್ಣಯ ನಿಃಪತಿ ಗೋಹೇಶ್ವರ ಲಿಂಗದಲ್ಲಿ ಚನ್ನಬಸವಣ್ಣನ ಕರುಣದಿಂದಾನು ಬದುಕಿದೆನು ಕಾಣಾ ಸಂಗನ ಬಸವಣ್ಣ."[೭]

"ಎನ್ನ ಮನವ ಚನ್ನಬಸವಣ್ಣನಳವಡಿಸಿಕೊಂಡ"[೮]

"ಸರ್ವಜೀವ ಪರಿಪೂರ್ಣಕಳೆ ಚೆನ್ನಬಸವಣ್ಣನಿಂದ ಎನಗಾಯಿತ್ತು."[೯]

"ಬೆಳಗುವ ಜ್ಯೋತಿಯ ತಿರುಳಿನಂತೆ ಹೊಳೆವ ಕಂಗಳ ಕಾಂತಿಯೊಳ ಹೊರಗೆನ್ನದೆ ಅಳವಟ್ಟ ಶಿವಯೋಗಿಯ ಕಂಡೆನೋಡಾ! ನಿಜಉಂಡ ನಿರ್ಮಳದ ಘನವ ಕಂಡು ಬೆರಗಾದೆ ನಾನು, ಗುಹೇಶ್ವರಲಿಂಗದಲ್ಲಿ ಚನ್ನಬಸವಣ್ಣನಿಂದಲಾನು ಬದುಕಿದೆನು."[೧೦]

"ಸ್ವಯಂಭುಜ್ಞಾನಿ ಗೊಹೇಶ್ವರ ಲಿಂಗದಲ್ಲಿ ಚನ್ನ ಬಸವಣ್ಣನೊಬ್ಬನೆ"[೧೧]

"ಗೊಹೇಶ್ವರ ಲಿಂಗದಲ್ಲಿ ಸರ್ವಸಂದೇಹವತಳೆದಿಪ್ಪ ಚೆನ್ನಬಸವಣ್ಣಂಗೆ ನಮೋ ನಮೋ ಎಂಬೆ"[೧೨]

"ಲಿಂಗ ಜಂಗಮದಲ್ಲಿ ತನ್ನ ಮರೆದುರರಿಗೊಂಡ ಲಿಂಗೈಕ್ಯನ ಗೊಹೇಶ್ವರ ಲಿಂಗದಲ್ಲಿ ಚೆನ್ನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು"[೧೩]

"ಗೊಹೇಶ್ವರ ಲಿಂಗದಲ್ಲಿ ಸರ್ವಸಂಸಾರವಿರಹಿತ ಚೆನ್ನಾಬಸವಣ್ಣಂಗೆ ನಮೋ ನಮೋ ಎಂಬೆನು"[೧೪]

"ಗೊಹೇಶ್ವರ ಲಿಂಗದಲ್ಲಿ ನೀನೊಬ್ಬನೆ ಮಹಾಜ್ಞಾನಿಯೆಂಬುದು ಕಾಣಬಂದಿತ್ತು ಕಾಣಾ ಚೆನ್ನಬಸವಣ್ಣ."[೧೫]

ತನುವ ಗುರುವಿಂಗೆ ಸಮರ್ಪಿಸಿ, ಮನವ ಲಿಂಗಕ್ಕೆ ಸಮರ್ಪಿಸಿ, ಭಾವವ ಜಂಗಮಕ್ಕೆ ಸಮರ್ಪಿಸಿ, ನಿಜವ ತೃಪ್ತಿಯಲರ್ಪಿಸಿ, ಘನವನರಿವಿಂಗರ್ಪಿಸಿ. ಅರ್ಪಿತವೆ ಅನರ್ಪಿತವಾಗಿ ಅರ್ಪಿತ ಅನಪಿರ್ತಿತಂಗಳಳಿದು ನಿತ್ಯಪ್ರಸಾದಿಯಾಗಿ ಪ್ರಸಾದದ ಹಾದಿಯನೆಲ್ಲರಿಗೆ ತೋರಿ ಮಹಾಪ್ರಸಾದದ ಬೆಳವಿಗೆಯ ಮಾಡಿದನು ಗೊಹೇಶ್ವರನ ಶರಣ ಚೆನ್ನಬಸವಣ್ಣ.[೧೬]

ಮುಂತಾದ ಶಿವ ನುಡಿಗಳು ಚೆನ್ನಬಸವಣ್ಣನವರ ಹಿರಿಮೆ ಗರಿಮೆಗಳನ್ನು ಸ್ಪಷ್ಟಪಡಿಸುತ್ತವೆ. ಅವರು ಮಹಾಪ್ರಸಾದಿಯಾದ ರೀತಿಯನ್ನು ಇಲ್ಲಿ ಬಿತ್ತರಿಸಿದೆ. ಪ್ರಸಾದ ತತ್ವದ ವಿವರಣೆಯಿದೆ. ಪ್ರಸಾದ ಶರಣ ತತ್ವದ ಪವಿತ್ರ ಪಾರಿಭಾಷಿಕ ಶಬ್ದ. ಶರಣರು ತಮ್ಮ ಬದುಕಿನ ಬೆಳಕಿಗೆ ಗುರು

ಪ್ರಸಾದವನ್ನು ಬಯಸಿದ್ದಾರೆ. ಪರರಿಂದ ಪಡೆಯುವುದು ಪ್ರಸಾದವಲ್ಲ. ನೀಡಿ ಪಡೆಯುವುದು ಪ್ರಸಾದ. ಎಲ್ಲವೂ ದೈವಪ್ರಸಾದವೇ ಆದರೂ ಅದನ್ನು ದೈವಕ್ಕರ್ಪಿಸಿ ಅನುಭವಿಸುವುದು ಪ್ರಸಾದ. ಇಂತಪ್ಪ ಘನತತ್ವವನ್ನು ಕ್ಷುದ್ರ ಅಥವಾ ಗೃಧ್ರದೃಷ್ಟಿಯಿಂದ ನೋಡಬಾರದು. ಪ್ರಸಾದ ತತ್ವದ ಪಾವನತ್ವವನ್ನು ಮರೆತು ಪಾಮರತ್ವದಿಂದ ನೋಡಿದ ಕೆಲವು ನಿದರ್ಶನಗಳು ಬಹು ಜನರ ಮನ ನೋಯಿಸಿರುವುದು ಸಹಜ. ರಾಹು ಒಮ್ಮೆ ಸೂರ್ಯನಿಗೆ ಅಡ್ಡಬಂದರೆ ಸೂರ್ಯನ ಕಾಂತಿ ಕುಂದುವುದಿಲ್ಲ. ನೋಡವ ನಮಗೆ ತೇಜಸ್ಸು ಮರೆಯಾಗಿರುತ್ತದೆ. ಕ್ಷಣ ಕಾಲವನರಿತ ಸೂರ್ಯನ ತೇಜಸ್ಸು ಯಥಾವತ್ತಾಗಿ ಪ್ರಕಾಶವಾಗುತ್ತದೆ. ಅಂತೆಯೇ ಕ್ಷುದ್ರ ಚಿಂತನೆಗಳಿಂದ ಚೆನ್ನಬಸವಣ್ಣನವರ ಹಿರಿಮೆಗರಿಮೆಗೆ ಕುಂದು ಬರದು.

ಚೆನ್ನಬಸವಣ್ಣನವರ ಬಗೆಗೆ ವಿಕೃತ ಚಿಂತನೆ ಮೂಡಿಬಂದಿರುವುದು ಅವರ ಜನನದ ಬಗೆಗೆ ಶೋಧಿಸಿದ ಸಂಶೋಧಕರ ಸಂಕುಚಿತ ಮನೋಭವ ಕಾರಣ. ಅವರ ತಂದೆಯ ಹೆಸರನ್ನು ಶರಣ ಚರಿತ್ರೆಯನ್ನು ಬರೆದ ಹಲವು ಕವಿಗಳು ಪ್ರಸ್ತಾಪಿಸಿಲ್ಲ ಅದನ್ನು ಪ್ರಸ್ತಾಪಿಸದಿರುವುದಕ್ಕೆ ಕಾರಣವನ್ನು ಹೇಳಿಲ್ಲ. ಆದರೆ ತಮ್ಮ ಕಾವ್ಯಗಳಲ್ಲಿ ಹೆಸರಿಸಿರುವ ಎಲ್ಲ ಶರಣರ ಮಾತಾ ಪಿತೃಗಳ ಹೆಸರನ್ನು ಹೇಳಿಲ್ಲ. ಅದಕ್ಕೆ ಕಾರಣವನ್ನು ಹುಡುಕುವ ಅಗತ್ಯವಿಲ್ಲ! ಆದಾಗ್ಯೂ ಗೊಂದಲಕ್ಕೆ ಕಾರಣವಾಗಿದ್ದು ಕವಿಗಳ ಭಿನ್ನದೃಷ್ಟಿ. ಅಕ್ಕನಾಗಮ್ಮ ಬಸವಣ್ಣನವರ ಸೋದರಿ. ಅವರ ಕ್ರಾಂತಿಗೆ ಸಾಧನೆಗೆ ಕಾರಣಳೂ ಪ್ರೇರಕಳೂ ಪೋಷಕಳೂ ಆದಕಾರಣ ಮಾತೆಯ ಹೆಸರು ಪ್ರಚಲಿತವಿದ್ದು ಅದನ್ನು ಪ್ರಸ್ತಾಪಿಸಿರಬಹುದು. ಹಾಗೆ ಬಸವಪುರಾಣ ತತ್ವ ಭೀಮಕವಿ ಸೂಚ್ಯನಾ ಪದ್ಯದಲ್ಲಿ

ತರುಣಿ ನಾಗಾಂಬೆಯ ಸುಗರ್ಭದಿ
ನಿರುಪಮಜ್ಞಾನ ಸ್ವರೂಪಂ
ಪರಮಕಾರಣ ಚನ್ನಬಸವಂ ಉದ್ಭವಂಗೈದಂ[೧೭]

ಎಂದೂ

ಪ್ರಭುಲಿಂಗ ಲೀಲೆಯ ಕರ್ತೃ ಚಾಮರಸನು
ಮಿಕ್ಕು ಭಕ್ತಿಯಲೊಂದು ದಿವಸದ
ಲಕ್ಕನಾಗಾಯಿಗಳು ಬಸವನ
ಒಕ್ಕು ಮಿಕ್ಕ ಮಹಾಪ್ರಸಾದವನುಣಲು ಕ್ಷಣದೊಳಗೆ।
ತಕ್ಕ ಶಿವತತ್ವ ಸ್ವರೂಪವೆ
ಸಿಕ್ಕಿ ಬೆಳೆದುದಯಿಸಲು ಕಾಣುತ
ಲಕ್ಕನಾ ಬಸವೇಶ್ವರನ ಹೆಸರಿಟ್ಟ ಶಿಶುಗೆ[೧೮]

ಎಂದು ಕಾರಣವನ್ನು ಹೇಳಿದ್ದಾರೆ.

ಚೆನ್ನಬಸವ ಪುರಾಣ ಕರ್ತೃ ವಿರೂಪಾಕ್ಷ ಪಂಡಿತನು
ನಮ್ಮೀ ಚಿತ್ಕಳಾಮೃತ ಪ್ರಸಾದ ವಾಂದರಿಂ ನಿನ್ನಗರ್ಭದೊಳಗೇ।
ತೊಳಗುವೆಮ್ಮೀ ಷಣ್ಮುಖ ಸ್ಥಿತ ಪ್ರಣವನಿ।
ವರ್ಮಾಳ ರೂಪನಾ ಷಟ್ಸ್ಥಲ ಬ್ರಹ್ಮಾಕಲಿಭೂ।
ತಳವಂದ್ಯ ನರ್ಗಣಿತ ಪವಾಡ ಪುರುಷಂ ಜನಿಪನಂದೀಶ್ವರಂ ನುಡಿದನು[೧೯]

ಇಲ್ಲಿ ಶಿವನ ಪ್ರಸಾದದಿಂದ ಜನಿಸಿದರೆಂದು ಹೇಳಿದೆ.

ಹಿಂದಿ ಪುರಾಣ ತತ್ವಗಳು ಪ್ರತಿಯೊಬ್ಬ ಮಹಾಪುರುಷನೂ ಶಿವಲೋಕ. ವಿಷ್ಣು ಲೋಕದಲ್ಲಿದ್ದ ದೇವತೆಗಳೋ ದೇವಗಣಂಗಳೋ ಆಗಿದ್ದು ಕಾರಣಾಂತರದಿಂದ ಭವದಲ್ಲಿ ಅವತರಿಸುತ್ತಾರೆಂದು ವರ್ಣಿಸುವುದು ಸ್ವಾಭಾವಿಕ. ಶರಣರ ಕಾಲದಲ್ಲಿ ಪ್ರಸಾದಕ್ಕೆ ಮಹತ್ವವನ್ನು ಕೊಟ್ಟ ಕಾರಣ ಮಹಾಪುರುಷರ ಜನನಕ್ಕೆ ಮಹಾಪುರುಷರ ಪ್ರಸಾದದ ಪರಿಣಾಮವಾಗಿ ಜನಿಸಿದರೆಂಬ ತತ್ವ ಬಳಕೆಯಾದದ್ದು ಇತ್ತೀಚೆಗೆ. ಶೂನ್ಯ ಸಂಪಾದನ ಕೃತಿಗಳ ರಚನೆಯ ಕಾಲಕ್ಕೆ ಪ್ರಸಾದದಿಂದ ಜನಿಸಿದರೆಂಬ ಪ್ರಸಂಗಗಳು ರೋಚಕವಾಗಿ ಚಿತ್ರಿತವಾಗಿವೆ. ಚೆನ್ನಬಸವಣ್ಣನವರ ಜನನ ವೃತ್ತಾಂತವನ್ನು ಸೂಕ್ಷ್ಮವಾಗಿ ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ (ಕ್ರಿ.ಶ. ೧೪೨೫) 'ಹಲಿಗೆದೇವರ ಶೂನ್ಯ ಸಂಪಾದನೆ (ಕ್ರಿ.ಶ. ೧೫೩೦)' 'ಸಿದ್ಧನಂಜೇಶನ ಗುರುರಾಜಚಾರಿತ್ರ (ಕ್ರಿ.ಶ. ೧೬೭೭)' ಶಾಂತಲಿಂಗದೇಶಿಕನ ಭೈರವೇಶ್ವರ ಕಾವ್ಯದಕಥಾಮಣಿ ಸೂತ್ರ ರತ್ನಾಕರ (ಕ್ರಿ.ಶ. ೧೬೮೦) ಅದೃಶ್ಯ ಕವಿಯ ಪ್ರೌಢರಾಯನ ಕಾವ್ಯ (ಕ್ರಿ.ಶ. ೧೬೮೦) ಚನ್ನಪ್ಪ ಕವಿಯ ಶರಣಲೀಲಾಮೃತ (ಕ್ರಿ.ಶ. ೧೭೦೦) ಇವರುಗಳು ಶಿವನ ಬಸವಣ್ಣನ ಮತ್ತು ಕಕ್ಕಯ್ಯನ ಪ್ರಸಾದದಿಂದ ಚೆನ್ನಬಸವಣ್ಣನವರು ಜನಿಸಿದರೆಂದು ತಮ್ಮ ಕಾವ್ಯಗಳಲ್ಲಿ ಹೇಳಿದ್ದಾರೆ. ಇವರಲ್ಲದೆ ಕ್ರಿ.ಶ. ೧೧೯೫ರಲ್ಲಿ ಆಂಧ್ರಪ್ರದೇಶದಲ್ಲಿ ಪ್ರಖ್ಯಾತರಾಗಿದ್ದ ಪಾಲ್ಕುರಿಕೆ ಸೋಮನಾಥನು ಕನ್ನಡದಲ್ಲಿ "ಚನ್ನಬಸವಸ್ತೋತ್ರರಗಳೆ" ಎಂಬ ಗ್ರಂಥವನ್ನು ಸಂಸ್ಕೃತದಲ್ಲಿ "ಶ್ರೀಚನ್ನಬಸವೋದಾಹರಣಂ" ಎಂಬ ಗ್ರಂಥವನ್ನು ಬರೆದಿದ್ದಾನೆ. ಆಂಧ್ರಪ್ರದೇಶದಲ್ಲಿ ಕ್ರಿ.ಶ. ೧೭೫೧ರಲ್ಲಿ ಜೀವಿಸಿದ್ದ ಅಲತ್ತೂರಿ ಪಾಪಕವಿಯು "ಚನ್ನಬಸವ ಪುರಾಣಮು" ಎಂಬ ಚಂಪೂಗ್ರಂಥವನ್ನು ಬರೆದಿದ್ದಾನೆ. ಆಂಧ್ರದ ಕುಮಾರಸ್ವಾಮಿಯು ಸಂಸ್ಕೃತದಲ್ಲಿ "ಚನ್ನಬಸವ ಪುರಾಣ" ಎಂಬ ಕಾವ್ಯವನ್ನು ಬರೆದಿದ್ದಾನೆ.[೨೦]

ಈ ಎಲ್ಲ ಕವಿಗಳೂ ಅಕ್ಕನಾಗಮ್ಮನು ಶಿವನಪ್ರಸಾದ, ಬಸವಣ್ಣನ ಪ್ರಸಾದ ಮತ್ತು ಕಕ್ಕಯ್ಯನ ಪ್ರಸಾದದಿಂದ ಚನ್ನಬಸವಣ್ಣನಿಗೆ ಜನ್ಮವಿತ್ತ ವೃತ್ತಾಂತವನ್ನು ಚಿತ್ರಿಸಿವೆ. ಆದರೆ ಅಕ್ಕನಾಗಮ್ಮನ ಪತಿಯ ಹೆಸರನ್ನು ಹೇಳಲಿಲ್ಲ. ಅಕ್ಕನಾಗಮ್ಮ ಮತ್ತು ಚನ್ನಬಸವಣ್ಣನವರಿಗೆ ಶರಣರ ಚರಿತ್ರೆಯಲ್ಲಿ ಒಂದು ಪ್ರಮುಖ ಸ್ಥಾನವಿದೆ. ಅವರ ಬಗೆಗೆ ಸತ್ಯಾಂಶವನ್ನು ಹೇಳಬೇಕಾಗಿತ್ತು. ಆದಕಾರಣ ಅಕ್ಕನಾಗಮ್ಮ ಲಗ್ನವಾಗದೇ ಇದ್ದರೂ ಸಂತಾನವಾಗಿದೆ. ಅದರಲ್ಲೂ ಕಕ್ಕಯ್ಯನ ಪ್ರಸಾದದಿಂದ ಅಂದ ಮೇಲೆ ಏನೋ ಸಂಬಂಧವಿರಬಹುದೆಂದು ಊಹಿಸುವ ಚಿಂತಕರೂ ಇರುವುದು ದುರ್ದೈವದ ಸಂಗತಿ. ಅಂತೆಯೇ ಬಸವಣ್ಣನವರ ಪ್ರಸಾದದಿಂದ ಜನಿಸಿದ್ದರೆಂದರೆ ಅನುಮಾನಪಡುವುದು ಸುಸಂಸ್ಕೃತರ ಲಕ್ಷಣವಾಗಬಲ್ಲದೆ? ಇಂತಹ ಅಸಂಗತ ದೃಷ್ಟಿ ಕೋನದ ಚಿಂತನೆಯ ಬಗೆಗೆ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು ತಮ್ಮ ಅವಿರಳಜ್ಞಾನಿ ಚನ್ನಬಸವಣ್ಣ ಕೃತಿಯಲ್ಲಿ ಸಾಕಷ್ಟು ಬೆಳಕುಚೆಲ್ಲಿದ್ದಾರೆ. ಆದುದರಿಂದ ಇಲ್ಲಿ ಹೆಚ್ಚು ವಿಸ್ತರಿಸುವ ಅಗತ್ಯವಿಲ್ಲ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಕಾವ್ಯ ತತ್ವಗಳು ಯಾವುದೋ ತತ್ವಕ್ಕೆ ಮಹತ್ವಕೊಡಬೇಕಾದ ಕಾರಣ ಪ್ರಸಾದದ ಪ್ರಸಂಗವನ್ನು ವೈಭವೀಕರಿಸಿರಬಹುದು ಎಂಬುದು ಒಂದು ಸಂಗತಿ. ಅವರಿಗೆ ಅಕ್ಕನಾಗಮ್ಮನವರ ಪತಿ ಯಾವುದೇ ವಚನ ರಚನೆ ಮಾಡಿಲ್ಲ ಮತ್ತು ಅನುಭವ ಮಂಟಪದಲ್ಲಿ ಪ್ರಧಾನಪಾತ್ರವಹಿಸಿಲ್ಲ. ಆದುದರಿಂದ ಅವರ ಹೆಸರು ಪ್ರಚಲಿತವಾಗದೇ ಇದ್ದುದು ಒಂದು ಕಾರಣ. ಎಲ್ಲಾ ಕಾವ್ಯಗಳಲ್ಲೂ ಎಷ್ಟೋ ಜನ ಶರಣರ ಮಾತಾಪಿತೃಗಳ ಹೆಸರಿಲ್ಲ. ಆದುದರಿಂದ ಅವರನ್ನು ಅಯೋನಿಜರೆಂದು ಭಾವಿಸುವುದು ಸಾಧ್ಯವಿಲ್ಲವಷ್ಟೆ? ಎಷ್ಟೋ ಜನ ಲೋಕೋತ್ತರ

ವ್ಯಕ್ತಿಗಳಾಗಿರುತ್ತಾರೆ. ಅವರ ಮಾತಾಪಿತೃಗಳ ಹೆಸರು ಎಲ್ಲರಿಗೂ ಗೊತ್ತಿರುವುದಿಲ್ಲ. ಹಾಗೆ ಗೊತ್ತಿಲ್ಲದವರಿಗೆ ತಂದೆ ತಾಯಿ ಇಲ್ಲದವರೆಂದೂ ಹೇಳಲು ಸಾಧ್ಯವಾಗದು. ಸುದೈವದಿಂದ ಒಬ್ಬ ಶ್ರೇಷ್ಠ ಕವಿ ಸಿಂಗಿರಾಜನು ತನ್ನ 'ಅಮಲಬಸವ ಚಾರಿತ್ರ್ಯ' ಅಥವಾ 'ಸಿಂಗಿರಾಜಪುರಾಣ'ದಲ್ಲಿ ಅಕ್ಕನಾಗಮ್ಮನವರ ಪತಿ ಶಿವಸ್ವಾಮಿ ಎಂಬುವರೆಂದು ವಿಶಿಷ್ಟವಾಗಿ ಉಲ್ಲೇಖಿಸಿರುವಾಗ, ಅದನ್ನು ನಂಬಬಾರದೇಕೆ? ವಿಕಲ್ಪ ಬುದ್ಧಿಯಿಂದ ನೋಡಿದರೆ ವಿಶಿಷ್ಟ ಸಂಸ್ಕೃತಿಯ ಬಗೆಗೆ ವಿಕೃತ ಭಾವನೆಗಳು ಬರುವುದು ಸಹಜ. ಸುಕೃತರಿಗೆ ಸತ್ಯದ ಒಂದು ಹೊಂಗಿರಣ ಸಿಕ್ಕಿದರೆ ಸಾಕು, ಅದರಲ್ಲಿ ತಮ್ಮ ಆತ್ಮಾನುಭಾವದ ಬೆಳಕು ಕಾಣುತ್ತಾರೆ. ವಿಶಿಷ್ಟತೆಯ ಭಾವನೆ ಅವರ ಅಂತರಂಗದಲ್ಲಿ ಮೂಡುತ್ತದೆ. ಶರಣ ಸಂಸ್ಕೃತಿಯಲ್ಲಿರುವ ಅಭಿಮಾನಿಗಳಿಗೆ, ನಿಷ್ಠರಿಗೆ ಸಿಂಗಿರಾಜನ ಬಗೆಗೆ ಗೌರವ ಮೂಡುತ್ತದೆ. ಅವರ ವಿವರಣೆ ಒಪ್ಪಿಗೆಯಾಗುತ್ತದೆ. ಹೀಗೆ ಐದಾರು ಶತಮಾನದ ಹಿಂದಿನ ಕವಿಯೇ ಹೇಳಿದ್ದರೂ ಅದನ್ನು ಶಂಕಿಸುವ ಪ್ರವೃತ್ತಿ ಈ ಶತಮಾನದಲ್ಲಿ ಏಕೆ ಬಂದಿತೋ ತಿಳಿಯದು. ಶರಣ ಸಂಸ್ಕೃತಿ ಜನಪ್ರಿಯವಾಗುತ್ತಿರುವುದರ ಬಗೆಗೆ ಅಸೂಯೆಯೆ ಕಾರಣವೆ? ತಾನು ಹೊಸದನ್ನು ಹೇಳುತ್ತೇನೆಂಬ ದುರಭಿಮಾನವೆ? ಇವುಗಳನ್ನು ಅಭಿಮಾನಿ ಓದುಗರು ನಿರ್ಧರಿಸಬೇಕು.

ಚೆನ್ನಬಸವಣ್ಣನವರ ಜನನದ ಬಗೆಗೆ ಅನೇಕ ಖ್ಯಾತ ವಿದ್ವಾಂಸರು ವಿವರಣೆ ನೀಡಿದ್ದಾರೆ. ಗ್ರಂಥಗಳನ್ನು ಲೇಖನಗಳನ್ನು ಬರೆದಿದ್ದಾರೆ. ಹಿಂದೆ ಇಂತಹ ಕ್ಷುದ್ರ ಚಿಂತನೆಯನ್ನು ನಡೆಸಿದಾಗ ಶಾಸ್ತ್ರಜ್ಞರು ಪ್ರತಿಭಟಿಸಿದ್ದಾರೆ. ಆದರೆ ಅದಕ್ಕಿಂತಲೂ ಪಾತಾಳಕ್ಕಿಳಿದು ಅವರ ಬಗೆಗೆ ಅಸಹ್ಯಕರವಾಗಿ ಬರೆಯುವ ದುಷ್ಟತನವನ್ನು, ಅವಿವೇಕವನ್ನು ಅಭಿವ್ಯಕ್ತಿ ಸ್ವಾತಂತ್ರ್ಯವೆಂದು ಪ್ರತಿಪಾದಿಸುವುದು ಕನ್ನಡದ ಸಂಸ್ಕೃತಿಯೇ? ಈ ಯುಗದ ನಾಗರೀಕತೆಯೆ? ಅಂತಹ ಬರಹದಿಂದ ಲೇಖಕರು ಸ್ಥಾಪಿಸಿದ್ದೇನು? ಸಾವಿರಾರು ಜನರ ಮನಸ್ಸಿಗೆ ನೋವನ್ನುಂಟು ಮಾಡುವುದು ಮಾತ್ರವಲ್ಲದೆ ಬೇರೇನು ಸಾಧ್ಯ? ಇಂತಹ ಬರೆಹ ಸಾಹಿತ್ಯವಾಗಬಲ್ಲುದೆ? ಬಹುಜನರ ಅಭಿಮತಕ್ಕೆ ಮನ್ನಣೆಯಿತ್ತ ಸರ್ಕಾರದ ನಿಲುವನ್ನು ವಿರೋಧಿಸುವ ಪ್ರವೃತ್ತಿ ನಮ್ಮ ಸಂಸ್ಕೃತಿಯ ಪತನವನ್ನು ಸೂಚಿಸುತ್ತದೆ. ಪ್ರತಿಭಟನೆ ಮಾಡುವವರು ಇಂತಹ ಲೇಖನ ಇತಿಹಾಸಸಿದ್ಧವೆಂದಾಗಲೀ, ಶಾಸ್ತ್ರಸಮ್ಮತವೆಂದಾಗಲಿ ಲೇಖನ ಗೌರವಾರ್ಹವೆಂದಾಗಲಿ ಪ್ರಸ್ತಾಪಿಸುವುದಿಲ್ಲ, ಕೆಲವರಂತೂ ಹಿಂದಿನದನ್ನೂ ಓದಿಲ್ಲ, ಇಂದಿನದನ್ನು ಓದಿಲ್ಲ. ವಿಷಯದ ಅಂತರಾರ್ಥವನ್ನೇಕೆ ತಿಳಿಯದೆ ಅಭಿವ್ಯಕ್ತಿ ಸ್ವಾತಂತ್ರ್ಯವೆಂದು ಪ್ರತಿಪಾದಿಸುವುದು ಸ್ವಾತಂತ್ರ್ಯ ಶಬ್ದದ ವಿಕೃತ ವಿಶ್ಲೇಷಣೆಯಷ್ಟೆ! ಚೆನ್ನಬಸವಣ್ಣನವರ ಸಾಹಿತ್ಯವನ್ನು ಓದಿದವರಿಗೆ ಅವರ ಘನ ವ್ಯಕ್ತಿತ್ವ ಅರ್ಥವಾಗದಿರದು. ಅದನ್ನು ಓದದೆ ಅವರ ವ್ಯಕ್ತಿತ್ವಕ್ಕೆ ಕಳಂಕ ತರುವ ದುರುದ್ದೇಶದಿಂದ ಅರ್ಥಹೀನ ವಿಶ್ಲೇಷಣೆ ಕೊಡುವ ಕೆಲಸ ಯಾವುದೇ ನಾಡ 'ಸಂಸ್ಕೃತಿಯ' ಭಾಷೆಯ ಅಭಿಮಾನಿಯಾದ ಸಾಹಿತಿ ಮಾಡುವಂತಹುದಲ್ಲ.

["ಧರ್ಮಕಾರಣ" ಎಂಬ ಅಧರ್ಮಕ್ಕೆ ಕಾರಣವಾದ ಕಾದಂಬರಿಯನ್ನು ಡಾ. ಪಿ.ವಿ. ನಾರಾಯಣರು ಬರೆದು ಅದರಲ್ಲಿ ಚನ್ನಬಸವಣ್ಣನವರ ಜನನದ ಬಗೆಗೆ ಬರೆದ ಪ್ರಸಂಗದಿಂದ, ಮತ್ತು ಅದಕ್ಕೆ ಪ್ರಶಸ್ತಿ ದೊರಕಿಸಿದ ಪ್ರಸಂಗದಿಂದ ವಿದ್ವಾಂಸರಿಂದ ಪ್ರತಿಭಟನೆ ನಡೆದು ಆ ಗ್ರಂಥ ನಿಷೇಧಿಸಲ್ಪಟ್ಟಿತು. ಅದರ ಬಗೆಗೆ ಅನೇಕರು ಸರ್ಕಾರದ ನಿಲುವನ್ನು ವಿರೋಧಿಸಿದ ಕಾರಣ ಈ ಪ್ರಸಂಗವನ್ನು ಇಲ್ಲಿ ದೀರ್ಘವಾಗಿ ಉಲ್ಲೇಖಿಸಲಾಗಿದೆ.]

ಚೆನ್ನಬಸವಣ್ಣನವರ ವ್ಯಕ್ತಿತ್ವವನ್ನು ಕ್ಷುಲ್ಲಕ ಲೇಖನಿಯಿಂದ ಕಿರಿದೆನಿಸಲು ಸಾಧ್ಯವಿಲ್ಲ. ಅವರ ಹಿರಿತನವನ್ನು ಹಿರಿಯ ಶರಣರೇ ಮುಕ್ತ ಕಂಠದಿಂದ ಪ್ರಶಂಸೆ ಮಾಡಿರುವುದು ವೇದ್ಯವಾಗಿದೆ.

ಅಂತರಂಗದ ಅಸೂಯೆ

ಚೆನ್ನಬಸವಣ್ಣನವರ ಬಗೆಗೆ ಅಸಂಗತ ಸಂಗತಿಯನ್ನು ವೈಭವೀಕರಿಸುವವರ ಮನಸ್ಸಿನಲ್ಲಿ ಯಾವುದೋ ದ್ವೇಷ ಅಸೂಯೆಗಳಿರಬಹುದು. ಮೊದಲೇ ಮನಸ್ಸಿನಲ್ಲಿ ಅಂತಹ ಭಾವನೆಗಳಿದ್ದರೆ, ಅದು ಪರಿಸರದಿಂದ ಪರಿಣಾಮಗೊಂಡಿರಬಹುದು ಅಥವಾ ಜನ್ಮತಃ ಬಂದ ಸಂಸ್ಕಾರವಿರಬಹುದು. ಅವರ ವಿಚಾರಧಾರೆ, ಚಿಂತನ ಓಘ ಎಲ್ಲವೂ ಅದರತ್ತಲೇ ಗಮಿಸುತ್ತವೆ. ಆದಕಾರಣ ಸತ್ಯವಾದ, ಸ್ತುತ್ಯವಾದ ಸಂಗತಿಗಳು ಸುತ್ತಲೂ ಹರಡಿಸಿದ್ದರೂ ಅವು ಕಣ್ಣಿಗೆ ಬೀಳುವುದಿಲ್ಲ. ಇಂತಹ ಲೇಖನದಿಂದ ಇಡೀ ಬಸವಣ್ಣನವರ ಮನೆತನದ ಮೇಲೆ ಕಳಂಕ ತಂದು ಅವರ ಬಗೆಗೆ ಭಕ್ತಿಗೌರವಗಳನ್ನುಳ್ಳವರು ಮನಸ್ಸಿನ ಮೇಲೆ ಆಘಾತವನ್ನುಂಟು ಮಾಡಿ ತಾವು ಸಂತೋಷಪಡಬಹುದು. ಅದರಿಂದ ಬಸವಣ್ಣನವರ ಅಥವಾ ಇನ್ನಿತರ ಶರಣರ ಹಿರಿತನಕ್ಕೆ ಚ್ಯುತಿ ತರಲಾಗುವುದಿಲ್ಲ. ಆದರೆ ಇಲ್ಲಿ ಮತ್ತೊಂದು ಅಂಶವನ್ನು ಗಂಭೀರವಾಗಿ ಚಿಂತಿಸಬೇಕಾಗುತ್ತದೆ. ಅದು ಕಕ್ಕಯ್ಯನವರ ಬಗೆಗೆ ನಾವು ನೋಡಬೇಕಾದ ದೃಷ್ಟಿ. ಕಕ್ಕಯ್ಯನವರ ಬಗೆಗೆ ನಾವು ನೋಡಬೇಕಾದ ದೃಷ್ಟಿ. ಕಕ್ಕಯ್ಯನವರು ಡೋಹರ ಕುಲದವರು. ಹೀನ ಕುಲದವರೆಂದು ಮೇಲಿನವರ ಕಾಲ್ತುಳಿತಕ್ಕೆ ಶತಶತಮಾನಗಳಿಂದ ಸಿಕ್ಕಿ ನರಳಿದ ಕುಟುಂಬದಿಂದ ಬಂದವರು. ಅವರನ್ನು ಬಸವಣ್ಣನವರೂ, ಪ್ರಭುದೇವರೇ ಮುಂತಾದ ಅನೇಕ ಶರಣರು ಭಕ್ತಿಯಿಂದ ಸ್ಮರಿಸಿದ್ದಾರೆ. ಶರಣ ಕುಲಶ್ರೇಷ್ಠರೆಂದು ಓಲೈಸಿದ್ದಾರೆ. ಪತಿತ ಪಾಮರ ಪರಿಸರದಿಂದ ಬಂದ ಒಬ್ಬ ವ್ಯಕ್ತಿ ಪ್ರಭುದೇವರಂತಹ ಮಹಾನುಭಾವರ ಪ್ರಶಂಸೆಗೆ ಪಾತ್ರರಾಗಬೇಕಾಗಿದ್ದರೆ ಅವರ ಸಾಧನೆ ಎಷ್ಟು ಮಹತ್ವದ್ದಿರಬೇಕು. ಅವರಿಗೆ ಎಂತಹ ಸಂಸ್ಕಾರ ದೊರತಿರಬೇಕು ಎಂಬುದನ್ನು ಆಲೋಚಿಸಬೇಕಾಗುತ್ತದೆ. ಶರಣ ಸಂಕುಲದಿಂದ ಪೂಜೆಗೊಳ್ಳುವಷ್ಟೆ ಹಿರಿಮೆಗಳಿಸಿದ ಕಕ್ಕಯ್ಯನವರಲ್ಲಿ ಅವಗುಣವನರಸುವುದು ಎಂತಹ ಕ್ಷುದ್ರತನ? ಚನ್ನಬಸವಣ್ಣನವರ ಜನನದ ಬಗೆಗೆ ಕುಹಕವಾಡುವವರು ಅವರ ಕುಟುಂಬಕ್ಕೆ ಮಾಡುವ ಅಪಚಾರಮಾತ್ರವಲ್ಲ, ಡೋಹರಕಕ್ಕಯ್ಯ ಮಾದಾರ ಚೆನ್ನಯ್ಯನಂತಹ ಮಹಾನುಭಾವರು ಸಮಾಜದಲ್ಲಿ ಪೂಜ್ಯತೆಗಳಿಸಿದುದನ್ನು ಸಹಿಸಲಾರದ ಕಕ್ಕುಲತೆಯಾಗುತ್ತದೆ. ದಲಿತರೂ ದೈವಜ್ಞರಾದರೆಂಬುದನ್ನು ಕಂಡು ಕರುಬುವ ಹೃದಯದಿಂದ ಬರೆದ ಬರಹಗಳು ಇಡೀ ದಲಿತ ಸಮುದಾಯಕ್ಕೆ ಮಾಡಿದ ಅಪಚಾರವಲ್ಲವೆ? ದಲಿತರಲ್ಲಿ ದೈವತ್ವವಳವಟ್ಟರೂ ಅವರಲ್ಲಿ ಕೀಳುತನವನ್ನೇ ಕಾಣಬಯಸುವ ಚಿಂತಕರು, ಪತಿತ ಪಾಮರರು ಉತ್ತಮರಾಗುವುದನ್ನು ಸಹಿಸಲಾರರೆಂಬುದಕ್ಕೆ ಮತ್ತೆ ಬೇರೆ ನಿದರ್ಶನವೇಕೆ ಬೇಕು? ಇಂತಹ ಬರಹಗಳ ಬಗೆಗೆ ದಲಿತರು ಎಚ್ಚೆತ್ತು ತಮ್ಮ ಹಿರಿಯರ ಹಿರಿತನವನ್ನು ರಕ್ಷಿಸಿಕೊಳ್ಳುವ ಅಗತ್ಯವಿದೆ.

ಅಕ್ಕನಾಗಮ್ಮ ಬಸವಣ್ಣನವರ ಸೋದರಿ ಬಸವಣ್ಣನವರು ಜನಿಸಿದ್ದು ಶೀಲಸಂಪನ್ನರಾದ ಬ್ರಾಹ್ಮಣ ಕುಲದಲ್ಲಿ. ಬ್ರಾಹ್ಮಣ ಕನ್ಯೆ ಅಕ್ಕನಾಗಮ್ಮ ಕುಲಟೆಯೆನ್ನುವ ಕುಟಿಲರು ಕ್ಷಮ್ಯರೇ? ಶ್ರೇಷ್ಠಕುಲದಲ್ಲಿ ಶ್ರೇಷ್ಠತೆಯನ್ನು ಕಾಣದೆ ಕುಟಿಲತೆಯ ಕಟಕಿಯಾಡುವವರು ತಮ್ಮನ್ನು

ತಾವೇ ಅರಿಯದವರಲ್ಲವೆ? ಈ ಸಂಗತಿಗಳನ್ನು ಗಮನಿಸಿದರೆ ಶರಣರ ಬಗೆಗೆ ಪೂರ್ವಪೀಡಿತ ಕಕ್ಕುಲತೆಯಿಂದ ಬರೆದಂತೆ ಭಾವಿಸಬೇಕಾಗುತ್ತದೆ. ಈ ಪ್ರಸಂಗವನ್ನು ಚೆನ್ನಬಸವಣ್ಣರ ಮಾತಿನಲ್ಲೆ ಮುಕ್ತಾಯಗೊಳಿಸಬಹುದು.

ಬೇಡವೊ ಇಲಿಚಯ್ಯಾ;
ಮೊನ್ನೆ ಬಂದು ನಮ್ಮ ಶಿವದಾರವ ಕಡಿದೆ;
ನೆನ್ನೆ ಬಂದು ನಮ್ಮ ಸೆಜ್ಜೆಯ ಕಡಿದೆ;
ಇಂದು ಬಂದು ನಮ್ಮ ವಸ್ತ್ರವ ಕಡಿದೆ;
ಬೇಡವೋ ಇಲಿಚಯ್ಯಾ!
ನಿನಗಂಜರು ನಿನ್ನ ಗಣಪತಿಗಂಜರು!
ಕೂಡಲ ಚನ್ನಸಂಗನ ಶರಣರು ಕಂಡಡೆ,
ನಿನ್ನ ಹಲ್ಲ ಕಳೆವರು[೨೧] **ದಂತವ ಮುರಿವರು!**
ಇಂತಹವರಿಗೆ ಅವರು ಅಂದೇ ಎಚ್ಚರಿಸಿದ್ದಾರಲ್ಲವೆ!

ಮಹಾಪ್ರಸಾದಿ

ಬಸವಣ್ಣನವರು ಚೆನ್ನಬಸವಣ್ಣನವರನ್ನು ಮಹಾ ಪ್ರಸಾದಿಯೆಂದು ಕರೆದಿದ್ದಾರೆ. ಮಹಾಪ್ರಸಾದಿ ಯಾರೆಂಬುದನ್ನು ಅವರ ವಚನದಿಂದ ತಿಳಿದರೆ ಬಸವಣ್ಣನವರ ಮಾತು ಅರ್ಥವತ್ತಾಗುತ್ತದೆ.

ರೂಪಾಗಿ ಬಂದುದ ಕಾಯದ ಕೈಯಲ್ಲಿ ಕೊಡುವುದು;
ರುಚಿಯಾಗಿ ಬಂದುದ ಪ್ರಾಣವ ಕೈಯಲ್ಲಿ ಕೊಡುವುದು;
ತೃಪ್ತಿಯಾಗಿ ಬಂದುದ ಭಾವದ ಕೈಯಲ್ಲಿ ಕೊಡುವುದು;
ಅರ್ಪಿಸುವ ತೆರನಿದು ಪ್ರಸಾದಿಗಯ್ಯಾ
ಸಾಕ್ಷಿ: ಇಷ್ಟಲಿಂಗಾರ್ಪಿತಂ ರೂಪಂ ರುಚಿಃ ಪ್ರಾಣಸಮರ್ಪಿತಾ
ತೃಪ್ತಿರ್ಭಾವ ಸಮಾಯುಕ್ತಾ ಅರ್ಪಿತಂತ್ರಿವಿಧಾತ್ಮಕಂ ಎಂಬುದಾಗಿ
ರೂಪು, ರುಚಿ, ತೃಪ್ತಿಯ ಕೊಡಬಲ್ಲಡೆ
ಕೂಡಲಚೆನ್ನಸಂಗಯ್ಯನಲ್ಲಿ ಮಹಾಪ್ರಸಾದಿ ಯಯ್ಯಾ[೨೨]

ಚನ್ನಬಸವಣ್ಣ ರೂಪು ರುಚಿ ತೃಪ್ತಿಯೆಂಬ ತ್ರಿವಿಧವನ್ನು ಇಷ್ಟ, ಪ್ರಾಣ, ಭಾವಲಿಂಗಕ್ಕರ್ಗಪಿಸಿದ ಮಹಾಪ್ರಸಾದಿ ಚೆನ್ನಬಸವಣ್ಣನವರ ಅಧ್ಯಾತ್ಮಿಕ ಸಿದ್ಧಿಸಂಪತ್ತನ್ನು ಅವಿರಳ ಜ್ಞಾನಸಂಪತ್ತನ್ನು ಕಂಡು ನಮೋ ನಮೋ ಎಂದಿದ್ದಾರೆ. ತನ್ನ ಸೋದರಳಿಯನೆಂಬ ಬಾಂಧವ್ಯವನ್ನು ಬಂಧನವನ್ನು ಮೀರಿ ಅವರನ್ನು ಘನಮಹಿಮಶರಣನೆಂದು ಕೊಂಡಾಡಿದ್ದಾರೆ. **"....ಕರುಣಿ ಚನ್ನ ಬಸವಣ್ಣನ ಮರೆತುಕೊಂಡೆ ನಾನಡೆ ಒಡೆಯ ಕೂಡಲಸಂಗಯ್ಯ ಕೆಡಹಿನರಕದಲಿಕ್ಕುವ"**[೨೩]

"....ನಡೆ, ನುಡಿ ಹುಸಿಯುಂಟಾದಡೆ ಕೂಡಲಸಂಗಮ ತೋರಿದ ಚನ್ನಬಸವಣ್ಣನಾಣೆ"[೨೪]

ಮುಂತಾದ ನುಡಿಗಳು ಬಸವಣ್ಣನವರ ಅಂತರಂಗದಿಂದ ತುಂಬಿ ಬಂದ ಅಮೃತಧಾರೆ. ಚನ್ನಬಸವಣ್ಣನವರಲ್ಲಿ ಅವರಿಗಿದ್ದ ಭಕ್ತಿ ಭಾವದ ಅಭಿವ್ಯಕ್ತಿ. ಬಸವಣ್ಣನವರು ಸರ್ವರಲ್ಲೂ ಸರ್ವೇಶ್ವರನನ್ನು ಕಾಣುತ್ತಿದ್ದ ಮಹಾನುಭಾವಿ. ಸಮಾಜದಲ್ಲಿ ಎಷ್ಟೋ ಜನ ಸೋಗಿನಲ್ಲಿ ಮೆರೆಯುವವರಿದ್ದರು. ತೋರಿಕೆಯ ಜಂಗಮರೋ ಶರಣರೋ ಇದ್ದರೆ ನಿರ್ದಾಕ್ಷಿಣ್ಯವಾಗಿ

ತಿದ್ದುವ ದಿಟ್ಟತನದ ಹೆಜ್ಜೆಯಿಡುತ್ತಿದ್ದವರು ಚನ್ನಬಸವಣ್ಣನವರು. ಡಂಭವರು ಬಸವಣ್ಣನವರನ್ನು ಪ್ರಸನ್ನಗೊಳಿಸಿ ಹೋಗಬಹುದಿತ್ತು. ಆದರೆ ಚನ್ನಬಸವಣ್ಣನವರ ಮುಂದೆ ಸುಳಿಯಲು ಅಂಜುತ್ತಿದ್ದರು. ದರ್ಶನ ಮಾತ್ರದಿಂದ ಎಲ್ಲರ ಅಂತರಂಗವನ್ನು ಅರಿಯುವ ಅತೀಂದ್ರಿಯಜ್ಞಾನ ಅವರಿಗೆ ಅಳವಟ್ಟಿತ್ತು. ಆದುದರಿಂದ ಬಸವಣ್ಣನವರು ತಮ್ಮ ಚಿಂತನೆಗೆ ಮೀರಿದ ಪ್ರಸಂಗಗಳಲ್ಲಿ ಚನ್ನಬಸವಣ್ಣನವರ ನೆರವನ್ನು ಪಡೆದು ನಿಶ್ಚಿಂತರಾಗುತ್ತಿದ್ದರು.

ವೈರಾಗ್ಯ ಚಕ್ರವರ್ತಿ ಅಲ್ಲಮಪ್ರಭು

ಚನ್ನಬಸವಣ್ಣನವರನ್ನು ಕಂಡ ಬಗ್ಗೆ ವಿಸ್ಮಯಕಾರಿಯೆನ್ನಬಹುದು.

"....ಈ ಲೌಕಿಕವನತಿಗಳೆದು ನಿಜದಲ್ಲಿ ನಿವಾಸಿಯಾಗಿ ಘೂಗೊಹೇಶ್ವರನ ಶರಣ ಚೆನ್ನಬಸವಣ್ಣನ ಘನವನ್ನು ಬಸವಣ್ಣನ ಕೃಪೆಯಿಂದಲಾನರಿದು ನಮೋ ನಮೋ ಎನುತಿರ್ದೆನು"[೨೫]

"...ಬಯಲ ಬಣ್ಣವ ತುಂಬಿ, ನೆಳಲಶೃಂಗಾರವ ಮಾಡಿ, ಗೋಹೇಶ್ವರನ ಶರಣ ಚೆನ್ನಬಸವಂಗೆ ಶರಣೆನುತ್ತಿದ್ದೆನು."[೨೬]

"ಉಭಯ ಸ್ಥಲನಿರ್ಣಯನಿಃಪತಿ
ಗೊಹೇಶ್ವರಲಿಂಗದಲ್ಲಿ ಚೆನ್ನಬಸವಣ್ಣನ
ಕರುಣದಿಂದಾವಂಬದುಕಿದೆನು ಕಾಣಾ
ಸಂಗನ ಬಸವಣ್ಣಾ[೨೭]
ಸರ್ವಜೀತವ ಪರಿಪೂರ್ಣ ಕಳೆ
ಚೆನ್ನಬಸವಣ್ಣನಿಂದ ಎನಗಾಯಿತ್ತು"[೨೮]

"ಬೆಳಗುವ ಜ್ಯೋತಿಯ ತಿರುಳಿನಂತೆ ಹೊಳೆವಕಂಗಳ ಕಾಂತಿಯೊಳ ಹೊರಗೆನ್ನದೆ ಅಳವಟ್ಟ ಶಿವಯೋಗಿಯ ಕಂಡೆ ನೋಡಾ:

ನಿಜಉಂಡ ನಿರ್ಮಳದ ಘನವ ಕಂಡು ಬೆರಗಾದೆ ನಾನು; ಗುಹೇಶ್ವರ ಲಿಂಗದಲ್ಲಿ ಚೆನ್ನಬಸವಣ್ಣನಿಂದಲಾನು ಬದುಕಿದೆನು."[೨೯]

"...ಲಿಂಗಜಂಗಮ ಪ್ರಸಾದದ ಮಹಾತ್ಮೆಗೆ ಬಸವಣ್ಣನೆ ಆದಿಯಾದನೆಂಬುದನರಿದ ಸ್ವಯಂಭುಜ್ಞಾನಿ ಗೊಹೇಶ್ವರ ಲಿಂಗದಲ್ಲಿ ಚೆನ್ನಬಸವಣ್ಣನೊಬ್ಬನೆ"[೩೦]

"ಗೊಹೇಶ್ವರ ಲಿಂಗದಲ್ಲಿ ಸರ್ವಸಂದೇಹವ ಕಳೆದಿಪ್ಪ ಚೆನ್ನಬಸವಣ್ಣಂಗೆ ನಮೋ ನಮೋ ಎಂದೆ."[೩೧]

"....ಲಿಂಗ ಜಂಗಮದಲ್ಲಿ ತನ್ನ ಮರೆದಂ ಕರಿಗೊಂಡ ಲಿಂಗೈಕ್ಯನ ಗೊಹೇಶ್ವರಲಿಂಗದಲ್ಲಿ ಚೆನ್ನಬಸವಣ್ಣನ ಶ್ರೀ ಪಾದಕ್ಕೆ ನಮೋ ನಮೋ ಎನುತಿರ್ದನು."[೩೨]

"ಗೊಹೇಶ್ವರ ಲಿಂಗದಲ್ಲಿ ಸರ್ವಸಂಸಾರವಿರಹಿತ ಚೆನ್ನಬಸವಣ್ಣಂಗೆ ನಮೋ ನಮೋ ಎಂದೆನು."[೩೩]

ಮುಂತಾದ ನುಡಿಗಳಲ್ಲಿ ಪ್ರಭುದೇವರು ಚೆನ್ನಬಸವಣ್ಣನವರ ದಿವ್ಯ ಜೀವನವನ್ನು ಭವ್ಯವಾಗಿ ಚಿತ್ರಿಸಿದ್ದಾರೆ. ಅವರ ಒಂದೊಂದು ನುಡಿ ಚನ್ನಬಸವಣ್ಣನವರ ಆತ್ಮಶಕ್ತಿಯ ಎತ್ತರ ಬಿತ್ತರಗಳನ್ನು ಚಿತ್ರಿಸಿರುವುದು ಕಂಡುಬರುತ್ತದೆ. ಅವರ ಸಿದ್ಧಸ್ವರೂಪವ ಪರಿಚಯ ಮಾಡಿಕೊಡುತ್ತದೆ. ಮಾನವ ಮಹಾನುಭಾವಿಯಾಗಿ ಮಹಾದೇವನೇ ಆಗಲು ವಯೋಮಿತಿ

ಇರದೆಂದು ಹೇಳುತ್ತಾ ಚನ್ನಬಸವಣ್ಣನವರು ಸರ್ವಶ್ರೇಷ್ಠಜ್ಞಾನಿ ಎಂದಿದ್ದಾರೆ. "ಕಿರಿಯರಾದಡೇನು? ಹಿರಿಯರಾದಡೇನು? ಅರಿವಿಂಗೆ ಹಿರಿದು ಕಿರಿದುಂಟೆ? ಆದಿಯನಾದಿ ಇಲ್ಲದಂದು, ಅಖಂಡ ಬ್ರಹ್ಮಾಂಡ ಕೋಟಿಗಳುದಯವಾಗದಂದು. ಗೊಹೇಶ್ವರ ಲಿಂಗದಲ್ಲಿ ನೀನೊಬ್ಬನೇ ಮಹಾಜ್ಞಾನಿ ಯೆಂಬುದು ಕಾಣಬಂದಿತ್ತು. ಕಾಣಾ ಚೆನ್ನಬಸವಣ್ಣ."[೩೪]

ಪ್ರಭುದೇವರ ಅಂತರಾಳದ ಅಮೃತವಾಣಿ ಚನ್ನಬಸವಣ್ಣನವರ ದಿವ್ಯತೆಯನ್ನು ಕರತಲಾಮಲಕಮಾಡಿಕೊಡುತ್ತದೆ.

ಶಿವಯೋಗಿ ಸಿದ್ಧರಾಮೇಶ್ವರರೂ ಸಹ

ಶುದ್ಧವನರಿದೆ ಚೆನ್ನಬಸವಣ್ಣ ನಿಮ್ಮಿಂದೆ
ಸಿದ್ಧವನರಿದೆ ಚನ್ನಬಸವಣ್ಣ ನಿಮ್ಮಿಂದೆ
ಪ್ರಸಿದ್ಧವನರಿದೆ ಚನ್ನಬಸವಣ್ಣ ನಿಮ್ಮಿಂದೆ
ಕಪಿಲಸಿದ್ಧಮಲ್ಲಿಕಾರ್ಜುನಯ್ಯ
ಚನ್ನಬಸವಣ್ಣ ಗುರುವಾಗಿಬಂದು
ಎನ್ನ ಜನ್ಮಕರ್ಮದ ನಿವೃತ್ತಿ ಮಾಡಿದನಯ್ಯ[೩೫]

ಎಂದು ಕೃತಜ್ಞತೆಯಿಂದ ಸ್ಮರಿಸಿದ್ದಾರೆ. ಶಿವಭಕ್ತನಾದರೂ ಅಪರಿಮಿತ ಅಣಿಮಾದಿ ಅಷ್ಟಸಿದ್ಧಿಗಳನ್ನು ಪಡೆದಿದ್ದರೂ ಸಿದ್ಧಪುರುಷರೆಂದು ಪ್ರಸಿದ್ಧಿ ಪಡೆದಿದ್ದರೂ ಅಂಗಲಿಂಗತ್ರಯದ ಆಧ್ಯಾತ್ಮ ತತ್ವದ ಅರಿವು ಮೂಡಿಸಿದ ಚೆನ್ನಬಸವಣ್ಣರ ಹಿರಿಮೆಗೆ ಅವರು ಮಣಿದಿದ್ದಾರೆ. ಸಿದ್ಧರಾಮೇಶ್ವರರು ಪ್ರಭುದೇವರು ಮತ್ತು ಚೆನ್ನಬಸವಣ್ಣನವರ ಸತ್ಸಂಗದಲ್ಲಿ ನಡೆದ ದಿವ್ಯಜ್ಞಾನ ದಾಸೋಹ ಜಗದ ಜ್ಞಾನ ಸಂಪುಟದಲ್ಲಿ ರತ್ನಖಚಿತ ಶಾಸನವಾಗಿದೆ.

ಅನುಭವ ಮಂಟಪದ ಪಂಚರತ್ನಗಳಲ್ಲಿ ಒಬ್ಬರೆನಿಸಿದ ವೈರಾಗ್ಯ ನಿಧಿ ಅಕ್ಕಮಹಾದೇವಿಯವರು.

ನಿಮ್ಮ ಶರಣ ಸಮ್ಯಗ್ ಜ್ಞಾನಿ ಚನ್ನಬಸವಣ್ಣನ ಶ್ರೀಪಾದಕ್ಕೆ ಶರಣರೆಂದು ಎನ್ನಭವಂ ನಾಸ್ತಿಯಾಯಿತ್ತಯ್ಯ ಪ್ರಭುವೆ ಎಂದು ಭಿನ್ನೈಸಿದ್ದಾರೆ.[೩೬]

ಲೋಕ ಮೆಚ್ಚುವಂತಹ ಜೀವನದ ದೆಸೆಯಿಂದ ಅಮರರಾದ ಶರಣರು ಚನ್ನಬಸವಣ್ಣನವರು. ಅಂತೆಯೇ ಅವರಲ್ಲಿ ಜಗದ ಲೌಕಿಕ ಮತ್ತು ಅಲೌಕಿಕ ಸಂಗತಿಗಳ ಅರಿವಿತ್ತು. ಶಾಸ್ತ್ರಗಳೆಲ್ಲದರ ಅಪಾರ ಅನುಭವವಿತ್ತು. ಅತೀಂದ್ರಿಯ ಶಕ್ತಿಯಿಂದ ಭೂತ, ಭವಿಷ್ಯತ್, ವರ್ತಮಾನವನ್ನು ಅರಿಯುವ ಸಾಮರ್ಥ್ಯವಿತ್ತು. ಆದುದರಿಂದ ಶರಣರ ಜೀವನಕ್ಕೆ ದರ್ಶನ ನೀಡುವ ದಿಶೆಯಲ್ಲಿ ಅಪಾರ ತತ್ವ ಸಾಹಿತ್ಯವನ್ನು ನೀಡಿ ಉಪಕರಿಸಿದ್ದಾರೆ. ಈಗಾಗಲೇ ೧೫೦೦ಕ್ಕೂ ಹೆಚ್ಚು ವಚನಗಳು ಪರಿಶೋಧಿಸಲ್ಪಟ್ಟು ಪ್ರಕಟಗೊಂಡಿವೆ. ಈ ವಚನಗಳ ನೆರವಿನಿಂದ ಜೀವನದ ಅಂತರಂಗ ಬಹಿರಂಗದ ಸಮಸ್ಯೆಗಳಿಗೆಲ್ಲಾ ಉತ್ತರ ದೊರೆಯುತ್ತವೆ. ಅವರ ವಚನಗಳಲ್ಲಿ ಕೇವಲ ದಾರ್ಶನಿಕ ದೃಷ್ಟಿ, ಧಾರ್ಮಿಕ ಸೃಷ್ಟಿಗಳು ಮಾತ್ರವಲ್ಲ ವೈಜ್ಞಾನಿಕ ವಿವರಣೆಯ ವೈಶಿಷ್ಟ್ಯವನ್ನು ಕಾಣಬಹುದು. ಡಾ॥ ಆರ್.ಸಿ. ಹಿರೇಮಠರವರು ಬಸವಣ್ಣ ಮತ್ತು ಚನ್ನಬಸವಣ್ಣನವರ ವಚನಗಳ ವೈಶಿಷ್ಟ್ಯವನ್ನು ವಿಶ್ಲೇಷಿಸುತ್ತಾ "ಸಿದ್ಧಾಂತ ನಿರೂಪಣೆ ಚನ್ನಬಸವಣ್ಣನವರ ವಚನಗಳ ಮುಖ್ಯ ಗುಣವಾದರೆ, ಅಂತರಂಗ ನಿರೀಕ್ಷಣೆ, ಆತ್ಮಪರಿಶೋಧನೆ ಇವು ಬಸವಣ್ಣನವರ ಶೀಲವಾದರೆ ವಿವರವಾಗಿ ಹೇಳುವುದು ಚನ್ನಬಸವಣ್ಣನವರ ಮನೋಧರ್ಮ. ಬಾವೋದ್ರೇಕ ಬಸವಣ್ಣನವರ ವಚನಗಳಲ್ಲಿ ತೀವ್ರವಾಗಿ ಕಂಡರೆ ಚನ್ನಬಸವಣ್ಣನವರ ವಚನಗಳಲ್ಲಿ ಸುಜ್ಞಾನದ ಪ್ರಭೆ ಹೆಚ್ಚು" ಎಂದಿದ್ದಾರೆ.[೩೭]

ಚೆನ್ನಬಸವಣ್ಣನವರ ವಚನಗಳಲ್ಲಿ ಪ್ರಾಚೀನ ಶಾಸ್ತ್ರಗ್ರಂಥಗಳ ಸಂಸ್ಕೃತದ ಶ್ಲೋಕಗಳು ಅನೇಕ ಕಡೆಗಳಲ್ಲಿ ಪ್ರಸ್ತುತಪಡಿಸಿರುವುದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವುಗಳನ್ನು ಆಧಾರವಾಗಿ ಪಡೆದಿರುವುದು ಕಂಡುಬರುತ್ತದೆ. ಇದರಿಂದ ಚೆನ್ನಬಸವಣ್ಣನವರಿಗೆ ಸರ್ವಶಾಸ್ತ್ರಗಳ ಪರಿಚಯವೂ ಪಾಂಡಿತ್ಯವೂ ಇತ್ತೆಂದು ಗೊತ್ತಾಗುತ್ತದೆ. ಅದರ ಜೊತೆಗೆ ಭೂಗೋಳ, ಖಗೋಳಶಾಸ್ತ್ರವೂ ತಿಳಿದಿತ್ತು ಎಂಬುದಕ್ಕೆ ಅನೇಕ ವಚನಗಳು ಸಾಕ್ಷಿಯಾಗಿವೆ. ಚೆನ್ನಬಸವಣ್ಣನವರ ದಾರ್ಶನಿಕ ದೃಷ್ಟಿ ನವ್ಯವಾದುದು. ಜೀವನವನ್ನು ಕೇವಲ ನಿವೃತ್ತಿ ಮಾರ್ಗದತ್ತಲೇ ಕೊಂಡೊಯ್ಯುವುದಲ್ಲ. ಪ್ರವೃತ್ತಿ ಮಾರ್ಗದಲ್ಲಿ ನಿವೃತ್ತಿ ತತ್ವವನ್ನು ಅಳವಡಿಸಿ ಜೀವನವನ್ನು ಸುಸಂಸ್ಕೃತಗೊಳಿಸುವುದು ಅವರ ಜೀವನದರ್ಶನ.

"ಶಿವಭಕ್ತಿಯುಳ್ಳವಂಗೆ! ಕಾಮಬೇಡ, ಕ್ರೋಧಬೇಡ, ಲೋಭಬೇಡ, ಮೋಹಬೇಡ, ಮದಬೇಡ, ಮತ್ಸರಬೇಡ, ಶಿವಭಕ್ತಿಯುಳ್ಳವಂಗೆ! ಕಾಮಬೇಕು, ಕ್ರೋಧಬೇಕು ಲೋಭಬೇಕು, ಮೋಹಬೇಕು, ಮದಬೇಕು, ಮತ್ಸರಬೇಕು, ಬೇಕೆಂಬುದಕ್ಕಾಗುವ ಗುಣ? ಬೇಡೆಂಬುದಕ್ಕಾವ ಗುಣ? ಬೇಕೆಂಬುದಕ್ಕೆ, ಕಾಮಬೇಕು ಲಿಂಗದಲ್ಲಿ, ಕ್ರೋಧಬೇಕು ಕರಣಂಗಳಲ್ಲಿ ಲೋಭಬೇಕು ಪಾದೋದಕ ಪ್ರಸಾದದಲ್ಲಿ, ಮೋಹಬೇಕು ಗುರುಲಿಂಗಜಂಗಮದಲ್ಲಿ, ಮದಬೇಕು ಶಿವಾಚಾರದಿಂದ ಘನವಿಲ್ಲೆಂಬಲ್ಲಿ, ಮತ್ಸರ ಬೇಕು ಹೊನ್ನು ಹೆಣ್ಣು ಮಣ್ಣಿನಲ್ಲಿ ಇಂತೀ ಷಡ್ಗುಣವಿರಬೇಕು. ಬೇಡೆಂಬುದಕ್ಕೆ! ಕಾಮಬೇಡ ಪರಸ್ತ್ರೀಯರಲ್ಲಿ, ಕ್ರೋಧಬೇಡ ಗುರುವಿನಲ್ಲಿ! ಲೋಭಬೇಡ ತನು ಮನ, ಧನದಲ್ಲಿ, ಮೋಹಬೇಡ ಸಂಸಾರದಲ್ಲಿ, ಮದಬೇಡ ಶಿವಭಕ್ತರಲ್ಲಿ, ಮತ್ಸರ ಬೇಡ ಸಕಲ ಪ್ರಾಣಿಗಳಲ್ಲಿ, ಇಂತೀ ಷಡ್ಗುಣವನರಿದು ಮರೆಯಬಲ್ಲಡೆ ಆತನೇ ಸಹಜ ಸದ್ಭಕ್ತ ಕಾಣಾ ಕೂಡಲ ಚನ್ನಸಂಗಮದೇವಾ!"[೩೮]

ಇಂತಹ ಅಮೂಲ್ಯ ಸಂದೇಶಗಳನ್ನು ಬಿತ್ತರಿಸುವ ಅನೇಕ ವಚನಗಳನ್ನು ಚೆನ್ನಬಸವಣ್ಣನವರು ದಯಪಾಲಿಸಿದ್ದಾರೆ. ಅವರ ಕೆಲವು ವಚನಗಳಲ್ಲಿ ವೀರಶೈವ ಶಬ್ದದ ಉಲ್ಲೇಖವಿದೆ. ಅವುಗಳು ವೀರಶೈವ ಸಂಸ್ಕೃತಿಯ ಬಗೆಗೆ ಹೆಚ್ಚು ಬೆಳಕು ಚೆಲ್ಲುತ್ತದೆ.

"....ವೀರಶೈವ ಮಂತ್ರೋಪದೇಶದಿಂದ ಆತನ
ಕಾಯಶುದ್ಧವ ಮಾಡಿ, ಆತನ ಲಿಂಗಕ್ಕೆ ಪ್ರಾಣಪ್ರತಿಷ್ಠೆಯ
ತುಂಬಿ, ಆತನ ಅಂಗದ ಮೇಲೆ ಲಿಂಗವ ಬಿಜಯಂಗೈಸಿ,
ಕೃತಕೃತ್ಯನಂ ಮಾಡಿದ ನಮ್ಮ ವೀರಶೈವ ಗುರು,
ಕೂಡಲಚನ್ನಸಂಗಮದೇವಾ"[೩೯]

ಮತ್ತು

ವೀರಶೈವನಾದಡೆ ಪರಧನವ, ಪರಸತಿಯರ ಮುಟ್ಟದಿರಬೇಕು,
ಎಂತು ಪರಹಿಂಸೆಯನೆಸಗದಿರಬೇಕು!
ಒಡಲಳಿದಡೆಯೂ ಹಿಡಿದಾಚಾರವ ಬಿಡದಿರಬೇಕು!
ಇಂತೀ ವೀರಶೈವಾಚಾರವು ನೆಲೆಗೊಳ್ಳದೆ
ವೀರವಂಶದಲ್ಲಿ ಹುಟ್ಟಿದ ಮಾತ್ರಕ್ಕೆ
ವೀರಶೈವನೆಂತಪ್ಪೆನಯ್ಯಾ ಕೂಡಲಚೆನ್ನಸಂಗಮದೇವಾ[೪೦]

ಇತ್ಯಾದಿ ವಚನಗಳು ವೀರಶೈವರ ಆಚಾರ ವಿಚಾರಗಳ ಶ್ರೇಷ್ಠತೆಯನ್ನು ವ್ಯಕ್ತಪಡಿಸುತ್ತವೆ.

ವಚನೇತರ ಸಾಹಿತ್ಯ

ಶರಣರು ಸಾಮಾನ್ಯವಾಗಿ ವಚನಗಳನ್ನು, ಕೆಲವರು ಸ್ವರ ವಚನಗಳನ್ನು ಕನ್ನಡ ಸಾಹಿತ್ಯ ಮತ್ತು ತತ್ವಭಂಡಾರಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಚನ್ನಬಸವಣ್ಣ ಅನ್ಯರೀತಿಯಲ್ಲಿ ತತ್ವ ಸಂಪತ್ತಿನ ಕೊಡುಗೆ ಕೊಟ್ಟಿದ್ದಾರೆ.

೧. **ಶರಣ ಹಸಿಗೆ :** ಈ ಕೃತಿಯಲ್ಲಿ ಪಂಚಭೂತಗಳ ಉತ್ಪತ್ತಿ, ಜಗದುತ್ಪತ್ತಿ, ಪಂಚೀಕೃತಿ, ಇಂದ್ರಿಯಗಳ ವ್ಯಾಪಾರ, ದಶವಾಯುಗಳು, ನಾಡಿಗಳು, ಪಂಚವಿಂಶ ತತ್ವಗಳು, ಪಂಚೀಕೃತಿ ಷಡೂರ್ಮಿಗಳು, ಪಂಚಕೋಶಗಳು, ತನು, ಜೀವ ಆತ್ಮತ್ರಯಗಳು, ಪಂಚಾಗ್ನಿ ಇತ್ಯಾದಿ ನಲವತ್ತು ವಿಷಯಗಳು ವರ್ಣಿಸಲ್ಪಟ್ಟಿವೆ. ಲಿಂಗಾಂಗ ಸಾಮರಸ್ಯದ ಸಾಧನೆಗೆ ಸೂಕ್ತ ದರ್ಶನ ಈ ಕೃತಿಯಲ್ಲಿದೆ.

೨. **ಮಿಶ್ರಾರ್ಪಣ :** ಇದರಲ್ಲಿ ಕಾರ್ಯಾರ್ಪಣ, ಕರಣಾರ್ಪಣ, ಭಾವಾರ್ಪಣ ಎಂಬ ಮೂರು ಭಾಗಗಳಿವೆ. ಕಾಯಾರ್ಪಣದಲ್ಲಿ ಕಾಯಸಂಬಂಧ ಪದಾರ್ಥಗಳನ್ನು ಇಷ್ಟ ಲಿಂಗಕ್ಕರ್ಪಿಸುವ ವಿಧಾನಗಳ ವಿವರಣೆಯಿದೆ. ಕರಣಾರ್ಪಣದಲ್ಲಿ ಇಂದ್ರಿಯಸಂಬಂಧವಾದ ಪದಾರ್ಥಗಳನ್ನು ಪ್ರಾಣಲಿಂಗಕ್ಕರ್ಪಿಸುವ ಷಡ್ವಿಧ ಲಿಂಗಗಳಿಗೆ ಷಡ್ವಿಧ ಭಕ್ತಿ ಸಮರ್ಪಣದ ವಿಚಾರ ಲಹರಿಯಿದೆ. ಭಾವಾರ್ಪಣದಲ್ಲಿ ಶರಣ ಸಂಬಂಧವಾದ ತತ್ವಗಳು ಭಕ್ತಿ ಸಕಲಗಳೊಡನೆ ಸಮರ್ಪಿಸುವ ವ್ಯಾಖ್ಯೆಯಿದೆ. ಒಂದೇ ಒಂದು ವಚನದಲ್ಲಿ ಷಟ್‌ಚಕ್ರ ನಿರೂಪಣೆ ಮತ್ತು ಕುಂಡಲಿನಿಯನ್ನು ಜಾಗೃತಗೊಳಿಸಿ ಲಿಂಗಾಂಗ ಸಮರಸಗೊಳಿಸುವ ವಿಧಾನದ ವಿವರಣೆ ಈ ಕೃತಿತ್ವದಲ್ಲಿ ಅರ್ಥವತ್ತಾಗಿ ಬಿತ್ತರಿಸಲಾಗಿದೆ.

೩. **ಹಿರಿಯ ಮಂತ್ರಗೋಪ್ಯ :** ಇದು ೨೭ ಚೌದಿಗಳ ಪುಟ್ಟಕಾವ್ಯ. ಚನ್ನಬಸವಣ್ಣನವರು ಸಿದ್ಧರಾಮೇಶ್ವರರಿಗೆ ಬೋಧಿಸಿದ ತತ್ವಗಳ ಕೃತಿ. ಇಲ್ಲಿ ಭಕ್ತ, ಶರಣ, ಶಿವಯೋಗಿಯ ಲಕ್ಷಣಗಳು, ಲಿಂಗೈಕ್ಯ ಸಾಧನೆ ಇತ್ಯಾದಿ ಹಲವು ತತ್ವದ ವಿವರಣೆಗಳಿವೆ.

೪. **ಪದಮಂತ್ರಗೋಪ್ಯ :** ಇದು ಸಹ ಚೌಪದಿಯಲ್ಲಿರುವ ಪುಟ್ಟ ಕೃತಿ. ಇದರಲ್ಲಿ ಏಳು ಪದಗಳಿವೆ. ಕರ್ಮಯೋಗ ನಿರಸನ ಶಿವಯೋಗಸಾಧನೆ, ದೇಹಾಂತರ್ಗತ ಚಕ್ರಗಳಲ್ಲಿ ಸಮನ್ವಯತೆಯ ಸಾಧನೆ, ಪ್ರಣವದ ಪ್ರಭೆ ಷಟ್‌ಸ್ಥಲ ಸಿದ್ಧಿ ಮುಂತಾದ ತಾತ್ವಿಕ ಸಂಗತಿಗಳಿವೆ.

೫. **ತೊಂಬತ್ತಾರು ಸಕೀಲಂಗಳು:** ಇಷ್ಟಲಿಂಗದಲ್ಲಿ ಅನನ್ಯ ತತ್ವ ಸಂಬಂಧವನ್ನು ವಿವರಿಸುವ ಮಹತ್ವದ ಕೃತಿ. ಯೋಗಶಾಸ್ತ್ರದಲ್ಲಿ ವಿವರಿಸಿದ ಆಧಾರ ಚಕ್ರ, ಸ್ವಾಧಿಷ್ಠಾನಚಕ್ರ, ಮಣಿಪೂರಕ ಚಕ್ರ, ಅನಾಹತ ಚಕ್ರ, ವಿಶುದ್ಧಿಚಕ್ರ, ಆಜ್ಞಾಚಕ್ರವೆಂಬ ಆರು ಚಕ್ರಗಳು ಇಷ್ಟಲಿಂಗದಲ್ಲಿ ಅನ್ಯ ಸಂಗತಿಗಳಿಂದ ಹೇಗೆ ಸಮನ್ವಯಗೊಂಡಿದೆಯೆಂಬುದನ್ನು ವಿವರಿಸುವ ಅರ್ಥಕೋಶದಂತಿದೆ. ಈ ಕೃತಿ ಪುಟ್ಟದಾದರೂ ವೀರಶೈವ ದರ್ಶನದ ವಿಜ್ಞಾನ ಮೂರು ವಿವರಣೆಯಿದೆ. ಚನ್ನಬಸವಣ್ಣನವರ ವಚನಗಳಿಗಿಂತ ವಚನೇತರ ಸಾಹಿತ್ಯ ವೀರಶೈವ ಜಗತ್ತಿಗೆ ನೀಡಿದ ಅಮೂಲ್ಯ ಕೊಡುಗೆ, ದರ್ಶನದ ಕೈಗನ್ನಡಿ. ಇವುಗಳ ಬಗೆಗೆ ಹೆಚ್ಚು ವ್ಯಾಖ್ಯಾನ ಸಂಶೋಧನೆ ಮತ್ತು ಸಂಯೋಜನೆಯ ಅಗತ್ಯವಿದೆ.

ಬಸವಣ್ಣನವರು ದಂಡನಾಯಕರಾಗಿದ್ದರು. ಕರುಣಾಮಯಿಗಳು. ಎಲ್ಲರಲ್ಲಿಯೂ ಶಿವವನ್ನೇ ಕಾಣುವ ಭಾವನಾಜೀವಿಗಳಾಗಿದ್ದರು. ಜಗತ್ತಿನ ಇತಿಹಾಸದಲ್ಲಿ ಯಾವುದೇ ಒಂದೆಡೆಯಲ್ಲಿ ಸಮಾಜದ ಸರ್ವರೂ ಮಹಾನುಭಾವರನ್ನು ಅರ್ಥಮಾಡಿಕೊಂಡು ಅವರ ಕಲ್ಪನೆಯ ಸತ್ಯ

ಸಾಮ್ರಾಜ್ಯದಲ್ಲಿ ಅದರಂತೆ ಎಲ್ಲರೂ ನಡೆಯುತ್ತಿದ್ದ ನಿದರ್ಶನಗಳಿಲ್ಲ. ಸರ್ವಜನಪ್ರೇಮಿ ಏಸುವನ್ನು ಶಿಲುಬೆಗೇರಿಸುವ ಜನರಿದ್ದರು. ಬುದ್ಧ ಭಗವಾನರಿಗೆ ದೂಷಣೆಗೈದು ವಿಷವಿಕ್ಕುವ ಜನರಿದ್ದರು. ಮಹಾವೀರರಿಗೂ ಉಪದ್ರವ ನೀಡಿದ ಜನರಿದ್ದರು. ಅಂತೆಯೇ ಕಲ್ಯಾಣದಲ್ಲೂ ಮಹಾನುಭಾವರ ಹೃದಯ ವೈಶಾಲ್ಯವನ್ನು ಜನಾನುರಾಗಿತ್ವವನ್ನು ಕಂಡು ಕರುಬುವವರಿದ್ದರು. ಅಂತಹವರಿಂದ ಮಹಾನುಭಾವರ ಜೀವನದ ಉದ್ದೇಶವು ವಿಫಲವಾಗುವ ಸಂಭವವಿರುತ್ತದೆ. ಅಂತಹ ಪ್ರಸಂಗಗಳು ಬಸವಣ್ಣನವರ ಜೀವನದಲ್ಲಿ ಅಧಿಕವಾಗಿದ್ದವು. ಏಕೆಂದರೆ ಬಸವಣ್ಣನವರ ಕ್ರಾಂತಿ ವಿಶಿಷ್ಟವಾದದ್ದು. ಬುದ್ಧ, ಮಹಾವೀರರು ಕ್ಷತ್ರಿಯರಾಗಿದ್ದರು. ಅಂದು ಬ್ರಾಹ್ಮಣರಲ್ಲಿ ಸಮಾಜಕ್ಕೆ ತುಂಬಾ ಭಕ್ತಿ ಭಾವನೆಯಿತ್ತು. ಅಲ್ಲದೆ, ಆತ್ಮ ಮತ್ತು ಪರಮಾತ್ಮ ತತ್ವವನ್ನು ಧಿಕ್ಕರಿಸಿ ಬದುಕುವ ಬಯಕೆ ಜನತೆಗಿರಲಿಲ್ಲ. ಆದುದರಿಂದ ಬುದ್ಧ, ಮಹಾವೀರರ ಕ್ರಾಂತಿಯನ್ನು ಸುಲಭವಾಗಿ ಎದುರಿಸಲು ಅಂದು ಸಮಾಜ ಸಿದ್ಧವಾಯಿತು. ಇಲ್ಲಿ ಬಸವಣ್ಣನವರು ಸರ್ವಶಾಸ್ತ್ರ ಪಾರಂಗತರಾದ ಬ್ರಾಹ್ಮಣ ಕುಲದಲ್ಲಿ ಜನಿಸಿ ಶಾಸ್ತ್ರದ ಅಂತರಾರ್ಥವನ್ನು ಅರಿತವರಾಗಿದ್ದರು. ಶಾಸ್ತ್ರದ ಮೇಲೆ ಮುಸುಕಿದ್ದ ಮಂಜನ್ನು ದಿವ್ಯಜ್ಞಾನದಿಂದ ಕರಗಿಸಿ ಸತ್ಯದ ಬೆಳಕನ್ನು ತೋರಿಸುವ ಸಮರ್ಥರಿದ್ದರು. ಮೇಲಾಗಿ ಆತ್ಮ ಮತ್ತು ಪರಮಾತ್ಮರ ಸಮಾಜದ ಸಂಬಂಧವನ್ನು ಸುಸ್ಪಷ್ಟವಾಗಿ ವಿಶ್ಲೇಷಿಸಿ ಸುಲಭವಾಗಿ ಸತ್ಯವನ್ನು ಸಮಾಜಕ್ಕೆ ಅರ್ಥಮಾಡಿಕೊಟ್ಟ ಕಾರಣ ಅವರನ್ನು ಎದುರಿಸುವುದು ಹಿಂದಿನಂತೆ ಸುಲಭ ಸಾಧ್ಯವಾಗಲಿಲ್ಲ. ಬೌದ್ಧ ಮತ್ತು ಜೈನ ಸಿದ್ಧಾಂತವನ್ನು ವೈದಿಕ ಸಂಸ್ಕೃತಿ ಪ್ರತಿಭಟಿಸಿ ಬರೆದ ಕೃತಿಗಳು ಲಭ್ಯವಾಗಿವೆ. ಆದರೆ ಬಸವಣ್ಣನವರ ಸಾಧನೆಯನ್ನು ತಾತ್ವಿಕವಾಗಿ ವಿರೋಧಿಸಿದ ವೈದಿಕ ಕೃತಿಗಳ ರಚನೆ ಇದುವರೆಗೆ ಆಗಿಲ್ಲವೆಂಬುದು ಗಮನಾರ್ಹ. ಆದರೆ ಕುಟಿಲತೆಯಿಂದ ಶರಣ ಸಂಸ್ಕೃತಿಯ ಪ್ರಸರಣಕ್ಕೆ ಅಡ್ಡಿಯನ್ನೊಡ್ಡುವ ಕುಹಕಿಗಳು ಇದ್ದುದು ಸಹಜವೇ ಆಗಿದೆ. ಅಂತಹ ಪ್ರಸಂಗದಲ್ಲಿ ವ್ಯವಹಾರ ಚತುರತೆಯನ್ನು ಬಳಸಿ ತತ್ವ ಸಂಪತ್ತನ್ನು ಬೆಳಗಿಸಿ ಸತ್ಯವನ್ನು ಸಂರಕ್ಷಿಸುತ್ತಾ ಶರಣ ಸಂಸ್ಕೃತಿ ಸಂಪತ್ತನ್ನು ಸಂರಕ್ಷಣೆ ಮಾಡಿದ ಕೀರ್ತಿ ಚನ್ನಬಸವಣ್ಣನವರಿಗೆ ಸಲ್ಲುತ್ತದೆ. ಹೀಗೆ ಅವರು ಶರಣ ಸಂಸ್ಕೃತಿಯ ಮುಂಬೆಳಗಾಗಿ ಬೆಳಗಿ ಕಲ್ಯಾಣ ಕ್ರಾಂತಿಯ ಆ ಘಟನೆಯ ಆಘಾತವನ್ನು ಉಪಶಮನಗೊಳಿಸಿ ನಂತರ ಉಳುವಿಗೆ ತೆರಳಿದರು. ಅತ್ಯಂತ ಚಿಕ್ಕ ವಯಸ್ಸಿನಲ್ಲಿ ಮಹತ್ವದ ಕಾರ್ಯ ಸಾಧಿಸಿದ ಮಹಾನುಭಾವರು. ಅನೇಕ ಶರಣರಿಗೆ ಚೇತನವನ್ನಿತ್ತು ಈ ಭವ್ಯ ಸಂಸ್ಕೃತಿಯ ಸಂರಕ್ಷಣೆಯ ದೀಕ್ಷೆಯನ್ನಿತ್ತು ಉಳುವಿಯ ಕ್ಷೇತ್ರದಲ್ಲಿ ಬಯಲಾದರು. ಉಳುವಿಯು ಇಂದು ಲಕ್ಷಾಂತರ ಭಕ್ತರಿಗೆ ಆರ್ತರಿಗೆ ಸಂಕಟದಲ್ಲಿ ಸಾಂತ್ವನ ನೀಡುವ ಸುಕ್ಷೇತ್ರವಾಗಿದೆ. ಹೀಗೆ ಅವರ ಕೃತಿಯಿಂದ ಮತಿಯಿಂದ ಅವರು ಅಮರರಾಗಿದ್ದಾರೆ, ಪೂಜ್ಯರಾಗಿದ್ದಾರೆ. ಇಂದು ಆ ಕ್ಷೇತ್ರದ ದರ್ಶನ ಪಡೆದವರಿಗೆ ನಾಸ್ತಿಕನಾದರೂ ಆಸ್ತಿಕಭಾವನೆಯನ್ನು ಬಿತ್ತಿ ಬೆಳೆಸುವ ದಿವ್ಯಕ್ಷೇತ್ರವಾಗಿದೆ. ಇವರ ತತ್ವಗಳು ಅನ್ಯ ಭಾಷೆಗಳಲ್ಲಿ ಬೆಳಗಿದ್ದರೆ ಅವರು ವಿಶ್ವದ ಪೂಜ್ಯರಾಗುತ್ತಿದ್ದರು. ಅವರ ತತ್ವದ ಅಭಿಮಾನಿಗಳಿಂದ ಆ ಕಾರ್ಯ ನಡೆಯಲೆಂದು ಆಶಿಸುವ.

ಗ್ರಂಥಸೂಚಿ

೧. ಬಸವಣ್ಣನವರ ವಚನಗಳು ಕ.ವಿ.ವಿ. ಪ್ರಕಟಣೆ ವ. ೯೪೪.
೨. ಸಾಮದೇವ ಮಂತ್ರ ೧೪೫೫.
೩. ಕಠೋಪನಿಷತ್
೪. ಚನ್ನಬಸವಣ್ಣನವರ ವಚನಗಳು: ಕ.ವಿ.ವಿ. ವ. ೭೬೦
೫. Thinking to some purpose. p. 188.
೬. ಅಲ್ಲಮನ ವಚನ ಚಂದ್ರಿಕೆ ಸಂ. ಪ್ರೊ. ಎಲ್. ಬಸವರಾಜು, ವ. ೭೪೧.
೭. ಅದೇ ವ. ೯೦೨.
೮. ಅದೇ ವ. ೯೧೫.
೯. ಅದೇ ವ. ೯೧೬.
೧೦. ಅದೇ ವ. ೧೦೫೦.
೧೧. ಅದೇ ವ. ೧೦೫೫
೧೨. ಅದೇ ವ. ೧೦೬೦.
೧೩. ಅದೇ ವ. ೧೦೬೧.
೧೪. ಅದೇ ವ. ೧೦೬೨.
೧೫. ಅದೇ ವ. ೧೦೬೫.
೧೬. ಅದೇ ವ. ೧೦೭೧.
೧೭. ಭೀಮಕವಿಯ ಬಸವಪುರಾಣ ಸಂಧಿ ೭ ಸೂಚನಾಪದ್ಯ.
೧೮. ಚಾಮರಸನ ಪ್ರಭುಲಿಂಗಲೀಲೆ ಗ. ೯. ಪ. ೨೩೩.
೧೯. ವಿರೂಪಾಕ್ಷ ಪಂಡಿತನ ಚನ್ನಬಸವಪುರಾಣ ನಂ. ೪, ಸ.೪.
೨೦. ಚನ್ನಬಸವಣ್ಣನವರು ಸಂ. ಜಗದಾಂಬ ಮಲ್ಲೆದೇವರು. ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ ಪು. ೨೦ (ಟಿ.ಎಸ್. ಪಾಟೀಲ್)
೨೧. ಚ.ಬ. ವಚನಗಳು. ವ. ೧೧೬೬.

* ಶರಣ ಜಗತ್ತು ಅಭಿನಂದನ ಗ್ರಂಥ, ಸಂ. ವಿದ್ವಾನ್ ಎಂ. ಶಿವಕುಮಾರಸ್ವಾಮಿ, ಪ್ರಕಾಶಕರು, ಅಖಿಲ ಕರ್ನಾಟಕ ವಚನ ಸಾಹಿತ್ಯ ಪರಿಷತ್ತು (ರಿ), ೧೫೨೮, ಅನಿಕೇತನ ರಸ್ತೆ, ಮೈಸೂರು

ಚೆನ್ನಬಸವಣ್ಣನ ಮಂತ್ರಗೋಪ್ಯಗಳು

●

ಡಾ. ಅನ್ನದಾನಯ್ಯ ಪುರಾಣಿಕ

"ವೀರಶೈವ ಸಂವಿಧಾನ ಶಿಲ್ಪಿ" ಚೆನ್ನಬಸವಣ್ಣನು ಸಾವಿರಾರು ಶ್ರೇಷ್ಠ ವಚನಗಳನ್ನು ರಚಿಸಿರುವಂತೆ, 'ಕರಣಹಸಿಗೆ', 'ಮಿಶ್ರಾರ್ಪಣ', 'ಮಂತ್ರಗೋಪ್ಯ', 'ತೊಂಬತ್ತಾರು ಸಕೀಲಂಗಳು' "ವಚನೈಕೋತ್ತರ ಶತಸ್ಥಲ" – ಮೊದಲಾದ ವೀರಶೈವ ಶಾಸ್ತ್ರಗ್ರಂಥಗಳನ್ನು ರಚಿಸಿದ್ದಾನೆ. ಚೆನ್ನಬಸವಣ್ಣನು ಸೃಷ್ಟಿಸಿರುವ 'ಚೆನ್ನಬಸವ ಸಾಹಿತ್ಯ'ಕ್ಕೆ ಪೂಜ್ಯ ಸ್ಥಾನವನ್ನು ನೀಡಲಾಗಿದೆ; ಇದನ್ನು "ವೀರಶೈವ ಧರ್ಮದ ಕೈಪಿಡಿ" ಎಂದು ಸ್ವೀಕರಿಸಲಾಗಿದೆ. ಚೆನ್ನಬಸವಣ್ಣನನ್ನು "ಷಟ್‌ಸ್ಥಲ ಬ್ರಹ್ಮಿ", "ಷಟ್‌ಸ್ಥಲ ಚಕ್ರವರ್ತಿ" ಎಂದು ಶರಣರು ಗೌರವಿಸಿದ್ದಾರೆ. "ಸ್ವಯಂಭೂ ಜ್ಞಾನಿ" ಚೆನ್ನಬಸವಣ್ಣನು ಶಿವಾಗಮೋಕ್ತ ವೀರಶೈವ ಧರ್ಮ, ಸಿದ್ಧಾಂತ–ದರ್ಶನವನ್ನು ಪರಿಶೀಲಿಸಿ, ಪರಿಷ್ಕರಿಸಿ, ಅವುಗಳಿಗೆ ಹೊಸ ಸ್ವರೂಪವನ್ನು ನೀಡಿದನಲ್ಲದೆ, ಸರ್ವರಿಗೂ ಅನುಷ್ಠಾನಯೋಗ್ಯವಾಗುವಂತೆ ಅವುಗಳನ್ನು ಪರಿವರ್ತಿಸಿದನು. ಆತನು ಷಟ್‌ಸ್ಥಲ ಶಿಲ್ಪಿ?. "ಷಟ್‌ಸ್ಥಳವೆಂಬ ಮಹಾನುಭಾವವನ್ನು ಆತನು ಕರತಳಾಮಳಕವಾಗಿ ಸ್ಥಲಗೊಳಿಸಿದ"ನೆಂದು ಬಸವಣ್ಣ ತನ್ನದೊಂದು ವಚನದಲ್ಲಿ ಹೇಳುತ್ತಾನೆ.

'ಕರಣಹಸಿಗೆ'ಯಲ್ಲಿ ಮಾನವನ ದೇಹಗತವಾಗಿರುವ ಮೂಲಭೂತ ತತ್ವಗಳ ಹಂಚಿಕೆಯಿದೆ; 'ಮಿಶ್ರಾರ್ಪಣದಲ್ಲಿ' ಲಿಂಗಾರ್ಪಣದ ಸಕೀಲಗಳನ್ನು ಹೇಳಲಾಗಿದೆ; ಮಂತ್ರಗೋಪ್ಯದಲ್ಲಿ ಶಿವಯೋಗ ದರ್ಶನವನ್ನು ಮಾಡಿಕೊಡಲಾಗಿದೆ. ಶಿವಯೋಗ ಸಾಧಕನು ಈ ಕೃತಿಗಳನ್ನು ಆಳವಾಗಿ ಅಭ್ಯಸಿಸಿ, ಅಲ್ಲಿ ಹೇಳಲಾಗಿರುವ ತತ್ವಗಳನ್ನು ಅರಿತುಕೊಂಡು ನಿತ್ಯಜೀವನದಲ್ಲಿ ಅಳವಡಿಸಿಕೊಳ್ಳುವುದು ಅತ್ಯಗತ್ಯವಾಗಿದೆ: ಇವುಗಳ ಜ್ಞಾನಾನುಭಾವವಿಲ್ಲದೆ ಶಿವಯೋಗಪಥದಲ್ಲಿ ಮುಂದುವರಿಯುವುದು ಸಾಧ್ಯವಾಗದು!

'ಮಂತ್ರಗೋಪ್ಯ' ಎಂಬ ಸಾಹಿತ್ಯವು ಶಿವಶರಣರ ವಿಶಿಷ್ಟ ವಿನೂತನ ಕೊಡುಗೆಯಾಗಿದೆ. ಇಂತಹ ಸಾಹಿತ್ಯವು ಪ್ರಪಂಚದಲ್ಲಿ ಬೇರೆ ಎಲ್ಲೂ ಇಲ್ಲ! ವಿಶ್ವದ ಯೌಗಿಕ ಸಾಹಿತ್ಯಕ್ಕೆ ಚೆನ್ನಬಸವಾದಿ ಶರಣರು ನೀಡಿರುವ 'ಮಂತ್ರಗೋಪ್ಯ ಸಾಹಿತ್ಯ' ಮಹೋನ್ನತ ಕೊಡುಗೆಯಾಗಿದೆ. ಇದು ಕನ್ನಡದಲ್ಲಿರುವುದು ಕನ್ನಡದ ಹೆಗ್ಗಳಿಕೆ! ಕನ್ನಡಿಗರಿಗೆ ಗೌರವ!

ಪಾಕೃತ್ಯಮಾನ್ಯವಾದ ಅಷ್ಟಾಂಗ ಕರ್ಮಯೋಗ ಸಿದ್ಧಾಂತಕ್ರಿಯೆ, ವೇದಾಂತ ಜ್ಞಾನವನ್ನು ಒಪ್ಪದ ಶಿವಶರಣರು, ಅನುಭಾವ, ಆಚಾರ– ಅವುಗಳನ್ನೊಳಗೊಂಡ ಮಂತ್ರಗೋಪ್ಯಗಳನ್ನು

ರಚಿಸಿದ್ದಾರೆ. ಸಮ್ಯಗ್‌ದರ್ಶನ, ಸಮ್ಯಗ್‌ಚಾರಿತ್ರ್ಯ ಹಾಗೂ ಸಮ್ಯಕ್ ಜ್ಞಾನವನ್ನು ಇವು ಬೋಧಿಸುತ್ತವೆ. ಅನುಭಾವ–ಆಚಾರ–ಅರಿವುಗಳ ಸಂಗಮದಂತಿರುವ 'ಮಂತ್ರಗೋಪ್ಯ'ಗಳಲ್ಲಿ ಶಿವಯೋಗ ದರ್ಶನವನ್ನು ಪ್ರತಿಮಾರೂಪದಲ್ಲಿ ಪಾರಿಭಾಷಿಕ ಭಾಷೆಯಲ್ಲಿ ಪದ್ಯಗಳ ಮೂಲಕ ಮಾಡಿಕೊಡಲಾಗಿದೆ. ಇವು ರಾಗ, ತಾಳ, ಛಂದಸಹಿತವಾದ ಹಾಡುಗಳಾಗಿವೆ. ಕರಣಹಸಿಗೆ, ಮಿಶ್ರಾರ್ಪಣ, ಮಂತ್ರಗೋಪ್ಯಗಳು ವೀರಶೈವರ ಅಕ್ಷಯನಿಧಿಗಳಾಗಿವೆ ಈ ಮೂರನ್ನು ರಚಿಸಿದ ಕೀರ್ತಿ ಚೆನ್ನಬಸವಣ್ಣನಿಗೆ ಸಲ್ಲುತ್ತದೆ. ಇವುಗಳನ್ನು ಆತನು ಸಿದ್ಧರಾಮನಿಗೆ ಬೋಧಿಸಿದನೆಂದು ಹೇಳಲಾಗುತ್ತದೆ. ಪ್ರಭುದೇವರು ರಚಿಸಿರುವ 'ಮಂತ್ರಗೋಪ್ಯ'ದಲ್ಲಿ ರಾಗ ತಾಳ ಸಹಿತವಾದ ಪಲ್ಲವಿಯುಳ್ಳ ಇಪ್ಪತ್ತೇಳು ಚೌಪದಿಗಳಿವೆ. ಈ ಕೃತಿಗೆ ಕಲ್ಲುಮಠದ ಪ್ರಭುದೇವರು ಮತ್ತು ಪರ್ವತ ಶಿವಯೋಗಿ ಮೊದಲಾದವರು ಭಾವಾರ್ಥ ಪ್ರತಿಪದಾರ್ಥವನ್ನು ಬರೆದಿದ್ದಾರೆ. ಹಡಪದ ಅಪ್ಪಣ್ಣ ಮತ್ತು ಆತನ ಪತ್ನಿ ಲಿಂಗಮ್ಮನ ಹೆಸರಿನಲ್ಲಿ ಮಂತ್ರಗೋಪ್ಯಗಳಿವೆ. ಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ ಮೊದಲಾದವರು ಮಂತ್ರಗೋಪ್ಯಗಳನ್ನು ರಚಿಸಿದಂತೆ ಹೇಳಲಾಗಿದೆ. ಚೆನ್ನಬಸವಣ್ಣನು ರಚಿಸಿರುವ ಮಂತ್ರಗೋಪ್ಯವನ್ನು ಸಂಕ್ಷಿಪ್ತವಾಗಿ ಮುಂದೆ ವಿಮರ್ಶಿಸಲಾಗುವುದು.

ಚೆನ್ನಬಸವಣ್ಣನು ರಚಿಸಿರುವ ಮಂತ್ರಗೋಪ್ಯಗಳು ಎರಡು: 'ಪದಮಂತ್ರಗೋಪ್ಯ' "ಹಿರಿಯಮಂತ್ರಗೋಪ್ಯ."

೧. ಪದಮಂತ್ರಗೋಪ್ಯದಲ್ಲಿ ಶಿವಯೋಗ ಸ್ಥಾಪನಸ್ಥಲ, ಪ್ರಣವಮೂರ್ತಿಲಿಂಗ ಪೂಜಾವಿಧಾನಸ್ಥಲ, ಸಂಯೋಗಸ್ಥಲ, ಮೂಲಪ್ರಣವ ಸಂಯೋಗಸ್ಥಲ, ಪ್ರಕಾಶಸ್ಥಲ, ಶಿವಾದ್ವೈತ ಶರಣಪ್ರಕಾಶಸ್ಥಲ, ಕಾರಣಪ್ರಣವ ಸಂಯೋಗ ಪ್ರಕಾಶಸ್ಥಲ (ಮಹಾಲಿಂಗೈಕ್ಯ ಸ್ಥಲ), ಪ್ರಣವ ಸಂಯೋಗ ನಿಜೈಕ್ಯಸ್ಥಲ, (ಜ್ಞಾನಶೂನ್ಯಸ್ಥಲ) ಎಂಬ ಏಳು ಸ್ಥಲಗಳಿವೆ. ಏಳು ಪಲ್ಲವಿಗಳು ಮತ್ತು ಆರು ಸೂತ್ರಗಳಿವೆ. ಹಿರಿಯಮಂತ್ರಗೋಪ್ಯದಲ್ಲಿ ಒಟ್ಟು ಇಪ್ಪತ್ತೇಳು ಪದ್ಯಗಳಿವೆ ಮತ್ತು ಒಂದು ಪಲ್ಲವಿ ಇದೆ. ಎರಡೂ ಮಂತ್ರಗೋಪ್ಯಗಳಲ್ಲಿ ಶಿವಯೋಗ ರಹಸ್ಯ ನಿರೂಪಣ ವಿಧಾನ ಬೇರೆಯಾಗಿದೆ. ಪದಮಂತ್ರಗೋಪ್ಯಕ್ಕೆ ಪರ್ವತ ಶಿವಯೋಗಿ ಮತ್ತು ಅಜ್ಞಾತ ಕರ್ತೃಗಳು ಪ್ರತಿಪದಾರ್ಥ ಭಾವಾರ್ಥ ಟೀಕೆಗಳನ್ನು ಬರೆದಿದ್ದಾರೆ. "ಹಿರಿಯಮಂತ್ರ ಗೋಪ್ಯ"ಕ್ಕೆ ಒರತೆಯ ರಾಮಯ್ಯದೇವರು, ಪರ್ವತಶಿವಯೋಗಿ ಹಾಗೂ ತೋಂಟದಾರ್ಯರು ಟೀಕೆಗಳನ್ನು ಬರೆದಿದ್ದಾರೆ. ಪರ್ವತ ಶಿವಯೋಗಿಗಳು ಪದಮಂತ್ರ ಗೋಪ್ಯಕ್ಕೆ ಬರೆದಿರುವ ಪ್ರತಿಪದ ಭಾವಾರ್ಥದ ಪ್ರಾರಂಭದಲ್ಲಿ 'ಮಂತ್ರಗೋಪ್ಯ'ದ ವ್ಯಾಖ್ಯಾನವಿದೆ:

ಅರಿತಾಗ ರಕ್ಷಿಸುವುದೇ ಮಂತ್ರ. ಅದರ ರಹಸ್ಯವೇ ಗೋಪ್ಯ. ಈ "ಮಂತ್ರಗೋಪ್ಯಕ್ಕೆ ಅರ್ಥವೇನೆಂದರೆ– 'ಮಂ' ಎಂಬಲ್ಲಿ ಮನನವೆಂದು, ಪ್ರಣವಸ್ವರೂಪವಪ್ಪ ಪರಶಿವನ ನೆನಹು; 'ತ್ರ' ಎಂದರೆ ತ್ರಾಣವೆಂದು, ಅಂತು ಪರಶಿವನ ನೆನಹೆಂಬುದು ನೆನೆವಾತನ ಚಿತ್ತವನ್ನು ಸಂಸಾರವ್ಯಾಪ್ತಿಯಿಂದ ಕಡೆಗೆ ದಾಟಿಸಿ, ಆ ಚಿತ್ತವ ತನ್ನಲ್ಲಿ ಸಂಬಂಧಿಸಿಕೊಳ್ಳುತ್ತಿದ್ದ ಕಾರಣ. ಆ ನೆನಹಿಂಗೆ 'ಮಂತ್ರ' ಎಂಬ ಅರ್ಥವಾಯಿತು. ಇನ್ನು 'ಗೋಪ್ಯ' ಎಂದರೆ, ರಹಸ್ಯಾರ್ಥ, ಶಿವಧ್ಯಾನದಲ್ಲಿ ಕರಿಗೊಂಡ ಚಿತ್ತವು ಆ ಶಿವಾನಂದದಲ್ಲಿಯೇ ಮುಳುಗಿ ಶಿವಸ್ವರೂಪವಾಯಿತ್ತಾಗಿ, ಅದು ಆತ್ಮಯೋಗದ ಲಕ್ಷಾನುಸಂಧಾನದೊಳಗಿಪ್ಪ ಚಿತ್ತದ ಹಂಗೆ ಕಲ್ಪಿತಕ್ಕೆ ಕಾಣಿಸಿಕೊಳ್ಳದು, ಎಂಬುದೆ 'ಗೋಪ್ಯ' ಶಬ್ದಕ್ಕೆ ಅರ್ಥ ಈ ಕ್ರಮದಿಂದ ಅವಿರಾಳನಂದ

ಶಿವಯೋಗ ಸಂಬಂದಾರ್ಥಮಂ ಪೇಳ್ವ ಈ ಶಾಸ್ತ್ರಕ್ಕೆ 'ಮಂತ್ರಗೋಪ್ಯ' ಎಂಬ ನಾಮವು ಪ್ರಸಿದ್ಧ."

ಇಂತಪ್ಪ ಶಿವಯೋಗ ಸಂಬಂಧಕ್ಕೆ ಅಧಿಕಾರಿಯಾಗಬೇಕಾದರೆ, ತನುವಿನ ಕುರುಹು, ಮನದ ಸಂಕಲ್ಪ, ಆತ್ಮನ ಜೀವಭಾವ, ಮಿಥ್ಯವೆಂಬ ಪ್ರಪಂಚ ನಾಸ್ತಿಯಾಗಿ, ಗುರುವೆ ತನು, ಲಿಂಗವೆ ಮನ, ಆ ಗುರುಚೈತನ್ಯವೆಂಬ ಜಂಗಮದ ಆತ್ಮಸ್ವರೂಪವಾದಲ್ಲದೆ ಆಗದು. ಆ ಶಿವದೀಕ್ಷಾನುಗ್ರಹದಲ್ಲಿ ಶಿವನ ಸಾಕಾರಮೂರ್ತಿ ಎನಿಸುವ ಸದ್ಗುರುವೇ ಕರ್ತನೆಂದು ಅರುಹಿ ಪ್ರಥಮದಲ್ಲಿ ಚೆನ್ನಬಸವರಾಜದೇವರು ಸದ್ಗುರು ಸ್ತೋತ್ರವಂ ಮಾಡುತಿರ್ದಪರು.

ಶಿವಯೋಗ ಸಾಧಕರಿಗೆ ನೆನಪಿಡಲು ಸುಲಭವಾಗಲೆಂದೂ, ನಿತ್ಯ ಹಾಡಿಕೊಳ್ಳಲು ಅನುಕೂಲವಾಗಲೆಂದೂ ಇವುಗಳನ್ನು ರಾಗ ತಾಳ ಸಹಿತ ಹಾಡುಗಳ ರೂಪ (ಸ್ವರವಚನ)ದಲ್ಲಿ ಚೆನ್ನಬಸವಣ್ಣನು ರಚಿಸಿದ್ದಾನೆ. ಹಿಂದೆ ಮಂತ್ರಗೋಪ್ಯಗಳನ್ನು ನಿತ್ಯ ಹಾಡಿಕೊಳ್ಳುವ ಪರಿಪಾಠವಿದ್ದಿತು. ಈಗ, ಇವುಗಳ ಹೆಸರನ್ನು ಕೇಳದವರು ಲಕ್ಷ ಲಕ್ಷ ಜನರಿದ್ದಾರೆ.

ಪದಮಂತ್ರ ಗೋಪದಲ್ಲಿ ಹೇಳಿರುವಂತೆ ಗುರುವಿನ ಅನುಗ್ರಹವಿಲ್ಲದ ಮತ್ತು ಮಾರ್ಗದರ್ಶನವಿಲ್ಲದೆ ಶಿವಯೋಗ ಸಾಧಕನಿಗೆ "ಶಿವಪಥವವನರಿವಡೆ ಗುರುಪಥವೇ ಮೊದಲು." ಬಸವಣ್ಣ ಶಿವಯೋಗ ರಹಸ್ಯವನ್ನು ಅರಿಯಲು ಸಾಧ್ಯವಿಲ್ಲ ಗುರು ಹೇಳಿದಂತೆ ಇರುವುದೇ ಯೋಗ ಎಂದು ಚೆನ್ನಬಸವಣ್ಣ ಹೇಳುತ್ತಾನೆ. "ಗುರುಪಾದವ ಹಿಡಿದಲ್ಲಿ ಕಾಣದುದ ಕಾಣಬಹುದು" ಎಂದು ಹೇಳುತ್ತಾರೆ ಅಲ್ಲಮಪ್ರಭು. ಆಕಾರ ನಿರಾಕಾರ ಏಕವೆಂದೇ ನೋಡಿ, ಆಕಾರವಿಡಿದು ಅರ್ಚನೆ, ಪೂಜನೆ ಏಕೋಭಾವದ ನಿಷ್ಠೆಯ ನಿರ್ವಾಣದಲಿ. ನಿನ್ನಾಕಾರ ನಿರಾಕಾರ ತಾನೆ" ಎಂದು ಆತನು ಉಪದೇಶಿಸುತ್ತಾನೆ. ಪ್ರಾಣಲಿಂಗಿಯಾದ ಶರಣನು ಚಿದ್ಘನಲಿಂಗದಲ್ಲಿ ಒಂದಾಗುವುದೇ ಶಿವಯೋಗ! ಪ್ರಾಣಲಿಂಗ ಪೂಜೆಯೇ ಶಿವಯೋಗ ಸಾಧನೆಯಲ್ಲಿ ಮಹತ್ವದ ಹಂತ! ಇಲ್ಲಿ ಪೂಜ್ಯ ಪೂಜಕ ಭೇದವಿರುವುದಿಲ್ಲ. ಇದು ಗೋಪ್ಯವಾದುದು. ಈ ಸ್ಥಲದಲ್ಲಿರುವ ಶರಣನಿಗೆ ಚತುರ್ವಿಧ ಫಲಗಳ ವ್ಯಾಮೋಹವಿರುವುದಿಲ್ಲ.

ಶಿವಯೋಗ ಸ್ಥಾಪನಾಸ್ಥಲದಲ್ಲಿ, ಶಿವಯೋಗ ಸಾಧಕನು ಶ್ರೀ ಗುರುಸ್ತೋತ್ರ, ಕರ್ಮಯೋಗ ನಿರಸನ, ಫಲಪದಗಳ ನಿರಾಕರಣೆಯಿಂದ ತನ್ನ ಹೃದಯಾಕಾಶದಲ್ಲಿ ಬೆಳಗುವ ಪರಬ್ರಹ್ಮವನರ್ಚಿಸಿ ಅದರೊಂದಿಗೆ ಬೆರೆಯಲು, ಪ್ರಣವಮೂರ್ತಿ ಲಿಂಗಪೂಜಾ ವಿಧಾನ ಸಂಯೋಗ ಸ್ಥಲದಲ್ಲಿ, ಷಡುಚಕ್ರ, ಷಡ್ವಿಧಲಿಂಗ, ಅಷ್ಟಚಕ್ರ, ಅಷ್ಟಲಿಂಗ, ನವಚಕ್ರ, ನವಲಿಂಗ ಪೂಜಾವಿಧಾನದಿಂದ ಸಕಲ ಪ್ರಪಂಚವನ್ನು ದಾಟಿ, ಪಶ್ಚಿಮ ಮಾರ್ಗವಪಿಡಿದು ಗೋಪ್ಯವಾದ ಮೂಲ ಪ್ರಣವರಾಧನೆಯನು ಮಾಡಲು, ಪರತತ್ವ ಪ್ರಕಾಶಸ್ಥಲದಲ್ಲಿ ಬಿಚ್ಚಿಬೇರಾಗದೆ ತನ್ನನರಿತು ಮಹದರಿವು ತನ್ನನೊಳಗೊಳ್ಳಲು, ಶಿವಾದ್ವೈತ ಶರಣಪ್ರಕಾಶ ಸ್ಥಲದಲ್ಲಿ, ತಾನೇ ಪರಬ್ರಹ್ಮವಾಗಿ ತೋರಲು, ಮಹಾಲಿಂಗೈಕ್ಯ ಸ್ಥಲದಲ್ಲಿ, ತಾನೇ ಪ್ರಕಾಶಮಯನಾಗಿ, ಬೆರಗು ನಿಬ್ಬೆರಗಾಗಿ ಉಣ್ಣದೋಗರವನುಂಡು, ಸವಿಯದ ಸವಿಯ ಸವಿದು, ಪರನಾದ ಪರಬಿಂದು ಪರಕಳಾತೀತನಾಗಿ ಉಲುಹಡಗಿ ತಾನೆಂಬುದಿಲ್ಲದೆ, ಕೊನೆಯ ಜ್ಞಾನಶೂನ್ಯ ಸ್ಥಲದಲ್ಲಿ ಜ್ಞಾನಶೂನ್ಯದೊಡನೆ ತನ್ನ ತಾ ನಷ್ಟವಾಗಿ ಪ್ರಣವ ಸಂಯೋಗ ನಿಜೈಕ್ಯಸ್ಥಲ ತಲುಪವನು! ಹೀಗೆ, ಹಂತ ಹಂತವಾಗಿ, ಶಿವಯೋಗ ಸಾಧಕನು ಶಿವಯೋಗಸ್ಥಾಪನ ಸ್ಥಲದಿಂದ ಜ್ಞಾನಶೂನ್ಯಸ್ಥಲವನ್ನು ತಲುಪವ ಬಗೆಯನ್ನು ಚೆನ್ನಬಸವಣ್ಣನು ಪದಮಂತ್ರಗೋಪ್ಯದಲ್ಲಿ,

ಯೋಗಿಕ ಪರಿಭಾಷೆಯಲ್ಲಿ, ಪ್ರತಿಮಾವಿಧಾನ ಮೂಲಕ ಮನೋಜ್ಞವಾಗಿ ನಿರೂಪಿಸಿರುವನು. ಪದಮಂತ್ರಗೋಪ್ಯದಲ್ಲಿ ಹುದುಗಿರುವ ಶಿವಯೋಗ ರಹಸ್ಯವನ್ನು ಶಿವಸ್ವರೂಪಿಗಳಾದ ಗುರುಗಳು, ಶಿವಯೋಗಿಗಳು ಮತ್ತು ಶಿವಾನುಭಾವಿಗಳು ಮಾತ್ರ ಹೇಳಬಲ್ಲರು!

೨. ಹಿರಿಯಮಂತ್ರ ಗೋಪ್ಯವು "ನೋಡಲಿಲ್ಲ, ನುಡಿಯಲಿಲ್ಲ, ಕೂಡಲಿಲ್ಲ, ಅಪ್ರತಿಮಂಗೊಡಲಿಲ್ಲ" ಎಂಬ ಸೂತ್ರದೊಂದಿಗೆ ಪ್ರಾರಂಭವಾಗುವುದು. ಈ ಸೂತ್ರವನ್ನು ಎರಡು ರೀತಿಯಲ್ಲಿ ಅರ್ಥೈಸಲಾಗಿದೆ –ಒಂದು ಅರ್ಥದ ಪ್ರಕಾರ "ನೋಡಲಿಲ್ಲ" ಎಂದಡೆ ಮಹವನಿಂಬುಗೊಂಡ ಶರಣಂಗೆ ತನ್ನಿಂದ ಅನ್ಯವಾಗಿ ತೋರುವ ದೃಶ್ಯಕ್ಕೆ ಇಂಬಿಲ್ಲವಾಗಿ ನೋಡಲಿಲ್ಲ; "ನುಡಿಯಲಿಲ್ಲ" ಎಂದಡೆ, ಆ ಶರಣಂಗೆ ಅನುಭಾವಕ್ಕೆಡೆಯಿಲ್ಲದೆ, "ನಿಶ್ಶಬ್ಧಂ ಬ್ರಹ್ಮೋಚ್ಯತೆ" ಎಂಬುದಾಗಿ ಶಬ್ದ ಮುಗ್ಧ ವಾಯಿತ್ತಾಗಿ ನುಡಿಯಲಿಲ್ಲ; 'ಕೂಡಲಿಲ್ಲ' ಎಂದಡೆ, ಆ ಮಹಿಮಂಗೆ ಅನಾದಿ ಸಂಸಿದ್ಧಿವಹ ಮಹಾಘನಲಿಂಗವೇ ತಾನೆಂಬ ನಿಜಭಾವವು ದ್ವೈತಾದ್ವೈತವೆಂಬ ಉಭಯ ಕಲ್ಪನೆಯ ಮೀರಿ ನಿಂದುದಾಗಿ ಕೂಡಲಿಲ್ಲ; ಆ ಅಪ್ರತಿಮ ಲಿಂಗಕ್ಕೆ ಕಡೆರೂಹಿಲ್ಲವಾಗಿ ಒಡಲಿಲ್ಲ.

ಮೇಲಿನ ಸೂತ್ರಕ್ಕೆ ನೀಡಿರುವ ಯೋಗಿಕ ಅರ್ಥದಿಂದ, 'ಹಿರಿಯ ಮಂತ್ರಗೋಪ್ಯ'ವು ಒಳಗೊಂಡಿರುವ 'ಶಿವಯೋಗರಹಸ್ಯ'ವು ಎಷ್ಟು ಗಹನವೂ, ಮಹೋನ್ನತವೂ ಹಾಗೂ ರಹಸ್ಯಮಯವೂ ಆಗಿರುವುದೆಂಬುದು ಸ್ಪಷ್ಟವಾಗುವುದು. ಪರಮೇಶ್ವರನ ನಿಜಪ್ರಸನ್ನ ಪ್ರಸಾದತ್ವವನ್ನು ಪಡೆಯಬೇಕಾದರೆ, ಗುರುಕರುಣದಿಂದ ಇಷ್ಟಲಿಂಗವನು ಪಡೆದು ವಿಧಾನಪೂರ್ವಕವಾಗಿ ಪೂಜಿಸಬೇಕಾಗುವುದು. ಇದು ಕೃತಿ ಸಮ್ಮತವಾದ ಮಾರ್ಗ! ಆತ್ಮವೇ ದೈವವೆಂಬ ಬೊಮ್ಮದ ಮಾತು ವ್ಯರ್ಥ! ಶಿವಯೋಗಿಯು ಆತ್ಮನಂತೆ ಪರಿಭವಕ್ಕೆ ಬಾರನು. ಭಕ್ತಿಜ್ಞಾನ ವೇರಾಗ್ಯ ವೈನಾದ ಶರಣನು ನೀತಿವಿಡಿದು ಕಂಥೆ (ದೇಹ ಸಹಿತ ಶಿವನಪಾದವನ್ನು ಬೆರೆಸುವನು. ಅವನ ಶರೀರವು ಧರೆಯಲ್ಲಿ ಉಳಿಯದು) ಚೆನ್ನಬಸವಣ್ಣನು. ಎಲ್ಲಾ ಯೋಗಗಳಲ್ಲಿ ಶಿವಯೋಗವೇ ಶ್ರೇಷ್ಠವೆಂಬುದನ್ನು ಸಿದ್ಧಪಡಿಸಿರುವನು. ಲಿಂಗಸಂಗಿಯಾದ ಶಿವಯೋಗಿಯು ಧರ್ಮಾರ್ಥ ಕಾಮ ಮೋಕ್ಷಗಳನ್ನು ಬಯಸನು; ಚತುರ್ವಿಧ ಪದವಿಗಳನ್ನು ಆತನು ಅಪೇಕ್ಷಿಸನು. ಅವನಲ್ಲಿ ಜೀವಭಾವವಳಿದು ಲಿಂಗಭಾವವು ಅಂಕುರಿಸುವುದು; ಹಮ್ಮನಳಿದ ಭಕ್ತಿಯಲ್ಲಿಲ್ಲ. ಫಲಪದರಹಿತನಾಗಿ, ಕರ್ಮಫಲದ ಸೋಂಕಿಲ್ಲದೆ ಅನುಪಮಾನಂದವನ್ನು ಅವನು ಅನುಭವಿಸುವವನು; ಅವನು ಬೆಳಕಿನೊಳಗೆ ಬೆಳಕಾಗಿ; ಶಿವನೊಳಗೆ ಐಕ್ಯನಾಗಿಬಿಡುವನು!

'ಹಿರಿಯಮಂತ್ರಗೋಪ್ಯ'ದಲ್ಲಿ ಮುಂದೆ ಚೆನ್ನಬಸವಣ್ಣನು, ಭಕ್ತ ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಅಂಗಗಳು; ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಪ್ರಸಾದಲಿಂಗ, ಮಹಾಲಿಂಗ ಎಂಬ ಆರು ಲಿಂಗಗಳೊಡನೆ, ಮೂಗು, ನಾಲಗೆ, ನೇತ್ರ, ತ್ವಚೆ, ಕರ್ಣ, ಭಾವಗಳೆಂಬ ಜ್ಞಾನೇಂದ್ರಿಯಗಳ ಮೂಲಕ ಸಂಬಂಧವನ್ನು ಪಡೆದು ಪ್ರಾಣಲಿಂಗದೊಡನೆ ಸಂಗ ಪಡೆಯುವುದನ್ನು ವಿವರಿಸುತ್ತಾನೆ. ಲಿಂಗೈಕ್ಯ ಸ್ಥಿತಿಯನ್ನು ಆತನು ವರ್ಣಿಸುತ್ತಾನೆ; ಶುದ್ಧ, ಶಾಕ್ತ, ವೈಷ್ಣವ, ಸೌರ, ಗಾಣಾಪತ್ಯ ಮತ್ತು ಮಹಾವಾದಿ (ಕಾಪಾಲಿಕ) ಎಂಬ ಆರು ದರುಶನಗಳಿಗೆ (ಮತಗಳಿಗೆ), ಶೈವ, ಪಾಶುಪತ, ಸೋಮ, ದಕ್ಷಿಣ, ಕಾಳಾಮುಖ, ಯಾಮಳ, ಲಾಕುಳ ಎಂಬ ಅಥವಾ ಆದಿಶೈವ, ಮಹಾಶೈವ, ಅನುಶೈವ, ಅಂತರಶೈವ, ಅಂತ್ಯಶೈವ, ಪ್ರವರಶೈವ ಎಂಬ ಆರು ಶೈವಗಳಿಗೆ, ಮೀರಿ, ಶರಣ ನಿಲುಕಡೆ ಇರುವುದೆಂದು ಆತನು ಸಾರುತ್ತಾನೆ. ಶರಣನ ಸರ್ವಾಂಗಲಿಂಗ ಗ್ರಾಹಕತ್ವವು, ಆಧಾರ ಸ್ವಾಧಿಷ್ಠಾನ, ಮಣಿಪೂರಕ

ಅನಾಹತ, ವಿಶುದ್ಧಿ ಮತ್ತು ಆಜ್ಞೆಯ ಎಂಬ ಚಕ್ರಗಳಿಗೆ ಅತೀತವಾಗಿರುವದೆಂದು ಚೆನ್ನಬಸವಣ್ಣನು ನಿರೂಪಿಸುತ್ತಾನೆ. ಲಿಂಗಕ್ಕೆ ಜಂಗಮ ಪ್ರಸಾದವನ್ನು ಅರ್ಪಿಸುವವನೇ ಲಿಂಗಭಕ್ತನೆಂದು ಆತನು ಹೇಳುತ್ತಾನೆ. ಭಕ್ತನ ಅಂಗದಲ್ಲಿಯೇ ಆರು ಸ್ಥಲಗಳು, ಆರು ಲಿಂಗಗಳು ಇರುವವು. ಆತನು ಜ್ಞಾನ ಪ್ರಕಾಶದಲ್ಲಿ ವಿಶ್ರಾಂತಿ ಪಡೆಯುವವನು ಮತ್ತು ಅವನಿಗೆ ಭಾವ, ಜ್ಞಾನ, ಒಡಲು ಮತ್ತು ಯಾವ ಕಲ್ಪನೆಯೂ ಇಲ್ಲವೆಂದು ಆತನು ನಿರೂಪಿಸುತ್ತಾನೆ. ಅಂತ್ಯದಲ್ಲಿ ಕೆಳಗಿನ ಪದ್ಯದೊಂದಿಗೆ ಹಿರಿಯಮಂತ್ರಗೋಪ್ಯವನ್ನು ಚೆನ್ನಬಸವಣ್ಣನು ಮುಕ್ತಾಯಗೊಳಿಸುತ್ತಾನೆ: ಹಿರಿಯಮಂತ್ರಗೋಪ್ಯದಲ್ಲಿ ಷಡುಸ್ಥಲಗಳ ಮಹಾನುಭಾವವನ್ನು ಸೂಕ್ಷ್ಮವಾಗಿ ನಿರೂಪಿಸಿರುವವನು ಚೆನ್ನಬಸವಣ್ಣನು!

"ಅಂಗಕಳೆಯ ಮೀರಿದ ಲಿಂಗಕಳೆಯಲಾರೂಢ
ಲಿಂಗಪ್ರಸಾದ ಪ್ರಾಣ ಪರಮತತ್ವದಾ
ಲಿಂಗ ಕೂಡಲಚೆನ್ನಸಂಗನ ಭೇದವನು
ಲಿಂಗಸಂಗ ಪ್ರಭುವಿನ ಕರುಣ ಬಸವಗಾದುದು!"

ಭಾವಾರ್ಥ : "ಭಾವಾಭಾವ ನಷ್ಟವಾದ ಶರಣಂಗೆ ಮುಂದೆ ಆಚರಿಸುವ ಆಚರಣೆ ಇಲ್ಲವಾಗಿ ಜ್ಞಾನಶೂನ್ಯವಾಯಿತ್ತೆಂದೆಂತಡೆ– ಭಕ್ತಾದ್ಯೈಕ್ಯವಂತಹ ಷಡಂಗ ಭಕ್ತಿ, ಮುಕ್ತಿ, ಶಕ್ತಿ, ವಿರಕ್ತಿ, ಮುಕ್ತಿಯೆಂಬ ಷಡ್ವಿಧಾಂಗ ಕಳೆಗಳೇಕಾರವಾಗಿ, ಆ ಶರಣನು ಅಂಗಕಳೆಯನು ಮೀರಿದಂತೆ ಮೀರಿದನೆಂತೆಂದಡೆ ಇವೆಲ್ಲವನ್ನಂಗೀಕರಿಸಿಕೊಂಡು ಇರುತ್ತಿಹ ಘನಲಿಂಗದ ಆ ನಿರ್ಭಾವ ಪ್ರಸಾದವು ಆ ನಿಭ್ರಾಂತಿ ಪ್ರಾಣಗ್ರಾಹಕನಾದ ಶರಣಂಗೆ, ಆ ನಿರ್ಭಾವ ಪ್ರಸಾದವೆನಿಸುವ ಪರಮತತ್ವವು ಏಕಾರ್ಥವಾದ ಭೇದವು ಸಾಧಕತ್ವವು. ಅನುಭಾವಮೂರ್ತಿ, ಪರಮಜಂಗಮ ಪ್ರಭುದೇವರ ಕರುಣದಿಂದ ಬಸವಣ್ಣಂಗಾಯಿತ್ತೆಂದು ಶ್ರೀ ಚೆನ್ನಬಸವದೇವರು ನಿರೂಪಮಂ ಕೊಡುತ್ತಿಹರು."

ಶಿವಯೋಗದ ತುತ್ತ ತುದಿಯಲ್ಲಿ ನಿಂತು, ಬೆಳಗಿನೊಳಗಿನ ಮಹಾಬೆಳಗ ನೋಡಿ, ಚೆನ್ನಸಂಗಯ್ಯನಲ್ಲಿ ಏಕಾರ್ಥನಾದ ಮಹಾಶಿವಯೋಗಿ ಚೆನ್ನಬಸವಣ್ಣನು ತಾನುಂಡು ಅನುಭವಿಸಿ ಆನಂದಿಸುವ ಶಿವಯೋಗದ ರಹಸ್ಯವನ್ನು ಶಿವಯೋಗ ಸಾಧಕರಿಗೆ ಮಂತ್ರಗೋಪ್ಯಗಳ ಮೂಲಕ ನಿರೂಪಿಸಿ ಮಹದುಪಕಾರವನ್ನು ಮಾಡಿರುವನು. ಅಷ್ಟೇ ಅಲ್ಲ, ವಿಶ್ವದ ಯೋಗಿಕ ಸಾಹಿತ್ಯಕ್ಕೆ ವಿನೂತನವಾದ, ವಿಶಿಷ್ಟವಾದ, ನಿತ್ಯನೂತನವಾದ ಯೋಗಿಕ ಸಾಹಿತ್ಯದಲ್ಲಿ ನೀಡಿರುವನು. ಕನ್ನಡ ಭಾಷೆಯ ಸತ್ವವನ್ನು, ಶಕ್ತಿಯನ್ನು, ಹರುಹನ್ನು, ಹಾಗೂ ಸೌಂದರ್ಯವನ್ನು ಹೆಚ್ಚಿಸಿ ಕನ್ನಡಿಗರ ಕೃತಜ್ಞತೆಗೆ ಪಾತ್ರನಾಗಿರುವನು ಚೆನ್ನಬಸವಣ್ಣ! ಮಂತ್ರಗೋಪ್ಯಗಳಿಗೆ ಶ್ರೇಷ್ಠಮಟ್ಟದ, ಹಾಗೂ ಅನುಭಾವಿಕ ಟೀಕೆಗಳನ್ನು ಬರೆದ ಪರ್ವತ ಶಿವಯೋಗಿ ಮೊದಲಾದವರು ಶಿವಯೋಗ ಸಾಧಕರಿಗೆ ಮಹೋಪಕಾರವನ್ನು ಮಾಡಿದ್ದಾರೆ. ಟೀಕೆಯ ಸಹಾಯವಿಲ್ಲದೆ ಮಂತ್ರಗೋಪ್ಯವು ಸಾಮಾನ್ಯ ಸಾಧಕರಿಗೆ ಅರ್ಥವಾಗದು.

❒

---

* ಸ್ವಪ್ನ ಲೋಕ, ಸಂ. ಡಾ. ಎಸ್. ವಿದ್ಯಾಶಂಕರ, ಪ್ರಕಾಶಕರು: ಸ್ನೇಹ ಪ್ರಿಂಟರ್ಸ್, ಬೆಂಗಳೂರು – ೪೦

ಷಟ್‌ಸ್ಥಲ ಚಕ್ರವರ್ತಿ ಚೆನ್ನಬಸವಣ್ಣ

●

ಡಾ. ಪರಮೇಶ್ವರಯ್ಯ ಸೊಪ್ಪಿಮಠ

ಪ್ರಪಂಚದ ಇತಿಹಾಸವನ್ನು ಅವಲೋಕಿಸಿದಾಗ ೧೨ನೇ ಶತಮಾನದಲ್ಲಿಯೇ ವಿಶ್ವಮಾನವ ಸಂದೇಶವನ್ನು ಸಾರಿದ ಹೆಮ್ಮೆ ಕನ್ನಡನಾಡಿನದು. ಆ ಕಾಲವನ್ನು ಅವಿಸ್ಮರಣೀಯವಾಗಿ ಮಾಡಿದವರು ಬಸವಾದಿ ಶರಣರು. ಕೆಲವೇ ವರ್ಷಗಳಲ್ಲಿ ನೂರಾರು ಶಿವಶರಣರು ಧರೆಗೆ ಅವತರಿಸಿ, ಜೀವನದ ಎಲ್ಲ ರಂಗಗಳ ಕುರಿತ ಅರ್ಥಪೂರ್ಣ ಚಿಂತನೆ ನಡೆಸಿದ ಕಾಲಘಟ್ಟವದು. ಅವರೆಲ್ಲರ ಪ್ರಮುಖ ಉದ್ದೇಶ ಮಾನವ ಕಲ್ಯಾಣವಾಗಿತ್ತು. ಅಂದಿನ ದಿನಗಳಲ್ಲಿ ಅದು ಅತ್ಯಂತ ಅವಶ್ಯಕವೂ ಆಗಿತ್ತು. ತಮ್ಮ ಕಾರ್ಯಸಾಧನೆಗೆ ಶರಣರು ಬಳಸಿಕೊಂಡ ವೇದಿಕೆ ಅನುಭವ ಮಂಟಪ. ಅಲ್ಲಿಂದ ಅಂದು ಹೊರಟ ವಚನಕಿರಣ ಇಂದು ಭರತಖಂಡದಲ್ಲೆಲ್ಲಾ ವ್ಯಾಪಿಸಿ ವಿಶ್ವದೆಲ್ಲೆಡೆ ಸಾಗುತ್ತ ವಿಶ್ವಶಾಂತಿಗೆ ಮುನ್ನುಡಿ ಆಗುತ್ತಿದೆ.

ಆ ಶಿವಶರಣರೆಲ್ಲ ಒಂದೆ ಹಿನ್ನೆಲೆಯಿಂದ ಬಂದವರೇನು ಅಲ್ಲ. ವಿವಿಧ ವರ್ಗ, ಜಾತಿ, ಪಂಗಡ, ಧರ್ಮಗಳಿಂದಲ್ಲದೆ; ಅರಮನೆ, ಗುರುಮನೆ, ಹಿರಿಮನೆ, ಕಿರಿಮನೆ, ಗುಡಿಸಲು ಮುಂತಾದವುಗಳಿಂದ ಬಂದವರಾಗಿದ್ದರು. ಸಾಮಾನ್ಯ ಜನರ ಎಲ್ಲ ನೋವು ಸಂಕಷ್ಟಗಳನ್ನು ಅರಿತು ಉಂಡು ಮೇಲೆದ್ದವರಾಗಿದ್ದರು. ಹಾಗಾಗಿ ಅವರವರ ಆಲೋಚನೆಗಳಲ್ಲಿ ಸ್ವಲ್ಪ ವ್ಯತ್ಯಾಸ ಕಂಡರೂ, ಅವರೆಲ್ಲರೂ ಸಮಾನತೆ ತಂದು ಸಕಲ ಜೀವಿಗಳಿಗೆ ಲೇಸಾಗಬೇಕೆಂಬ ಸುಂದರ ಕನಸನ್ನು ಹೊಂದಿದ್ದರು.

ಎಲ್ಲ ಜೀವಿಗಳಿಗೆ ಶುಭವನ್ನು ಬಯಸಿ ಅದರ ಕಡೆ ಸಾಗಿ, ಇತರರು ಸಾಗುವಂತೆ ಬಾಳನ್ನು ಸವೆಸಿದ ಶರಣರು ಇಂದು ನಮಗೆ ಆದರ್ಶವಾಗಿದ್ದಾರೆ. ಅಹಂಕಾರ ನಿರಸನದಿಂದ ಆತ್ಮಸಾಧನೆಗೆ ತೊಡಗಿ ಸಮರ್ಪಣ ಭಾವವೆಂದರೇನೆಂದು ತೋರಿಸಿಕೊಟ್ಟಿದ್ದಾರೆ. ಸತ್ಯ, ದಯೆ, ಸಮಾನತೆ, ಬಂಧುತ್ವ, ಕಾಯಕ ತತ್ವಗಳನ್ನು ರೂಢಿಸಿಕೊಂಡು ಬಾಳಿದ ಶರಣರ ಜೀವನ ಪಥವು ತೇಜೋಮಯವಾಗಿತ್ತು. ವ್ಯಕ್ತಿಯ ವಿಕಾಸವು ವಿಶ್ವಾತ್ಮನ ಶಕ್ತಿಯೊಂದಿಗೆ ಸಮ್ಮಿಲಿತವಾಗುವ ದಾರಿ ತೋರಿಸಿದ್ದಾರೆ. ಹಾಗಾಗಿ ಶರಣರ ಜೀವನ ಲೌಕಿಕವಾಗಿಯೂ ಪಾರಮಾರ್ಥಿಕವಾಗಿಯೂ ಸಫಲತೆಯನ್ನು ಪಡೆಯಿತು. ಆದರೆ ಅವುಗಳನ್ನು ನಾವು ನಮ್ಮ ಜೀವನದಲ್ಲಿ ಎಷ್ಟು ಅಳವಡಿಸಿಕೊಂಡಿದ್ದೇವೆ ಎಂಬ ಪ್ರಶ್ನೆಗೆ ಉತ್ತರ ಶೂನ್ಯ ಅಲ್ಲವೆ?

ಶರಣರು ನಮ್ಮೊಡನೆ ಇಂದು ಜೀವಂತವಾಗಿರುವುದು ವಚನಗಳಿಂದ. ವಚನ ಎಂದರೆ ಮಾತು ಅಥವಾ ಭಾಷೆ ಎನ್ನಬಹುದಾದರೂ ವಿಶೇಷಾರ್ಥವಾಗಿ ಸತ್ಯದ ಮಾತಾಗಿ ಕಾಣಿಸಿಕೊಳ್ಳುತ್ತದೆ. ಕನ್ನಡ ಸಾಹಿತ್ಯ ಲೋಕದಲ್ಲಿ ವಚನಗಳು ತಮ್ಮದೇ ಆದ ಸ್ಥಾನವನ್ನು ಪಡೆದಿವೆ. ವಚನವು ಪದ್ಯದಷ್ಟು ಬಿಗಿಯೂ ಅಲ್ಲ, ಸಾಮಾನ್ಯ ಗದ್ಯದಷ್ಟು ಸಡಿಲವೂ ಅಲ್ಲ ಎನ್ನಬಹುದು. ಆದರೆ ಸರಿಯಾಗಿ ಗಮನಿಸಿದರೆ ಅವು ಗದ್ಯ– ಪದ್ಯದ ನಡುವಿನ ಒಂದು ಮಾದರಿ ಎಂದು ತಿಳಿಯಬಹುದು. ವಚನಗಳು ಜನರ ಆಡುಭಾಷೆಗೆ ಹತ್ತಿರವಿರುವುದಲ್ಲದೆ ಪವಿತ್ರವೂ ಆಗಿವೆ. ಶರಣರು ತಾವು ಕಂಡಿದ್ದನ್ನು, ಕೇಳಿದ್ದನ್ನು, ಒಪ್ಪಿದ್ದನ್ನು, ಒಪ್ಪದಿರುವುದನ್ನೆಲ್ಲ ವಚನಗಳ ಮೂಲಕ ಅಭಿವ್ಯಕ್ತಿಸಿದ್ದಾರೆ. ಶರಣರ ವಚನಗಳಿಗೂ ಅವರು ಜೀವಿಸಿದ ರೀತಿಗೂ ಸಾಮ್ಯತೆಯನ್ನು ನಾವು ಗಮನಿಸಲೇಬೇಕು. ಅವರು ಸಾತ್ವಿಕ ಜೀವನವನ್ನು ನಡೆಸಿ, ಲಿಂಗದ ನುಡಿಗಳನ್ನು ಆಡಿ, ಸಮಾನತೆ ಬೀಜ ಬಿತ್ತುತ್ತ ಶಿವವಿಚಾರಗಳನ್ನು ಜನತೆ ಮುಂದಿಟ್ಟರು.

ಪರಿಪೂರ್ಣತೆಯತ್ತ ಸಾಗುವುದು ಬಾಳಿನ ಪರಮಗುರಿ ಎಂಬುದನ್ನು ವಚನಗಳಲ್ಲಿ ಶರಣರು ತೋರಿಸಿಕೊಟ್ಟಿದ್ದಾರೆ. ಶರಣರ ಅನುಭವ ಸಾಹಿತ್ಯದಲ್ಲಿ ಸರ್ವಕಾಲಿಕ ಮಾನವ ಧರ್ಮವು ಮೂಡಿಬಂದಿದೆ. ವಿಶ್ವದ ಮನ್ನಣೆ ಪಡೆಯಬಲ್ಲ ವಿಚಾರ ಭಾವನೆಗಳ ಸಾಗರ ಅವುಗಳಲ್ಲಿದೆ. ಸೀಮಿತ ಪ್ರದೇಶಕ್ಕೆ ಮಾತ್ರ ಅನ್ವಯಿಸುತ್ತಾ, ಪಾರಿಭಾಷಿಕ ಪದಗಳಿಂದ ಕೂಡಿರುವ, ಕನ್ನಡ ಭಾಷೆಯಲ್ಲಿ ಹುದುಗಿರುವ ವಚನಗಳು ವಿಶ್ವಮಾನ್ಯ ವಿಚಾರಧಾರೆಗಳಾಗಿ ಬೆಳೆಯಬೇಕಿವೆ.

ಈ ರೀತಿ ವಚನಗಳನ್ನು ಕಟ್ಟಿದ ಶರಣರ ಸಾಲು ಬಹು ದೊಡ್ಡದಿದೆ. ಆ ಶರಣರ ಗುಂಪಿನಲ್ಲಿ ಚೆನ್ನಬಸವಣ್ಣ ವಿಶೇಷವಾಗಿ ಕಾಣುತ್ತಾನೆ. ತನ್ನ ವಚನಗಳಲ್ಲಿ ವೀರಶೈವ ಸಿದ್ಧಾಂತ ನಿರೂಪಣೆಗೆ ಹೆಚ್ಚು ಒತ್ತು ಕೊಡುತ್ತಾ ಅದನ್ನು ಶಾಸ್ತ್ರ ಸಮ್ಮತವಾದ ರೀತಿಯಲ್ಲಿ ಸಮರ್ಥಿಸುತ್ತಾನೆ. ತಾನು ನುಡಿದ ಸಿದ್ಧಾಂತದ ಮಾರ್ಗದಲ್ಲೇ ನಡೆದು ಸಂಪ್ರದಾಯಕ್ಕೆ ಅತೀತವಾದ ವಿಶ್ವವ್ಯಕ್ತಿತ್ವದ ವಿಸ್ತಾರವನ್ನು ಚೆನ್ನಬಸವೇಶನು ಪಡೆದಿದ್ದಾನೆ. ಹಾಗಾಗಿ ಆತನು ಅಲ್ಲಮಪ್ರಭುವಿನಾದಿಯಾಗಿ ಎಲ್ಲರಿಗೂ ಅಚ್ಚುಮೆಚ್ಚು. ಪ್ರಭುದೇವರ ದೃಷ್ಟಿಯಲಿ ಚೆನ್ನಬಸವಣ್ಣ ಅವಿರಳಜ್ಞಾನಿ, ಸ್ವಯಂಭುಜ್ಞಾನಿ, ಬಸವಣ್ಣನವರ ಅಭಿಪ್ರಾಯದ ಪ್ರಕಾರ ಜನ್ಮತಃ ಜ್ಞಾನ ಪರಿಮಳಭರಿತ, ಅಕ್ಕಮಹಾದೇವಿಯು ಸಮ್ಯಗ್‌ಜ್ಞಾನಿ ಎಂದು ಸಂಬೋಧಿಸಿರುವುದು ಈ ಶರಣ ಒಬ್ಬ ಮಹಾಜ್ಞಾನಿ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಚಿನ್ಮಯಾನಂದ, ಷಟ್‌ಸ್ಥಲ ಚಕ್ರವರ್ತಿ, ಅವಿರಳಜ್ಞಾನಿ ಇತ್ಯಾದಿ ಹೆಸರುಗಳಿಂದ ಪ್ರಸಿದ್ಧನಾಗಿರುವ ಚೆನ್ನಬಸವಣ್ಣ ಶಿವಶರಣರ ಗುಂಪಿನಲ್ಲಿ ಕಿರಿಯ ವಯಸ್ಸಿನಲ್ಲೇ ಹಿರಿಯ ಸಾಧನೆ ಮಾಡಿ ತೋರಿಸಿದವನು. ಬಸವಾದಿ ಶಿವಶರಣರ ಸಾಧನೆಯ ಹಾದಿಗೆ ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡವನು. ಅನುಭವ ಮಂಟಪದ ಮುಖ್ಯಸ್ಥನಾಗಿ ಶರಣರು ಬಲಗೊಳ್ಳುವಲ್ಲಿ ಈತನು ವಹಿಸಿದ ಪಾತ್ರ ಅತ್ಯಂತ ಪ್ರಮುಖವಾದುದಾಗಿದೆ.

ಬಾಗಲಕೋಟೆ ಜಿಲ್ಲೆಯ ಇಂಗಳೇಶ್ವರದಲ್ಲಿ ಶೈವ ಬ್ರಾಹ್ಮಣರಾದ ಅಕ್ಕನಾಗಮ್ಮ ಶಿವದೇವ ದಂಪತಿಗಳ ಪುತ್ರನಾಗಿ ಚೆನ್ನಬಸವಣ್ಣ ಜನಿಸಿದನು. ಜನನಿ ತಾನೆ ಮೊದಲ ಗುರು ಎಂಬಂತೆ ಅಕ್ಕನಾಗಮ್ಮನೇ ಈತನ ಮೊದಲ ಗುರು. ಮನೆಯ ಪರಿಸರ ಈತನ ಆಧ್ಯಾತ್ಮ ಸಾಧನೆಗೆ ಸಾಕಷ್ಟು ಪ್ರಭಾವ ಬೀರಿದುದನ್ನು ಒಪ್ಪಿಕೊಳ್ಳಲೇಬೇಕು.

ಸೋದರ ಮಾವನಾದ ಕಲ್ಯಾಣಕ್ರಾಂತಿಯ ಬಸವೇಶನು ಈತನಿಗೆ ವೀರಶೈವ ದೀಕ್ಷೆ ಕೊಡಿಸುತ್ತಾನೆ. ಅದರ ಪರಿಣಾಮ ಬಸವನನ್ನೇ ಶಿಕ್ಷಣದ ಗುರುವಾಗಿ ಸಹಜ, ಅದನ್ನು ತೊಳೆದುಕೊಳ್ಳುವ ಬಗೆ ಹೇಗೆ ಎಂಬುದರ ಬಗ್ಗೆ ವಚನದಲ್ಲಿ ಚೆನ್ನಬಸವಣ್ಣ ಈ ರೀತಿ ನುಡಿದಿದ್ದಾರೆ:

ಮಂಡೆ ಮಾಸಿದಡೆ ಮಹಾ ಮಜ್ಜನವ ಮಾಡುವುದು
ವಸ್ತ್ರ ಮಾಸಿದಡೆ ಮಡಿವಾಳರಿಗಿಕ್ಕುವುದು
ಮನದ ಮೈಲಿಗೆ ತೊಳೆಯಬೇಕಾದಡೆ
ಕೂಡಲಚೆನ್ನಸಂಗಯ್ಯನ ಶರಣರ ಅನುಭಾವವ ಮಾಡುವುದು

ಇಲ್ಲಿ ಸಾಮಾನ್ಯ ಉದಾಹರಣೆಯಿಂದ ಗಹನವಾದ ವಿಷಯವನ್ನು ಪ್ರಚಾರಪಡಿಸಲಾಗಿದೆ. ತಲೆ ಕೊಳೆಯಾದರೆ ಮಜ್ಜನ ಮಾಡಿಕೊಳ್ಳುವಂತೆ, ಬಟ್ಟೆ ಮೈಲಿಗೆಯಾದರೆ ಅಗಸರಿಗೆ ಕೊಡುವಂತೆ, ಮನದ ಕಶ್ಮಲವನ್ನು ತೊಳೆಯಬೇಕಾದರೆ ಶಿವಶರಣರ ಅನುಭಾವ ಮಾಡಿದರೆ ಸಾಕು, ಎಲ್ಲ ಶುಭ್ರವಾಗುತ್ತದೆ ಎನ್ನುತ್ತಾನೆ. ಅದಕ್ಕಾಗಿ ಈ ಪ್ರಪಂಚದಲ್ಲಿ ತನ್ನದೆಂಬುದು ಏನೂ ಇಲ್ಲ, ಶಿವನಿಂದಲೇ ಎಲ್ಲ ಪಡೆದಿದ್ದೇವೆ. ಹಾಗಾಗಿ ಎಲ್ಲವನ್ನು ಶಿವನಿಗೆ ಅರ್ಪಿಸಿ ಎಂದು ತಿಳಿಸುವ ಚೆನ್ನಬಸವಣ್ಣ ಅದರ ಬಗ್ಗೆ ತನ್ನ ವಚನದಲ್ಲಿ–

ತನು ಮುಟ್ಟದ ಮುನ್ನವೇ ಲಿಂಗಾರ್ಪಿತವ ಮಾಡಬೇಕು
ಮನ ಮುಟ್ಟದ ಮುನ್ನವೇ ಲಿಂಗಾರ್ಪಿತವ ಮಾಡಬೇಕು
ಶ್ರೋತ್ರ, ನೇತರ, ಘ್ರಾಣ, ಜಿಹ್ವೆ, ತ್ವಕ್ಕೆಂಬ ಪಂಚೇಂದ್ರಿಯಂಗಳು
ಮುಟ್ಟದ ಮುನ್ನವೇ ಲಿಂಗಾರ್ಪಿತವ ಮಾಡಬೇಕು
ನಮ್ಮ ಕೂಡಲ ಚೆನ್ನಸಂಗಮನಲ್ಲಿ
ಪ್ರಸಾದಿಯಾದೊಡೆ ಇಂತಾಗಬೇಕಯ್ಯ
ಇಂತಲ್ಲದವರು ಬರುಕಾಯರೆನಿಸುವರಯ್ಯ.

ಎಂದು ಹೇಳುತ್ತಾನೆ. ಆಚಾರ–ವಿಚಾರಗಳ ಸಮನ್ವಯತೆಯನ್ನು ಹಾಗೂ ಚೆನ್ನಬಸವಣ್ಣ ಸಾಧನೆಯ ಹಾದಿಯನ್ನು ಇದರಲ್ಲಿ ಕಾಣುತ್ತೇವೆ. ಅರಿವು, ಆಚಾರ, ಸತ್ಕ್ರಿಯೆಗಳಿಂದ ಜಂಗಮ ಕೂಡಿರಬೇಕು. ಸತ್ಕ್ರಿಯೆಯೆಂಬ ಮಾತು, ಸರ್ವಾರ್ಪಣೆಯ ಮನೋಧರ್ಮದಿಂದ, ನಿರ್ಲಿಪ್ತನಾಗಿ ಕರ್ಮಗಳನ್ನು ಆಚರಿಸುವುದೆಂಬ ವಿಶಾಲವಾದ ಅರ್ಥವನ್ನು ಇದರಲ್ಲಿ ಕಾಣಬಹುದು. ಈಶ್ವರನ ಪ್ರಸಾದವೆಂಬ ಭಾವನೆಯಿಂದ ಸರ್ವಸ್ವವನ್ನು ಅವನಿಗೆ ಅರ್ಪಿಸಿ ತಾನು ನಿಮಿತ್ತ ಮಾತ್ರನಾಗಿ ಇರಬೇಕು ಎಂಬ ಪ್ರಕೃತಿಯ ನಿಯಮವನ್ನು ಈ ವಚನ ಸಾರುತ್ತದೆ. ಸಮಾಜದಲ್ಲಿ ಬೇರುಬಿಟ್ಟಿರುವ ವರ್ಣವ್ಯವಸ್ಥೆ ವಿರುದ್ಧ ಮಾತನಾಡದ ಶರಣರೇ ಇಲ್ಲ ಎನ್ನಬಹುದು. ಚೆನ್ನಬಸವಣ್ಣನೂ ಅದಕ್ಕೆ ಹೊರತಲ್ಲ ಅದರ ಬಗ್ಗೆ.

ಹೊಲೆ ಹೊಲೆಯನೆಂದು ಹೊರಗಿರು ಎಂದೆಂಬರು
ಹೊಲೆಯನೆಂತವನಯ್ಯಾ?
ತನ್ನ ಹೊಲೆಯ ತಾನರಿಯದೆ
ಮುನ್ನಿವರ ಹೊಲೆಯನರಸುವ
ಭ್ರಷ್ಟರಿಗೆ ಏನೆಂಬೆನಯ್ಯ
ಮಹಾದಾನಿ ಕೂಡಲಚೆನ್ನಸಂಗಮವೇದಾ

ಜಾತಿವ್ಯವಸ್ಥೆ ವಿರುದ್ಧ ತನ್ನಲ್ಲಿದ್ದ ಆಕ್ರೋಶವನ್ನು ಚೆನ್ನಬಸವಣ್ಣ ಈ ವಚನದಲ್ಲಿ ಹೊರಹಾಕಿದ್ದಾನೆ. ಕೀಳುಜಾತಿಯವನೆಂದು ಅವನನ್ನು ಹತ್ತಿರ ಸೇರಿಸದೆ ಹೊರಗಟ್ಟುತ್ತಾರೆ. ಹೊಲೆಯ ಯಾರು? ಎಂದು ಪ್ರಶ್ನಿಸುತ್ತಾ, ತನ್ನಲ್ಲಿರುವ ಕಶ್ಮಲವನ್ನು ತಿಳಿದುಕೊಳ್ಳದೇ ಬೇರೆಯವರನ್ನು ಹೊಲೆಯ ಎಂದು ಅರಚುತ್ತಿರುವ ಭ್ರಷ್ಟರಿಗೆ ಏನೆನ್ನಬೇಕು ಎಂದು ಸಮಾಜದ ಜಾತಿ ವೈಪರೀತ್ಯವನ್ನು ಎತ್ತಿ ತೋರಿಸುತ್ತಾನೆ. ಜನರ ವರ್ತನೆಗಳು ಹೇಗಿರಬೇಕು ಎಂದು ಚೆನ್ನಬಸವೇಶ ತನ್ನ ವಚನಗಳಲ್ಲಿ ಹೇಳಿದ್ದಾನೆ. ಆಚಾರದ ಅತಿರೇಕಗಳಿಗೆ ಒಳಗಾಗದೆ ಯೋಗ್ಯವಾದ ಸದಾಚಾರದಲ್ಲಿ ವರ್ತಿಸದಿರುವವರು ಶೀಲದ ಬಗ್ಗೆ ಮಾತನಾಡುವುದನ್ನು ಕಂಡು ಇವರು,

ಶೀಲ ಶೀಲವೆಂದು ಗರ್ವಿಸಿ, ನುಡಿವುತಿಪ್ಪರು, ಶೀಲವಾವುದೆಂದರಿಯರು,
ಇದ್ದುದ ವಂಚನೆಯ ಮಾಡದಿಪ್ಪುದೆ ಶೀಲ,
ಇಲ್ಲದಿದ್ದುದಕ್ಕೆ ಕಡವ ಬೇಡದಿಪ್ಪುದೆ ಶೀಲ,
ಪರಧನ ಪರಸತಿಗೆಳಸದಿಪ್ಪುದೆ ಶೀಲ,
ಪರದೈವ ಪರಸಮಯಕ್ಕೆಳಸದಿಪ್ಪುದೆ ಶೀಲ,
ಗುರುನಿಂದೆ ಜಂಗಮನಿಂದೆಯ ಕೇಳದಿಪ್ಪುದೆ ಶೀಲ
ಕೂಡಲಚೆನ್ನಸಂಗನ ಶರಣರ ಬರುವಿಂಗೆ
ಮೈಯ್ಯಾಂತು ಪರಿಣಾಮಿಸಬಲ್ಲಡೆ ಅಚ್ಚಶೀಲ.

ಶೀಲದ ಬಗ್ಗೆ ಗಟ್ಟಿಯಾಗಿ ಮಾತನಾಡುವವರಿಗೆ ಅದು ಅರ್ಥವಾಗಿಲ್ಲ. ಶೀಲವೆಂದರೆ ವಂಚನೆ ಮಾಡದಿರುವುದು, ಇಲ್ಲದ್ದನ್ನು ಸಾಲ ಮಾಡಿ ತರದಿರುವುದು, ಬೇರೆಯವರ ಹಣ, ಪತ್ನಿಗೆ ಆಸೆ ಪಡದಿರುವುದು, ಇನ್ನೊಬ್ಬರ ದೈವ, ಸಮಯ ಕೆಡಿಸದಿರುವುದು, ಗುರುನಿಂದೆ–ಜಂಗಮನಿಂದೆ ಕೇಳದಿರುವುದು, ಕೂಡಲಸಂಗನ ಶರಣರ ಬರುವನ್ನು ಬಯಸುವವರು ಉತ್ತಮ ಶೀಲವಂತರೆಂದು ಅಭಿಪ್ರಾಯಪಡುತ್ತಾನೆ. ಈ ರೀತಿ ಚೆನ್ನಬಸವಣ್ಣನ ಪ್ರತಿಯೊಂದು ವಚನಗಳು ಒಂದಕ್ಕಿಂತ ಒಂದು ಮೇಲಾಗಿ ಕಾಣುತ್ತಾ ತಮ್ಮೊಳಗೆ ಅಡಗಿರುವ ವೈಚಾರಿಕತೆಯನ್ನು ಬಿಚ್ಚಿಡುತ್ತವೆ.

ಮಹಾಜ್ಞಾನಿಯಾದ ಚೆನ್ನಬಸವಣ್ಣನ ಬಗ್ಗೆ ಶೂನ್ಯಪೀಠದ ಅಲ್ಲಮಪ್ರಭುದೇವರು ಹಾಡಿ ಹೊಗಳಿದ್ದಾರೆ. ತನ್ನ ವಯಸ್ಸಿಗೆ ಮೀರಿದ ಶರಣನೆಂದು ಪ್ರಶಂಸಿಸಿದ್ದಾರೆ. ಶರಣರಲ್ಲೆಲ್ಲ ಪ್ರಸಿದ್ಧನಾದ ಚೆನ್ನಬಸವಣ್ಣನನ್ನು ಕುರಿತು ಪ್ರಭುಗಳು–

ಕಿರಿಯರಾದಡೇನು? ಹಿರಿಯರಾದಡೇನು?
ಅರಿವಿಂಗೆ ಹಿರಿದು ಕಿರಿದುಂಟೆ?
ಆದಿಯನಾದಿ ಇಲ್ಲದಂದು, ಅಜಾಂಡ ಬ್ರಹ್ಮಾಂಡ
ಕೋಟಿಗಳೂ ಉದಯವಾಗದಂದು
ಗುಹೇಶ್ವರ ಲಿಂಗದಲ್ಲಿ ನೀನೊಬ್ಬನೇ ಮಹಾಜ್ಞಾನಿಯೆಂಬುದು
ಕಾಣಬಂದಿತ್ತು ಕಾಣಾ ಚೆನ್ನಬಸವಣ್ಣ

ಎಂದು ಅಲ್ಲಮರೇ ಮೆಚ್ಚಿದ್ದಾರೆಂದರೆ ಅವನ ಜ್ಞಾನದ ಆಳವನ್ನು ನಾವು ಕಲ್ಪಿಸಿಕೊಳ್ಳಬಹುದು. ಚೆನ್ನಬಸವಣ್ಣನು ಅನೇಕ ಸಂದರ್ಭಗಳಲ್ಲಿ ಬಸವಣ್ಣನವರನ್ನು ಕೂಡಾ ಎಚ್ಚರಿಸಿ ಅವರ ಸಾಧನೆಯಲ್ಲಿ ಮಾರ್ಗದರ್ಶಕನಾಗಿದ್ದನೆಂದರೆ ಆತನ ಸಾಮರ್ಥ್ಯವನ್ನು ನಾವು ಮೆಚ್ಚಲೇಬೇಕು. ಅದಕ್ಕೆ ಜಗಜ್ಯೋತಿ ಬಸವೇಶನು ಒಂದೆಡೆ,

ಎನ್ನ ಕಾಯದ ಕತ್ತಲೆ ಹಿಂಗಿತ್ತು ಚೆನ್ನಬಸವಣ್ಣಾ!
ಇಂದಿನಲ್ಲಿ ಎನ್ನ ತನು ಮನ ಧನ ಲೋಭವಳಿದು ತಲೆವೆಳಗಾಯಿತ್ತು
ಇಂದಿನಲ್ಲಿ ಎನ್ನನೆಡೆಗೊಂಡ ಅಹಂಕಾರ ನಿರ್ವಯಲಾಯಿತ್ತು
ಇಂದಿನಲ್ಲಿ ಕೂಡಲಸಂಗಮದೇವರ ತೃಪ್ತಿಯ ತೆರನ
ನೀನು ತೋರಿದೆಯಾಗಿ ನಾನು ಬದುಕಿದೆನು ಕಾಣಾ ಚೆನ್ನಬಸವಣ್ಣಾ

ಎನ್ನುತ್ತಾರೆ. ಶರಣರ ಸಾಲಿನಲ್ಲಿ ಚೆನ್ನಬಸವಣ್ಣ ಕಲಶಪ್ರಾಯರಾಗಿ ಕಂಗೊಳಿಸುತ್ತಾನೆ. ಚೆನ್ನಬಸವಣ್ಣನವರ ಜೀವನ, ಸಾಧನೆ, ವಚನಗಳ ಸಂಪೂರ್ಣ ಪರಿಚಯಿಸುವುದು ಈ ಒಂದು ಲೇಖನದಿಂದ ಸಾಧ್ಯವಿಲ್ಲ. ಆದರೆ ಆತನ ಬಗೆಗೆ ಓದುಗರಲ್ಲಿ ಒಂದಷ್ಟು ಆಸಕ್ತಿ ಕೆರಳಿಸುವುದು ನಮ್ಮ ಉದ್ದೇಶ. ಜೊತೆಗೆ ಚೆನ್ನಬಸವಣ್ಣನ ವಾರಸುದಾರರಾದ ನಾವುಗಳು ಆತನ ಆದರ್ಶಗಳನ್ನು ನಮ್ಮ ನಡೆ–ನುಡಿಯಲ್ಲಿ ಅಂತರ್ಗತವಾಗಿಸಿಕೊಂಡು ಮುಂದೆ ಸಾಗಬೇಕಿದೆ. ಪ್ರಸ್ತುತ ನಾವು ಎದುರಿಸುತ್ತಿರುವ ಬಹಳಷ್ಟು ಸಮಸ್ಯೆಗಳಿಗೆ ವಚನಗಳಲ್ಲಿ ಉತ್ತರಗಳಿವೆ. ನಾವು ಅವನ್ನು ಹುಡುಕಿ, ಕೆದಕಿ ಕಂಡುಕೊಳ್ಳಬೇಕಿದೆ. ಆ ದಿಕ್ಕಿನತ್ತ ಪಯಣ ಪ್ರಾರಂಭವಾಗಲಿ.

❐

---

* ಬಸವಪಥ, ಲೇ. ಪರಮೇಶ್ವರಯ್ಯ ಸೊಪ್ಪಿಮಠ, ಬಸವಭವನ, ಶ್ರೀ ಬಸವೇಶ್ವರ ರಸ್ತೆ, ಬೆಂಗಳೂರು–೫೬೦ ೦೦೧, ಜೂನ್ ೨೦೦೮.

ಚೆನ್ನಬಸವಣ್ಣನ ವಚನಗಳಲ್ಲಿ ಸಾಹಿತ್ಯಿಕ ಮೌಲ್ಯ

●

ಪ್ರೊ॥ ಎಚ್. ಎಂ. ಚನ್ನಯ್ಯ

ಜೀವನದಲ್ಲಿ ಶಿವಶರಣರುಮಾಡಿಕೊಂಡ 'ಆಯ್ಕೆ'ಯೆ ಅವರ ಅಭಿವ್ಯಕ್ತಿಯ ಮಾಧ್ಯಮವಾದ 'ವಚನ'ದ 'ಆಯ್ಕೆ'ಗೂ ಕಾರಣವಾಯಿತು. ಅವರು ವಚನದಲ್ಲಿ ಉಪಯೋಗಿಸಿದ ಭಾಷೆ ತಮ್ಮ ಕಾಲದ, ತಮ್ಮ ಸುತ್ತಮುತ್ತಲಿನ ಜನಗಳ ಕನ್ನಡ; ಅವರ ಶ್ರೋತೃವರ್ಗ, ಮುಖ್ಯವಾಗಿ ಸಾಮಾನ್ಯಜನ. ಇದಕ್ಕನುಗುಣವಾಗಿ ಸಾಹಿತ್ಯವನ್ನು ಕುರಿತಾದ ಅವರ ಧೋರಣೆ ರೂಪುಗೊಂಡಿತು. ಜನರಿಗೆ ತಮ್ಮ ನವೀನ ದೃಷ್ಟಿಯ ಪ್ರಚಾರ ಮತ್ತು ತಮ್ಮ ಅನುಭವಗಳಿಗೆ ಅಭಿವ್ಯಕ್ತಿ ಕೊಡಲು ತಕ್ಕ ಭಾಷೆಯನ್ನು ಕಂಡುಕೊಳ್ಳುವುದು ಎರಡೂ ಇದರಿಂದ ಸಾಧಿತವಾದವು. 'ಸಾಮಾಜಿಕ ಸತ್ತ್ವ' (Social Content) ದಲ್ಲಾದ ಬದಲಾವಣೆ ಹೊಸ ಅಭಿವ್ಯಕ್ತಿಯ ರೀತಿಗಳಿಗೆ ಕಾರಣವಗುತ್ತದೆ – ಎನ್ನುವುದಕ್ಕೆ ಹನ್ನೆರಡನೆಯ ಶತಮಾನದ ವಚನಸಾಹಿತ್ಯ ಉತ್ತಮ ಉದಾಹರಣೆಯಾಗಿದೆ. 'ವಚನ'ಕ್ಕೂ ಅದು ಪ್ರಾಮುಖ್ಯತೆ ಬಂದ ಕಾಲದ ಸಾಮಾಜಿಕ ಪರಿಸ್ಥಿತಿಗೂ ಇಂಥ ಅರ್ಥಪೂರ್ಣ ಸಂಬಂದವಿದೆ. ವಚನ ಈ ಕಾಲದ ಮುಖ್ಯ ಅಭಿವ್ಯಕ್ತಿ ರೀತಿಯಾಗಲು ಸಾಮಾಜಿಕ ಕಾರಣಗಳಿರುವಂತೆ ಸಾಹಿತ್ಯಕ ಕಾರಣಗಳೂ ಇವೆ. ಪ್ರಾಚೀನ ಕನ್ನಡ ಕಾವ್ಯ ಪರಂಪರೆಯಲ್ಲಿ ಮುಖ್ಯವಾದುದು ಚಂಪೂರೀತಿ. ಪಂಪ ಈ ರೀತಿಯ ಕವಿಗಳಲ್ಲೆಲ್ಲ ತುಮಬ ದೊಡ್ಡವನು. ಅನಂತರದ ಎರಡು ಶತಮಾನಗಳಲ್ಲಿ ಚಂಪೂ ಮುಖ್ಯ ಸಾಹಿತ್ಯ ರೂಪವಾಗಿ ಬಳಕೆಯಾಯಿತು. ಚಂಪೂಕಾವ್ಯದಲ್ಲಿ ಬಳಸಿದ ವಸ್ತುಗಳು ಸಾಮಾನ್ಯವಾಗಿ ಆಗಲೇ ಪ್ರಸಿದ್ಧವಾಗಿದ್ದಂಥವು. ಅಲ್ಲಿ ಬರುವ ಛಂದೋರೂಪಗಳು ಮುಖ್ಯವಾಗಿ ಸಂಸ್ಕೃತದಿಂದ ತೆಗೆದುಕೊಂಡುವು. ಭಾಷೆ ಪ್ರೌಢವಾದದ್ದು. ಈ ಕಾವ್ಯ ರಚನೆಗಳಿಗೆ ವಿಶೇಷವಾಗಿ ಪ್ರಚೋದನೆ ಕೊಟ್ಟವರು ರಾಜರು, ಮಂಡಲೇಶ್ವರರು, ಮಂತ್ರಿಗಳು ಮತ್ತು ಪಂಡಿತರು. ಅವರ ಮೆಚ್ಚುಗೆ ಈ ಕಾವ್ಯಗಳ ಮುಖ್ಯ ಉದ್ದೇಶ. ಅಲ್ಲದೆ ಚಂಪೂ, ಅನಂತರ ಸತ್ತ್ವ ಹೀನವಾಗಿ ತನ್ನ ಮಹತ್ವ ಕಳೆದುಕೊಂಡಿತ್ತು. ಕಾವ್ಯಕ್ಕೆ ಹೊಸರಕ್ತ ಪ್ರಧಾನವಾಗಬೇಕಾದ ಪರಿಸ್ಥಿತಿ ಒದಗಿತ್ತು. ವೀರಶೈವ ಶರಣರ ವೈಯಕ್ತಿಕ ಹಾಗೂ ಸಾಮಾಜಿಕ ಅವಶ್ಯಕತೆಯಿಂದ ಹುಟ್ಟಿದ ವಚನರೂಪ ಆ ಕೆಲಸ ಮಾಡಿತು. ಅಲ್ಲದೆ ಇನ್ನೂ ಒಂದು ವಿಚಾರದಲ್ಲಿ ಚಂಪೂ ಕವಿಗಳಿಂದ ವಚನಕಾರರು ಭಿನ್ನರು : ತಮ್ಮ ಕಾಲದ ಸಾಮಾಜಿಕ ಆಂದೋಲನಕ್ಕೆ ತಾವೇ ಕಾರಣಕರ್ತರಾಗಿ, ಅದರಲ್ಲಿ ಸಂಪೂರ್ಣವಾಗಿ ತಮ್ಮನ್ನು ತಾವು ತೊಡಗಿಸಿಕೊಂಡ ಕ್ರಿಯಾಶೀಲರು ; ಜೊತೆಗೆ ಸಾಹಿತ್ಯ

ನಿರ್ಮಾಪಕರು. ಆದ್ದರಿಂದ ಸಾಮಾಜಿಕ ಬದಲಾವಣೆಗೆ ಅವರು ಆದ್ಯತೆ ನೀಡಿದರು; ಉಳಿದದ್ದೆಲ್ಲ ಅದಕ್ಕೆ ಪೂರಕವಾಗಿ ಪ್ರಚೋದಕವಾಗಿ ಬರಬೇಕೆಂದು ತಿಳಿದರು. ಸಾಹಿತ್ಯ ಜೀವನೋಪಯೋಗಿಯಾಗಬೇಕೆಂಬುದು ಇಲ್ಲಿ ದಿಟವಾಯಿತು.

ಹೀಗಾಗಿ ವಚನ ಸಾಹಿತ್ಯ 'ವಸ್ತು ಸ್ಥಿತಿ'ಯನ್ನು ಚಿತ್ರಿಸುವುದರೊಂದಿಗೆ, ಅದನ್ನು ವಿರೋಧಿಸಿ, ಬದಲಾಯಿಸುವ ಧೋರಣೆಯುಳ್ಳದ್ದೂ ಆಯಿತು.

ವೀರಶೈವ ಆಂದೋಲನ ಜಡ್ಡುಕಟ್ಟಿದ ವ್ಯವಸ್ಥೆಯನ್ನು ವಿರೋಧಿಸಿತು; ಸಾಮಾಜಿಕ ವಾಗಿಯೂ ಸಾಹಿತ್ಯಕವಾಗಿಯೂ ಹೊಸ ರೂಪಗಳಿಗೆ ಕಾರಣವಾಯಿತು.

ವೈಯಕ್ತಿಕ ಸಾಧನೆ, ಸಾಮಾಜಿಕ ಬದಲಾವಣೆ, ಶರಣರ ಆಂದೋಲನದ ಎರಡು ಮುಖಗಳು.

ವಚನಕಾರರು, ಸ್ಥಗಿತವಾಗಿದ್ದ ಸಾಂಪ್ರದಾಯಿಕ ಸಾಮಾಜಿಕ ಧಾರ್ಮಿಕ ಧೋರಣೆಗಳನ್ನು ತಿರಸ್ಕರಿಸಿದಂತೆ, ಸ್ಥಗಿತಗೊಂಡಿದ್ದ ಕಾವ್ಯದ ಕಷ್ಟಭಾಷೆಯನ್ನು ಬಿಟ್ಟು, ಚೈತನ್ಯದಿಂದ ಕೂಡಿದ ತಮ್ಮ ಸುತ್ತಮುತ್ತಲಿನ ಜನಭಾಷೆಯನ್ನು ಅಭಿವ್ಯಕ್ತಿ ಮಾಧ್ಯಮವನ್ನಾಗಿ ಆಯ್ಕೆ ಮಾಡಿಕೊಂಡದ್ದು ಕ್ರಾಂತಿಕಾರಕವಾದ ವಿಚಾರವಾಗಿದೆ. ಅಂದರೆ ಅವರು ಸಂಸ್ಕೃತ ಪದ, ಪದಪುಂಜಗಳನ್ನು ಬಳಸಲೇ ಇಲ್ಲವೆಂದಲ್ಲ; ಅವುಗಳನ್ನು ಔಚಿತ್ಯವರಿತು ನಿರ್ದಿಷ್ಟ ಉದ್ದೇಶಗಳಿಗಾಗಿ ಉಪಯೋಗಿಸಿ ಕೊಂಡರು. ಇದರಿಂದ ವಚನಗಳ ಪ್ರತಿಮಾವಿಧಾನಕ್ಕೊಂದು ಹೊಸತನ ಬಂತು.

ವಚನ ಎರಡು ಉದ್ದೇಶಗಳಿಗಾಗಿ ಬಳಕೆಯಾಯಿತು. ಒಂದು, ವಿಷಯ ಪ್ರತಿಪಾದನೆಗಾಗಿ; ಎರಡು, ಅನುಭವಗಳ ಅಭಿವ್ಯಕ್ತಿಗಾಗಿ, ವೃತ್ತಕಂದಾದಿ ಛಂದೋರೂಪಗಳು ಕಾವ್ಯಕ್ಕೆಂತೊ ಅಂತು ಶಾಸ್ತ್ರ ಬರೆಯುವುದಕ್ಕೂ ಉಪಯೋಗವಾದಂತೆ, ವಚನವೂ ಶರಣರ ಕೈಯಲ್ಲಿ ಈ ಎರಡು ಉದ್ದೇಶಗಳಿಗೂ ಬಳಕೆಯಾಯಿತು. ಛಂದಸ್ಸಿನಲ್ಲಿದ್ದ ಮಾತ್ರಕ್ಕೆ ಶಾಸ್ತ್ರ, ಹೇಗೆ ಕಾವ್ಯವಲ್ಲವೊ ಹಾಗೆಯೇ ಕೇವಲ ವಿಷಯಪ್ರತಿಪಾದನೆಗಾಗಿ ಬಳಕೆಯಾಗುವ ವಚನಗಳೂ ಕಾವ್ಯವಲ್ಲ. ಆದರೆ, ಅನುಭವದ ಸಮರ್ಥ ಅಭಿವ್ಯಕ್ತಿಯಾದಾಗಲೆಲ್ಲ ವಚನ ಶ್ರೇಷ್ಠ ಕಾವ್ಯವಾಗಿರುವುದನ್ನು ಕಾಣುತ್ತೇವೆ. ಸಾವಯವ ಶಿಲ್ಪದ ಸಮಗ್ರೀಕರಣವನ್ನು ಕಾಣುತ್ತೇವೆ.

ಒಂದು ಮಹತ್ವಪೂರ್ಣ ತಾತ್ತ್ವಿಕ ಧೋರಣೆಯ ಆಧಾರದ ಮೇಲೆ, ತನ್ನ ಕಾಲದ ನಿರ್ದಿಷ್ಟ ಪ್ರದೇಶದ ಸಮಾಜದೊಂದಿಗೆ ಜೀವಂತ ಸಂಬಂಧ ಹೊಂದಿರುವ, ಆ ಸಂಬಂಧದ ಎಲ್ಲ ಸಂಶ್ಲಿಷ್ಟತೆಗಳನ್ನು–ಅಂದರೆ ನಂಬಿಕೆ ಅನುಮಾನಗಳನ್ನು, ಆಶೆ ನಿರಾಶೆಗಳನ್ನು ಸಾಮಾಜಿಕ ಮತ್ತು ವೈಯಕ್ತಿಕ ಸಂದರ್ಭದಲ್ಲಿ–ಅನ್ವೇಷಿಸುವ ವಚನ ಶ್ರೇಷ್ಠ ಸಾಹಿತ್ಯವಾಗಿದೆ.

ಇಂತಹ ಸಾಮಾಜಿಕ ಸಾಹಿತ್ಯಕ ಬದಲಾವಣೆಗೆ ಕಾರಣರಾದ ಶಿವಶರಣರಲ್ಲಿ ಚನ್ನಬಸವಣ್ಣನ ಸ್ಥಾನ ಭದ್ರವಾಗಿದೆ. ಕಾವ್ಯತ್ವ ಸಂಕೀರ್ಣತೆ, ಅನುಭಾವದ ಅಭಿವ್ಯಕ್ತಿ. ರೂಪಕ–ಪ್ರತಿಮೆಗಳ ನಿರ್ಮಾಣ ಮತ್ತು ಅವುಗಳ ವಿವಿಧತೆಯಲ್ಲಿ ಏಕತೆಯನ್ನು ಸಾಧಿಸುವ ಸಾಮರ್ಥ್ಯ–ಇತ್ಯಾದಿಗಳ ದೃಷ್ಟಿಯಿಂದ, ಅಲ್ಲಮ, ಬಸವಣ್ಣ, ಅಕ್ಕಮಹಾದೇವಿಯರಂಥ ವಚನಕಾರರ ಬಹುತೇಕ ವಚನಗಳು ಶ್ರೇಷ್ಠವಾಗಿವೆ. ಆದರೆ, ಚನ್ನಬಸವಣ್ಣನ ವಚನಗಳು, ಸಾಮಾನ್ಯವಾಗಿ ನೇರ, ಸ್ಪಷ್ಟ : ಇದಕ್ಕೆ ಕಾರಣಗಳಿವೆ; 'ಷಟ್‌ಸ್ಥಲ ಚಕ್ರವರ್ತಿ'ಯೆಂದು ಪ್ರಸಿದ್ಧನಾದ ಚನ್ನಬಸವಣ್ಣ ವಚನವನ್ನು ಬಳಸಿಕೊಳ್ಳುವುದು ಮುಖ್ಯವಾಗಿ, ವಿಚಾರ ಪ್ರತಿಪಾದನೆಗಾಗಿ ಸಿದ್ಧಾಂತ ನಿರೂಪಣೆಗಾಗಿ. ಅಂದರೆ ಅನುಭವ–ಅನುಭಾವವನ್ನು ವ್ಯಕ್ತಮಾಡುವ ವಚನಗಳು ಚನ್ನಬಸವಣ್ಣನಲ್ಲಿ ಇಲ್ಲವೇ ಇಲ್ಲವೆಂದಲ್ಲ. ಅವುಗಳ ಸಂಖ್ಯೆ

ಇತರ ವಚನಕಾರರಿಗೆ ಹೋಲಿಸಿದರೆ ಕಡಿಮೆ. ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಮರೆಯುವಂತಿಲ್ಲ. ಕೇವಲ ಅನುಭವದ ಅಭಿವ್ಯಕ್ತಿಯೇ ಕಾವ್ಯವೇ? ವಿಚಾರ ಕಾವ್ಯವಾಗಲಾರದೆ? ವಿಚಾರವನ್ನೂ ಕಾವ್ಯವಾಗಿಸುವ ಸಾಮರ್ಥ್ಯ ಹೊಂದಿರುವವನೇ ದೊಡ್ಡ ಕವಿಯಾಗಲು ಸಾಧ್ಯ. "A Thought to donne was an experience" ಎನ್ನುತ್ತಾನೆ. ಟಿ.ಎಸ್. ಎಲಿಯಟ್. ವಿಚಾರವೂ ಅನುಭವವಾಗಿ ಅಭಿವ್ಯಕ್ತಿ ಪಡೆದಾಗ ಅದು ಕಾವ್ಯವೇ ಆಗುತ್ತದೆ. ಅದಕ್ಕೆ ಅನೇಕ ವಚನಗಳು ವಚನಸಾಹಿತ್ಯದಲ್ಲಿ ಸಿಕ್ಕುತ್ತವೆ. ಆ ಮಾತು ಬೇರೆ. ಇಲ್ಲಿರುವ ಪ್ರಶ್ನೆಯೆಂದರೆ, 'ಅವಿರಳಜ್ಞಾನಿ'ಯೆಂದು 'ಸ್ವಯಂಭುಜ್ಞಾನಿ'ಯೆಂದು ಹಿರಿಯ ಶಿವಶರಣರಿಂದ ಕರೆಸಿಕೊಂಡ ಚನ್ನಬಸವಣ್ಣ. ಮುಖ್ಯವಾಗಿ ಬರೆದದ್ದು 'ಷಟ್‌ಸ್ಥಳ ಸಿದ್ಧಾಂತ' ಪ್ರತಿಪಾದನೆಯ ವಚನಗಳನ್ನು. ಅದಕ್ಕೆ ಕಾರಣ, ಈ ಮಹಾಂದೋಲನದ ಸಂದರ್ಭದಲ್ಲಿ ಅವನ ಪಾಲಿಗೆ ಬಂದ ಕಾರ್ಯ ಇದು. ಷಟ್ಸ್ಥಲ ಸಿದ್ಧಾಂತಕ್ಕೆ ಪ್ರಥಮತಃ ಸರಿಯಾದ ತಳಹದಿಯನ್ನು ಹಾಕುವ ಕೆಲಸ ಮಾಡಿದವನು ಚನ್ನಬಸವಣ್ಣ. ಚಿಕ್ಕ ವಯಸ್ಸಿನಲ್ಲಿಯೇ, ಅವನು ಸಾಧಿಸಿದ ಜ್ಞಾನ ಅಚ್ಚರಿಯನ್ನುಂಟು ಮಾಡುವಂತಹುದು. ಬಸವಣ್ಣನ ಕಾವ್ಯಕ್ಕೆ, ಅಲ್ಲಮನ ಅನುಭಾವಕ್ಕೆ, ತಕ್ಕ ಸೈದ್ಧಾಂತಿಕ ನೆಲೆಗಟ್ಟನ್ನು ಕಟ್ಟಿದವನು ಅವನು. ಇದನ್ನು ಅರಿತೇ ಎಲ್ಲರೂ ಅವನನ್ನು ಗೌರವಿಸುತ್ತಾರೆ. ಅವನ ವಚನಗಳ ಮೌಲ್ಯವಿರುವುದು ಇಲ್ಲಿ; ವೀರಶೈವ ಒಪ್ಪಿಕೊಂಡ ಮೌಲ್ಯಗಳನ್ನು ಪ್ರತಿಪಾದಿಸುವಲ್ಲಿ, ಕ್ರಮಗೊಳಿಸುವಲ್ಲಿ, ಸಿದ್ಧಾಂತದ ಚೌಕಟ್ಟನ್ನು ಒದಗಿಸುವಲ್ಲಿ, ಅವನ ವಚನಗಳ ಸಾಧನೆ ಅಪೂರ್ವವಾದ್ದು. ಇದನ್ನು ನಾವು ಒಪ್ಪಿಕೊಳ್ಳಲೇಬೇಕು. ಆದರೆ, ಯಾರೇ ಆಧುನಿಕ ವಿಮರ್ಶಕರು, ವಚನ ಸಾಹಿತ್ಯವನ್ನು ಕುರಿತು ಮಾತಾಡುವಾಗ ಚನ್ನಬಸವಣ್ಣನ ವಚನಗಳನ್ನು ಮುಖ್ಯವಾಗಿ ತೆಗೆದುಕೊಳ್ಳುವುದಿಲ್ಲ. ದೇವರ ದಾಸಿಮಯ್ಯ, ಅಲ್ಲಮ, ಬಸವ, ಅಕ್ಕಮಹಾದೇವಿ – ಇವರ ವಚನಗಳೇ ಹೆಚ್ಚಾಗಿ ಅಲ್ಲಿ ವಿವೇಚನೆಗೆ ಒಳಗಾಗುತ್ತವೆ. ವಚನಸಾಹಿತ್ಯವನ್ನು ಕಾವ್ಯದೃಷ್ಟಿಯಿಂದ ವಿವೇಚಿಸುವ ಸಂದರ್ಭದಲ್ಲಿ ಹೀಗಾಗುವುದು ಸಹಜ. ಏಕೆಂದರೆ ಅಂಥ ವಚನಗಳು ಈ ವಚನಕಾರರಲ್ಲಿ ಹೇರಳವಾಗಿ ಸಿಕ್ಕುತ್ತವೆ. ಚನ್ನ ಬಸವಣ್ಣನಲ್ಲಿ ಅವುಗಳ ಸಂಖ್ಯೆ ಕಡಿಮೆ. ಆದರೆ, ಆ ಕಡಿಮೆ ಸಂಖ್ಯೆಯ ವಚನಗಳು ಈ ದೃಷ್ಟಿಯಿಂದಲೂ ಇತರ ವಚನಕಾರರ ವಚನಗಳಿಗೆ ಹೆಗಲೆಣೆಯಾಗಿ ನಿಲ್ಲುವ ಸಾಮರ್ಥ್ಯವನ್ನು ಪಡೆದಿದೆ.

ಲೌಕಿಕ ಮತ್ತು ಅನುಭಾವಿಕಗಳ ಸಂಯೋಜನೆಯಲ್ಲಿ ಶಬ್ದವು ಮಹತ್ವದ ಪಾತ್ರವನ್ನು ನಿರ್ವಹಿಸಬಲ್ಲುದೆಂಬುದನ್ನು, ಇತರ ವಚನಕಾರರಂತೆ ಚನ್ನಬಸವಣ್ಣನೂ ಬಲ್ಲವನಾಗಿದ್ದ. ಒಂದು ಕಡೆ ಅವನು, ಮರ್ತ್ಯದಿಂದ ದೈವಿಕತೆಯೆಡೆಗೆ "ಶಬ್ದ ಸೋಪಾನವ ಕಟ್ಟಿ ನಡೆಸಿದವರು ಶರಣರು" ಎನ್ನುತ್ತಾನೆ. ಚನ್ನಬಸವಣ್ಣನ ಈ ವಚನವನ್ನು ಗಮನಿಸಿ :

ಪದಾರ್ಥ ಪದಾರ್ಥವೆಂದೆಂಬಿರಿ ;

'ಪದ'ವಾವುದು 'ಅರ್ಥ'ವಾವುದೆಂದರಿಯಿರಿ.
'ಪದ'ವೇ ಲಿಂಗ, 'ಅರ್ಥ'ವೇ ಭಕ್ತ
ಇದನರಿದು 'ಪದಾರ್ಥ'ವ ತುದು
ಲಿಂಗಾರ್ಪಿತವ ಮಾಡಬಲ್ಲಡೆ,
ಕೂಡಿಕೊಂಡಿಪ್ಪ ನಮ್ಮ ಕೂಡಲಚನ್ನಸಂಗಮದೇವ.

ಮೇಲುನೋಟಕ್ಕೆ ಸರಳವಾಗಿ ಕಾಣುವ ಈ ವಚನವನ್ನು ಸೂಕ್ಷ್ಮವಾಗಿ ಗಮನಿಸಿದರೆ,

'ಪದ', 'ಅರ್ಥ', 'ಪದಾರ್ಥ' (Meaning of the word ಮತ್ತು a thing)- ಇವುಗಳ ಸಂಬಂಧದ ಸಂಕೀರ್ಣತೆಯನ್ನು ಹೇಗೆ ವ್ಯಕ್ತಮಾಡುತ್ತದೆ ಎಂಬುದು ತಿಳಿಯುತ್ತದೆ. 'ಮಾತಿ'ನ ಮೈಯ್ಯಲ್ಲಿ 'ಅನುಭವ' ಗಟ್ಟಿಗೊಳ್ಳುವ ಸೃಷ್ಟಿಕ್ರಿಯೆಯ ರಹಸ್ಯವನ್ನು ಕುರಿತು ಇಲ್ಲಿ ಕೇವಲ ಹೇಳಲಾಗಿಲ್ಲ. ಅನುಭವವಾಗಿ ಕಂಡು ಅಭಿವ್ಯಕ್ತಿಸಲಾಗಿದೆ. ಈ ವಚನ ಒಟ್ಟು ವಚನಸಾಹಿತ್ಯದಲ್ಲಿ ವಚನ (Word) ಬಳಕೆಯಾಗ ಬಗೆಯನ್ನೂ ಸೂಚಿಸುತ್ತದೆ.

ಚನ್ನಬಸವಣ್ಣನ ಇನ್ನೂ ಕೆಲವು ವಚನಗಳನ್ನು ಗಮನಿಸೋಣ :

ಸರ್ವಸಂಗಪರಿತ್ಯಾಗ ಮಾಡಿದ ಶಿವಶರಣನ,
ಲೋಕದ ಸಂಸಾರಿಗಳೆಂತು ಮೆಚ್ಚುವರಯ್ಯಾ!
ಊರೊಳಗಿರ್ದಡೆ ಉಪಾಧಿಕನೆಂಬರು;
ಅಡವಿಯೊಳಗಿರ್ದಡೆ ಮೃಗನೆಂಬರು;
ಹೊನ್ನ ಬಿಟ್ಟಡೆ ದರಿದ್ರನೆಂಬರು;
ಹೆಣ್ಣ ಬಿಟ್ಟಡೆ ನಪುಂಸಕನೆಂಬರು;
ಪುಣ್ಯವ ಬಿಟ್ಟಡೆ ಪುರ್ವಕರ್ಮಿ ಎಂಬರು;
ಮಾತನಾಡಿದಿರ್ದಡೆ ಮುಗನೆಂಬರು;
ಮಾತನಾಡಿದಡೆ ಜ್ಞಾನಿಗೇಕಯ್ಯಾ ಮಾತೆಂಬರು;
ನಿಜವನಾಡಿದಡೆ ನಿಷ್ಠುರಿ ಎಂಬರು;
ಸಮತೆಯ ನುಡಿದಡೆ ಅಂಜುವನೆಂಬರು;
ಇದು ಕಾರಣ, ಕೂಡಲಚನ್ನಸಂಗಯ್ಯಾ
ನಿಮ್ಮ ಶರಣ ಲೋಕದಿಚ್ಛೆಯ ನುಡಿಯ;
ಲೋಕದಿಚ್ಛೆಯ ನಡೆಯ !

ಈ ವಚನ ನೇರ ಮಾತುಗಳಲ್ಲಿ 'ನಿಜಶರಣ'ನ ನಿಲುವನ್ನು ಸಮರ್ಥವಾಗಿ ಅಭಿವ್ಯಂಜಿಸುತ್ತದೆ. 'ಲೋಕಸಂಸಾರಿ'ಗಳ ಮತ್ತು 'ನಿಜಶರಣ'ನ ದೃಷ್ಟಿಗಳಲ್ಲಿರುವ ವಿರೋಧವನ್ನು ಹೇಳಿ, ಈ ಕಾರಣಕ್ಕಾಗಿಯೆ "ನಿಮ್ಮ ಶರಣ ಲೋಕದಿಚ್ಛೆಯ ನಡೆಯ" ಎನ್ನುವಾಗ, "ನಿಜಶರಣ'ನ ನಡವಳಿಕೆ ಏಕೆ ಲೋಕಕ್ಕೆ ವಿಪರೀತವಾಗಿ ಕಾಣುತ್ತದೆ? ಎಂಬುದನ್ನು ಪರಿಣಾಮಕಾರಿಯಾಗಿ ವ್ಯಕ್ತಮಾಡುತ್ತದೆ, ಈ ವಚನ.

ಬಟ್ಟಬಯಲೆಲ್ಲಗಟ್ಟಿಗೊಂಡಡೆ,
ಸ್ವರ್ಗ ಮರ್ತ್ಯ ಪಾತಾಳಕ್ಕೆ ಠಾವಿನ್ನೆಲ್ಲಿಯದೊ?
ಮೇಘ ನಿರ್ಮಲ ಜಲವೆಲ್ಲ ಮುತ್ತಾದಡೆ,
ಸಪ್ತಸಾಗರಂಗಳಿಗೆ ಉದಕವಿನ್ನೆಲ್ಲಿಯದೊ?
ಕಷ್ಟಜೀವಿ ಮಜುನರೆಲ್ಲ ನೆಟ್ಟನೆ ಶಿವಜ್ಞಾನಿಗಳಾಡಡೆ,
ಮುಂದೆ ಭವದ ಬಳ್ಳಿಗೆ ಬೀಜವಿನ್ನಲ್ಲಿಯದೊ?
ನಮ್ಮ ಕೂಡಲಚನ್ನಸಂಗಯ್ಯನಲ್ಲಿ
ಲಕ್ಷಕ್ಕೊಬ್ಬ ಭಕ್ತ ಕೋಟಿಗೊಬ್ಬ ಶರಣ.

ಈ ವಚನದಲ್ಲಿ 'ಬಯಲು' ಎಂಬ ಪದ ಅನುಭಾವಿಕ ಅರ್ಥದಲ್ಲಿ ಬಳಕೆಯಾಗಿಲ್ಲ; ಅದು ಸಾಮಾನ್ಯಾರ್ಥದಲ್ಲಿ ಬಳಕೆಯಾಗಿದೆ. ಏಕೆಂದರೆ 'ಬಯಲಾ'ಗುವುದೆ ಶರಣನ ಗುರಿಯಾಗಿರುತ್ತದೆ. 'ಬಯಲೆಲ್ಲ ಗಟ್ಟಿಗೊಂಡಡೆ', 'ಮೇಘ ಜಲವೆಲ್ಲ ಮುತ್ತಾದೊಡೆ',

'ಕಷ್ಟಜೀವಿ ಮನುಜರೆಲ್ಲ ನೆಟ್ಟನೆ ಶಿವಜ್ಞಾನಿಗಳಾದೊಡೆ', –ಎನ್ನುವಾಗ, ಹಾಗಾಗಲು ಸಾಧ್ಯವಿಲ್ಲ, ಎಂಥ ಅರ್ಥ ವ್ಯಂಜಿತವಾಗುತ್ತದೆ : ಬಟ್ಟಬಯಲೆಲ್ಲ ಗಟ್ಟಿಯಾಗಲಾರದು; ಮೇಘಜಲವೆಲ್ಲ ಮುತ್ತಾಗಲಾರದು; ಕಷ್ಟಜೀವಿ ಮನುಜರೆಲ್ಲ ಶಿವಜ್ಞಾನಿಗಳಾಗಲಾರರು; -- ಈ ವಾಸ್ತವಿಕತೆಯನ್ನು, ಈ ವಚನ, 'ಬಯಲು' >< 'ಗಟ್ಟಿ' : 'ಜಲ' >< 'ಮುತ್ತು'; 'ಕಷ್ಟಜೀವಿ' >< 'ಶಿವಜ್ಞಾನಿ', ಈ 'ಅಭಿಮುಖ ಯುಗ್ಮ'ಗಳ ಮೂಲಕ ಚಿತ್ರಿಸುತ್ತದೆ.

ಹೆಗ್ಗಣವನಿಕ್ಕಿ ನೆಲಗಟ್ಟ ಕಟ್ಟಿದಂತೆ ಆಯಿತ್ತೆನ್ನ ಕಾಯಗುಣ ;
ಅಹಂಕಾರ, ಪ್ರಬೋಧಗಳೇಕಯ್ಯಾ?
ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಂಗಳನಿಕ್ಕಿ
ಎನ್ನ ಮಾಡಿದಿರಿ, ಎನ್ನ ಬಾಧಿಸಲೆಂದು
ಲಿಂಗಯ್ಯ ತಂದೆ! ಆಧಿವ್ಯಾಧಿಗಳೆಲ್ಲವ ಕಳೆದು
ನಿರ್ವಾಣವಪ್ಪ ಪದವ ಕರುಣಿಸಯ್ಯಾ
ಕೂಡಲಚನ್ನಸಂಗಮದೇವಾ.

ಹೆಗ್ಗಣವನ್ನಿಕ್ಕಿ ಘಟ್ಟಿಸಿದ ನೆಲಗಟ್ಟು, ಕಾಮ, ಕ್ರೋಧಾದಿಗಳನ್ನಿಟ್ಟು ಮಾಡಿದ ಕಾಯ, –ಘಟ್ಟಿಸಿದ ನೆಲಗಟ್ಟನ್ನು ಕೊರೆದು ಬೀಳಿಸುತ್ತದೆ ಹೆಗ್ಗಣ; ಕಾಮ ಕ್ರೋಧಾದಿಗಳು, ಅವುಗಳನ್ನು ಕಳೆದು ನಿರ್ವಾಣವಾಗುವ ದಾರಿಯನ್ನು ತೋರಿಸು, ಎಂದು ಕೂಡಲಚನ್ನಸಂಗಯ್ಯನಲ್ಲಿ ಕೇಳಿಕೊಳ್ಳುವ ಪರಿ, ಮಾರ್ಮಿಕವಾಗಿದೆ.

ಚರಣವಿಡಿದಂಗೆ ಕುರಣೆ ಕಣ್ದೆರವೆಯ ಮಾಡಬೇಕೆಂದು
ಮರಹಿಂದ ಬಂದ ಕಾಯದ ಕರ್ಮವ ಕಳೆದು,
ಗುರುಲಿಮಗವು ಕರುಣಿಸಿ ಕಣ್ದೆರವೆಯ ಮಾಡಿದ
ಪ್ರಾಣಲಿಂಗಸಂಬಂಧವೆಂತಿದ್ದುದೆಂಡಡೆ,
ಆಲಿ ನುಂಗಿದ ನೋಟದಂತೆ, ಬಯಲು ನುಂಗಿದ ಬ್ರಹ್ಮಾಂಡದಂತೆ,
ಮುತ್ತು ನುಂಗಿದ ಉದಕದಂತೆ ಪುಷ್ಪ ನುಂಗಿದ ಪರಿಮಳದಂತೆ,
ಇಪ್ಪ ಮಹಾನುಭಾವಿಗಳಗೆನ್ನ ಒಡಲ ಗುರಿಮಾಡಿದೆನಾಗಿ,
ಎನ್ನ ಒಡಲ ಪರ್ಯಾಯ ಕೆಟ್ಟಿತ್ತಯ್ಯಾ
ಕೂಡಲಚನ್ನಸಂಗಮದೇವಾ

'ಆಲಿ'; 'ನೋ'; 'ಬಯಲು' – 'ಬ್ರಹ್ಮಾಂಡ' ; 'ಮುತ್ತು' – 'ಉದಕ'; 'ಪುಷ್ಪ' – 'ಪರಿಮಳ'; – ಇವುಗಳ ಸಂಬಂಧ ಎರಡು ಮಾಡಲಾಗದ ಅದ್ವೈತ. ಇಂತಹ 'ಮಹಾನುಭಾವದ ನುಡಿ', ತನ್ನ 'ಒಡಲ ಪರ್ಯಾಯ'ವನ್ನು ಕೆಡಿಸಿತು. ಹಿಂದಿನ ವಚನದಲ್ಲಿನ ಪ್ರಶ್ನೆಗೆ ಉತ್ತರ, ಈ ವಚನದಲ್ಲಿದೆ. 'ನಿರ್ವಾಣ'ವಾಗುವ ದಾರಿ ಯಾವುದೆನ್ನುವುದನ್ನು ಈ ವಚನ ತಕ್ಕ ಭಾಷೆಯಲ್ಲಿ ಅಭಿವ್ಯಕ್ತಿಸುತ್ತದೆ.

ಇಂತಹ ಸಾಹಿತ್ಯಿಕ ಮೌಲ್ಯವುಳ್ಳ ಹಲವಾರು ವಚನಗಳು ಚನ್ನಬಸವಣ್ಣನಲ್ಲಿ ಸಿಕ್ಕುತ್ತವೆ. ಅಲ್ಲದೆ, ಹೇಳುವ ವಿಚಾರವನ್ನು ಮನಮುಟ್ಟುವಂತೆ ತಿಳಿಸುವುದಕ್ಕಾಗಿ, ಆ ವಚನಗಳು, ಉಕ್ತಿವೈಚಿತ್ರ್ಯಗಳನ್ನು ಬಳಸಿಕೊಳ್ಳುತ್ತವೆ :

ಆಡಿನ ಕೊರಳಲ್ಲಿ ಮೊಲೆಯಿದ್ದರೇನು ಅಮೃತವುಂಟೆ?
ಭಕ್ತನಾದಲ್ಲಿ ಫಲವೇನು ಶಿವಪದವನರಿಯದನ್ನಕ್ಕ?
ಸುರಾಭಾಂಡಕ್ಕೆ ಹೊರಗೆ ವಿಭೂತಿಯ ಹೂಸಿದೊಡೊಳಗು

ಶುದ್ಧವಗಬಲ್ಲುದೆ?
ಕಬ್ಬುನದ ಸೊಣಗನ ತಂದು ಪರುಷವ ಮುಟ್ಟಿಸಲು
ಸುವರ್ಣದ ಒಸೊಣಗನಪ್ಪುದು, ಪರುಷವಾಗದು ನೋಡಾ,
ಹಲವು ಕಾಲ ಹಂಸೆಯ ಸಂಗದಲ್ಲಿದ್ದರೆ
ಬಕನು ಶುಚಿಯಾಗಬಲ್ಲುದೆ?
ಪರುಷದ ಪರ್ವತದಲ್ಲಿ ಕಬ್ಬುನಂಗಳುಂಟೆ?
ಉಣ್ಣೆ ಕೆಚ್ಚಲ ಹತ್ತಿದ್ದರೇನು ಕ್ಷೀರವದಕುಂಟೆ?
....
ಗಿಳಿ ಓದಿದರೇನು ಲಿಂಗವೇದಿಯಪ್ಪುದೆ?
ಭೂಮಿಯೊಳಗೆ ಬೀಜ ಬಿದ್ದಲ್ಲಿ ಕೆಟ್ಟಿತ್ತೆಮದೆನಬೇಡ
ಮುಂದಣ ಫಲದೊಳಗರಿಸಿಕೊ !

– ಇತ್ಯಾದಿ

ಚನ್ನಬಸವಣ್ಣನ ವಚನರಚನಾವಿಧಾನ ಸಾಮಾನ್ಯವಾಗಿ ಯಾವುದೆನ್ನುವುದಕ್ಕೆ ಈ ವಚನ ಉತ್ತಮ ಉದಾಹರಣೆಯಾಗಿದೆ :

ಜಂಗಮ ಭಕ್ತನು, ಚಿನ್ನದಂತೆ, ಕಬ್ಬಿನಂತೆ ಶ್ರೀಗಂಧದಂತೆ ಇರಬೇಕು;
ಅದು ಹೇಗೆಂದಡೆ
ಚಿನ್ನವ ಕಾಸಿದಡೆ, ಕರಗಿಸಿದಡೆ, ಕಡಿದಡೆ, ನಿಗುಚಿದಡೆ
ಬಣ್ಣವಧಿಕವಪ್ಪುದಲ್ಲದೆ ಕಿರಿದಾಗದು;
ಇವರು ನನ್ನನ್ನೇಕೆ ಘಾಸಿಮಾಡಿದರೆನ್ನದು
ಕಬ್ಬ ಕಡಿದಡೆ, ಖಂಡಿಸಿದಡೆ, ಗಾಣದಲಿಕ್ಕಿ ಹಿಂಡಿ ಹಿಳಿದು ಬಂದ ರಸವನಟ್ಟಡೆ,
ನಾನಾ ಪ್ರಕಾರದಲ್ಲಿ ಸಾಯಸಗೊಳಿಸಿದಡೆಯೂ
ಮಿಗೆ ಮಿಗೆ ಮಧುರವಾಗಿಪ್ಪುದಲ್ಲದೆ, ವಿಷವಾಗದು;
ಎನ್ನನೇಕೆ ನೋಯಿಸಿದರೆನ್ನದು
ಶ್ರೀಗಂಧವ ಕೊರೆದಡೆ, ತರಿದಡೆ ತೇದಡೆ, ಹೂಸಿದಡೆ, ಬೆಂಕಿಯೊಳಗೆ ಹಾಕಿದಡೆ
ಪರಿಮಳ ಘನವಾಗಿಪ್ಪುದಲ್ಲದೆ ದುರ್ಗಂಧವಾಗದು
ತನ್ನಲ್ಲಿ ದುಃಖಿಗೊಳ್ಳದು
ಈ ತ್ರಿವಿಧದ ಪರಿಯಲ್ಲಿ
ಭಕ್ತನು ತನ್ನ ಗುಣವ ಬಿಡದ ಕಾರಣ
ಸದ್ಭಕ್ತನಹನು ಮಾಹೇಶ್ವರನಹನು ಪ್ರಸಾದಿಯಹನು
ಪ್ರಾಣಲಿಂಗಿಯಹನು ಶರಣನಹನು ಐಕ್ಯನಹನು
ಇಂತು ಷಟ್ಸ್ಥಲದಲ್ಲಿ ಸಂಪನ್ನನಪ್ಪಡೆ,
ಇಂತಪ್ಪ ಜಂಗಮ ಭಕ್ತಿಯೇ ಮೂಲವಯ್ಯಾ,
ಕೂಡಲಚನ್ನಸಂಗಮದೇವಾ.

ಎಂತಹ ಪರೀಕ್ಷೆಗೆ ಒಳಗಾದರೂ ಭಕ್ತ ತನ್ನ ಸುಗುಣವನ್ನು ಬಿಡುವುದಿಲ್ಲ ಎಂಬುದನ್ನು ಚಿನ್ನ, ಕಬ್ಬು, ಶ್ರೀಗಂಧ–ಇವುಗಳ ಪ್ರತೀಕದ ಮೂಲಕ. ಈ ವಚನ ನೇರವಾಗಿ, ಪರಿಣಾಮಕಾರಿಯಾಗಿ ತಿಳಿಸುತ್ತದೆ. ಹೀಗೆ, ನೇರವಾಗಿ ವಿಚಾರವನ್ನು ಹೇಳುವುದೇ ಚನ್ನಬಸವಣ್ಣನ ವಿಧಾನ, ಸಾಮಾನ್ಯವಾಗಿ, ಆದರೆ ಇದು ಶಾಸ್ತ್ರಭಾಷೆಯಲ್ಲಿ ಹೇಳಲಾದ ವಿಚಾರವಲ್ಲ;

ಕಾವ್ಯಭಾಷೆಯಲ್ಲಿ ಅಭಿವ್ಯಕ್ತಿಸಲಾದ ವಿಚಾರ. ಚನ್ನಬಸಣ್ಣನ ವಚನಗಳಲ್ಲಿ, ಸಾಮಾನ್ಯವಾಗಿ ಸಾಹಿತ್ಯಿಕ ಮೌಲ್ಯ ಇರುವುದು ಹೀಗೆ.

* * * *

ದೇಹವ ಮಱೆಗೊಂಡಿಪ್ಪ ಆತ್ಮನಂತೆ
ಶಕ್ತಿಯ ಮಱೆಗೊಂಡಿಪ್ಪ ಶಿವನಂತೆ
ಕ್ಷೀರವ ಮಱೆಗೊಂಡಿಪ್ಪ ತುಪ್ಪದಂತೆ
ವಾಚ್ಯವ ಮಱೆಗೊಂಡಿಪ್ಪ ಅನಿರ್ವಾಚ್ಯದಂತೆ
ಲೋಕಾರ್ಥದೊಳಡಗಿಪ್ಪ ಪರಮಾರ್ಥದಂತೆ
ಎನ್ನ ಆತ್ಮನೊಳಡಗಿಪ್ಪ ಪರಮಾರ್ಥತತ್ತ್ವವು
ಬೀಜದೊಳಡಗಿದ ವೃಕ್ಷದಂತೆ ಇದ್ದಿತಯ್ಯಾ
ನಾನಱಿಯದ ಮುನ್ನೆನ್ನೊಳಡಗಿದ್ದಿತಯ್ಯಾ ಶರಣಲಿಂಗ ಸಂಬಂಧ
ಮಹಾಲಿಂಗಗುರುಶಿವ ಸಿದ್ಧೇಶ್ವರ ಪ್ರಭುವೇ !

–ತೋಂಟದ ಸಿದ್ಧಲಿಂಗಶಿವಯೋಗಿ

---

* ಚೆನ್ನಬಸವಣ್ಣನವರು, ಸಂ.ಶ್ರೀಮತಿ ಜಗದಂಬಾ ಮಲ್ಲೇದೇವರು, ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ, ರಾಮಾನುಜ ರಸ್ತೆ, ಮೈಸೂರು–೫೭೦ ೦೦೪, ೧೯೯೧.

ವಚನ ಸಂಸ್ಕೃತಿ : ಚೆನ್ನಬಸವಣ್ಣನ ಭಿನ್ನಸ್ವರ

ಡಾ. ಟಿ.ಆರ್. ಚಂದ್ರಶೇಖರ

ವಚನ ಸಂಸ್ಕೃತಿಯಲ್ಲಿ ಚೆನ್ನಬಸವಣ್ಣನಿಗೆ ಮಹತ್ವದ ಸ್ಥಾನವಿದೆ. ವಚನ ಸಂಸ್ಕೃತಿಗೆ ಒಂದು ತಾತ್ವಿಕ–ಸೈದ್ಧಾಂತಿಕ–ಸಂಘಟನಾತ್ಮಕ ನೆಲೆಗಟ್ಟನ್ನು ಚೆನ್ನಬಸವಣ್ಣ ಒದಗಿಸಿದನು ಎನ್ನಲಾಗಿದೆ. ವಚನ ಸಂಸ್ಕೃತಿಯನ್ನು ಕಟ್ಟುವ ಕಾರ್ಯದಲ್ಲಿ ದುಡಿದ ಶರಣರಲ್ಲಿ ವಯಸ್ಸಿನಲ್ಲಿ ಎಲ್ಲರಿಗಿಂತ ಕಿರಿಯನಾಗಿದ್ದ ಚೆನ್ನಬಸವಣ್ಣನವರ ವಯಸ್ಸಿನ 'ಕಿರಿ'ತನವನ್ನು ಮತ್ತು ಅವನ ಆಧ್ಯಾತ್ಮಿಕ ಸಿದ್ಧಿ–ಸಾಧನೆಗಳನ್ನು 'ಅತಿ' ಎನ್ನುವಷ್ಟು ನಮ್ಮ ಕೆಲವು ವಿದ್ವಾಂಸರು ವರ್ಣಿಸಿದ್ದಾರೆ. (ಸಬರದ: ೧೯೯೨, ವಿದ್ಯಾಶಂಕರ: ೧೯೯೭) ಚೆನ್ನಬಸವಣ್ಣನವರನ್ನು ಕುರಿತ ಅಧ್ಯಯನಗಳು ಗುರುತಿಸುವಂತೆ ಅವರ ವಚನಗಳಲ್ಲಿ ತಾತ್ವಿಕ ವಿವೇಚನೆ ಬಹಳಷ್ಟಿದೆ. ಬಸವಣ್ಣ ಮತ್ತು ಚೆನ್ನಬಸವಣ್ಣನವರುಗಳನ್ನು ತುಲನೆ ಮಾಡುತ್ತಾ ಚಿದಾನಂದ ಮೂರ್ತಿ (೧೯೯೩: ೨೮೬) 'ಬಸವಣ್ಣ ಮೂಲಭೂತವಾಗಿ ಒಬ್ಬ ಕವಿ ಹೃದಯದ ಭಕ್ತ. ಚೆನ್ನಬಸವಣ್ಣ ಒಬ್ಬ ವಿದ್ವಾಂಸ ಬುದ್ಧಿಜೀವಿ–ಚಿಂತಕ. ಚೆನ್ನಬಸವಣ್ಣನಲ್ಲಿ ಧರ್ಮದ ಸಮಗ್ರ ಸೈದ್ಧಾಂತಿಕ ವಿವರಣೆ ದೊರಕುವಂತೆ ಬಸವಣ್ಣನಲ್ಲಿ ದೊರಕುವುದಿಲ್ಲ. ವಚನ ಸಂಸ್ಕೃತಿ ಸಂಘಟಿಸಿದ್ದ ಚಳುವಳಿಗೆ ಒಂದು ಸೈದ್ಧಾಂತಿಕ ಬುನಾದಿಯನ್ನು ಕೊಟ್ಟವನು ಚೆನ್ನಬಸವಣ್ಣ ಎಂದು ಬರೆದಿದ್ದಾರೆ. ವೀರಶೈವ ಸಿದ್ಧಾಂತವೇ ಚೆನ್ನಬಸವಣ್ಣನವರ ವಚನಗಳ ವಸ್ತು ವಿಷಯ ಎಂದು ಹೇಳಲಾಗಿದೆ (ಮಲ್ಲಾಪುರ, ೧೯೯೩, ೪೪) ವೀರಶೈವಕ್ಕೆ ಅಂದರೆ ವಚನ ಸಂಸ್ಕೃತಿಗೆ ಚೆನ್ನಬಸವಣ್ಣ ಒಂದು ಸಂಘಟನಾತ್ಮಕ ರೂಪ ನೀಡಿದನು.'

ಆದರೆ ಸೂಕ್ಷ್ಮವಾಗಿ ಚೆನ್ನಬಸವಣ್ಣನವರ ವಚನಗಳನ್ನು ಗಮನಿಸಿದಾಗ ವಚನ ಸಂಸ್ಕೃತಿ ಪ್ರತಿಪಾದಿಸಿದ. ಬದುಕಿದ ಅನೇಕ ಆಚಾರ–ವಿಚಾರ–ನಂಬಿಕೆಗಳ ಬಗ್ಗೆ ಚೆನ್ನಬಸವಣ್ಣ ಭಿನ್ನಮತ ತಳೆದಿರುವುದು ಗೋಚರಿಸುತ್ತದೆ. ಒಂದು ಶಾಸ್ತ್ರದ ಚೌಕಟ್ಟನ್ನು ನೀಡುವುದರ ಮೂಲಕ ಚೆನ್ನಬಸವಣ್ಣ ವಚನ ಸಂಸ್ಕೃತಿಗೆ 'ಸ್ಥಾವರ' ರೂಪ ನೀಡಿದ ಎಂದು ಹೇಳಬಹುದು. ಈ ಕಾರಣದಿಂದ ವಚನ ಸಂಸ್ಕೃತಿಯಲ್ಲಿ ಚನ್ನಬಸವಣ್ಣನು ಉಳಿದೆಲ್ಲಾ ಶರಣರು–ಶರಣೆಯರಿಗಿಂತ ಭಿನ್ನನಾಗುತ್ತಾನೆ.

ವಚನ ಸಂಸ್ಕೃತಿಯು ಲಿಂಗ ಸಮಾನತೆ, ಸೂತಕ–ಹೊಲೆತನ, ಮತಾಂತರ

ಮುಂತಾದವುಗಳ ಬಗ್ಗೆ ಅತ್ಯಂತ ಗತಿಶೀಲವೂ. ಪ್ರಗತಿಪರವೂ ಆದ ನಿಲುವನ್ನು ತಳೆದದ್ದು ಸ್ಪಷ್ಟವಾಗಿದೆ. ಆದರೆ ಈ ವಿಷಯಗಳನ್ನು ಕುರಿತಂತೆ ಚೆನ್ನಬಸವಣ್ಣನದು ಭಿನ್ನ ಸ್ವರೂಪವಾಗಿದೆ. ವಚನ ಸಂಸ್ಕೃತಿಯು ರೂಪಿಸಿದ್ದ ವಿಚಾರ-ತಾಂತ್ರಿಕ ನೆಲಗಟ್ಟುಗಳ ಬಗ್ಗೆ ಶರಣ-ಶರಣೆಯರಲ್ಲಿ 'ಸಹಮತ'ವಿರಲಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ವಚನ ಸಂಸ್ಕೃತಿಯು ಪ್ರತಿಪಾದಿಸಿದ ಲಿಂಗ ಸಮಾನತೆ, ಸೂತಕ-ಹೊಲೆತನ ಹಾಗೂ ಮತಾಂತರ ಕುರಿತಂತೆ ಚೆನ್ನಬಸವಣ್ಣನ ಭಿನ್ನಮತ-ಭಿನ್ನ ಸ್ವರವನ್ನು ಪರಿಶೀಲಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

ಲಿಂಗ ಸಮಾನತೆ

ವಚನ ಸಂಸ್ಕೃತಿಯು ಪ್ರತಿಪಾದಿಸಿದ-ಮಂಡಿಸಿದ ಒಂದು ಬಹುಮುಖ್ಯ ಪ್ರಣಾಳಿಕೆಯೆಂದರೆ ಲಿಂಗ ಸಮಾನತೆ. ಬಸವಣ್ಣ, ಅಲ್ಲಮ, ಸಿದ್ಧರಾಮ, ಅಕ್ಕ, ಆಯ್ದಕ್ಕಿ ಮಾರಯ್ಯ, ಕದಿರೆ ರೆಮ್ಮವ್ವೆ, ಗೊಗ್ಗವ್ವ, ಸತ್ಯಕ್ಕ ಮುಂತಾದವರು ಲಿಂಗ ಸಮಾನತೆ ಕುರಿತಂತೆ 'ಋಷಿಮೂಲ' ನೆಲೆಯಾದರೆ ಚೆನ್ನಬಸವಣ್ಣನದು 'ಯತಿ ಮೂಲ' ನೆಲೆಯಾಗಿದೆ. ಮಹಿಳೆಯರ ಸ್ಥಾನಮಾನದ ಬಗ್ಗೆ ಗಂಡು-ಹೆಣ್ಣುಗಳ ನಡುವಿನ ಸಮಾನತೆ ಬಗ್ಗೆ ವಚನ ಸಂಸ್ಕೃತಿ ಅತ್ಯಂತ ಜನಪರವೂ, ಗತಿಶೀಲವೂ ಪ್ರಗತಿಪರವೂ ಆದ ನಿಲುವನ್ನು ತಳೆದಿತ್ತು. (ಟಿ.ಆರ್. ಚಂದ್ರಶೇಖರ ೧೯೯೬, ಜೆ.ಪಿ.ಶೌತನ್ ೧೯೯೪). ಲಿಂಗ ಸಮಾನತೆ ಬಗ್ಗೆ ಉಗ್ರ ಪ್ರಣಾಳಿಕೆಯನ್ನು ಮಂಡಿಸಿದ ಕದಿರ ರೆಮ್ಮವ್ವೆಯಿದ್ದಾಳೆ. ಸಾಂಪ್ರದಾಯಿಕವಾಗಿ ನಂಬಿಕೊಂಡು ಬಂದಿದ್ದ ನೆಲೆಗೊಂಡಿದ್ದ ಗಂಡು ಹೆಣ್ಣಿನ ಸಂಬಂಧಗಳನ್ನು ಕದಿರ ರೆಮ್ಮವ್ವೆ ತಿರುವು-ಮುರುವು ಮಾಡುತ್ತಾಳೆ. ಇದಕ್ಕೆ ಪ್ರತಿಯಾಗಿ, ಸೌಮ್ಯ ರೀತಿಯಲ್ಲಿ ದರೆ ಖಚಿತ ನೆಲೆಯಲ್ಲಿ ಮಹಿಳೆಯರ ಸ್ಥಾನಮಾನ ಕುರಿತಂತೆ ಸಮಾನತೆ ವಿಚಾರಗಳನ್ನು ಪ್ರತಿಪಾದಿಸಿದ ಅಕ್ಕಮಹಾದೇವಿ, ಮುಕ್ತಾಯಕ್ಕ ಇದ್ದಾರೆ. ಲಿಂಗ ಸಮಾನತೆ ವಿಚಾರಗಳಿಗೆ ಮೂಲ ನೆಲೆಯನ್ನು ರೂಪಿಸಿದ ಜೇಡರ ದಾಸಿಮಯ್ಯಗಳಿದ್ದಾರೆ. ಇವರೆಲ್ಲರ ಲಿಂಗ ಸಮಾನತೆ ಕುರಿತ ವಿಚಾರಗಳು ವಚನ ಸಂಸ್ಕೃತಿಯ ಮೂಲನೆಲೆಗಟ್ಟಾಗಿವೆ. ಆದರೆ ಇವರೆಲ್ಲರ ಲಿಂಗ ಸಮಾನತೆ ಕುರಿತ ವಿಚಾರಗಳಿಗೆ ಭಿನ್ನವಾದ ನೆಲೆಯಲ್ಲಿ ಚೆನ್ನಬಸವಣ್ಣ ಚಿಂತಿಸಿದಂತೆ ಕಾಣುತ್ತದೆ. ಲಿಂಗ ಸಮಾನತೆ ಹಾಗೂ ಮಹಿಳೆಯರ ಸ್ಥಾನ-ಮಾನದ ಬಗ್ಗೆ ಚೆನ್ನಬಸವಣ್ಣ ತಳೆದಿದ್ದ ನಿಲುವು-ಪ್ರತಿಪಾದಿಸಿದ ವಿಚಾರಗಳು ವಚನ ಸಂಸ್ಕೃತಿಯ ಮೂಲ ಧಾರೆಗೆ ಭಿನ್ನವಾಗಿದ್ದಾವೆ. ಆಧ್ಯಾತ್ಮ-ಅನುಭಾವಗಳ ದಿಶೆಯಲ್ಲಿ ಸಾಧನೆ ಮಾಡಲು-ಸಿದ್ಧಿಯನ್ನು ಪಡೆಯಲು ಹೆಣ್ಣು ಕಂಡಕ ಎಂಬುದು ಚೆನ್ನಬಸವಣ್ಣನ ನಿಲುವಾಗಿರುವಂತೆ ಭಾಸವಾಗುತ್ತದೆ. ಈತ ಹೆಣ್ಣನ್ನು ಸಮಾನತೆ ನೆಲೆಯಲ್ಲಿ ಪರಿಭಾವಿಸುವುದಿಲ್ಲ. ಹೆಣ್ಣನ್ನು ಚೆನ್ನಬಸವಣ್ಣ ಹೆಣ್ಣಿನ ಬಗ್ಗೆ ಯಾವ ನಿಲುವು ತಳೆದಿದ್ದ ಎಂಬುದು ಕೆಳಗಿನ ವಚನದಿಂದ ಸ್ಪಷ್ಟವಾಗುತ್ತದೆ.

ಉಚ್ಚೆಯ ಬಚ್ಚಲ ಶೋಧಿಸುವವರಿಗೆ
ಚಿಲುಮೆಯ ಆಯತವೇಕೊ?
ಸತಿಯರ ನರಮಾಂಸವ ಭುಂಜಿಸುವವರಿಗೆ
ಪರಪಾಕ ವರ್ಜಿತವೆಂದು ಸ್ವಯಂಪಾಕವೇಕೊ?
ಅಷ್ಟೋತ್ತರ ಶತವೇದವ ಓದುವವರಿಗೆ
ಅಚ್ಚಪ್ರಸಾದವೇಕೊ

ಇಂತಿ ತ್ರಿವಿಧ ಡಂಬಿನ ಭಕ್ತಿಗೆ ಊರ ಮುಂದಣದೊಂಬನೆ ಸಾಕ್ಷಿ ಕೂಡಲ ಚೆನ್ನಸಂಗಮದೇವಾ. (೩.೧೦೪೬)

'ಯತಿ ಮೂಲ' ದೃಷ್ಟಿಕೋನವು ಹೆಣ್ಣನ್ನು 'ಉಚ್ಚೆಯ ಬಚ್ಚಲು' ಎಂದೇ ಪರಿಭಾವಿಸುತ್ತದೆ. ಇದೊಂದು ನುಡಗಟ್ಟಾಗಿ ಕನ್ನಡದಲ್ಲಿ ೧೨ನೇ ಶತಮಾನದಿಂದಲೂ ಬಳಕೆಯಾಗುತ್ತಾ ಬಂದಿದೆ. ೧೬ನೇ ಶತಮಾನಕ್ಕೆ ಸೇರಿದ ತೋಂಟದ ಸಿದ್ಧಲಿಂಗರೂ ಕೂಡ ಹೆಣ್ಣನ್ನು 'ಸ್ನಾನದ ಕುಳಿ', 'ಉಚ್ಚೆಯ ಬಚ್ಚಲು' ಎಂದೆಲ್ಲಾ ಸಂಬೋಧಿಸಿ ವಚನಗಳನ್ನು ರಚಿಸಿದ್ದಾರೆ.

ಚೆನ್ನಬಸವಣ್ಣನ ಪ್ರಕಾರ ಸತಿಯ ಜೊತೆಗಿನ ಕೂಟ–ಒಡನಾಟವು ಆಧ್ಯಾತ್ಮ ಸಾಧನೆಗಿರುವ ಬಹುಮುಖ್ಯ ಅಡ್ಡಿ–ಕಂಟಕ. ಆದರೆ ವಚನ ಸಂಸ್ಕೃತಿಯು ಹೀಗೆ ಭಾವಿಸಲಿಲ್ಲ. ಉದಾಹರಣೆಗೆ ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀಯು 'ಹೆಣ ಬಿಟ್ಟು ಲಿಂಗವ ನೊಲಿಸಬೇಕೆಂಬರು, ಹೆಣ್ಣಿಂಗೆಯೂ ಲಿಂಗಕ್ಕೆ ಯೂ ವಿರುದ್ಧವೆ?' ಎಂದು ಕೇಳುತ್ತಾಳೆ. ಅಲ್ಲಮ ಪ್ರಭುಗಳು ತಮ್ಮ ಒಂದು ಪ್ರಸಿದ್ಧ ವಚನದಲ್ಲಿ ಹೆಣ್ಣು ಮಾಯೆ ಎಂಬರು ಹೆಣ್ಣು ಮಾಯೆಯಲ್ಲ. ಮನದ ಮುಂದಣ ಆಸೆಯೆ ಮಾಯೆ ಎನ್ನುತ್ತಾರೆ. (೨:೭೨). ಮೋಳಿಗೆ ಮಹಾದೇವಿಯಮ್ಮನು 'ಶಕ್ತಿಯ ಮಾತೆಂದು ದಿಕ್ಕರಿಸಬೇಡಿ' (೫:೯೧೩) ಎನ್ನುತ್ತಾಳೆ. ಜೇಡರ ದಾಸಿಮಯ್ಯಗಳು ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ ಸತಿಪತಿಗಳೊಂದಾಗದ ಭಕ್ತಿ ಅಮೃತದೊಳು ವಿಷ ಬೆರೆದಂತೆ ಕಾಣಾ ರಾಮನಾಥ (೭: ೮೭೯) ಎಂದಿದ್ದಾರೆ. ದಾಂಪತ್ಯವನ್ನು ಆಧ್ಯಾತ್ಮ ಸಾಧನೆಗೆ ಕಂಟಕ–ಅಡ್ಡಿಯೆಂದು ವಚನ ಸಂಸ್ಕೃತಿ ಭಾವಿಸಲಿಲ್ಲ. ಮುಂದುವರಿದು ಚೆನ್ನಬಸವಣ್ಣ 'ಸಜ್ಜನ ಸತಿ'ಯ ಗುಣಗಳಾವುವು ಎಂಬುದನ್ನು ಭಕ್ತನ ಗುಣಗಳಿಗೆ ಸಂವಾದಿಯನ್ನಾಗಿ ಮಾಡಿ ಹೀಗೆ ವಿವರಿಸಿದ್ದಾರೆ.

ಜಂಗಮ ಭಕ್ತನು ಗಂಡನುಳ್ಳ ಸಜ್ಜನ ಸತಿಯಂತಿರಬೇಕು
ಹೊಯ್ದಡೆ, ಬಯ್ದಡೆ, ಜರಿದಡೆ, ಕೋಪಿಸಿದಡೆ, ನಿಂದಿಸಿದಡೆ

....

ಇಂತಿವು ಮೊದಲಾಗಿ ಏನೊಂದ ಮಾಡಿದಡೆಯೂ
ಮನದಲ್ಲಿ ಮರುಗಿದಡೆ, ಇದಿರುತ್ತರವಕೊಟ್ಟಡೆ
ಆ ಸಜ್ಜನ ಸತಿಯ ಗುಣಕ್ಕೆ ಕೊರತೆಯಹುದು.
ಆ ಪುರುಷ ದೈವವೆಂದರಿವುದು
ಅವನ ಗುಣವ ನೋಡದೆ, ತನ್ನ ಗುಣವ ಬಿಡದೆ ಇದ್ದಡೆ
ಪವಿವ್ರತೆ ಎನಿಸುವಳು, ಮೇಲೆ ಮುಕ್ತಿಯಪ್ಪುದು

.... (೩: ೧೨೫೫).

ಚೆನ್ನಬಸವಣ್ಣನ ಪ್ರಕಾರ ಸಜ್ಜನ ಸತಿಯು ಗಂಡನ ಗುಣಗಳನ್ನಾಗಲಿ ಅಥವಾ ಅವುಗುಣಗಳನ್ನಾಗಲಿ ನೋಡಬಾರದು. ಆದರೆ ತನ್ನ ಗುಣಗಳನ್ನು ಮಾತ್ರ ಆಕೆ ಬಿಡಬಾರದು. ಇಲ್ಲದೆ ಇದ್ದರೆ 'ಸಜ್ಜನ ಸತಿಯ ಗುಣಕ್ಕೆ ಕೊರತೆ' ಉಂಟಾಗಿಬಿಡುತ್ತದೆ. ಆದರೆ ವಚನ ಸಂಸ್ಕೃತಿಯ ನಿಜ ನೆಲೆ ಇದಲ್ಲ. ಈ ವಿಚಾರಕ್ಕೆ ಪ್ರತಿಯಾಗಿ ಸತಿಯ ಗುಣವನ್ನು ಪತಿಯೂ, ಪತಿಯ ಗುಣವನ್ನು ಸತಿಯು ನೋಡಬೇಕು ಎಂಬ ಸಮಾನತೆ ಪ್ರಣಾಳಿಕೆಯನ್ನು ಡಕ್ಕೆಯ ಬೊಮ್ಮಯ್ಯಗಳು ಪ್ರತಿಪಾದಿಸಿದ್ದಾರೆ.

ಸತಿಯ ಗುಣವ ಪತಿ ನೋಡಬೇಕಲ್ಲದೆ
ಪತಿಯ ಗುಣದ ಸತಿ ನೋಡಬಹುದೆ ಎಂಬರು
ಸತಿಯಿಂದ ಬಂದ ಸೋಂಕು ಪತಿಗೆ ಕೇಡಲ್ಲವೆ?
ಪತಿಯಿಂದ ಬಂದ ಸೋಂಕು ಸತಿಗೆ ಕೇಡಲ್ಲವೆ?
ಒಂದಂಗದ ಕಣ್ಣು ಉಭಯದಲ್ಲಿ ಒಂದು ಹಿಂಗಲಿಕ್ಕೆ
ಭಂಗವಾರಿಗೆಂಬುದ ತಿಳಿದಲ್ಲಿಯೆ
ಕಾಲಾಂತಕ ಭೀಮೇಶ್ವರ ಲಿಂಗಕ್ಕೆ ಸತಿ ಸಂದಿತ್ತು (೭: ೯೬೩)

ಚೆನ್ನಬಸವಣ್ಣನ ವಚನಕ್ಕೆ ಉತ್ತರವೆಂಬಂತೆ ಡಕ್ಕೆಯ ಬೊಮ್ಮಯ್ಯಗಳು ಪತಿಯ ಹಕ್ಕಿಗೆ ಸಮಸಾದ ಹಕ್ಕನ್ನು ಸತಿಗೂ ನೀಡುತ್ತಿದ್ದಾರೆ. ಹೀಗೆ ವಚನ ಸಂಸ್ಕೃತಿ ಪ್ರತಿಪಾದಿಸಿದ ಲಿಂಗ ಸಮಾನತೆ ಪ್ರಣಾಳಿಕೆಗೆ ಪ್ರತಿಯಾಗಿ ಚೆನ್ನಬಸವಣ್ಣ ಲಿಂಗ ತಾರತಮ್ಯವನ್ನು ಪ್ರತಿಪಾದಿಸುತ್ತಿದ್ದಾನೆ.

ಮಹಿಳೆಯ ಸ್ಥಾನಮಾನ–ಸ್ಥಿತಿಗತಿಗಳ ಬಗ್ಗೆ ಚೆನ್ನಬಸವಣ್ಣನ ವಿಚಾರ ಯಾವ ಸ್ವರೂಪದ್ದಾಗಿದ್ದವು ಎಂಬುದು ಅವರು ಬಳಸಿರುವ 'ರಾಸಿಕೂಟದ ಸ್ತ್ರೀಯರು' ಎಂಬ ಪರಿಭಾವನೆಯಿಂದ ಸ್ಪಷ್ಟವಾಗುತ್ತದೆ. ('ವಚನ ಪರಿಭಾಷಾ ಕೋಶ'ದಲ್ಲಿ 'ರಾಸಿ ಕೂಟದ ಸ್ತ್ರೀಯರು' ಎಂಬ ಪರಿಭಾವನೆಯ ಉಲ್ಲೇಖವೇ ಇಲ್ಲ) ಚೆನ್ನಬಸವಣ್ಣ ರಾಸಿಕೂಟದ ಸ್ತ್ರೀಯರನ್ನು ೬ ಗುಂಪುಗಳಾಗಿ ವಿಂಗಡಿಸುತ್ತಾನೆ. ಅವು ಯಾವುವೆಂದರೆ ದಾಸಿಯರು, ವೇಶ್ಯೆಯರು, ವಿಧವೆಯರು, ಪರಸ್ತ್ರೀಯರು, ಚೋರಕನ್ನಿಕೆಯರು ಮತ್ತು ಬಿಡಸ್ತ್ರೀಯರು. ಚೆನ್ನಬಸವಣ್ಣನು ರಾಸಿಕೂಟದ ೬ ಬಗೆಯ ಸ್ತ್ರೀಯರ ಜೊತೆಗಿನ 'ಸಂಗ'ವನ್ನು ಭಕ್ತರಿಗೆ ನಿಷೇಧಿಸಿದ್ದಾರೆ. (೩: ೧೩೨೧, ೧೩೨೨ ಮತ್ತು ೧೩೨೩), ಈ ರಾಸಿಕೂಟದ ಸ್ತ್ರೀಯರ ಕೂಡ 'ಸಂಗ'ವ ಮಾಡುವವರಿಗೆ ಚೆನ್ನಬಸವಣ್ಣನ ಪ್ರಕಾರ ಲಿಂಗವಿಲ್ಲ, ಜಂಗಮವಿಲ್ಲ, ಗುರುವಿಲ್ಲ, ಪಾದೋದದವಿಲ್ಲ, ಪ್ರಸಾದವಿಲ್ಲ. ಇಲ್ಲಿ ರಾಸಿಕೂಟದ ಸ್ತ್ರೀಯರು ತಿರಸ್ಕಾರಕ್ಕೆ ಮಾತ್ರ ಯೋಗ್ಯರು. ತಿರಸ್ಕಾರಕ್ಕೆ ಬಹಿಷ್ಕಾರಕ್ಕೆ ಮಾತ್ರ ಯೋಗ್ಯರಾದ ರಾಸಿಕೂಟದ ೬ ಬಗೆಯ ಸ್ತ್ರೀಯರಲ್ಲಿ ಚೆನ್ನಬಸವಣ್ಣ ಪರಸ್ತ್ರೀಯರನ್ನೂ ಸೇರಿಸಿದ್ದಾನೆ. ಪರಸ್ತ್ರೀಯೆಂದರೆ ಗಂಡನಿರುವ ಸ್ತ್ರೀ.

ಹೊಲೆತನ–ಸೂತಕ ಪ್ರಮೇಯ

ಹೊಲೆತನವನ್ನು, ಸೂತಕಾಚರಣೆಗಳನ್ನು ತಿರಸ್ಕರಿಸಿದ್ದು ವಚನ ಸಂಸ್ಕೃತಿಯ ಬಹುಮುಖ್ಯ ಕೊಡುಗೆಯಾಗಿದೆ. ವೈದಿಕ ಸಂಸ್ಕೃತಿಯು 'ಹೊಲೆ'ತನವನ್ನು ಸೂತಕವನ್ನು ಹೆಣ್ಣಿಗೆ ಗಂಟುಹಾಕಿದೆ. ಸೂತಕಾಚರಣೆಯು ಅನೇಕ ಬಗೆಯ ವಿಕೃತಿ–ವಿಕಾರಗಳಿಗೆ ಕಾರಣವಾಯಿತು.

ಸೂತಕಗಳು ಐದು: ಜನನಸೂತಕ, ರಜಸ್‌ಸೂತಕ, ಪ್ರೇತಸೂತಕ, ಉಚ್ಚಿಷ್ಟಸೂತಕ ಮತ್ತು ಜಾತಿ ಸೂತಕ. ಈ ಐದು ಬಗೆಯ ಸೂತಕಗಳಲ್ಲಿ ಎರಡು ಹೆಣ್ಣಿಗೆ ಸಂಬಂಧಿಸಿವೆ. ಜನನಸೂತಕ ಮತ್ತು ರಜಸ್‌ಸೂತಕಗಳೆರಡೂ 'ಹೊಲೆ' ಎಂದು ಪರಿಗಣಿತವಾಗಿವೆ. ಜೀವವೊಂದಕ್ಕೆ ಜನ್ಮನೀಡುವ ಕ್ರಿಯೆಯನ್ನೇ 'ಸೂತಕ', 'ಅಪವಿತ್ರ', 'ಅಶುದ್ಧತೆ' ಎಂದು ವೈದಿಕ ಸಂಸ್ಕೃತಿ ಪರಿಗಣಿಸಿತ್ತು. ಸಹಜವೂ, ನಿಯಮಿತವೂ, ಜೈವಿಕವೂ ಆದ ಋತ ಚಕ್ರವನ್ನು, ಅಂದರೆ ಮುಟ್ಟಾಗುವಿಕೆಯನ್ನು ಸೂತಕ–ಹೊಲೆಯೆಂದು ಪರಿಗಣಿಸಲಾಯಿತು.

ಇವೆರಡೂ ಹೆಣ್ಣಿಗೆ ಸೀಮಿತವಾದ ಅನಿಷ್ಟಗಳಾಗಿವೆ. ವೈದಿಕ ಸಂಸ್ಕೃತಿಯು ಹೆಣ್ಣನ್ನು ಸೂತಕದ–ಹೊಲೆತನದ ಕೂಪವೆಂದೂ, ಧಾರ್ಮಿಕಾಚರಣೆಗಳಿಗೆ ಅನರ್ಹಳೆಂದೂ, ಮೋಕ್ಷಕ್ಕೆ ಅವಳು ಸಲ್ಲುವುದಿಲ್ಲವೆಂದೂ ಪ್ರತಿಪಾದಿಸಿತ್ತು. ಆದರೆ ವಚನ ಸಂಸ್ಕೃತಿ ಇಂತಹ ಅಮಾನವೀಯ, ಅಸಹಜ ಕ್ರಿಯೆ–ಆಚರಣೆಗಳನ್ನು ವಿರೋಧಿಸಿತು–ಪ್ರಶ್ನಿಸಿತು. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಮುಂತಾದವರು ಹೊಲೆತನ– ಸೂತಕದ ಅಸ್ತಿತ್ವವನ್ನೇ ಪ್ರಶ್ನಿಸಿದರು. ಅಲ್ಲಮ ಹೇಳುತ್ತಾನೆ–

"ಸತಿ ಭಕ್ತೆಯಾದರೆ ಹೊಲೆ ಗಂಜಲಾಗದು" (೨: ೧೪೮)

ಅಲ್ಲಮನು ಹೊಲೆತನವನ್ನು ಕಳೆದುಕೊಳ್ಳುವ ಪರಿಯನ್ನು ಹೇಳುತ್ತಿಲ್ಲ. ಅಲ್ಲಮನಿಗೆ ಸೂತಕ ಹೊಲೆತನ ಕಳೆದುಕೊಳ್ಳಬೇಕಾದ ಅನಿಷ್ಟವಲ್ಲ. ಬಸವಣ್ಣನೂ ಸಹ ಸೂತಕದ ಅಸ್ತಿತ್ವವನ್ನೇ ಪ್ರಶ್ನಿಸುತ್ತಾನೆ.

"ಹೊಲೆವುಂಟೆ ಲಿಂಗವಿದ್ದಡೆಯಲ್ಲಿ
ಕುಲವುಂಟೆ ಜಂಗಮವಿದ್ದೆಡೆಯಲ್ಲಿ
ಎಂಜಲುಂಟೆ ಪ್ರಸಾದ ವಿದ್ದೆಡೆಯಲ್ಲಿ
ಅಪವಿತ್ರದ ನುಡಿಯ ನುಡಿವ ಸೂತಕವೇ ಪಾತಕ
ನಿಷ್ಕಲಂಕ ನಿಜೈಕ್ಯ ತ್ರಿವಿಧ ನಿರ್ಣಯ
ಕೂಡಲ ಸಂಗಮದೇವಾ ನಿಮ್ಮ ಶರಣರಿಗಲ್ಲದಿಲ್ಲ. (೧: ೭೭೦)"

ವಚನ ಸಂಸ್ಕೃತಿಯಲ್ಲಿ ಹೊಲೆತನಕ್ಕೆ ಅರ್ಥವೇ ಇಲ್ಲ. ಮುಂದುವರಿದು ಬಸವಣ್ಣ ಹೇಳುತ್ತಾನೆ.

'ಹೊಲೆ ಗಂಡಲ್ಲಿದೆ ಪಿಂಡದ ನೆಲೆಗಾರ್ಶರಯವಲ್ಲ' (೧:೫೯೦) ಪಿಂಡದ ಸೃಷ್ಟಿಯಲ್ಲಿ ಹೆಣ್ಣು ಮತ್ತು ಗಂಡು ಸಮಾನ ಭಾಗಸ್ಥರು. ಅಂದಮೇಲೆ ಹೊಲೆತನವನ್ನು ಹೆಣ್ಣಿಗೆ ಮಾತ್ರವೇ ಏಕೆ ಅಂಟಿಸಬೇಕು? ಅಕ್ಕಮಹಾದೇವಿಯೂ ಕೂಡ ಸೂತಕದ ಅಸ್ತಿತ್ವವನ್ನು ಅಲ್ಲಗಳೆಯುತ್ತಾಳೆ.

'ಅಯ್ಯಾ, ಮೊದಲಿನ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲಾ' ಎಂಬ ಸೂತಕವನ್ನು ಪ್ರಶ್ನಿಸುತ್ತಾಳೆ. ಹೀಗೆ ವಚನ ಸಂಸ್ಕೃತಿಯು ಹೊಲೆತನವನ್ನು ಸ್ಪಷ್ಟವಾಗಿ ತಿರಸ್ಕರಿಸಿದೆ.

ಆದರೆ ಹೊಲೆತನ–ಸೂತಕ ಕುರಿತ ಚೆನ್ನಬಸವಣ್ಣನ ನಿಲುವು ವಚನ ಸಂಸ್ಕೃತಿಯ ನಿಲುವಿಗೆ ತೀರಾ ಭಿನ್ನವಾಗಿದೆ. ಅವನ ಪ್ರಕಾರ ಸೂತಕವಿರುವುದು ಸತ್ಯ. ಅವನಿಗೆ ಅದು ಕಳೆದುಕೊಳ್ಳಬೇಕಾದ ಒಂದು ಅನಿಷ್ಟ. ಅದಕ್ಕಾಗಿ ಚನ್ನಬಸವಣ್ಣನಿಗೆ ವಿಧಿ–ನಿಷೇಧ–ಆಚರಣೆಗಳು ಬೇಕು. ಈ ಕುರಿತ ಅವನ ವಚನ ನೋಡಿ.

ಹೊಲೆ ಹೊಲೆ ಎಂದನಯ್ಯಾ ಬಸವಣ್ಣ,
ಹೊಲೆ ಹುಟ್ಟಿದ ಮೂರು ದಿನಕ್ಕೆ ಪಿಂಡಕ್ಕೆ ನೆಲೆಯಾಯಿತ್ತು.
ನರರಿಗೆ ಹೊಲೆ, ಸುರರಿಗೆ ಹೊಲೆ, ಹರಿಬ್ರಹ್ಮಾದಿಗಳಿಗೆ ಹೊಲೆ,
ಇಂತಿ ಹೊಲೆಯಲ್ಲಿ ಹುಟ್ಟಿ ಹೊಲೆಯ ನತಿಗಳೆದವೆಂಬ
ಉಭಯ ಭ್ರಷ್ಟರ ಮುಖವ ನೋಡಲಾಗದು
ಕೂಡಲ ಚೆನ್ನಸಂಗಮದೇವಾ (೩: ೧೭೮೯)

'ಹೊಲೆ'ಯ ಅಸ್ತಿತ್ವವನ್ನು ಚೆನ್ನಬಸವಣ್ಣ ಒಪ್ಪಿಕೊಳ್ಳುತ್ತಾನೆ. ಅದನ್ನು ಕಳೆದುಕೊಳ್ಳಬೇಕು.

ವಚನ ಸಂಸ್ಕೃತಿಯಲ್ಲಿ ಹೊಲೆಯು ಹೊಲೆಯಲ್ಲ. ಆದರೆ ಚೆನ್ನಬಸವಣ್ಣನಿಗೆ ಹೊಲೆಯು ಹೊಲೆಯೆ! ಹೊಲೆ ಇಲ್ಲವೆನ್ನುವವರು ಚೆನ್ನಬಸವಣ್ಣನ ಪ್ರಕಾರ 'ಉಭಯ ಭ್ರಷ್ಟರು.' ಈ ಹೊಲೆತನವನ್ನು 'ಭಕ್ತಿ' ಅಥವಾ 'ಭಕ್ತೆ'ಯಾಗುವ ಮೂಲಕ ಕಳೆದುಕೊಳ್ಳಬೇಕು.

ಚೆನ್ನಬಸವಣ್ಣನು ಸೂತಕ–ಹೊಲೆತನ ಕಳೆದುಕೊಳ್ಳಬೇಕಾದ ಅನಿಷ್ಟವೆಂದು ಹೇಳುತ್ತಲೆ ಹೆಣ್ಣಿಗೆ ಸೂತಕ–ಹೊಲೆತನದಿಂದ ಮುಕ್ತಿಯಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತಾನೆ.

ಚೆನ್ನಬಸವಣ್ಣನ ಪ್ರಕಾರ 'ಹೆಣ್ಣೆಂಬುದೊಂದು ಭವಿ' (೩: ೨೨೩)

ಇನ್ನೊಂದು ವಚನದಲ್ಲೂ ಚೆನ್ನಬಸವಣ್ಣ ಹೆಣ್ಣನ್ನು ಭವಿಯೆಂದೆ ಸಂಬೋಧಿಸುತ್ತಾನೆ.

> ಹೊನ್ನುಳ್ಳಾತ ಭಕ್ತನಲ್ಲ, ಹೆಣ್ಣುಳ್ಳಾತ ಶರಣನಲ್ಲ, ಮಣ್ಣುಳ್ಳಾತ ಲಿಂಗೈಕ್ಯನಲ್ಲ,
> ಹೊನ್ನು ಜೀವ, ಹೆಣ್ಣು ಪ್ರಾಣ, ಮಣ್ಣು ದೇಹ,
> ಹೊನ್ನು ಭವ, ಹೆಣ್ಣು ಭವಿ, ಮಣ್ಣು ಹಮ್ಮು
> ಇಂತೀ ತ್ರಿವಿಧ ಸ್ಥಲವ ಪೂರ್ವ ಕೂಡಲ ಚೆನ್ನಸಂಗಮದೇವಾ (೩: ೬೮೯)

ಹೆಣ್ಣು ಮತ್ತು ಹೊಲೆತನಗಳ ಸಂಬಂಧದ ಬಗ್ಗೆ ಚೆನ್ನಬಸವಣ್ಣನ ಕೆಳಗಿನ ವಚನವು ಬೆಳಕು ಚೆಲ್ಲಬಹುದಾಗಿದೆ. ೨೨ ಸಾಲುಗಳ ಸುದೀರ್ಘ ವಚನವನ್ನು ಸೂಕ್ಷ್ಮವಾಗಿ ನಾವು ಪರಿಗಣಿಸಬೇಕಾಗಿದೆ.

> ದಶರತನ ಸುತ ರಘುರಾಮನು ಅಸುರ ಪಡೆಯ ಸಂಹರಸಿ
> ಅವರ ಸತಿ ಜನಂಗಳ ಹಿಡಿದು ತಂದು, ಅವರ ಸರ್ವಾಂಗದಲಿ
> ಭಗ, ಮೇಢ್ರ ಶ್ವಪಚ ಪಾದುಕೆ ಶ್ವಾನ ಮುದ್ರೆಗಳನೊತ್ತಿ
> ಸುರೆ ಮಾಂಸವ ಕೊಂಡು ಹಲಬರಿಗುರುಳುತ್ತಿಲಿರಿ ಇತ್ತ ದಕ್ಷಿಣಾವನಿಯಲ್ಲಿ
> ಬಂದು ಹೋಗಲು, ಆ ಸುರಸತಿಯರು ತಮ್ಮಂಗ ಮಧ್ಯದೊಳು ಬರುದೊತ್ತಿದ
> ಆ ಭಗ ಮೇಢ್ರ ಶ್ವಪಚ ಪಾದುಕೆ ಶ್ವಾನ ಮುದ್ರೆಗಳನು
> ತಮ್ಮುಪಮೆಗಳಿಂದ ಹಸಿರು ಹಚ್ಚೆಗಳೆಂದು ಹೆಸರಿಟ್ಟುಕೊಂಡು
> ಹಲವಂದದಿಂದ ನಡಿದು
> ಬರೆದಿರಿದುಕೊಂಡು ನಡೆದು ಬಳಿವಿಡಿದು ಬಂದ ಈ ಪತಿತ ಲೇಖನವನು
> ಹರ ಭಕ್ತಾಂಗನೆಯರು ತಮ್ಮ ಕರಬಾಳ ಶರೀರಂಗಳ ಮಧ್ಯದಲ್ಲಿ
> ಮುಳ್ಮೊನೆಗಳಿಂದಬರೆದಿರಿದುಕೊಂಡು ಅಸುರೆಗುಡಿ ಹೊಲೆ ರಾಕ್ಷಸ ಭವಿ
> ಸತಿಸೂಳೆಯರಂತೆ ಪತಿನಾಂಗನೆಯರಾಗಿ, ಮತ್ತೆ ತಾವು ಭಕ್ತರೆಂಬ ಬಗುಳಿ
> ಲಿಂಗಜಂಗಮವನಾರಾಧಿಸಿ ಪ್ರಸಾದವ ಕೊಂಡೆವೆಂಬ ಈ ಭಂಗ ಮಾರಿ
> ಹೊಲೆ ಸತಿಯರಿಗೆಲ್ಲಿಯದೊ ಲಿಂಗ ಜಂಗಮ ಪ್ರಸಾದವು?
> ಇಂತೀ ಹರ ಭಕ್ತರಿಗೆ ಹೊರಗಾದ ಹೊಲೆ ಮಚ್ಚುಮಾರಿ ಪತಿತ ಪಾತಕಿಯರ ಕೈಯಲ್ಲಿ
> ಕೊಂಬಲಿನ್ನ ಉದಕಂಗಳೆಲ್ಲವು
> ನಾಯಡಗು ನರಮಾಂಸ ಸುರೆ ಶ್ವಾನರಕ್ತಕ್ಕೆ ಸಮಾನ
> ಇದನರಿದು ಅವ ಪರಿಹರಿಸದೆ ಅವರನೊಡಗೂಡಿಕೊಂಡು ನಡೆವವರು
> ಗುರುಮಾರ್ಗಕ್ಕೆ ಹೊರಗು, ಅವರುಕೊಂಬುದು ಸುರೆ ಮಾಂಸವಲ್ಲದೆ
> ಅವರಿಗೆ ಪ್ರಸಾದವಿಲ್ಲ.
> ಇದು ಕಾರಣ ಇಂತಪ್ಪ ನರಕ ಜೀವಿಗಳನು ಕೂಡಲ ಚೆನ್ನ ಸಂಗಯ್ಯ
> ರವಿಸೋಮವುಳ್ಳನ್ನಕ್ಕರ ನಾಯ ನರಕದಲ್ಲಿಕ್ಕುವ (೩: ೧೩೮೯)

ಚೆನ್ನಬಸವಣ್ಣನ ಸಂವಿಧಾನದಲ್ಲಿ ಅಸುರ ಪಡೆಯ ಸತಿ ಜನಂಗಳಿಗೆ ಹರಭಕ್ತಿ ಸಾಧ್ಯವಿಲ್ಲ. ಅವರೆಲ್ಲಾ ಹರಭಕ್ತಿಗೆ 'ಹೊರಗಾದವರು.' ಕೇವಲ ಅಸುರ ಪಡೆಯ ಸತಿ ಜನಂಗಳು ವಿಧವೆಯರು, ಸುರೆ–ಮಾಂಸ ಸೇವಿಸುತ್ತಾರೆ ಎಂಬ ಕಾರಣಕ್ಕೆ ಅವರನ್ನು ಸತಿಸೂಳೆಯರು, ಪತಿತೆಯರು, ಹೊಲೆಸತಿಯರು ಎಂದೆಲ್ಲಾ ಕರೆಯುತ್ತಾನೆ.

ಮುಂದುವರಿದು ಚೆನ್ನಬಸವಣ್ಣನು

'ದಾಸಿಯರ ಸಂಗ ಕಸನೀರ ಹೊರಿಸಿತ್ತು' (೩: ೧೩೨೧)

'ದಾಸಿಯ ಸಂಗ ಭಂಗಿಯ ಸೇವನೆ' (೩: ೧೩೨೨)

ದಾಸಿಯ ಸಂಗವ ಮಾಡಿದರೆ ಸೂಕರನ ಮಾಂಸವ ತಿಂದ ಸಮಾನ (೩: ೧೩೨೩)

ಎಂದು ಭಕ್ತರಿಗೆ ದಾಸಿಯ ಸಂಗವನ್ನು ನಿಷೇಧಿಸುತ್ತಾನೆ. ಚೆನ್ನಬಸವಣ್ಣನ ಇಂತಹ ನಿಲುವಿಗೆ ಪ್ರತಿಯಾಗಿ ಇಲ್ಲಿಯ ಮತ್ತು ಬಸವಣ್ಣ ದಾಸತನದ ಬಗ್ಗೆ ಅತ್ಯಂತ ಮಾನವೀಯ ವಿಚಾರ ವ್ಯಕ್ತಪಡಿಸಿದ್ದಾರೆ.

ಬಸವಣ್ಣ ಒಂದು ವಚನದಲ್ಲಿ 'ದಾಸಿಯ ವರ್ಗದಲ್ಲಿಪ್ಪೆನು' (೧: ೪೭೩) ಎಂದೂ 'ದಾಸನ ಮಗನು–ದಾಸಿಯ ಮಗಳು ನಡುವಿನ ಸಂಗದಿಂದ ಹುಟ್ಟಿದವನು ನಾನು' (೧: ೩೪೮) ಎಂದೂ ಹೇಳುತ್ತಾನೆ. ಅಲ್ಲಮನು 'ಗಣಂಗಳ ದಾಸನ ದಾಸನಾನು' (೨: ೯೨೦) ಎಂದು ಕರೆದುಕೊಳ್ಳುತ್ತಾನೆ. ಬಸವಣ್ಣ ಮತ್ತು ಅಲ್ಲಮಪ್ರಭುಗಳು ಸೂತಕದ–ಮೈಲಿಗೆಯ ಸಂಕೇತಗಳಾದ ಎಂಜಲು, ಉಟ್ಟಬಟ್ಟೆ ಹಾಗೂ ಪಾದರಕ್ಷೆಗಳನ್ನು ಮೈಯ ಮೇಲೆ ಹೇರಿಕೊಂಡೆ ಅವುಗಳಿಂದ ಬಿಡುಗಡೆ ಪಡೆಯುತ್ತಾರೆ ಅಪವಿತ್ರತೆಯನ್ನು ಆಚರಿಸುತ್ತಲೇ ಪವಿತ್ರರಾಗುತ್ತಾರೆ.

ಬಸವಣ್ಣನ ಕೆಳಗಿನ ವಚನವನ್ನು ನೋಡಿ:

ಅವನಾದಡೇನು ಶ್ರೀಮಹಾದೇವನ ನೆನವನ
ಬಾಯ ತಂಬುಲವ ಮೆಲುವೆ, ಬೀಳುಡೆಯ ಹೊದೆವೆ
ಪಾದರಕ್ಷೆಯ ಕಾಯ್ದು ಬದುಕುವೆ ಕೂಡಲ ಸಂಗಮದೇವಾ (೧: ೪೮೪)

ಅಲ್ಲಮನ ವಚನದ ಪಾಠ ಹೀಗಿದೆ:

ಆವ ಜಾತಿಯಾದರೂ ಆಗಲಿ ಪುರಾತನರ ಚಾರಿತ್ರದಲ್ಲಿ ನಡೆದು
ಗುರುಲಿಂಗ ಜಂಗಮಕ್ಕೆ ಅರ್ಥ ಪ್ರಾಣಾಭಿಮಾನವ ಕೊಟ್ಟು
ಅಹಂಕಾರ ಅಳಿದಂಥ ಮಹಾತ್ಮರ
ಬಾಯ ತಂಬುಲವ ಮೆಲುವೆ, ಬೀಳುಡೆಯ ಹೊದಿವೆ
ಅವರ ಪಾದರಕ್ಷೆಗಳೆರಡನೂ
ತಲೆಯ ಮೇಲೆ ಹೊತ್ತುಕೊಂಡು ಬದುಕುವೆನಯ್ಯಾ
ಆ ಗಣಂಗಳ ದಾಸನ ದಾಸ ನಾನು
ಜನ್ಮ ಜನ್ಮದಲ್ಲಿ ಆಗುವೆ ಕಾಣಾ ಗುಹೇಶ್ವರಾ (೨: ೯೨೦)

ಹೀಗೆ ವಚನ ಸಂಸ್ಕೃತಿಯ ಮೂಲ ಧಾರೆ ಹೊಲೆತನ–ಸೂತಕದ ಬಗ್ಗೆ ಅತ್ಯಂತ ಗತಿಶೀಲವೂ, ಮಾನವ ಪರವೂ ಆದ ನಿಲುವನ್ನು ತಳೆದಿದ್ದರೆ ಚನ್ನಬಸವಣ್ಣನು ಸೂತಕ ಕುರಿತಂತೆ ಯಥಾಸ್ಥಿತಿವಾದಿ– ಕರ್ಮಠರ ನಿಲುವು ತಳೆದಿದ್ದಾನೆ.

ದೀಕ್ಷೆಯ ಪ್ರತಿಪಾದನೆ

ವಿಧಿ–ನಿಷೇಧಗಳು, ಮೂಢ ಆಚರಣೆ–ಡಂಬಾಚಾರಗಳ ವಿರುದ್ಧ ವಚನ ಸಂಸ್ಕೃತಿ ಯುದ್ಧವನ್ನೇ ಸಾರಿತ್ತು. ದೇವರು ಮತ್ತು ಭಕ್ತನ ನಡುವೆ ದಲ್ಲಾಳಿಗಳ–ಮಧ್ಯವರ್ತಿಗಳ ಹಾವಳಿಯನ್ನು ಕಿತ್ತುಹಾಕಲು ಅದು ಪ್ರಯತ್ನಿಸಿತು. ಆದರೆ ಚೆನ್ನಬಸವಣ್ಣನು ವಚನ ಸಂಸ್ಕೃತಿಯನ್ನು ಒಂದು ಸಂಘಟಿತ ಧರ್ಮವನ್ನಾಗಿ ಮಾಡುವ ಉತ್ಸಾಹದಲ್ಲಿ ವಿಧಿಯಾಚರಣೆಗಳನ್ನು ಪ್ರತಿಪಾದಿಸುತ್ತಾನೆ.

ಆಕಳ ಹೊಟ್ಟೆಯಲ್ಲಿ ಹೋರಿ ಹುಟ್ಟಿದಡೇನು?
ಲಿಂಗ ಮುದ್ರೆಯ ನೊತ್ತುವನ್ನಕ್ಕ ಬಸವನಲ್ಲ.
ಜಂಗಮದ ಆತ್ಮನಲ್ಲಿ ಪಿಂಡ ಉತ್ಪತ್ತಿಯಾದಡೇನು?
ದೀಕ್ಷಿತನಾಗದನ್ನಕ್ಕ ಜಂಗಮ ದೇವನಲ್ಲ.
ದೀಕ್ಷೆಯಿಲ್ಲದೆ ಹೋಗಿ ಭಕ್ತರಲ್ಲಿ ಅಗ್ಗಣೆಯ ಮುಕ್ಕಳಿಸಿದಡೆ
ಹಾದಿಗೊಂಡು ಹೋಗುವ ನಾಯಿ
ಗಿಡದ ಮೇಲೆ ಉಚ್ಚೆಯ ಹೊಯ್ದಂತಾಯಿತ್ತು ಕಾಣಾ
ಕೂಡಲ ಚೆನ್ನಸಂಗಮದೇವಾ (೩: ೯೮೧)

ದೀಕ್ಷೆಯನ್ನು ನಿಯಮಿಸುವ ಇನ್ನೊಂದು ವಚನ :

ಕ್ರಿಯಾ ದೀಕ್ಷ ಹೀನರಿಗೆ ಮಂತ್ರೋಪದೇಶವ
ಹೇಳುವನೊಬ್ಬ ಲಿಂಗ ದ್ರೋಹಿ ನೋಡಾ
ಕೂಡಲ ಚೆನ್ನ ಸಂಗಮದೇವಾ (೩: ೧೧೬೨)

ದೀಕ್ಷೆಯನ್ನು ಚೆನ್ನಬಸವಣ್ಣ ಅಧಿಕೃತಗೊಳಿಸುತ್ತಾನೆ ಹಾಗೂ ಅದನ್ನು ಭಕ್ತರಿಗೆ ಕಡ್ಡಾಯ ಮಾಡುತ್ತಾನೆ. ಚೆನ್ನಬಸವಣ್ಣ ಇಲ್ಲಿ ಬಳಸಿರುವ ಭಾಷೆಯು ಕರ್ಮಠತನದ ಭಾಷೆಯಾಗಿದೆ. ಇದು ವಚನ ಸಂಸ್ಕೃತಿಯ ಭಾಷೆಯಲ್ಲ. ದೀಕ್ಷೆ ಮಂತ್ರೋಪದೇಶ, ಮುಂತಾದವುಗಳನ್ನು ವಿರೋಧಿಸುವ ವಚನ ಸಂಸ್ಕೃತಿಯ ಮೂಲಧಾರೆ ವಿಚಾರ ಅಲ್ಲಮನಲ್ಲಿ ಹೀಗೆ ವ್ಯಕ್ತವಾಗಿದೆ.

ಘನತರ ಚಿತ್ತದ ರೂಹ ಬರೆಯಬಹುದಲ್ಲದೆ
ಪ್ರಾಣವ ಬರೆಯಬಹುದೆ, ಅಯ್ಯಾ?
ದಿವ್ಯಾಗಮಂಗಳು ಹೇಳಿದ ಕ್ರೀಯಲ್ಲಿ
ದೀಕ್ಷೆಯ ಮಾಡಬಹುದಲ್ಲದೆ,
ಭಕ್ತಿಯ ಮಾಡಬಹುದೆ, ಅಯ್ಯಾ?
ಅಯ್ಯಾ, ಪ್ರಾಣವಹ ಭಕ್ತಿಯ ತನ್ಮಯ ನೀನು;
ಈ ಗುಣವುಳ್ಳಲ್ಲಿ ನೀನಿಹೆ: ಇಲ್ಲದಲ್ಲಿ ನೀನಿಲ್ಲ
ಗುಹೇಶ್ವರ (೨: ೭೯)

ಅಲ್ಲಮನು ವಚನ ಸಂಸ್ಕೃತಿಯ ನಿಜ ವಿಚಾರವನ್ನು ತುಂಬಾ ಸ್ಪಷ್ಟವಾಗಿ ಇಲ್ಲಿ ಮಂಡಿಸುತ್ತಿದ್ದಾರೆ. ದೀಕ್ಷೆಯು 'ದಿವ್ಯಾಗಮಂಗಳ' ಚೌಕಟ್ಟಿನಲ್ಲಿ ಆಚರಿಸುವ ಆಚರಣೆ. ಭಕ್ತಿ ಸಂವಿಧಾನದಲ್ಲಿ ಅದಕ್ಕೆ ಸ್ಥಾನವಿಲ್ಲ. ಆಗಮ, ಶಾಸ್ತ್ರ, ಸ್ಮೃತಿ, ಶೃತಿಗಳನ್ನು ಧಿಕ್ಕರಿಸಿ ಹೊರಟ ವಚನ ಸಂಸ್ಕೃತಿಯಲ್ಲಿ ದೀಕ್ಷೆಗೆ ಅವಕಾಶವಿಲ್ಲ. ಇದಕ್ಕೆ ಭಿನ್ನ ಮತವನ್ನು ತಳೆದ ಚೆನ್ನಬಸವಣ್ಣ ದೀಕ್ಷೆಯನ್ನು ನಿಯಮಿಸುತ್ತಾನೆ. ಅಲ್ಲಮನ ಪ್ರಕಾರ ಭಕ್ತಿಯೆಂಬ ಗುಣಕ್ಕೆ ಮಾತ್ರ ಗುಹೇಶ್ವರ ಸ್ಪಂದಿಸುತ್ತಾನೆ ವಿನಾ ಡಂಬಾಚಾರ ಆಚರಣೆಗಳಿಗಲ್ಲ.

ಅಂತರಜಾತೀಯ ವಿವಾಹ ಮತ್ತು ಮತಾಂತರ

ವಚನ ಸಂಸ್ಕೃತಿಯು ವೈದಿಕ ಸಂಸ್ಕೃತಿ ಪ್ರಣೀತ ಜಾತಿ ವ್ಯವಸ್ಥೆಯನ್ನು ಹಾಗೂ ಅಲ್ಲಿದ್ದ ಜಾತಿ-ಜಾತಿಗಳ ನಡುವಿನ ವೈವಾಹಿಕ ಸಂಬಂಧಗಳ ಮೇಲಿನ ನಿಷೇಧವನ್ನು ಧಿಕ್ಕರಿಸಿತು. ಅಂತರ ಜಾತೀಯ ವಿವಾಹವು ವಚನ ಸಂಸ್ಕೃತಿಯ ಮತ್ತೊಂದು ಪ್ರಣಾಳಿಕೆಯಾಯಿತು. ಇತ್ತೀಚೆಗೆ- ಎಂ. ಚಿದಾನಂದಮೂರ್ತಿಗಳು (೧೯೯೩) ಚೆನ್ನಬಸವಣ್ಣನ ಬಗ್ಗೆ ಒಂದು ಪ್ರಬಂಧ ಪ್ರಕಟಿಸಿ, ಅದರಲ್ಲಿ ಅವನು ಅಂತರ ಜಾತೀಯ ವಿವಾಹದ ಬಗ್ಗೆ ತಳೆದ ಗತಿಶೀಲ ನಿಲುವನ್ನು ಶ್ಲಾಘಿಸಿದ್ದಾರೆ. ಇದಕ್ಕೆ ಅವರು ಆಧಾರವಾಗಿ ಕೆಳಗಿನ ಚೆನ್ನಬಸವಣ್ಣನ ವಚನವನ್ನು ಉಲ್ಲೇಖಿಸುತ್ತಾರೆ.

> **ಉಂಬುದು ಉಡುವುದು ಶಿವಾಚಾರ**
> **ಕೊಂಬುದು ಕೊಡುವುದು ಕುಲಾಚಾರ**
> **ಎಂಬ ಅನಾಚಾರಿಯ ಮಾನ ಕೇಳಲಾಗದು.**
> **ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರ ಒಂದೆ ಎಂದು**
> **ಕೊಟ್ಟು ಕೊಂಬುದು ಸದಾಚಾರ.**
> **ಉಳಿದುದೆಲ್ಲಾ ಅನಾಚಾರ**
> **ಅದೆಂತೆಂದಡೆ**
> **ಸ್ಪಟಿಕದ ಕೊಡದಲ್ಲಿ ಕಾಳಿಕೆಯ ನರಸುವ ಹಾಗೆ**
> **ಸಿಹಿಯೊಳಗೆ ಕಹಿಯನರಸುವ ಹಾಗೆ**
> **ರಜಸ್ಸೂತಕ, ಕುಲ ಸೂತಕ, ಜಾತಿ ಸೂತಕ**
> **ಪ್ರೇತ ಸೂತಕ, ಉಚ್ಚಿಷ್ಟಸೂತಕ ಎಂದಡೆ**
> **ಆತಂಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ತೀರ್ಥವಿಲ್ಲ, ಪ್ರಸಾದವಿಲ್ಲ.**
> **ಇಂತೀ ಪಂಚ ಸೂತಕವ ಕಳೆದಲ್ಲದೆ ಭಕ್ತನಾಗ**
> **ಇಂತಹ ಭಕ್ತರಲ್ಲಿ ಕೊಟ್ಟು ಕೊಂಬುದು ಸದಾಚಾರ**
> **ಕೂಡಲ ಚನ್ನಸಂಗಮಯ್ಯ (೩: ೧೦೪೪)**

ಶಿವಭಕ್ತನಾದ ಮೇಲೆ ಅವನು ಎಲ್ಲರಿಗೂ ಸಮಾನ. ಅವನ ಜೊತೆ ಭಕ್ತರೆಲ್ಲರೂ ವೈವಾಹಿಕ ಸಂಬಂಧ ಮಾಡಬಹುದು-ಮಾಡಬೇಕು ಎಂದು ಇಲ್ಲಿ ಚೆನ್ನಬಸವಣ್ಣ ಒತ್ತಾಯಿಸುತ್ತಿದ್ದಾನೆ. ಈ ವಚನದ ಪ್ರಕಾರ ಅಂದು ಶಿವಭಕ್ತರು ಊಟೋಪಚಾರಗಳಲ್ಲಿ ಶಿವಾಚಾರವನ್ನು, ಕೊಟ್ಟು-ಕೊಡುವ ಅಂದರೆ ವೈವಾಹಿಕ ವಿಷಯಗಳಲ್ಲಿ ಕುಲಾಚಾರವನ್ನೂ ಆಚರಿಸುತ್ತಿದ್ದರು. ಇದರ ಬಗ್ಗೆ ಚೆನ್ನಬಸವಣ್ಣ ತನ್ನ ಅಸಮ್ಮತಿ ಸೂಚಿಸುತ್ತಾನೆ. ಚಿದಾನಂದಮೂರ್ತಿಗಳು ಹೀಗೆ ಬರೆಯುತ್ತಾರೆ. "ವೀರಶೈವರಲ್ಲಿ ಅಂತರ ಜಾತೀಯ ಮದುವೆಗಳು ನಡೆಯುವುದರ ಬಗ್ಗೆ ಅಂದಿನ ಕಾಲದ ನಾಯಕರು ವಹಿಸಿದ್ದ ಆಸಕ್ತಿ, ಕಾಳಜಿಗಳಾಗಲಿ, ವಿವಾಹಗಳು ಮಾತ್ರವೇ ಜಾತಿ-ಜಾತಿಗಳ ಮಧ್ಯದ ಬೇಧವನ್ನು ನಿರ್ಣಾಯಕವಾಗಿ ತೊಡೆದು ಹಾಕಬಲ್ಲುವೆಂಬ ಅವರ ದೃಢ ನಂಬಿಕೆಯಾಗಲಿ ಇವು ಸ್ಪಷ್ಟವಾಗಿವೆ (ಚಿದಾನಂದಮೂರ್ತಿ, ೧೯೯೩: ೨೭೨)".

ಆದರೆ ಈ ವಚನ ಅಷ್ಟೊಂದು ಸರಳವಾದುದಲ್ಲ. ಮೇಲೆ ಉಲ್ಲೇಖಿಸಿರುವ ವಚನವನ್ನು ಚೆನ್ನಬಸವಣ್ಣನ ಒಟ್ಟಾರೆ ವಿಚಾರ ಪ್ರಣಾಳಿಕೆಯಿಂದ ಆಲಾಯದ ಮಾಡಿ ನೋಡಲು

ಸಾಧ್ಯವಿಲ್ಲ. ಏಕೆಂದರೆ ವೈವಾಹಿಕ ಸಂಬಂಧಗಳ ಬಗ್ಗೆ –ಉದಾಹರಣೆಗೆ ವಿಧವಾವಿವಾಹದ ಬಗ್ಗೆ ಅತ್ಯಂತ ಗತಿಶೀಲ ಉದಾರವಾದಿ ನಿಲುವು ತಳೆಯುವ ವಚನ ಸಂಸ್ಕೃತಿಯ ನಿಲುವಿಗೆ ಪ್ರತಿಯಾಗಿ ಚೆನ್ನಬಸವಣ್ಣ ಕರ್ಮಠತನದ ನಿಲುವು ತಳೆಯುತ್ತಾನೆ. 'ಮುಂಡೆಯ ಸಂಗವ ಮಾಡಿದಡೆ ಅಮೇಧ್ಯವ ತಿಂದ ಸಮಾನ' (೩: ೧೩೨೩) ಎಂದು ಪ್ರತಿಪಾದಿಸುತ್ತಾನೆ.

ಪ್ರವೇಶ ಪರೀಕ್ಷೆ

ವಚನ ಚಳುವಳಿಯ ಸಂದರ್ಭದಲ್ಲಿ ಕೆಳಜಾತಿ– ವರ್ಗಗಳಿಂದ ಬಂದ ಅನೇಕರು ಶರಣರಾಗಿ ಭಕ್ತರಾಗಿ ಪರಿವರ್ತಿತರಾದವರು. ಇದಕ್ಕೆ ವಚನ ಸಂಸ್ಕೃತಿ ಅವಕಾಶ ನೀಡಿತು. ಆದರೆ ಚೆನ್ನಬಸವಣ್ಣನು ಹೀಗೆ ಮತಾಂತರ ಹೊಂದಿ ಭಕ್ತರಾದವರ ಗುಣಗಳ ಬಗ್ಗೆ ಸಂದೇಶ–ಶಂಕೆ ವ್ಯಕ್ತಪಡಿಸುತ್ತಾನೆ. ಮತಾಂತರ ಹೊಂದಿ ಶರಣರಾದವರಿಗೆ ತಮ್ಮ ಪೂರ್ವಾಶ್ರಮದ ಆಚರಣೆ–ಸಂಪ್ರದಾಯಗಳನ್ನು ವಿಧಿಯಾಚರಣೆಗಳನ್ನು ಬಿಟ್ಟು ಬಿಡುವುದು ಅಶಕ್ಯವೆಂಬುದನ್ನು ಚೆನ್ನಬಸವಣ್ಣನ ನಿಲುವಾಗಿದೆ. ಅದಕ್ಕಾಗಿ ಚೆನ್ನಬಸವಣ್ಣ ಮತಾಂತರ ಹೊಂದುವವರಿಗೆ ಪ್ರವೇಶ ಪರೀಕ್ಷೆ ಕಾಲದ ಗಡುವುಗಳನ್ನು ನಿಯಮಿಸುತ್ತಾನೆ. ವಚನ ಸಂಸ್ಕೃತಿಗೊಂದು ಸಂಹಿತೆಯನ್ನು ವಿಧಿ–ನಿಷೇಧ ಸೂತ್ರವನ್ನು ಚೆನ್ನಬಸವಣ್ಣ ರೂಪಿಸುತ್ತಾನೆ. ಮುಕ್ತ ರೂಪಿ ವಚನ ಸಂಸ್ಕೃತಿಗೆ ಚೆನ್ನಬಸವಣ್ಣನು ಸಂಘಟಿತ ರೂಪ ನೀಡುತ್ತಾನೆ. ಈ ವಚನ ನೋಡಿ:

> **ಶ್ರೀ ಗುರುವಾದಾತನು ಸಕಲಾಗಮಂಗಳ ಹೃದಯವನರಿತು ತನ್ನತಾ**
> **ನರದಿದು ಸರ್ವಾಚಾರ ತನ್ನಲ್ಲಿ ನೆಲೆಗೊಂಡು**
> **ಉಪದೇಶವ ಮಾಡುವ ಕ್ರಮವೆಂತೆಂದರೆ**
> **ಬ್ರಾಹ್ಮಣನ ಮೂರು ವರುಷ ನೋಡಬೇಕು.**
> **ಕ್ಷತ್ರಿಯನ ಆರು ವರುಷ ನೋಡಬೇಕು**
> **ವೈಶ್ಯನ ಒಂಬತ್ತು ವರುಷ ನೋಡಬೇಕು**
> **ಶೂದ್ರನ ಹನ್ನೆರಡು ವರುಷ ನೋಡಬೇಕು**
> **ನೋಡಿದಲ್ಲದೆ ದೀಕ್ಷೆಯ ಕೊಡಬಾರದು**
>
> ....
>
> **ಈ ಕ್ರಮವ ನರಿಯದೆ ಉಪಾಧಿವಿಡಿದು ಮಾಡುವಾತ ಗುರುವಲ್ಲ**
> **ಉಪಾಧಿವಿಡಿದು ಮಾಡಿಸಿಕೋಬಾತ ಶಿಷ್ಯನಲ್ಲ.**
> **ಇವರಿಬ್ಬರ ನಿಲುವು ಒಂದೆ: ಠಕ್ಕನ ಮನೆಗೆ ಠಕ್ಕಬಿದ್ದಿನವ ಬಂದಂತೆ**
> **ಈ ಗುರು ಶಿಷ್ಯರನು ಕೌರವ ನರಕದಲ್ಲಿಕ್ಕುವ**
> **ಕೂಡಲ ಚೆನ್ನಸಂಗಯ್ಯ (೩: ೧೬೯೫)**

ಚೆನ್ನಬಸವಣ್ಣನು ಮತಾಂತರವನ್ನು ಚಾತುರ್ವರ್ಣ ವ್ಯವಸ್ಥೆಯ ಚೌಕಟ್ಟಿಗೆ ಸೀಮಿತಗೊಳಿಸಿದ್ದಾನೆ. ಇವನ ಪ್ರಕಾರ ಬಾಹ್ಮಣರು, ಕ್ಷತ್ರಿಯರು, ವೈಶ್ಯರು ಹಾಗೂ ಶೂದ್ರರು ಮಾತ್ರ ಭಕ್ತರಾಗಿ–ಶರಣರಾಗಿ ಪರಿವರ್ತಿತರಾಗಲು ಸಾಧ್ಯ. ಅವರಿಗೆ ಪ್ರವೇಶ ಪರೀಕ್ಷೆ, ಕಾಲದ ಗಡುವು ಎಲ್ಲಾ ಇದೆ. ಆದರೆ ಈ ವ್ಯವಸ್ಥೆಯೊಳಗೆ ಅಸ್ಪೃಶ್ಯರಿಗೆ –ಪಂಚಮರಿಗೆ ಅವಕಾಶವಿಲ್ಲವಾಗಿದೆ. ಅಂದರೆ ಚೆನ್ನಬಸವಣ್ಣನು ಕ್ರಮಬದ್ಧವಾಗಿ ವರ್ಣಶ್ರೇಣಿಯನ್ನು

ನಿರ್ಮಿಸುತ್ತಾನೆ. ಅಸ್ಪೃಶ್ಯರು ಪಂಚಮರು ಮತಾಂತರ ಹೊಂದಿದರೆ ಅವರಿಗೆ ಸಂಪೂರ್ಣ ಮನ್ನಣೆ ವಚನ ಸಂವಿಧಾನದಲ್ಲಿ ಸಾಧ್ಯವಿಲ್ಲವೆಂಬುದನ್ನು ಕೆಳಗಿನ ವಚನದಲ್ಲಿ ಪ್ರತಿಪಾದಿಸುತ್ತಿದ್ದಾನೆ.

ತೆಂಗಿನೊಳಗು ತಿರುಳು ಸೇವಿಸಬರ್ಪುದಲ್ಲದೆ
ಹೊರಗಣ ಪರಟೆ ಸೇವಿಸಲುಬಾರದು,
ಚಾಂಡಾಲಂಗೆ ಜ್ಞಾನವಂಕುರಿಸಿದಡೆ
ಆತನ ಅಂತರಂಗದ ವೃತ್ತಿಗೆ ಪೂಜ್ಯತೆಯಲ್ಲದೆ
ಬಹಿರಂಗದ ತನುವಿಗೆ ಪೂಜ್ಯತೆಯಾಗದು.
ಒಳಹೊರಗೆಂಬ ಭೇದವಿಲ್ಲದೆ ಸೇವಿಸಲು ಚಿತವಪ್ಪಂತೆ
ಶಿವಕುಲ ಪ್ರಸೂತಂಗೆ ಶಿವಜ್ಞಾನವಾಗಲು
ಆತನ ತನುವೃತ್ತಿಗಳೆರಡೂ ಸೇವ್ಯಲಾಗಿರ್ಪವು
ಇಂತಿದು ಸಾಧಕರ ಸ್ಥಿತಿಯಯ್ಯಾ
ಕೂಡಲ ಚೆನ್ನಸಂಗಮದೇವಾ (೩: ೧೩೧೩)

ಈ ವಚನದಲ್ಲಿ ಚೆನ್ನಬಸವಣ್ಣ ಬಳಸಿರುವ ತೆಂಗಿನಕಾಯಿಯ ರೂಪಕ ತುಂಬಾ ಅರ್ಥಗರ್ಭಿತವಾಗಿದೆ. ಇಲ್ಲಿ ತೆಂಗಿನೊಳಗಿನ 'ತಿರುಳು' ಶಿವಕುಲ ಪ್ರಸೂತರನ್ನು ಮತ್ತು 'ಪರಟೆ'ಯು ಚಾಂಡಾಲರನ್ನೂ ಅಂದರೆ ಅಸ್ಪೃಶ್ಯರನ್ನೂ ಪ್ರತಿನಿಧಿಸುತ್ತದೆ. ಚೆನ್ನಬಸವಣ್ಣನ ಪ್ರಕಾರ ಅಸ್ಪೃಶ್ಯನಿಗೆ ಚಾಂಡಾಲನಿಗೆ ಜ್ಞಾನವಂಕುರಿಸಿದರೆ, ಅವನಿಗೆ ಭಕ್ತನಾಗು ಗುಣ ಪ್ರಾಪ್ತವಾದರೆ, ಅವನ 'ಜ್ಞಾನ'ಕ್ಕೆ ಅಂತರಂಗದ ಸಿದ್ಧಿ ಸಾಧನೆಗಳಿಗೆ ಮನ್ನಣೆ–ಪೂಜ್ಯತೆ–ಗೌರವ ದೊರೆಯುತ್ತದೆ ವಿನಾ ಅವನ 'ತನು'ವಿಗೆ, ದೇಹಕ್ಕೆ ಮನ್ನಣೆ ದೊರೆಯುವುದಿಲ್ಲ. ಚೆನ್ನಬಸವಣ್ಣನ ಪ್ರಕಾರ ಶಿವಕುಲ ಪ್ರಸೂತರಿಗೆ ಮಾತ್ರ 'ಒಳಹೊರ'ಗೆಂಬ ಬೇಧವಿರುವುದಿಲ್ಲ. ಚಾಂಡಾಲರು, ಅಸ್ಪೃಶ್ಯರು ಮುಂತಾದವರು ಭಕ್ತರಾದರೂ ಸಹ, ಶರಣ ಸಂವಿಧಾನದೊಳಗೆ ಪ್ರವೇಶಿಸಿದರೂ ಸಹ 'ಒಳಹೊರ'ಗೆಂಬ ಬೇಧ ಹೊತ್ತುಕೊಂಡೆ ಇರುತ್ತಾರೆ.

ಉಪಸಂಹಾರ

ವಚನ ಸಂಸ್ಕೃತಿ ಪ್ರತಿಪಾದಿಸಿದ ವಿಚಾರ ಪ್ರಣಾಳಿಕೆ (Parodigm)ಯು ಅಖಂಡವೂ ಏಕಮುಖಿಯೂ, ಏಕಾಕಾರಿಯೂ ಆದುದಾಗಿರಲಿಲ್ಲ. ಅದರೊಳಗೆ ಅನೇಕ ಅಪಸ್ವರ–ಭಿನ್ನಸ್ವರ–ಭಿನ್ನಮತಗಳಿದ್ದವು. ಅದಕ್ಕೆ ಧಾರ್ಮಿಕ ಆಯಾಮವಿತ್ತು ಎನ್ನುವುದು ಎಷ್ಟು ಸತ್ಯವೊ, ಅದರ ಸಾಮಾಜಿಕ ಆಯಾಮವೂ ಅಷ್ಟೆ ಸ್ಪಷ್ಟವಾಗಿತ್ತು. ಸಾಮಾಜಿಕ ಏಣಿ ಶ್ರೇಣಿ, ಸಾಂಸ್ಕೃತಿಕ ಮೇಲು–ಕೀಳು, ಜೇಷ್ಠ–ಕನಿಷ್ಠಗಳಿಗೆ ಕಾರಣವಾಗಿದ್ದ ಜಾತಿ–ಚಾತುರ್ವರ್ಣಗಳನ್ನು ವಚನ ಸಂಸ್ಕೃತಿ ತಿರಸ್ಕರಿಸಿತು. ಆದರೆ ವಚನ ಸಂಸ್ಕೃತಿಯೊಳಗೆ ತಣ್ಣಗೆ ಜಾತಿ–ಚಾತುರ್ವರ್ಣವನ್ನು ಪ್ರತಿಪಾದಿಸುವ ವಿಚಾರದ ಎಳೆಯೂ ಹರಿಯುತ್ತಿದ್ದುದು ಸ್ಪಷ್ಟವಾಗಿದೆ. ಮುಟ್ಟು–ಮೈಲಿಗೆ–ಸೂತಕ–ಸಂಕರಣಗಳ ವಿರುದ್ಧ ಕೆಂಡಕಾರಿದ ವಚನ ಸಂಸ್ಕೃತಿಯೊಳಗೆ ಅವುಗಳನ್ನು ಊರ್ಜಿತಗೊಳಿಸಲು ಪ್ರಯತ್ನ ನಡೆದದ್ದು ಗೋಚರಿಸುತ್ತದೆ. ಒಟ್ಟಾರೆ ವಚನ ಸಂಸ್ಕೃತಿಯು ಅತ್ಯಂತ ಸೂಕ್ಷ್ಮವೂ, ಸಂಕೀರ್ಣವೂ, ಬಹುಮುಖಿಯೂ, ಬಹು ಸ್ತರೀಯವೂ ಆದ ಒಂದು ಸಾಮಾಜಿಕ ಪ್ರಕ್ರಿಯೆ ಗತಿಶೀಲತೆಯಾಗಿತ್ತು.

ವಚನ ಸಂಸ್ಕೃತಿಯೊಳಗೆ ಬ್ರಾಹ್ಮಣವಾದಿತನವನ್ನು ಬಿತ್ತಿದ, ಅದಕ್ಕೆ ಸಂಘಟಿತ ರೂಪ

ನೀಡಿದ, ಅದಕ್ಕೆ ಸಂಹಿತೆ–ಸೂತ್ರಗಳನ್ನು ಕಟ್ಟಿ ಹಾಕಿದ ಕೀರ್ತಿ ಚೆನ್ನಬಸವಣ್ಣನಿಗೆ ಸಲ್ಲಬೇಕು. ೧೨ನೇ ಶತಮಾನದಲ್ಲಿ ವಚನ ಸಂಸ್ಕೃತಿಯ ಮೂಲ ಧಾರೆ ಪ್ರಬಲವಾಗಿದ್ದುದರಿಂದ ಚೆನ್ನಬಸವಣ್ಣನ ವಿಚಾರ ಪ್ರಣಾಳಿಕೆ ಸದೃಢಗೊಳ್ಳಲು ಸಾಧ್ಯವಾಗಲಿಲ್ಲ. ಆದರೆ ೧೨ನೇ ಶತಮಾನದ ತರುವಾಯ ವಚನ ಸಂಸ್ಕೃತಿಯ ಮೂಲ ಧಾರೆಯ್ಯ ಪ್ರತಿಪಾದನೆ ದುರ್ಬಲಗೊಂಡಿದ್ದರಿಂದ ಚೆನ್ನಬಸವಣ್ಣನ ವಿಚಾರ ಪ್ರಣಾಳಿಕೆಗೆ ಅಧಿಕೃತತೆ ಬಂದುಬಿಟಟಿತು. ಇಂದು ಆಚರಣೆಯಲ್ಲಿರುವ ವಚನ ಸಂಸ್ಕೃತಿಯು ಆಗ ಮೋಕ್ಷಕ್ರಮಾನುಗತ ಚೆನ್ನಬಸವಣ್ಣ ಪ್ರಣೀತವಾದುದಾಗಿದೆ. ವೈದಿಕತೆಯನ್ನು ಮೈಗೂಡಿಸಿಕೊಂಡ ವಚನ ಸಂಸ್ಕೃತಿ ಇದಾಗಿದೆ. ಆದರೆ ಪ್ರಧಾನ ಧಾರ ವಚನ ಸಂಸ್ಕೃತಿಯು ಆಗ ಮೋಕ್ಷಕ್ರಮಾನುಗತಕ್ಕೆ ವಿರುದ್ಧವಾದುದಾಗಿದೆ. ವಾಸ್ತವವಾಗಿ ವೈದಿಕತೆಗೆ ಪ್ರತಿಯಾಗಿ ವಚನ ಸಂಸ್ಕೃತಿ ಹುಟ್ಟಿತು. ಆದರೆ ೧೨ನೇ ಶತಮಾನದ ನಂತರ ಪ್ರಧಾನ ಧಾರೆಯು ವಚನ ಸಂಸ್ಕೃತಿಯಲ್ಲಿ ಕ್ಷೀಣಗೊಂಡಿತು. ಕಾಲ ಕ್ರಮೇಣ ಅದು ಬತ್ತಿಹೋಗತೊಡಗಿತು. ಈ ಬತ್ತಿಹೋದ, ಕ್ಷೀಣಗೊಂಡ, ಧ್ವನಿಯನ್ನು ಕಳೆದುಕೊಂಡ ವಚನ ಸಂಸ್ಕೃತಿ ಪ್ರಧಾನ ಧಾರೆಯನ್ನು ಪುನರ್‍ಕ್ರೋಢಿಸುವ, ಪುನರುಜ್ಜೀವನಗೊಳಿಸುವ, ಅದನ್ನು ಮುಂಚೂಣಿಗೆ ತರುವ ಪ್ರಯತ್ನ ಇಂದು ನಡೆಯಬೇಕಾಗಿದೆ.

ಟಿಪ್ಪಣಿ

ಈ ಅಧ್ಯಯನದ ಪ್ರಬಂಧದಲ್ಲಿ ಬಳಸಿರುವ ವಚನಗಳನ್ನು 'ಸಮಗ್ರ ವಚನ ಸಂಪುಟ'ಗಳ ಸಂಪುಟಗಳಿಂದ ಆರಿಸಿಕೊಳ್ಳಲಾಗಿದೆ. ಇಲ್ಲಿ ನೀಡಿರುವ ಅಂಕಿಗಳಲ್ಲಿ ಮೊದಲನೆಯ ಅಂಕಿಯು ಸಂಪುಟದ ಸಂಖ್ಯೆಯನ್ನು ಹಾಗೂ ಎರಡನೆಯ ಅಂಕಿಯು ಸದರೀ ಪುಟದಲ್ಲಿನ ವಚನದ ಕ್ರಮಸಂಖ್ಯೆಯನ್ನು ಸೂಚಿಸುತ್ತದೆ.

ಗ್ರಂಥಸೂಚಿ

೧. ಚಂದ್ರಶೇಖರ ಟಿ.ಆರ್. (೧೯೯೬) 'ವಚನ' ಸಂಸ್ಕೃತಿಯಲ್ಲಿ ಮಹಿಳೆ: ಒಂದು ಗತಿಶೀಲ ಅಧ್ಯಯನ, ಸಂವಾದ–೪೩, ಪುಟಗಳು: ೪೨–೬೮.

೨. ಚಿದಾನಂದಮೂರ್ತಿ ಎಂ. (೧೯೯೩) ಹೊಸತು–ಹೊಸತು (ಸಂಶೋಧನಾ ಲೇಖನಗಳು) ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟಗಳು: ೨೭೭–೨೯೨

೩. ವಿದ್ಯಾಶಂಕರ ಎಸ್. (೧೯೯೭) ನೆಲದ ಮರೆಯ ನಿಧಾನ. ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ಪುಟಗಳು : ೧೦–೧೯.

೪. ಶೌತನ್ ಜೆ.ಪಿ. (೧೯೯೫) Revolution of mystics: On some Social Aspects of Virasaivism, MBD, New Delhi.

೫. ಸಬರದ ಬಸವರಾಜ (೧೯೯೨), ವಚನ ಚಳುವಳಿ, ಪಲ್ಲವಿ ಪ್ರಕಾಶನ, ಕಲಬುರ್ಗಿ, ಪುಟಗಳು: ೧೦೯–೧೧೮.

❐

---

* ಸಂಕ್ರಮಣ ೩೦೮, ಲೇ. ಡಾ. ಪಿ.ಎಸ್. ಶಂಕರ್, ಸಂಕ್ರಮಣ ಪ್ರಕಾಶನ, ಬೆಂಗಳೂರು – ೫೬೦ ೦೭೦. ೧೯೯೮.

ಅನುಭಾವಿ ಕವಿ

●

ಡಾ. ಎಚ್. ತಿಪ್ಪೇರುದ್ರಸ್ವಾಮಿ

ಷಟ್‌ಸ್ಥಲ ವಿವೇಚನೆಯಾಗಲಿ, ಶಿವಯೋಗ ಸಾಧನೆಯಾಗಲಿ, ಸರ್ವಾಚಾರ ಸಂಪತ್ತಿನ ಬೋಧನೆಯಾಗಲಿ, ಆಳವಾದ ಮತ್ತು ತೀವ್ರವಾದ ಅನುಭಾವದಿಂದ ಜನ್ಯವಾಗಿ ಮಾನವ ಅನುಕಂಪೆಯಿಂದ ಮೂಡಿಬಂದಾಗ ಆಡಿದ ಮಾತು ಕಾವ್ಯವಾಗಿ ಪರಿಣಮಿಸುತ್ತದೆ. ಶರಣರ ವಚನಗಳು ಮೂಡಿ ಬಂದದ್ದೇ ಹೀಗೆ. ಅವರು ಕಾವ್ಯವನ್ನು ಬರೆಯಬೇಕೆಂದು ಹೊರಟವರಲ್ಲ. ಪ್ರಕೃತಿ ಸೌಂದರ್ಯವನ್ನು ವರ್ಣಿಸಲು ತೊಡಗಿದವರಲ್ಲ. ಅವರು ಬರೆದ ಕಾವ್ಯ, ಜೀವನ ಕಾವ್ಯ. ಜೀವನ ಸೌಂದರ್ಯವೇ ಕಾವ್ಯವಾಯಿತು ಅವರ ನುಡಿಯಲ್ಲಿ. ಸಹಜ ಸುಂದರವಾದ ಆತ್ಮಸ್ವರೂಪವನ್ನು ಕಂಡುಕೊಳ್ಳಲು ಸಾಧಕ ಚೇತನ ಕೈಕೊಳ್ಳುವ ಸಾಹಸಯಾತ್ರೆಯ ಹಲವು ಹಂತಗಳ ಆಂತರಿಕ ವಿಕಾಸ, ಇಲ್ಲಿ ತೀವ್ರವಾದ ಭಾವಸಂವೇದಗಳ ಮೂಲಕ ಮೂಡಿಬಂದಿದೆ. ಆದುದರಿಂದ ಅದು ಸಹೃದಯನ ಮನಸ್ಸನ್ನು ನೇರವಾಗಿ ಮುಟ್ಟಿ ಅವರ ಅನುಭವ ಕಾವ್ಯವಾಗಿದೆ. ಅದರಲ್ಲಿಯೂ ಈ ಮಾತು ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಸಿದ್ಧರಾಮ ಇವರಿಗೆ ಇನ್ನೂ ಹೆಚ್ಚಾಗಿ ಅನ್ವಯಿಸುತ್ತದೆ. ಚನ್ನಬಸವಣ್ಣ ಮುಖ್ಯವಾಗಿ ಸಿದ್ಧಾಂತ ಪ್ರತಿಪಾದಕನೆಂದು ಪ್ರಸಿದ್ಧನಾಗಿದ್ದರೂ ಆತನದು ಕೇವಲ ಶುಷ್ಕ ಪಾಂಡಿತ್ಯದ ನಿರೂಪಣೆಯಾಗಿಲ್ಲ. ಮೇಲಿನ ಶರಣರ ಸಾಲಿಗೆ ಸೇರುವ ಕಾವ್ಯ ಪ್ರತಿಭೆಯ ಪ್ರಭೆಯನ್ನು ಆತನ ವಚನಗಳಲ್ಲಿ ಉದ್ದಕ್ಕೂ ಕಾಣುತ್ತೇವೆ. ಸಿದ್ಧಾಂತದ ಮಾತುಗಳಿಗೆ ಆಂತರಿಕ ಶಕ್ತಿಯನ್ನೀಯುವಂತೆ, ಅನುಭಾವದ ಆಳದಿಂದ ಸಾಹಿತ್ಯ ಶಕ್ತಿಯನ್ನೇ ಅವಲಂಬಿಸಿ ಮೂಡಿಬಂದಿದೆ. ಆತ ಷಟ್‌ಸ್ಥಲಬ್ರಹ್ಮಿ ಆಗಿರುವುದರ ಜೊತೆಗೆ ಅದನ್ನು ಸಾಕ್ಷಾತ್ಕರಿಸಿಕೊಂಡ ಅನುಭಾವಿ, ಸಮರ್ಥವಾಗಿ ಅಭಿವ್ಯಕ್ತಗೊಳಿಸಿದ ಕವಿಯೂ ಆಗಿದ್ದಾನೆ. ಇದುವರೆಗೆ ನೋಡಿದ ವಿವೇಚನೆಯಲ್ಲಿ ಮತ್ತು ಉದಾಹರಿಸಿದ ವಚನಗಳಲ್ಲಾಗಲೇ ಇದನ್ನು ಕಂಡುಕೊಂಡಿದ್ದೇವೆ. ಇಲ್ಲಿ ಇನ್ನೂ ಕೆಲವು ವಚನಗಳನ್ನು ಗಮನಿಸಿ ಇದನ್ನು ಪರಿಶೀಲಿಸಬಹುದು.

ಆತನ ವಚನಗಳೆಲ್ಲವೂ ಕಾವ್ಯಾನುಭವದ ಮಟ್ಟಕ್ಕೆ ಏರುತ್ತವೆಂದಲ್ಲ. ಆತನ ಹಲವು ವಚನಗಳು ತತ್ವಗಳ ನೀರಸ ನಿರೂಪಣೆಯಾಗಿ ಉಪದೇಶದ ಹಂತದಲ್ಲೇ ನಿಂತುಬಿಡುತ್ತವೆ; ಆಚಾರಗಳ ದೀರ್ಘಪಟ್ಟಿಯೂ ಕೆಲವು ಕಡೆ ಬೆಳೆಯುವುದುಂಟು. ಆಗಮಾದಿಗಳಿಂದ

ಸಮರ್ಥಿತವಾಗುವ ತಾರ್ಕಿಕ ವಿವೇಚನೆಗೂ ಕೊರತೆಯೇನಿಲ್ಲ. ಇವುಗಳ ಮಧ್ಯದಲ್ಲಿಯೂ ಇವುಗಳನ್ನು ಮೀರಿ ಮೇಲೇರಿದ ಸಾಹಿತ್ಯದ ಸೊಬಗಿನ ಆಸ್ವಾದನೆಗೆ ಕಾರಣವಾಗುವ ವಚನಗಳು ಮಿಂಚುತ್ತವೆ. ಇದು ಅಲ್ಲಲ್ಲಿ ಕಂಡುಬರುವ ಕ್ವಚಿತ್ ಸಾಧನೆಯಲ್ಲ. ಮೊದಲಿನಿಂದ ಕೊನೆಯವರೆಗೂ ಅನುಭವದ ಎಲ್ಲ ಹಂತಗಳಲ್ಲೂ ಭಾಷೆಯ ಸಾಧ್ಯತೆಯನ್ನು ಸಮರ್ಥವಾಗಿ ಬಳಸಿಕೊಳ್ಳುವ ಕಾವ್ಯ ಪ್ರತಿಭೆ ಕಂಡುಬರುತ್ತದೆ. ಅಡಕವಾದ ಮಾತುಗಳಲ್ಲಿ ಅಪಾರವಾದ ಅರ್ಥವನ್ನು ತುಂಬುವ ಕಾವ್ಯ ಕೌಶಲ್ಯಕ್ಕೆ ಆತನ ಅನೇಕ ವಚನಗಳು ಸಾಕ್ಷಿಯಾಗಿವೆ. ಪ್ರಾರಂಭದಲ್ಲಿಯೇ ಕೂಡಲಚನ್ನಸಂಗಯ್ಯನ ನಿಲುವು: "ಮರೀಚಿಯೊಳಡಗಿದ ಬಿಸಲಿನಂತಿದ್ದಿತ್ತು; ದೋರಳಡಗಿದ ತುಪ್ಪದಂತಿದ್ದಿತ್ತು; ಚಿತ್ರಿಕನೊಳಡಗಿದ ಚಿತ್ರದಂತಿದ್ದಿತ್ತು; ಆಲಿಯೊಳಡಗಿದ ತೇಜದಂತಿದ್ದಿತ್ತು: ನುಡಿಯೊಳಡಗಿದ ಅರ್ಥದಂತಿದ್ದಿತ್ತು" ಎಂದು ಹೇಳುವ ಪಿಂಡಸ್ಥಲದ ಕಡೆ: "ಜ್ಯೋತಿಯಲ್ಲಡಗಿದ ಜ್ಯೋತಿಯಂತಿರಬೇಕು. ದರ್ಪಣದೊಳಡಗಿದ ಪ್ರತಿಬಿಂಬದಂತಿರಬೇಕು. ಸ್ಫಟಿಕದ ಘಟದೊಳಗಿರಿಸಿದ ರತ್ನದಂತಿರಬೇಕು. ರೂಪಿನ ನೆಳಲಿನ ಅಂತರಂಗದಂತಿರಬೇಕು" ಎಂದು ಹೇಳುತ್ತಾ ಕೊನೆಯಲ್ಲಿ "ದರ್ಪಣವ ದರ್ಪಣಕ್ಕೆ ತೋರಿದಂತಿರಬೇಕು" ಎಂದು ಮುಕ್ತಾಯ ಗೊಳಿಸುತ್ತಾನೆ.

ಹೀಗೆ ಚೆನ್ನಬಸವಣ್ಣನ ವಚನಗಳು ಕೇವಲ ತತ್ವಪ್ರತಿಪಾದನೆಯ ಶಾಸ್ತ್ರೀಯ ನಿರೂಪಣೆ ಗಳಾಗದೆ ಅನುಭಾವದ ನಿಲವನ್ನು ಪಡೆದ ಕವಿಹೃದಯದಿಂದ ಮೂಡಿದ ಸಾಹಿತ್ಯ ಕೃತಿಗಳೂ ಆಗಿವೆ. ಎಲ್ಲ ವಚನಗಳೂ ಆ ಮಟ್ಟದಲ್ಲಿಯೇ ಇವೆಯೆಂದು ಹೇಳಬೇಕಾಗಿಲ್ಲ. ದೀರ್ಘ ನಿರೂಪಣೆಯ ತಾತ್ವಿಕ ವಚನಗಳೂ ಈತನಲ್ಲಿ ಸಾಕಷ್ಟಿದೆ. ಬಸವಣ್ಣ ಅಲ್ಲಮರಿಗಿಂತ ಹೆಚ್ಚಾಗಿ ಈತನಲ್ಲಿ ದೀರ್ಘ ನಿರೂಪಣೆಯ ವಚನಗಳನ್ನು ಕಾಣುತ್ತೇವೆ; ಮತ್ತು ಅವು ತತ್ವ ಪ್ರತಿಪಾದಕ ನಾಗುತ್ತಾನೆ; ಷಡುಸ್ಥಲ ಬ್ರಹ್ಮಿಯಾಗುತ್ತಾನೆ. ಆದರೆ ಬಹಳ ಮುಖ್ಯವಾಗಿ ಗಮನಿಸಬೇಕಾದ ಮಾತೆಂದರೆ ಶಾಸ್ತ್ರಕಾರನೇ ಬೇರೆಯಾಗಿ ನಿಲ್ಲುವುದಿಲ್ಲ, ಅದರ ಜೊತೆಯಲ್ಲಿಯೇ ಅನುಭಾವಿ ಜಾಗ್ರತನಾಗಿರುತ್ತಾನೆ; ಮತ್ತು ಅದರ ಅಂತರ್ಯದಲ್ಲಿಯೇ ಕವಿಹೃದಯ ಮಿಡಿಯುತ್ತದೆ! ನುಡಿಯುತ್ತದೆ, ಇದನ್ನು ಭಕ್ತಸ್ಥಲದಿಂದ ಹಿಡಿದು ಐಕ್ಯಸ್ಥಲದವರೆಗಿರುವ ಈತನ ವಚನಗಳಲ್ಲಿ ಉದ್ದಕ್ಕೂ ಗುರುತಿಸಬಹುದು.

ಹೇಳುವ ಅನುಭವ ಯಾವುದೇ ಆಗಿರಲಿ ಅದಕ್ಕನುಗುಣವಾಗಿ ಭಾಷೆ ಇಲ್ಲಿ ಸಹಜವಾಗಿ ರೂಪುಗೊಳ್ಳುತ್ತದೆ. ಅದಕ್ಕಾಗಿ ಈತ ವಿಶೇಷ ಪ್ರಯತ್ನವನ್ನೇನೂ ಮಾಡುವಂತೆ ತೋರುವುದಿಲ್ಲ. ಶಬ್ದಗಳ ವಿನ್ಯಾಸವಾಗಲೀ, ಅರ್ಥಕ್ಕನುಗುಣವಾಗಿ ಮೂಡಿಬರುವ ಹೋಲಿಕೆ. ಸಾದೃಶ್ಯಾದಿ ಗಳಾಗಲೀ ಕಷ್ಟಪಟ್ಟು ಎಳೆದುತಂದಂತೆ ಅನ್ನಿಸುವುದಿಲ್ಲ. ಆಯಾ ಅನುಭವದ ಅನಿವಾರ್ಯ ಮಾಧ್ಯಮಗಳಾಗಿ ಮೂಡಿಬರುತ್ತವೆ. ಕೆಲವು ಕಡೆಗಳಲ್ಲಂತೂ ಅಡಕವಾದ ಮಾತುಗಳು ಪಡೆನುಡಿಗಳಂತಾಗಿ ಮತ್ತೆ ಮತ್ತೆ ಮೆಲುಕು ಹಾಕುವಂತಿರುತ್ತವೆ. ಮಾದರಿಗಾಗಿ ಕೆಲವನ್ನು ಮಾತ್ರ ಇಲ್ಲಿ ಉದಾಹರಿಸಬಹುದು;

ಹಸ್ತಮಸ್ತಕ ಸಂಯೋಗವೇ ಬಹಿರಂಗ, ಮನಸಂಯೋಗವೇ ಅಂತರಂಗ
ಭವಕ್ಕೆ ಬಿತ್ತುವಪ್ಪ ಬಯಕೆ ಇಹನ್ನಬರ, ಕಾಮನ ಕಾಟವು ಕಡೆಗಾಣದಯ್ಯ
ಮರ್ಮವನರಿದು ಮಾಡುವಂಗೆ ಕರ್ಮವಿಲ್ಲ
ಎನಗೆ ನಾನೇ ಹಗೆಯು ನೋಡಯ್ಯಾ, ಎನಗೆ ನಾನೇ ಕೆಳೆಯು ನೋಡಯ್ಯಾ

ಆಚಾರವೆಂಬುದು ಕೂರಲಗು, ತಪ್ಪಿ ಬಂದಡೆ ಪ್ರಾಣವ ತಗಲುವುದು
ಸೂತಕವುಳ್ಳನಕ್ಕ ಲಿಂಗಾರ್ಚನೆಯಿಲ್ಲ, ನಪಾತಕವುಳ್ಳನಕ್ಕ ಜಂಗಮಾರ್ಚನೆಯಿಲ್ಲ
ಕೆರೆಯಲಿ ಕಂಡಡೆ ಉದಕವೆಂಬೆ, ಮನೆಗೆ ಬಂದಡೆ ಅಗ್ಗವಣಿಯೆಂಬೆ
ಒಡಲಳಿದೊಡೆಯೂ ಹಿಡಿದಾಚಾರವ, ಬಿಡದಿರಬೇಕು
ಮನದಂತೆ ಮಂಗಳವೆಂಬುದು ತಪ್ಪದು ನೋಡಾ
ಅಂತರಂಗದಲ್ಲಿ ಅರಿವಾದೊಡೇನಯ್ಯಾ, ಬಹಿರಂಗದಲ್ಲಿ ಕ್ರಿ ಇಲ್ಲದನ್ನಕ್ಕ
ಆನೆಯನೇರಿದ ಮಾವತಿಗ ಚಕ್ರೇಶ್ವರನಾಗಬಲ್ಲನೆ ಅಯ್ಯಾ!
ಬಯಸಿ ಬಂದುದು ಅಂಗಭೋಗ, ಬಯಸದೆ ಬಂದುದು ಲಿಂಗಭೋಗ
ಆವ ಕುಲವಾದೊಡೇನು, ದೇವನೊಲಿದಾತನೆ ಕುಲಜ
ಅವಿನಾಸಂಗೆ ವಿನಾಶವನರ್ಪಿತವ ಮಾಡಬಲ್ಲದೆ ಪ್ರಸಾದಿ
ಪುರುಷ ಕವಿದಿತ್ತೆಂದು ಶ್ರೀ ಗುರು ಕುರುಹುದೋರಿದ...
ಮರ್ಮವನರಿಯದ ಮಾಟ ಸಯಿಧಾನದ ಕೇಡೆಲು
ಒಕ್ಕುದೆಂಬುದೇ ಕಾಯ, ಮಿಕ್ಕುದೆಂಬುದೇ ಪ್ರಾಣ
ಭಕ್ತಿಗೆ ಅನುಭಾವವೇ ಬೀಜ ಕಾಣಿರೋ
ಉದಯಾಸ್ತಮಾನವೆಂಬ ಕೊಳಗದಲ್ಲಿ ಆಯುಷ್ಯವೆಂಬ ರಾಶಿಯನಳೆವರು
ಹೃದಯ ಕಮಲದಲ್ಲಿಪ್ಪ ದೇವನ ದೇಹಾರವ ಮಾಡಲರಿದು
ಸರ್ವಾಂಗವೂ ಲಿಂಗವಾದ ಆರೋಗಣೆಗೆ ಅಪ್ಯಾಯನವೆ ಕರಸ್ಥಲ
ಶೀಲವಂತನರಿವು ಸೂತಕದಲ್ಲಿ ಹೋಯಿತ್ತು
ಶೀಲವಾದಡೆ ಪ್ರಪಂಚ ನಾಸ್ತಿಯಾಗಿರಬೇಕು
ಅಹಂ ಎಂಬುದೇ ದೇಹ, ದಾಸೋಹಂ ಎಂಬುದೇ ನಿರ್ದೇಹ
ಬೇಡಿ ಮಾಡುವುದು ಅಂಗಭೋಗ, ಬೇಡದೆ ಮಾಡುವುದು ಲಿಂಗಭೋಗ
ಪಥವನರಿಯದೆ ಮಂಡೆಯ ಬೋಳಿಸಿಕೊಂಡಾತ ಜಂಗಮನಲ್ಲ
ನಿಷ್ಠೆಯುಳ್ಳಾತಂಗೆ ನಿತ್ಯನೇಮದ ಹಂಗೇಕೆ?
ಕಾಯ ಬ್ರಹ್ಮಚಾರಿಯಾದಡೇನಯ್ಯ ಆಶೆ ಬ್ರಹ್ಮಚಾರಿಯಾಗದನ್ನಕ್ಕ
ಅರಿವು ಆರಡಿಗೊಂಡು, ಮನವು ಮಹದಲ್ಲಿ ನಿಂದು ಘನವಡಗಿತ್ತು

ಇಂತಹ ಮಾತುಗಳ ಸಂಖ್ಯೆಯನ್ನು ಬೆಳೆಸುತ್ತಾ ಹೋಗಬಹುದು. ಚನ್ನಬಸವಣ್ಣನ ಸಾಧನೆ ಅನುಭವಗಳ ಜೊತೆಗೆ ಆತನ ಕಾವ್ಯಶಕ್ತಿಯನ್ನೂ ಇಂತಹ ಮಾತುಗಳಲ್ಲಿ ಕಾಣುತ್ತೇವೆ. ನಿರೂಪಣೆಯ ಮಾರ್ಗ, ಮಾತಿನ ರೀತಿ, ಕೊಡುವ ಉಪಮಾನ ಸಾದೃಶ್ಯ ಮೊದಲಾದ ಅಲಂಕಾರಗಳು, ವಿಷಯ ಪ್ರತಿಪಾದನೆಯ ಕ್ರಮ, ಕೊನೆಯಲ್ಲಿ ಉಂಟುಮಾಡುವ ಪರಿಣಾಮ ಇವೆಲ್ಲವುಗಳಿಂದ ವಚನಸಾಹಿತ್ಯದಲ್ಲಿ ಚನ್ನಬಸವಣ್ಣನಿಗೆ ಒಂದು ವಿಶಿಷ್ಟ ಸ್ಥಾನವಿದೆಯೆಂಬುದನ್ನು ಕಂಡುಕೊಳ್ಳಬಹುದು.

ಲಿಂಗಸುಖದ ಸುಗ್ಗಿಯಲ್ಲಿ ಎನ್ನ ಪ್ರಾಣ ಮನ ಕರಣಂಗಳು
ಮೇರದಪ್ಪಿದ ಸುಖಸಮುದ್ರದೊಳಗೋಲಾಡಿದಂತಾದೆನಯ್ಯಾ
ಮುಳುಗಿದೆನಯ್ಯಾ ಸ್ವಾನುಭಾವವೆಂಬ ಗುರುವಿನ ಕರುಣದಲ್ಲಿ
ಇಂತಾದ ಬಳಿಕ ಕೂಡಲ ಚನ್ನಸಂಗಯ್ಯನೇ ಪ್ರಾಣವಾಗಿದ್ದೆನಯ್ಯಾ (೧೦೫೯)

ಇದು ಚನ್ನಬಸವಣ್ಣನ ಶೈಲಿಗೆ ಒಂದು ಒಳ್ಳೆಯ ಉದಾಹರಣೆ. ಈತನ ವಚನಶೈಲಿ ಬಸವಣ್ಣನಂತೆ ಭಕ್ತಿಭಾವದ ತೀವ್ರತೆಯಿಂದ ಮತ್ತು ಲೋಕಾನುಭವದ ಸಾಂದ್ರತೆಯಿಂದ

ಕೂಡಿದ ಮೋಹಕೆ ಮೋಡಿಯನ್ನುಳ್ಳದ್ದಲ್ಲ; ಅಕ್ಕಮಹಾದೇವಿಯಂತೆ ಮಧುರ ಭಕ್ತಿಯಿಂದ ಆವೇಶಯುತವಾದುದಲ್ಲ; ಅಲ್ಲಮಪ್ರಭುವಿನಂತೆ ಥಟ್ಟನೆ ಗಗನಗಾಮಿಯಾಗುವ ಲೋಕಾತಿಕ್ರಾಂತ ಕಾಂತಿಯನ್ನುಳ್ಳದಲ್ಲ; ಆದರೆ ಇವೆಲ್ಲವುಗಳ ಶಕ್ತಿಯನ್ನೂ ಆಯಾ ಅನುಭವಕ್ಕನುಗುಣವಾಗಿ ಬಳಸಿಕೊಳ್ಳಬಲ್ಲ ವೈಚಾರಿಕ ವಿವೇಚನೆ ಮತ್ತು ತಾತ್ವಿಕ ಸಮತೋಲನಗಳಿಂದ ಕೂಡಿದ್ದು. ಆದ್ದರಿಂದಲೇ ಅದು ಮರ್ತ್ಯಅಮರ್ತ್ಯಗಳೆರಡನ್ನೂ, ಅಂತರಂಗ ಬಹಿರಂಗಗಳೆರಡನ್ನೂ ಸಹಜವಾಗಿಯೇ ಒಡಗೊಂಡು ನಡೆಯಬಲ್ಲುದು.

ಮೇಲಿನ ವಚನಗಳು ಇದಕ್ಕೆ ಒಳ್ಳೆಯ ಉದಾಹರಣೆ. ಹೊರಗಿನ ಸದಾಚಾರ ಕ್ರಿಯೆಗಳಲ್ಲಿ ನಿರತವಾಗಿ ಆ ಸುಖದಲ್ಲಿರುವಾಗಲೇ ಮನಸ್ಸು ಇದೆಲ್ಲಿಯ ಸುಖವೆಂದು ಪರಿಭಾವಿಸುತ್ತಾ ಅಂತರ್‌ಮುಖವಾಗುತ್ತದೆ. ಸುವಿಚಾರದ ಕಣ್ದೆರೆದು ನೋಡಿದಾಗ ಸ್ವಸ್ವರೂಪದ ಅರಿವು ಅನುಭವಕ್ಕೆ ಬರುತ್ತದೆ. ಲಿಂಗ ಸುಖದ ಸುಗ್ಗಿಯೂ ಮೀರೆದಪ್ಪದ ಸ್ವಾನುಭಾವದ ಸುಖಸಮುದ್ರದಲ್ಲಿ ಓಲಾಡುತ್ತಾನೆ; ಕೂಡಲ ಚನ್ನಸಂಗಯ್ಯನೇ ತಾನಾಗಿ ಪರಿಣಮಿಸುತ್ತಾನೆ. ಈ ಅನುಭಾವದ ಒಳನೋಟವನ್ನು ಕುರಿತ ವಿವಿಧಸ್ತರಗಳನ್ನೂ ಇನ್ನೂ ಅನೇಕ ವಚನಗಳಲ್ಲಿ ಪರಿಣಾಮಕಾರಿಯಾಗಿ ಪ್ರತಿಬಿಂಬಿಸುತ್ತವೆ ಚನ್ನಬಸವಣ್ಣನ ವಚನಗಳು. ಉದಾಹರಣೆಗಳನ್ನು ಬೆಳೆಸುವ ಅಗತ್ಯವಿಲ್ಲ.

ಈ ಅನುಭಾವದ ಎಲ್ಲ ಹಂತಗಳನ್ನೂ ಏರಿನಿಂತ ನಿಷ್ಪತ್ತಿ
ಸೀಮೆಯ ಮೀರಿದ ನಿಸ್ಸೀಮ, ಗಮನವಿಲ್ಲದ ಗಮ್ಯ
ನುಡಿಯುಡುಗಿದ ನಿಶ್ಶಬ್ದ, ಪರವನರಿಯದ ಪರಿಣಾಮಿ
ಕೂಡಲ ಚನ್ನಸಂಗನ ಶರಣ ಪ್ರಭುದೇವರಿಗೆ ನಮೋ ನಮೋ
ಎನುತಿರ್ದೆನು (೧೩೭೮)

ಎನ್ನುವ ಈ ಮಾತುಗಳು ಭಾಷೆಯ ಸಾಧ್ಯತೆಯನ್ನು ಹೆಚ್ಚಿಸಿವೆ. "ಕಂಗಳ ನೋಟ, ಕರಸ್ಥಲದ ಪ್ರಾಣ, ಮನದೊಳಗೆ ಪರಿಣಾಮವ ತೋರುತಿದೆ ನೋಡಾ! ನಡೆದಡೆ ಹೆಜ್ಜೆಯಿಲ್ಲ, ನಿಂದಡೆ ನೆಳಲಿಲ್ಲ, ಸುಳುಹಿನೊಳಗೊಂದು ಅತಿಶಯದ ಸುಳುಹು ನೋಡಾ!" ಎಂಬ ಮಾತುಗಳೂ ಅನುಭವವನ್ನು ಅನುರಣನಗೊಳಿಸುತ್ತವೆ.

ಹೀಗೆ ನೇರವಾದ ಸರಳವಾದ ಮಾತುಗಳಲ್ಲಿ ವಿಶಿಷ್ಟ ಅನುಭವದ ಅಭಿವ್ಯಕ್ತಿಯ ಎಲ್ಲ ಸಾಧ್ಯತೆಗಳನ್ನು ಬಳಸಿಕೊಂಡಿರುವಂತೆ, ಕೆಲವು ವೇಳೆ ಸಾಂಕೇತಿಕ ಪರಿಭಾಷೆಯ ಬೆಡಗಿನ ವಚನಗಳ ರಚನೆಯನ್ನು ಕಾಣಬಹುದು. ಈ ಪ್ರಯೋಗದಲ್ಲಿ ಅಲ್ಲಮಪ್ರಭುವಿನದು ಅತ್ಯದ್ಭುತ ಸಾಧನೆ. ಬಹುಶಃ ಇನ್ನಾವ ಶರಣರ ಬೆಡಗಿನ ವಚನಗಳೂ ಆ ಮಟ್ಟಕ್ಕೇರಲಾರವು. ಈ ಮಾತು ಚನ್ನಬಸವಣ್ಣನಿಗೂ ಅನ್ವಯಿಸುತ್ತದೆ. ಆತನ ಬೆಡಗಿನ ವಚನಗಳು ಸಂಖ್ಯೆಯ ದೃಷ್ಟಿಯಿಂದ ಕಡಿಮೆ. ಪ್ರಯೋಗದ ದೃಷ್ಟಿಯಿಂದ ಪರಿಮಿತ; ಆದರೂ ಕೆಲವು ಬೆಡಗಿನ ವಚನಗಳು ಮಾದರಿಯ ವಚನಗಳಲ್ಲಿ ವಿಶಿಷ್ಟವಾಗಿ ನಿಲ್ಲುವಂತಿದೆ. ಮಾದರಿಗಾಗಿ ಈ ಒಂದು ವಚನವನ್ನು ನೋಡಬಹುದು:

ಶರಣ ಸತ್ತರೆ ಭಕ್ತರು ಹೊತ್ತರು, ಭಕ್ತಾದಿಗಳತ್ತರಲ್ಲಾ!
ಸುತ್ತಲಿದ್ದ ಜಂಗಮರೆಲ್ಲಾ ಕಿಚ್ಚಹಿಡಿದರು
ಊರೊಳಗಿದ್ದವರೊಂಬತ್ತು ಬಾಗಿಲ ತುಂಬಿಕೊಂಡಿದ್ದರು ನೋಡಾ!
ಮರಳಿ ಬಂದು ಬಾಗಿಲ ತೆಗೆದು ನೋಡಿ

ಸತ್ತುದ ಕಂಡು ಅತ್ತರು ಅತ್ತರು ಸತ್ತರೆಂದು
ಸತ್ತವರು ಬಹುದ ಕಂಡು ಅತ್ತವರೆಲ್ಲ ಇತ್ತಲೆಯಾದರು
ಕೂಡಲ ಚನ್ನಸಂಗ ಸತ್ತು ಸಯವಾದ (೧೪೦೬)

ಸತ್ತರು ಮತ್ತು ಅತ್ತರು ಎನ್ನುವುದನ್ನು ಆಂತರಿಕ ಅನುಭವದ ಅನೇಕ ಸ್ತರಗಳಲ್ಲಿ ಬಳಸುತ್ತಾ ಕೊನೆಯಲ್ಲಿ ಸತ್ತು 'ಸಯ'ವಾಗುವ ಅತ್ಯಂತಿಕ ನಿಲವಿಗೆ ತಂದು ನಿಲ್ಲಿಸುತ್ತಾನೆ ಈ ವಚನವನ್ನು. ಇಂತಹ ಬೆಡಗಿನ ವಚನಗಳು ಇನ್ನೂ ಕೆಲವು ಇಲ್ಲಿ ಬರುತ್ತವೆ, ಆದರೆ ಅಲ್ಲಮಪ್ರಭು ಮತ್ತು ಇತರ ಕೆಲವು ವಚನಕಾರರಿಗೆ ಹೋಲಿಸಿದರೆ ಈತನ ಬೆಡಗಿನ ವಚನಗಳು ಸಂಖ್ಯೆಯಲ್ಲಿ ತುಂಬಾ ಕಡಿಮೆಯೆಂದೇ ಹೇಳಬೇಕು.

ನೇರವಾದ ಮಾತುಗಳಿಂದಲೇ ತೀವ್ರವಾದ ಅನುಭವವನ್ನು ತರುವ ಸಾಮರ್ಥ್ಯ ಈತನ ವಚನಗಳಿಗಿದೆ. ಅನುಭವಕ್ಕೆ ಅನುಗುಣವಾಗಿ ಅಭಿವ್ಯಕ್ತಿ ಇಲ್ಲಿ ರೂಪುಗೊಳ್ಳುತ್ತದೆ. ಅನೇಕ ವೇಳೆ ಅನುಭಾವಿಕವಾದ ಒಂದು ಶಬ್ದಚಿತ್ರ ತಾನಾಗಿಯೇ ಮೂಡಿಬರುತ್ತದೆ. ಸುಂದರವಾದ ಕಾವ್ಯಪ್ರತಿಮೆಯಾಗಿ ನಿಲ್ಲುತ್ತದೆ. ಅಂತಹ ಅನೇಕ ವಚನಗಳನ್ನು ಹಿಂದಾಗಲೇ ನೋಡಿದ್ದೇವೆ. ಇಲ್ಲಿ ಇನ್ನೊಂದು ವಚನವನ್ನು ಉದಾಹರಿಸಬಹುದು. ಗುರು ತನ್ನ ಸಾಧನೆಯ ಶಕ್ತಿಯನ್ನು ಶಿಷ್ಯನಿಗೆ ಧಾರೆಯೆರೆದು ಆತನನ್ನು ತನ್ನಂತೆ ಪರಿವರ್ತಿಸುತ್ತಾನೆಂಬುದನ್ನು ಅರ್ಥವತ್ತಾಗಿ ಮತ್ತು ಚಿತ್ರವತ್ತಾಗಿ ಹೀಗೆ ಹೇಳುತ್ತಾನೆ:

ಆಚಾರವೆಂಬ ಬಿಲ್ಲಿಗೆ ವಿಚಾರವೆಂಬ ನಾರಿ
ಸಮತೆಯೆಂಬ ತಿರುವು ಮೆಟ್ಟಿ ಜೇವಡೆಗೈದು
ಶಿಷ್ಯನೆಂಬ ಅಂಬ ತೊಡಚಿ, ಗುರುವೆಂಬ ವ್ಯಾಧನು
ಲಿಂಗವೆಂಬ ಬಯಲ ಗುರಿಯನೆಚ್ಚಡೆ
ಗರಿದೋರದಂತೆ ಮುಳುಗಿಯಡಗಿತ್ತು
ಆ ಗುರಿಯನು ಬಾಣವನು ಅರಸಲುಂಟೆ
ಕೂಡಲ ಚನ್ನಸಂಗಾ ನಿಮ್ಮಲ್ಲಿ? (೧೪೫೧)

ಇಂತಹ ವಚನಗಳ ಸರಮಾಲೆಯನ್ನೇ ಕಾಣಬಹುದು. ಇದೇ ಸಂದರ್ಭದಲ್ಲಿ ಬರುವ 'ಮನೆಯೊಳಗಣ ಕಿಚ್ಚು ಕಾನನವ ಸುಟ್ಟಿತ್ತು. ಕಾನನ ಬೆಂದಲ್ಲಿ ಮನೆ ಉರಿಯ ಹತ್ತಿತ್ತು. ಈ ವಚನವನ್ನು ಹಿಂದಾಗಲೇ ನೋಡಲಾಗಿದೆ. ಗುರು ಶಿಷ್ಯ ಸಂಬಂಧವನ್ನೇ ಕುರಿತು ಇನ್ನೊಂದು ಪ್ರಾಣೇಂದ್ರಿಯದ ಮೂಲಕ ಸುಪರಿಮಳ ದ್ರವ್ಯಗಳ ರುಚಿಯಿಂದ ಆಂತರಿಕ ತೃಪ್ತಿಯನ್ನು ಪಡೆದು 'ಸುಗಂಧ ಪ್ರಸಾದ'ದ ಆಸ್ವಾದನೆಯ ಆನಂದದಲ್ಲಿ ಲೀನವಾಗುತ್ತದೆ. ಹೀಗೆ ಹಂತಹಂತವಾಗಿ ಸಾಧನೆ ಅಂತರ್ಮುಖವಾಗುತ್ತಾ ಬೆಳೆಯುವುದನ್ನು ಒಂದು ವಿಶಿಷ್ಟವಾದ ರೀತಿಯಲ್ಲಿ ಚಿತ್ರೀಕರಿಸಿದ್ದಾನೆ. ಅಂತರನುಭವದ ನಿರೂಪಣೆಗೆ ಭಾಷೆಯನ್ನು ಬಳಸಿಕೊಳ್ಳುವ ಒಂದು ಬಗೆಯನ್ನು ಇಲ್ಲಿ ಗುರುತಿಸಬಹುದಾಗಿದೆ. ಇದೇ ಅನುಭವವನ್ನು ಇನ್ನೂ ಸರಳವಾದ ರೀತಿಯಲ್ಲಿ ಧ್ವನಿಪೂರ್ಣವಾಗಿ ಇನ್ನೊಂದು ವಚನದಲ್ಲಿ ಹೀಗೆ ಹೇಳಿದ್ದಾನೆ;

ಅಂಗದಲಿ ಗುರುಲಿಪಿಯ ತಿಳಿಯಬೇಕು;
ಮನದಲ್ಲಿ ಲಿಂಗಲಿಪಿಯ ತಿಳಿಯಬೇಕು;
ಜೀವದಲ್ಲಿ ಜಂಗಮಲಿಪಿಯ ತಿಳಿಯಬೇಕು;
ಪ್ರಾಣದಲ್ಲಿ ಪ್ರಸಾದ ಲಿಪಿಯ ತಿಳಿಯಬೇಕು;

ಈ ಚತುರ್ವಿದವೇಕವಾದ ಅನುಭವ ಲಿಪಿಯ ತಿಳಿದು ನೋಡಲು
ಮಹಾಲಿಂಗಲಿಪಿ ಕಾಣಬಂದಿತ್ತು
ಆ ಮಹಾಲಿಂಗಲಿಪಿಯ ಮುಟ್ಟಿದ ಸುಜ್ಞಾನಿ
ಬಚ್ಚಬರಿಯ ನಿರಾಳ ನೀನೇ ಕೂಡಲ ಚನ್ನಸಂಗಮದೇವಾ (೩೪೮)

ಗುರುಲಿಂಗ ಜಂಗಮ ಪ್ರಸಾದ ಲಿಪಿಗಳನ್ನು ಅನುಭವಲಿಪಿಯಿಂದ ತಿಳಿದು ನೋಡಿದಾಗ ಮಹಾಲಿಂಗಲಿಪಿ ಕಾಣಬರುತ್ತದೆಂದೂ ಮತ್ತು ಅದನ್ನು ಮುಟ್ಟಿದ ಸುಜ್ಞಾನಿ ಬಚ್ಚಬರಿಯ ನಿರಾಳನಾಗುತ್ತಾನೆಂದೂ ಹೇಳುವ ಈ ಮಾತುಗಳು ಅನುಭವದ ತುತ್ತತುದಿಯತ್ತ ಮನಸ್ಸನ್ನು ಉನ್ಮುಖಗೊಳಿಸುತ್ತವೆ.

ಹೀಗೆ ಅಂತರಂಗದ ಲಿಪಿ ರಹಸ್ಯವನ್ನು ಅರಿಯಬಲ್ಲವನು ಮಾತ್ರ ಹಂತಹಂತವಾಗಿ ಸಾಧನೆಯಲ್ಲಿ ಮೇಲೇರುತ್ತಾ ಹೋಗುತ್ತಾನೆ, ಅದಿಲ್ಲದವನ ಸಾಧನೆಯನ್ನು ಕೇವಲ ಲಾಂಛನದ ಆಡಂಬರವೆಂದು ಹಲವು ಮಾತುಗಳಲ್ಲಿ ಮತ್ತೆ ಮತ್ತೆ ಖಂಡಿಸುತ್ತಾನೆ. ಅಂತಹವರು ಧಾರ್ಮಿಕ ಸಾಧನೆಗಳನ್ನು ಯಾಂತ್ರಿಕವಾಗಿ ಮಾಡುತ್ತಾರೆ. ಆದರೆ ಅನುಭವವನ್ನು ಆಸ್ವಾದಿಸುವುದಿಲ್ಲ. "ಕಬ್ಬನಗಿದ ಗಾಣ ಬಲ್ಲುದೆ ಹಾಲ ಸವಿಯ? ಗಗನದಲಾಡುವ ಪಕ್ಷಿ ಬಲ್ಲುದೆ ರವಿಯ ನಿಲವ?" ಎಂದು ಅಂತಹವರನ್ನು ಕುರಿತು ಕೇಳುತ್ತಾನೆ. "ಆನೆಯನೇರಿದ ಮಾವಟಿಗ ಚಕ್ರೇಶ್ವರನಾಗಬಲ್ಲನೆ ಅಯ್ಯಾ?" ಎಂದು ವಿಡಂಬಿಸುತ್ತಾನೆ. "ಗುರು ಲಿಂಗ ಜಂಗಮವ ಪೂಜಿಸಿ ಬರಿಸಾವ ಸಾವಡೆಯನ್ನು ತ್ರಿವಿಧ ದಾಸೋಹ ತಂದುಕೊಡಬೇಕೆಂಬುದನ್ನು ಸೂಚಿಸುತ್ತಾನೆ. ಈ ಸಾಧನೆಗೆ ಸಾಧಕವಾಗುವಂತಹ ಶರಣರ ಅನುಭಾವದ ನುಡಿಗಳ ಮಹತ್ವವನ್ನು ಮನ ಮುಟ್ಟುವಂತೆ ನಿರೂಪಿಸುತ್ತಾನೆ. ಈ ಒಂದು ವಚನವನ್ನು ನೋಡಬಹುದು:

ಪಾತಾಳದಗ್ಗವಣಿಯ ನೇಣಿಲ್ಲದೆ ತೆಗೆಯಬಹುದೆ;
ಸೋಪಾನದ ಬಲದಿಂದಲ್ಲದೆ?
ಶಬ್ದ ಸೋಪಾನದ ಬಲದಿಂದ ನಿಶ್ಶಬ್ದ ಸೋಪಾನವ ಕಟ್ಟಿ
ನಡೆಸಿದವರು ನಮ್ಮ ಪುರಾತನರು;
ದೇವಲೋಕಕ್ಕೆ ಬಟ್ಟೆ ಕಾಣಿರೊ!
ಮರ್ತ್ಯರ ಮನದ ಮೈಲಿಗೆಯ ಕಳೆಯಲೆಂದು
ಗೀತ ಮಾತೆಂಬ ಜ್ಯೋತಿಯ ಬೆಳಗಿಟ್ಟರು,
ಕೂಡಲ ಚನ್ನಸಂಗಯ್ಯಾ ನಮ್ಮ ಶರಣರು (೬೮೭)

ಶಬ್ದಸೋಪಾನದ ಬಲದಿಂದ ನಿಶ್ಶಬ್ಧ ಸೋಪಾನವನ್ನು ಕಟ್ಟಿ ಆಳವಾದ ಆಂತರಿಕ ಸಾಧನೆಯಿಂದ ಅನುಭಾವದ ಅಮೃತರಸವನ್ನು ನೇಣಿಲ್ಲದೆ ಮೇಲೆ ತಂದವರು ಶರಣರು. ಅವರ ಮಾತುಗಳು ಅಮರತ್ವಕ್ಕೆ ಕಟ್ಟಿದ ಸೇತುವೆಗಳು: ಮನದ ಮೈಲಿಗೆಯನ್ನು ಕಳೆದು ಮುಟ್ಟಿದುದನ್ನು ಬೆಳಗುವ ಮಾತೆಂಬ ಜ್ಯೋತಿಯ ಬೆಳಕಿನ ಕಂಬಗಳು ಎಂಬ ಈ ಮಾತುಗಳು, ಮಾತಿಗೆ ಮೀರಿದ ಅನುಭವವನ್ನು ತಂದುಕೊಡುತ್ತವೆ. ಇನ್ನೊಂದು ಕಡೆ 'ಜ್ಞಾನದೀಪ್ತಿಯ ಬೆಳಗುವ ತೈಲವಾವುದೆಂದಡೆ ಶಿವಶರಣರ ನುಡಿಗಡಣದ ಒಸರು. ಆ ಒಸರಿಂಗಲ್ಲದೆ ಜ್ಞಾನಪ್ರಕಾಶವಿಲ್ಲ' ಎಂದು ಅನುಭಾವಿಗಳ ಮಾತಿನ ಮಹತ್ವವನ್ನು ಸೂಚಿಸುತ್ತಾನೆ.

ಇನ್ನು ತಾನೇ ನೇರವಾಗಿ ಅನುಭಾವದ ನಿಲವನ್ನು ಹೇಳುವಾಗ ಈತನ ಮಾತುಗಳು ಅನೇಕ ವೇಳೆ ಜ್ಯೋತಿರ್ಲಿಂಗದ ಪ್ರಕಾಶವನ್ನು ಪಡೆಯುತ್ತವೆ. ಅದನ್ನು ನೋಡುವಾಗ

ಹಿಂದೆಯೇ ಅಂತಹ ವಚನಗಳನ್ನು ಗಮನಿಸಿದ್ದೇವೆ. ಅವುಗಳನ್ನು ಸ್ಮರಿಸಿಕೊಂಡು ಇಲ್ಲಿ ಇನ್ನೂ ಕೆಲವು ವಚನಗಳನ್ನು ಉದಾಹರಿಸಬಹುದು:

ನಚ್ಚು ಮಚ್ಚು ಮನದಲಚ್ಚೊತ್ತಿದಂತಿದ್ದಿತ್ತು
ಲಿಂಗವನ್ನದು ಜಂಗಮವೆನ್ನದು ಪ್ರಸಾದವೆನ್ನದು,
ಅದು ತಾನಾಗಿ ತಾನಾಗಿ ತಾನೆ ಭರಿತ
ಕೂಡಲ ಚನ್ನಸಂಗಯ್ಯಾ ಲಿಂಗೈಕ್ಯವು (೧೦೭೨)

ಎಂಬ ವಚನ ತಾನು ತಾನಾದ ಲಿಂಗೈಕ್ಯ ಸ್ಥಿತಿಯನ್ನು ಸರಳವಾದ ಮಾತುಗಳಲ್ಲಿ ಸೂಚ್ಯವಾಗಿ ನಿರೂಪಿಸುತ್ತಿದೆ. ಪ್ರಾಣಲಿಂಗಿ ಸ್ಥಲದಲ್ಲಿ ಇಂತಹ ಅನೇಕ ವಚನಗಳು ಬರುತ್ತವೆ. 'ಬೆಳಗಿನೊಳಗಣ ಮಹಾ ಬೆಳಗು. ಶಿವಶಿವಾ ಪರಮಾಶ್ರಯವೆ ತಾನಾಗಿ, ಶತಪತ್ರ ಕಮಲ ಕರ್ಣಿಕಾ ಮಧ್ಯದಲ್ಲಿ ಸ್ವತಃ ಸಿದ್ಧನಾಗಿಪ್ಪ ನಮ್ಮ ಕೂಡಲ ಚನ್ನಸಂಗಮದೇವ' ಎಂಬಂತಹ ಮಾತುಗಳಲ್ಲಿ ಯೋಗಸಾಧನೆಯ ಆಂತರಿಕ ಪರಿಣಾಮ ಪ್ರತಿಬಿಂಬಿತವಾಗಿದೆ. ಅನಿರ್ವಚನೀಯವಾದ ಯೌಗಿಕಾನುಭವದ ತುತ್ತತುದಿಯನ್ನು ವಚನದಲ್ಲಿ ಹಿಡಿದಿಡುವ ಆ ಶಕ್ತಿ ಅನುಭಾವಿ ಕವಿಯನ್ನಾಗಿಸಿದೆ ಚೆನ್ನಬಸವಣ್ಣನನ್ನು.

ಕಂಗಳಂಗದಲ್ಲಿ ಲಿಂಗವು ಅನುಮಿಷವಾಗಿಹುದೆ ಕಾಯವು
ಶ್ರೋತ್ರ ಸೊಗಸಿನ ಘನಾನುಭಾವದಲ್ಲಿಪ್ಪುದೇ ಕಾಯವು
ಮನಃಪ್ರಾಣ ಸಂಯೋಗದಿಂದ ಕೂಡಲ ಚನ್ನಸಂಗಯ್ಯನಲ್ಲಿ
ನಿಜವಾಗಿಪ್ಪುದೆ ಶರಣ ಕಾಯವು (೧೦೫೭)

ಎಂಬಂತಹ ಅನೇಕ ವಚನಗಳನ್ನು ಇಲ್ಲಿ ಉದಾಹರಿಸಬಹುದು. ಇನ್ನೊಂದು ವಚನ ಯಾವ ಅಲಂಕಾರವೂ ಇಲ್ಲದ ಅತಿ ಸಹಜವಾದ ನೇರ ನಿರೂಪಣೆಯಲ್ಲಿಯೇ ಅಂತರಂಗದ ಕಡೆಗೆ ತಿರುಗಿ ಸ್ವಾನುಭವದ ಸುಖದ ಸಾಗರದಲ್ಲಿ ಮುಳುಗಿದ ಶಬ್ದಚಿತ್ರವನ್ನು ಕೊಡುತ್ತದೆ.

ಹೊರಗನೆ ಹಾರೈಸಿ ಹೊರಗಣ ಸದಾಚಾರ ಕ್ರಿಯೆಗಳ
ಮನಮುಟ್ಟಿ ಮಾಡುತಿರಲು
ಇದೆಲ್ಲಿಯ ಹೊರಗಣ ಸುಖವೆಂದು
ಸುವಿಚಾರ ಕಣ್ದೆರೆದು ನೋಡಲು
ಕನ್ನಡಿಯೊಳಗಣ ರೂಪು ತಾನೆಂದರಿವಂತೆ
ಮೆಲ್ಲಮೆಲ್ಲನೆ ಒಳಗೆ ಅಡಗಿತ್ತಯ್ಯಾ

ಗಂಗಾನದಿಯಲ್ಲಿರ್ದಡೇನು; ಪಾಷಾಣ ಮೃದುವಾಗಬಲ್ಲುದೆ?" ಎಂದು ಮುಂತಾಗಿ ಕೇಳುತ್ತಾ ಶರಣ ಸನ್ನಿಧಿಯಲ್ಲಿದ್ದರೂ ಅಸಜ್ಜನನು ಸದ್ಭಕ್ತನಾಗಲಾರನೆಂಬುದನ್ನು ಸ್ಪಷ್ಟಪಡಿಸುತ್ತಾನೆ. ಅಂತಹವರು ಲಿಂಗವನ್ನು ಕಟ್ಟಿದರೂ ಅದು ವ್ಯರ್ಥವೆಂಬ ಅರಿವನ್ನು "ಮಡಿಲ ಸುತ್ತಿದ ಹಾವಿನಂತೆ ಮಡಿಲಲ್ಲಿ ಕಟ್ಟಿದಡೇನು?" ಎಂಬಂತಹ ಸಾದೃಶ್ಯಗಳಿಂದ ಜಾಗ್ರತಗೊಳಿಸುತ್ತಾನೆ.

ಅನೇಕವೇಳೆ ಚನ್ನಬಸವಣ್ಣನ ನೇರವಾದ ಮತ್ತು ಸರಳವಾದ ಮಾತು ಎಷ್ಟು ಪರಿಣಾಮಕಾರಿ ಯಾಗಬಲ್ಲುದೆಂಬುದಕ್ಕೆ ಈ ವಚನವನ್ನು ನೋಡಬಹುದು:

ಮಂಡೆ ಮಾಸಿದಡೆ ಮಹಾಮಜ್ಜನವ ಮಾಡುವುದು;
ವಸ್ತ್ರಮಾಸಿದಡೆ ಮಡಿವಾಳರಿಗಿಕ್ಕುವುದು;
ಮನದ ಮೈಲಿಗೆ ತೊಳೆಯಬೇಕಾದಡೆ
ಕೂಡಲ ಚನ್ನಸಂಗಯ್ಯನ ಶರಣರ ಅನುಭಾವವ ಮಾಡುವುದು (೧೦೩)

ತಲೆ ಕೊಳೆಯಾದರೆ ನೀರು ಹಾಕಿ ಅದನ್ನು ತೊಳೆಯಬಹುದು; ಬಟ್ಟೆ ಮಾಸಿದರೆ ಅಗಸರಿಗೆ ಕೊಟ್ಟು ಅದನ್ನು ತೊಳೆಸಬಹುದು. ಆದರೆ ಮನಸ್ಸಿನ ಮೈಲಿಗೆಯನ್ನು ತೊಳೆಯುವುದು ಇಷ್ಟು ಸುಲಭವಲ್ಲ. ಶರಣರ ಅನುಭಾವದಿಂದ ಮಾತ್ರ ಮನಸ್ಸಿನ ಕೊಳೆಯನ್ನು ತೊಳೆದು ಅದನ್ನು ಮಡಿಮಾಡಬಹುದೆನ್ನುವ ಈ ವಚನ, ಅಲಂಕಾರರಹಿತವಾದ ನೇರವಾದ ಮಾತು ಕೂಡಾ ಹೇಗೆ ಕಾವ್ಯವಾಗಬಹುದೆಂಬುದಕ್ಕೆ ಒಳ್ಳೆಯ ಉದಾಹರಣೆಯಾಗಿದೆ. ಹಾಗೆಯೇ "ಬೇಡುವಾತ ಕರ್ತನಲ್ಲ, ಮಾಡುವಾತ ಭಕ್ತನಲ್ಲ; ಬೇಡಬೇಕು ನೋಯದಂತೆ: ಮಾಡಬೇಕು ಮರುಗದಂತೆ" ಎಂಬಂತಹ ಮಾತುಗಳಲ್ಲಿಯೂ ಇಂತಹ ನೇರವಾದ ಪರಿಣಾಮ ಕಾಣುತ್ತದೆ. ಭಕ್ತಿಯ ಒರೆಗಲ್ಲು. ಅದು ತಂದುಕೊಡುವ ಆಂತರಿಕ ನಿಲವಿನಲ್ಲಿದೆ. ಇದನ್ನು ಸ್ಪಷ್ಟಪಡಿಸುವುದಕ್ಕಾಗಿ ಆತ ಹೇಳುವ ಮಾತುಗಳು ಇವು:

ಆರಂಬವ ಮಾಡಿ ಸಂಸಾರಸ್ಥಿತಿ ಕಳೆಯದಿದ್ದಡೆ
ಆ ಆರಂಬವೇ ಕೇಡು
ವ್ಯವಹಾರವ ಮಾಡಿ ಸಂಸಾರಸ್ಥಿತಿ ಕಳೆಯದಿದ್ದಡೆ
ಆ ವ್ಯವಹಾರವೇ ಕೇಡು
ಓಲಗವ ಮಾಡಿ ಸಂಸಾರಸ್ಥಿತಿ ಕಳೆಯದಿದ್ದಡೆ
ಆ ಓಲಗವೇ ಕೇಡು
ಭಕ್ತಿಯ ಮಾಡಿ ಜನನ ಮರಣ ವಿರಹಿತನಾಗದಿದ್ದಡೆ
ಆ ಭಕ್ತಿಯೇ ಕೇಡು ಕೂಡಲ ಚನ್ನಸಂಗಮದೇವಾ (೧೨೧)

ವ್ಯವಸಾಯ ವ್ಯಾಪಾರ ಅಥವಾ ಪರಸೇವೆ (ಓಲಗ) ಇವುಗಳನ್ನು ಮಾಡಿಯೂ ಸಂಸಾರದ ಸ್ಥಿತಿಯನ್ನು ಸುಗಮಗೊಳಿಸಲಾಗದಿದ್ದರೆ ಅವುಗಳನ್ನು ಮಾಡಿದುದೇ ವ್ಯರ್ಥ. ಹಾಗೆಯೇ ಭಕ್ತಿಯ ಫಲ ಜನನ ಮರಣ ವಿರಹಿತವಾಗುವುದು. ಅದನ್ನು ಸಾಧಿಸಲಾಗದ ಭಕ್ತಿ ಕೇವಲ ಆಡಂಬರದ ಪ್ರದರ್ಶನವಾಗುತ್ತದೆ. "ಬೆಲ್ಲದ ನೀರೆರೆದಡೇನು ಬೇವು ಸಿಹಿಯಪ್ಪುದೇ" ಎಂಬಂತೆ ಅದು ಅನುಭಾವದ ಸಿಹಿಯನ್ನು ಪಡೆಯದೆ ಬೇವಾಗಿಯೇ ಉಳಿಯುತ್ತದೆ.

ಮಾನವ ಜನ್ಮದ ಬೆಲೆ ಇರುವುದು ಈ ಅಂತರನುಭವದ ಅಂತರ್ ದೃಷ್ಟಿಯನ್ನು ಪಡೆಯುವುದರಲ್ಲಿ ಮತ್ತು ಅಂತಹ ಸಾಧಕರ ಬರವನ್ನು ಅರಿತು ಅವರ ಒಡನಾಟದಿಂದ ತನ್ನ ಶಕ್ತಿಯನ್ನು ಬೆಳೆಸಿಕೊಳ್ಳುವುದರಲ್ಲಿ. ಇದನ್ನು ಮರೆತರೆ ಪ್ರಾಣಿಗಳಿಗಿಂತ ಮಾನವ ಜನ್ಮ ಕೀಳಾಗುತ್ತದೆಂಬುದನ್ನು ಮೂರು ಪ್ರಾಣಿಗಳ ಉದಾಹರಣೆಯನ್ನು ತೆಗೆದುಕೊಂಡು ಹೇಳುತ್ತಾನೆ.

ಮಧುರದ ಗುಣವ ಇರುವೆ ಬಲ್ಲುದು
ವೇಳೆಯ ಗುಣವ ಕೋಳಿ ಬಲ್ಲುದು
ಗೋತ್ರದ ಗುಣವ ಕಾಗೆ ಬಲ್ಲುದು
ಈ ಮನುಷ್ಯ ಜನ್ಮದಲ್ಲಿ ಹುಟ್ಟಿ
ಶಿವಜ್ಞಾನಿಗಳ ಬರವನರಿಯದಿಪ್ಪಡೆ
ಆ ಕೋಳಿ ಕಾಗೆ ಇರುವೆಗಿಂತಲೂ
ಕರಕಷ್ಟ ಕಾಣಾ ಕೂಡಲ ಸಂಗಮದೇವಾ (೨೨೭)

ಕೆಲವು ಪ್ರಾಣಿಗಳ ಐಂದ್ರಿಕಶಕ್ತಿ ಮನುಷ್ಯನ ಇಂದ್ರಿಯಗಳ ಶಕ್ತಿಗಿಂತ ಮಿಗಿಲಾದುದು. ಹದ್ದಿನ ಕಣ್ಣು, ನಾಯಿಯ ಘ್ರಾಣಶಕ್ತಿ ಈ ಮೊದಲಾದವು ಪ್ರಸಿದ್ಧವಾದುವು. ಇಲ್ಲಿ ಚನ್ನಬಸವಣ್ಣ

ಬೇರೆ ಮೂರು ಉದಾಹರಣೆಗಳನ್ನು ಆರಿಸಿಕೊಂಡಿದ್ದಾನೆ. ಮಾಧುರ್ಯ ಅಂದರೆ ಸಿಹಿಯ ಸುಳುಹನ್ನು ಇರುವೆ ತಿಳಿಯಬಲ್ಲುದು ಎಂಬುದನ್ನು ಗಮನಿಸಬಹುದು. ಎಲ್ಲಿ ಒಂದಿಷ್ಟು ಸಿಹಿ ಇದ್ದರೂ ಅದನ್ನು ಅದು ಹೇಗೋ ಗ್ರಹಿಸಿ ಇರುವೆಗಳು ಅಲ್ಲಿ ಹಾಜರಾಗುತ್ತವೆ. ಮರದ ತುದಿಯಲ್ಲಿದ್ದರೂ ಸೈ. ಅಲ್ಲಿಗೆ ಬುಡದಿಂದ ಇರುವೆಗಳ ಯಾತ್ರೆ ಹೊರಡುತ್ತದೆ. ಮುಂಜಾವಿನ ಬೆಳ್ಳಿ ಮೂಡುವ ಮೊದಲ ಸೂಚನೆಯನ್ನು ತಟ್ಟನೆ ಗ್ರಹಿಸಿ ಲೋಕಕ್ಕೆ ಅದನ್ನು ಸಾರುತ್ತದೆ ಕೋಳಿ. ಕಾಗೆ ಒಂದಗುಳ ಕಂಡರೆ ತನ್ನ ಗೋತ್ರ ಅಂದರೆ ಬಳಗವೆಲ್ಲವನ್ನೂ ಕೂಗಿ ಕರೆಯುತ್ತದೆ. ಹಾಗೆ ಅನುಭಾವಿಗಳನ್ನು ಗಮನಿಸಿ ಅವರ ಬಳಿಗೈದದೇ ಇರುವ, ಅವರ ಬರವನ್ನು ಘೋಷಿಸದೇ ಇರುವ ಅವರ ಬರವಿನಿಂದ ಉಕ್ಕೇರಿ ಭಕ್ತರ ಬಳಗವನ್ನು ಕರೆಯದೇ ಇರುವ ಮಾನವಜನ್ಮ ಈ ಪ್ರಾಣಿಜನ್ಮಕ್ಕಿಂತ ಕೀಳಾಗುತ್ತದೆಂಬ ಮಾತು ಓದುಗರ ಮನಸ್ಸನ್ನು ಮುಟ್ಟುತ್ತದೆ.

ಇನ್ನೊಂದು ವಚನದಲ್ಲಿ ಭಕ್ತಿಸಾಧನೆಯ ಒಂದು ಅನುಭಾವಿಕ ಚಿತ್ರವನ್ನು ಸೂಚ್ಯವಾದ ಕೆಲವು ಮಾತುಗಳಲ್ಲಿ ನಿರೂಪಿಸಿದ್ದಾನೆ. ಆ ಚಿತ್ರ ಹೀಗಿದೆ:

ಭಕ್ತಂಗೆ ಪೃಥ್ವಿಯೆ ಅಂಗ, ಆ ಅಂಗಕ್ಕೆ ಸುಚಿತ್ತವೇ ಹಸ್ತ,
ಆ ಹಸ್ತಕ್ಕೆ ಕರ್ಮ ಸಾದಾಖ್ಯ, ಆ ಸಾದಾಖ್ಯಕ್ಕೆ ಕ್ರಿಯಾಶಕ್ತಿ
ಆ ಶಕ್ತಿಗೆ ಆಚಾರಲಿಂಗ, ಆ ಲಿಂಗಕ್ಕೆ ನಿವೃತ್ತಿಕಲೆ,
ಆ ಕಲೆಗೆ ಘ್ರಾಣೇಂದ್ರಿಯವೇ ಮುಖ;
ಆ ಮುಖಕ್ಕೆ ಸುಪರಿಮಳದ್ರವ್ಯಂಗಳನು
ರುಚಿ ತೃಪ್ತಿಯನರಿದು ಸದ್ಭಕ್ತಿಯಿಂದರ್ಪಿಸಿ
ಸುಗಂಧ ಪ್ರಸಾದವ ಭೋಗಿಸಿ ಸುಖಿಸುತ್ತಿಹನು
ಕೂಡಲ ಚನ್ನಸಂಗಾ ನಿಮ್ಮ ಭಕ್ತನು (೨೬೧)

ಪೃಥ್ವಿತತ್ತ್ವ ಪ್ರಧಾನವಾದ ಭಕ್ತನ ಈ ದೇಹಕ್ಕೆ, ಸುಚಿತ್ತವೇ ಕ್ರಿಯಾತ್ಮಕಾದ ಕೈಗಳು ಕರ್ಮ ರೂಪವಾದ ಸಾದಾಖ್ಯತತ್ವಗಳ ಜೊತೆಯಲ್ಲಿ ಕ್ರಿಯಾಶಕ್ತಿ ಸಂಗತಗೊಂಡು, ಸುಚಿತ್ತವೆಂಬ ಆ ಕೈಗಳಿಗೆ ಚಲನಶೀಲ ಚೈತನ್ಯವನ್ನು ತಂದುಕೊಡುತ್ತದೆ. ಅದರಿಂದ ಆಚಾರಲಿಂಗ ಅಂದರೆ ಸರ್ವಾಚಾರ ಸಂಪತ್ತು ಅಳವಡುತ್ತದೆ. ಅದು 'ನಿವೃತ್ತಿಕಲೆ'ಯ ಕಡೆಗೆ ತಿರುಗುತ್ತದೆ.

ವಚನಗಳಿಂದ ಹಿಡಿದು ಐಕ್ಯಸ್ಥಲದ ಅನುಭಾವದ ತುತ್ತತುದಿಯನ್ನು ಹೇಳುವವರೆಗೆ ಈ ಕಾವ್ಯಶಕ್ತಿಯ ಹರಹು ಚಾಚಿದೆ. ಭಾವಕ್ಕೆ ಅನುಗುಣವಾಗಿ ಭಾಷೆಯ ಸೊಗಸು ಸೌಷ್ಠವಗಳು ಮೂಡಿಬರುತ್ತವೆ. ಅನುಭವ ವಾಹಕವಾಗುವಂತೆ ಸಾದೃಶ್ಯಗಳು ಉಪಮಾದಿ ಅಲಂಕಾರಗಳು ಮೈವೆತ್ತು ಅಭಿವ್ಯಕ್ತಿಯ ಶಕ್ತಿಯನ್ನು ಸಹಜವಾಗಿ ಸಾಧಿಸುತ್ತವೆ.

ಈ ಜಗತ್ತನ್ನು ಶಿವ ಸೃಷ್ಟಿಸಿದ ಲೀಲೆಯೆಂದು ಹೇಳುತ್ತಾ ಅದಕ್ಕೊಂದು ಸಾದೃಶ್ಯವನ್ನು ಕೊಡುತ್ತಾನೆ. 'ಜೇಡರ ಹುಳು ತನ್ನ ಒಡಲಿನಿಂದ ತಾನೆ ನೂಲನ್ನು ನೇಯುವಂತೆ' ಎಂಬ ಈ ಸಾದೃಶ್ಯ ಹೊಸದೇನೂ ಅಲ್ಲ. ಆದರೆ ಆ ಹಳೆಯ ಮಾತನ್ನೇ ಚನ್ನಬಸವಣ್ಣ ಬಳಸಿಕೊಳ್ಳುವ ರೀತಿ ಹೊಸದಾಗಿದೆ. ಈ ಸೃಷ್ಟಿ ಲಯಗಳೆಲ್ಲಾ ಆತನ ಲೀಲೆಯೆಂಬುದನ್ನು ಹೀಗೆ ಹೇಳುತ್ತಾನೆ:

ಕಟಕ ಸೂತ್ರದ ಗೂಡ ಮಾಡಿಕೊಂಡಿಪ್ಪಲ್ಲಿ
ಸೂತ್ರಕೆ ನೂಲನು ಅದೆಲ್ಲಿಂದ ತಂದಿತ್ತು?
ರಾಟೆ ಇಲ್ಲ, ಹಂಜಿ ಇಲ್ಲ

ತನ್ನಲ್ಲಿಯೇ ನೂಲಕಲ್ಪಿಸಿ, ತಾನದ ಮಾಡಿಕೊಂಡೆ
ಅಡಿ ಅಡಗಿಸಿಕೊಂಡು ಹೋಹಂತೆ
ತನ್ನ ಲೀಲೆಗೆ ತಾನೇ ಮಾಡಿಕೊಂಡ ವಿಶ್ವಪ್ರಪಂಚ
ತನ್ನಲ್ಲಿಯೇ ಲಯವನ್ನೈದಿಸಿಕೊಂಡು
ಕೂಡಲ ಚನ್ನಸಂಗಯ್ಯ ನಿರ್ವಯಲಾದನು (೯)

ಎಂಬ ಈ ವಚನ, ಕಟಕ ಅಂದರೆ ಜೇಡರ ಹುಳುವಿನ ಕ್ರಿಯೆಯನ್ನು ಅರ್ಥವತ್ತಾದ ಪ್ರತಿಮೆಯನ್ನಾಗಿಸಿದೆ. ಸೃಷ್ಟಿಗೆ ಪೂರ್ವದ ಆ ಸ್ಥಿತಿಯನ್ನು ಹೇಳುವ ಇನ್ನೂ ಅನೇಕ ವಚನಗಳು ಇಲ್ಲಿ ಬರುತ್ತವೆ. "ಬಯಲು ಮೂರ್ತಿಯಾಗಿ ನಿಂದನೊಬ್ಬ ಶರಣ" ಎಂಬ ಮಾತು ಸೃಷ್ಟಿ ಸಾಕಾರಗೊಂಡು ನಾಮರೂಪ ಕ್ರಿಯಾ ಕಳಾಪವಾಗಿ ಪರಿಣಮಿಸಿದುದನ್ನು ಸೂಚಿಸುತ್ತದೆ. ಮಾಯೆಯ ಮುಸುಗು ಕ್ರಮೇಣ ಬಂದು ಮುಚ್ಚಿದುದನ್ನೂ ಅದು ಮುಂದೆ ಬೆಳೆಯುತ್ತಾ ಆತ್ಮನನ್ನು ಆವರಿಸಿದುದನ್ನೂ ಹೇಳುತ್ತವೆ ಅನೇಕ ವಚನಗಳು.

ಇಲ್ಲಿ ಬಂಧನಕ್ಕೆ ಒಳಗಾದ ಜೀವ ತನ್ನ ಸಹಜ ಸ್ವರೂಪವನ್ನು ಮರೆತು ಮರವೆಯಲ್ಲಿರುವುದನ್ನು ಅತ್ಯಂತ ಪರಿಣಾಮಕಾರಿಯಾಗಿ ಹೇಳಿದ್ದಾನೆ. "ಗುಬ್ಬಿ ಹೆರರ ಮನೆಯ ತನ್ನ ಮನೆಯೆಂಬಂತೆ" ಎಂಬ ಸಾದೃಶ್ಯವಾಗಲೀ, "ಹೆಗ್ಗಣವನಿಕ್ಕಿ ನೆಲಗಟ್ಟ ಕಟ್ಟಿದಂತೆ ಆಯಿತ್ತೆನ್ನ ಕಾಯಗುಣ" ಎಂದು ಅರಿಷಡ್ವರ್ಗಗಳು ತುಂಬಿದ ದೇಹದ ಅಂತರವಲೋಕನವಾಗಲೀ, ನೇರವಾಗಿ ಓದುಗನ ಮನಸ್ಸನ್ನು ಮುಟ್ಟುತ್ತವೆ. ಜೀವರುಗಳನ್ನು ಅಜ್ಞಾನಕ್ಕೆ ಗುರಿಪಡಿಸಿರುವ ಅಂಧಕಾರದ ಪ್ರಭಾವವನ್ನು ಹೀಗೆ ಹೇಳುತ್ತಾನೆ:

ಅಂಧಕಾರವೆಂಬ ಗಹ್ವರದೊಳಗೆ ನಿದ್ರೆಯೆಂಬ ರಾಕ್ಷಸಿ ಗ್ರಹಿಸಿ
ವೀರರ ಹುಚ್ಚುಮಾಡಿ, ಧೀರರ ಧೃತಿಗೆಡಿಸಿ
ನಿಚ್ಚನಿಚ್ಚ ಜೀವನ ನಾಶವಮಾಡುತ್ತಿಹುದು ನೋಡಯ್ಯಾ
ಕೂಡಲ ಚನ್ನಸಂಗಮದೇವಾ (೩೬)

ತಾಮಸ ಗುಣದ ಸಂಕೇತವಾದ ನಿದ್ರೆಯೆಂಬ ರಾಕ್ಷಸಿಯ ಸರ್ವವ್ಯಾಪಕ ಶಕ್ತಿಯನ್ನು ಇದು ಅರ್ಥವತ್ತಾಗಿ ಸೂಚಿಸುತ್ತದೆ. ಇದರಿಂದ ಪಾರಾಗುವ ಸಾಧನೆಯ ಆಂತರಿಕ ತಳಮಳವನ್ನಂತೂ ಇನ್ನೂ ಪರಿಣಾಮಕಾರಿಯಾಗಿ ನಿರೂಪಿಸುತ್ತವೆ, ಅನೇಕ ವಚನಗಳು. ಸಾಧನೆಯ ನಿರೂಪಣೆಯಲ್ಲಿ ಹಿಂದಾಗಲೇ ಅವುಗಳನ್ನು ಗಮನಿಸಿರುವುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಸಾಧನೆಯಲ್ಲಿ ಅಂತರಂಗದ ಶುದ್ಧಿಯ ಮಹತ್ವವನ್ನು ಚನ್ನಬಸವಣ್ಣ ಮತ್ತೆ ಮತ್ತೆ ಪರಿಣಾಮಕಾರಿಯಾಗಿ ಪ್ರತಿಪಾದಿಸಿದ್ದಾನೆ. ಕೇವಲ ಹೊರಗಿನ ವೇಷದಿಂದ ಒಳಗು ಶುದ್ಧವಾಗುವುದಿಲ್ಲವೆಂಬುದನ್ನು ಒಂದು ಕಡೆ ಹೀಗೆ ಹೇಳುತ್ತಾನೆ:

ಸುರೆಯ ಮಡಕೆಗೆ ಹೊರಗೆ ಬೂದಿಯ ಹೂಸಿದಡೇನು
ಒಳಗು ಶುದ್ಧವಾಗಬಲ್ಲುದೆ?
ಗುರುಕಾರುಣ್ಯ ನೆಲೆಗೊಂಡು
ಗುರುಲಿಂಗ ಜಂಗಮ ತ್ರಿವಿಧ ಒಂದೇ ಎಂದು ಕಾಣದನ್ನಕ್ಕರ
ಕೂಡಲ ಚನ್ನಸಂಗಮ ದೇವರಲ್ಲಿ
ಸದಾಚಾರವೆಲ್ಲರಿಗೆ ಸೂರೆಯೆ? (೬೨)

ಎಂಬ ಈ ಮಾತಿನಲ್ಲಿ ಕಾಣುವುದು ಅಂತರಂಗಶುದ್ಧಿಯ ಪಾರಮ್ಯ. ಕೇವಲ ವೇಷ ಲಾಂಛನದಿಂದ ಅಂತರಂಗದ ಬದಲಾವಣೆ ಸಾಧ್ಯವಿಲ್ಲ. "ಕಬ್ಬುನದ ಸೊಣಗನ ತಂದು ಪರುಷವ ಮುಟ್ಟಿಸಲೊಡನೆ ಹೊನ್ನ ಸೊಣಗವಪ್ಪುದಲ್ಲದೆ ಪರುಷವಾಗದು ನೋಡಾ" ಎಂಬ ಮಾತು ತುಂಬಾ ಅರ್ಥವತ್ತಾದುದು. ಸಾಧನೆಯಲ್ಲಿ ಆಗಬೇಕಾದ ಪರಿವರ್ತನೆ, ಕೇವಲ ರೂಪ ಪರಿವರ್ತನೆಯಲ್ಲ, ಕಬ್ಬಿಣದ ನಾಯಿ, ಚಿನ್ನದ ನಾಯಿಯಾದರೆ ಸಾಲದು. ಮೂಲಭೂತವಾಗಿ ಆ ನಾಯಿತನ ಅಳಿಯಬೇಕು. ಅದು ಪರಿವರ್ತಿತವಾಗಿ ಪರುಷವಾಗಬೇಕು –ಎಂಬ ಈ ಮಾತು ಸಾಧನೆಯ ಒಳಹೊರಗುಗಳೆಲ್ಲವನ್ನೂ ಬೆಳಗುತ್ತದೆ. ಶಿವಪಥವನ್ನರಿಯದೆ ಭಕ್ತನ ಸಾಧನೆ "ಆಡಿನ ಕೊರಳಲ್ಲಿ ಮೊಲೆಯಿದ್ದೊಡೇನು, ಅಮೃತವದಕ್ಕುಂಟೆ?" ಎಂಬಂತಾಗುತ್ತದೆಂಬ ಹೋಲಿಕೆಯೂ ಇದನ್ನೇ ಧ್ವನಿಸುತ್ತದೆ.

ಭಕ್ತಿಯನ್ನು ಎಲ್ಲರೂ ಮಾಡುತ್ತಾರೆ. ಆದರೆ ಅದು ಅವರವರ ವ್ಯಕ್ತಿತ್ವದ ಪರಿಮಿತಿಯಿಂದ ಆಯಾ ಬಣ್ಣವನ್ನು ಪಡೆದು ಮೂಲಕಾಂತಿಯನ್ನು ಕಳೆದುಕೊಳ್ಳುತ್ತದೆ. ಇದನ್ನು ಸರಳವಾದ ಈ ವಚನ ಪರಿಣಾಮಕಾರಿಯಾಗಿ ಹೇಳುತ್ತದೆ:

ಅರಸಿನ ಭಕ್ತಿ ಅಹಂಕಾರದಲ್ಲಿ ಹೋಯಿತ್ತು;
ಓಲೆಕಾರನ ಭಕ್ತಿ ಅಲಗಿನ ಮೊನೆಯಲ್ಲಿ ಹೋಯಿತ್ತು;
ಬಣಜಿಗನ ಭಕ್ತಿ ಬಳ್ಳದ ಮೊನೆಯಲ್ಲಿ ಹೋಯಿತ್ತು;
ಅಕ್ಕಸಾಲೆಯ ಭಕ್ತಿ ಅಗ್ಗಿಷ್ಟಿಗೆಯಲ್ಲಿ ಹೋಯಿತ್ತು;
ಶೀಲವಂತನ ಭಕ್ತಿ ಶಂಕೆಯಲ್ಲಿ ಹೋಯಿತ್ತು;
ಮಾಟಕೂಟದವನ ಭಕ್ತಿ ಅಂಜಿಕೆಯಲ್ಲಿ ಹೋಯಿತ್ತು;
ವ್ರತಸ್ಥನ ಭಕ್ತಿ ಪ್ರಪಂಚದಲ್ಲಿ ಹೋಯಿತ್ತು;
ಇದು ಕಾರಣ ಕೂಡಲ ಚನ್ನಸಂಗಯ್ಯಾ
ಕಿರಾತರು ಹುಟ್ಟಿ ಪುರಾತರು ಅಡಗಿದರು. **(೭೩)**

ಕೊನೆಯ ಮಾತು ಮನನೀಯವಾಗಿದೆ. ಎಲ್ಲೆಲ್ಲಿಯೂ ಕಿರಾತ ಶಕ್ತಿಯೇ ಪ್ರಧಾನವಾಗಿದ್ದಾಗ ಪುರಾತನದ ಭಕ್ತಿ ಅಡಗಿಹೋಗುವಂತಾಗಿದೆ. ದುಷ್ಟಶಕ್ತಿ, ಪರಿಸರದ ಪ್ರಭಾವವನ್ನೂ ಮೀರಿ ವಿಜೃಂಭಿಸುತ್ತದೆ. "ಹಲವು ಕಾಲ ಹಂಸೆಯ ಸಂಗದಲ್ಲಿದ್ದರೇನು ಬಕನು ಶುಚಿಯಾಗಬಲ್ಲುದೆ?"

❒

---

* ಅವಿರಳಜ್ಞಾನಿ ಚೆನ್ನಬಸವಣ್ಣ, ಲೇ.ಎಸ್. ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ. ಮೂರ್ತಿ, ಮೈಸೂರು, ೨೦೦೯.

ಅನುಭವಮಂಟಪದಲ್ಲಿ ಚನ್ನಬಸವಣ್ಣನವರು

●

ಡಾ. ಮಳಲಿ ವಸಂತಕುಮಾರ್

"ಅನುಭವಮಂಟಪ" ಕರ್ನಾಟಕದ ರಾಜ್ಯ ಬಿಜ್ಜಳನ ರಾಜಧಾನಿ ಕಲ್ಯಾಣದಲ್ಲಿದ್ದ, ಶರಣರ ಒಂದು ಅಧ್ಯಾತ್ಮ ಕೇಂದ್ರ. ಧಾರ್ಮಿಕ, ಸಾಹಿತ್ಯಕ, ಸಾಮಾಜಿಕ ಮತ್ತು ಪ್ರಮುಖವಾಗಿ ಅಧ್ಯಾತ್ಮಿಕ ವಿಚಾರಗಳ ಚರ್ಚೆ ಇಲ್ಲಿ ನಡೆಯುತ್ತಿತ್ತು. ಶರಣರ ಅನುಭಾವಗಳ ವಿನಿಮಯ ಆಗುತ್ತಿದುದರಿಂದ, ಈ ಎಡೆಯನ್ನನು ಅನುಭವಮಂಟಪ ಎಂದು ಅರ್ಥವತ್ತಾಗಿ ಕರೆಯುತ್ತಿದ್ದರು. ಅಲ್ಲಿ ಸೇರುತ್ತಿದ್ದ ವಿಭೂತಿಪುರುಷರ, ಸಾಹಿತ್ಯ ದಿಗ್ದಂತಿಗಳ, ವಿಚಾರಕ್ರಾಂತಿಯ ನೇತಾರರ, ಹೆಸರುಗಳನ್ನನು ನೆನೆದಾಗ ಅನುಭವಮಂಟಪದ ಹೆಸರು ಕನ್ನಡಿಗರಲ್ಲಿ ಇಂದಿಗೂ ರೋಮಾಂಚನವನ್ನುಂಟುಮಾಡುವುದು ಆಶ್ಚರ್ಯದ ಸಂಗತಿಯಲ್ಲ. ಹನ್ನೆರಡನೆಯ ಶತಮಾನದಲ್ಲೇ ಅದು, ಕನ್ನಡಿಗರ ಧಾರ್ಮಿಕ ಮತ್ತು ಸಾಮಾಜಿಕ ಸಮಾನತೆಯ ಜಾಗೃತಿ ಕೇಂದ್ರವಾಗಿತ್ತು. ಬಸವಣ್ಣನವರ ಜಾತ್ಯಾತೀತವಾದ, ವರ್ಗರಹಿತವಾದ, ಸರ್ವೋದಯ ದೃಷ್ಟಿಯ, ಸಮಾಜ ಸೃಷ್ಟಿಯ ಪರಿಕಲ್ಪನೆಯ ಕನಸು, ಕ್ರಿಯೆಗೊಳ್ಳುವ ಒಂದು ಮಹಾನ್ ವೇದಿಕೆ ಅದಾಗಿತ್ತು. ಧರ್ಮ ಮತ್ತು ಆಚಾರಗಳ ಅಭಿವ್ಯಕ್ತಿಗೆ. ಆತ್ಮ ನಿವೇದನೆ, ಬೇರೋಬ್ಬರ ವ್ಯಕ್ತಿತ್ವದ ಗೌರವದ ಸಲ್ಲಿಕೆಗೆ ವಚನಗಳನ್ನು ಮಾಧ್ಯಮವನ್ನಾಗಿ ಬಳಸಿದ್ದು ಇಲ್ಲಿನ ಹೆಗ್ಗಳಿಕೆ. ಚರ್ಚೆಯ ಪೂರ್ಣ ಮಾಧ್ಯಮ, ವಚನವೇ ಆಗಿದ್ದಿರಬಹುದೇ ಎಂದು ಆಲೋಚಿಸುವುದಕ್ಕೂ ಆಸ್ಪದವಿದೆ. ಬಹಳ ಮಟ್ಟಿಗೆ ಅಲ್ಲಿ ಭಾಗಿಗಳಾಗುತ್ತಿದ್ದ ಶರಣರು, ವಚನಕಾರರಾಗಿದ್ದುದು ಇದಕ್ಕೆ ಕಾರಣ.ಕ್ಲಿಷ್ಟವಾದ ಸಂಸ್ಕೃತಭೂಯಿಷ್ಠವಾದ ಭಾಷೆಯನ್ನು ಬದಿಗೊತ್ತಿ, ಶ್ರೀಸಮಾನ್ಯರ ಆಡುನುಡಿಯನ್ನು ಬಳಸಿದ್ದು, ಭಾಷಿಕ ಮತ್ತು ಸಾಹಿತ್ಯಕ ಆಂದೋಲನಕ್ಕೆ ಇಟ್ಟ ಮೊದಲ ಹೆಜ್ಜೆ ಎಂಬುದನ್ನು ಮರೆಯುವಂತಿಲ್ಲ. ಮೇಲು ಕೀಳಿನ ನಿವಾರಣೆ, ಯಜ್ಞಯಾಗಾದಿಗಳಲ್ಲಿ

ಹೀಗಾಗಿ ಅನುಭವಮಂಟಪ ಅನುಭಾವಗೋಷ್ಠಿಯ ತಾಣಮಾತ್ರವಾಗಿರದೆ. ನಾನಾ ಆಂದೋಲನನಗಳ ಶಕ್ತಿ ಕೇಂದ್ರವೂ ಆಗಿತ್ತು. ಆದರೆ ಶಿವಶರಣರ ಸ್ವಭಾವ ಮತ್ತು ಮನೋಧರ್ಮಕ್ಕನುಗುಣವಾಗಿ ಉಳಿದೆಲ್ಲ ವಿಚಾರಗಳಿಗೆ ಪ್ರಾಧಾನ್ಯತೆಯಿತ್ತು ಎಂಬುದು, ಶೂನ್ಯಸಂಪಾದನೆಯಿಂದ ಸ್ಪಷ್ಟವಾಗುತ್ತದೆ. ವಾಸ್ತವವಾಗಿ ಅದು ವಿವಿಧ ವೃತ್ತಿ ಮತ್ತು ಪ್ರವೃತ್ತಿಗಳನ್ನುಳ್ಳ ಜನರ ಧಾರ್ಮಿಕ ಹಾಗೂ ಸಾಹಿತ್ಯ ಗೋಷ್ಠಿಯಾಗಿತ್ತು. ವೇದಗಳ ಕಾಲದಕ್ಕಿ

ಗಾರ್ಗಿ, ಮೈತ್ರೇಯಿ, ವಿಶ್ವಾವರ ಮುಂತಾದವರು ಸೇರಿ ನಡೆಸುತ್ತಿದ್ದ ಅಧ್ಯಾತ್ಮ ಗೋಷ್ಠಿಗಳನ್ನು ಈ ಸಮಯದಲ್ಲಿ ನೆನೆಯಬಹುದು. ದಕ್ಷಿಣದ ತಮಿಳುನಾಡಿನ ಸಂಗರ ಸಾಹಿತ್ಯ ಬಹುಮಟ್ಟಿಗೆ ಈ ಬಗೆಯದಾಗಿತ್ತು.

ಕ್ರಿ.ಪೂ. ೨ನೆಯ ಶತಮಾನದಿಂದ ಕ್ರಿ.ಶ ೬ನೆಯ ಶತಮಾನದವರೆಗೆ ಇದು ಕಾಣ ಬರುತ್ತದೆ.

The Sangam was a college or assembly of Tamil Poets held probably uner royal patronage. "Three Sangams lasted for 9900 years. They were attended by 8, 598 poets", "All that can be said is that a Sangam was held under royal patronage in Maduai. [1]

ಶೈವ ಸಹಿತ್ಯ ಕ್ರಿ.ಶ. ೬ನೆಯ ಶತಮಾನದಿಂದ ಕ್ರಿ.ಶ. ೧೬ನೆಯ ಶತಮಾನದವರೆಗೆ ಬೆಳೆದುಬಂತು.

"ಸನಾತನಧರ್ಮವಿರೋಧಿ ಬೌದ್ಧ,ಜೈನಮತಗಳೆದುರಿನಲ್ಲಿ ಹೋರಾಟ ನಡೆಸಿದ ತಿರುಜ್ಞಾನಸಂಬಂಧರು ಶಿವಭಕ್ತಶ್ರೇಷ್ಠರು ಮಹತ್ತರ ಪಾತ್ರ ವಹಿಸಿದರು."[೨]

ತೇವಾರ ಸ್ತೋತ್ರಗಳಲ್ಲಿ ಕಾಣುವ ಬೌದ್ಧ ಜೈನ ಧರ್ಮಗಳನ್ನು ಕುರಿತು ವಿರೋಧಿಭಾವವು, ತಮಿಳರ ಸಾಮಾಜಿಕ ಜೀವನದಲ್ಲಿ ಆನಂತರ ಬಂದು ಸೇರಿದ ವೈಲಕ್ಷಣ್ಯವಾಗಿದೆ. ಶಿವಭಕ್ತಶ್ರೇಷ್ಠ ತಿರುಜ್ಞಾನಸಂಬಂಧರು ವಿರುತ್ತಗಳನ್ನು ವೈವಿಧ್ಯಮಯವಾಗಿ ಬಳಸಿ ಅಸಂಖ್ಯಾತ ತೇವಾರಗಳನ್ನು ರಚಿಸಿದರು. ಈ ಪದ್ಯಗಳು ಸಾಮಾನ್ಯವಾಗಿ ಸಂಗೀತಕ್ಕೆ ಅಳವಡಿಸಿ ಮಾಡುವ ಉದ್ದೇಶದಿಂದ ಸೃಷ್ಟಿಯಾದವು.[೩]

ಶೂನ್ಯಸಂಪಾದನೆಯಲ್ಲಿ ವಚನಗಳಿಗೆ ರಾಗಗಳನ್ನು ನಿಗದಿಗೊಳಿಸಿರುವುದನ್ನು ನೋಡಿದಾಗ, ನಮ್ಮ ವಚನಗಳ ಸಂಗೀತ ಪ್ರಾಧಾನ್ಯತೆಯ ಅರಿವಾಗುತ್ತದೆ.

ಆದರೆ ಅನುಭವಮಂಟಪದ ಸಾಹಿತ್ಯ, ರಾಜಾಶ್ರಯರಹಿತವಾಗಿದ್ದುದು ಮಾತ್ರವಲ್ಲದೆ, ಧಾರ್ಮಿಕ ಕ್ರಾಂತಿಯಿಂದ ಕೂಡಿತ್ತು. ಇದರ ನೇತಾರರಾದ ಬಸವಣ್ಣ, ಅಲ್ಲಮ ಪ್ರಭು, ಚನ್ನಬಸವಣ್ಣ ಅವರುಗಳು ಭಕ್ತಿಪಂಥದ ಅಧ್ವರ್ಯುಗಳಾಗಿದ್ದರು.

"ಶೂನ್ಯ' ವೀರಶೈವ ಪರಿಭಾಷೆಯಲ್ಲಿ ವಿಶಿಷ್ಟವಾದ ಅರ್ಥವನ್ನು ಹೊಂದಿದೆ. ಇಲ್ಲಿ ಶೂನ್ಯವೆಂದರೆ ಬರಿದಲ್ಲ, ಎಲ್ಲವನ್ನೂ ಒಳಗೊಂಡಿರುವ ಪೂರ್ಣ ಎಂದು ಅರ್ಥ. ಬಯಲು ಎಂಬುದು'ಶೂನ್ಯಕ್ಕೆ ಸಮಾನಾರ್ಥಕವಾದ ಇನ್ನಂದು ಪದ. ಶೂನ್ಯಸಿಂಹಾಸನದ ಸ್ಥಾಪಕರಾದ ಬಸವಣ್ಣನವರಾಗಲಿ, ಅಧ್ಯಕ್ಷರಾಗಿದ್ದ ಅಲ್ಲಮಪ್ರಭುವಾಗಲಿ,ಅಲ್ಲಿನ ಸಮಸ್ತ ವ್ಯವಹಾರಗಳ ಕೇಂದ್ರಶಕ್ತಿಯಾಗಿದ್ದ ಚನ್ನಬಸವಣ್ಣನಾಗಲಿ, ಶೂನ್ಯ ಅಥವಾ ಬಯಲು ಎಂಬ ಪದವನ್ನು ಪರಿಪೂರ್ಣ ಎಂಬ ಅರ್ಥದಲ್ಲಿಯೇ ಬಳಸಿದ್ದಾರೆ.

ಅಲ್ಲಮಪ್ರಭು:

ಬಯಲುಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು
ಬಯಲುಬಯಲಾಗಿ ಬಯಲಾಯಿತ್ತಯ್ಯ
ಬಯಲ ಜೀವನ ಬಯಲ ಭಾವನೆ;
ಬಯಲು ಬಯಲಾಗಿ ಮುನ್ನವೇ ಬಯಲಾದರು
ನಾ ನಿಮ್ಮ ನಂಬಿ ಬಯಲಾಗದೆ ಗುಹೇಶ್ವರಾ

ಚನ್ನಬಸವಣ್ಣ:

ತನು ಬಯಲು ನಿರಯದೊಳಗಡಗಿತ್ತು
ಮನ ಬಯಲು ನಿರವಯದೊಳಡಗಿತ್ತು
ಭಾವ ಬಯಲು ನಿರವಯದೊಳಗಡಗಿತ್ತು
ಬಯಲು ಬಯಲು ಬೆರಸಿ ಬಯಲೇ ಆಯಿತ್ತು.
ಕೂಡಲಚನ್ನಸಂಗಯ್ಯನೆಂಬ ನುಡಿಯಡಗಿತ್ತು.

ಇಂತೆಡೆಗಳಲ್ಲಿ ಶರಣರು ಪೂರ್ಣತೆಯನ್ನು ನಿರಾಕಾರಪ್ರಜ್ಞೆಯಲ್ಲಿ ಸ್ವೀಕರಿಸುತ್ತಾರೆ.'ನಿರಾಕಾರ' ಪೂರ್ಣತೆಯ ಸನಿಹದ ಸಂಬಂಧಿ.ಡಾ॥ ಎಚ್. ತಿಪ್ಪೇರುದ್ರಸ್ವಾಮಿಯವರು ಹೇಳುವಂತೆ"ಶರಣರ ಶೂನ್ಯತತ್ವ ಅಗಾಧವಾದ ಅರ್ಥವನ್ನು ಒಳಗೊಂಡಿರುವ ಮತ್ತು ಅನುಭಾವಪ್ರಧಾನವಾದ ತಾತ್ವಿಕ ವಿರ್ಮಶೆ. ಬೌದ್ಧರಂತೆ ಅವರು ಅನಾತ್ಮವಾದದ ಅಭಾವಮಾರ್ಗವನ್ನು ಹಿಡಿಯದೆ, ಹಿಂದೂಧರ್ಮದ ತಳಹದಿಗೆ ಅನುಗುಣವಾದ ರೀತಿಯಲ್ಲಿ ಆತ್ಮವಾದದ ಮಾರ್ಗವನ್ನು ಅವಲಂಬಿಸಿದರು. ಮಾತಿಗೆ ನಿಲುಕದ ಪರಿಪೂರ್ಣ ಶೂನ್ಯವನ್ನು ಮಾತುಗಳಲ್ಲಿ ಹಿಡಿದಿಡುವ ಸಾಹಸವನ್ನು ಶರಣರು ಯಶಸ್ವಿಯಾಗಿ ನಿರ್ವಹಿಸಿದರು."[೪]

ಚನ್ನಬಸವಣ್ಣ ಲಿಂಗೋತ್ಪತ್ತಿಯ ಮೂಲ ಶೂನ್ಯವೆಂದೂ, ತ್ರಿಮೂರ್ತಿಗಳು ಶೂನ್ಯದಿಮದ ಒಗೆದವರೆಂದೂ ವಣಪ್ರತಿಪಾದಿಸಿದ. ಶೂನ್ಯಸಂಪಾದನೆ ಎಂದರ ಶೂನ್ಯವನ್ನು ಹೊಂದುವುದು, ಪರಿಪೂರ್ಣತೆಯನ್ನು ಪಡೆಯುವುದ. ಅರ್ಥಾತ್ ಮೋಕ್ಷಗಾಮಿತ್ವವನ್ನು ಸಂಕೇತಿಸುತ್ತದೆ. ಇಂತಹ ಅಧ್ಯಾತ್ಮ ವಿಚಾರಗಳ ಆಳವಾದ ಚರ್ಚೆ, ಅನುಭವಮಂಟಪದಲ್ಲಿ ಅನುಭಾವಿಗಳಿಗೆ ಗ್ರಾಸವಾಗಿತ್ತು.

ಅಲ್ಲಮಪ್ರಭು, ಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ, ಚನ್ನಬಸವಣ್ಣ, ಮಡಿವಾಳ ಮಾಚಯ್ಯ,ಅಂಬಿಗರ ಚೌಡಯ್ಯ,ಹಡಪದ ಅಪ್ಪಣ್ಣ, ಮೇದರ ಕೇತಯ್ಯ, ಡೋಹರ ಕಕ್ಕಯ್ಯ, ಮಾದರ ಚನ್ನಯ್ಯ, ನುಲಿಯ ಚಂದಯ್ಯ, ಮುಂತಾದವರಿಂದ ಕೂಡಿತ್ತು ಅನುಭವಮಂಟಪ. ಚನ್ನಬಸವಣ್ಣ ಈ ಮಂಟಪದ ನಿಯಂತ್ರಕ ಶಕ್ತಿಯಾಗಿದ್ದ ಎಂದರೆ, ಇದು ಆತನ ಶಾಸ್ತ್ರಸಂಪನ್ನತೆ, ಬೌದ್ಧಿಕ ಬಲ ಮತ್ತು ಆಧ್ಯಾತ್ಮಿಶಕ್ತಿಗೆ ಸಾಕ್ಷಿಯಾಗಿತ್ತು. ಒಂಥರ್ಥದಲ್ಲಿ ಆತ ಎಲ್ಲರಿಗೂ ಮಾರ್ಗದರ್ಶಕನಾಗಿದ್ದ. ವಯಸ್ಸಿನಲ್ಲಿ ಕಿರಿಯನಾಗಿದ್ದರೂ ಶಾಸ್ತ್ರಜ್ಞಾನದಲ್ಲಿ ಎಲ್ಲರಿಗಿಂತ ಹಿರಿಯನಾಗಿದ್ದ ಎಂಬ ಅಂಶ ಹಿರಿಯರ ವಚನಗಳಿಂದ ವ್ಯಕ್ತವಾಗುತ್ತದೆ. ಅಲ್ಲದೆ ಬಸವಣ್ಣ ಮತ್ತು ಅಲ್ಲಮಪ್ರಭುಗಳಿಗಿಂತ ಹೆಚ್ಚು

ಕಾಲ ಅನುಭವಮಂಟಪದ ಸಂಪರ್ಕ ಹೊಂದಿದ್ದವನು ಚನ್ನಬಸವಣ್ಣನೆ. ಅಲ್ಲಮಪ್ರಭುಗಳು ಅನುಭವಮಂಟಪದ ಅಧ್ಯಕ್ಷರಾಗಿದ್ದರೂ ಸಹ , ಸುಮಾರು ಹನ್ನೆರಡು ವರ್ಷಗಳ ಕಾಲ ಅದನ್ನು ಬಿಟ್ಟು ಹೋಗಿದ್ದರು ಕಲ್ಯಾಣದ ರಾಜಕೀಯ ವ್ಯವಹಾರದಿಂದ ನೊಂದ ಬಸವಣ್ಣನವರು, ಅದನ್ನು ತೊರೆದುಕಪ್ಪಡಿಗೆ ಹೋದ ಮೇಲೆ ಸಹ, ಅನುಭವಮಂಟಪದ ಪೂರ್ಣ ಹೊಣೆಗಾರಿಕೆ ಚೆನ್ನಬಸವಣ್ಣನ ಪಾಲಿಗೆ ಬಂದಿತು. ಚನ್ನಬಸವಣ್ಣನವರ ಸರ್ವತೋಮುಖವಾದ ಬೆಳವಣಿಗೆ ಬಸವಣ್ಣನವರೇ ಕಾರಣ.

ಚೆನ್ನಬಸವಣ್ಣನವರು ಕಾರಣಪುರುಷರೆಂದೂ, ತಮಗೆ ಗತಿಪಥವನ್ನು ತೋರಿಸಬಲ್ಲ ಸಮರ್ಥ ಗುರುವೆಂದೂ, ಚನ್ನಬಸವಣ್ಣನಿಂದಲಾನು ಬದುಕಿದೆಯನಯ್ಯಾ ಎಂದೂ, ಸ್ವಯಂ

ಬಸವಣ್ಣನವರೇ ಚನ್ನಬಸವಣ್ಣನ ವ್ಯಕ್ತಿತ್ವವನ್ನು ಕೊಂಡಾಡಿದ್ದಾರೆ. ಆದರೆ ತನ್ನ ಸೋದರಳಿಯನು ಸಕಲಶಾಸ್ತ್ರಪಾರಂಗತನಾಗಲು ಗುರುಸ್ಥಾನದಲ್ಲಿ ನಿಂತು ಬೋಧಿಸಿದರು ಅವರು. ಇದನ್ನು ಚನ್ನಬಸವಣ್ಣ ಅತ್ಯಂತ ಸ್ಪಷ್ಟವಾಗಿ ಹೇಳಿದ್ದಾನೆ.

ಬಸವಣ್ಣಾ ಓಂಕಾರದಿಂದತ್ತತ್ತ ನೀನೆ,
ನಾದಬಿಂದುಕಳೆಗಳಿಂದತ್ತತ್ತ ನೀನೆ
ಪ್ರಥಮಾಚಾರ್ಯ ನೀನೆ, ಲಿಂಗಾಚಾರ್ಯ ನೀನೆ,
ಎನಗೆ ಸರ್ವಾಚಾರ್ಯ ನೀನೆ, ಪ್ರಸಾದಾಚಾರ್ಯ ನೀನೆ,
ಎನಗೆ ಸರ್ವಾಚಾರ್ಯ ನೀನೆ, ನೀನೆ ಗತಿಮತಿಯಾಗಿ

ಎನ್ನನುಳುಹಿದ ಕಾರಣ.

ಎನ್ನುವ ಭಕ್ತಿ, ಅವನ ವೈಚಾರಿಕತೆಗೆ ದಾಸ್ಯವನ್ನು ತಂದುಕೊಡುವುದಿಲ್ಲ. ಅಲ್ಲಮ ಬಸವಾದಿಗಳ ಕೊರತೆಗಳನ್ನು ತಿದ್ದುವಲ್ಲಿ ಚನ್ನಬಸವಣ್ಣ ಹಿಂದೆ ಬೀಳುವುದಿಲ್ಲ. ಸ್ವಾತಂತ್ರ್ಯಪ್ರಜ್ಞೆಯನ್ನು ಚನ್ನಬಸವಣ್ಣ ಕೊನೆತನಕ ದಿಟ್ಟತನದಿಂದ ಕಾಯ್ದು ಕೊಂಡ. ಪ್ರಭುದೇವ, ಸಿದ್ಧರಾಮರು ಮೊದಲಿಗೆ ಕಲ್ಯಾಣಕ್ಕೆ ಬಂದು ಬಸವಣ್ಣನ ಮನೆಯ ಮುಂದೆ ನಿಂತಾಗ, ಅವರನ್ನು ಎದ್ದು ಹೋಗಿ ಸ್ವಾಗತಿಸುವಂತೆ ಎಚ್ಚರಿಸಿದವನು ಚನ್ನಬಸವಣ್ಣ . ಇಲ್ಲವಾಗಿದ್ದರೆ ಈ ಮಹಾಸಂಗಮದ ಅಪೂರ್ವ ಸನ್ನಿವೇಶ ವಿಕೃತ ಗೊಳ್ಳುವ ಘೋರ ಅಪಾಯ ಸಂಭವಿಸುವ ಸಾಧ್ಯತೆಯಿತ್ತು. ಯಾವುದೇ ವ್ಯಕ್ತಿಯ ಶಕ್ತಿಯನ್ನು ಥಟ್ಟನೆ ಗ್ರಹಿಸುವ ಸಾಮರ್ಥ್ಯ ಆತನಿಗಿತ್ತು. ಇಲ್ಲವಾಗಿದ್ದರೆ, ಲಕ್ಷದ ಮೇಲೆ ತೊಂಬತ್ತಾರು ಸಾವಿರದ ನಿತ್ಯ ದಾಸೋಹದ ಆ ಮಹಾಮನೆಯ ವ್ಯವಹಾರವನ್ನು ಅಷ್ಟು ಸಮರ್ಥವಾಗಿ ಸರಿದೂಗಿಸುವುದು ಸುಲಭಸಾಧ್ಯವಾಗುತ್ತಿರಲಿಲ್ಲ.

ರಾಜ್ಯರಾಜಕೀಯಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಬಸವಣ್ಣನವರು ಅನುಭವ ಮಂಟಪದ ಕಾರಭಾರವನ್ನು ತಮ್ಮ ಸೋದರಳಿಯನಿಗೆ ವಹಿಸಿದ್ದು ಸಹಜವಾಗಿಯೇ ಇದೆ.

ಅನುಭವಮಂಟಪದಲ್ಲಿ ಕಾಣುತ್ತಿದ್ದುದ್ದು ಅಧ್ಯಾತ್ಮದ ವಿನಿಮಯ. ಅರ್ಥಾತ್ ಅನುಭಾವ ಪ್ರಜ್ಞೆ, ಒಬ್ಬರ ವ್ಯಕ್ತಿತ್ವವನ್ನು ಒನ್ನೊಬ್ಬರು ಗೌರವವಿಸುವ, ಒಬ್ಬರು ಎಡವಿದಾಗ ಮತ್ತೊಬ್ಬರು ಎಚ್ಚರಿಸುವ, ತಮ್ಮನ್ನು ತಾವು ತಿಳಿದುಕೊಂಡು ಇನ್ನೊಬ್ಬರ ತಿಳಿವಿಗೆ ಬೆಳಕಾಗುವ,ಬೆಳಕಿನ ಬೆಳೆ ಬೆಳೆವ ಜ್ಞಾನದ ಕೃಷಿಕತ್ವ ಎದ್ದು ಕಾಣುತ್ತಿತ್ತು.

ಚನ್ನಬಸವಣ್ಣ ಬಸವಣ್ಣನವರನ್ನು'ಸರ್ವಾಚಾರ್ಯ'ರಾಗಿ ಕಾಣುವಂತೆಯೇ ಅವರನ್ನು ಪ್ರಭುದೇವರೊಂದಿಗೆ ಪ್ರಶ್ನಿಸುವ ದಿಟ್ಟತನವನ್ನು ತೋರಿಸುತ್ತಾನೆ. ಇಲ್ಲೆಲ್ಲ ವ್ಯಕ್ತಿ ಸ್ವಾತಂತ್ರ್ಯದ ಮುಕ್ತವಾತಾವರಣ ಸ್ಪಷ್ಟವಾಗುತ್ತದೆ, ಬಳಸದೆ'ನಿಜ'ದ ಆವಿಷ್ಕಾರಕ್ಕೆ ಅವಕಾಶವನ್ನೊದಗಿಸಿದ್ದರು ಎಂಬುದಕ್ಕೆ ಇದು ಸ್ಪಷ್ಟವಾಗುತ್ತದೆ. ಬಸವಣ್ಣನವರು ಎಲ್ಲಿಯೂ, ಯಾರ ಮೇಲೆಯೂ ಅಧಿಕಾರದ ಮುದ್ರೆಯನ್ನೊತ್ತದೆ, ಬಳಸದೆ'ನಿಜ'ದ ಆವಿಷ್ಕಾರಕ್ಕೆ ಅವಕಾಶವನ್ನೊದಗಿಸಿದ್ದರು ಎಂಬುದಕ್ಕೆ ಇದು ಸ್ಪಷ್ಟ ಉದಾಹರಣೆಯಾಗಿದೆ. ಇಲ್ಲಿ ಹಿರಿಯರ ಕಿರಿಯರು, ಮೇಲು ಕೀಳು ಎಂಬ ಯಾವೊಂದು ತಾರತಮ್ಯ ಭಾವನೆಯಿಲ್ಲದೆ ಸತ್ಯವನ್ನು ಹೊಂದುವ ಗುಣದೃಷ್ಟಿ ಅನುಭವಮಂಟಪದ ಅಡಿಗಲ್ಲಾಗಿತ್ತು. ಇಲ್ಲವಾದರೆ ತಾನು ಸಾಕಿ ಸಲಹಿ ವಿದ್ಯೆಯನ್ನಿತ್ತು ಬೆಳಸಿದ ತರುಣ ಚನ್ನಬಸವಣ್ಣನನ್ನು" ಕಾರಣಪುರುಷರೆಂದೂ ತಮಗೆ ಗತಿಪಥವನ್ನು

ತೋರಿಸಬಲ್ಲ ಸಮರ್ಥ ಗುರುವೆಂದೂ" ಮನಸಾರೆ ಪ್ರಶಂಸಿಸುತ್ತಿರಲಿಲ್ಲ. ಇದೇ ಹಿರಿಮೆಯನ್ನು ಬಸವಣ್ಣನವರು ಸತ್ತ್ವಸಂಪನ್ನರಾದ ಎಲ್ಲ ಶರಣರ ಬಗ್ಗೆಯೂ ಹೊಂದಿದ್ದರು.'ಎನಗಿಂತ ಕಿರಿಯಲಿಲ್ಲ ಶಿವಶರಣರಿಗಿಂತ ಹಿರಿಯರಿಲ್ಲ' ಎನ್ನುವ ಬಸವ ಪ್ರಜ್ಞೆಯ ಹಿನ್ನಲೆಯಲ್ಲಿ, ಇಂಥ ಒಂದು ಋಜುಪಥ ದೀಕ್ಷೆಯ ದೃಢನಿರ್ಧಾರವಿದ್ದು , ಅದು ಮಹಾಮನೆಯ ಘನಔದಾರ್ಯದ ಅನುಪಮ ಅಕ್ಷಯ ನಿಧಿಯಾಗಿ, ಅರಿವಿನ ಬೆಳೆಗೆ ಅವಲಂಬನದ ಇಳೆಯಾಗಿತ್ತೆಂಬುದು ಮಹತ್ವದ ಸಂಗತಿ.

ಅನುಭವಮಂಟಪದಲ್ಲಿ ಚನ್ನಬಸವಣ್ಣ ಶಾಸ್ತ್ರನಿಯತಿಗೂ, ಶಿವಾಚಾರಕ್ಕೂ ಹೆಚ್ಚು ಒತ್ತುಕೊಡುತ್ತಿದ್ದ. ಈ ವಿಷಯದಲ್ಲಿ ಅಲ್ಲಮ ಮತ್ತು ಬಸವಣ್ಣನವರಿಗಿಂತ ಒಂದು ಹೆಜ್ಜೆ ಮುಂದಾಗಿಯೇ ಇದ್ದ ಚನ್ನಬಸವಣ್ಣ, ವೀರಶೈವದಲ್ಲಿ ಷಟ್ಸ್ಥಲ, ಅಷ್ಟಾವರಣ ಮತ್ತು ಪಂಚಾಚರ ತತ್ತ್ವಗಳನ್ನು ಎತ್ತಿ ಹಿಡಿಯುತ್ತಿದ್ದ. ಇಷ್ಟಲಿಂಗಧಾರಣೆ ಇಲಲದೆ ವೀರಶೈವನಾಗುವುದು ಸಾಧ್ಯವೇ ಇಲ್ಲ ಎಂಬುದು ಚನ್ನಬಸವಣ್ಣನ ಮತವಾಗಿತ್ತು. ಇಷ್ಟಲಿಂಗಧಾರಣೆ ಇಲ್ಲದೆ ಶರಣರ ಅನುಭವಗೋಷ್ಠಿಯ ಪ್ರವೇಶವನ್ನು ಸಿದ್ಧರಾಮನಂತಹ ಕರ್ಮಯೋಗಿಗೂ ನಿಷಿದ್ಧಗೊಳಿಸಿದ ಅಪೂರ್ವ ಘಟನೆ ಜರುಗಿತು. ಅಂಗದ ಮೇಲೆ ಲಿಂಗ ಇಲ್ಲದವನು ಶರಣನಾಗಲಾರ ಎಂಬುದು ಶರಣರ ಮತ. ಅದರೆ ಸಿದ್ಧರಾಮ ಶಿವಾನುಭವ ವಿಚಾರದಲ್ಲಿ ಅರಿವುಳ್ಳವನು ಆತ್ಮಲಿಂಗದ ಅನುಸಂಧಾನ ಇರುವವನಿಗೆ ಇಷ್ಟಲಿಂಗ ಅನಗತ್ಯ. ಅಲ್ಲದೆ ನಾನು ಈಗಾಗಲೆ ಶಿವಶರಣರ ಸಂಗದಲ್ಲಿವುದರಿಂದ ಅಜ್ಞಾನ ಅಳಿದು, ನಿಜದ ನೆಲೆಯ ಅರಿವಾಗಿದೆ. ಬೆಳಕು ಬೆಳಕು ಸೇರಿದರೆ ಕತ್ತಲೆ ಇರುತ್ತದೆಯೆ? ಗುರುವಿನಿಂದ ಲಿಂಗಧಾರಣೆ ಆಗದಿದ್ದರೂ ತಾನು ಮಾನಸಿಕವಾಗಿ ಲಿಂಗಾಂಗಿ ಎಂಬುದಾಗಿ ವಾದಿಸಿದಾಗ ಅಲ್ಲಮಪ್ರಭು ಸಿದ್ಧರಾಮನ ನಿಲುವನ್ನು ಹೀಗೆ ಸಮರ್ಥಿಸಿಕೊಂಡರು:

> **ಪರಶಿವತತ್ತ್ವವನ್ನು ಬಲ್ಲ ಶರಣನಿಗೆ ಶಿವಪೂಜೆಯ ದಂದುಗವೇಕೆ?**
> **ಒಲುಮೆಯ ಕೂಟಕ್ಕೆ ಹಾಸುಗೆಯ ಹಂಗೇಕೆ?**
> **ಆಕಾಶವನ್ನು ಆಡಂಬರಬಲ್ಲ ಸಮರ್ಥನಿಗೆ ಏಣಿಯ ನೆರವೇಕೆ?**
> **ಸಮುದ್ರವನ್ನು ಹಾರಬಲ್ಲವನಿಗೆ ಹರಿಗೋಲ ಚಿಂತೆಯೇಕೆ?**
> **ಶಿವಸ್ವರೂಪಿಯೇ ತಾನಾಗಿರುವ ಸಿದ್ಧರಾಮಯ್ಯನವರಿಗೆ ಇಷ್ಟಲಿಂಗದ ಗೋಜೇಕೆ?**
> **ಎಂದು ಪ್ರಶ್ನಿಸಿದ. ಆದರೆ ಚನ್ನಬಸವಣ್ಣ ಇದನ್ನು ಒಪ್ಪಲಿಲ್ಲ.**
> **ಆಕಾಶದಲ್ಲಾಡುವ ಪಟಕ್ಕಾದರೂ ಕಾರ್ಯದಕ್ಷತೆ ಇರಬೇಕು.**
> **ಭೂಮಿಯಲ್ಲಿದೆ ಬಂಡಿ ನಡೆಯಬಲ್ಲುದೆ?**
> **ಅಂಗಕ್ಕೆ ಲಿಂಗಸಂಗವಿಲ್ಲದೆ ನಿಸ್ಸಂಗವಾಗಲಾರದು.**
> **ಆಕಾಶದಲ್ಲಿ ಸಂಚರಿಸುವ ಸೂರ್ಯ ಚಂದ್ರರಿಗೂ**
> **ಹೇಮಗಿರಿಯ ಸಂಚ ತಪ್ಪದು ನೋಡಾ!**
> **ಭೂಮಿಯನ್ನು ಬಿಟ್ಟು ಗಗನಕ್ಕೆ ಹಾರಿದವನಿಗೆ**
> **ಆ ಗಗನದಲ್ಲಿ ನಿಲ್ಲುವುದಕ್ಕೆ ಒಂದೆಡೆಯುಂಟೆ?**
> **ಅಂಗದ ಮೇಲೆ ಆಯತವಾದುದೇ ಇಷ್ಟಲಿಂಗ,**
> **ಆ ಇಷ್ಟಲಿಂಗದಿಂದಲೇ ಪ್ರಾಣಲಿಂಗಸ್ವಾಯತ**
> **ತಿಳಿದುಪ್ಪ ಮತ್ತು ಗಟ್ಟಿತುಪ್ಪಕ್ಕೆ ಭೇದವಿದೆಯೆ?**

ದೀಪಕ್ಕೂ ದೀಪ್ತಿಗೂ ಭಿನ್ನವಿದೆಯೇ?
ಆತ್ಮಕ್ಕು ದೇಹಕ್ಕೂ ಸಂದು ಉಂಟೆ?
ಹಾಲಿಗು ಅದರ ರುಚಿಗೂ ಭೇದವಿದೆಯೆ?
ಆದ್ದರಿಂದ ಸಾಕಾರವನ್ನೇ ನಿರಾಕಾರವೆಂದು ತಿಳಿದು
ಅಂಗಲಿಂಗ ಸಂಬಂಧವಿಲ್ಲದವರ ಸಂಗವನ್ನು ಶರಣರು ಮೆಚ್ಚಲಾರರು.

ಚನ್ನಬಸವಣ್ಣನ ಲಿಂಗತತ್ತ್ವದ ಈ ತರ್ಕ ಅಲ್ಲಮನಿಗೂ ಸಮ್ಮತವಾಗುತ್ತದೆ. ಸಿದ್ಧರಾಮನೂ ಒಪ್ಪುತ್ತಾನೆ.

ಶುದ್ಧವನರಿದೆ ಚನ್ನಬಸವಣ್ಣಾ, ನಿಮ್ಮಿಂದ
ಸಿದ್ಧವನರಿದೆ ಚನ್ನಬಸವಣ್ಣಾ,ನಿಮ್ಮಿಂದ
ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ,

ಚನ್ನಬಸವಣ್ಣ ಗುರುವಾಗಿ ಬಂದು ಎನ್ನ ಜನ್ಮಕರ್ಮದ ನಿವೃತ್ತಿಯ ಮಾಡಿದನಯ್ಯಾ. ಎಂದು ಸಿದ್ಧರಾಮನು ಚನ್ನಬಸವಣ್ಣನನ್ನು ಗುರುವಾಗಿ ಸ್ವೀಕರಿಸುತ್ತಾನೆ.' ನೀನೊಬ್ಬನೆ ಮಹಾಜ್ಞನಿ' ಎಂದು ಅಲ್ಲಮ ಆನಂದದಿಂದ ಪ್ರಶಂಸಿಸುತ್ತಾನೆ.

ಇಂತಹ ಲಿಂಗಾಂಗ ಸಾಮರಸ್ಯದ ಸಂಗತಿ ನುಲಿಯ ಚಂದಯ್ಯ ಎಂಬ ಶರಣನ ಕುರಿತಾಗಿಯು ಜರುಗಿತು, ಇಲ್ಲಿಯೂ ಚನ್ನಸವಣ್ಣನದು ನಿರ್ಣಾಯಕ ಸ್ಥಾನ.

ನುಲಿಯ ಚಂದಯ್ಯ ಅನುಭವಮಂಟಪದ ಒಬ್ಬ ಶಿವಶರಣ. ಹುಲ್ಲನ್ನು ಕೊಯ್ದು ತಂದು, ಹಗ್ಗವನ್ನು ಮಾಡಿ ಮಾರಿ, ಜಂಗಮ ದಾಸೋಹದಿಂದ ಜೀವನ ನಡೆಸುತ್ತಿದ್ದ ವೀರಶೈವ. ಒಂದು ದಿನ ಆತ ತನ್ನ ಕಾಯಕದಲ್ಲಿ ತೊಡಗಿದ್ದಗ ಇಷ್ಟಲಿಂಗ ಜಾರಿ ನೀರಿನಲ್ಲಿ ಬಿತ್ತು.ಜಂಗಮದಾಸೋಹಕ್ಕೆ ತಡವಾಗಬಾರದೆಂದು ಮನೆಗೆ ನಡೆದ. ಆದರೆ ಇಷ್ಟಲಿಂಗ ಕಳೆದ ಶರಣ, ತನ್ನ ಪ್ರಾಣವನ್ನು ಹರಣ ಮಾಡಬೇಕೆಂಬ ನಿಯಮವನ್ನು ನೆನೆದು, ಆವಿಷಯವನ್ನು ಅನುಭವಮಂಟಪಕ್ಕೆ ತೆಗೆದುಕೊಂಡು ಬಂದ. ಇದು ಶಾಸ್ತ್ರ ವಿಚಾರಕ್ಕೆ ಸಂಬಂಧಿಸಿದುದರಿಂದ ಎಲ್ಲರೂ ಚನ್ನಬಸವಣ್ಣನತ್ತ ನೋಡಿದರೂ, ಆತ ಈ ವಿಚಾರವನ್ನು ಶಾಸ್ತ್ರೋಕ್ತವಾಗಿ ಚರ್ಚಿಸಿ, ಇಷ್ಟಲಿಂಗ ಗುರುಕರುಣೆಯೆಂದೂ, ಕಟ್ಟಿದ ಇಷ್ಟಲಿಂಗ ಕಳೆದುಹೋದರೆ, ಗುರುಕರುಣೆಯಿಂದ ಮತ್ತೆ ಪಡೆಯಬಹುದೆಂದೂ ಅದಕ್ಕಾಗಿ ಪ್ರಾಣ ಹರಣ ಅನಗತ್ಯವೆಂದೂ ತಿಳಿಸಿ, ನುಲಿಯ ಚಂದಯ್ಯನ ಪ್ರಾಣವನ್ನು ಉಳಿಸಿದ. ಇಲ್ಲಿ ಒಂದು ಅಂಶ ಸ್ಪಷ್ಟವಾಗುತ್ತದೆ, ಚನ್ನಬಸವಣ್ಣ ಶಾಸ್ತ್ರನಿಯತಿಯಲ್ಲಿ ಎಷ್ಟೇ ಕಟ್ಟು ನಿಟ್ಟಾಗಿದ್ದರೂ. ನಿಷ್ಠುರವಾಗಿದ್ದರು ಸಹ ಅದು ಎಂದೂ ಜೀವವಿರೋಧಿಯಾಗಿರದೆ ಜೀವಪರವಾಗಿತ್ತೆಂಬುದು ಸ್ಪಷ್ಟವಾಗುತ್ತೆ. ದಯಾಮೂಲವಾದ ನಿಯಮಗಳು ಬಾಳಿನ ಶಿಸ್ತಿಗೆ ನೆರವಾಗುತ್ತವೆ. ಶರಣರ ಪ್ರಾಧಾನತ್ತವೇ ಜೀವದಯೆ.

"ಅನುಭವಮಂಟಪದಲ್ಲಿ ಚನ್ನಬಸವಣ್ಣನವರ ಪ್ರಭಾವ ಅಸಾಧಾರಣವಾಗಿತ್ತು.ಅವರು ಅತೀವ ಸೂಕ್ಷ್ಮಮತಿ. ಎಂಥ ವಿಷಮ ಸನ್ನಿವೇಶದಲ್ಲಿಯೇ ಆಗಲಿ, ಅವರು ಯುಕ್ತ ಪರಿಹಾರವನ್ನು ಸೂಚಿಸಿ, ಆ ಇಕ್ಕಟ್ಟಿನಿಂದ ಹಿರಿಯರನ್ನೂ ಪಾರುಮಾಡುತ್ತಿದ್ದರು. ಶಿವಾನುಭವಮಂಟಪ ಪ್ರಮಥರ ಕ್ಷೇತ್ರದಂತಿತ್ತು, ಆ ಪ್ರಮಥರ ತತ್ತ್ವಾರ್ಥ ಭಾಗೀರಥಿ ಜನನಮನವನ್ನು ತಣಿಸಿತು"[೪]

ಅಕ್ಕಮಹಾದೇವಿಯನ್ನು ಅಲ್ಲಮ ಪ್ರಭು ವಿರ್ಮಶೆಯ ಒರೆಗಲ್ಲಿಗೆ ಒಡ್ಡಿದ ಸಂದರ್ಭ, ಅನುಭವಮಂಟಪದ ಇತಿಹಾಸದಲ್ಲಿ ಉನ್ನತ ವ್ಯಕ್ತಿತ್ವವನ್ನು ಥಟ್ಟನೆ ಗ್ರಹಿಸಿದ.

'ಅಜಕಲ್ಪಕೋಟಿ ವರುಷದವರೆಲ್ಲರೂ ಹಿರಿಯರೇ?
ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೆ?
ನಡು ಮುರಿದು ಗುಡುಗೂರಿ ತಲೆ ನಡುಗಿ ನೆರೆತರೆ ಹೆಚ್ಚಿ
ಮತಿಗೆಟ್ಟು ಒಂದನಾಡಹೋಗಿ ಒಂಭತ್ತನಾಡುವ
ಅಜ್ಞಾನಿಗಳೆಲ್ಲರೂ ಹಿರಿಯರೆ?
ಅನುವರಿದು ಘನವ ಬೆರಸಿ ಹಿರಿದು ಕಿರಿದೆಂಬ ಭೇದವ ಮರೆದು
ಕೂಡಲಚನ್ನಸಂಗಯ್ಯನಲ್ಲಿ ಬೆರೆಸಿ ಬೇರಿಲ್ಲದಿಪ್ಪ ಹಿರಿಯತನ
ನಮ್ಮ ಮಹಾದೇವಿಯಕ್ಕಂಗಾಯಿತ್ತು"

ಎಂದು ಕೊಂಡಿದ್ದಾನೆ ಅಲ್ಲದೆ ಅಕ್ಕನ ವಚನಸತ್ತ್ವ ಉಳಿದೆಲ್ಲ ವಚನಕಾರರಿಗಿಂತ ಶ್ರೇಷ್ಠಮಟ್ಟದೆಂಬುದನ್ನು ಗುರುತಿಸಿದ್ದಾನೆ. ಚನ್ನಬಸವಣ್ಣ ಅನುಭವಮಂಟಪದ ಎಲ್ಲ ಶರಣರಿಗೆ ಒರೆಗಲ್ಲಾಗಿದ್ದ ಎಂಬ ಅಂಶ ಅನೇಕ ಘಟನೆಗಳಿಂದ ಸ್ಪಷ್ಟವಾಗುತ್ತದೆ. ಆ ಮಹಾಮನೆಗೆ ಭಕ್ತರ ವೇಷದಲ್ಲಿ ಬರುತ್ತಿದ್ದ ವಂಚಕರನ್ನೂ ಆತ ಗುರುತಿಸಿ ಖಂಡಿಸುತ್ತಿದ್ದ ವಿಷಯ, ಆತನ ವಚನಗಳಿಂದಲೇ ತಿಳಿದುಬರುತ್ತದೆ.

ಅಂಗದ ಮೇಲೆ ಲಿಂಗವುಳ್ಳುದೆಲ್ಲಾ ಸಂಗಮನಾಥನೆಂಬ ಭಾವ
ಬಸವಣ್ಣಂಗಾಯಿತ್ತಲ್ಲದೆ ಎನಗೆ ಆ ಭಾವವಿಲ್ಲ"

ಎಂದು ಖಂಡತುಂಡಗಿಯೇ ಹೇಳುತ್ತಾನೆ, ಅನರ್ಹರಿಗೆ ಲಿಂಗಧಾರಣೆ ಮಾಡುವುದನ್ನು ಸಹ ಚನ್ನಬಸವಣ್ಣ ಒಪ್ಪುತ್ತಿರಲಿಲ್ಲ. 'ಕಾಶಿಯಲ್ಲಿರುವ ನಾಯಿ ಎಂದ ಮಾತ್ರಕ್ಕೆ ಅದರ ಹಾಲು ಪಂಚಾಮೃತಕ್ಕೆ ಯೋಗ್ಯವೇ? ಖಂಡುಗ ಹಾಲಿನಲ್ಲಿದ್ದರೂ ಇದ್ದಿಲು ಬಿಳಿಪಾಗಬಲ್ಲದೇ? ದುರಾತ್ಮ ಎಂದಿಗೂ ಸದ್ಭಕ್ತನಾಗಲಾರ' ಎಂಬುದು ಆತನ ನಿಲುವಾಗಿತ್ತು.

ಚನ್ನಬಸವಣ್ಣ ವಚನಜಾರನಷ್ಟೇ ಅಲ್ಲ, ಒಬ್ಬ ದಿವ್ಯಜ್ಞಾನಿ,ಗುಣ ದೋಷಗಳನ್ನು ನಿರ್ಣಯಿಸಬಲ್ಲ ಸರ್ಮಥ ವಿರ್ಮಶಕ, ವಿದ್ವತ್ತಿನ ಜೊತೆಗೆ ಸಂಘಟನಾ ಸಾಮರ್ಥ್ಯವಿದ್ದ ಅಪರೂಪದ ವ್ಯಕ್ತಿ. ಎಲ್ಲಕಿಂತ ಮಿಗಿಲಾಗಿ ಮಹಾತೇಜಸ್ವಿ.

ಸ್ವಯಂ ಅಲ್ಲಮನೆ;

ಬೆಳಗುವ ಜ್ಯೋತಿಯ ತಿರುಳಿನಂತೆ
ಹೊಳೆವ ಕಂಗಳ ಕಾಂತಿಯೊಳಹೊರಗೆನ್ನದೆ
ಅಳವಟ್ಟ ಶಿವಯೋಗಿಯ ಕಂಡೆ ನೋಡಾ.
ನಿಜಉಂಡ ನಿರ್ಮಳದ ಘನವ ಕಂಡು
ಬೆರಗಾದೆ ನಾನು! ಗುಹೇಶ್ವರ ಲಿಂಗದಲ್ಲಿ
ಚನ್ನಬಸವಣ್ಣನಿಂದ ನಾನು ಬದುಕಿದೆನು

ಎಂದು ಮನದುಂಬಿ ಹೊಗಳಿದ್ದಾರೆ. ಧಾರ್ಮಿಕ ಮತ್ತು ಆಧ್ಯಾತ್ಮಿಕ ಚಿಂತನೆಯಲ್ಲಿ ಮಾತ್ರವಲ್ಲದೆ, ರಾಜಕೀಯ ವಿಚಾರಗಳಲ್ಲೂ ಪರಿಣತಿ ಇತ್ತು ಎಂಬ ಸಂಗತಿ ಚನ್ನಬಸವ ಪುರಾಣದಿಂದ ತಿಳಿದುಬರುತ್ತದೆ. ಬಿಜ್ಜಳನಿಗೆ ರಾಜನೀತಿಯನ್ನು ಬೋಧಿಸಿದ ವಿಷಯ ಇಲ್ಲಿ ಪ್ರಸ್ತಾಪವಾಗಿದೆ. ನಿರಂಜನವಂಶರತ್ನಾಕರದಲ್ಲಿ ಚನ್ನಬಸವಣ್ಣ, ಬಸವಣ್ಣನ ತರುವಾಯ ಮಂತ್ರಿಯಾದ ಸಂಗತಿಯು ನಮೂದಿತವಾಗಿದೆ.

ಪ್ರಭುದೇವ ದೇಶಪರ್ಯಟನೆಗೆ ಹೋದ ಸಂದರ್ಭದಲ್ಲಿ ಚನ್ನಬಸವಣ್ಣನೇ ಅನುಭವ ಮಂಟಪದ ಪೂರ್ಣ ಉಸ್ತುವಾರಿಯನ್ನು ನೋಡಿಕೊಳ್ಳುತ್ತಾನೆ. ಪ್ರಭುದೇವ ಸವ್ವಾಲಕ್ಷ ಪರ್ವತದಿಂದ ಕಲ್ಯಾಣಕ್ಕೆ ಮರಳುವಾಗ ಬಸವಣ್ಣ ತೋರಿದ ಹೃತ್‌ಸಂಭ್ರಮದ ಅಧ್ಯಯನವೇ ಆಗಿದೆ.[೬] ಬಸವಣ್ಣ ಪ್ರಭುದೇವರನ್ನು ಶೂನ್ಯ ಸಿಂಹಾಸನದಲ್ಲಿ ಕೂರಿಸಿ ನೋಡಿ ಆನಂದಿಸಿ ಕೊಂಡಾಡುತ್ತ ಆರೋಗಣೆಯ ಹೊತ್ತನ್ನು ಮರೆಯುತ್ತಾನೆ. ಹೊರಗಿದ್ದ ಲಕ್ಷದ ಮೇಲೆ ತೊಂಬತ್ತಾರುಸಾವಿರ ಜನ ಇವರಿಬ್ಬರನ್ನೂ ಆಕ್ಷೇಪಿಸುತ್ತ ಹೊರಟುಹೋಗುತ್ತಾರೆ. ಪ್ರಭುದೇವ' ಅಂಗಜೀವಿಗಳೆಲ್ಲ ಆಶಯನಕ್ಕೆ ನೆರೆದು, ಲಿಂಗದ ಹವಣವನಿವರೆತ್ತ ಬಲ್ಲರು?' ಮದ್ಯಪಾನವನುಂಡು ಮದವೆದ್ದ ಜೋಗಿಯಂತೆ ನುಡಿವರು.ಗುಹೇಶ್ವರನ ನಿಲುವನಿರೆತ್ತ ಬಲ್ಲರು? ಎಂದು ಹೀಯಾಳಿಸುತ್ತಾನೆ. ಅಲ್ಲದೆ ಪ್ರಭು ಆರೋಗಣೆಯನ್ನು ನಿರಾಕರಿಸಿದಾಗ ಬಸವಣ್ಣ ಮತ್ತು ಇತರ ಶರಣರು ಆರೋಗಣೆಯ್ನನು ಸ್ವೀಕರಿಸುವಂತೆ ವಿವಿಧ ಬಗೆಯಲ್ಲಿ ಪ್ರಾರ್ಥಿಸುತ್ತಾರೆ.

ಬಸವಣ್ಣನೆ ಬೋನ, ನಾನೆ ಪದಾಥ್ವಾಗಿ
ನಿಮ್ಮ ಪರಿಯಾಣಕ್ಕೆ ವೇಧಿಸಿದೆನು ಆರೋಗಣೆ ಮಾಡಯ್ಯ
ಕೂಡಲ ಚನ್ನ ಸಂಗಮದೇವ.......
ಜಂಗಮವೇ ಲಿಂಗವೆಂದು ಅರಿದೆನಾಗಿ_
ಆನು ನಿನಗೆ ಪ್ರಸಾದಿಯಾದೆನು ಆರೋಗಿಸಯ್ಯ ಪ್ರಭುವೆ

ಎಂದು ಚನ್ನಬಸವಣ್ಣ ವಿಧಿವತ್ತಾಗಿ ಬಿನ್ನವಿಸುತ್ತಾನೆ. ಪ್ರಭು ಆರೋಗಣೇಯನ್ನು ಸ್ವೀಕರಿಸಿ "ಅವಿರಳಜ್ಞಾನಿ ಚನ್ನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ" ಎಂದು ವಂದಿಸುತ್ತಾನೆ.ರೂಪಿಲ್ಲದ ರೂಪು, ನಿಜವಲ್ಲದ ನಿಷ್ಪತ್ತಿ, ಸೀಮೆಯ ಮೀರಿದ ನಿಸ್ಸೀಮ, ಗಮನವಿಲ್ಲದ ಗಮ್ಯ, ನುಡಿಯುಡಗಿದ ನಿಃಶಬ್ದ–ಇತ್ಯಾದಿಯಾಗಿ ಪ್ರಭುವಿನ ವ್ಯಕ್ತಿತ್ವವನ್ನು ಚಿತ್ರಿಸುತ್ತಾನೆ ಚನ್ನಬಸವಣ್ಣ. ಇನ್ನೊಮ್ಮೆ ಮಹಾಮನೆಯಲ್ಲಿ ಮಡಿವಾಳ ಮಾಚಿ ತಂದೆಯ ವ್ಯಕ್ತಿತ್ವ ಚನ್ನಬಸವಣ್ಣನಿಂದ ಹೀಗೆ ವ್ಯಕ್ತವಾಗುತ್ತದೆ.

ಹೊಟ್ಟೆಯಲ್ಲಿ ಎನ್ನ ತೆಗೆದ, ಬೆನ್ನಿನಲ್ಲಿ ಬಸವಣ್ಣನ ತೆಗೆದ
ಬ್ರಹ್ಮರಂಧ್ರದಲ್ಲಿ ಅಲ್ಲಮನ ತೆಗೆದ, ಸಂಗನೋ ಮಡಿವಾಳನೋ
ಮಡಿವಾಳನೋ ಸಂಗನೋ, ಕೂಡಲಚನ್ನಸಂಗನಲ್ಲಿ
ಮಡಿವಾಳ ಸ್ವಾಯುತ ನಮ್ಮ ಬಸವಣ್ಣಂಗೆ

ಹೀಗೆ ಶರಣರು ಪರಸ್ಪರ ಗೌರವದಿಂದ ಸ್ತುತಿಸುವುದು ಶೂನ್ಯಸಂಪಾದನೆಯ ಒಂದು ಪ್ರಮುಖ ಲಕ್ಷಣವಾಗಿದೆ.ಆದರೆ ಈ ಬಗೆಯ ಆತ್ಮೀಯಸ್ತುತಿ ಶರಣರ ಗುಣಪ್ರಕಾಶಕ್ಕೆ ನೆರವಾದರೂ, ವಾಸ್ತವವನ್ನು ಮರೆಮಾಡುವ ಅಪಾಯಕ್ಕೂ ಎಡಮಾಡುವುದುಂಟು.

ಚನ್ನಬಸವಣ್ಣನ ಕೊನೆಯ ದಿನಗಳು ಡಾ॥ ತಿಪ್ಪೇರುದ್ರಸ್ವಾಮಿ ಅವರ ಇತ್ತೀಚಿನ ಎರಡು ಕೃತಿಗಳಲ್ಲಿ ಆಕರ್ಷಕವಾಗಿ ಚಿತ್ರಿತವಾಗಿವೆ. ೧೯೮೮ರಲ್ಲಿ ಪ್ರಕಟ 'ಅವಿರಳಜ್ಞಾನಿ ಚನ್ನಬಸವಣ್ಣ' ಮತ್ತು ೧೯೯೯ರಲ್ಲಿ ಹೊರಬಂದ ಅಳಿವಿನಿಂದ ಉಳಿವಿಗೆ'(ಕಾದಂಬರಿ) ಗ್ರಂಥಗಳಲ್ಲಿ ಚನ್ನಬಸವಣ್ಣನವರ ಸಮಗ್ರ ಜೀವನಚಿತ್ರ ದೊರೆಯುತ್ತದೆ. ಬಸವಣ್ಣನವರು ಕಪ್ಪಡಿಗೆ ಹೋದಮೇಲೆ ಅವರ ಸಲಹೆಯಂತೆ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಪದವಿಯನ್ನು ಒಪ್ಪಿಕೊಂಡರು. ಕಲ್ಯಾಣದ ರಾಜಕೀಯ ಸ್ಥಿತಿಗತಿಗಳು ಚನ್ನಬಸವಣ್ಣನಿಗೆ ವೇದನೆಯನ್ನುಂಟು ಮಾಡುತ್ತವೆ. ಅನುಭವಮಂಟಪದಲ್ಲಿ ಶರಣರಿಗೆ ಮಾರ್ಗದರ್ಶನ ನೀಡುವ ಪೂರ್ಣ ಹೊಣೆಗಾರಿಕೆ

ಚನ್ನಬಸವಣ್ಣನ ಪಾಲಿಗೆ ಬರುತ್ತದೆ. ಬ್ರಾಹ್ಮಣ ಮಧುವರಸ ಮತ್ತು ದಲಿತ ಹರಳಯ್ಯನನ್ನು ವರ್ಣಸಂಕರದ ಕಾರಣವನ್ನೊಡ್ಡಿ ಕಣ್ಣು ಕೀಳಿಸಿ, ಆನೆಯ ಕಾಲಿಗೆ ಕಟ್ಟಿ ಎಳಸಿ ಕೊಮದ ಸುದ್ದಿ ಚನ್ನಬಸವಣ್ಣ ಅನುಭವಮಂಟಪದಲ್ಲಿದ್ದಾಗಲೆ ತಲುಪುತ್ತದೆ ಮಾತ್ರವಲ್ಲದೆ, ಬಿಜ್ಜಳನ ಸೈನ್ಯ ಮಹಾಮನೆಯನ್ನ ಮುತ್ತುವ ಸುದ್ದಿಯೂ ಹರಡುತ್ತದೆ. ಶರಣರು ಶಾಂತರಸನಿಗೆ ಶರಣ ಸಾಹಿತ್ಯದ (ಓಲೆಯಗರಿಗಳ) ಕಟ್ಟುಗಳನ್ನು ಪಡೆದು, ಸುರಕ್ಷಿತ ಸ್ಥಳಗಳಿಗೆ ಹೋಗಬೇಕೆಂದು ನಿರ್ಧಾರವಾಗುತ್ತದೆ. ಸುದ್ದಿಯನ್ನನು ತಿಳಿದು ಸೊನ್ನಲಿಗೆಯಿಂದ ಧಾವಿಸಿ ಬಂದ ಸಿದ್ಧರಾಮ ಮಹಾಮನೆಯನ್ನನು ಸೇರಿ ಸೈನ್ಯದಿಂದ ಆಗಬಹುದಾಗಿದ್ದ ಅನಾಹುತವನ್ನು ತಪ್ಪಿಸಿದುದಲ್ಲದೆ, ಶರಣರನ್ನೂ ಶರಣ ಸಾಹಿತ್ಯವನ್ನೂ ಸಂರಕ್ಷಿಸಿ ಸೊನ್ನಲಿಗೆಗೆ ಕರೆತರುತ್ತಾನೆ. ಚನ್ನಬಸವಣ್ಣ ಮೊದಲಾದವರು ಅಲ್ಲಿಂದ ಉಳಿವಿಗೆ ತೆರಳುತ್ತಾರೆ. ಅನುಭವ ಮಂಟಪ ಅಲ್ಲಿಯೂ ಮುಂದುವರಿದ ಸೂಚನೆ ಶೂನ್ಯಸಂಪಾದನೆಯಲ್ಲಿ ವ್ಯಕ್ತವಾಗಿದೆ.

ಅಲ್ಲದೆ ಶೂನ್ಯಸಂಪಾದನೆಯ ಮುಕ್ತಾಯ ಸಹ ಚನ್ನಬಸವಣ್ಣನ ವಚನದಿಂದಲೇ ಆಗಿದೆ. ಹೀಗಾಗಿ ಅನುಭವಮಂಟಪಕ್ಕೂ ಚನ್ನಬಸವಣ್ಣನಿಗೂ ಪ್ರಾಯಶಃ ಬೇರಾರಿಗೂ ಇಲ್ಲದಂತಹ ಅವಿನಾಭಾವಸಂಬಂಧ ಕಂಡುಬರುತ್ತದೆ. ಆತ ಆದಿಯಿಂದ ಅಂತ್ಯದ ತನಕ ಅನುಭವಮಂಟಪದ ಜ್ಞಾನಜ್ಯೋತಿಯಾಗಿ ಬೆಳಗುತ್ತಾನೆ. ಆತ ದೀಕ್ಷಾವಿಧಿಯ ಆಚಾರ್ಯ ಸ್ಥಾನದಲ್ಲಿದ್ದುದು ಸ್ಪಷ್ಟವಾಗಿದೆ. ಬಿಜ್ಜಳನ ಅವಸಾನದ ತರುವಾಯ ಕರ್ಣಾಟಕದಾದ್ಯಂತ ನೆಲೆಗೊಂಡ ವೀರಶೈವ ಮಠಗಳ ಪರಿಕಲ್ಪನೆ ಚನ್ನಬಸವಣ್ಣನದೆಂದು ಹೇಳಬಹುದು.

ಗ್ರಂಥಸೂಚಿ:

೧. R.S. Sharma, Ancient India, Page 125
೨. ಭಾರತ ಗ್ಯಾಸೆಟಿಯರ್, ಸಂಪುಟ ೨, ಪುಟ ೨೧೮.
೩. ಭಾರತದ ಗ್ಯಾಸೆಟಿಯರ್, ಸಂಪುಟ ೨, ಪುಟ ೨೧೭.
೪. ಡಾ॥ ಎಚ್. ತಿಪ್ಪೇರುದ್ರಸ್ವಾಮಿ, ಶೂನ್ಯಸಂಪಾದನೆ: ವಿವರಣಾತ್ಮಕ ಪರಿಚಯ, ಪು. ೨೮.
೫. ಓ.ಎನ್. ಲಿಂಗಣ್ಣಯ್ಯ, ಚನ್ನಬಸವಣ್ಣ, ಪು. ೧೯
೬. ಪ್ರಭು ಪರ್ಯಟನ ಸಂಪಾದನೆ, ಸಪ್ತದಶೋಪದೇಶ, ಶೂನ್ಯಸಂಪಾದನೆ, ಗೂಳೂರು ಸಿದ್ಧವೀರಣಾರ್ಯರ ಸಂಪಾದನೆ, ಪು. ೩೦೦.

* ಚನ್ನಬಸವಣ್ಣನವರು, ಸಂ. ಶ್ರೀಮತಿ ಜಗದಾಂಬಾ ಮಲ್ಲೇದೇವರು, ಶ್ರೀ ಶಿವರಾತ್ರೀಶ್ವರ ಧಾರ್ಮಿಕದತ್ತಿ (ರಿ), ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ, ರಾಮಾನುಜ ರಸ್ತೆ, ಮೈಸೂರು-೫೭೦ ೦೦೪, ೧೯೯೧.

ದೇಹದ ಒಳ-ಹೊರಗನ್ನು ತಿಳಿದುಕೊಂಡಿದ್ದರು ಎಂಬುದಕ್ಕೆ ಅವರು ಕರಣ ಹಸಿಗೆಯಲ್ಲಿ ನೀಡಿದ ಅನೇಕ ವಿವರಗಳು ಸಾಕ್ಷಿಯಾಗಿವೆ. ಅಲೆಕ್ಸಾಂಡರ್ ಪೋಪ್ ಹೇಳಿದಂತೆ 'ಮಾನವ ಕುಲದ ಸಮರ್ಪಕ ಅಧ್ಯಯನ ಮನುಷ್ಯ.' ಅದನ್ನು ಚೆನ್ನಬಸವಣ್ಣನವರು ಸಮರ್ಪಕವಾಗಿ ಅಭ್ಯಸಿಸಿದ್ದರು.

ಪಂಚಮಹಾಭೂತಗಳಿಂದ ಪಂಚೀಕೃತಿಗಳು ರೂಪುಗೊಂಡಿವೆ. ಪೃಥ್ವಿಯಿಂದ ಚಿತ್ತವೆಂಬ ಇಂದ್ರಿಯ, ಜೀವಕ್ಕೆ ಆಧಾರವಾದ ಪ್ರಾಣವಾಯು, ನಾಸಿಕವೆಂಬ ಘ್ರಾಣೇಂದ್ರಿಯ, ಗಂಧ ವಿಷಯ ಮತ್ತು ಗುದವೆಂಬ ಕರ್ಮೇಂದ್ರಿಯ ಮೂಡಿವೆ. ನೀರಿನಿಂದ ಬುದ್ಧಿ, ಅಪಾನವಾಯು, ರುಚಿ ಸಂವೇದನೆ ಕೊಡುವ ನಾಲಗೆ, ರಸ, ಗುಹ್ಯವೆನಿಸಿದ ಕರ್ಮೇಂದ್ರಿಯ ಬಂದರೆ, ಅಗ್ನಿಯಿಂದ ಅಹಂಕಾರ, ವ್ಯಾನವಾಯು, ಕಣ್ಣು, ರೂಪ ಮತ್ತು ನಡೆದಾಡುವ ಪಾದೇಂದ್ರಿಯ ದೊರೆತಿವೆ. ವಾಯುವಿನಿಂದ ಮನಸ್ಸು, ಉದಾನ ವಾಯು, ಚರ್ಮ, ಸ್ಪರ್ಶ ಮತ್ತು ಕೈ ರೂಪುಗೊಂಡರೆ, ಆಕಾಶದಿಂದ ಜ್ಞಾನ, ಸಮಾನವಾಯು, ಕಿವಿ, ಶಬ್ದ ಮತ್ತು ದನಿಪೆಟ್ಟಿಗೆ ರೂಪುಗೊಂಡಿವೆ.

ಬುದ್ಧೀಂದ್ರಿಯಗಳು

ನಮ್ಮ ಬುದ್ಧಿ (ಜ್ಞಾನ)ಯ ಕಿಂಡಿಗಳು ಹಲವಾರು. ಅವುಗಳು ಶ್ರವಣೇಂದ್ರಿಯ (ಕಿವಿ), ತ್ವಗೇಂದ್ರಿಯ (ಚರ್ಮ), ನಯನೇಂದ್ರಿಯ (ಕಣ್ಣು), ಜಿಹ್ವೇಂದ್ರಿಯ (ನಾಲಗೆ) ಮತ್ತು ಘ್ರಾಣೇಂದ್ರಿಯ (ಮೂಗು). ಈ ಜ್ಞಾನೇಂದ್ರಿಯಗಳು ನೀಡುವ ವರ್ತಮಾನ ಅರಿವಾಗಿ ಪರಿವರ್ತನೆಯಾಗುತ್ತದೆ ಎಂದು ಚೆನ್ನಬಸವಣ್ಣನವರು ತಿಳಿದಿದ್ದರು.

ರುಚಿ, ವಾಸನೆ, ದೃಷ್ಟಿ, ಶ್ರವಣ ಮತ್ತು ದೇಹದ ಭಂಗಿ ಹಾಗೂ ಚಲನೆಯ ವಿಶಿಷ್ಟ ಸಂವೇದನೆಗಳನ್ನು ದೊರಕಿಸಿಕೊಡುವ ಅಂಗಗಳು ದೇಹದಲ್ಲಿವೆ. ನಾಲಗೆ, ಮೂಗು, ಕಣ್ಣು, ಕಿವಿ ಈ ಕಾರ್ಯ ನಿರ್ವಹಿಸುತ್ತವೆ. ಚರ್ಮ ಅರಿವಿನ ಒಂದು ಮುಖ್ಯ ಭಾಗವಾಗಿದ್ದು ಅದು ಸ್ಪರ್ಶ, ನೋವು, ತಂಪು, ಬಿಸಿ, ಕಂಪನ ಮೊದಲಾದ ಸಂವೇದನೆಗಳ ಅರಿವನ್ನು ದೇಹಕ್ಕೆ ದೊರಕಿಸಿಕೊಡುತ್ತದೆ. ಈ ಎಲ್ಲ ಅಂಗಭಾಗಗಳು ಸೇರಿ ಪಂಚೇಂದ್ರಿಯಗಳಾಗಿವೆ.

ಶ್ರೋತ್ರೇಂದ್ರಿಯ

ನಮ್ಮ ಶ್ರವಣ ಸಾಧನದಿಂದ ನಾವು ನಮ್ಮ ಸುತ್ತಲಿನ ಜಗತ್ತಿನೊಡನೆ ಸಂಪರ್ಕವನ್ನು ಸದಾ ಕಾಯ್ದಿರಿಸಿಕೊಂಡಿರುತ್ತೇವೆ. ಕಣ್ಣು ಮುಚ್ಚಿದರೂ ಶಬ್ದ ಹಿಂದಿನಿಂದ, ಮುಂದಿನಿಂದ, ಪಕ್ಕದಿಂದ, ಸಮೀಪದಿಂದ ಇಲ್ಲವೆ ದೂರದಿಂದ ಬಂದರೂ ಅದರ ಸ್ಥಳ ನಿರ್ದೇಶನವನ್ನು ನಾವು ಮಾಡಬಲ್ಲೆವು. ನಾವು ಕೇಳುವ ಶಬ್ದಗಳು ಅವು ಅಕ್ಷರಾತ್ಮಕವಾಗಿರಲಿ ಇಲ್ಲವೆ ಅನಕ್ಷರಾತ್ಮಕವಾಗಿರಲಿ –ಗಾಳಿಯ ಕಂಪನಗಳಾಗಿ ನಮ್ಮನ್ನು ತಲುಪುತ್ತವೆ. ಅವು ಜಗತ್ತಿನೊಡನೆ ನಮ್ಮ ಸಂಪರ್ಕವನ್ನು ಕಲ್ಪಿಸುತ್ತವೆ.

ತ್ವಗಿಂದ್ರಿಯ

ನಮ್ಮ ದೇಹ ಚರ್ಮದ ಹೊದಿಕೆಯನ್ನು ದೇಹಾದ್ಯಂತ ವ್ಯಾಪಕವಾಗಿ ಪಡೆದಿದ್ದು

ಬದ್ಧಿಶಕ್ತಿಯ ಕಾರ್ಯಕ್ಕೆ ಪ್ರಚೋದನೆ ದೊರೆಯುವುದು ಇಂದ್ರಿಯಗಳ ಮೂಲಕ. ಅವುಗಳ ಮೂಲಕ ಜಗತ್ತಿನ ಸಂಪರ್ಕ ಪಡೆದುಕೊಳ್ಳುತ್ತೇವೆ. ಹಾಗೆ ದೊರಕಿಸಿದ ವಿಷಯವನ್ನು ಅರ್ಥಯಿಸಿ, ವಿಶ್ಲೇಷಿಸಿ ಚಿಂತನೆ ಮಾಡವುದು ನಮ್ಮ ಮಿದುಳು. ಬಾಹ್ಯ ಜಗತ್ತು ಬ್ರಹ್ಮಾಂಡವಾದರೆ, ಅಂತರಂಗದೊಳಗಿನ ಜಗತ್ತು ಪಿಂಡಾಂಡವಾಗುತ್ತದೆ. ನಮ್ಮ ಬುದ್ಧಿಶಕ್ತಿಯಿಂದ ಇಂದ್ರಿಯಗಳು ನೀಡುವ ಅಂಶಗಳನ್ನಾಧರಿಸಿ ಹೊರಜಗತ್ತು ಪರಿಶೀಲಿಸುತ್ತೇವೆ. ದೇಹ ಮನಸ್ಸಿನ ಜೊತೆಗೂಡಿ ತಾನು ದೊರಕಿಸಿಕೊಂಡ ವಿಷಯಗಳಲ್ಲಿ ಅಡಗಿದ ಚೈತನ್ಯಶಕ್ತಿಯ ಬಗ್ಗೆ ವಿಚಾರ ಮಾಡುತ್ತದೆ. ಇವೆರಡೂ ಅಂಶಗಳ ವಿಶ್ಲೇಷಣೆಯನ್ನು ಚೆನ್ನಬಸವಣ್ಣನವರು ಕರಣ ಹಸಿಗೆಯಲ್ಲಿ ಮಾಡಿದ್ದಾರೆ. ಮನುಷ್ಯ ತನ್ನನ್ನು ತಾನು ಅರಿತಲ್ಲಿ ಮಾತ್ರ ಆತ ಜೀವನದ ವಿವಿಧ ಮಜಲುಗಳನ್ನು ಏರಿ ಮಹೋನ್ನತಿಯನ್ನು ಪಡೆಯಬಲ್ಲ.

ಪಿಂಡ ಬ್ರಹ್ಮಾಂಡಯೋರೈಕ್ಯಂ

ಪೃಥ್ವಿ, ನೀರು, ಬೆಂಕಿ, ವಾಯು ಮತ್ತು ಆಕಾಶ ಎಂಬ ಪಂಚ ಮಹಾಭೂತಗಳಿಂದ ಸೂರ್ಯಚಂದ್ರರ ಅಡಿಯಲ್ಲಿ ಬ್ರಹ್ಮಾಂಡ ರೂಪುಗೊಂಡಿದೆ. ಅವೇ ಗುಣವಿಶೇಷಗಳು ಬ್ರಹ್ಮಾಂಡದಲ್ಲಿನ ಜೀವರಾಶಿಯಲ್ಲಿ ಸೇರ್ಪಡೆಗೊಂಡಿವೆ. ಪೃಥ್ವಿಯಿಂದ ಮೂಳೆ, ಮಾಂಸ, ಚರ್ಮ, ನರ, ಕೂದಲು ಎಂಬ ಕಠಿಣ ಸ್ವರೂಪದ ಐದು ದೇಹಭಾಗಗಳು ರೂಪುಗೊಂಡಿವೆ. ನೀರಿನಿಂದ ಕಫ, ಮೂತ್ರ, ಬೆವರು, ವೀರ್ಯ, ರಕ್ತ ಎಂಬ ಮೃದಸ್ವರೂಪದ, ದೇಹದಲ್ಲಿ ಸಿದ್ಧವಾಗಿ ವಿಸರ್ಜನಗೊಳ್ಳುವ, ಪರಿಚಲನೆಗೊಳ್ಳುವ ಐದು ದ್ರವರೂಪಿ ವಸ್ತುಗಳು ರಚನೆಯಾಗಿವೆ. ನಮ್ಮ ದೈಹಿಕ ಕಾರ್ಯಕ್ರಿಯೆಗಳ ಗುಣಲಕ್ಷಣಗಳಾಗಿ ತೋರುವ ಹಸಿವು, ನೀರಡಿಕೆ, ನಿದ್ರೆ, ಆಲಸ್ಯ, ಸ್ತ್ರೀಸಂಗ –ಇವುಗಳೆಲ್ಲ ಅಗ್ನಿತತ್ವಗಳಿಂದ ಉದ್ಭವಿಸುತ್ತವೆ. ಗಾಳಿಯಿಂದ ಸ್ವಚ್ಛಂದ ಚಲನೆ, ಜಿಗಿತ, ಸುಳಿದಾಟ, ಒಂದೆಡೆ ಸೇರುವುದು, ದೂರವಾಗುವುದು ಸಾಧ್ಯವಾಗಿದೆ. ನಮ್ಮ ಮನಸ್ಸಿನಲ್ಲಿ ಏಳುವ ಬಯಕೆ, ದ್ವೇಷ, ಭಯ, ಲಜ್ಜೆ, ಮೋಹಗಳು ಆಕಾಶದಿಂದ ಪ್ರಭಾವಿತ.

ಈ ರೀತಿ 'ಬ್ರಹ್ಮಾಂಡದೊಳಗುಳ್ಳ ಗುಣಂಗಳಾಶ್ರಯ ಪಿಂಡದಲ್ಲಿ' ಎಂದು ಚೆನ್ನಬಸವಣ್ಣನವರು ಹೇಳುತ್ತಾರೆ, ಆ ಅಂಶಗಳೆಲ್ಲ ಒಂದು ಮಾರು, ಮೂರೂವರೆ ಮೊಳ, ಎಂಟು ಗೇಣು, ತೊಂಬತ್ತಾರು ಅಂಗುಲ ಪರಿಮಾಣವುಳ್ಳ ಮನುಷ್ಯ ದೇಹದಲ್ಲಿ 'ಸೂಕ್ಷ್ಮರೂಪಿಂದ' ಸಂಗ್ರಹವಾಗಿ ತೋರಿಬರುತ್ತವೆ.

ನಾಲ್ಕನೇ ಶತಮಾನದಲ್ಲಿ ಜೀವಿಸಿದ್ದ ಸಂತ ಜಾನ್ ಕ್ರೈಸೊಸ್ಟೋಮ್ ನಮ್ಮ ದೇಹವನ್ನು ಹೀಗೆ ವಿವರಿಸಿದ್ದ: 'ನಮ್ಮ ದೇಹ ತುಂಬ ಚಿಕ್ಕದಿದ್ದು ಅದು ನಾಲ್ಕು ಧಾತುಗಳನ್ನು ಒಳಗೊಂಡಿದೆ. ಅವುಗಳೆಂದರೆ ಬಿಸಿರಕ್ತ, ಒಣಗಿದ ಹಳದಿ ಪಿತ್ತ, ಹಸಿಯಾದ ಕಫ ಮತ್ತು ತಂಪಾದ ಕರಿಪಿತ್ತ.'

ಪಂಚೀಕೃತಿಗಳು

ಮಾನವ ದೇಹವನ್ನು ಕತ್ತರಿಸಿ ಒಳಗಿನ ಅವಯವಗಳ ರಚನೆ ಮತ್ತು ಕಾರ್ಯಕ್ರಿಯೆ ನಿಗೂಢವಾಗಿದ್ದ ಕಾಲದಲ್ಲಿ ಚೆನ್ನಬಸವಣ್ಣನವರು ಬದುಕಿದ್ದರು. ಅವರು ತಮ್ಮ ಜ್ಞಾನದಿಂದ

ವೈದ್ಯವಿಜ್ಞಾನಿ ಚೆನ್ನಬಸವಣ್ಣನವರು

●

ಡಾ. ಪಿ.ಎಸ್. ಶಂಕರ್

ಕರಣ ಹಸಿಗೆ

ಪೃಥ್ವಿ, ಅಪ್ಪು, ತೇಜ, ವಾಯು ಮತ್ತು ಆಕಾಶ ಎಂಬ ಪಂಚಭೂತಗಳಿಂದಾದ ಈ ದೇಹದೊಳಗಿನ ಪ್ರವೇಶ ನಮ್ಮ ಆತ್ಮದರ್ಶನಕ್ಕೆಡೆಮಾಡಿಕೊಡುತ್ತದೆ. ಅದರಿಂದ ಯಂತ್ರವೆಂದು ಪರಿಗಣಿಸಲ್ಪಟ್ಟಿರುವ ದೇಹದ ಸಂಪೂರ್ಣ ಸ್ವರೂಪ ಮತ್ತು ಅದರ ಬೇರೆ ಬೇರೆ ಅಂಗಭಾಗಗಳ ಕಾರ್ಯವೈಖರಿಯನ್ನು ತಿಳಿದುಕೊಳ್ಳಲು ಅನುಕೂಲವೆಂದು ನಾವು ಭಾವಿಸಿದ್ದೇವೆ. ಬರುಕ್ ಸ್ಪಿನೋಜ ವಿವರಿಸಿದಂತೆ 'ಮನುಷ್ಯದೇಹ ಬಹು ಸಂಖ್ಯೆಯಲ್ಲಿ ವಿಭಿನ್ನ ತೆರನಾದ, ಪ್ರತಿಯೊಂದೂ ತುಂಬ ಜಟಿಲವಾದ ಬೇರೆ ಬೇರೆ ಭಾಗಗಳನ್ನು ಹೊಂದಿದೆ.' ಅದನ್ನೇ ಜೋಸಫ್ ಅಡಿಸನ್ ಹೇಳುತ್ತಾನೆ: 'ದೇಹವು ನಾಳಗಳ ಮತ್ತು ಗ್ರಂಥಿಗಳ ವ್ಯವಸ್ಥೆಯೆಂದು ನಾನು ಪರಿಗಣಿಸುತ್ತೇನೆ. ಅದನ್ನೇ ಹಳ್ಳಿಗಾಡಿನ ನುಡಿಗಟ್ಟಿನಲ್ಲಿ ಹೇಳಬೇಕೆಂದರೆ, ಅದು ಕೊಳವೆಗಳು ಮತ್ತು ಸೋಸು ಜಾಲರಿಯ ಕಂತೆ. ಅವು ಪರಸ್ಪರ ಜೊತೆಗೂಡಿ, ಕೌತುಕವೆನಿಸುವ ರೀತಿಯಲ್ಲಿ ಆತ್ಮ ತನ್ನ ಕಾರ್ಯ ನಿರ್ವಹಿಸಲು ಅನುಕೂಲವಾಗುವಂತೆ ಸಮರ್ಪಕ ಯಂತ್ರವನ್ನಾಗಿಸಿವೆ.'

ಈ ದೇಹದ ಆತ್ಮದರ್ಶನ ಮಾಡಿಕೊಡುವಂತಹ ವಿಶಿಷ್ಟ ಕೈಪಿಡಿಯೊಂದನ್ನು, 'ಗುಹೇಶ್ವರ ಲಿಂಗದಲ್ಲಿ ನೀನೊಬ್ಬನೇ ಮಹಾಜ್ಞಾನಿ'ಯೆಂದು ಅಲ್ಲಮಪ್ರಭುಗಳಿಂದ ಪ್ರಶಂಸೆಗೊಳಗಾದ ನಿರಾಭಾರಿ, ದೇಶಿಕೋತ್ತಮ ಚನ್ನಬಸವಣ್ಣನವರು ರಚಿಸಿದ್ದಾರೆ. ಅದು 'ಕರಣ ಹಸಿಗೆ.'

ಕಿರಿಯ ವಯಸ್ಸಿನಲ್ಲಿಯೇ ತಮ್ಮ ಅಸಾಧಾರಣ ಪಾಂಡಿತ್ಯದಿಂದ ಅನುಭಾವದ ಅರಿವು ಪಡೆದು ಹಿರಿಯತನ ಪಡೆದ ಹೆಗ್ಗಳಿಕೆ ಚನ್ನಬಸವಣ್ಣನವರದ್ದು. ಅವರು ರಚಿಸಿದ ಈ ಚಿಕ್ಕ ಕೃತಿ 'ಚಿತ್ಕೃತಿ, ಸತ್ಕೃತಿ ಮತ್ತು ಬೆಳಕಿನ ಮಹತ್ಕೃತಿ' ಎಂದು ಜಗದ್ಗುರು ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ವರ್ಣಿಸಿದ್ದಾರೆ. ಕರಣಹಸಿಗೆಯಲ್ಲಿ ಅದರ ಹೆಸರೇ ಹೇಳುವಂತೆ, ಅವರು ಮನುಷ್ಯ ದೇಹದ ತತ್ತ್ವಂಗಳನ್ನು (ಕರಣ) ಪದರ ಪದರಾಗಿ ವಿಭಾಗಗಳಾಗುವಂತೆ (ಹಸಿಗೆ) ವಿಭಜಿಸಿ ತೋರಿಸಿದ್ದು ಇದು ತತ್ತ್ವಗಳ ವಿಭಾಗವಾಗಿದೆ.

ಕರಣ ಹಸಿಗೆ ಚಿಕ್ಕ ಗ್ರಂಥವಾದರೂ ಅದು ತುಂಬ ಮೌಲ್ಯಯುತವಾದದ್ದು. ಅದರ ಅಧ್ಯಯನ ಅಂತರಂಗದ ಅನುಭವ ಮತ್ತು ಅನುಭಾವವನ್ನು ಹೆಚ್ಚಿಸುತ್ತದೆ. ಮನುಷ್ಯನ

ಅದರ ಮೂಲಕ ಅರಿವನ್ನು ಪಡೆಯುತ್ತೇವೆ. ಅದು ಸಂವೇದನೆಗಳನ್ನು ಗ್ರಹಿಸುವ ಮತ್ತು ಕೊಂಡೊಯ್ಯುವ ಉಪಕರಣಗಳನ್ನು ಹೊಂದಿದೆ. ಅದರಿಂದ ಸ್ಪರ್ಶ ಸಂವೇದನೆಯ ಅರಿವು ಪಡೆದು ತಂಪು, ಬಿಸಿ, ಮೃದು, ಕಠಿಣ ಎಂದು ಸ್ಪರ್ಶದ ಭೇದ ಮಾಡಬಲ್ಲೆವು. ಸ್ಪರ್ಶ ಜೀವನದ ಮೂಲಭೂತ ಅವಶ್ಯಕತೆಯೆನಿಸಿದೆ.

ನೇತ್ರೇಂದ್ರಿಯ

ದೇಹದ ಬೆಳಕು ಕಣ್ಣುಗಳೆಂದು ಬೈಬಲ್ ಹೇಳಿದೆ. ಅವುಗಳ ಮೂಲಕ ನಾವು ಸಮೀಪದ ಇಲ್ಲವೆ ದೂರದ ಯಾವುದೇ ವಸ್ತುವಿನ ಆಕೃತಿಯನ್ನು ಬಣ್ಣವನ್ನು ಗುರುತಿಸುತ್ತೇವೆ. ಅದರ ಮೂಲಕ ನಾವು ಬಿಳಿ, ಹಳದಿ, ಹಸಿರು, ಕೆಂಪು, ಕಪೋತ ಮತ್ತು ಕಪ್ಪು ಬಣ್ಣಗಳ ರೂಪುಭೇದವನ್ನು ತಿಳಿಯಬಲ್ಲೆವು.

ಜನಪದವು ಕಣ್ಣುಗಳನ್ನು ಮಿಂಚುವ ನಕ್ಷತ್ರಗಳೆಂದು ಪರಿಗಣಿಸಿದ್ದು, 'ಎರಡು ಹಕ್ಕಿ ಗೂಡನ್ಯಾಗ ಕುಂತಗೊಂಡ ನಾಡೆಲ್ಲ ನೋಡ್ತಾವ' ಎಂದು ಹೇಳಿದೆ. ಕಣ್ಣು ನಮ್ಮ ದೇಹದ ಬಹುಮುಖ್ಯ ಜ್ಞಾನವಾಹಿನಿಯಾಗಿದ್ದು ಅದರ ಮೂಲಕ ನಾವು ಜಗತ್ತನ್ನು ಕಾಣುತ್ತೇವೆ. 'ಸುಂದರ ಕಣ್ಣು ಮೌನವನ್ನು ವಾಗ್ಮಿಯಾಗಿಸುತ್ತದೆ. ಪ್ರೀತಿಯ ಕಣ್ಣು ಅಸಂಗತವನ್ನು ಅಂಗೀಕರಿಸುವಂತೆ ಮಾಡುತ್ತದೆ. ಕೆರಳಿದ ಕಣ್ಣು ಸೌಂದರ್ಯವನ್ನು ಭಗ್ನಗೊಳಿಸುತ್ತದೆ. ದೇಹದ ಈ ಚಿಕ್ಕ ಸದಸ್ಯ ತನ್ನ ಉಳಿದೆಲ್ಲ ಭಾಗಗಳಿಗೆ ಜೀವನವನ್ನು ಕೊಡುತ್ತದೆ' ಎಂದು ೧೭ನೇ ಶತಮಾನದ ಪ್ರಬಂಧಕಾರ ಜೋಸಫ್ ಅಡಿಸನ್ ವರ್ಣಿಸಿದ್ದಾನೆ.

ಜಿಹ್ವೇಂದ್ರಿಯ

ನಾಲಗೆ ರಸವಿಷಯದ ತಿಳಿವಳಿಕೆ ತಂದು ಕೊಡುತ್ತದೆ. ರುಚಿಗೆ ಪ್ರತಿಕ್ರಿಯೆ ತೋರಿಸುವ ರುಚಿಕುಡಿಗಳು ನಾಲಗೆಯ ಮೇಲ್ಮೈಯಲ್ಲಿವೆ. ಬೇರೆ ಬೇರೆ ಆಕೃತಿಯ, ಸಾವಿರಕ್ಕೂ ಮೇಲ್ಪಟ್ಟು ಸಂಖ್ಯೆಯಲ್ಲಿ ರುಚಿಕುಡಿಗಳು ನಾಲಗೆಯ ಒಡಲಲ್ಲಿ, ತುದಿಯಲ್ಲಿ ಮತ್ತು ಅಂಚಿನಲ್ಲಿ ಹುದುಗಿವೆ. ಅವುಗಳು ಹೊಂದಿದ ನರತಂತು ಸಂಪರ್ಕದ ಮೂಲಕ ರುಚಿಯ ವರ್ತಮಾನ ಮಿದುಳಿಗೆ ಹೋಗಿ ಅಲ್ಲಿ ಗ್ರಹಿಸಲ್ಪಡುತ್ತದೆ.

ಅದು ಗ್ರಹಿಸುವ ರುಚಿಗಳು ಆರು. ಮಧುರ, ಆಮ್ಲ, ಕಟು, ಒಗರು, ಕಹಿ (ತಿಕ್ತ) ಮತ್ತು ಲವಣ. ಅವು ಷಡ್ರಸಗಳು. ಅವುಗಳನ್ನು ನಾಲ್ಕು ಮೂಲಭೂತ ರುಚಿಗಳೆಂದು ಈಗ ಗುರುತಿಸಲಾಗಿದೆ. ಅವು ಸಿಹಿ, ಹುಳಿ, ಕಹಿ ಮತ್ತು ಉಪ್ಪು, ಖಾರ ಮತ್ತು ಕೊಬ್ಬು, ಐದು ಮತ್ತು ಆರನೆಯ ರುಚಿಗಳಾಗಿ ಪರಿಗಣಿಸಲ್ಪಟ್ಟಿವೆ. ನಮ್ಮ ಅರಿವಿಗೆ ಬರುವ ರುಚಿಗಳೆಲ್ಲವೂ ಈ ನಾಲ್ಕೈದು ರುಚಿಗಳ ಮಿಶ್ರಣದಿಂದ ಉದ್ಭವಿಸುತ್ತವೆ.

ಘ್ರಾಣೇಂದ್ರಿಯ

ಮೂಗು ವಾಸನೆಯನ್ನು ಗುರುತಿಸಿ ಅದು ಸುಗಂಧವೋ, ದುರ್ಗಂಧವೋ ಎಂದು ಗಂಧಭೇಧ ಮಾಡುತ್ತದೆ. ಸುವಾಸನೆಯ ಪರಿಮಳವನ್ನು ಮತ್ತಷ್ಟು ಆಘ್ರಾಣಿಸಲು ಅಪೇಕ್ಷಿಸಿದರೆ, ದುರ್ವಾಸನೆಯನ್ನು ತಡೆಗಟ್ಟಲು ಮೂಗು ಮುಚ್ಚಿಕೊಳ್ಳುತ್ತೇವೆ. ಮೂಗಿನ ಮೇಲ್ತುದಿಯಲ್ಲಿ,

ನಾಸಿಕ ಭಾವಣಿಯಲ್ಲಿ ವಾಸನೆ ಗ್ರಹಿಸುವ ಅಂಗವಿದೆ. ಆರು ಮೂಲಭೂತ ವಾಸನೆಗಳಿದ್ದು ಅವು ಪುಷ್ಪ, ಫಲ, ಘಾಟು, ರಾಳ, ಕೊಳೆತ ನಾತ ಮತ್ತು ಕಮರು. ಅವುಗಳ ಮಿಶ್ರಣ ಅನೇಕ ವಾಸನೆಗಳನ್ನು ಹೊರಹೊಮ್ಮಿಸುತ್ತದೆ.

ಅರಿವಿನ ಈ ಎಲ್ಲ ಅಂಗಗಳು ಜ್ಞಾನೇಂದ್ರಿಯಗಳಾಗಿ ನಮ್ಮ ಬುದ್ಧಿಯನ್ನು ಹೆಚ್ಚಿಸುತ್ತವೆ.

ಕರ್ಮೇಂದ್ರಿಯಗಳು

ಚೆನ್ನಬಸವಣ್ಣನವರು ಹಸಿಗೆ ಮಾಡಿ ನಿರೂಪಿಸುವಾಗ ನಮ್ಮಲ್ಲಿ ಐದು ಕರ್ಮೇಂದ್ರಿಯಗಳಿವೆ ಎಂದಿದ್ದಾರೆ. ಅವು ವಾಕ್, ಹಸ್ತ, ಪಾದ, ಗುದ, ಮತ್ತು ಗುಹ್ಯ.

ಸರಸ್ವತಿ ಅಧಿದೇವತೆಯಾದ ವಾಗಿಂದ್ರಿಯಕ್ಕೆ ವಾಯು ಮೂಲ ಚೈತನ್ಯವನ್ನು ಒದಗಿಸಿಕೊಡುತ್ತದೆ. ದನಿಪೆಟ್ಟಿಗೆ ಮೂಲಕ ಹಾಯ್ದು ಹೋಗುವ ಗಾಳಿ ದನಿ ತಂತುಗಳ ಕಂಪನವನ್ನುಂಟುಮಾಡಿ ಶಬ್ದಗಳನ್ನು ಉಚ್ಚರಿಸಿ, ಹೊರಹಾಕುವುದು. ಅವು ಸುವಾಕ್ಯ, ದುರ್ವಾಕ್ಯಗಳಾಗಿರಬಹುದು. ಹಸ್ತವೆಂಬ ಪ್ರಾಣೇಂದ್ರಿಯದಿಂದ ವಸ್ತುಗಳನ್ನು ಹಿಡಿದುಕೊಳ್ಳ ಬಹುದು, ಬಿಡಬಹುದು, ಚರಣಗಳೆಂಬ ಪಾದೇಂದ್ರಿಯದಿಂದ ಚಲಿಸುವ ಸಾಮರ್ಥ್ಯವನ್ನು ಪಡೆದಿದ್ದೇವೆ. ಗುದ ಮತ್ತು ಮೂತ್ರನಾಳಗಳೆಂಬ ವಾಯ್ವಿಂದ್ರಿಯಗಳ ಮೂಲಕ ಸರ್ಜನವಿಸರ್ಜನ ಕ್ರಿಯೆಗಳು ಜರುಗುತ್ತವೆ. ನೆಟ್ಟಕರುಳು ಮತ್ತು ಮೂತ್ರ ಕಂಕೋಶದಲ್ಲಿ ಸಂಗ್ರಹಗೊಂಡ ಮಲ-ಮೂತ್ರವನ್ನು ಅದು ವಿಸರ್ಜಿಸಿ ದೇಹ ಶುದ್ಧತೆಯನ್ನು ಕಾಯ್ದುಕೊಳ್ಳುತ್ತದೆ. ಗುಹೇಂದ್ರ, ಪ್ರಜನನ ವ್ಯವಸ್ಥೆಯ ಅಂಗಭಾಗವಾಗಿದ್ದು ಅದರ ಮೂಲಕ ಮನುಷ್ಯ ವಿಷಯ ಸುಖದ ಆನಂದ-ಅನಾನಂದ ಪಡೆಯಬಲ್ಲವನಾಗಿದ್ದಾನೆ.

ಪ್ರಾಣ ಪಂಚಕ

ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಎಂಬ ವಾಯುಗಳು ಪ್ರಾಣಪಂಚಕಗಳೆಂದು ಚೆನ್ನಬಸವಣ್ಣನವರು ಪರಿಗಣಿಸಿದ್ದಾರೆ. ಅವರು ಜೀವಿಸಿದ್ದು ೧೨ನೇ ಶತಮಾನದಲ್ಲಿ. ಆಗ ಉಸಿರಾಟ ಕ್ರಿಯೆ, ಪಚನಕ್ರಿಯೆ, ರಕ್ತ ಪರಿಚಲನೆ -ಇವಾವುವೂ ವೈದ್ಯರಂಗದಲ್ಲಿ ಪರಿಚಿತವಾಗಿರಲಿಲ್ಲ. ಅಂತಹ ಕಾಲದಲ್ಲಿ ಚೆನ್ನಬಸವಣ್ಣನವರು ಉಸಿರಾಟದ ಉಚ್ಛ್ವಾಸ-ನಿಶ್ವಾಸ, ಆಹಾರ ಪಚನ, ಲೋಮನಾಳಗಳ ಮೂಲಕ ಅನ್ನರಸದ ಹೀರಿಕೆ ಮತ್ತು ಅದರಿಂದ ದೇಹ ಪುಷ್ಠಿ ದೊರೆಯುವುದರ ಬಗ್ಗೆ ತಿಳಿವಳಿಕೆ ಹೊಂದಿದ್ದುದು ನಿಜಕ್ಕೂ ಅಗಾಧ.

ಪ್ರಾಣವಾಯು

ಪ್ರಾಣವಾಯು ನಮ್ಮ ಎಲ್ಲ ಜೀವಾಳ ಕಾರ್ಯಕ್ರಿಯೆಗಳ ಮೂಲಾಧಾರ. ಉಸಿರಾಟದ ಮೂಲಕ, ಉಸಿರನ್ನು ಒಳಕ್ಕೆ ಎಳೆದುಕೊಂಡಾಗ ಗಾಳಿಯ ಭಾಗವಾದ ಆಕ್ಸಿಜೆನ್ ಉಸಿರುನಾಳದ ಮೂಲಕ ಒಳಬಂದು ಶ್ವಾಸಗೂಡನ್ನು ತಲುಪುತ್ತದೆ. ಅಲ್ಲಿನ ಸೂಕ್ಷ್ಮಪದರಿನ ಮೂಲಕ ಲೋಮನಾಳಗಳ ಜಾಲಕೊಂಡು ತಂದು ಮಲಿನ ರಕ್ತದಲ್ಲಿನ ಇಂಗಾಲ ಡೈ ಆಕ್ಸೈಡ್ ಜೊತೆ ಅನಿಲ ವಿನಿಮಯ ಮಾಡಿಕೊಂಡು, ನಂತರ ಮಲಿನ ವಾಯು ನಿಶ್ವಾಸದಲ್ಲಿ ಹೊರಹೋಗುತ್ತದೆ. ಚೆನ್ನಬಸವಣ್ಣನವರು ಪ್ರಾಣವಾಯು ಉಚ್ಛ್ವಾಸ-ನಿಶ್ವಾಸದಲ್ಲಿ ಭಾಗವಹಿಸುತ್ತದೆ. ಅದರ

ಕಾರ್ಯಕ್ಕೆ ಒತ್ತಾಸೆ ಕೊಡುವುದು 'ಹೃದಯ ಸ್ಥಾನ'ದಲ್ಲಿದೆ. ಅದರ ಪ್ರಭಾವ ಹೆಬ್ಬೆರಳ ತುದಿಯಿಂದ ಮೂಗಿನ ತುದಿಯುವರೆಗೂ ಇದ್ದು ಅದು ಚೈತನ್ಯದಾಯಕವಾಗಿ ಕಾರ್ಯನಿರ್ವಹಿಸುತ್ತದೆ. ಅದರಿಂದಾಗಿಯೇ ಅನ್ನ ಪಚನ ಕಾರ್ಯವು ಜರುಗುತ್ತದೆ.

ಅಪಾನವಾಯು

ಅಪಾನವಾಯು ಗುದಸ್ಥಾನದಲ್ಲಿದ್ದು ಗುದದ ಮೂಲಕ ಮಲವನ್ನು, ಮೂತ್ರನಾಳದ ಮೂಲಕ ಮೂತ್ರವನ್ನು ವಿಸರ್ಜನೆ ಮಾಡಲು ಅವಕಾಶ ಮಾಡಿಕೊಡುತ್ತದೆ. ಕರುಳಿನಲ್ಲಿ ಅನ್ನರಸ ಹೀರಲ್ಪಟ್ಟ ಮೇಲೆ ಉಳಿಯುವ ವಸ್ತು ಮಲವಾಗಿ ನೆಟ್ಟ ಕರುಳಿನಲ್ಲಿ ಸಂಗ್ರಗೊಳ್ಳುತ್ತದೆ. ಅದೇ ರೀತಿ ಮೂತ್ರ ವಿಸರ್ಜನೆಗೆ ಮುನ್ನ ಮೂತ್ರಕೋಶದಲ್ಲಿ ಸಂಗ್ರಹಗೊಳ್ಳುತ್ತದೆ. ಈ ತ್ಯಾಜ್ಯ ವಸ್ತುಗಳನ್ನು ದೇಹ ಅಧೋದ್ವಾರಗಳಾದ ಗುದ ಮತ್ತು ಗುಹ್ಯಗಳ ಮೂಲಕ ಆಗಾಗ್ಗೆ ವಿಸರ್ಜಿಸುತ್ತದೆ. ಈ ರೀತಿ ತ್ಯಾಜ್ಯ ವಸ್ತುಗಳನ್ನು ವಿಸರ್ಜಿಸುವ ಕ್ರಿಯೆಗಳಿಂದಾಗಿ ಹಸಿವು, ನೀರಡಿಕೆ ಉಂಟಾಗುತ್ತದೆ.

ವ್ಯಾನವಾಯು

ವ್ಯಾನವಾಯು ದೇಹದ ಎಲ್ಲ ಭಾಗಗಳಲ್ಲಿ ಪಸರಿಸಿದ್ದು ಅದು ನಾಡಿಗಳಲ್ಲಿ ಅನ್ನಪಾನವನ್ನು ತುಂಬಿಸುವ ಕೆಲಸ ಮಾಡುತ್ತದೆ. ದೇಹ ತನ್ನೊಳಗೆ ತೆಗೆದುಕೊಂಡ ಆಹಾರ ಪಾನೀಯಗಳನ್ನು ಪಚನಗೊಳಿಸಿದ ಮೇಲೆ ಅವುಗಳನ್ನು ಕರುಳಿನಿಂದ ಹೀರಿ ಆ ರಸವನ್ನು ದೇಹದ ಒಳಿತಿಗೆ ಪೂರೈಸುತ್ತದೆ.

ಉದಾನ ವಾಯು

ಉದಾನ ವಾಯುವಿನ ಸ್ಥಾನ ಕಂಠದಲ್ಲಿ ಎಂದರೆ ಗಂಟಲಿನಲ್ಲಿನ ದನಿಪೆಟ್ಟಿಗೆಯಲ್ಲಿ. ಆ ಹಾದಿಯ ಮೂಲಕ ಸೀನು, ಕೆಮ್ಮು, ಶ್ವಾಸೋಚ್ಛಾರಣೆ ಜರುಗುತ್ತದೆ. ಚೆನ್ನಬಸವಣ್ಣನವರ ಪ್ರಕಾರ ಅದು ಸ್ವಪ್ನಾವಸ್ಥೆಯನ್ನು ಉಂಟುಮಾಡುವ, ರಾತ್ರಿಯೂಟ ಪಚನವಾಗದಿದ್ದಲ್ಲಿ ವಾಂತಿ ಮಾಡಿಸುವ ಕಾರ್ಯ ನಿರ್ವಹಿಸುತ್ತದೆ. ನಂತರ ಪಚನಿಕ ನಾಳದಲ್ಲಿ ಉಳಿದ ಅನ್ನ ನೀರನ್ನು ಅನ್ನರಸವನ್ನಾಗಿ ಪರಿವರ್ತನೆ ಮಾಡುತ್ತದೆ.

ಸಮಾನವಾಯು

ಸಮಾನವಾಯುವಿನ ಶಕ್ತಿ ಹೊಕ್ಕುಳ ಪ್ರದೇಶದಲ್ಲಿದ್ದು ಉಂಡ ಆಹಾರ ಉದರಾಗ್ನಿಯಿಂದ ಪಚನಗೊಂಡು ದೇಹಕ್ಕೆ ಆವಶ್ಯಕವಾದ ರಸವಾಗುವುದು. ಉಳಿದುದು ಕೆಟ್ಟದೆಂಬ ತ್ಯಾಜ್ಯ ವಸ್ತುವಾಗಿ ಗುದ–ಗುಹ್ಯಗಳ ಮೂಲಕ ಮಲ–ಮೂತ್ರ ರೂಪಿನಿಂದ ವಿಸರ್ಜಿಸಲ್ಪಡುತ್ತದೆ. ಪಚನಗೊಂಡ ಅನ್ನರಸವನ್ನು ದೇಹದ ಎಲ್ಲ ಕಡೆ ಕೊಂಡೊಯ್ಯಲು ಅದನ್ನು ಲೋಮ (ರೋಮ) ನಾಳದೊಳಕ್ಕೆ ಕಳುಹಿಸುವುದು. ಅನ್ನರಸ ಹೀಗೆ ಪಚನಿಕ ನಾಳದ ಲೋಳ್ಪರೆಯ ಮೂಲಕ ರಕ್ತನಾಳ ಮತ್ತು ಹಾಲ್ರಸನಾಳಗಳ ಕವಲುಗಳೊಳಕ್ಕೆ ಸೇರಿ ದೇಹಕ್ಕೆ ಪುಷ್ಟಿಯನ್ನು ಹಂಚುತ್ತಿದ್ದಿತೆಂಬುದನ್ನು ಚೆನ್ನಬಸವಣ್ಣನವರು ಆಗ ಮನಗಂಡಿದ್ದುದು ಆಶ್ಚರ್ಯ.

ಪಚನಿಕ ನಾಳದ ಬಗ್ಗೆ ಕ್ರಿ.ಪೂ. ಆರನೇ ಶತಮಾನದಲ್ಲಿ ಈಸೋಪನು ಒಂದು ನೀತಿಕತೆಯನ್ನು ರಚಿಸಿದ್ದ. ಅದರ ಪ್ರಕಾರ ದೇಹದ ಸದಸ್ಯರು ಒಮ್ಮೆ ಹೊಟ್ಟೆಯ ವಿರುದ್ಧ ದಂಗೆಯೆದ್ದರು. 'ನಾವು ಏಕೆ ಸದಾ ಅವರ ಬೇಡಿಕೆಗಳನ್ನು ಪೂರೈಸಲು ದುಡಿಯಬೇಕು. ಅದು ಮಾತ್ರ ಯಾವ ಕೆಲಸ ಮಾಡದೆ ವಿಶ್ರಾಂತಿ ಪಡೆಯುತ್ತ, ಶ್ರೀಮಂತಿಕೆಯ ಸೌಲಭ್ಯಗಳನ್ನು ಅನುಭವಿಸಬೇಕು' ಎಂದು ಕೂಗುತ್ತ ತಮ್ಮ ನಿರ್ಧಾರವನ್ನು ಕಾರ್ಯರೂಪಕ್ಕೆ ತಂದರು. ಅವರ ಹರತಾಳದಿಂದ ಹೊಟ್ಟೆಗೆ ಯಾವ ಸಹಾಯವೂ ದೊರೆಯದಾಯಿತು. ಇಡೀ ದೇಹ ಬೇಗನೆ ಸುಸ್ತಾಗಿ ಹೋಯಿತು. ಕೈಗಳು, ಪಾದ, ಬಾಯಿ ಮತ್ತು ಕಂಗಳು ತಮ್ಮ ತಪ್ಪಿನ ಅರಿವು ಹೊಂದುವ ವೇಳೆಗೆ ತುಂಬಾ ತಡವಾಗಿದ್ದಿತು. ಪಚನಿಕ ನಾಳದ ಮೂಲಕ ದೇಹಕ್ಕೆ ಪುಷ್ಟಿ ದೊರೆಯುವುದನ್ನು ಚೆನ್ನಬಸವಣ್ಣಣವರು ತಿಳಿದಿದ್ದರು.

ಹೀಗೆ ಐದು ಪ್ರಾಣಪಂಚಕಗಳು ಜೀವದ ಉಳಿವಿಕೆಗೆ, ಕಾರ್ಯಚಟುವಟಿಕೆಗಳಿಗೆ ಅಗತ್ಯವಾದ ಪ್ರಾಣವಾಯುವನ್ನು, ಅನ್ನರಸವನ್ನು ದೊರಕಿಸಿಕೊಡುತ್ತವೆ. ತ್ಯಾಜ್ಯ ವಸ್ತುಗಳು ನಿಶ್ವಾಸದ ಮೂಲಕ, ಗುದ-ಗುಹ್ಯಗಳ ಮೂಲಕ ವಿಸರ್ಜನೆಗೊಳ್ಳುತ್ತವೆ. ಈ ರೀತಿ ದೇಹದ ಅಂಗಭಾಗಗಳ ಕಾರ್ಯಕ್ರಿಯೆಗಳನ್ನು ಅರಿತಿದ್ದ ಚೆನ್ನಬಸವಣ್ಣನವರು ನಿಜಕ್ಕೂ ವೈದ್ಯ ವಿಜ್ಞಾನಿಯೇ ಸರಿ. ಅವೆಲ್ಲವುಗಳನ್ನು ಅವರು ಹಸಿಗೆ ಮಾಡಿ ನಿರೂಪಿಸುವ ಸಾಮರ್ಥ್ಯ ಪಡೆದಿದ್ದರು.

ಅಂತಃಕರಣ ಚತುಷ್ಟಯಗಳು

ಅಂತರಂಗಕ್ಕೆ ಸಂಬಂಧಿಸಿದ ಕರಣ ಚತುಷ್ಟಯಗಳು ಎಂದರೆ ಮನಸ್ಸು, ಬುದ್ಧಿ, ಚಿತ್ತ ಮತ್ತು ಅಹಂಕಾರ.

ದಶನಾಡಿಗಳು

ನಾವು ಯಾವುದೇ ವ್ಯಕ್ತಿಯ ದೈಹಿಕ ಪರೀಕ್ಷೆ ಮಾಡುವಾಗ ಪರಿಧಿಯಲ್ಲಿನ ನಾಡಿಗಳನ್ನು ಪರೀಕ್ಷಿಸುತ್ತೇವೆ. ಅವು ಕಿವಿಯ ಮುಂದುಗಡೆ, ಕತ್ತಿನ ಮುಂದುಗಡೆ, ತೋಳಿನ ಒಳಭಾಗ, ಮುಂಗೈ ಹೆಬ್ಬೆರಳ ಕಡೆ, ತೊಡೆ ಒಳಭಾಗ, ಮಂಡಿ ಹಿಂಭಾಗ, ಒಳಗಣ್ಣ ಹಿಂಭಾಗ, ಕಾಲ ಹೆಬ್ಬೆರಳ ಪಾದದ ಮೇಲೆ. ನಾಡಿಗಳ ಬಗ್ಗೆ ಸದಾಕಾಲದಿಂದ ಮಹತ್ವ ಕೊಡಲಾಗಿದೆ. ಚೆನ್ನಬಸವಣ್ಣನವರು ಹತ್ತು ಬೇರೆ ಬೇರೆ ನಾಡಿಗಳನ್ನು ದಶನಾಡಿಗಳೆಂದು ಗುರುತಿಸಿದ್ದಾರೆ. ಅವುಗಳಲ್ಲಿ ಇಡಾ (ಚಂದ್ರನಾಡಿ), ಪಿಂಗಳ (ಸೂರ್ಯನಾಡಿ) ಮತ್ತು ಸುಷುಮ್ನಾ (ಮಧ್ಯನಾಡಿ) ಎಂಬ ತ್ರಿವಿಧ ನಾಡಿಗಳು ಬಹುಮುಖ್ಯ. ಉಳಿದವು ಗಾಂಧಾರಿ (ಬಲಗಣ್ಣು), ಹಸ್ತಿ ಜಿಹ್ವಾ (ಎಡಗಣ್ಣು), ಪೂಷಾ (ಬಲ ಕಿವಿ) ಪಯಸ್ವಿನಿ (ಎಡ ಕಿವಿ), ಅಲಂಬೂ (ಶಿಶ್ನ ಗೋಪ್ಯ), ಲಕುಹಾ (ಗುದನಾಳ) ಮತ್ತು ಶಂಖಿನೀ (ನಾಭಿನಾಳ).

ಸಪ್ತಧಾತುಗಳು:

ನಮ್ಮ ದೇಹ ರಚನೆಗೆ, ವಿಕಸನಕ್ಕೆ ಆಧಾರ ನಾವು ಸೇವಿಸುವ ಆಹಾರ. ದೇಹದಲ್ಲಿ ಇರುವ ರಸ, ರಕ್ತ, ಮಾಂಸ, ಮೇದಸ್ಸು, ಅಸ್ಥಿ, ಮಜ್ಜೆ ಮತ್ತು ಶುಕ್ಲ ಎಂಬ ಧಾತುಗಳು ಉಂಡಂತಹ ಅನ್ನದಿಂದ ರೂಪುಗೊಳ್ಳುತ್ತವೆ ಎಂದಿದ್ದಾರೆ ಚೆನ್ನಬಸವಣ್ಣನವರು. ಈ ಧಾತುಗಳೆಲ್ಲ

ಎಲ್ಲ ಜೀವರಾಶಿಯ ಶರೀರದಲ್ಲಿ ಒಂದೇ ಪ್ರಮಾಣದಲ್ಲಿರುತ್ತವೆ. ಅವು ಒಂದೊಂದು ಅದೇ ಕ್ರಮದಲ್ಲಿ ಉಂಡ ಅನ್ನ ಪಚನಗೊಂಡು ರಸವಾಗಿ (ಸೂಕ್ಷರಸ) ಹೀರಲ್ಪಟ್ಟ ಏಳುದಿನಗಳ ಅಂತರದಲ್ಲಿ ೪೯ ದಿನಗಳಲ್ಲಿ ರೂಪುಗೊಳ್ಳುತ್ತವೆ.

ವ್ಯಸನಗಳು :

ಮನುಷ್ಯನನ್ನು ಕಾಡುವ ಏಳು ವ್ಯಸನಗಳಲ್ಲಿ ದೇಹ ಮತ್ತು ಮನಸ್ಸಿಗೆ ಸಂಬಂಧಿಸಿದವು ಬಹುಮುಖ್ಯ. ತನು ವ್ಯಸನದಿಂದ ದೇಹ ಬಡವಾಗುತ್ತದೆ. ದೇಹ ಸಂಬಂಧಿ ತೊಂದರೆಗಳು ದೇಹದ ಸವಕಳಿ ಮಾಡುತ್ತವೆ. ಮನೋವ್ಯಸನದಿಂದ ವ್ಯಕ್ತಿ ಚಿಂತೆಗೀಡಾಗುತ್ತಾನೆ. ಅವನಲ್ಲಿ ಸುಳ್ಳುಹೇಳುವ, ಕಳವು ಮಾಡುವ ಪರಿಪಾಠ, ಪರಸ್ತ್ರೀ ಸಂಸರ್ಗ ಬಯಕೆಮೂಡುತ್ತವೆ. ದೇಹ ಮತ್ತು ಮನಸ್ಸಿಗೆ ಉಂಟಾಗುವ ತೊಂದರೆಯನ್ನು ಸಹಸ್ರಾರು ವರುಷಗಳಿಂದ ಜನಪದ ಗುರುತಿಸಿದೆ. ಕ್ರಿಸ್ತನ ಸಮಕಾಲೀನನಾಗಿದ್ದ ಒವಿಡ್ 'ನನ್ನ ದೇಹಕ್ಕಿಂತ ನನ್ನ ಮನಸ್ಸೇನು ಉತ್ತಮ ಸ್ಥಿತಿಯಲ್ಲಿಲ್ಲ. ಅವೆರಡೂ ಒಂದೇ ರೀತಿಯ ವ್ಯಸನದಿಂದ ನರಳುತ್ತಿವೆ. ಹೀಗಾಗಿ ನಾನು ಎರಡೂ ಕಡೆಯಿಂದ ತೊಂದರೆಗೀಡಾಗಿದ್ದೇನೆ' ಎಂದು ಹೇಳಿದ. ಅದಕ್ಕೆ ಅದೇ ಕಾಲದಲ್ಲಿದ್ದ ಜುವೆನಲ್ 'ಆರೋಗ್ಯಕರ ದೇಹದಲ್ಲಿ ಆರೋಗ್ಯಕರ ಮನಸ್ಸಿಗಾಗಿ ಪ್ರಾರ್ಥಿಸು' ಎಂದ. ಸರ್ ಫ್ರಾನ್ಸಿಸ್ ಬೇಕನ್ ಪ್ರಕಾರ 'ಆರೋಗ್ಯಕರ ದೇಹ ಆತ್ಮದ ಅತಿಥಿಗೃಹವಿದ್ದಂತೆ; ರೋಗಿಷ್ಟ ದೇಹ ಸೆರೆಮನೆ.'

ಷಡೂರ್ಮಿಗಳು:

ಕ್ರಿಸ್ತಪೂರ್ವ ನಾಲ್ಕನೇ ಶತಮಾನದಲ್ಲಿದ್ದ ಗ್ರೀಕ್ ತತ್ತ್ವಜ್ಞಾನಿ ಯುರಿಪಿಡಿಸ್ ಹೇಳಿದ 'ಮನಸ್ಸಿಲ್ಲದ ದೇಹ ಅಂಗಡಿ ಬೀದಿಯಲ್ಲಿನ ಪ್ರತಿಮೆಯಿದ್ದಂತೆ.' ಆತ್ಮಕ್ಕೆ ಸಂಬಂಧಿಸಿದ ದೇಹದಲ್ಲಿ ಆರುಬಗೆಯ ತೆರೆ(ಷಡೂರ್ಮಿ)ಗಳನ್ನು ಚೆನ್ನಬಸವಣ್ಣನವರು ಗುರುತಿಸಿದ್ದಾರೆ. ಅವುಗಳಲ್ಲಿ ಹಸಿವು, ನೀರಡಿಕೆ ಪ್ರಾಣದ ನಡವಳಿಗೆ ಸಂಬಂಧಿಸಿವೆ. ಮನಸ್ಸಿನ ನಡವಳಿಗೆ ಶೋಕ ಮತ್ತು ಮೋಹ ಸಂಬಂಧಿಸಿದ್ದರೆ, ಶರೀರದ ನಡವಳಿಕೆಗಳಿಗೆ ಜನನ-ಮರಣ ಸೇರ್ಪಡೆಯಾಗಿವೆ.

ಹಸಿವಾದಾಗ ಅನ್ನ, ನೀರಡಿಸಿದಾಗ ನೀರು ದೊರೆತರೆ ಆತ್ಮದೇಹದಲ್ಲಿ ಸುಖವಾಗಿ ಜೀವಿಸುತ್ತದೆ. ಅವು ದೊರೆಯದಿದ್ದಲ್ಲಿ ಪ್ರಾಣಕ್ಕೆ ಸಂಚಕಾರ. ನಮಗೆ ಬೇಕದಾ ವಸ್ತು ಕಳೆದುಹೋದಲ್ಲಿ ಶೋಕಕ್ಕೆಡೆ ಮಾಡಿಕೊಡುವುದು. ಅದರ ಮೇಲಿನ ಮಮಕಾರ ಮನದ ನಡೆವಳಿಯ ಮತ್ತೊಂದು ರೂಪ. ಜನನ ಮರಣ ನಮ್ಮ ದೇಹದ ಇರುವಿಕೆಯನ್ನು ಪ್ರತಿಫಲಿಸುತ್ತವೆ.

ಅರಿಷಡ್ವರ್ಗಗಳು :

ಕಾಮ, ಕ್ರೋಧ, ಲೋಭ,ಮೋಹ, ಮದ, ಮತ್ಸರ ಎಂಬ ಆರು ಪ್ರಕಾರದ ವೈರಿಗಳು ದೇಹ ಸಂಬಂಧವಾದ ಆತ್ಮನಲ್ಲಿ ನೆಲೆಸಿದ್ದಾರೆ. ಅವುಗಳನ್ನು ಜೀವನದಲ್ಲಿ ಸತತವಾಗಿ ಎದುರಿಸಿ ಒಳ್ಳೆಯ ಜೀವನ ನಡೆಸಬೇಕಾಗಿದೆ.

ಷಡ್ಭಾವ ವಿಕಾರಗಳು: ಹೊಸಜೀವದ ಉತ್ಪತ್ತಿ ಹೇಗಾಗುತ್ತದೆ ಎಂಬ ವಿಷಯ ಅಸ್ಪಷ್ಟವಾಗಿದ್ದ ಕಾಲದಲ್ಲಿ ಚೆನ್ನಬಸವಣ್ಣನವರು ಜೀವನದ ಇಡೀ ಚಿತ್ರ ಹೊಂದಿದ್ದರು. ನಮ್ಮ ಜೀವನ ನಾನಾ ಹಂತಗಳನ್ನು ಹಾಯ್ದುಹೋಗುತ್ತದೆ ಎಂಬುದನ್ನು ಅವರು ವಿವರಿಸಿದ್ದಾರೆ. ತಾಯಿ ಗರ್ಭದಲ್ಲಿ ಬೆಳವಣಿಗೆ, ಒಂಭತ್ತು ತಿಂಗಳ ನಂತರ ಜನನ, ಬಾಲ್ಯ ಬೆಳವಣಿಗೆಯಿಂದ ಮಧ್ಯ ವಯಸ್ಸು, ನಂತರ ವೃದ್ಧಾಪ್ಯ. ಆಮೇಲೆ ನಾನಾ ರೋಗಗಳಿಗೆ ಈಡಾದ ದೇಹದ ಸಾವು (ವಿನಶ್ಯತಿ).

ಪಂಚಕೋಶಗಳು: ಚೆನ್ನಬಸವಣ್ಣನವರು ದೇಹದಲ್ಲಿ ಐದು ತೆರನಾದ ಕೋಶಗಳನ್ನು ಗುರುತಿಸಿದ್ದರು. ಅವುಗಳೆಂದರೆ ಆಹಾರ ಪದಾರ್ಥಗಳನ್ನು ಇರಿಸಿಕೊಳ್ಳುವ ಅನ್ನಮಯಕೋಸ, ಜ್ಞಾನ-ಕರ್ಮೇಂದ್ರಿಯಗಳ ವ್ಯಾಪಾರ ಮಾಡುವ ಪ್ರಾಣಮಯ ಕೋಶ ಎನಿಸುವ ಇಂದ್ರಿಯಗಳು, ಚಿತ್ತ, ಬುದ್ಧಿ, ಅಹಂಕಾರವೆಂಬ ತ್ರಿಕರಣಗಳ ವ್ಯಾಪಾರವನ್ನು ಪ್ರಕಟಿಸುವ ಮನೋಮಯಕೋಶ, ಬುದ್ಧಿಶಕ್ತಿಯ ವಿಜ್ಞಾನಮಯ ಕೋಸ ಮತ್ತು ಆತ್ಮಸುಖ ನೀಡುವ ಆನಂದಮಯ ಕೋಶ.

ಅಂಗಚತುಷ್ಟಯಂಗಳು: ನಮ್ಮ ದೇಹದಲ್ಲಿ ನಾಲ್ಕು ಬಗೆಯ ಅಂಗಗಳಿವೆಯೆಂದು ಚೆನ್ನಬಸವಣ್ಣನವರು ಹಸಿಗೆ ಮಾಡಿ ವಿವರಿಸಿದ್ದಾರೆ. ಅವರ ವಿವರಣೆ ಶರೀರ ರಚನಾ ಶಾಸ್ತ್ರಜ್ಞನಂತಿದೆ. ಆ ಅಂಗಚತುಷ್ಟಯಗಳು ಅಂಗ, ಪ್ರತ್ಯಂಗ, ಸಾಂಗಾಂಗ (ಆತ್ಮದ ಜೊತೆ ಕೂಡಿದ ಅಂಗ) ಮತ್ತು ಉಪಾಂಗ (ಆತ್ಮನಿಗೆ ಉಪಮೆಯಾದ ಅಂಗ). ನಮ್ಮ ದೇಹ ತಲೆ, ತೊಡೆ, ಭುಜವನ್ನು ಒಳಗೊಂಡ ಅವಯವಗಳಿಂದ ರೂಪುಗೊಂಡಿದೆ. ಅದಕ್ಕೆ ಮುಖ, ಮೂಗು, ಕಿವಿ, ತುಟಿ, ಹಸ್ತ, ಪಾದ, ಬೆರಳುಗಳಿದ್ದು ಅವು ಪ್ರತ್ಯಂಗಗಳೆನಿಸಿವೆ. ಸಾಂಗಾಂಗ ಮನ, ಬುದ್ಧಿ, ಚಿತ್ತ, ಅಹಂಕಾರವನ್ನು ಒಳಗೊಂಡಿದೆ. ನಾವು ಧರಿಸುವ ಉಡುಪು, ಆಭರಣಗಳು, ಸುವಾಸನಾ ಲೇಪನಗಳು ಉಪಾಂಗಗಳೆನಿಸಿವೆ.

ಗುಣತ್ರಯಗಳು: ಚೆನ್ನಬಸವಣ್ಣನವರು ಸತ್ತ್ವ, ರಜ ಮತ್ತು ತಮ ಎಂಬ ಮೂರು ಗುಣಗಳನ್ನಾಧರಿಸಿ ವ್ಯಕ್ತಿಗಳ ಗುಣವಿಶೇಷಗಳನ್ನು ನಿರ್ಧರಿಸುತ್ತಾರೆ. ಅವರ ಪ್ರಕಾರ ಸಾತ್ವಿಕ ಗುಣಗಳನ್ನು ಹೊಂದಿದ ವ್ಯಕ್ತಿಯಲ್ಲಿ ಹತ್ತು ಬಗೆಯ ಗುಣಗಳಿರುತ್ತವೆ. ಅವುಗಳೆಂದರೆ ಸತ್ವ, ಜ್ಞಾನ, ತಪ, ಮೌನ, ಹರುಷ, ಕ್ಷಮೆ, ವಿವೇಕ, ಉತ್ಸಾಹ, ನಿಶ್ಚಯ ಮತ್ತು ಧೈರ್ಯ. ರಾಜಸಗುಣಗಳ ವ್ಯಕ್ತಿ ಎಂಟು ಗುಣಗಳನ್ನು ಪ್ರಕಟಿಸುತ್ತಾನೆ. ಅವು ಗರ್ವ, ಕ್ರೋಧ, ಅಹಂಕಾರ, ಸತಿಸಂಗ, ಪ್ರಲಾಪನ, ಅಪ್ರಿಯ ವಚನ, ದಂಭ ಮತ್ತು ಮತ್ಸರ. ತಾಮಸ ಗುಣಗಳುಳ್ಳ ವ್ಯಕ್ತಿ ತೋರಿಸುವ ಎಂಟು ಗುಣಗಳು-ಅಜ್ಞಾನ, ಮೋಹ, ನಿದ್ದೆ, ಚಾಪಲ್ಯ, ಹೀನಾವೃತ್ತಿ, ಪರನಿಂದೆ, ಪರಹಿಂಸೆ ಮತ್ತು ಪಾಪಿಷ್ಠತ್ವ.

ರೋಗಗಳು: ನಮ್ಮ ದೇಹ ಆಧ್ಯಾತ್ಮಿಕ, ಆದಿಭೌತಿಕ ಮತ್ತು ಆದಿದೈವಿಕ ತೊಂದರೆಗಳಿಂದ ಬಳಲುತ್ತದೆ. ನಾವು ದೈಹಿಕವಾಗಿ, ಮಾನಸಿಕವಾಗಿ, ಸಾಮಾಜಿಕವಾಗಿ, ಬೌದ್ಧಿಕವಾಗಿ ಆರೋಗ್ಯದಿಂದ ಇರಬೇಕೆಂದು ನಾವೆಲ್ಲ ಅಪೇಕ್ಷಿಸುತ್ತೇವೆ. ಚೆನ್ನಬಸವಣ್ಣನವರ ಪ್ರಕಾರ ಆಧ್ಯಾತ್ಮಿಕ ತೊಂದರೆಯಲ್ಲಿ ಶಾರೀರಿಕ ಮತ್ತು ಮಾನಸಿಕ ತೊಂದರೆಗಳು ಸೇರಿವೆ. ವಿವಿಧ ಬಗೆಯ ಜ್ವರ, ಗುಲ್ಮ, ಶೂಲೆಗಳು, ವಾತ, ಪಿತ್ತ, ಕಫ ಎಂಬ ತ್ರಿದೋಷಗಳ ವೈಪರೀತ್ಯಗಳಿಂದ ಶರೀರ ಬಳಲುತ್ತದೆ. ಹಾಗೆಯೇ ಅಸೂಯೆ, ಅನಸೂಯೆ, ಚಿಂತೆ ಕೊಡಮಾಡುವ ದುಃಖ ಮಾನಸಿಕ ವೇದನೆಗೆಡೆಮಾಡುತ್ತದೆ. ಶೀತ, ಉಷ್ಣ, ಗಾಳಿ, ಸಿಡಿಲು, ಮಿಂಚುಗಳಿಂದ ಉದ್ಭವಿಸುವ

ತೊಂದರೆಗಳು ಆದಿಭೌತಿಕ ತಾಪತ್ರಯಗಳು. ಜನನ-ಮರಣ, ಹಸಿವು-ನೀರಡಿಕೆ, ಅಜ್ಞಾನಗಳಿಂದ ಉಗಮವಾಗುವ ತೊಂದರೆಗಳು ಅಧಿದೈವಿಕವೆಂದು ಪರಿಗಣಿಸಿದ್ದಾರೆ.

ಸಂಕ್ಷಿಪಿತ ಕರಣ ಹಸಿಗೆ: ಪ್ರಭುದೇವರು ಚೆನ್ನಬಸವಣ್ಣನವರನ್ನು ಅವಿರಳಜ್ಞಾನಿ, ಸ್ವಯಂಭುಜ್ಞಾನಿ ಎಂದು ಪರಿಗಣಿಸಿದ್ದರು. ಬಸವಣ್ಣನವರ ಪ್ರಕಾರ ಅವರು ಜನ್ಮತಃ ಜ್ಞಾನಪರಿಮಳಭರಿತ. ಅಕ್ಕಮಹಾದೇವಿ ಅವರನ್ನು ಸಮ್ಯಗ್‌ಜ್ಞಾನಿಯೆಂದು ಕರೆದಿದ್ದಾರೆ. ಚೆನ್ನಬಸವಣ್ಣನವರು ವೈದ್ಯವಿಜ್ಞಾನಿಯಂತೆ ತಾವು ಮನುಷ್ಯ ಜೀವನದ ಒಳ-ಹೊರಗನ್ನು ಕರಣಹಸಿಗೆಯನ್ನು ಪದರ ಪದರಾಗಿ ಬಿಡಿಸಿಟ್ಟರು. ವೈದ್ಯ ವಿಜ್ಞಾನಕ್ಕೆ ಅಪರಿಚಿತವೆನಿಸಿದ್ದ ಅನೇಕ ವಿಷಯಗಳನ್ನು ಅದರಲ್ಲಿ ಎಲ್ಲರಿಗೆ ತಿಳಿಯುವಂತೆ ವಿಶ್ಲೇಷಿಸಿದರು.

ಚೆನ್ನಬಸವಣ್ಣನವರು ತಮ್ಮ ಒಂದು ವಚನದಲ್ಲಿ ಕರಣಹಸಿಗೆಯಲ್ಲಿನ ವಿವರಗಳನ್ನೆಲ್ಲ ಈ ರೀತಿ ಸಂಕ್ಷೇಪಿಸಿದ್ದಾರೆ:

ಆತ್ಮಸ್ಥಿತಿ ಶಿವಯೋಗ ಸಂಬಂಧವ
ಅರಿದೆನೆಂದಡೆ ಹೇಳಿರಣ್ಣ
ಪೃಥ್ವಿ ಅಪ್ಪು ತೇಜ ವಾಯು ಆಕಾಶವೆಂಬ ಪಂಚತತ್ವದ
ವಿವರಮಂ ಪೇಳ್ವೆ:
ಅಸ್ಥಿ ಮಾಂಸ ಚರ್ಮ ರುಧಿರ ಶುಕ್ಲ ಮೇದಸ್ಸು ಮಜ್ಜೆ
ಎಂಬ ಸಪ್ತಧಾತುವಿನ ಇಹವು.
ಶ್ರೋತ್ರ ನೇತ್ರ ಘ್ರಾಣ ಜಿಹ್ವೆ ತ್ವಕ್ಕು ಎಂಬ
ಪಂಚಜ್ಞಾನೇಂದ್ರಿಯಂಗಳಿಂದ ಶರೀರವೆನಿಸಿಕೊಂಬುದು.
ಶಬ್ದ-ಸ್ಪರ್ಶ ರೂಪು ರಸ ಗಂಧವೆಂಬಿವು ಪಂಚೇಂದ್ರಿಯಗಳು,
ವಾಕು ಪಾಣಿ ಪಾದ ಪಾಯು ಗುಹ್ಯವೆಂಬ
ಪಂಚಕರ್ಮೇಂದ್ರಿಯಂಗಳಿವರು ಪರಚಾರಕರು,
ಇಡಾ ಪಿಂಗಲಾ ಸುಷುಮ್ನಾ ಗಾಂಧಾರಿ ಹಸ್ತಿ ಜಿಹ್ವಾ ಪೂಷಾ
ಅಲಂಬು ಲಕುಹಾ ಪಯಸ್ವಿನಿ ಶಂಖಿನಿಯೆಂಬ ದಶನಾಡಿಗಳಂ ಭೇದಿಸುತ್ತಂ
ಪ್ರಾಣ ಅಪಾನ ವ್ಯಾನ ಉದಾನ ಸಮಾನ ನಾಗ ಕೂರ್ಮ ಕೃಕರ
ದೇವದತ್ತ ಧನಂಜಯವೆಂಬ ದಶವಾಯುವಿನ ಸ್ಥಾನಂಗಳನರಿದು,
ಆಧ್ಯಾತ್ಮಿಕ ಅಧಿದೈವಿಕ ಅದಿಭೌತಿಕರೆಂಬ ತಾಪತ್ರಯಂಗಳನರಿದು,
ರಾಜಸ ತಾಮಸ ಸಾತ್ವಿಕರೆಂಬ ಗುಣತ್ರಯಂಗಳನಳಿದು,
ಮನ ಬುದ್ಧಿ ಚಿತ್ತ ಅಹಂಕಾರವೆಂಬ ಅಂತಃಕರಣ ಚತುಷ್ಟಯಂಗಳು ತಿಳಿದು
ಕಾಮ ಕ್ರೋಧ ಲೋಭ ಮೋಹ ಮದ
ಮತ್ಸರವೆಂಬ ಅರಿಷಡ್ವರ್ಗಂಗಳ ಗೆಲಿದು,
ಜಾಯತೆ ಅಸ್ತಿತೆ ವರ್ಧತೆ ಪರಿಣಮತೆ ಅಪಕ್ಷೀಯತೆ ವಿನಶ್ಯತೆ ಎಂಬ
ಷಡ್ಭಾವ ವಿಕಾರಂಗಳ ಬಿಟ್ಟು,
ಕ್ಷುತ್ತು ಪಿಪಾಸೆ ಶೋಕ ಮೋಹ ಜರೆ
ಮರಣವೆಂಬ ಷಡೂರ್ಮಿಗಳ ಮರ್ಮವ ತಿಳಿದು,
ಜಾತಿವರ್ಣ ಆಶ್ರಮ ಕುಲ ಗೋತ್ರ ನಾಮವೆಂಬ ಷಡ ಭ್ರಮೆಗಳಂ ತಟ್ಟಲೀಯವೆ.
ಅನ್ನಮಯ ಪ್ರಾಣಮಯ ಮನೋಮಯ ಆನಂದಮಯವೆಂಬ

ಪಂಚಕೋಶಂಗಳ ಸಂಬಂಧವನರಿತು,
....
ಅನಿತ್ಯವಂ ಬಿಡುವುದು
ಲಯಯೋಗವನರಿದು ಹಮ್ಮ ಬಿಡುವುದು.
ಮಂತ್ರಯೋಗವನರಿದು ಆಸೆಯಂ ಬಿಡುವುದು
ಮರೀಚಿಕಾ ಜಲದಿಂದ ಬೆಳಗುವ ಶರಣ
ಆತ ರಾಜಯೋಗಿ ಆತಂಗೆ ನಮೋ ನಮೋ ಎಂಬೆನಯ್ಯಾ
ಕೂಡಲ ಚೆನ್ನಸಂಗಮದೇವಾ.

ಬಸವಪಥ
ನವಂಬರ್–೨೦೦೭

❐

---

* ಬಸವಪಥ, ಲೇ. ಡಾ. ಪಿ.ಎಸ್. ಶಂಕರ್, ನವೆಂಬರ್–೨೦೦೭

ಚೆನ್ನಬಸವಣ್ಣನವರ ವಚನದಲ್ಲಿ ಭೂಗೋಳ ಮತ್ತು ಖಗೋಳ ವಿಜ್ಞಾನ

●

ರುದ್ರೇಶ ಗಂಗಾಧರ ಕಿತ್ತೂರ

ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಶರಣರ ಅವತಾರವು ಭಾರತದ ಚಿತ್ರಣವನ್ನೆ ಬದಲಿಸುವ ಕ್ರಾಂತಿಯನ್ನು ಮಾಡಿತು. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಭಾರತದಲ್ಲಿದ್ದ ಮೂಢ ಆಚರಣೆಗಳು ಜನಸಾಮಾನ್ಯರಿಂದ ದೂರವಿದ್ದ ಧರ್ಮವನ್ನು ದೇವರನ್ನು ಜನರ ಮನೆಬಾಗಿಲಿಗೆ ತರುವುದಲ್ಲದೆ ಅವರಿಂದ ದೂರವಾಗಿ ಎಲ್ಲೊ ಸ್ಥಾಪಿತವಾಗಿದ್ದ ಲಿಂಗವನ್ನು ಅವರ ಅಂಗದ ಮೇಲೆ ಪ್ರತಿಷ್ಠಾಪಿಸಿ ಅನುಭಾವದ ಸವಿಯನ್ನು ಉಣಬಡಿಸಿದರು. ಜೊತೆಗೆ ಜಾಗತಿಕ ಮಟ್ಟಕ್ಕೆ ವಚನಗಳ ಮೂಲಕ ಎಲ್ಲ ಕ್ಷೇತ್ರದಲ್ಲಿನ ಅಪ್ರತಿಮ ಸಾಧನೆಗಳನ್ನು ದಾಖಲಿಸಿಹೋದರು. ಇಂದು ನಾವೆಲ್ಲ ಅವರ ವಚನಗಳನ್ನು ಧಾರ್ಮಿಕ ಕ್ಷೇತ್ರಕ್ಕೆ ಮಾತ್ರ ಸೀಮಿತಗೊಳಿಸಿ ಅವುಗಳಲ್ಲಿ ಅಡಗಿರುವ ವೈಜ್ಞಾನಿಕ ಅಂಶಗಳನ್ನು ಗುರ್ತಿಸದೆ ಅನ್ಯದೇಶದವರ ಇತ್ತೀಚಿನ ವೈಜ್ಞಾನಿಕ ಸಂಶೋಧನೆಗೆ, ಅವರ ವಿಚಾರಗಳಿಗೆ ದಾಸರಾಗಿದ್ದೇವೆ. ಮತ್ತು ಇಡೀ ಜಗತ್ತಿಗೆ ನಮ್ಮವರ ಜ್ಞಾನದ ಪರಿಚಯವನ್ನು ಮಾಡದೆ ತುಂಬಾ ಗಂಭೀರ ತಪ್ಪನ್ನು ಮಾಡುತ್ತಿದ್ದೇವೆ. ಇಲ್ಲಿಯವರೆಗೆ ನಾವು ಮಾಡಿದ ತಪ್ಪುಗಳನ್ನು ತಿದ್ದಿಕೊಳ್ಳುವ ಕಾಲ ಈಗ ಬಂದಿದೆ. ವಚನಗಳಲ್ಲಿ ಅಡಗಿರುವ ವೈಜ್ಞಾನಿಕ ಅಂಶಗಳನ್ನು ಜಗತ್ತಿಗೆ ಪರಿಚಯಿಸುವ ಕಾರ್ಯ ತ್ವರಿತಗತಿಯಲ್ಲಿ ಸಾಗಬೇಕಾಗಿದೆ. ಈ ದಿಸೆಯಲ್ಲಿ ವಚನಗಳ ಅಧ್ಯಯನ ಸಾಗಲಿ.

ಅನುಪಮ ಅನುಭಾವಿ ಚೆನ್ನಬಸವಣ್ಣನವರು ತಮ್ಮ ಅನೇಕ ವಚನಗಳಲ್ಲಿ ಖಗೋಳಜ್ಞಾನದ ಮಹತ್ವದ ಸಂಗತಿಗಳನ್ನು ನಮಗೆಲ್ಲ ಹನ್ನೆರಡನೆಯ ಶತಮಾನದಲ್ಲಿ ತಿಳಿಸಿದ್ದಾರೆ. ಅವರ ವಿಚಾರಗಳೆಲ್ಲವು ಇಂದಿನ ಇಪ್ಪತ್ತೊಂದನೆಯ ಶತಮಾನದ ಸಾಧನೆಗೆ ಸರಿದೂಗುವುದನ್ನು ಗಮನಿಸಿದಾಗ ನಮಗೆಲ್ಲ ಅಚ್ಚರಿಯಾಗುತ್ತದೆ. ಮನುಷ್ಯ ತಾನಿರುವ ಭೂಮಿಯೇ ವಿಶ್ವದ ಕೇಂದ್ರವೆಂದು ಭಾವಿಸಿದ ಅಂದಿನ ದಿನಗಳಲ್ಲಿ ಭೂಮಿಗಿಂತಲೂಮೇಲೆ ಅನೇಕ ಬಗೆಯ ಗ್ರಹ, ನಕ್ಷತ್ರಗಳಿವೆ ಎಂಬ ಕಲ್ಪನೆಯನ್ನು ನಮ್ಮ ವಚನಕಾರರು ತಾಳಿದ್ದರು. ಹದಿನೈದನೆಯ ಶತಮಾನದಲ್ಲಿ ಬಾಳಿದ ಪೋಲೆಂಡಿನ ವಿಜ್ಞಾನಿ ನಿಕೋಲಸ್ ಕೊಪರ್ನಿಕಸ್ (೧೪೭೩–೧೫೪೩) ತಿಳಿಸುವವರೆಗೆ ಭೂಕೇಂದ್ರ ವ್ಯವಸ್ಥೆಯನ್ನು ಜಗತ್ತು ನಂಬಿತ್ತು. ಆದರೆ ೧೨ನೆಯ ಶತಮಾನದಲ್ಲಿಯೇ ಅಲ್ಲ,ಪ್ರಭುಗಳು, ಆದಯ್ಯನವರು ಚೆನ್ನಬಸವಣ್ಣನವರಂತಹ ಮಹಾನ್

ಜ್ಞಾನಿಗಳು ಸೂರ್ಯಕೇಂದ್ರ ವ್ಯವಸ್ಥೆಯ ಬಗ್ಗೆ ತಮ್ಮ ಅನೇಕ ವಚನಗಳಲ್ಲಿ ತಿಳಿಸಿದ್ದರು ಎಂಬುದು ಗಮನಾರ್ಹ ವಿಷಯ. ಅದೇ ರೀತಿ ಆಕಾಶಕಾಯಗಳೆಲ್ಲ ಅನಿಯಮಿತವಾಗಿ ಚಲಿಸದೆ ಒಂದು ನಿರ್ದಿಷ್ಟ ರೀತಿಯಲ್ಲಿ ಚಲಿಸುತ್ತವೆ ಎಂಬ ವಿಚಾರವನ್ನು ಜರ್ಮನಿಯ ವಿಜ್ಞಾನಿ ಯೋಹಾನ್ ಕೆಪ್ಲರ್ (೧೫೭೧–೧೬೩೦) ಮೂರು ನಿಯಮಗಳನ್ನು ರೂಪಿಸುವವರೆಗೆ ಜಗತ್ತು ಅರಿತಿರಲಿಲ್ಲ. ಆದರೆ ನಮ್ಮ ಬಸವಣ್ಣನವರು ಅಕ್ಕಮಹಾದೇವಿಯರ ಅನೇಕ ವಚನಗಳಲ್ಲಿ ಈ ವಿಚಾರ ಪ್ರಸ್ತಾಪವಾಗಿರುವುದನ್ನು ಜಗತ್ತಿಗೆ ನಾವು ತಿಳಿಸದೆ ಹೋಗಿರುವುದು ಒಂದು ದುರಂತವೇ ಸರಿ. ಸಾರ್ವತ್ರಿಕ ಗುರುತ್ವಾಕರ್ಷಣ ನಿಯಮವನ್ನು ಹದಿನಾರನೇ ಶತಮಾನದಲ್ಲಿ ಬಾಳಿದ ಇಂಗ್ಲೀಷ್ ವಿಜ್ಞಾನಿ ಐಸಾಕ್ ನ್ಯೂಟನ್ (೧೬೪೨–೧೭೨೭) ತಿಳಿಸುವ ಪೂರ್ವದಲ್ಲಿಯೇ ಅಕ್ಕಮಹಾದೇವಿಯವರು ತಮ್ಮ ವಚನದಲ್ಲಿ ಸ್ಪಷ್ಟವಾಗಿ ಎಲ್ಲ ಆಕಾಶಕಾಯಗಳ ಮಧ್ಯೆ ಗುರುತ್ವಾಕರ್ಷಣೆ ಉಂಟೆಂದು ತಿಳಿಸಿದ್ದನ್ನು ನಾವು ಮರೆತಿದ್ದೇವೆ. ಜಗತ್ತಿನ ಹುಟ್ಟಿನ ಬಗ್ಗೆ ಈಗ ನಡೆಯುತ್ತಿರುವ ಸಂಶೋಧನೆಗಳನ್ನೆಲ್ಲ ಅಂದೇ ನಮ್ಮ ವಚನಕಾರರು ಬರೆದಿಟ್ಟ ಮಾಹಿತಿಯನ್ನು ಪ್ರಚುರಪಡಿಸಬೇಕಾಗಿದೆ. ಇದೇ ರೀತಿಯಾಗಿ ಚೆನ್ನಬಸವಣ್ಣನವರು ಈ ಭೂಮಿಯ ಮೇಲಿನ ಎಲ್ಲ ಖಂಡಗಳು, ದ್ವೀಪಗಳು, ಸಾಗರಗಳ ವಿಸ್ತಾರ ಮತ್ತು ಪ್ರತಿ ಖಂಡಗಳ ನಡುವಿನ ಅಂತರ ಮತ್ತು ಸೂರ್ಯ, ಚಂದ್ರರು ಭೂಮಿಯಿಂದ ಇರುವ ದೂರದ ಬಗ್ಗೆ ನಿಖರವಾಗಿ ಬರೆದಿರುವ ವಿಷಯಗಳನ್ನು ತಮ್ಮ ಒಂದು ವಚನದಲ್ಲಿ ತಿಳಿಸಿದ್ದಾರೆ:

"ಪೃಥ್ವಿಯಿಂದ ಈಶ್ವರ ಪರಿಯಂತ ಪಂಚವಿಶಂತಿ ತತ್ವಂಗಳುತ್ಪತ್ಯ
ಈಶ್ವರಾದಿ ಪರಶಿವ ಪರಿಯಂತ ಶಿವತತ್ವದುತ್ಪತ್ಯ
ದೇವತಾದಿಗೆ ಜಗದಾದಿಗೆ ಪೃಥ್ವಿಯಾದಿಗೆ
ಪಂಚವಿಶಂತಿತತ್ವಂಗಳುತ್ಪತ್ಯಮಂ ಪೇಳ್ವೆ:
ಪಂಚಶತಕೋಟಿ (ವಿಸ್ತೀರ್ಣ) ಭೂಮಂಡಲವಳಯದಲ್ಲಿ
ಮೇರು ಮಂದಿರದ ವಿಸ್ತೀರ್ಣ
ಒಂದು ಕೋಟಿ ಇಪ್ಪತ್ತಾರು ಲಕ್ಷದ ಮೇಲೆ ಎಂಬತ್ತೈದು ಸಾವಿರ
ಯೋಜನ ಪ್ರಮಾಣು
ಆ ಮೇರುಮಂದಿರದ ಮೇಲೆ ಬ್ರಹ್ಮ ವಿಷ್ಣು ರುದ್ರ ಸದಾಶಿವ
ನಂದಿ ಮಹಾಕಾಳ ವೀರಭದ್ರ ಅಷ್ಟಾಶೀತಿ ಸಹಸ್ರ ಋಷಿಯರು,
ಅಸಂಖ್ಯಾತ ಮಹಾಗಣಂಗಳು, ದ್ವಾದಶಾದಿತ್ಯರು, ನಾರದ ಯೋಗೀಶ್ವರರು
ಅಷ್ಟದಿಕ್ಪಾಲಕರು, ಏಕಾದಶ ರುದ್ರರು ಮುಖ್ಯವಾಗಿ
ಶಿವಸುಖಸಂತೋಷದಿಂ ರಾಜ್ಯಂಗೆಯ್ವರು.
ಆ ಮೇರುಮಂದಿರದ ಕೆಳಗಣ ಜಂಬೂದ್ವೀಪವ ವಿಸ್ತೀರ್ಣ
ಲಕ್ಷದ ಮೇಲೆ ಇಪ್ಪತ್ತೈದು ಸಾವಿರ ಯೋಜನ ಪ್ರಮಾಣು.
(ಅಲ್ಲಿಂದ ಮುಂದೆ) ಲವಣ ಸಮುದ್ರ
ಲಕ್ಷದ ಮೇಲೆ ಇಪ್ಪತ್ತೈದು ಸಾವಿರ ಯೋಜನ ಪ್ರಮಾಣು.
ಆ ಲವಣ ಸಮುದ್ರದಿಂದಾಚೆಯಲ್ಲಿ ಭೂಮಿ
ಎರಡು ಲಕ್ಷದ ಮೇಲೆ ಐವತ್ತುಸಾವಿರ ಯೋಜನ ಪ್ರಮಾಣು.
(ಆ ದ್ವೀಪದ ಹೆಸರು ಪ್ಲಕ್ಷ ದ್ವೀಪ)

ಪ್ಲಕ್ಷ ದ್ವೀಪಕ್ಕೆ ಇಕ್ಷುರ ಸಮುದ್ರ
ಎರಡು ಲಕ್ಷ ಐವತ್ತು ಸಾವಿರ ಯೋಜನ ಪ್ರಮಾಣು.
ಅದರಿಂದಾಚೆಯಲ್ಲಿ ಭೂಮಿ ಐದು ಲಕ್ಷ ಯೋಜನ ಪ್ರಮಾಣು.
(ಆ ದ್ವೀಪದ ಹೆಸರು ಶಾಲ್ಮಲಿ ದ್ವೀಪ)
ಶಾಲ್ಮಲಿ ದ್ವೀಪಕ್ಕೆ ಮಧುಸಮುದ್ರ ಐದುಲಕ್ಷ ಯೋಜನ ಪ್ರಮಾಣು.
ಅದರಿಂದಾಚೆಯಲ್ಲಿ ಭೂಮಿ ಹತ್ತು ಲಕ್ಷ ಯೋಜನ ಪ್ರಮಾಣು
(ಆ ದ್ವೀಪಕ್ಕೆ ಹೆಸರು ಕುಶದ್ವೀಪ)
ಕುಶದ್ವೀಪಕ್ಕೆ ಘೃತಸಮುದ್ರ ಹತ್ತು ಲಕ್ಷ ಯೋಜನ ಪ್ರಮಾಣು.
ಅಲ್ಲಿಂದತ್ತ ಭೂಮಿ ಇಪ್ಪತ್ತೈದು ಲಕ್ಷ ಯೋಜನ ಪ್ರಮಾಣು.
(ಆ ದ್ವೀಪದ ಹೆಸರು ಶಾಕ ದ್ವೀಪ)
ಶಾಕ ದ್ವೀಪಕ್ಕೆ ದಧಿಸಮುದ್ರ ನಾಲ್ವತ್ತು ಲಕ್ಷ ಯೋಜನ ಪ್ರಮಾಣು.
ಅದರಿಂದಾಚೆಯಲ್ಲಿ ಭೂಮಿ ನಾಲ್ವತ್ತು ಲಕ್ಷ ಯೋಜನ ಪ್ರಮಾಣು.
(ಆ ದ್ವೀಪದ ಹೆಸರು ಕ್ರೌಂಚದೀಪ)
ಕ್ರೌಂಚದ್ವೀಪಕ್ಕೆ ಕ್ಷೀರಸಮುದ್ರ ನಾಲ್ವತ್ತು ಲಕ್ಷ ಯೋಜನ ಪ್ರಮಾಣು.
ಅದರಿಂದಾಚೆಯಲ್ಲಿ ಭೂಮಿ ಎಂಬತ್ತು ಲಕ್ಷ ಯೋಜನ ಪ್ರಮಾಣು.
(ಆ ದ್ವೀಪದ ಹೆಸರು ಪುಷ್ಕರ ದ್ವೀಪ)
ಪುಷ್ಕರ ದ್ವೀಪಕ್ಕೆ ಸ್ವಾದೋದಕಸಮುದ್ರ ಎಂಬತ್ತು ಲಕ್ಷ ಯೋಜನ ಪ್ರಮಾಣು.
ಅಲ್ಲಿಂದತ್ತತ್ತ ಲೋಕಾಲೋಕ ಪರ್ವತಾಕಾರವಾಗಿಪ್ಪುದು.
ಇಂತೀ ಸಪ್ತ ಸಮುದ್ರಂಗಳ ಸಪ್ತದ್ವೀಪಂಗಳ ಪ್ರಮಾಣವೊಂದಾಗಿ ಮೇಳೈಸಿದಡೆ
ಮೂರು ಕೋಟಿಯಂ ಹದಿನೇಳು ಲಕ್ಷದೈವತ್ತು ಸಹಸ್ರ ಯೋಜನ
ಪರಿಮಾಣಿನ ಕಟ್ಟಳೆಯಾಯಿತ್ತು.
ಮತ್ತಲ್ಲಿಂದ ಭೂಮಂಡಲ ಉಂಟೆ? ಎಂದೊಡೆ ಉಂಟು;
ನಾನೂರು ಕೋಟಿ ಯೋಜನ ಹೇಮೋರ್ವಿ
ಅಲ್ಲಿಂದತ್ತ ಭೂಮಂಡಲ ಉಂಟೆ? ಎಂದೊಡೆ ಉಂಟು;
ಹತ್ತುಕೋಟಿ ಇಪ್ಪತ್ತು ಲಕ್ಷ ಯೋಜನ ಪ್ರಮಾಣು. ಹೇಮದ ಬೆಟ್ಟ,
ಮತ್ತಲ್ಲಿಂದತ್ತಲೂ ಭೂಮಂಡಲ ಉಂಟೆ? ಎಂದಡೆ ಉಂಟು;
ಎಂಬತ್ತೈದು ಕೋಟಿ ಮೂವತ್ತೈದು ಲಕ್ಷದ ಅರವತ್ತೈದು ಸಾವಿರ
ಯೋಜನ ಪರಿಮಾಣವಳಯದಲ್ಲಿ ಅಂಧಕಾರವಾಗಿ ಸೂರ್ಯ ಚಂದ್ರರ ಬೆಳಗಿಲ್ಲ.
ಇಂತಿವನೆಲ್ಲವನೊಂದಾಗಿ ಮೇಳೈಸಿದಡೆ
ಐನೂರು ಕೋಟಿ ಯೋಜನ ಪರಿಪ್ರಮಾಣು ಕಟ್ಟಳೆಯಾಗಿತ್ತು.
ಆ ಮೇರುವಿನ ಒಂದು ದಿಕ್ಕಿನ ಪ್ರಮಾಣು: ಆ ಮೇರುವಿನ ಪ್ರದಕ್ಷಿಣವಾಗಿ
ಎಂಟು ದಳದಲ್ಲಿ ಎಂಟು ಪಂಚಶತಕೋಟಿ (ಯೋಜನ) ವಿಸ್ತೀರ್ಣವಾಯಿತ್ತು.
ಇದನು ದಿವಸದೊಳಗೆ ಸೂರ್ಯ ತಿರುಗುವನು,
ರಾತ್ರಿಯೊಳಗೆ ಚಂದ್ರ ತಿರುಗುವನು,
ಇಪ್ಪತ್ತೇಳು ನಕ್ಷತ್ರ, ಧ್ರುವಮಂಡಲ, ಸಪ್ತಋುಷಿಯರು, ರಾಹುಕೇತು
ನವಗ್ರಹ ಇಂತಿವರೆಲ್ಲರು ಆ ಮೇರುಮಂದಿರದ ಹೊಸ ಪ್ರದಕ್ಷಿಣಂ
ದಿವಾರಾತ್ರಿಯಲ್ಲಿ ತಿರುಗಿ ಬಹರು.

ಇವರೆಲ್ಲರ ಪ್ರಮಾಣವನು ಮಹಕ್ಕ ಮಹವಾಗಿಪ್ಪ ಶರಣಸ್ಥಲದವರು ಬಲ್ಲರು.
ಪ್ರಭುದೇವರು ಸಿದ್ಧರಾಮರು ಸಾಮವೇದಿಗಳು,
ಆದಿಲಿಂಗ ಅನಾದಿಶರಣ ಪೂರ್ವಾಚಾರಿ ಸಂಗನ ಬಸವಣ್ಣನು
ಕಟ್ಟಿದ ಕಟ್ಟಳೆಯೊಳಗೆ ಜ್ಯೋತಿರ್ಜ್ಞಾನದವರು.
(ಇಂತಿ) ಕಾಲ ಜ್ಯೋತಿಷಿ ಗ್ರಹಣ ಸಂಕ್ರಮಣ ತಿಥಿ ವಾರ ನಕ್ಷತ್ರ
ಯೋಗ ಕರಣ ಸಂವತ್ಸರ ಇವೆಲ್ಲವು
ಕೂಡಲ ಚೆನ್ನಸಂಗನಲ್ಲಿ ಬಸವಣ್ಣ ಕಟ್ಟಿದ ಕಟ್ಟಳೆ ॥ ೧೩೫೭ ॥

ಈ ವಚನದ ಪ್ರತಿ ಸಾಲಿನಲ್ಲಿಯೂ ಭೂಗೋಳ ಶಾಸ್ತ್ರದ ಜ್ಞಾನವನ್ನು ನಾವು ಕಾಣಬಹುದು. ಆಧುನಿಕ ಭೂಗೋಳಶಾಸ್ತ್ರವು ಜನ್ಮ ತಾಳಿದ್ದು ೧೯೬೭ರಲ್ಲಿ. ಅಮೇರಿಕದ ವಿಜ್ಞಾನಿಗಳಾದ ಮ್ಯಾಕ್ ಆರ್ಥರ್ ಹಾಗೂ ವಿಲ್ಸನ್ನರು ದ್ವೀಪವೊಂದರ ವಿಸ್ತೀರ್ಣ, ಅಲ್ಲಿನ ಜನಸಂಖ್ಯೆ ಹಾಗೂ ಸಮುದಾಯಗಳ ಪ್ರಮಾಣಗಳಿಗೆ ಸಂಬಂಧಿಸದಂತೆ 'ದ್ವೀಪ ಜೀವ ಭೂಗೋಳಶಾಸ್ತ್ರ' ಸಿದ್ಧಾಂತವನ್ನು ಮಂಡಿಸಿದ್ದಾಗ ಜಗತ್ತಿಗೆ ತಾವು ವಾಸಿಸುವ ಭೂಪ್ರದೇಶದಾಚೆ ಭೂಮಿ ಇದೆ ಎಂಬ ಕಲ್ಪನೆ ಮೂಡಲು ಸಾಧ್ಯವಾಗಿದೆ. ಆದರೆ ಚೆನ್ನಬಸವಣ್ಣನವರು ಕೊಲಂಬಸ್‌ನಂತೆ ಸಾಗರದಲ್ಲಿ ಪ್ರಯಾಣಿಸದೆ ಸಾಗರ ಮತ್ತು ದ್ವೀಪಗಳ ಕಲ್ಪನೆಯನ್ನು ನಮಗೆ ನೀಡಿದ್ದಾರೆ. ಅವರು ನೀಡಿರುವ ಮಾಹಿತಿಯು ಆಧುನಿಕ ವಿಜ್ಞಾನಿಗಳ ಮಾಹಿತಿಯೊಂದಿಗೆ ಸರಿಹೊಂದುತ್ತಿರುವುದು ಚೆನ್ನಬಸವಣ್ಣನವರ ಜ್ಞಾನಕ್ಕೆ ಸಾಕ್ಷಿಯಾಗಿದೆ.

ವಚನದಲ್ಲಿ ವಿವರಿಸಿದಂತೆ ಈ ಭೂಮಂಡಲದ ವಿಸ್ತೀರ್ಣ ಪಂಚಶತಕೋಟಿ, ಅದೇ ರೀತಿ ಆಧುನಿಕ ವೈಜ್ಞಾನಿಕ ಸಾಧನ ಸಲಕರಣೆಯ ಮೂಲಕ ಭೂಮಿಯ ವಿಸ್ತೀರ್ಣವನ್ನು ೫೧೦ ಮಿಲಿಯನ್ ಚ.ಕಿ.ಮೀ. ಎಂದು ಅಳತೆ ಮಾಡಲಾಗಿದೆ. ಇಂತಹ ಭೂಮಂಡಲದ ಮೇಲೆ ಮೆರೆಯುತ್ತಿರುವ ಭಾರತದ ವಿಸ್ತೀರ್ಣ ಚೆನ್ನಬಸವಣ್ಣನವರ ಪ್ರಕಾರ ಲಕ್ಷದ ಮೇಲೆ ಇಪ್ಪತ್ತೈದು ಸಾವಿರ ಯೋಜನ (೧,೨೫,೦೦೦). ಅಂದಿನ ಕಾಲದಲ್ಲಿಯ ಜಂಬೂದ್ವೀಪವಾಗಿದ್ದ ಭಾರತದ ಉಪಖಂಡದ ವಿಸ್ತೀರ್ಣವನ್ನು ಅವರು ನೀಡಿದ್ದಾರೆ. ಪ್ರಸ್ತುತ ಭಾರತದ ವಿಸ್ತೀರ್ಣ ೩೨, ೮೭,೭೬೩ ಚ.ಕಿ.ಮೀ. (ಪೂರ್ವ ಪಶ್ಚಿಮವಾಗಿ ೨೯೩೩ ಕಿ.ಮೀ. ದಕ್ಷಿಣೋತ್ತರವಾಗಿ ೩೨೧೪ ಕಿ.ಮೀ. ಸಮುದ್ರ ತೀರ ಉದ್ದ, ೬೧೦೦ ಕಿ.ಮೀ. ಇಂತಹ ಭಾರತವನ್ನು ರಕ್ಷಿಸುತ್ತ ಉತ್ತರಭಾಗದಲ್ಲಿ ನಿಂತಿರುವ ಮೇರುಮಂದಿರ ಅಂದರೆ ಹಿಮಾಲಯದ ಪರ್ವತ ಶ್ರೇಣಿಯ ವಿಸ್ತೀರ್ಣವನ್ನು ಒಂದು ಕೋಟಿ ಇಪ್ಪತ್ತಾರು ಲಕ್ಷದ ಮೇಲೆ ಎಂಬತ್ತೈದು ಸಾವಿರ ಯೋಜನ (೧,೨೬,೮೫,೦೦೦) ಎಂದಿರುವರು. ಅಂದಿನ ಮಾನವಾದ ೧ ಯೋಜನವೆಂದರೆ ಇಂದಿನ ದೂರದ ಮಾನವಾದ ಕಿಲೋಮೀಟರ್‌ಗೆ ಪರಿವರ್ತಿಸಿದಾಗ ನಮಗೆ ನಿಜವಾದ ಅಳತೆಯ ಕಲ್ಪನೆ ಮಾಡಲು ಸಾಧ್ಯ. ಈ ನಿಟ್ಟಿನಲ್ಲಿ ಸಂಶೋಧನೆ ಅಗತ್ಯವಾಗಿದೆ. ಪ್ರಸ್ತುತವಿರುವ ಹಿಮಾಲಯ ಪರ್ವತ ಶ್ರೇಣಿಯು ಪಾಮಿರ್ ಗ್ರಂಥಿಯಿಂದ ಪ್ರಾರಂಭವಾಗಿ ಪೂರ್ವದಲ್ಲಿ ನಾಗಾಲ್ಯಾಂಡ್‌ವರೆಗೆ ಸುಮಾರು ೨,೪೦೦ ಕಿ.ಮೀ. ಉದ್ದವಾಗಿದೆ. ಸಮುದ್ರ ಮಟ್ಟದಿಂದ ಅವುಗಳ ಎತ್ತರವನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿದೆ. ಅವುಗಳಲ್ಲಿ ಮೌಂಟ್ ಎವರೆಸ್ಟ್‌ನ ಎತ್ತರ ೮೮೪೮ ಮೀಟರ್ ಇದ್ದು ಅದು ನೇಪಾಳ ಮತ್ತು ಟಿಬೇಟ್ ಮದ್ಯದಲ್ಲಿ ಭವ್ಯವಾಗಿ ಭೂಖಂಡದಲ್ಲಿಯೇ ಅತ್ಯಂತ ಎತ್ತರವಾಗಿದೆ. ನಂತರ ಕೆ-೨ (ಮೌಂಟ್ ಗಾಡ್ವಿನ್ ಆಸ್ಟಿನ್) ಎಂದು ಕರೆಯಲಾಗುವ ಪರ್ವತವು ೮,೬೧೧ ಮೀಟರ್ ಎತ್ತರವಿದೆ. ಹಾಗೆಯೇ ಕಾಂಚನಗಂಗಾ

(೮೫೪೮ ಮೀ), ಧವಳಗಿರಿ, ಮಾಕಲು, ನಂಗಾ, ಪಾರ್ವತಿ, ನಂದಾದೇವಿ ಮತ್ತು ಗೌರಿಶಂಕರವೆಂಬ ಅನೇಕ ಪರ್ವತಗಳಿಂದ ಕೂಡಿದ ಈ ಭಾಗವನ್ನು ಚೆನ್ನಬಸವಣ್ಣನವರು ಮೇರು ಮಂದಿರವೆಂದು ಕರೆದಿದ್ದಾರೆ. ಈ ಎಲ್ಲ ಪರ್ವತಗಳ ಒಟ್ಟು ವಿಸ್ತೀರ್ಣವನ್ನು ಅವರು ೧,೨೬,೮೫,೦೦೦ ಯೋಜನ ಎಂದಿದ್ದಾರೆ. ಇಂತಹ ಸ್ಥಾನ ಅಂಥವರ ಕಲ್ಪನೆಯಲ್ಲಿ ದೇವದೇವತೆಗಳ ವಾಸಸ್ಥಾನವಾಗಿತ್ತು ಎಂದು ನಂಬಲಾಗಿತ್ತು. ಆದರೆ ಚೆನ್ನಬಸವಣ್ಣನವರು ಅವರಿಗಿಂತಲೂ ಮುಂದೆ ವಿಚಾರಿಸಿ ಈ ಮೇರುಮಂದಿರದ ಕೆಳಗಿರುವ ಭಾರತದ ಬಗ್ಗೆ ಮತ್ತು ಭಾರತ ಎಂಬ ಭೂಖಂಡದ ಸುತ್ತಲೂ ಆವರಿಸಿರುವ ಸಾಗರದ ಬಗ್ಗೆ ಚಿಂತಿಸಿದ್ದಾರೆ. ಈ ವಿಚಾರ ಕುರಿತು ಅವರು ಈ ಜಂಬೂದ್ವೀಪದ ಸುತ್ತಲು ಆವರಿಸಿರುವ ಆ ಸಾಗರವನ್ನು ಲವಣ ಸಮುದ್ರವೆಂದು ಕರೆದು, ಅದರ ವಿಸ್ತೀರ್ಣ ಲಕ್ಷದ ಮೇಲೆ ಇಪ್ಪತ್ತೈದು ಸಾವಿರ ಯೋಜನ ಎಂದಿದ್ದಾರೆ. ಭಾರತಕ್ಕೆ ಪೂರ್ವದಲ್ಲಿ ಬಂಗಾಳಕೊಲ್ಲಿ ಪಶ್ಚಿಮದಲ್ಲಿ ಅರಬ್ಬಿಸಮುದ್ರ ಮತ್ತು ದಕ್ಷಿಣದಲ್ಲಿ ಹಿಂದೂ ಮಹಾಸಾಗರಗಳು ಸುತ್ತುವರೆದಿವೆ ಎಂದು ಈಗ ನಮಗೆಲ್ಲ ಗೊತ್ತು. ಇಂತಹ ಅನೇಕ ಸಾಗರಗಳು ಈ ಭೂಮಿಯ ಮೇಲಿವೆ ಮತ್ತು ಅವುಗಳ ಹೆಸರು ಮತ್ತು ಪ್ರತಿಯೊಂದರ ವಿಸ್ತೀರ್ಣ ಮುಂತಾದ ಸಮಗ್ರ ಮಾಹಿತಿಯನ್ನು ೧೨ನೇ ಶತಮಾನದಲ್ಲಿ ಯಾವುದೇ ಸಾಗರಯಾನ ಮಾಡದೆ ನಮಗೆಲ್ಲ ನೀಡಿರುವುದು ನಿಜವಾಗಿಯೂ ಒಂದು ಅಚ್ಚರಿಯ ಸಂಗತಿ.

ಭೂಪ್ರದೇಶವನ್ನು ಆವರಿಸಿರುವ ಸಾಗರದ ಒಟ್ಟು ವಿಸ್ತೀರ್ಣ ೩೫,೦೬,೨೦೦೦೦ ಚ.ಕಿ.ಮೀ. ಹಾಗೆಯೇ ಇಲ್ಲಿರುವ ಒಟ್ಟು ನೀರಿನ ಪ್ರಮಾಣ ೧೩೦೦ ಮಿಲಿಯನ್ ಘ.ಕಿ.ಮೀ. (೧ ಮಿಲಿಯನ್=$೧೦^{೬}$) ಇಷ್ಟೊಂದು ವಿಶಾಲವಾದ ಸಾಗರ ಪ್ರದೇಶದಲ್ಲಿ ಅಲ್ಲಲ್ಲಿ ಜನವಸತಿಗಳಿವೆ ಎಂಬ ಕಲ್ಪನೆಯು ಮೂಡಿರುವುದು ೧೮ನೇ ಶತಮಾನದಲ್ಲಿ ಕೊಲಂಬಸ್ ಸಾಗರ ಪ್ರಯಾಣವನ್ನು ಪ್ರಾರಂಭಿಸಿದಾಗ ಮಾತ್ರ. ಅದಕ್ಕೂ ಮುಂಚೆ ಸಮೀಪವಿರುವ ಖಂಡಗಳ ಮಧ್ಯೆ ಮಾತ್ರ ಸಾಗರ ಸಂಪರ್ಕವಿತ್ತು ಭೂಮಿಯು ಚಪ್ಪಟೆಯಾಗಿದೆ, ನಾವು ಸಾಗರದಲ್ಲಿ ಭೂಮಿಯ ಒಂದು ಅಂಚಿಗೆ ಪ್ರಯಾಣ ಕೈಗೊಂಡರೆ ಕೆಳಗೆ ಜಾರಿ ಬೀಳಬಹುದು ಎಂಬ ನಂಬಿಕೆ ಬಲವಾದ ಕಾಲದಲ್ಲಿ ಚೆನ್ನಬಸವಣ್ಣನವರು ತುಂಬಾ ನಿಖರವಾಗಿ ಭೂಮಿಯ ಲಕ್ಷಣ ಮತ್ತು ಸಾಗರ, ದ್ವೀಪದ ಪರಿಕಲ್ಪನೆಯನ್ನು ನೀಡಿದ್ದಾರೆ.

ಲವಣ ಸಮುದ್ರದಿಂದಾಚೆಯಲ್ಲಿ ಭೂಮಿ ಎರಡು ಲಕ್ಷದ ಮೇಲೆ ಐವತ್ತು ಸಾವಿರ ಯೋಜನವಿದೆ. ಆ ದ್ವೀಪದ ಹೆಸರು ಪ್ಲಕ್ಷದ್ವೀಪ. ಈ ದ್ವೀಪಕ್ಕೆ ಇಕ್ಷುರ ಸಮುದ್ರವು ಎರಡು ಲಕ್ಷ ಐವತ್ತು ಸಾವಿರ ಯೋಜನ ವಿಸ್ತೀರ್ಣದಲ್ಲಿ ಆವರಿಸಿದೆ. ನಂತರ ಶಾಲ್ಮಲಿ ಎಂಬ ದ್ವೀಪ ಬರುತ್ತದೆ. ಅದರ ವಿಸ್ತೀರ್ಣ ಐದುಲಕ್ಷ ಯೋಜನ. ಈ ದ್ವೀಪವು ಮಧು ಎಂಬ ಐದು ಲಕ್ಷ ಯೋಜನದ ಸಮುದ್ರದಿಂದ ಆವರಿಸಿದೆ. ಮುಂದೆ ಹತ್ತು ಲಕ್ಷ ಯೋಜನ ಅಂತರದಲ್ಲಿ ಕುಶದ್ವೀಪವಿದೆ. ಅದು ಹತ್ತುಲಕ್ಷ ಯೋಜನದ ಘೃತಸಮುದ್ರದಿಂದ ಆವರಿಸಿದೆ. ನಂತರ ಇಪ್ಪತ್ತೈದು ಲಕ್ಷ ಯೋಜನ ಪ್ರಮಾಣದಲ್ಲಿ ಕ್ರೌಂಚ ದ್ವೀಪವು ನಾಲ್ವತ್ತು ಲಕ್ಷ ಯೋಜನ ಪ್ರಮಾಣದಲ್ಲಿ ಕ್ಷೀರಸಮುದ್ರದಿಂದಾವೃತವಾಗಿದೆ. ನಂತರ ಎಂಬತ್ತು ಲಕ್ಷ ಯೋಜನ ಪ್ರಮಾಣದ ಅಂತರದಲ್ಲಿ ಪುಷ್ಕರ ದ್ವೀಪವಿದೆ. ಅದು ಸ್ವಾದೋದಕ ಎಂಬ ಸಮುದ್ರದಿಂದ ಆವರಿಸಿದೆ. ಈ ರೀತಿಯಾಗಿ ಏಳು ಸಮುದ್ರದಿಂದ ಏಳು ದ್ವೀಪಗಳು ಈ ಭೂಮಿಯ ಮೇಲಿವೆ ಎಂದು

ಪ್ರತಿದ್ವೀಪದ ಮತ್ತು ಅದನ್ನು ಆವರಿಸಿರುವ ಸಮುದ್ರದ ವಿಸ್ತೀರ್ಣವನ್ನು ಈ ಒಂದು ವಚನದಲ್ಲಿ ನೀಡಿದ್ದಾರೆ.

ಈ ವಚನದಲ್ಲಿ ವ್ಯಕ್ತ ಪಡಿಸಿದ ಸಪ್ತದ್ವೀಪಗಳು ಆದುನಿಕ ಭೂಗೋಳಶಾಸ್ತ್ರಜ್ಞರು ಗುರುತಿಸಿರುವ ಏಳು ಖಂಡಗಳನ್ನು ಹೋಲುತ್ತವೆ. ಚೆನ್ನಬಸವಣ್ಣನವರು ತಿಳಿಸಿದ ಜಂಬೂದ್ವೀಪ (೧,೨೫,೦೦೦ ಯೋಜನ), ಪ್ಲಕ್ಷದ್ವೀಪ (೨,೫೦,೦೦೦ ಐಓಜನ), ಶಾಲ್ಮಲಿ ದ್ವೀಪ (೫,೫೦,೦೦೦), ಕುಶದ್ವೀಪ (೧೦,೦೦,೦೦೦), ಕ್ರೌಂಚದ್ವೀಪ (೨೫,೦೦,೦೦೦), ಪುಷ್ಕರ ದ್ವೀಪ (೮,೦೦,೦೦೦)ಗಳು ಈಗಿನ ಭಾರತ ಉಪಖಂಡ (೩೨,೮೭,೨೬೩), ಏಷ್ಯಾಖಂಡ (೪,೪೦,೩೦,೦೦೦ ಚ.ಕಿ.ಮೀ), ಯುರೋಪ (೧,೦೪,೯೮,೦೦೦ ಚ.ಕಿ.ಮೀ.), ಆಫ್ರಿಕಾ (೨,೯೭,೮೫,೦೦೦), ಉತ್ತರ ಅಮೇರಿಕಾ (೨,೪೨,೫೫,೦೦೦), ದಕ್ಷಿಣ ಅಮೇರಿಕಾ (೧,೭೭,೬೮,೦೦೦), ಆಸ್ಟ್ರೇಲಿಯಾ (೭೬,೮೭,೧೨೦)ಗಳನ್ನು ಹೋಲುತ್ತವೆ.

ಈ ದ್ವೀಪಗಳ ಮಧ್ಯದಲ್ಲಿರುವ ಲವಣಸಮುದ್ರ (೧,೨೫,೦೦೦ ಯೋಜನ), ಇಕ್ಷುರ ಸಮುದ್ರ (೨,೫೦,೦೦೦ ಯೋಜನ), ಮಧುಸಮುದ್ರ (೫,೦೦,೦೦೦), ಘೃತಸಮುದ್ರ (೧೦,೦೦೦,೦೦), ಕ್ಷೀರಸಮುದ್ರ (೪೦,೦೦,೦೦೦), ಸದೋದಕ ಸಮುದ್ರ (೮೦,೦೦,೦೦೦)ಗಳು ಇತ್ತೀಚಿನ ಕೆಲವು ಸಾಗರ ಸಮುದ್ರಗಳನ್ನು ಹೋಲುತ್ತವೆ. ಶಾಂತಸಾಗರ (೧೬೬,೨೪೨,೦೦೦ ಚ.ಕಿ.ಮೀ), ಅಟ್ಲಾಂಟಿಕ್ ಸಾಗರ (೮೬,೫೫೭,೦೦೦ ಚ.ಕಿ.ಮೀ), ಹಿಂದೂ ಸಾಗರ (೭೩,೪೨೭,೫೦೦ ಚ.ಕಿ.ಮೀ), ಆರ್ಕ್ಟಿ ಸಾಗರ (೧೩,೨೨೪,೦೦೦), ದಕ್ಷಿಣ ಚೀನ ಸಮುದ್ರ (೨,೯೭೫,೦೦೦), ಕರೇಬಿನ್ ಸಮುದ್ರ (೨,೫೧೬,೦೦೦), ಮೆಡಿಟರೇನಿಯನ್ ಸಮುದ್ರ (೨,೫೧೦,೦೦೦) ಮುಂತಾದವುಗಳನ್ನು ಹೋಲುತ್ತವೆ.

ಇಂತಹ ಸಾಗರ ಮತ್ತು ದ್ವೀಪಗಳಿಂದ ಆವರಿಸಿರುವ ಭೂಮಿಯಿಂದ ಮೇಲೇನಿದೆ ಎಂದು ಚಿಂತಿಸಿದ್ದಾರೆ. ಸಾಮಾನ್ಯವಾಗಿ ಅಂದಿನ ಕಾಲದಲ್ಲಿ ಮೇಲೆ ಸ್ವರ್ಗ, ಭೂಮಿಯ ಕೆಳಗೆ ನರಕ ಎಂಬ ನಂಬಿಕೆ ಬಲವಾಗಿತ್ತು. ಅಂದಿನ ದಿನಗಳಲ್ಲಿ ಚೆನ್ನಬಸವಣ್ಣನವರು ಭೂಮಿಯಿಂದ ಮೇಲೆ ಇರುವ ಖಗೋಳದ ಬಗ್ಗೆ ನಿಖರ ಜ್ಞಾನವನ್ನು ತಾಳಿದ್ದ ಬಗ್ಗೆ ಈ ವಚನದಲ್ಲಿ ನಮಗೆ ಗೊತ್ತಾಗುತ್ತದೆ. ಈ ಭೂಮಿಯಿಂದ ಮೇಲೆ ಭೂಮಿ ಉಂಟೆ? ಎಂದು ಪ್ರಶ್ನಿಸುತ್ತಾ ಉಂಟು ಎಂದು ಉತ್ತರವನ್ನು ಕಂಡುಕೊಂಡಿದ್ದಾರೆ. ೮೫,೩೫,೬೫,೦೦೦ ಯೋಜನ ಅಂತರದಲ್ಲಿ (ಎಂಬತ್ತೈದು ಕೋಟಿ ಮೂವತ್ತೈದು ಲಕ್ಷದ ಅರವತ್ತೈದು ಸಾವಿರ ಯೋಜನ) ಮತ್ತೆ ಭೂಮಿಯೆಂದರೆ ಚಂದ್ರನನ್ನು ಗುರ್ತಿಸಿದ್ದಾರೆ. ೧೯೬೯ರ ಜುಲೈ ೨೦ರಂದು ನೀಲ್ ಆರ್ಮಸ್ಟ್ರಾಂಗ್ ಚಂದ್ರನ ಮೇಲೆ ಕಾಲಿಟ್ಟು ಅಲ್ಲಿಯು ಸಹ ಭೂಮಿಯ ಮೇಲಿನಂತೆ ಕಲ್ಲುಮಣ್ಣುಗಳಿವೆ ಎಂದು ಹೇಳುವವರೆಗೆ ಆಧುನಿಕ ಜಗತ್ತಿಗೆ ಚಂದ್ರನ ಬಗ್ಗೆ ಸರಿಯಾದ ಕಲ್ಪನೆಗಳಿರಲಿಲ್ಲ. ಆದರೆ ೧೨ನೇ ಶತಮಾನದಲ್ಲಿ ಚೆನ್ನಬಸವಣ್ಣನವರು ಅಲ್ಲಿ ಭೂಮಿಯಿದೆ ಎಂದು ನಂಬಿದ್ದರು. ಮತ್ತು ಭೂಮಿ ಚಂದ್ರರ ಅಂತರವನ್ನು ಅಳೆದಿರುವರು. ಖಗೋಳವಿಜ್ಞಾನಿಗಳ ಪ್ರಕಾರ ಭೂಚಂದ್ರರ ಅಂತರ ೩೭೬,೦೦೦ ಕಿ.ಮೀ. ಚಂದ್ರನ ವಿಸ್ತೀರ್ಣವನ್ನು ೫೦೦,೦೦,೦೦೦ ಯೋಜನವೆಂದಿದ್ದಾರೆ. ಚಂದ್ರನ ನಂತರ ೮೫,೦೦,೦೦೦,೦೦ (ಎಂಟು ಪಂಚಶತಕೋಟಿ) ಯೋಜನ ವಿಸ್ತೀರ್ಣದಲ್ಲಿ ಗಾಢ ಅಂಧಕಾರವಿದೆ ಮತ್ತು ಅದರಲ್ಲಿ ಸೂರ್ಯ ಚಂದ್ರರು ವಿಹರಿಸುತ್ತಿರುವರು ಎಂದು ಹೇಳಿರುವಲ್ಲಿ ವ್ಯೋಮದ ಪರಿಕಲ್ಪನೆ

ಅಡಗಿದೆ. ಆಕಾಶದಲ್ಲಿ ಗ್ರಹ ನಕ್ಷತ್ರಗಳ ಚಲನೆಯ ಬಗ್ಗೆ ೧೬೧೧ರಲ್ಲಿ ಕೊಪರ್ನಿಕಸ್ ತಿಳಿಸುವವರೆಗೆ ಜಗತ್ತಿಗೆ ಭೂಮಿಯೆ ದೊಡ್ಡ ವಿಚಾರವಾಗಿತ್ತು. ಗಗನದಲ್ಲಿ ಕಾಣುವ ಚಿಕ್ಕೆಗಳು ಅಲ್ಪಪ್ರಮಾಣದ ಬೆಳಕಾಗಿದ್ದವು. ೧೬ನೇ ಶತಮಾನದ ಗೆಲಿಲಿಯೋನ ಟೆಲಿಸ್ಕೋಪನಿಂದ ನೋಡಿದಾಗ ಜಗತ್ತಿಗೆ ವ್ಯೋಮದ ವಿಸ್ತಾರದ ಅರಿವು ಮೂಡಿತು. ಆದರೆ ಚೆನ್ನಬಸವಣ್ಣನವರು ಅದನ್ನು ೧೨ನೇ ಶತಮಾನದಲ್ಲಿ ಗಗನ ವಿಸ್ತಾರವನ್ನು ದಾಖಲೆಗಳ ಮೂಲಕ ನಮಗೆಲ್ಲ ಒದಗಿಸಿದ್ದರೂ ನಾವೆಲ್ಲ ೧೨ನೇ ಶತಮಾನದಿಂದ ಕಣ್ಣಿದ್ದೂ ಕುರುಡರಾಗಿದ್ದುದು ನಮ್ಮ ದಡ್ಡತನದ ಪರಮಾವಧಿತನವಲ್ಲದೆ ಮತ್ತಿನ್ನೇನು?

ಅಷ್ಟೊಂದು ವಿಶಾಲವಾಗಿ ಹರಡಿರುವ ವ್ಯೋಮದಲ್ಲಿ (Space) "ಇಪ್ಪತ್ತೇಳು ನಕ್ಷತ್ರಗಳು, ಧ್ರುವಮಂಡಲ, ಸಪ್ತಋಷಿಯರು, ರಾಹುಕೇತು, ನವಗ್ರಹ ಇಂತಿವರೆಲ್ಲ ಆ ಮೇರು ಮಂದಿರದ ಹೊಸ ಪ್ರದಕ್ಷಿಣವಂ ದಿವಾರಾತ್ರಿಯಲ್ಲಿ ತಿರುಗಿ ಬಹರು" ಎಂಬಲ್ಲಿ ಆಧುನಿಕ ಖಗೋಳಜ್ಞರ ಗ್ಯಾಲಾಕ್ಷಿಯ ಪರಿಕಲ್ಪನೆ ಅಡಗಿದೆ. ಎಲ್ಲಕ್ಕಿಂತ ಮೇಲಾಗಿ ಇವೆಲ್ಲವೂ ಪ್ರದಕ್ಷಿಣೆ ಹಾಕುತ್ತಿವೆ ಎಂಬ ವಿಚಾರ ಅದ್ಭುತವಾಗಿದೆ. ಇದು ವಿಶ್ವವು ವಿಸ್ತಾರಗೊಳ್ಳುತ್ತಾ ಪ್ರದಕ್ಷಿಣೆ ಹಾಕುತ್ತಿದೆ ಎಂಬ ಹಬಲ್ ವಿಜ್ಞಾನಿಯು ೧೯೨೯ರಲ್ಲಿ ತಿಳಿಸಿದ ವಿಚಾರವನ್ನು ಒಳಗೊಂಡಿರುವುದು ಸೋಜಿಗ. ವಿಶ್ವವು ವಿಸ್ತಾರಗೊಳ್ಳುತ್ತಿದೆ ಎಂಬ ವಿಚಾರವನ್ನು ೧೯೨೨ರಲ್ಲಿ ಸಾರ್ವತ್ರಿಕ ಸಾಪೇಕ್ಷಿತಾ ಸಿದ್ಧಾಂತದ ಆಧಾರದ ಮೇಲೆ ರಷ್ಯಾದ ವಿಜ್ಞಾನಿ ಅಲೆಗ್ಸಾಂಡರ್ ಫ್ರೈಡ್‌ಮನ್ ಮಂಡಿಸುವವರೆಗೆ ವಿಶ್ವವು ನಿಶ್ಚಲವಾಗಿದೆ ಎಂದು ನಂಬಲಾಗಿತ್ತು. ಆದರೆ ಆಗಸದಲ್ಲಿಯ ಎಲ್ಲ ಕಾಯಗಳು ಸುತ್ತುತ್ತಿವೆ ಮತ್ತು ವಿಸ್ತರಿಸುತ್ತಿವೆ ಎಂಬ ವಿಚಾರವನ್ನು ಚೆನ್ನಬಸವಣ್ಣನವರು ಅಂದೇ ತಿಳಿದಿದ್ದ ಬಗ್ಗೆ ನಮಗೆಲ್ಲ ಹೊಳೆಯದೆ ಹೋಗಿರುವುದು ದುರಂತ.

ಭೂಮಿಯ ಮೇಲಿನ ಸಾಗರಗಳು, ಖಂಡಗಳು ಮತ್ತು ಭೂಮಿಯಿಂದಾಚೆಗಿನ ವ್ಯೋಮದ ಬಗ್ಗೆ ತಮ್ಮ ಅನೇಕ ವಚನಗಳಲ್ಲಿ ನಮ್ಮ ಅನೇಕ ವಚನಕಾರರು ಅಮೂಲ್ಯ ಮಾಹಿತಿಯನ್ನು ನಮಗೆಲ್ಲ ಬಿಟ್ಟುಹೋಗಿದ್ದಾರೆ. ನಾವೆಲ್ಲ ಇಂದು ವಚನಗಳನ್ನು ಕೇವಲ ಆಧ್ಯಾತ್ಮಿಕ ಕ್ಷೇತ್ರಕ್ಕೆ ಮಾತ್ರ ಮೀಸಲಾಗಿಟ್ಟಿರುವುದರ ಪರಿಣಾಮದಿಂದ ಇಂತಹ ವೈಜ್ಞಾನಿಕ ಅಂಶಗಳಿಂದ ವಂಚಿತರಾಗಲು ಸಾಧ್ಯವಾಯಿತು. ಈಗಲಾದರೂ ವಚನಗಳ ವೈಜ್ಞಾನಿಕ ಅಧ್ಯಯನ ನಡೆಯಬೇಕು. ಆಗ ವಚನಗಳಲ್ಲಿ ಅಡಗಿರುವ ಅದೆಷ್ಟೊ ಮಹತ್ವದ ವೈಜ್ಞಾನಿಕ ವಿಚಾರಗಳು ಹೊರಬರಲು ಸಾಧ್ಯವಾಗುತ್ತದೆ. ಸಂಶೋಧಕರು ಈ ನಿಟ್ಟಿನಲ್ಲಿ ಪ್ರಯತ್ನಿಸುವುದು ತೀರಾ ಅವಶ್ಯಕ. ವಚನಕಾರರು ಕೇವಲ ಆಧ್ಯಾತ್ಮಿಕ ಜೀವಿಗಳಲ್ಲ; ನೈಜ ವಿಜ್ಞಾನಿಗಳೂ ಸಹ ಎಂಬುದನ್ನು ಜಗತ್ತಿಗೆ ಪ್ರಚುರಪಡಿಸಬೇಕಾಗಿದೆ. ಯಾವ ಸಾಧನ ಸಲಕರಣಗಳಿಲ್ಲದೆ ಭೂ ವ್ಯೋಮವನ್ನು ಅಳೆದ ಅವರ ಜ್ಞಾನಕ್ಕೆ ನಾವೆಲ್ಲ ತಲೆ ಬಾಗಲೇಬೇಕು. ಅವರ ಆ 'ಅನುಭಾವ'ವನ್ನು ಪಡೆಯುವತ್ತ ನಾವೆಲ್ಲ ಪ್ರಯತ್ನಶೀಲರಾಗೋಣ. ಅವರು ಶರಣಪಥದಲ್ಲಿ ನಮ್ಮ ವೈಜ್ಞಾನಿಕ ರಥವನ್ನು ನಡೆಸೋಣ. ಸತ್ಯವನ್ನು ಸುಲಭವಾಗಿ ಕಾಣೋಣ. ವೈಜ್ಞಾನಿಕ ಶರಣರಾಗೋಣ.

ಮಹಾಮನೆ, ಸಂಪುಟ–೧೦, ಸಂಚಿಕೆ–೮, ಮಾರ್ಚ್–೨೦೦೮.

---

* ಮಹಾಮನೆ, ಲೇ. ರುದ್ರೇಶ ಗಂಗಾಧರ ಕಿತ್ತೂರ, ಪ್ರ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು, ಸಂಪುಟ–೧೦, ಸಂಚಿಕೆ–೮.

ಚೆನ್ನಬಸವಣ್ಣನವರ ವೈದ್ಯಕೀಯ ವಿಚಾರಗಳು

●

ರುದ್ರೇಶ್ ಗಂಗಾಧರ ಕಿತ್ತೂರ

ಹನ್ನೆರಡನೆಯ ಶತಮಾನದಲ್ಲಿ ಪ್ರಾರಂಭವಾದ ವಚನ ಚಳುವಳಿಯಲ್ಲಿ ಪಾಲ್ಗೊಂಡ ಅನೇಕ ಶರಣರಲ್ಲಿ ಚೆನ್ನಬಸವಣ್ಣನವರು ಜ್ಞಾನದಲ್ಲಿ ಮೇರು ವ್ಯಕ್ತಿಯಾಗಿ ಎದ್ದು ನಿಲ್ಲುತ್ತಾರೆ. ಕನ್ನಡದ ಸಾರಸ್ವತ ಲೋಕಕ್ಕೆ ೧೭೭೩ ಷಟ್‌ಸ್ಥಲ ವಚನಗಳನ್ನು, ಕರಣ ಹಸಿಗೆ, ಮಿಶ್ರಾರ್ಪಣ, ಹಿರಿಯ ಮಂತ್ರಗೋಪ್ಯ, ಪದಮಂತ್ರಗೋಪ್ಯ. ೯೭ ಸಕೀಲಗಳು, ಘಟಚಕ್ರ ಅಲ್ಲದೇ ಅನುಭಾವಗೀತ ಸಾಹಿತ್ಯವನ್ನು ಧಾರೆಯೆರೆದಿದ್ದಾರೆ. ಇವುಗಳೆಲ್ಲದರಲ್ಲಿಯೂ ನಾವು ಅಪಾರ ವೈಜ್ಞಾನಿಕ ಅಂಶಗಳನ್ನು ಕಾಣುತ್ತೇವೆ. ಖಗೋಳ ವಿಜ್ಞಾನ, ಜೀವ ವಿಜ್ಞಾನ, ರಸಾಯನ ವಿಜ್ಞಾನ, ಗಣಿತಶಾಸ್ತ್ರ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದ ಅನೇಕ ಅಂಶಗಳನ್ನು ಅವರು ಅರಿತಿರುವ ಬಗ್ಗೆ ಅವರ ವಚನಗಳನ್ನು ಓದಿದಾಗ ನಮಗೆ ಅರಿವಾಗುತ್ತದೆ. ಇವೆಲ್ಲವುದಕ್ಕಿಂತಲೂ ಹೆಚ್ಚಾಗಿ ವೈದ್ಯ ವಿಜ್ಞಾನಕ್ಕೆ ಸಂಬಂಧಿಸಿದ ವಿಚಾರಗಳನ್ನು 'ಘಟಚಕ್ರ' ಮತ್ತು 'ಕರಣ ಹಸಿಗೆ'ಯಂತಹ ಕೃತಿಗಳಲ್ಲಿ ಹೆಚ್ಚಾಗಿ ಕಾಣಬಹುದು.

'ಘಟಚಕ್ರ'ದಲ್ಲಿ ಬರುವ ಒಂದು ವಚನದಲ್ಲಿ ಆಧುನಿಕ ವೈದ್ಯವಿಜ್ಞಾನವು ಈಗ ಅರಿತಿರುವ ವಿಚಾರಗಳನ್ನು ಚೆನ್ನಬಸವಣ್ಣನವರು ಅಂದೇ (೧೨ನೇ ಶತಮಾನ) ಅರಿತಿರುವ ಬಗ್ಗೆ ಸಾಕಷ್ಟು ಪುರಾವೆ ದೊರೆಯುತ್ತವೆ. ಆ ವಚನ ಈ ಕೆಳಗಿನಂತಿದೆ:

ಮನುಷ್ಯರು ತಮ್ಮ ಅಂಗುಲದಲ್ಲಿ ೯೭ ಅಂಗುಲ ಪ್ರಮಾಣ
ಎಂಟು ಗೇಣು ಉದ್ದ; ನಾಲ್ಕು ಗೇಣು ಅಗಲ,
ಮೂರು ಕೋಟಿ ರೋಮ ದ್ವಾರಗಳು
ಮೂವತ್ತೆರಡು ಮೊಳ ಹಿರಿ ಕರುಳುಗಳು
ತೊಂಬತ್ತೆರಡು ಸಂದುಗಳು,
ಎಪತ್ತು ಹಿರಿಯ ಎಲುಬುಗಳು
ಎಂಬತ್ತೊಂದು ಘುಲಘಾಳಗಿ,
ನಾಲ್ಕು ಫುಲುರುದಿರ,
ಮುನ್ನೂರಾರವತ್ತು ಫಲ ಮಾಂಸ
ಪಡಿ ಪೈತ್ಯ, ಪಾವು ಶ್ಲೇಷ್ಮ. ಪಾವು ಶುಕ್ಲ

ಇವು ಇಷ್ಟರಿಂದ ಕೂಡಿದ್ದು ಈ ಶರೀರ
ಈ ಎಲ್ಲವೂ ಜಡ. ಇವಕ್ಕಿನ್ನೂ ಜೀವನು ಸಾಕ್ಷಿಯಾಗಿದ್ದ ಕಾರಣ
ಕೊರತೆ ಹುಟ್ಟಿ ಮನುಷ್ಯ ಆಕಾರವಾಯಿತು.
ಜೀವಕ್ಕೆ ಪರಬ್ರಹ್ಮನೇ ಸಾಕ್ಷಿಯಾಗಿ ಸಕಲ ಭೂತಂಗಳಲ್ಲಿದ್ದನು
ಈ ಶರೀರದಲ್ಲಿ ತೊಂಬತ್ತಾರು ತತ್ತ್ವಗಳುಂಟು.
ಅವುಗಳು ಯಾವುವೆಂದರೆ:
ಬಾಗಿಲು ಒಂಬತ್ತು, ಶ್ರೋತ್ರ ಐದು. ಶಬ್ದಗಳು ಐದು
ನಾಗರಗಳು ಐದು, ವಚನಗಳು ಐದು, ಅಂತಃಕರಣಗಳು ನಾಲ್ಕು
ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ ಸಂಬಂಧಗಳು ಇಪ್ಪತ್ತೈದು.
ನಾಡಿಗಳು ಹತ್ತು, ಧಾತುಗಳು ಏಳು, ರಾಗಗಳು ಎಂಟು
ಆಧಾರ ಆರು, ಮಂಡಳಗಳು ಮೂರು, ಗುಣಗಳು ಮೂರು
ಅವಸ್ಥೆಗಳು ಐದು, ಅಲ್ಲಿದ್ದ ತತ್ತ್ವಗಳು ತೊಂಭತ್ತಾರು.

ಈ ಸುದೀರ್ಘ ವಚನದಲ್ಲಿ ಚೆನ್ನಬಸವಣ್ಣನವರು ಮಾನವ ಶರೀರ ರಚನೆ (Human Physiology and Antomy)ಯ ಬಗ್ಗೆ ಸಮಗ್ರವಾಗಿ ವಿವರಿಸಿದ ಜಗತ್ತಿನ ಮೊದಲ ವೈದ್ಯ ವಿಜ್ಞಾನಿಯಾಗಿದ್ದಾರೆ. ಏಕೆಂದರೆ ಈ ವಚನದಲ್ಲಿ ವಿವರಿಸಲಾದ ಎಲ್ಲ ಅಂಶಗಳನ್ನು ಆಧುನಿಕ ವೈದ್ಯ ವಿಜ್ಞಾನವು ೧೯ನೇ ಶತಮಾನದಲ್ಲಿ ಸಂಶೋಧಿಸಿದ ವಿಚಾರಗಳಾಗಿವೆ.

ವಚನದ ಪ್ರಾರಂಭದಲ್ಲಿ ವಿವರಿಸಿದಂತೆ ಪ್ರತಿಯೊಬ್ಬ ಮನುಷ್ಯನೂ ತನ್ನ ಎತ್ತರವನ್ನು ತನ್ನ ಅಂಗುಲದ ಆಧಾರದಿಂದ ಅಳೆದರೆ, ಆ ಅಳತೆಯು ಚೆನ್ನಬಸವಣ್ಣನವರು ತಿಳಿಸಿದಂತೆ ೯೬ ಅಂಗುಲವಾಗುತ್ತದೆ. ಹಾಗೆಯೆ ಗೇಣು (ಒಂದು ವಿಧವಾದ ಉದ್ದವನ್ನು ಅಳೆಯುವ ಮಾನಕ್ಕೆ ಬೆರಳನ್ನು ಬಿಡಿಬಿಡಿಯಾಗಿ ಚಾಚಿದಾಗ ಹೆಬ್ಬೆರಳು ಮತ್ತು ಕಿರುಬೆರಳಿನ ತುದಿಯ ಮಧ್ಯದ ಅಳತೆ)ಗಳ ಮೂಲಕ ಅಳೆದರೆ ಎಂಟುಗೇಣು ಎತ್ತರ. ಹಾಗೆಯೇ ನಾಲ್ಕು ಗೇಣು ಎದೆಯ ಸುತ್ತಳತೆ (ಅಗಲ) ಇರುವುದು ನಮಗೆ ಗೊತ್ತಾಗುತ್ತದೆ (ಓದುಗರು ತಮ್ಮ ದೇಹದ ಎತ್ತರವನ್ನು ಪರೀಕ್ಷಿಸಿಕೊಳ್ಳಬಹುದು).

ಮಾನವನ ದೇಹದಲ್ಲಿರುವ ಒಟ್ಟು ರೋಮ (ಕೂದಲು)ಗಳ ಬಗ್ಗೆ ಚೆನ್ನಬಸವಣ್ಣನವರು ಮೂರು ಕೋಟಿ ರೋಮದ್ವಾರಗಳಿರುವ ಬಗ್ಗೆ ತಿಳಿಸಿರುವ ಪರಿಯು ಅವರ ಸೂಕ್ಷ್ಮದೃಷ್ಟಿಯ ಬಗ್ಗೆ ನಮಗೆಲ್ಲ ಅಚ್ಚರಿ ಮೂಡಿಸುತ್ತದೆ. ಆಧುನಿಕವಾಗಿ ಇಷ್ಟೊಂದು ಮುಂದುವರೆದಿರುವ ಈಗಿನ ವೈದ್ಯರಾದರೂ ಈ ವಿಚಾರವನ್ನು ಅರಿತಿರುವ ಬಗ್ಗೆ ಸಂದೇಹ ಮೂಡುತ್ತದೆ.

ಮಾನವ ದೇಹದಲ್ಲಿಯ ಹಿರಿ ಕರುಳುಗಳ ಅಳತೆಯನ್ನು ಚೆನ್ನಬಸವಣ್ಣನವರು ಮೂವತ್ತೆರಡು ಮೊಳ ಎಂದಿದ್ದಾರೆ. ಆದರೆ ಆಧುನಿಕ ವೈದ್ಯರು ಮಾನವ ದೇಹವನ್ನು ಸೀಳಿ ಅಳೆದ ವಿಚಾರವೆಂದರೆ ನಮ್ಮ ದೇಹದಲ್ಲಿ ೭೦೦ ಸೆಂ.ಮೀ. ಉದ್ದದ ಸಣ್ಣ ಕರುಳು ಮತ್ತು ೧೭೦ ಸೆಂ.ಮೀ. ಉದ್ದ ದೊಡ್ಡಕರುಳುಗಳಿವೆ ಎಂದಿದ್ದಾರೆ. ಅಲ್ಲದೆ ತೊಂಭತ್ತೆರಡು ಸಂದುಗಳಿರುವ (ಕೀಲು) ಬಗ್ಗೆ ತಿಳಿಸುತ್ತಾ ಚೆನ್ನಬಸವಣ್ಣನವರು ಎಪ್ಪತ್ತು ಹಿರಿಯ ಎಲುಬುಗಳಿರುವ ಬಗ್ಗೆ ತಿಳಿಸಿದ್ದಾರೆ. ಈಗ ನಮಗೆ ಗೊತ್ತಿರುವ ಎಲುಬುಗಳೆಂದರೆ ತಲೆಬುರುಡೆ, ದವಡೆ, ಕೀಲಕ (ಕಾಲರ್ ಮೂಳೆ), ಭುಜ ಮೂಳೆ, ಎದೆಚೆಕ್ಕಿ, ಎದೆಗೂಡು, ತೋಳು ಮೂಳೆ: ಬೆನ್ನುಮೂಳೆ, ಕೈ ಮೂಳೆಗಳು, ಶ್ರೋಣಿ, ಸೊಂಟ ಮೂಳೆ, ಕೈ ಬೆರಳುಗಳ

ಮೂಳೆಗಳು, ತೊಡೆ ಮೂಳೆಗಳು, ಮಂಡಿ ಚಿಪ್ಪು, ಕಾಲು ಮೂಳೆಗಳು ಮತ್ತು ಕಾಲಬೆರಳು ಮೂಳೆಗಳು, ಈ ರೀತಿಯಾಗಿ ದೇಹದಲ್ಲಿ ವಿಂಗಡಿಸಿರುವ ಎಲ್ಲ ಮೂಳೆಗಳ ಸಂಖ್ಯೆಯನ್ನ ಚೆನ್ನಬಸವಣ್ಣನವರು ಎಪ್ಪತ್ತು ಹಿರಿಯ (ಪ್ರಮುಖ) ಎಲುಬುಗಳಿವೆ ಎಂದಿದ್ದಾರೆ.

ಆಧುನಿಕ ವೈದ್ಯ ವಿಜ್ಞಾನದ ಪ್ರಕಾರ ಮಾನವನ ಅಸ್ಥಿಪಂಜರದಲ್ಲಿ ಒಟ್ಟು ೨೦೬ ಮೂಳೆಗಳಿವೆ. ಮುಂಡ (ತಲೆ) ಭಾಗದಲ್ಲಿ ೧೨ ಜೊತೆ ಪಕ್ಕೆಲುಬುಗಳು ಹಾಗು ೩೩ ಜೊತೆ ಬೆನ್ನೆಲುಬುಗಳಿಂದ ಎದೆಗೂಡು ನಿರ್ಮಾಣವಾಗಿದೆ. ಉದರಕೋಶಕ್ಕೆ ಮೂಳೆಗಳ ಸಂರಕ್ಷಣೆ ಇರದಿದ್ದರೂ, ಅದರ ತಳಭಾಗ ಒಂದು ಬೋಗುಣಿ ಆಕಾರದಲ್ಲಿದ್ದು, ಇಕ್ಕೆಲಗಳಲ್ಲಿ ಅಗಲ ಮೂಳೆಗಳ ಭಿತ್ತಿ ಇದೆ.

ಮೂಳೆಗಳ ಬಗ್ಗೆ ಚಿಂತಿಸಿದಂತೆ ಎಂಬತ್ತೊಂದು ರಕ್ತನಾಳಗಳಿರುವ ಬಗ್ಗೆ ತಿಳಿಸಿದ್ದಾರೆ. ಮಾನವರ ಶರೀರದಲ್ಲಿ ರಕ್ತವು ನಾಳಗಳ ಮೂಲಕ ಹರಿಯುತ್ತಿರುವ ವಿಚಾರವನ್ನು ಜಗತ್ತಿಗೆ ತಿಳಿಸಿದ ಪ್ರಥಮ ವ್ಯಕ್ತಿ ಚೆನ್ನಬಸವಣ್ಣನವರಾಗಿದ್ದಾರೆ. ಆದರೆ ನಾವೆಲ್ಲ ೧೫–೧೬ನೇ ಶತಮಾನದಲ್ಲಿ ಜೀವಿಸಿದ್ದ ಇಂಗ್ಲೆಂಡಿನ ವಿಲಿಯಮ್ ಹಾರ್ವೇಯವರು ಬರೆದ 'ಡಿ ಮೋಟು ಕಾರ್ಡಿಸ್' ಎಂಬ ಗ್ರಂಥದಲ್ಲಿ ತಿಳಿಸಿದ ರಕ್ತ ಪರಿಚಲನೆಯ ವಿಚಾರವು ಜಗತ್ತಿಗೆ ಮೊದಲನೆಯದಾಗಿದೆ ಎಂದು ನಂಬಲಾಗಿದೆ. ಆದರೆ ೧೨ನೇ ಶತಮಾನದಲ್ಲಿ ಈ ವಿಚಾರ ಕುರಿತು 'ಷಟಚಕ್ರ' ಕೃತಿಯಲ್ಲಿ ಚೆನ್ನಬಸವಣ್ಣನವರು ಪ್ರಸ್ತಾಪಿಸಿರುವ ವಿಚಾರವನ್ನು ಜಗತ್ತಿಗೆ ತಿಳಿಸುವಲ್ಲಿ ನಾವೆಲ್ಲ ವಿಫಲರಾಗಿರುವುದರ ಮೂಲಕ ರಕ್ತ ಪರಿಚಲನೆಯ ಪ್ರತಿಪಾದಕ 'ವಿಲಿಯಂ ಹಾರ್ವೇ' ಎಂಬುದು ಪ್ರಸಿದ್ಧವಾಗಿದೆ. ರಕ್ತ ಪರಿಚಲನೆಯಲ್ಲಿ ಉಂಟಾಗುವ ಕಂಪನವನ್ನು ನಾಡಿ ಎಂದು ಕರೆಯಲಾಗುತ್ತದೆ ಎಂದೂ ಸಹ ವಿಲಿಯಂ ಹಾರ್ವೇ ತಿಳಿಸಿದ್ದಾರೆ ಎಂದು ನಂಬಲಾಗಿದೆ. ಆದರೆ, ಇದೇ ವಚನದಲ್ಲಿ ಚೆನ್ನಬಸವಣ್ಣನವರು ಹತ್ತು ನಾಡಿಗಳ ಬಗ್ಗೆ ತಿಳಿಸಿದ್ದಾರೆ.

ರಕ್ತ ಪರಿಚಲನೆಯ ಬಗ್ಗೆ ತಿಳಿಸುತ್ತಾ ಚೆನ್ನಬಸವಣ್ಣನವರು ರಕ್ತದ ಗುಂಪುಗಳ ವರ್ಗೀಕರಣ ಮಾಡಿದ್ದಾರೆ. ಅವರು ತಮ್ಮ ಈ ವಚನದಲ್ಲಿ ನಾಲ್ಕು: ಘಲುರುದಿರ ಎಂದಿದ್ದಾರೆ. ಘಲುರುದಿರ ಎಂದರೆ ರಕ್ತ. ಆಶ್ಚರ್ಯಕರ ವಿಷಯವೇನೆಂದರೆ ೧೯೦೧ರಲ್ಲಿ ಆಸ್ಟ್ರೀಯಾ ದೇಶದ ಕಾರ್ಲ್‌ಲ್ಯಾಂಡ್ ಸ್ಟೀನರ್‌ನು ರಕ್ತದ ನಾಲ್ಕು ಗುಂಪುಗಳಾದ ಎ.ಬಿ., ಎಬಿ., ಓ, ದ ವಿಚಾರವಾಗಿ ತಿಳಿಸಿದ ಮತ್ತು ಈ ರೀತಿಯ ವರ್ಗೀಕರಣ ಮಾಡಿ ಮಾನವರ ರಕ್ತದಲ್ಲಿಯ ಗುಂಪುಗಳನ್ನು ಗುರ್ತಿಸಿದ್ದಕ್ಕಾಗಿ, ೧೯೩೦ ರ ನೋಬೆಲ್ ಪಾರಿತೋಷಕವನ್ನು ಗಳಿಸಿದನು. ಆದರೆ, ಸುಮಾರು ೮೦೦ ವರ್ಷಗಳ ಹಿಂದೆಯೇ ನಿರ್ದಿಷ್ಟವಾಗಿ ಚೆನ್ನಬಸವಣ್ಣನವರು. ರಕ್ತದಲ್ಲಿ ನಾಲ್ಕು ವಿಧಗಳು ಎಂದು ಸ್ಪಷ್ಟವಾಗಿ ಹೇಳಿರುವುದು ನಿಜವಾಗಿಯೂ ಸೋಜಿಗ, ಅಲ್ಲದೆ, ಈ ವಿಚಾರವಾಗಿ ನಾವು ಚಿಂತಿಸದೆ ಹಾಗೆ ಸುಮ್ಮನಿರುವುದು ಸಹ ಸೋಜಿಗ. ಇಂತಹ ಅನೇಕ ವಿಚಾರಗಳು ವಚನಗಳಲ್ಲಿ ಸೇರಿಹೋಗಿದ್ದು ಅವುಗಳನ್ನು ಗುರುತಿಸಿ ಅರ್ಥೈಸುವ ಪ್ರಯತ್ನ ಮಾಡಬೇಕಾಗಿದೆ.

ಮಾನವನ ಶರೀರವು ಕೇವಲ ಮೂಳೆ, ರಕ್ತ ಮುಂತಾದವುಗಳಿಂದ ಕೂಡಿರದೆ ಮುನ್ನೂರರವತ್ತು ಫಲ ಮಾಂಸದಿಂದ ಹಾಗು ಪಡಿ (ನಾಲ್ಕು ಸೇರು – ಉತ್ತರ ಕನ್ನಡದಲ್ಲಿ ಪ್ರಚಲಿತವಿರುವ ದಾನ್ಯಗಳನ್ನು ಅಳೆಯುವ ಸಾಧನ) ಪೈತ್ಯ ಅಂದರೆ ಪಿತ್ತರಸದಿಂದ, ಅಲ್ಲದೆ

ಪಾವು (ದ್ರವ ಅಳತೆಯ ಪ್ರಮಾಣ) ಶ್ಲೇಷ್ಮ ಅಂದರೆ ಕಫ (Sputum) ದಿಂದ, ಪಾವು ಶುಕ್ಲದಿಂದ (Semenor) ಕೂಡಿದೆ ಎಂದಿದ್ದಾರೆ. ಅಲ್ಲದೆ ಇಲ್ಲಿಯವರೆಗೆ ಹೇಳಿದ ಎಲ್ಲ ಪದಾರ್ಥಗಳು (ಮೂಳೆ, ಮಾಂಸ, ರಕ್ತ, ಪಿತ್ತ, ಕಫ ಮುಂತಾದವು) ಜಡ ಎಂದಿದ್ದಾರೆ. ಇವುಗಳ ಮದ್ಯದಲ್ಲಿ ಜೀವವು ಸಂಚರಿಸುತ್ತಿದ್ದು ಆಗ ಮಾನವನು ಜೀವಂತವಾಗಿರುವುದಕ್ಕೆ ಪರಬ್ರಹ್ಮನೇ ಸಾಕ್ಷಿ ಎಂದಿದ್ದಾರೆ. ಇಲ್ಲಿ ನಾವು ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಮೇಲೆ ಹೇಳಿದ ಮೂಳೆ, ಮಾಂಸ, ರಕ್ತ, ಕಫ, ಪಿತ್ತ ಮುಂತಾದವುಗಳನ್ನೆಲ್ಲ ಕೃತಕವಾಗಿ ಸೃಷ್ಟಿಸಿ ದೇಹದಲ್ಲಿ ಜೋಡಿಸಬಹುದು. ಆದರೆ ಅವುಗಳ ಮಧ್ಯದಲ್ಲಿ ಜೀವವೆಲ್ಲಿ ಎಂಬ ವಿಚಾರವನ್ನು ತಿಳಿಸುವುದಕ್ಕೋಸ್ಕರವಾಗಿ ಅವುಗಳೆಲ್ಲ ಜಡ ಎಂದಿದ್ದಾರೆ. ಇಂತಹ ಆಧುನಿಕ ವೈದ್ಯಕೀಯ ಪದ್ಧತಿಯಲ್ಲಿ ಕೃತಕ ಹೃದಯ, ಮೂತ್ರಜನಕಾಂಗ, ಅಲ್ಲದೆ ರಕ್ತವನ್ನು ಸೃಷ್ಟಿಸಿ ಜೋಡಿಸಲಾಗುತ್ತದೆ. ಕಾರಣವೇನೆಂದರೆ ಅವೆಲ್ಲವು ಜಡವಸ್ತುಗಳು. ಈ ವಿಚಾರವನ್ನು ಚೆನ್ನಬಸವಣ್ಣನವರು ಅಂದೇ ೧೨ನೇ ಶತಮಾನದಲ್ಲಿ ನಮಗೆ ತಿಳಿಸಿದ್ದಾರೆ.

ದೇಹದಲ್ಲಿಯ ಗೋಚರ ಭಾಗಗಳನ್ನು ಕ್ರಮಬದ್ಧವಾಗಿ ವಿವರಿಸಿದಂತೆ ಅಗೋಚರ ಅಂಶಗಳ ಬಗ್ಗೆಯೂ ಚೆನ್ನಬಸವಣ್ಣನವರು ತುಂಬಾ ಸರಳವಾಗಿ ವಿವರಿಸಿದ್ದಾರೆ. ಅವರು ಹೇಳುವಂತೆ ನಮ್ಮ ಶರೀರವು ತೊಂಬತ್ತಾರು ತತ್ತ್ವಗಳನ್ನು ಒಳಗೊಂಡಿದೆ. ಅವುಗಳಾವುವು ಎಂದರೆ, ಒಂಬತ್ತು ಬಾಗಿಲುಗಳು, (ನವದ್ವಾರಗಳು)–ಅವುಗಳ ವಿವರವು ಇಂತಿದೆ: ಎರಡು ಸ್ರೋತ (ಕಿವಿ) ದ್ವಾರಗಳು. ಎರಡು ನಯನ (ಕಣ್ಣು) ದ್ವಾರಗಳು. ಎರಡು ನಾಸಿಕ (ಮೂಗು) ದ್ವಾರಗಳು. ಒಂದು ವಾಕ್ (ಬಾಯಿ) ದ್ವಾರ, ಒಂದು ಮೂತ್ರದ್ವಾರ, ಒಂದು ಪೂರೀಷ ಮಲದ್ವಾರ. ಈ ರೀತಿಯಾಗಿ ಒಂಬತ್ತು ದ್ವಾರಗಳನ್ನು ನಮ್ಮ ದೇಹ ಹೊಂದಿದೆ. ಜೊತೆಗೆ ಐದು ಶೋತ್ರಗಳನ್ನು ಅಂದರೆ ಪಂಚೇಂದ್ರಿಯಗಳನ್ನು ಸಹ ಹೊಂದಿರುವ ಬಗ್ಗೆ ತಿಳಿಸಿದ್ದಾರೆ. ಅವುಗಳಾವುವೆಂದರೆ, ೧) ಶ್ರೋತ್ರ–ಕಿವಿ (Ear), ೨) ಚರ್ಮ–ತ್ವಚೆ (Skin) ೩) ಜಿಹ್ವ–ನಾಲಿಗೆ (Tounge), ೪) ಘ್ರಾಣ–ಮೂಗು (Nose), ೫) ನೇತ್ರ–ಕಣ್ಣು (Eye), ಇವುಗಳ ಜೊತೆಗೆ ಐದು ಶಬ್ದಗಳು, ಐದು ನಾಗರಗಳು, ಐದು ವಚನಗಳನ್ನು ಸಹ ನಮ್ಮ ದೇಹ ಒಳಗೊಂಡಿದೆ ಎಂದಿದ್ದಾರೆ. ನಾಲ್ಕು ಅಂತಃಕರಣಗಳಾದ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರಗಳನ್ನು ಒಳಗೊಂಡಿದೆ ಎಂದಿದ್ದಾರೆ.

ಚೆನ್ನಬಸವಣ್ಣನವರು ನಮ್ಮ ದೇಹ ಇಪ್ಪತ್ತೈದು ಸಂಬಂಧಗಳನ್ನು ಒಳಗೊಂಡಿದೆ ಎಂದಿದ್ದಾರೆ. ಅವುಗಳಾವುವು ಎಂದರೆ ೧) ಪೃಥ್ವಿ, ೨) ಅಪ್ಪು, ೩) ತೇಜ, ೪) ವಾಯು ಆಕಾಶ – ಈ ಐದು ಸಂಬಂಧಗಳ ಪ್ರತಿಯೊಂದನ್ನು ಉಪಸಂಬಂಧವಾಗಿ ಅಂದರೆ ಪೃಥ್ವಿಯಲ್ಲಿಯ ಪೃಥ್ವಿ, ಪೃಥ್ವಿಯಲ್ಲಿಯ ಅಪ್ಪು, ಪೃಥ್ವಿಯಲ್ಲಿಯ ತೇಜ, ಪೃಥ್ವಿಯಲ್ಲಿಯ ಆಕಾಶ ಎಂಬ ಐದು ಪೃಥ್ವಿಯ ಉಪ ಸಂಬಂಧಗಳು. ಹಾಗೆಯೇ ಅಪ್ಪುವಿನಲ್ಲಿಯ ಪೃಥ್ವಿ ಅಪ್ಪುವಿನಲ್ಲಿಯ ಅಪ್ಪ, ಅಪ್ಪುವಿನಲ್ಲಿ ತೇಜ, ಅಪ್ಪುವಿನಲ್ಲಿಯ ವಾಯು, ಅಪ್ಪುವಿನಲ್ಲಿಯ ಆಕಾಶ ಎಂಬ ಅಪ್ಪುವಿನ ಉಪಸಂಬಂಧಗಳು. ಇದೇ ರೀತಿಯಾಗಿ ತೇಜ, ವಾಯು, ಆಕಾಶಗಳು, ಉಪಸಂಬಂಧಗಳೆಲ್ಲ ಸೇರಿ ಇಪ್ಪತ್ತೈದು ಸಂಬಂಧಗಳನ್ನು ನಮ್ಮ ಸಂಕೀರ್ಣ ದೇಹವು ಒಳಗೊಂಡಿದೆ ಎಂದಿದ್ದಾರೆ.

ಚೆನ್ನಬಸವಣ್ಣನವರು ವಿವರಿಸಿದ ನಾಡಿಯ ವಿಷಯವು ತುಂಬಾ ಸೂಕ್ಷ್ಮ ಮತ್ತು

ಮಹತ್ವದ್ದಾಗಿದೆ. ನಾಡಿಗೆ ನರ ಎಂಬ ಪರ್ಯಾಯ ಪದವನ್ನು ಬಳಸಲಾಗುತ್ತಿದೆ. ಮನುಷ್ಯನ ದೇಹದಲ್ಲಿ ಪ್ರಾಣಶಕ್ತಿ ಇದೆ. ದೈಹಿಕ ಶಕ್ತಿಯನ್ನು ಕಂಡಂತೆ ಪ್ರಾಣಶಕ್ತಿಯನ್ನು ಕಾಣಲು ಬರುವದಿಲ್ಲ. ಪ್ರಾಣಶಕ್ತಿ ಹರಿಯಬೇಕಾದರೆ ನಾಳಗಳು ಬೇಕಾಗುತ್ತವೆ. ಇದನ್ನು ಶಾಕ್ತರು ನಾಡಿಗಳೆಂದು ಕರೆಯುತ್ತಾರೆ. ಪ್ರಾಣಶಕ್ತಿಯು ಹೇಗೆ ಅಗೋಚರವೋ ಹಾಗೆ ನಾಡಿಗಳೂ ಅಗೋಚರವಾಗಿವೆ. ಆದರೆ ನಮ್ಮ ದೇಹದಲ್ಲಿರುವ ನರಗಳು ನಾಡಿಗಳ ವ್ಯಕ್ತಿರೂಪವೆನ್ನಬಹುದು. ವೈದ್ಯರ ಪ್ರಕಾರ ನಮ್ಮ ದೇಹದಲ್ಲಿ ೭೨,೦೦೦ ನಾಡಿಗಳಿದ್ದು, ೩೬,೦೦೦ ಎಡಗಡೆ ಭಾಗದಲ್ಲಿಯೂ ಮತ್ತು ೩೬,೦೦೦ ನಾಡಿಗಳು ಬಲಭಾಗದಲ್ಲಿಯೂ ಇವೆ ಎಂದು ನಂಬಲಾಗಿದೆ. ವಚನಕಾರರು ಗುರ್ತಿಸಿದ ಪ್ರಮುಖ ಹತ್ತು ನಾಡಿಗಳೆಂದರೆ ೧) ಇಡಾ. ೨) ಪಿಂಗಳ ೩) ಸುಷುಮ್ನಾ ೪) ಗಾಂಧಾರಿ ೫) ಹಸ್ತಿಜಿಹ್ವಾ ೬) ಪೂಷಾ ೭) ಅಲಂಬು. ೮) ಲತುಹಾ ೯) ಪಯಸ್ವಿನಿ ೧೦) ಶಂಖಿನಿ. ಇವುಗಳಲ್ಲಿ ಅತ್ಯಂತ ಪ್ರಮುಖ ನಾಡಿಗಳೆಂದರೆ ಇಡಾ ಮತ್ತು ಪಿಂಗಳ ಹಾಗೂ ಸುಷುಮ್ನ ಯೋಗಸಾಧಕರಿಗೆ ಮಾತ್ರ ಅರಿವಿಗೆ ಬರುವ ಈ ನಾಡಿಗಳ ಬಗ್ಗೆ ಚೆನ್ನಬಸವಣ್ಣನವರಾದಿಯಾಗಿ ಅನೇಕ ಶರಣರು ತಮ್ಮ ವಚನಗಳಲ್ಲಿ ಪ್ರಸ್ತಾಪಿಸಿರುವುದನ್ನು ಗಮನಿಸಿದರೆ ಶರಣರೆಲ್ಲ ಯೋಗಜ್ಞಾನದ ಬಗ್ಗೆ ತಿಳಿದಿರುವುದು ಗೊತ್ತಾಗುತ್ತದೆ.

ಏಳು ಧಾತುಗಳಾದ ರಸ, ರುಧಿರ, ಮಾಂಸ, ಮೇದಸ್ಸು, ಅಸ್ಥಿ, ಮಜ್ಜೆ ಮತ್ತು ಶುಕ್ಲದ ಬಗ್ಗೆ 'ಘಟಚಕ್ರ'ದಲ್ಲಿ ವಿವರವಾಗಿ ತಿಳಿಸಿದ್ದಾರೆ. ಜೊತೆಗೆ ಎಂಟು ರಾಗಗಳು. ಆರು ಆಧಾರ ಚಕ್ರಗಳಾದ ೧) ಆಧಾರ ಚಕ್ರ (ಗುದದಲ್ಲಿ) ೨) ಸ್ವಾಧಿಷ್ಠಾನ ಚಕ್ರ (ಗುಹ್ಯದಲ್ಲಿ) ೩) ಮಣಿಪೂರ ಚಕ್ರ (ನಾಭಿಯಲ್ಲಿ) ೪) ಅನಾಹತ ಚಕ್ರ (ಹೃದಯದಲ್ಲಿ) ೫) ವಿಶುದ್ಧ ಚಕ್ರ (ಕಂಠದಲ್ಲಿ) ೬)ಆಗ್ನೇಯ ಚಕ್ರ (ಹುಬ್ಬಿನ ಮಧ್ಯೆ)ಗಳ ಬಗ್ಗೆ ವಿವರವಾಗಿ ತಿಳಿಸಿದ್ದಾರೆ. ಸೂರ್ಯ ಮಂಡಲ, ಚಂದ್ರಮಂಡಲ, ಅಗ್ನಿ ಮಂಡಲ ಎಂಬ ಮೂರು ಮಂಡಲಗಳು. ಅಲ್ಲದೆ ಸತ್ವ, ರಜೋ, ತಮೋ ಎಂಬ ಮೂರು ಗಣಗಳು. ಕೊನೆಯದಾಗಿ ೧) ಜಾಗ್ರ ೨) ಸ್ವಪ್ನ ೩) ಸುಷುಪ್ತಿ ೪) ತೂರ್ಯಾವಸ್ಥೆ ೫) ತೂರ್ಯಾತೀತ ಎಂಬ ಐದು ಅವಸ್ಥೆಗಳ ಬಗ್ಗೆ ಸುಧೀರ್ಘವಾಗಿ 'ಘಟಚಕ್ರ'ದಲ್ಲಿ ವಿವರಣೆ ನೀಡಿದ್ದಾರೆ.

ಒಟ್ಟಾರೆಯಾಗಿ ಚೆನ್ನಬಸವಣ್ಣನವರು 'ಘಟಚಕ್ರ'ದಲ್ಲಿ ವಿವರಗಳನ್ನೆಲ್ಲ ಅಂದರೆ ನಾಡಿ ಮಿಡಿತದ ಬಗ್ಗೆ ಬ್ರಿಟನ್ ನ ತಾನ್ ಫ್ಲೋಯರ್ ೧೭೦೭ರಲ್ಲಿ ಬರೆದ "ವೈದ್ಯನ ನಾಡಿ ನಿರೀಕ್ಷಣೆ" ಎಂಬ ಗ್ರಂಥ ಬರುವ ಮೊದಲೇ ಚೆನ್ನಬಸವಣ್ಣನವರು ನಾಡಿಯ ಬಗ್ಗೆ ಸಮಗ್ರವಾಗಿ ತಿಳಿಸಿದ್ದರು.

ಬೆಲ್ಜಿಯಂನ ಆಂಡ್ರಿಯನಸ್ ವೆಸಾಲಿಯಸ್‌ನು ಕ್ರಿ.ಶ. ೧೫೪೩ರಲ್ಲಿ ಬರೆದ "ಮಾನವ ದೇಹದ ರಚನೆ" ಗ್ರಂಥದಲ್ಲಿ ವಿವರಿಸಿದ ಮಾನವನ ದೇಹದ ಎಲ್ಲ ಅಂಗಗಳ ಬಗ್ಗೆ ಚೆನ್ನಬಸವಣ್ಣನವರು ೧೨ನೇ ಶತಮಾನದಲ್ಲೇ ವಿವರಿಸಿದ್ದರು ಎಂದು ಅರಿಯಬೇಕಾಗಿದೆ. ಆಧುನಿಕ ವೈದ್ಯ ವಿಜ್ಞಾನದಲ್ಲಿ ವಿವರಿಸಿರುವ ಕೆಲವು ವಿಚಾರಗಳ ಬಗ್ಗೆ ಚೆನ್ನಬಸವಣ್ಣನವರಿಗೆ ತಿಳಿದಿರುವ ವಿಚಾರಗಳಾಗಿದ್ದವು ಎಂಬುವದಂತೂ ಸತ್ಯ. ಅವರ ವಚನಗಳ ಸಮಗ್ರ ಅಧ್ಯಯನವನ್ನು ನಮ್ಮ ವೈದ್ಯರಯ ತಮ್ಮ ವೈದ್ಯಕೀಯ ಚೌಕಟ್ಟಿನಡಿಯಲ್ಲಿ ಕೈಗೊಂಡರೆ ಇನ್ನಷ್ಟು ವಿಚಾರಗಳು ಹೊರಬರಬಹುದು. ಆ ದಿಸೆಯಲ್ಲಿ ನಮ್ಮ ವೈದ್ಯರು ಪ್ರಯತ್ನಿಸುವರೆಂದು ನಂಬೋಣ. ❐

---

* ಮಹಾಮನೆ, ಸಂಪು೧-೧೨, ಸಂಚಿಕೆ-೦೫, ಡಿಸೆಂಬರ್-೧೯೯೨.

ಅಷ್ಟಾವರಣಗಳು

●

ಶ್ರೀಮತಿ ಜಗದಂಬಾ ಮಲ್ಲೇದೇವರು

ಚೆನ್ನಬಸವಣ್ಣನವರು ೧೨ನೆಯ ಶತಮಾನದ ಶರಣ ಸಮೂಹದಲ್ಲಿಯೇ ಅದ್ಭುತ ವ್ಯಕ್ತಿತ್ವವನ್ನು ಹೊಂದಿ ಜಾಜ್ವಲ್ಯಮಾನವಾಗಿ ಬೆಳಗಿದುದಲ್ಲದೆ, ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಪಡೆದಿರುತ್ತಾರೆ. ಚಿಕ್ಕದಣ್ಣಾಯಕ, ಅವಿರಳಜ್ಞಾನಿ, ಷಟ್ಸ್ಥಲ ಚಕ್ರವರ್ತಿ ಎಂದು ಕರೆಯಲ್ಪಟ್ಟು ಶೂನ್ಯಪೀಠದಅಧಿಪತಿ ಪ್ರಭುದೇವರಿಂದ ಮೊದಲುಗೊಂಡು ಎಲ್ಲ ಶರಣತಿಂಥಿಣಿಯಿಂದ ಮೆಚ್ಚಿಗೆ ಪಡೆದ ಅತ್ಯಂತ ಕಿರಿಯ ವಯಸ್ಸಿನ ಹಿರಿಯ ವ್ಯಕ್ತಿ, ಚನ್ನಬಸವಣ್ಣ. ಚನ್ನಬಸವಣ್ಣನವರು ತಮ್ಮ ವಯಸ್ಸಿಗೆ ಮೀರಿದ ಮಹಾಜ್ಞಾನವನ್ನು ಪಡೆದವರೆಂದು ಪ್ರಭುದೇವರಿಂದ ಹೀಗೆ ಪ್ರಶಂಸಿಸಲ್ಪಟ್ಟಿದ್ದಾರೆ.

'ಕಿರಿಯರಾದಡೇನು ? ಹಿರಿಯರಾದಡೇನು ?
ಅರಿವಿಂಗೆ ಹಿರಿದುಕಿರಿದುಂಟೆ ?......
ಗುಹೇಶ್ವರಲಿಂಗದಲ್ಲಿ ನೀನೊಬ್ಬನೇ ಮಹಾಜ್ಞಾನಿಯೆಂಬುದು
ಕಾಣಬಂದಿತ್ತು ಕಾಣಾ ಚನ್ನಬಸವಣ್ಣ'.[೧]
ಇದಕ್ಕಿಂತ ಬೇಕೆ ಚನ್ನಬಸವಣ್ಣನ ವ್ಯಕ್ತಿತ್ವವನ್ನರಿಯಲು ?

ಇಂತಹ ಅವಿರಳಜ್ಞಾನಿಯೂ, ಸ್ವಯಂಭುಜ್ಞಾನಿಯೂ, ಆಚಾರದಲ್ಲಿ ಅನು ಭಾವಿಯೂ, ಪ್ರಸಾದದಲ್ಲಿ ಪರಿಣಾಮಿಯೂ ಆದ ಚನ್ನಬಸವಣ್ಣನವರು ವೀರಶೈವ ಧರ್ಮದ ತತ್ತ್ವಗಳನ್ನು ನಿರ್ಣಯಿಸಿ, ಆಚಾರಗಳನ್ನು ಅರುಹಿ, ಸಿದ್ಧಾಂತಗಳನ್ನು ಪ್ರತಿಷ್ಠಾಪಿಸಿದ ಮಹಾನ್ ವಿಭೂತಿಪುರುಷರು.

'ಷಡ್ವಿಧಸ್ಥಾಪನಾಚಾರ್ಯ' 'ಷಟ್ಸ್ಥಲಬ್ರಹ್ಮಿ', 'ಷಟ್‌ಸ್ಥಲ ಚಕ್ರವರ್ತಿ' ಇತ್ಯಾದಿ ಹೆಸರುಗಳಿಂದ ಕರೆಯಲ್ಪಟ್ಟ ಚನ್ನಬಸವಣ್ಣನವರು ಷಟ್ಸ್ಥಲ ಸೋಪಾನವನ್ನೇರಲು ಸಾಧಕನಿಗೆ ಬೇಕಾದ 'ಸರ್ವಾಚರಸಂಪತ್ತ'ನ್ನು ಅರುಹಿದ್ದಾರೆ ತಮ್ಮ ವಚನಗಳಲ್ಲಿ.

ಎಲ್ಲ ಧರ್ಮಗಳ ಗುರಿ, ಮಾನವನನ್ನು ಮಹದತ್ತ ಕೊಂಡೊಯ್ಯುವುದೇ ಆಗಿದೆ. ಆದರೆ ಮಹದತ್ತ ಹೋಗಲು ಮಾನವನು ಸಾಧನಾನಿರತನಾಗಬೇಕು. ಸಾಧಕನಿಗೆ ಶ್ರದ್ಧೆ, ನಿಷ್ಠೆ, ಭಕ್ತಿ, ಚಿತ್ತಶುದ್ಧಿ, ಏಕಾಗ್ರತೆ ಇವು ಅತ್ಯವಶ್ಯ. ಆಗ ಮಾತ್ರ ಸಾಧಕ ನಿಜಸಾಧಕ ನಾಗಲು ಸಾಧ್ಯ, ವೀರಶೈವಧರ್ಮವು ಸಾಧಕನಿಗೆ ತನ್ನದೇ ಆದ ವಿಶಿಷ್ಟ ಸಿದ್ಧಾಂತವನ್ನು ನಿರೂಪಿಸಿರುವುದರ

ಜೊತೆಗೆ ಆಚಾರಗಳನ್ನು ಹೇಳಿ, ಅದನ್ನು ಅನುಷ್ಠಾನಕ್ಕೆ ತರುವ ಅನುಭಾವಮಾರ್ಗವನ್ನು ಅರುಹಿದೆ. ಸಾಧಕನು ತನ್ನ ಧಾರ್ಮಿಕ ಸಾಧನೆಯಲ್ಲಿ ವೈಚಾರಿಕ ಆಚರಣೆಯ ಮೂಲಕ ಅನುಭಾವಮಾರ್ಗದಲ್ಲಿ ಮುನ್ನಡೆಯಬೇಕೆಂದು ಬಯಸುತ್ತದೆ ವೀರಶೈವಧರ್ಮ. ಇದರ ಪರಿಣಾಮವಾಗಿಯೇ ಶರಣರು 'ಅಷ್ಟಾವರಣಗಳೇ ಅಂಗ ವೆಂದೂ, ಪಂಚಾಚಾರಗಳು ಪ್ರಾಣವೆಂದೂ, ಷಟ್ಸ್ಥಲಗಳೇ ಆತ್ಮವೆಂದೂ ನಿರೂಪಿಸಿ, ಮಾನವರಿಗೆದೇಹ, ಪ್ರಾಣ, ಆತ್ಮಗಳು ಹೇಗೋ ಹಾಗೆ ಈ ಅಷ್ಟಾವರಣ, ಪಂಚಾಚಾರ ಹಾಗೂ ಷಟ್ಸ್ಥಲಗಳು ಎಂದು ಹೇಳಿ, ಈ ಮೂರರ ಆಚರಣೆಯನ್ನು 'ಸರ್ವಾಚಾರ ಸಂಪತ್ತು' ಎಂದು ಕರೆದು, ಅವುಗಳ ಆಚರಣೆಯ ವಿಧಾನವನ್ನು ವೈಚಾರಿಕ ನೆಲೆಗಟ್ಟಿನ ಮೇಲೆ ವಿವೇಚಿಸಿದ್ದಾರೆ.

'ಅಷ್ಟಾವರಣ'ಗಳು ಎಂದರೆ ಎಂಟು ಅವರಣಗಳು ಅಥವಾ ಹೊದಿಕೆಗಳು ಎಂದರ್ಥ. ಇವೇ ಮಾನವನನ್ನು ಭವಸಾಗರದಿಂದ ಉದ್ಧರಿಸುವ ರಕ್ಷಾಕವಚಗಳು. ಮಾನವನು ಅಧ್ಯಾತ್ಮಪಥದಲ್ಲಿ ಸಾಗಲು ಸರ್ವರೀತಿಯ ಸಕ್ರಿಯ ನೆರವನ್ನಿತ್ತು, ಅವನನ್ನು ತೀವ್ರಗತಿಯಲ್ಲಿ ಮುನ್ನಡೆಸುವ ಸಾಧನಗಳು ಈ ಅಷ್ಟಾವರಣಗಳು. ಅವೆಂದರೆ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ, ಇವು 'ಶರೀರ ವೆಂಬುದು ಹೊಲನ ಹಸನಮಾಡಿ ಪರತತ್ತ್ವಬೆಳೆಯನೆ' ಬೆಳೆಯಲು, ಹಾಗೂ ದೇಹವನ್ನು ದೇಗುಲವನ್ನಾಗಿ ಮಾಡಲು ಬೇಕಾದ ಸಾಧನ. ಈ ಅಷ್ಟಾವರಣಗಳನ್ನು, ಚನ್ನಬಸವಣ್ಣ ನವರ ವಚನಗಳನ್ನು ಆಧರಿಸಿ ಇಲ್ಲಿ ವಿವೇಚಿಸಲಾಗಿದೆ.

ಗುರು : ಅಷ್ಟಾವರಣಗಳಲ್ಲಿ ಮೊದಲನೆಯದೇ ಗುರು, ಭಾರತೀಯ ಧರ್ಮಗಳು ಗುರುವಿಗೆ ಮಹತ್ವದ ಸ್ಥಾನ ಕೊಟ್ಟಿವೆ. ಗುರುವನ್ನು ಬ್ರಹ್ಮ, ವಿಷ್ಣು, ಮಹೇಶ್ವರನೆಂದೂ, ಸಾಕ್ಷಾತ್ ಪರಬ್ರಹ್ಮಸ್ವರೂಪನೆಂದೂ ಹೊಗಳಿವೆ. ವೀರಶೈವಧರ್ಮವು ಗುರುವಿಗೆ ಶಿವನಿಗಿಂತ ಹಿರಿಯಸ್ಥಾನವನ್ನು ಕೊಟ್ಟಿದೆ. ಶ್ರೀಗುರುವು ಶಿಷ್ಯನ ಅಜ್ಞಾನವೆಂಬ ತಿಮಿರವನ್ನು ಪರಿಹರಿಸಿ, ಜ್ಞಾನವೆಂಬ ಅಂಜನವನ್ನು ಹಚ್ಚಿ, ಶಿಷ್ಯನ ಜ್ಞಾನನೇತ್ರವನ್ನು ಉನ್ಮೀಲನಗೊಳಿಸಿ, ಸೃಷ್ಟಿಕರ್ತನ ಕುರುಹಾದ ಲಿಂಗವನ್ನು ಸಾಧಕನಿಗೆ ಅನುಗ್ರಹಿಸಿ, ಶಿವಪಥವನ್ನು ತೋರುವನು. ಚನ್ನಬಸವಣ್ಣನವರು ಹೇಳುವಂತೆ–

ವಿಷಸರ್ಪದಷ್ಟನಾದ ಮಾನವನನ್ನು ಗಾರುಡಮಂತ್ರೌಷಧದಿಂದ ಆರೋಗ್ಯಕಾಯ ನನ್ನಾಗಿ ಮಾಡುವ ಗಾರುಡಿಗನಂತೆ, ವೀರಶೈವ ಮಂತ್ರೋಪದೇಶದಿಂದ ಸಾಧಕನಕಾಯಕವನ್ನು ಶುದ್ಧಮಾಡಿ, ಆತನ ಲಿಂಗಕ್ಕೆ ಪ್ರಾಣಪ್ರತಿಷ್ಠೆಯನ್ನು ತುಂಬಿ, ಆತನ ಅಂಗದ ಮೇಲೆ ಲಿಂಗವನ್ನು ಬಿಜಯಂಗೈಸಿ ಸಾಧಕನನ್ನು ಕೃತಕೃತ್ಯನನ್ನಾಗಿ ಮಾಡುತ್ತಾನೆ ಶ್ರೀಗುರು. ಇಂತಹ ಶ್ರೀಗುರುವಿನ ಕರುಣೆಯಿಂದ 'ಮಾಯೆ, ಮರವೆ, ಪ್ರಪಂಚ ಹಾಗೂ ಕರ್ಮಪಾಶ' ಗಳು ಬಿಡುಗಡೆಗೊಳ್ಳುತ್ತವೆ.

ಶ್ರೀಗುರುವಿನ ಕೃಪಾಕಟಾಕ್ಷಕ್ಕೆ ಒಳಗಾಗಿದ್ದೇ ಆದರೆ, ಅಂತಹ ವ್ಯಕ್ತಿಗೆ ಜಾತಿಸೂತಕ, ಜನನಸೂತಕ, ಪ್ರೇತಸೂತಕ, ರಜಸ್ಸೂತಕ, ಉಚ್ಚಿಷ್ಟಸೂತಕಗಳು ಇಲ್ಲ. ಗುರುಹಸ್ತದಿಂದ ಪುನರ್ಜಾತರಾದ ಭಕ್ತರಲ್ಲಿ ಜಾತಿಯನ್ನರಸಕೂಡದು. ಇದಕ್ಕೆ ಆಗಮ ವಚನವೇ ಸಾಕ್ಷಿ ಎನ್ನುತ್ತಾರೆ ಚನ್ನಬಸವಣ್ಣ. ಯಾವ ಗುರುಕೃಪೆಯಿಂದ 'ಲಿಂಗ, ಜಂಗಮ ಪ್ರಸಾದಗಳು ಲಭಿಸುವುವೋ, ಹಾಗೂ ಸರ್ವಸಿದ್ಧಿಯುಂಟಾಗುವುದೋ ಅಂತಹ ಗುರುವಿನ ಬಗೆಗೆ

ಭಕ್ತನ ಉದಾಸೀನತೆಯನ್ನು ನೋಡಲಾರೆ ಎಂದು ಹೇಳುವಲ್ಲಿ, ಗುರುವಿನಲ್ಲಿ ಚನ್ನಬಸವಣ್ಣನವರಿಗೆ ಅಪಾರ ಗೌರವನ್ನು ಅರಿಯಬಹುದಾಗಿದೆ.

ಗುರುಶಿಷ್ಯರ ಸಂಬಂಧ ಅತ್ಯಂತ ಮಹತ್ವವಾದುದು. ಏಕೆಂದರೆ ಗುರು ಯೋಗ್ಯ ಶಿಷ್ಯನಿಗೆ ದೀಕ್ಷೆಯನ್ನಿತ್ತು ಆತನನ್ನು ಸರ್ವಾಚಾರಸಂಪನ್ನನನ್ನಾಗಿ ಮಾಡಬೇಕಲ್ಲದೆ ಅಳಿಮನದವನಿಗೆ ದೀಕ್ಷೆಯನ್ನೀಯಕೂಡದು. ಆದುದರಿಂದ ಗುರುವಾದವನ ಮೊದಲ ಕರ್ತವ್ಯವೆಂದರೆ ಎಂತಹ ಶಿಷ್ಯನಿಗೆ ದೀಕ್ಷೆಕೊಟ್ಟು ಸಂಸ್ಕರಿಸಬೇಕೆಂಬುದು. ಆಚಾರ ಭ್ರಷ್ಟರಿಗೆ ಹಸ್ತಾನುಗ್ರಹ ಮಾಡಿದ್ದೆ ಆದರೆ ಅದು, 'ಹಸನಮಾಡಿ ಹರಗಿದ ಹೊಲದಲ್ಲಿ ಕಸವ ಬಿತ್ತುವ ಮರುಳರಂತೆ'. ಅದುದರಿಂದ ಶ್ರೀಗುರುವು 'ನಡೆನುಡಿಶುದ್ಧವಾದವರಿಗಲ್ಲದೆ ಅನುಗ್ರಹಿಸ ನೋಡಾ. ಪರಮಾರ್ಥಕ್ಕಲ್ಲದ ಜಡನರರನೊಲ್ಲ; ದೀಕ್ಷೆಯ ಕೊಡನು' ಎನ್ನುತ್ತಾರೆ ಚನ್ನಬಸವಣ್ಣ. ಅಲ್ಲದೆ

> **ಮದ್ಯಪಾನಿಗೆ ಲಿಂಗಸಾಹಿತ್ಯದ ಮಾಡಿದಾತಂಗೆ ನರಕ ತಪ್ಪದು.**
> **ಮಾಂಸಾಹಾರಿಗೆ ಲಿಂಗಸಾಹಿತ್ಯವ ಮಾಡಿದಾತನ ವಂಶಕ್ಷಯವಹುದು.**
> **ಜೂಜುಗಾರನಿಗೆ ಲಿಂಗಸಾಹಿತ್ಯವ ಮಾಡಿದಾತನ ರೌರವ ನರಕಕ್ಕೆ ತೋಹನು.**
> **ಸೂಳೆಗೆ ಲಿಂಗಸಾಹಿತ್ಯವ ಮಾಡಿದಾತ ಏಳೇಳು ಜನ್ಮದಲ್ಲಿ ಶ್ವಾನನ ಬಸಿರಲ್ಲಿ ಬಪ್ಪನು.**
> **ಅಂಗಹೀನಂಗೆ ಲಿಂಗಸಾಹಿತ್ಯವ ಮಾಡಿದಾತ ಲಿಂಗದ್ರೋಹಿ.**
> **ಆತನ ಮುಖವ ನೋಡಲಾಗದು.**
> **ಸಾಕ್ಷಿ : ಮದ್ಯಪಾನೀ ಮಾಂಸಭಕ್ಷೀ ಶಿವದೀಕ್ಷಾ ವಿರರ್ಜಿತಾಃ**
> **ದ್ಯೂತೀ ವೇಶ್ಯಾಂಗಹೀನಶ್ಚ ತದ್ಗುರೋರ್ದರ್ಶನಂ ತ್ಯಜೇತ್**
> **ಇದು ಕಾರಣ, ಕೂಡಲಚನ್ನಸಂಗಯ್ಯನಲ್ಲಿ,**
> **ಶಿಷ್ಯಂಗೆ, ವಿಚಾರಿಸದೆ ಲಿಂಗವ ಕೊಟ್ಟ ಗುರುವಿಂಗೆ ನರಕ ತಪ್ಪದು** [೨]

ಈ ವಚನದಲ್ಲಿ ಚನ್ನಬಸವಣ್ಣನವರು ಲಿಂಗದೀಕ್ಷೆಗೆ ಅನರ್ಹರಾದವರ ಪಟ್ಟಿಯನ್ನೇ ಮಾಡಿದ್ದಾರೆ.

ಅಂಗಕ್ಕೆ ಲಿಂಗಸಂಬಂಧವನ್ನುಂಟುಮಾಡಿ ಶಿಷ್ಯನ ಮಲತ್ರಯಗಳನ್ನು ಪರಿಹರಿಸುವವನೇ ಗುರು. ಶಿಷ್ಯನ ಆಣವ, ಮಾಯಾ ಹಾಗೂ ಕಾರ್ಮಿಕ ಮಲತ್ರಯಗಳನ್ನು ಪರಿಹರಿಸಿ, ಕ್ರಿಯಾದೀಕ್ಷೆ, ಮಂತ್ರದೀಕ್ಷೆ, ವೇಧಾದೀಕ್ಷೆಗಳನ್ನು ಶಿಷ್ಯನ ಕಾಯ, ಪ್ರಾಣ, ಮನಗಳಿಗೆ ಅನುಗ್ರಹಿಸಿ ಆತನನ್ನು ಆಚಾರವಂತನನ್ನಾಗಿ ಮಾಡುತ್ತಾನೆ ಶ್ರೀಗುರು. ಶಿಷ್ಯನಿಗೆ ತ್ರಿವಿಧ ದೀಕ್ಷೆಗಳನ್ನಿತ್ತು, ಏಳು ಬಗೆಯ ಉಪದೇಶಗಳನ್ನು ಮಾಡಿ ಲಿಂಗವನ್ನು ಸಂಗತಗೊಳಿಸುತ್ತಾನೆ ಗುರು. ಏಕೆಂದರೆ 'ಗುರುವೆಂಬುದು ತಾನು ಪರುಷವು. ಆ ಪರುಷ ಮುಟ್ಟಿದೊಡನೆ ಉಳಿದ ಲೋಹಂಗಳು ಸುವರ್ಣವಾದುವಲ್ಲದೆ ಆ ಪುರುಷವೆ ಆಗಲರಿಯವು, ಆದುದರಿಂದ 'ಗುರುವೆಂಬುದು ತಾನು ಸ್ವಯಂ ಜ್ಯೋತಿಃಪ್ರಕಾಶವು,

ಇಂತಹ ಜ್ಯೋತಿಃಪ್ರಕಾಶವಾದ ಗುರುವಿನಲ್ಲಿಯೂ ಮೂರು ಹಂತಗಳನ್ನು ಕಂಡಿದ್ದಾರೆ ಶರಣರು. ಅವೆಂದರೆ ದೀಕ್ಷಾಗುರು, ಶಿಕ್ಷಾಗುರು, ಮೋಕ್ಷಗುರು. ಹೀಗೆ ತ್ರಿಮುಖನಾದ ಗುರು ಸಾಧಕನ ಭಾವಪಾಶವನ್ನು ಹರಿದು ಶಿವಸ್ವರೂಪಿಯನ್ನಾಗಿ ಮಾಡುತ್ತಾನೆ. ಆದುದರಿಂದ ಆ ಗುರುವಿನ ಹಿರಿಮೆ ಅಪಾರವಾದುದು.

ಗುರುಶಿಷ್ಯರಿಬ್ಬರಿಗೂ ಉಭಯಭಾವವಳಿದನಂತರ, ಚನ್ನಬಸವಣ್ಣನವರು ಹೇಳುವಂತೆ–

ಗುರುಶಿಷ್ಯಸಂಬಂಧವನೇನೆಂದುಪಮಿಸುವೆನಯ್ಯಾ ?
ಜ್ಯೋತಿಯಲೊದಗಿದ ಜ್ಯೋತಿಯಂತಿರಬೇಕು.
ದರ್ಪಣದೊಳಡಗಿದ ಪ್ರತಿಬಿಂಬದಂತಿರಬೇಕು.
ಸ್ಫಟಿಕದ ಘಟದೊಳಗಿರಿಸಿದ ರತ್ನದಂತಿರಬೇಕು.
ರೂಪಿನ ನೆಳಲಿನ ಅಂತರಂಗದಂತಿರಬೇಕು.
ಇದು ಕಾರಣ ಕೂಡಲಚನ್ನಸಂಗಯ್ಯಾ,
ದರ್ಪಣವ ದರ್ಪಣಕ್ಕೆ ತೋಚಿದಂತಿರಬೇಕು. [೩]

ಹೀಗೆ ಗುರುಶಿಷ್ಯರೆಂಬ ಉಭಯ ಭಾವನೆ ಅಳಿದು ಸಾಮರಸ್ಯದ ನಿಲವನ್ನು ಹೊಂದುತ್ತಾರೆ. ಆಗ ಜ್ಯೋತಿಯಿಂದ ಬೆಳಗಲ್ಪಟ್ಟ ಜ್ಯೋತಿಯಂತೆ, ದರ್ಪಣದಲ್ಲಿ ಅಡಗಿದ ಪ್ರತಿಬಿಂಬದಂತೆ. ಸ್ಫಟಿಕದ ಘಟದಲ್ಲಿರಿಸಿದ ರತ್ನದಂತೆ, ರೂಪಿನ ನೆರಲಲ್ಲಿ ಸೇರಿದ ಅಂತರಂಗದಂತೆ ಒಂದಾಗುತ್ತಾರೆ. ಹೀಗೆ ಸಾಧಕನ ಸಾಧನಾಮಾರ್ಗದಲ್ಲಿ ಗುರುವು ಭವರೋಗವೈದ್ಯ ನೆನಿಸಿ ಆತನನ್ನು 'ಸರ್ವಾಚಾರ ಸಂಪತ್ತಿನ' ಆಚರಣೆಗೆ ಆಣಿಗೊಳಿಸುತ್ತಾನೆ. ಹೀಗೆ ವೀರಶೈವ ಧರ್ಮದ ತಾತ್ತ್ವಿಕ ಆಚರಣೆಗೆ ಆಣಿಗೊಳಿಸುತ್ತಾನೆ. ಹೀಗೆ ವೀರಶೈವ ಧರ್ಮದ ತಾತ್ತ್ವಿಕ ಆಚರಣೆಗೆ ಅಣಿಗೊಳಿಸುತ್ತಾನೆ. ಹೀಗೆ ವೀರಶೈವ ಧರ್ಮದ ತಾತ್ತ್ವಿಕ ಆಚರಣೆಗೆ ತಳಹದಿಯಾಗಿದ್ದಾನೆ ಗುರು.

ಲಿಂಗ : ವೀರಶೈವಧರ್ಮದ ತಾತ್ವಿಕ ವಿವೇಚನೆಗೆ ಕೇಂದ್ರಬಿಂದುವಿನಂತಿದೆ ಲಿಂಗ. ಶ್ರೀಗುರುವಿನಿಂದ ಶಿಷ್ಯನಿಗೆ ಕರುಣಿಸಲ್ಪಟ್ಟ ಈ ಲಿಂಗವು. ಬ್ರಹ್ಮಾಂಡದ ಸಮಷ್ಟಿರೂಪದಲ್ಲಿಯೂ, ಅಷ್ಟೇ ಏಕೆ, ಆ ನಿತ್ಯವಾದ ಪರಬ್ರಹ್ಮವೇ ಲಿಂಗವೆಂದೂ ಪರಿಭಾವಿಸಲ್ಪಟ್ಟಿದೆ. ಇದು ಸೃಷ್ಟಿ, ಸ್ಥಿತಿ, ಲಯಗಳನ್ನು ಆರುಹುತ್ತದೆ. ಮಗ್ಗೆಯ ಮಾಯಿದೇವರು ತಮ್ಮ ಶಿವಾನುಭವಸೂತ್ರದಲ್ಲಿ ಲಿಂಗದ ಸ್ವರೂಪವನ್ನು ಹೀಗೆ ಹೇಳಿದ್ದಾರೆ;

ಲೀಯತೇ ಗಮ್ಯತೇ ಯತ್ರ ಯೇನ ಸರ್ವಂ ಚರಾಚರಂ ।
ತದೇತಲ್ಲಿಂಗಮಿತ್ಯುಕ್ತಂ ಲಿಂಗತತ್ತ್ವಪರಾಯಣೈಃ ॥

ಅಂದರೆ "ಈ ಚರಾಚರಾತ್ಮಕವಾದ ಜಗತ್ತು ಯಾವ ವಸ್ತುವಿನಲ್ಲಿ ಲೀನವಾಗುತ್ತದೆಯೋ, ಮತ್ತು ಎಲ್ಲಿಂದ ಉತ್ಪತ್ತಿಯನ್ನು ಪಡೆಯುತ್ತದೆಯೋ, ಆ ವಸ್ತುವೇ ಲಿಂಗವೆಂದು ಲಿಂಗ ತತ್ತ್ವವನ್ನುಬಲ್ಲವರು ಹೇಳುವರು." 'ಲಿಂಗವು ಪರಬ್ರಹ್ಮಸೂಚಕ,' 'ಅರಿವಿನ ಕುರುಹು', 'ಜ್ಞಾನದ ಬೆಳಕು', 'ಕರಸ್ಥಲದ ಬ್ರಹ್ಮ' ಎನಿಸಿದೆ. ಇಂತಹ ಲಿಂಗವು ಚರಾಚರ ಜಗತ್ತನ್ನೆಲ್ಲ ತನ್ನಲ್ಲಿ ಅಡಗಿಸಿಕೊಂಡಿರುವುದಾಗಿಯೂ, ಲಿಂಗಕ್ಕೆ ಹೊರತಾದುದು ಮತ್ತಾವುದೂ ಇಲ್ಲವೆಂದೂ ಹೇಳಲ್ಪಟ್ಟಿದೆ. ಇಂತಹ 'ಲಿಂಗ' ದ ಸ್ವರೂಪವನ್ನು, ಅದರ ಹಿರಿಮೆಗರಿಮೆಗಳನ್ನು, ಅಂಗಲಿಂಗಗಳ ಸಂಬಂಧವನ್ನು ಕುರಿತು ಚನ್ನಬಸವಣ್ಣನವರ ವಚನಗಳನ್ನು ಆಧರಿಸಿ ಮುಂದೆ ನಿರೂಪಿಸಲಾಗಿದೆ. ಚೆನ್ನಬಸವಣ್ಣನವರು ಹೇಳುವಂತೆ–

ಲಿಕಾರವೆ ಶೂನ್ಯ, ಬಿಂದುವೆ ಲೀಲೆ, ಗಕಾರವೇ ಚಿತ್ತು.
ಈ ತ್ರಿವಿಧದೊಳಗಿದೆ ಲಿಂಗವೆಮುಬ ಸಕೀಲ.
ಇದರ ಸಂಚವನಾವಾತ ಬಲ್ಲ ಆತನೆ ಲಿಂಗಸಂಗಿ.
ಇದು ಕಾರಣ, ಲಿಂಗಾನುಭಾವಿಗಳ ಶ್ರೀಚರಣಕ್ಕೆ
ನಮೋ ನಮೋ ಎಂಬೆ ಕೂಡಲಚನ್ನ ಸಂಗಮದೇವಾ [೪]

'ಲಿಂಗ'ವು ಶೂನ್ಯತತ್ತ್ವದಲ್ಲಿ ನಿಲ್ಲುತ್ತದೆ. ಈ ಸಚರಾಚರ ಜಗತ್ತು ಶಿವನ ಲೀಲೆಯಿಂದ ನಿರ್ಮಾಣಗೊಳ್ಳುತ್ತದೆ. ಸತ್ ಚಿತ್ ಆನಂದಸ್ವರೂಪನಾದ ಪರಬ್ರಹ್ಮವೇ ಲಿಂಗವೆಂದು ಹೇಳಿಸಿಕೊಳ್ಳುವುದು. ಆ ಪರತರ ಶಿವಲಿಂಗವು ಸದ್ಭಕ್ತರ ಸದಿಚ್ಛೆಗೆ ಒಳಗಾಗಿ ಲಿಂಗಾಕಾರ ವಾಗಿ ನೆಲೆಗೊಂಡಿದೆ ಎನ್ನುತ್ತಾರೆ ಚನ್ನಬಸವಣ್ಣ. ಅವರು ಹೇಳುವಂತೆ –

ಕಿರಿದಾದ ಬೀಜದಲ್ಲಿ ಹಿರಿಯ ತರುವಡಗಿದ ಪರಿಯಂತೆ,
ಕರಗತವಾದ ಕನ್ನಡಿಯಲ್ಲಿ ಕರಿಗಿರಿಗಳು ತೋರುವ ಪರಿಯಂತೆ, '
ಜಗದ್ವ್ಯಾಪಕವಾದ ಪರವಸ್ತುವು ಖಂಡಿತಾಕಾರವಾದ ಶರೀರದಲ್ಲಿ
ಅತಿಸೂಕ್ಷ್ಮಪಕವಾದ ಪರವಸ್ತುವು ಖಂಡಿತಾಕಾರವಾದ ಶರೀರದಲ್ಲಿ
ಅತಿಸೂಕ್ಷ್ಮಪ್ರಮಾಣದಿಂದಿರ್ಪಂತೆ,
ಪರತರಶಿವಲಿಂಗವು ಸದ್ಭಕ್ತರನದ್ಧರಿಪ ಸದಿಚ್ಛೆಯಿಂದ
ಲಿಂಗಾಕಾರವಾಗಿ ನೆಲೆಗೊಂಡಿರ್ಪುದು.
ಸಾಕ್ಷಿ : 'ಅಣೋರಣೀಯಾನ್ ಮಹತೋ ಮಹೀಯಾನ್' ಎಂದುದಾಗಿ.
ಪರಬ್ರಹ್ಮರೂಪವಾದ ಲಿಂಗವು ಮಹದ್ರೂಪದಿಂದ ಅಖಂಡವಾಗಿಯೂ
ಅಣುರೂಪದಿಂದ ಖಂಡಿತವಾಗಿಯೂ ತೋಚುವುದು.
ಕೂಡಲಚನ್ನಸಂಗಮದೇವಾ, ಇದು ನಿಮ್ಮ ದಿವ್ಯಲೀಲೆಯಯ್ಯಾ ! [೨೮]

ಆ ಪರಮಾತ್ಮನ ದಿವ್ಯಲೀಲೆಯಿಂದ ಸಣ್ಣದಾದ ಬೀಜದಲ್ಲಿಯೇ ಅದರ ಬೃಹದ್‌ಗಿಡ ವಡಗಿರುವಂತೆ, ಕೈಯಲ್ಲಿರುವ ಕನ್ನಡಿಯಲ್ಲಿ ಗಜಪರ್ವತಗಳು ಕಂಡುಬರುವಂತೆ ಜಗದ್ವ್ಯಾಪಕನಾದ ಆ ಪರವಸ್ತು ಅತಿಸೂಕ್ಷ್ಮರೂಪದಲ್ಲಿ ಮಾನವನ ಶರೀರದಲ್ಲಿಡಗಿದ್ದಾನೆ. ಸದ್ಭಕ್ತರನುದ್ಧರಿಸುವ ಸದಿಚ್ಛೆಯಿಂದ ಆ ಪರತರ ಶಿವಲಿಂಗವು 'ಲಿಂಗಾಕಾರ'ದಲ್ಲಿ ಕಂಡುಬರುತ್ತಾನೆ. ಆ ಪರಾತ್ಪರ ಶಿವನು ಅಣುವಿನಲ್ಲಿ ಅಣುವಾಗಿಯೂ, ಮಹತ್ತಿನಲ್ಲಿ ಮಹತ್ತಾಗಿಯೂ ತೋರ್ಪಡುತ್ತಿರುವುದು ಆತನ ದಿವ್ಯಲೀಲೆಯೆ, ಎಂದು ಆಶ್ಚರ್ಯಗೊಂಡಿದ್ದಾರೆ ಚನ್ನಬಸವಣ್ಣ.

ಶ್ರೀಗುರುವು ವೀರಶೈವಧರ್ಮದ ರೀತಿಯಲ್ಲಿ ನಿರಾಕಾರನಾದ ಪರಬ್ರಹ್ಮನನ್ನರಿಯಲು ಸಾಕಾರವಾದ ಶಿಲಾಮಯ ಲಿಂಗದಲ್ಲಿ ಶಿವಕಲೆಯನ್ನು ಪ್ರತಿಷ್ಠಿಸಿ, 'ಇಷ್ಟಲಿಂಗ' ವಾಗಿ ಮಾಡಿ, ಹಸ್ತಮಸ್ತಕ ಸಂಯೋಗದಿಂದ ತನ್ನ ಶಿಷ್ಯನ ಕರಕಮಲಕ್ಕೆ ಕರುಣಿಸುತ್ತಾನೆ. ಹೀಗೆ ಬಂದ ಸಾಕಾರರೂಪನಾದ ಶಿವಲಿಂಗವು, ತಿಳಿತುಪ್ಪವೇ ಗಟ್ಟಿತುಪ್ಪವಾದಂತೆ, ಆ ನಿರಾಕಾರಪರಬ್ರೋಮ್ಮವೇ ಸಾಕಾರಗೊಂಡಿದ್ದಾನೆ. ಅದುದರಿಂದ ಅದನ್ನು ಸದ್ಭಾವ ದಿಂದ ಪೂಜಿಸು ಎಂದು ತನ್ನ ಶಿಷ್ಯನಿಗೆ ಆಣತಿಯನ್ನೀಯುವವನು.

ಸಮ್ಯಗ್‌ಜ್ಞಾನಾತ್ಮಕವಾದ ಲಿಂಗಾರ್ಚನೆ, ಲಿಂಗನಿರೀಕ್ಷಣೆ, ಲಿಂಗಧ್ಯಾನಗಳಿಲ್ಲದೆ ಮುಕ್ತಿ ದೊರಕದು. ಆದುದರಿಂದ ಅಂಗಕ್ಕೆ ಲಿಂಗಸಂಗವಿಲ್ಲದೆ ನಿಸ್ಸಂಗತ್ವ ಲಭಿಸದು. ಚನ್ನಬಸವಣ್ಣನವರು ಹೇಳುವಂತೆ, ಸ್ಥೂಲ ಸೂಕ್ಷ್ಮಕಾರಣ ತನುವಿನ ಮೇಲೆ ಇಷ್ಟ ಪ್ರಾಣ ಭಾವಲಿಂಗಗಳನ್ನು ಧರಿಸಬೇಕು. ಅಂಗದ ಮೇಲೆ ಲಿಂಗಧಾರಣೆ ಅತ್ಯವಶ್ಯಕ, ಹೀಗೆ ಧರಿಸಿದ ನಂತರ ಅದನ್ನು ಬದಲಿಸಕೂಡದು. ಹಾಗೆ ಬದಲಿಸಿದ್ದೇ ಆದರೆ, ಆಗುವ ಪರಿಣಾಮವನ್ನು ಚನ್ನಬಸವಣ್ಣನವರು ಸಾದೃಶ್ಯಗಳ ಮೂಲಕ ಹೀಗೆ ನಿರೂಪಿಸಿದ್ದಾರೆ.

ಒಮ್ಮೆ ನೆಲದಲ್ಲಿ ಬಿತ್ತಿದ ಬಿತ್ತುವ ಕಿತ್ತಿ ಕಿತ್ತಿ ಮತ್ತೆ ಬಿತ್ತುತ್ತ ಹೋದಂತೆ,
ಆಬಿತ್ತು ಮಳಿತು ಕಳೆಯೇರಿ ಬೆಳೆದು

ಬೆಳಸನೀವ ಪರಿಯಿನ್ನೆಂತೋ, ಮರುಳು ಮಾನವಾ !
ಗುರುವಿತ್ತ ಲಿಂಗವ ತೊರೆತೊರೆದು ಮರಳ ಮರಳಿ ಧರಿಸಿದಡೆ,
ಆ ಇಷ್ಟಲಿಂಗವು ಅನಿಷ್ಟವ ಕಳೆದು ಇಷ್ಟಾರ್ಥವನೀವ ಪರಿಯಿನ್ನೆಂತೋ !
ಇದು ಕಾರಣ, ಕೂಡಲಚನ್ನಸಂಗಯ್ಯನಲ್ಲಿ ಮುಕ್ತಿಯನರಸುವಡೆ,
ಅಂಗದಲ್ಲಿ ಹಿರಹಿಂಗದೆ ಲಿಂಗವ ಧರಿಸಬೇಕು. [೬]

ಒಮ್ಮೆ ಭೂಮಿಯಲ್ಲಿ ಬಿತ್ತಿದ ಬೀಜವನ್ನು ಮತ್ತೆ ಮತ್ತೆ ಕಿತ್ತು ನೆಡುತ್ತಿದ್ದರೆ ಅದು ಮೊಳೆಯುವುದೆಂತು? ಬೆಳೆಯುವುದೆಂತು? ಫಲ ಕೊಡುವುದೆಂತು? ಅದು ಫಲ ಕೊಡ ಬೇಕಾದರೆ ಅದನ್ನು ಸ್ಥಿರವಾಗಿ ಇರಲು ಬಿಡಬೇಕು. ಹಾಗೆಯೇ ಗುರು ಕೊಟ್ಟ ಲಿಂಗವನ್ನು ಬಿಟ್ಟು ಮತ್ತೊಂದು ಲಿಂಗ, ಮಗದೊಂದು ಲಿಂಗವೆಂದು ಬದಲಿಸುತ್ತಾ ಹೋದರೆ ಅಂಗನಿಗೆ ನಿಸ್ಸಂಗತ್ವ ದೊರೆಯಲು ಸಾಧ್ಯವೆ? ಅಂಗ ಲಿಂಗದಲ್ಲಿ ಲೀನವಾಗಬೇಕಾದರೆ ಗುರು ಒಮ್ಮೆ ಕರುಣಿಸಿದ ಲಿಂಗವನ್ನು, ಯಾವುದೇ ಕಾರಣಕ್ಕೂ ಅಗಲಕೂಡದು. ಹೀಗೆ ಅಂಗದ ಮೇಲೆ ಲಿಂಗ ನೆಲೆಗೊಂಡ ಮೇಲೆ 'ಅನ್ಯಮಣಿಮಾಣಿ, ನಂದಿವುಂಗುರ, ನಾಗಮಂಡಲ ಮೊದಲಾದ (ಭವಿಶೈವದ) ಮುದ್ರೆಗಳ ಧರಿಸಲಾಗದು. ಎನ್ನುತ್ತಾರೆ ಚನ್ನಬಸವಣ್ಣ.

ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ವೆಂಬ ಆಚಾರಲಿಂಗಗಳನ್ನೂ, ಅಲ್ಲದೆ ಅವುಗಳಿಗೆ ಒಳಗಾದ ಅಂಗನ ನಡೆನುಡಿಗಳನ್ನೂ ಸವಿಸ್ತಾರವಾಗಿ ನಿರೂಪಿಸಿದ್ದಾರೆ ಚನ್ನಬಸವಣ್ಣ. ಹೀಗೆ ಒಮ್ಮೆ ಲಿಂಗವನ್ನು ಅಂಗದ ಮೇಲೆ ಧರಿಸಿದ ನಂತರ, ತನ್ನ ಅಂಗದ ಮೇಲಿನ ಲಿಂಗಕ್ಕಲ್ಲದೆ ಸ್ಥಾವರಲಿಂಗಕ್ಕೆ ಶರಣೆನ್ನಲಾಗದು. ತನ್ನಲ್ಲಿರುವ ಲಿಂಗವನ್ನು ಕಿರಿದುಮಾಡಿ ದೂರವಿರ್ದ ಲಿಂಗವನ್ನು ಹಿರಿದುಮಾಡಿ ಪೂಜಿಸಲೆಳಸುವವನು ವ್ರತಗೇಡಿ.

ಪತಿವ್ರತೆಯಾದವರಿಗೆ ಅನ್ಯಪುರುಷಸಂಗ ಹೇಗೆ ನಿಷಿದ್ದವೋ ಹಾಗೆಯೇ 'ಲಿಂಗಸಂಗಿಗೆ ಅನ್ಯಲಿಂಗಸಂಗ ಸಲ್ಲದು' ಹಾಗೆ ಮಾಡುವವರ ಪರಿ 'ಕಂಡಕಂಡವರ ಹಿಂದ ಹರಿವ ಚಾಂಡಾಲಗಿತ್ತಿಯಂತೆ, ಒಬ್ಬರ ಕೈವಿಡಿದು ಒಬ್ಬರಿಗೆ ಮಾತುಕೊಟ್ಟು, ಮತ್ತೊಬ್ಬರಿಗೆ ಸನ್ನೆಯ ಮಾಡುವ ಬೋಸರಗಿತ್ತಿಯಂತೆ' ಎಂದು ಕಟುವಾಗಿ ಟೀಕಿಸುತ್ತಾ 'ಪ್ರಾಣಲಿಂಗವಿದ್ದಂತೆ ಸ್ಥಾವರಲಿಂಗಕ್ಕೆ ಹರಸಿ ಪೊಡುಮಡುವ ಕೋಟಲೆ ಬೇಡ' ಎನ್ನುತ್ತಾರೆ ಚನ್ನಬಸವಣ್ಣ. 'ಕಟ್ಟಿದ ಲಿಂಗವ ಬಿಟ್ಟು ಬೆಟ್ಟದ ಲಿಂಗಕ್ಕೆ ಹೊಗುವವನ ಎಡಪಾದರಕ್ಷೆಯ ತಕ್ಕೊಂಡು, ಲಟಲಟನೆ ಹೊಡೆಯೆಂದು ನಮ್ಮ ಅಂಬಿಗರ ಚೌಡಯ್ಯ' ಎಂಬ ಮಾತನ್ನು ಇಲ್ಲಿ ಸ್ಮರಿಸಬಹುದು. ಹೀಗೆ ಶ್ರೀಗುರು ಕರುಣಿಸಿದ ಲಿಂಗವನ್ನು ಧರಿಸುವ ಸ್ಥಳ, ಹಾಗೂ ಆ ಸ್ಥಳಗಲ್ಲಿ ಧರಿಸಲು ಬೇಕಾದ ಅರ್ಹತೆಯನ್ನು ವಿವರವಾಗಿ ಹೇಳಿದ್ದಾರೆ. ಅಲ್ಲದೆ ಲಿಂಗವನ್ನು ನಾಭಿಯಿಂದ ಕೆಳಕ್ಕೆ ಧರಿಸಲಾಗದೆಂದೂ ಹಾಗೂ ಧರಿಸಲು ಯೋಗ್ಯವಾದ ಸ್ಥಳ, 'ಗಳ' ವೆಂದೂ ಹೇಳುತ್ತಾರೆ.

ಒಮ್ಮೆ ಶ್ರೀಗುರುವಿನಿಂದ ಕರುಣಿಸಲ್ಪಟ್ಟ ಲಿಂಗವನ್ನು ಯಾವುದೇ ಕಾರಣಕ್ಕೂ ಅಗಲದಿರಬೇಕು. ಹೀಗೆ ಗುರು ಕೊಟ್ಟ ಲಿಂಗವನ್ನು ಕರಸ್ಥಲದಲ್ಲಿ ಧರಿಸಿದ ಬಳಿಕ ಅನ್ಯದೈವಕ್ಕೆ ತಲೆಬಾಗುವುದಾಗಲಿ, ಭವಿಸಂಗವ ಮಾಡುವುದಾಗಲಿ, ಅನ್ಯಮಂತ್ರ ಜಪಾದಿ ಗಳನ್ನು ಆಚರಿಸುವುದಾಗಲಿ ಕೂಡದು. ಅದಕ್ಕೆ ಪ್ರತಿಯಾಗಿ ಕರಸ್ಥಲದಲ್ಲಿ ಲಿಂಗವುಳ್ಳವನು

ಉದಯಾಸ್ತಮಾವನ್ನದೆ ಶಿವಪೂಜೆ, ಶಿವಮಂತ್ರ, ಶಿವಾರ್ಪಣ, ಶಿವಶಾಸ್ತ್ರ, ಶಿವಯೋಗದಲ್ಲಿ ತಲ್ಲೀನನಾಗಿರಬೇಕು. ಇಂತಹ ವ್ಯಕ್ತಿಗೆ ಪಂಚಸೂತಕಗಳಿಲ್ಲ. ಏಕೆಂದರೆ ಲಿಂಗ ಮುಟ್ಟಿದ ಕೂಡಲೆ ಆತನ ತನು ಮನ ಭಾವಗಳು ಪ್ರಸಾದಮಯವಾದುವು ಕೂಡಲ ಚನ್ನಸಂಗಯ್ಯನ ದಯದಿಂದ, ಎನ್ನುತ್ತಾರೆ. ಚನ್ನಬಸವಣ್ಣ.

ಚನ್ನಬಸವಣ್ಣನವರು ತಮ್ಮೊಂದು ವಚನದಲ್ಲಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗಗಳೆಂಬ ಆರು ಲಿಂಗಗಳಿಗೆ ಉಂಟಾಗುವ ೧೮ ಉಪಸ್ಥಲಗಳನ್ನು ವಿವರವಾಗಿ ಚರ್ಚಿಸಿದ್ದಾರೆ. ಅಷ್ಟೇ ಅಲ್ಲದೆ ಕ್ರಿಯಾ ಹಾಗೂ ಆಗಮ ಮಾರ್ಗದಿಂದ ಲಿಂಗವನ್ನರ್ಚಿಸುವ ಹಾಗೂ ಲಿಂಗಾರ್ಪಿತವನ್ನು ಮಾಡುವ ಪರಿಯನ್ನು ಸವಿಸ್ತಾರವಾಗಿ ನಿರೂಪಿಸಿದ್ದಾರೆ. ಹೀಗೆ ಲಿಂಗನವನ್ನು ಆರಾಧಿಸುತ್ತ ಸಾಧಕನು ಗುರುಕೃಪೆಯಿಂದ 'ಪೂರ್ವಜನ್ಮವಳಿದು ಪುನರ್ಜಾತ' ನಾಗುತ್ತಾನೆ. 'ಮರಹು ಕವಿದಿತ್ತೆಂದು ಶ್ರೀಗುರು ಕುರುಹುದೋರುತ್ತಾನೆ.' ಸಾಧಕನಿಗೆ. ಹೀಗಿರುವಾಗ ಲಿಂಗವು ಭಿನ್ನವಾಯಿತ್ತೆಂದಾಗಲಿ, ಅಂಗದ ಮೇಲಣ ಲಿಂಗ ಹಿಂಗಿತ್ತೆಂದಾಗಲಿ ಆತ್ಮಘಾತವನ್ನು ಮಾಡಿಕೊಳ್ಳಕೂಡದು. 'ಲಿಂಗವನ್ನರಸಿ ನೋಡಿ ಕಂಡಡೆ ಎತ್ತಿ ಧರಿಸಿಕೊಂಬುದು. ಕಾರಣದಿರ್ದಡೆ ಸರ್ವ ಸುಖವ ಬಿಟ್ಟು ಲಿಂಗ ಬಾಹನ್ನಕ್ಕ ಧಾನ್ಯರೂಢನಾಗಿರ್ಪುದು' ಎಂದಿದ್ದಾರೆ.

ಚನ್ನಬಸವಣ್ಣನವರು ಅಂಗ ಲಿಂಗ ಸಂಬಂಧವನ್ನು ಬಹುಸುಂದರವಾಗಿ ಪ್ರತಿಪಾದಿಸಿದ್ದಾರೆ. ಅವರೇ ಹೇಳುವಂತೆ–

ಅಂಗಸೋಂಕಿನಲ್ಲಿ ಲಿಂಗಸಂಬಂಧಿಯಾದ ಬಳಿಕ
ಸರ್ವಾಂಗ ವಿಕಾರವಳಿಯಬೇಕು.
ಅಂಗಸೋಂಕಿನ ಲಿಂಗಕ್ಕೆ ಸೆಜ್ಜೆ ಶಿವದಾರವಾವುದೆಂದಡೆ:
ಈ ತ್ರಿವಿಧ ಗುಣವನರಿಯಬೇಕು. ತ್ರಿವಿಧಸಂಪನ್ನನಾಗಬೇಕು ।
ತ್ರಿವಿಧ ಮುಟ್ಟಿ ಲಿಂಗಾರ್ಚನೆಯ ಮಾಡಬೇಕು ೭
ಅಂಗಲಿಂಗ ಸಂಬಂಧಕ್ಕೆ ಇದೇ ಕ್ರಮ, ಕೂಡಲಚನ್ನಸಂಮದೇವಾ ೧

ಇಂತಹ ಕ್ರಮಮರಿತು ಆಚರಿಸುವ ಸಾಧಕ ಅನ್ಯರಿಗೆ ತಲೆಬಾಗುವುದಾಗಲಿ, ಮಾನವರ ಬೇಡುವುದಾಗಲಿ ಸಲ್ಲದು. ಜಾಗ್ರತ್, ಸ್ವಪ್ನ ಸುಷುಪ್ತಿಯಲ್ಲಿಯೂ ಲಿಂಗದ ನಿಲವನ್ನರಿಯ ಬೇಕು. ಎಲೆಮರೆಯ ಕಾಯಂತೆ ಲಿಂಗಾಂಗ ಸಂಬಂಧದಿಂದ ಸಾಧನಾಮಾರ್ಗದಲ್ಲಿ ಮುಂದುವರೆಯಬೇಕೆನ್ನುತ್ತಾರೆ ಚನ್ನಬಸವಣ್ಣ. ಹೀಗೆ ವೈಚಾರಿಕ ದೃಷ್ಟಿಕೋಣದಿಂದಲೂ ವಿವೇಚಿಸಿದ ಶರಣರು, ಇಷ್ಟಲಿಂಗದ ಉದ್ದೇಶವನ್ನೂ ಅದರ ಮಹತ್ವವನ್ನೂ ಪ್ರತಿಪಾದಿಸಿ, ಸಾಧನಾಮಾರ್ಗದಲ್ಲಿ ಭಕ್ತನಿಗೆ ಅದರ ಅವಶ್ಯಕತೆಯನ್ನು ಅರುಹಿ, ಲಿಂಗತತ್ತ್ವವನ್ನು ನೆಲೆಗೊಳಿಸಲೆತ್ನಿಸಿದ್ದಾರೆ.

ಜಂಗಮ : ವೀರಶೈವರಲ್ಲಿ 'ಜಂಗಮ'ವಿಶಿಷ್ಟಸ್ಥಾನ ಪಡೆದಿದ್ದಾನೆ. ಶರಣ ಹಾಗೂ ಐಕ್ಯಸ್ಥಲದ ನಿಲಯವನ್ನು ಪಡೆದು ಮಹಂತನೆನಿಸಿದ ಈ ಜಂಗಮ ಜಗತ್ಕಲ್ಯಾಣಕ್ಕಾಗಿ ಸಂಚರಿಸುತ್ತಾನೆ. ಶಿವನೇ ಜಂಗಮರೂಪಾಗಿ ಸಂಚರಿಸುವನೆಂದೂ ಭಾವಿಸಲಾಗಿದೆ. ಪ್ರಭುದೇವರು ಹೇಳುವಂತೆ 'ಜಂಗಮನ ಸುಳಿಹು ವಸಂತದ ಗಾಳಿ'. 'ಬಸವಣ್ಣನವರ ಅಭಿಪ್ರಾಯದಲ್ಲಿ ಹೇಳುವುದಾದರೆ 'ಗುರು ಉಪದೇಶ ಮಂತ್ರವೈದ್ಯ ; ಜಂಗಮ ಉಪದೇಶ

ಶಸ್ತ್ರವೈದ್ಯ', ಜಂಗಮನು ಜಗದಾರಾಧ್ಯನಾಗಿ ಪರಿಭಾವಿಸಲ್ಪಟ್ಟಿದ್ದಾನೆ ವೀರಶೈವರಲ್ಲಿ. 'ಜಂಗಮ' ಶಬ್ದವು ತ್ರಿಮೂರ್ತ್ಯಾತ್ಮಕವಾಗಿದೆ. ಇಲ್ಲಿ ಬರುವ ಮೂರು ಅಕ್ಷರಗಳಲ್ಲಿಯೂ ತ್ರಿಮೂರ್ತಿಗಳನ್ನು ಕಂಡಿದ್ದಾರೆ ಶರಣರು. ಅಲ್ಲದೆ

ಜಕಾರಂ ಜನನಂ ನಾಸ್ತಿ ಗಮನಂ ನ ಹಿ ।
ಮಕಾರಂ ಮರಣಂ ನಾಸ್ತಿ ತತ್ಸ್ಯಾತ್ ಜಂಗಮಲಕ್ಷಣಂ ॥

ಜಕಾರವು ಜನನರಾಹಿತ್ಯವನ್ನೂ, ಗಕಾರವು ಗಮನರಾಹಿತ್ಯವನ್ನೂ, ಮಕಾರವು ಮರಣ ರಾಹಿತ್ಯವನ್ನೂ ಸೂಚಿಸುತ್ತದೆ. ವೀರಶೈವರಲ್ಲಿ 'ಜಂಗಮ' ಶಬ್ದಕ್ಕೆ ಚರ, ಮಹೇಶ್ವರ, ಶಿವಯೋಗಿ, ನಿರಾಭಾರಿ ಇತ್ಯಾದಿ ಪರ್ಯಾಯ ನಾಮಗಳಿವೆ. ಜಂಗಮತ್ವವು ಸ್ವಸಾಧನೆ ಯಿಂದ ಪಡೆಯಬಹುದಾದ ಆಧ್ಯಾತ್ಮಿಕ ನಿಲವು. ಶಿಷ್ಯನು ಗುರುವಿನಿಂದ ಅನುಗ್ರಹಿ ಸಲ್ಪಟ್ಟ ನಂತರ ತನ್ನ ಸ್ವಸಾಧನೆಯಿಂದ ಜಂಗಮತ್ವಕ್ಕೆ ಏರಬಲ್ಲನು. ಒಂದರ್ಥದಲ್ಲಿ ಹೇಳುವುದಾದರೆ ಗುರುವಿಗಿಂತ ಮುಂದಿನ ಹಂತವನ್ನು ತಲುಪಿದವನೇ ಜಂಗಮ. ಶರಣರುಹೇಳುವಂತೆ 'ಲಿಂಗವೇ ಜಂಗಮನ ದೇಹವನ್ನು ಧರಿಸಿ ಸುಳಿಯುತ್ತದೆ'. ಶರಣರು ಗುರುಲಿಂಗ – ಜಂಗಮರಲ್ಲಿ ಅವಿನಾಭಾವ ಸಂಬಂಧವನ್ನು ಕಂಡಿದ್ದಾರೆ. ಇಂತಹ ಜಂಗಮನ ನಿಲವನ್ನು ಕುರಿತು ಚನ್ನಬಸವಣ್ಣನವರು ಹೀಗೆ ಹೇಳುತ್ತಾರೆ :

ಜಂಗಮ ಬರಬೇಕೆಂದು ಲಿಂಗಾರ್ಚನೆಯ ಮಾಡುವುದು,
ಆ ಜಂಗಮ ಮನೆಗೆ ಬಂದಡೆ,
ತನ್ನ ಲಿಂಗಾರ್ಚನೆಯ ಮಾಣ್ದು ಜಂಗಮಾರ್ಚನೆಯ ಮಾಡುವುದು.
ಆ ಲಿಂಗದಲ್ಲೇನುಂಟು? ಆ ಜಂಗಮದಲ್ಲೇನುಂಟು?
ಲಿಂಗದಲ್ಲಿ ಕುಲವುಂಟು, ಛಲವುಂಟು,
ಫಲವುಂಟು, ಪದವುಂಟು, ಭವವುಂಟು.
ಜಂಗಮದಲ್ಲಿ ಕುಲಂನಾಸ್ತಿ, ಛಲಂನಾಸ್ತಿ,
ಫಲಂನಾಸ್ತಿ , ಪದಂನಾಸ್ತಿಮ ಭವಂನಾಸ್ತಿ.
ಇದು ಕಾರಣ, ಕೂಡಲಚನ್ನಸಂಗಯ್ಯ ದೇವರಲ್ಲಿ
ಜಂಗಮವೆ ಲಿಂಗವೆಂದು ನಂಬಿದನಾಗಿ
ಬಸವಣ್ಣ ಸ್ವಯಂ ಲಿಂಗವಾದ. [೮]

ಆದುದರಿಂದ ಜಂಗಮನ ಆಗಮನ ಲಿಂಗಪೂಜೆಗಿಂತ ಹಿರಿದು ಎನ್ನುತ್ತಾರೆ ಚನ್ನಬಸವಣ್ಣ. ಏಕೆಂದರೆ 'ಜಂಗಮವು ಒಂದಾಗಿರ್ದ ಲಿಂಗವನು, ಲಿಂಗವು ಒಂದಾಗಿರ್ದ ಜಂಗಮವನು ಉಪಮೆಗೆ ತಂದು ಎರಡೆನ್ನಬಹುದೆ ? ಮಹಾಘನಜಂಗಮ ಶುದ್ಧಶಿವೈಕ್ಯನು' ಎನ್ನುತ್ತಾರೆ ಚನ್ನಬಸವಣ್ಣ. ಇಂತಹ ಶಿವೈಕ್ಯನೆನಿಸಿದ ಜಂಗಮನಲ್ಲಿ ಅವಗುಣವನ್ನರಸುವ ದುರಾಚಾರಿಗಳನ್ನು ಖಂಡಿಸಿದ್ದಾರೆ ಚನ್ನಬಸವಣ್ಣ. ಜಂಗಮದ ಮಹತಿಯನ್ನು ಕುರಿತು ಹೇಳುವ ಅವರ ಮತ್ತೊಂದು ವಚನ ಅತ್ಯದ್ಭುತವಾಗಿದೆ. ಅದೆಂದರೆ –

ಜಂಗಮಮುಖದಲು ಲಿಂಗ ಸರ್ವಾಂಗವಾಯಿತ್ತಾಗಿ,
ಆರೋಗಿಸಿಕೊಡುವುದು ನೋಡಾ.
ಜಂಗಮದಾಪ್ಯಾಯನವೇ ಲಿಂಗದಾಪ್ಯಾಯನ ನೋಡಾ.
ಜಂಗಮತೃಪ್ತಿಯೆ ಲಿಂಗತೃಪ್ತಿ ನೋಡಾ.

ಜಂಗಮವಾರೋಗಿಸಿ ಕೊಟ್ಟು ಡರ್ರನೆ ತೇಗಿದಡೆ,
ಅಂಗೈಯಲೆರಗುವುದು ಮುಕ್ತಿ ನೋಡಾ !.....[೯]

ಜಂಗಮತೃಪ್ತಿಯೇ ಲಿಂಗತೃಪ್ತಿ! ಜಂಗಮದ ಆರೋಗಣೆಯೇ ಲಿಂಗದಾರೋಗಣೆ'! ಪರಿಣಾಮ ಅಂಗೈಯಲ್ಲೇ ದೊರಕುವುದು ಮುಕ್ತಿ! ಇದಕ್ಕಿಂತ ಬೇಕೆ ಜಂಗಮದ ಹಿರಿಮೆಯನ್ನು ಸಾರಲು? ಆದುದರಿಂದ ಪರಮಪವಿತ್ರವೂ, ಜಗದ್ಭರಿತವೂ ಆದಿಯಿಂತ್ತತ್ತಲೂ ಆದ ಜಂಗಮದ ಪಾದವನ್ನು ಭಕ್ತಿಯಿಂದ ಸದ್ಭಕ್ತನು ಆಶ್ರಯಿಸಿದ್ದೇ ಆದರೆ ಈ ಭವ ಸಾಗರವನ್ನು ಸುಲಭವಾಗಿ ದಾಟಬಲ್ಲನು ಎನ್ನುತ್ತಾರೆ ಚನ್ನಬಸವಣ್ಣನವರು. ಏಕೆಂದರೆ ಅವರು ಹೇಳುವಂತೆ 'ಎನ್ನ ಜಂಗಮದೇವರ ಅಷ್ಟಕೋಟಿರೋಮಕೂಪದೊಳಗೆ ಒಂದು ರೋಮ ತಾ ಇಷ್ಟಲಿಂಗ'. ಹೀಗಿರುವಾಗ ಇಷ್ಟಲಿಂಗವನ್ನು ಅಧಿಕವೆಂದು ಭಾವಿಸಿ ತನ್ನೆದುರಿಗೇ ಇರುವ ಜಂಗಮವನ್ನು ನಿರಾಕರಿಸಿದ್ದೇ ಆದರೆ, ಅಂತಹ ಭ್ರಷ್ಟರ ಮಾತ ಕೇಳಲಾಗದು. ಏಕೆಂದರೆ 'ಜಂಗಮದೇವರಂತೆ ಲಿಂಗವು ಪಾದಪೂಜೆಯನ್ನು ಮಾಡಿಸಿಕೊಂಡು ಪಾದತೀರ್ಥಪ್ರಸಾದವ ಕೊಟ್ಟು ಪಾಲಿಸಬಲ್ಲುದೆ? ಒಕ್ಕುಮಿಕ್ಕುದನಿಕ್ಕಿ ಸಲಹಬಲ್ಲುದೆ? ಅರ್ಥಪ್ರಾಣಾಭಿಮಾನವನಿತ್ತಡೆ ಸ್ವೀಕಾರ ಮಾಡಬಲ್ಲುದೆ?

ರಾಸಿಗೆ ಅರ್ಚಿಸಿದ ಲಚ್ಚಣ, ರಾಸಿಯನೊಳಕೊಂಬುದೆ ರಾಸಿಯ ಒಡೆಯನಲ್ಲದೆ?
ಭಕ್ತನೆಂಬ ರಾಸಿಗೆ, ಲಿಂಗವೆಂಬ ಲಚ್ಚಣ
ಇಂತಿದಕ್ಕೆನ್ನ ಜಂಗಮದೇವರೇ ಮುದ್ರಾಧಿಪತಿ ಕಾಣಾ....[೧೦]

ಎನ್ನುತ್ತಾರೆ ಚನ್ನಬಸವಣ್ಣ. ಗುರುವಿಗೂ ಲಿಂಗವುಂಟು, ಲಿಂಗಕ್ಕೂ ಜಂಗಮವುಂಟು. ಆ ಜಂಗಮಕ್ಕಾದರೋ 'ಎಲ್ಲಿ ಇದ್ದಡೆ ಅಲ್ಲಿ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ಭಕ್ತಿ, ಅನುಭಾವ, ಸನ್ನಿಹಿತ'. ಆದುದರಿಂದ ಲಿಂಗಕ್ಕೆ ಮಾಡುವ ಮೊದಲು ಹದಿನೆಂಟುತೆರನಾದ (ಮಜ್ಜನ, ವಸ್ತ್ರ, ಗಂಧ, ಅಕ್ಷತೆ, ಪುಷ್ಪ, ಧೂಪ, ದೀಪ, ನೈವೇದ್ಯ, ಹಸ್ತಮಜ್ಜನ, ತಾಂಬೂಲ, ಸುಖಾಸನ, ಸ್ತೋತ್ರ, ಮಂತ್ರ, ಗೀತ, ವಾದ್ಯ, ನೃತ್ಯ, ಭೂಷಣಾಲಂಕಾರ, ವಾಹನ) ಭಕ್ತಿಯನ್ನು ಚರಣಲಿಂಗವೆಂಬ ಜಂಗಮಲಿಂಗಕ್ಕೆ ಅರ್ಪಿಸಿದ ಭಕ್ತನಿಗೆ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದಗಳು ಉಂಟು, ಆಚಾರವುಂಟು, ಸದ್ಭಕ್ತಿಯುಂಟು. ಏಕೆಂದರೆ ಸರ್ವಸುಖಗಳನ್ನು ಜಂಗಮಕ್ಕೆ ಅರ್ಪಿಸಿದಡೆ ಆ ಸುಖವ ಸುಖಿಸಬಲ್ಲನಾಗಿ ತನಗೆ ಪ್ರಸಾದವಾಯಿತ್ತು! ಹಾಗದಲ್ಲೆ ಜಂಗಮಕ್ಕೆ ದಾಸೋಹವ ಮಾಡದೆ ಗುರುಲಿಂಗಕ್ಕೆ ಭಕ್ತಿಯನ್ನು ಮಾಡುವವರು ವ್ರತಗೇಡಿಗಳು ಎನ್ನುತ್ತಾರೆ ಚನ್ನಬಸವಣ್ಣ ನವರು. ಜಂಗಮನು ಬೇಡುವುದಾಗಲಿ, ಭಕ್ತನು ಬೇಡಿಸಿಕೊಳ್ಳುವುದಾಗಲಿ ಸಲ್ಲದು. 'ಬೇಡದೆ ಆ ಭಕ್ತ ತಾನೆ ಮಾಡಿದ ಮಾಟದ ಪರಿಣಾಮಿಸಬಲ್ಲಡೆ ಜಂಗಮ. ಅವನ ಸದಿಚ್ಚೆಯ ಸಲ್ಲಿಸಬಲ್ಲಡೆ ಆತನೇ ಪರಮಭಕ್ತ. ಹಾಗಲ್ಲದೆ' ಗತಿಪದ ಮುಕ್ತಿಯ ಬಯಸಿ ಮಾಡುವಾತ ಭಕ್ತನಲ್ಲ! ಜೀವನೋಪಾಯಕ್ಕೆ ಬೇಡುವಾತ ಜಂಗಮನಲ್ಲ. 'ಈ ಉಭಯಕುಳದ ಸಂದಳಿದಡೆ ಭಕ್ತ–ಜಂಗಮವೆಂಬೆ' ಎನ್ನುತ್ತಾರೆ ಚನ್ನಬಸವಣ್ಣ ನವರು.

ಜಂಗಮದ ಹಿರಿಮೆ ಅಪಾರ. ಸರ್ವಾಂಗದಲ್ಲಿ ಲಿಂಗವನ್ನು ಹೊಂದಿರುವ ಕಾರಣ ಜಂಗಮತೃಪ್ತಿಯೇ ಲಿಂಗತೃಪ್ತಿ. ಇದನ್ನು ಚನ್ನಬಸವಣ್ಣನವರು ಅನೇಕ ದೃಷ್ಟಾಂತಗಳ ಮೂಲಕ ಸ್ಪಷ್ಟಪಡಿಸುತ್ತಾರೆ. ಅವರು ಹೇಳುವಂತೆ 'ಪೃಥ್ವಿಗೆ ಚೈತನ್ಯವಾದಡೆ ಸಸಿಗಳು ಬೆಳೆವವಲ್ಲದೆ, ಆ ಸಸಿಗಳ ಕೊನೆಯ ಮೇಲೆ ಮಳೆ ಸುರಿದಡೆ ಆ ಸಸಿಗಳು ಬೆಳೆಯಬಲ್ಲವೆ ?'

ಅಂತೆಯೇ ಗರ್ಭಿಣೀಸ್ತ್ರೀಗೆ ಉಣಲಿಕ್ಕಿದಡೆ ಆ ಗರ್ಭದೊಳಗಣ ಶಿಶು ತೃಪ್ತವಹುದಲ್ಲದೆ, ಆ ಸ್ತ್ರೀಯ ಗರ್ಭದ ಮೇಲೆ ಸಕಲಪದಾರ್ಥಂಗಳನಿಕ್ಕಿದಡೆ, ಆ ಗರ್ಭದೊಳಗಣ ಶಿಶು ತೃಪ್ತವಾಗಬಲ್ಲುದೆ? ಜಂಗಮಕ್ಕೆ ತೃಪ್ತವಾದರೆ ಲಿಂಗವೂ ತೃಪ್ತಿಹೊಂದುವುದು. ಅಷ್ಟೇ ಏಕೆ 'ಗುರುವಾದಡಾಗಲಿ, ಲಿಂಗವಾದಡಾಗಲಿ, ಜಂಗಮ ತಾನಾದಡೆಯೂ ಆಗಲಿ, ಜಂಗಮಪಾದೋದಕ ಪ್ರಸಾದವಿಲ್ಲದವರನೊಲ್ಲೆನೊಲ್ಲೆ' ಎನ್ನುತ್ತಾರೆ ಚನ್ನಬಸವಣ್ಣನವರು. 'ಜಂಗಮನಾದವನು ವೇದವೇದಾಂತವನೋದಿ ಜ್ಞಾನಸೂರೆಯ ಮಾಡಿಕೊಂಡ ನಂತರ ಕ್ರಿಯಾಹೀನನಾಗಿ ವರ್ತಿಸಿದರೆ ಆತನು ಆಗಮ ಸಮರಸನಲ್ಲ'. ಏಕೆಂದರೆ ಆತನು 'ನುಡಿದಂತೆ ನಡೆಯನು'. ಶರಣಧರ್ಮದ ಪ್ರಕಾರ ನಡೆಯೊಂದು ಪರಿ ನುಡಿಯೊಂದು ಪರಿ ಸಲ್ಲದು ಎಂದು ಆತನಿಗಿರಬೇಕಾದ ಅರ್ಹತೆನ್ನು ಅರುಹಿದ್ದಾರೆ.

ಶ್ರೀ ಗುರುವಿನ ಕರುಣೆಯಿಂದ ಲಿಂಗಧರಿಸಿ ಸಾಧನಾಮಾರ್ಗದಲ್ಲಿ ಮುಂದುವರಿದ ಭಕ್ತನು ಆಣವ, ಮಾಯಾ, ಕಾರ್ಮಿಕ ಮಲತ್ರಯಗಳನ್ನು ಗೆಲ್ಲಬೇಕಾದರೆ ಜಂಗಮನ ಪಾದವನ್ನೇ ಆಶ್ರಯಿಸಬೇಕು. ಏಕೆಂದರೆ 'ಚಿತ್ಕೈಲಾಸವನ್ನೆದುವಡೆ ಜಂಗಮಪಾದವೇ ಮಹಾದ್ವಾರ' 'ಆ ಜಂಗಪಾದವೇ ಭವಜಡಧಿಗೆ ಹಡಗು' ಎನ್ನುತ್ತಾರೆ ಚನ್ನಬಸವಣ್ಣ. ಏಕೆಂದರೆ ಆ ಜಂಗಮ ನಿರ್ಲೇಪಕ, ನಿರುಪಾಧಿಕ, ನಿರ್ಬೋಧಕ, ನಿರಾಶ್ರೀತ, ನಿಷ್ಕಾರಣ, ನಿರವಯ, ನಿರ್ಗಮನ, ನಿಸ್ಸೀಮ, ನಿರ್ದೇಹಿ, ನಿಜೈಕ್ಯ ಇಂತಹ ಜಂಗಮವೆಂಬ ಹಡಗನ್ನು ಹತ್ತಿ ಭವಸಾಗರವನ್ನು ದಾಟುವುದೇ ಮಾನವನ ಗುರಿ. ಆತನ ಮಹತ್ಸಾಧನೆಗೆ ನೆರವಾಗುತ್ತಾ ವೀರಶೈವಧರ್ಮದ ಪ್ರಕಾರ ಅಷ್ಟಾವರಣಗಳಲ್ಲಿ ಮೂರನೆಯ ಆವರಣವಾಗಿ ನಿಂತಿದ್ದಾನೆ ಜಂಗಮ.

ಪಾದೋದಕ : ಪಾದೋದಕವೆಂದರೆ ಪಾದತೀರ್ಥವೆಂದರ್ಥ. 'ಪಾದ' ಶಬ್ದವು 'ಪರಮಾನಂದ' ಎಂಬರ್ಥವನ್ನೂ, 'ಉದಕ' ಶಬ್ದವು 'ಶಿವಜ್ಞಾನ' ಎಂಬರ್ಥವನ್ನೂ ಕೊಡುತ್ತದೆ. ಪರಮಾನಂದ ಹಾಗೂ ಶಿವಜ್ಞಾನಗಳ ಸಂಗಮವೇ ಪಾದೋದಕ. 'ಪಾದ' ಗುರುವನ್ನೂ 'ಉದಕ' ಶಿಷ್ಯನನ್ನೂ ನಿರ್ದೇಶಿಸುತ್ತದೆ. ದೀಕ್ಷಾವಿಶೇಷದಿಂದ ಸಂಬಂಧಿಸುವ ಇವರಿಬ್ಬರ ಐಕ್ಯಪರವಾದುದೇ 'ಪಾದೋದಕ' ಎಂದಿದ್ದಾರೆ ಶರಣರು. 'ಪಾದೋದಕ ವೆಂಬುದು ಪರಮಾತ್ಮನ ಚಿದ್ರೂಪ ನೋಡಾ' ಎಂದಿದ್ದಾರೆ ಸಿದ್ಧರಾಮೇಶ್ವರರು. ಇಂತಹ ಪರಮಾತ್ಮನ ಚಿದ್ರೂಪವೆನಿಸಿದ ಪಾದೋದಕವನ್ನು, ಉಪಾಸಕನಾದ ಶಿಷ್ಯನು ಉಪಾಸ್ಯ ಮೂರ್ತಿಗಳಾದ ಗುರು ಲಿಂಗ ಜಂಗಮರ ಪೂಜಾವಿಶೇಷದಿಂದ ಪಡೆದುಕೊಳ್ಳುತ್ತಾನೆ. 'ಅರಿದೊಡೆ ಪಾದೋದಕ ಅರಿಯದಿರ್ದೊಡೆ ಬರಿಯ ನೀರೆಂದರಿಯರು' ಎನ್ನುತ್ತಾರೆ ಉರಿಲಿಂಗಪೆದ್ದಿಗಳು. ಶರಣರು ತ್ರಿವಿಧ ಪಾದೋದಕವನ್ನು ಹೇಳಿದ್ದಾರೆ. ಗುರು ಪಾದೋದಕ, ಲಿಂಗಾಪಾದೋದಕ, ಜಂಗಮಪಾದೋದಕ, ಇವುಗಳನ್ನು ಕೇವಲ ತಾತ್ತ್ವಿಕ ವಾಗಿ ನೋಡದೆ ಆಚರಣೆಯ ಮಾರ್ಗದಲ್ಲಿ ಇವಕ್ಕೆ ಮಹತ್ವದ ಸ್ಥಾನವನ್ನು ಕೊಟ್ಟಿದ್ದಾರೆ ಶರಣರು.

ಚನ್ನ ಬಸವಣ್ಣನವರು ತಮ್ಮ ವಚನಗಳಲ್ಲಿ ಪಾದೋದಕದ ಹಿರಿಮೆಯನ್ನೂ, ಅದರ ವಿಧಗಳನ್ನೂ ಬಣ್ಣಿಸಿದ್ದಾರೆ. ಅವರು ಹೇಳುವಂತೆ 'ಗುರು ಜಂಗಮ ಪಾದೋದಕ ಪ್ರಸಾದವ ಭಕ್ತಿಯಿಂದ ಪಡೆದು ನಿಚ್ಚನಿಚ್ಚ ಸೇವಿಸಬಲ್ಲಡೆ, ಆ ಭಕ್ತನ ಕಾಯಕರಣಾದಿಗಳ ಸೋಂಕಲಮ್ಮದೆ ದುರಿತವು ದೂರಾಗಿಪ್ಪುದು ! ಇಂತಹ ದುರಿತವನ್ನು ದೂರಮಾಡುವ ಪವಿತ್ರವಾದ

ಪಾದೋದಕವನ್ನು ಪಡೆದು ಕೂಡಲಚನ್ನಸಂಗಯ್ಯನ ಶರಣರು ಪರಿಶುದ್ಧ ರಾದರು' ಎನ್ನುತ್ತಾರೆ ಚನ್ನಸವಣ್ಣನವರು. ಅಲ್ಲದೆ ಶ್ರುತಿ, ಪುರಾಣ, ಆಗಮ, ಇತಿಹಾಸ ಗಳಿಂದ ಶಿವನೇ ಅಧಿಕನೆಂದರಿದು ಸಕಲ ಋಷಿಜನಗಳು, ದೇವತೆಗಳು, ಪರಶುರಾಮ, ಪರಾಶರ, ವಸಿಷ್ಠ, ವಿಶ್ವಾಮಿತ್ರ ಮೊದಲಾದ ಮಹಾಮುನಿಗಳೆಲ್ಲರೂ 'ಶಿವಲಿಂಗವ ಧರಿಸಿಕೊಂಡು, ಶಿವಲಿಂಗಾರ್ಚನೆಯ ಮಾಡಿಕೊಂಡು, ಪಾದತೀರ್ಥಪ್ರಸಾದವ ಕೊಂಡು ಮುಕ್ತರಾದರು' ಎಂದಿದ್ದಾರೆ.

ಪಾದಪೂಜೆಯು ವೀರಶೈವ ಆಚಾರದಲ್ಲಿ ಅತಿ ಮಹತ್ವದ ಸ್ಥಾನವನ್ನು ಪಡೆದಿದೆ. ಗುರು ಜಂಗಮರ ಪಾದಪೂಜೆಯಿಂದ, ಪಾದೋದಕ ಪ್ರಸಾದಗಳನ್ನು ಪಡೆದು, ಸಾಧಕನು ತನ್ನ ಕರ್ಮಕ್ಷಯವನ್ನು ಮಾಡಿಕೊಳ್ಳುತ್ತಾನೆ. ಬಾಹ್ಯ ಹಾಗೂ ಆಂತರಿಕಶುದ್ಧಿಗಾಗಿ ಪಾದೋದಕ ಪ್ರಸಾದಗಳು ಅವಶ್ಯಕ. ಚನ್ನಬಸವಣ್ಣನವರು ಹೇಳುವಂತೆ

ಸುರೆಯ ತುಂಬಿದ ಭಾಂಡವನು ಎನಿಸುವೇಳೆ ಜಲದಿ ತೊಳೆದಡೇನು,
ಒಳಗೆ ಶುದ್ಧವಾಗಬಲ್ಲುದೆ ?
ಬಾಹ್ಯದ ಜಲತೀರ್ಥದಲ್ಲಿ ಮುಳುಮುಳುಗಿ ಎದ್ದಡೇನು,
ಅಂತರಂಗದ ಮಲಿನತ್ವವು ಮಾಂಬುದೇ ಹೇಳಾ ?...... ೧೧

ಆದುದರಿಂದ ಆಂತರಿಕ ಮಲಿನತ್ವವನ್ನು ಕಳೆದುಕೊಳ್ಳಬೇಕಾದರೆ 'ಚಿದಾಕಾಶವನ್ನೊಳಕೊಂಡ ಶಿವಜ್ಞಾನಿಗಳ ಪಾದೋದಕವ ಪಡೆದು, ಭಕ್ತರು ಭವರಹಿತರು ಆಗಬೇಕು' ಏಕೆಂದರೆ ಅವರು ಹೇಳುವಂತೆ 'ಸಕಲ ತೀರ್ಥಕ್ಷೇತ್ರವೆಲ್ಲ ಶಿವಯೋಗಿಯ ಶ್ರೀಪಾದದಲ್ಲಿ ಅಡಗಿಪ್ಪವು', ಅಂತಹ 'ಶಿವಯೋಗಿಯ ಪಾದೋದಕವ ಸೇವಿಸಿ ನಮ್ಮ ಶರಣರೆಲ್ಲ ಪರಮಮುಕ್ತರಾದರಯ್ಯಾ' ಎಂದಿದ್ದಾರೆ ಚನ್ನಬಸವಣ್ಣನವರು.

ಜರಾಮರಣರಹಿತವಾದ ಪಾದೋದಕವೆಂಬ ಅಮೃತವನ್ನು ಸೇವಿಸಿ ನಿತ್ಯಮುಕ್ತ ನಾಗದವನನ್ನು ಕಂಡು ಕನಿಕರಗೊಂಡಿದ್ದಾರೆ ಚನ್ನಬಸವಣ್ಣನವರು. ಅವರು ದಶವಿಧ ಪಾದೋದಕಗಳನ್ನು ಹೇಳುತ್ತಾರೆ. ಅಲ್ಲದೆ ಕ್ರಿಯಾಜ್ಞಾನಯುಕ್ತವಾದ ಮಾರ್ಗದಲ್ಲಿ ಸಾಧಕನು ಮುನ್ನಡೆಯಲು ಈ ಪಾದೋದಕತತ್ತ್ವವನ್ನು ಅಳವಡಿಸಿದ್ದಾರೆ. ಇದು ಅಷ್ಟಾವರಣಗಳಲ್ಲಿಯೇ ಮಹತ್ವದ ಸ್ಥಾನವನ್ನು ಪಡೆದಿದೆ. ಏಕೆಂದರೆ ಅರಿವಿನ ನಡೆನುಡಿಗಳಿಂದ ಯುಕ್ತವಾದುದು ಇದಾಗಿದೆ. ಇಂತಹ ಕ್ರಿಯಾಜ್ಞಾನ ಸಂಬಂಧ ಪಾದೋದಕದ ಹಿರಿಮೆ ವೀರಶೈವ ಧರ್ಮಕ್ಕೆ ವಿಶಿಷ್ಟವಾದ ಆವರಣವಾಗಿ ನಿರೂಪಿಸಲ್ಪಟ್ಟಿದೆ.

ಪ್ರಸಾದ : ಪ್ರಸಾದವೆಂದರೆ 'ಶಿವಾನುಗ್ರಹ' ಹಾಗೂ 'ಶಿವನ ಪ್ರಸನ್ನತೆ' ಎಂಬ ಅರ್ಥಗಳು ಇವೆ. ಶಿವನ ಚಿಚ್ಛಕ್ತಿಯಿಂದ ಸೃಷ್ಟಿಸಲ್ಪಟ್ಟ ಈ ಸೃಷ್ಟಿಯೆಲ್ಲಾ ಈಶ್ವರನ ಪ್ರಸಾದ ಅಥವಾ ಅನುಗ್ರಹ' ಎಂಬ ಭಾವನೆ ಇದೆ. ಅಂತೆಯೇ ತನ್ನನ್ನು ತಾನೇ ಈಶ್ವರನಿಗೆ ಪ್ರಸಾಧವಾಗಿ ಅರ್ಪಿಸಿಕೊಳ್ಳುವುದೂ ಈ ಪ್ರಸಾಧತತ್ತ್ವದಲ್ಲಿ ಹುದುಗಿದೆ. ಗುರು – ಲಿಂಗ–ಜಂಗಮಕ್ಕೆ ಅರ್ಪಿಸಿದ ಆಹಾರವೂ ಪ್ರಸಾದವೆನಿಸಿದೆ. ಭಕ್ತಿಯ ಬೆಳೆಯ ಫಲ ಈ ಪ್ರಸಾದ. ಭಗವದ್ಗೀತೆಯು 'ಪ್ರಸಾದೇ ಸರ್ವದುಃಖಾನಾಂ ಹಾನಿರಸ್ಯೋಪಜಾಯತೇ' ಎಂದಿದೆ. ಹೀಗೆ 'ಪ್ರಸಾದ' ಪದಕ್ಕೆ ವ್ಯಾಪಕವಾದ ಅರ್ಥಗಳು ಕಂಡುಬರುತ್ತವೆ. ಪ್ರಸಾದದ ತಳಹದಿ 'ಅರ್ಪಣ'. ಈ ಅರ್ಪಣಾ ತತ್ತ್ವದಲ್ಲಿಯೇ ಹುದುಗಿದೆ ಶಿವ–ಜೀವರ ತಾದಾತ್ಮ್ಯ.

ಬಾಹ್ಯಾಪದಾರ್ಥಗಳನ್ನು ಕೇವಲ ಹಾಗೆಯೇ ಸ್ವೀಕರಿಸಿದೆ. ಅವುಗಳನ್ನು ಗುರುಲಿಂಗಜಂಗಮಕ್ಕೆ

ಅರ್ಪಿಸಿ, ಪ್ರಸಾದವನ್ನಾಗಿ ಪಡೆದುಕೊಳ್ಳುವ ಈ ಆಚರಣೆಯ ತತ್ತ್ವದಲ್ಲಿಯೇ ಪರಿಪೂರ್ಣತೆಯನ್ನು ಕಂಡಿದ್ದಾರೆ. ಶರಣರು. ಹೀಗೆ ದೈವಸ್ವರೂಪವಾದ ಪ್ರಸಾದವನ್ನು, ಭಕ್ತಿ ಹಾಗೂ ನಮ್ರತಾಭಾವದಿಂದ 'ತುತ್ತ ತುತ್ತಿಗೆ ಶರಣು ಎನ್ನುತ್ತ ಸ್ವೀಕರಿಸಬೇಕೆನ್ನುತ್ತಾರೆ' ಶರಣರು. ಅಷ್ಟಾವರಣಗಳಲ್ಲಿ ಒಂದಾದ ಈ ಪ್ರಸಾದವು ಸಾಧಕನ ಸಾಧನಾಮಾರ್ಗದಲ್ಲಿ ಆತನಿಗೆ 'ಆವರಣ'ವಾಗಿ ರಕ್ಷಣೆಯಿತ್ತು ಆತನನ್ನು ಐಕ್ಯದ ಕಡೆಗೆ ಮುನ್ನಡೆಸುತ್ತದೆ. 'ಪ್ರಸಾದ ಘನಕ್ಕೆ ಮಹಾಘನವಾದುದು' 'ಉಪಮಿಸಬಾರದು' ಎಂದು ಪ್ರಸಾದದ ಹಿರಿಮೆಯನ್ನು ಶರಣರು ಬಹುವಾಗಿ ಕೊಂಡಾಡಿದ್ದಾರೆ. ಶ್ರೀಗುರುವು ಶಿಷ್ಯನ ಕರಸ್ಥಲಕ್ಕೆ ಪ್ರಾಣಲಿಂಗವನ್ನು ಕರುಣಿಸಿದ ನಂತರ, 'ಆ ಲಿಂಗ ಮುಟ್ಟಲೊಡನೆ ತನು ಪ್ರಸಾದವಾಯಿತ್ತು. ಮನ ಪ್ರಸಾದವಾಯಿತ್ತು, ಧನ ಪ್ರಸಾದವಾಯಿತ್ತು. ಇಂತೀ ಸರ್ವಾಂಗ ಪ್ರಸಾದವಾಯಿತ್ತು.' ಹೀಗೆ ಸರ್ವಾಂಗಪ್ರಸಾದವಾದನಂತರ ಕೈಯೊಡ್ಡಿ ಬೇಕೆಂದು ಬೇಡುವ ಹಾಗೂ ಕೈನೀಡಿ ಇಕ್ಕುವ ಪದಾರ್ಥಗಳು ಪ್ರಸಾದವಾಗದೆ ಕೇವಲ ಪದಾರ್ಥಗಳಾಗಿ ಉಳಿಯುತ್ತವೆ. ಲಿಂಗಕ್ಕೆ ಅರ್ಪಿಸದೆ ಕಂಡಕಂಡ ಪದಾರ್ಥಗಳನ್ನು ಸೇವಿಸುವುದು ಕೆಂಡದಂತೆ ಆತನನ್ನು ದಹಿಸುತ್ತದೆ. ಅದುದರಿಂದ ಲಿಂಗಕ್ಕೆ ಕೊಟ್ಟು ಕೊಂಡದು ಪ್ರಸಾದ. ಜಂಗಮಕ್ಕಾರೋಗಣೆಯ ಮಾಡಿ ಮಿಕ್ಕುದು ಪ್ರಸಾದ. ಇದೇ ಪ್ರಸಾದದಾದಿ ಎಂದಿದ್ದಾರೆ.

ಚನ್ನಬಸವಣ್ಣನವರು ಹೇಳುವಂತೆ ಉದಯಮುಖದಲ್ಲಿ ಹುಟ್ಟಿದ ಬಿಸಿಲು ಮೊದಲುಗೊಂಡು, ಅಸ್ತಮಾನ ಮುಖದಲ್ಲಿ ಹುಟ್ಟಿದ ನೆಳಲಿನವರೆಗೆ ಎಲ್ಲವನ್ನೂ ಲಿಂಗಾರ್ಪಿತ ಮಾಡಬೇಕು. ಲಿಂಗಾರ್ಪಿತವಲ್ಲದೆ ಕೊಂಡಡೆ ಕೃತಕಿಲ್ಬಿಷ ಎಂದಿದ್ದಾರೆ. ಹೀಗೆ ಪಡೆಯುವ ಪ್ರಸಾದದ ಹಿರಿಮೆಯಿಂದ 'ಮಂತ್ರಪ್ರಯೋಗದಿಂದ ಉರಗನಗರಳವು ಹರಣವಾದಂತೆ, ನಿಮಗರ್ಪಿಸಿದ ಪ್ರಸಾದ ಪರಿಣಾಮದ ಸೂಕ್ಷ್ಮಶಕ್ತಿಯಿಂದ ಅನಿಷ್ಟನಿವೃತ್ತಿ. ಇಷ್ಟಾರ್ಥಪ್ರಾಪ್ತಿಗಳಾಗುತ್ತಿರ್ಪವಯ್ಯಾ' ಎನ್ನುತ್ತಾರೆ. ಏಕೆಂದರೆ ಅದೆಲ್ಲವೂ ಕ್ರಿಯಾಜ್ಞಾನಾತ್ಮಕವಾದುದು. ಕೇವಲಕ್ರಿಯೆಯಿಂದ ಸಾಧಿಸದೆ ಜ್ಞಾನಾಗ್ನಿಯಲ್ಲಿ ಪದಾರ್ಥವಮಾಡಿ ಅರ್ಪಿಸಬೇಕು ಎಂದಿದ್ದಾರೆ. ಹಾಗಲ್ಲದೆ ಕೇವಲ 'ಅರ್ಪಿತ, ಅರ್ಪಿತ, ಎಂದು ಹೇಳಿ ನಿಜತತ್ತ್ವವನ್ನೆ ಅರಿಯದೆ ಹೋದರೆ ಅವರು ಅರಿವುಗೇಡಿಗಳು ಎಂದಿದ್ದಾರೆ ಚನ್ನಬಸವಣ್ಣನವರು.

ಗುರುಲಿಂಗಜಂಗಮಗಳು ಮುಟ್ಟಿದ್ದೆಲ್ಲವೂ ಪ್ರಸಾದವೆಂದು ಭಾವಿಸಲಾಗದು. ಹಾಗೆ ಮುಟ್ಟಿದಾಕ್ಷಣ ಅದು ಪ್ರಸಾದವಾಗಲಾರದು. ಅದು ಪ್ರಸಾದವಾಗಬೇಕಾದರೆ ಗುರು ತನ್ನ ಉತ್ಪತ್ತಿಸ್ಥಿತಿಲಯಗಳನ್ನೂ, ಲಿಂಗವು ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ಕೊಳಗಾಗುವುದನ್ನೂ, ಜಂಗಮವು ಆಮಿಷಕ್ಕೊಳಗಾಗುವುದನ್ನೂ, ಕಳೆದಾಗಲೆ ಅವರು ಮುಟ್ಟಿದ್ದು ಪ್ರಸಾದವಾಗಬಲ್ಲದು. ಹಾಗಲ್ಲದೆ ನಾಮಮಾತ್ರದಿಂದ 'ಪ್ರಸಾದ' ರೂಪಾಗಲಾರದು. ಏಕೆಂದರೆ 'ಪದಾರ್ಥವೆ ಕರ್ಮರೂಪು, ಪ್ರಸಾದವೇ ನಿಃಕರ್ಮರೂಪ', ಎಂದು ಆಗಮ ಸಾಕ್ಷಿಸಹಿತ ಪ್ರತಿಪಾದಿಸಿದ್ದಾರೆ ಚನ್ನಬಸವಣ್ಣ, 'ಇದೇ ಭಕ್ತಿಗೆ ಬೇಹ ಬುದ್ಧಿ, ಇದೇ ಪ್ರಸಾದಕ್ಕೆ ಪರಮಕಾರಣ. ಇಂತಲ್ಲದವರಿಗೆ ಲಿಂಗವಿಲ್ಲ. ಲಿಂಗವಿಲ್ಲವಾಗಿ ಪ್ರಸಾದವಿಲ್ಲ' ಎನ್ನುತ್ತಾರೆ ಶರಣರು.

ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸಾದಗಳನ್ನು ತನು ಮನ ಪ್ರಾಣಕ್ಕೆ ಪಡೆದು ಶುದ್ಧನಾಗಿ, ಆ ಶರಣಸಂಗದಿಂದ ದೊರೆತ ಪ್ರಸಾದದ ಪರಿಣಾಮವಾಗಿ ಭವಭವಗಳನ್ನೇ ಕಳೆದುಕೊಳ್ಳ ಬಹುದೆಂದು ಹೇಳುತ್ತಾರೆ ಚನ್ನಬಸವಣ್ಣನವರು. 'ಶಿವನ ಪ್ರಸಾದ ಮನ್ನಿಸಲು ಕೈವಲ್ಯ

ವಯ್ಯ.' ಇಂತಹ ಕೈವಲ್ಯಕಾರಕವಾದ ಪ್ರಸಾದದ ಮೂಲಕ ಸಾಧಕನು ತನ್ನ ಸಾಧನೆಯ ಹಂತವನ್ನು ಬಹು ಸುಲಭದಲ್ಲಿ ಏರುತ್ತಾನೆ.

ವಿಭೂತಿ: ಇದು ಶರೀರದ ಮೇಲೆ ಎಸಗುವ ಪರಿಣಾಮಕ್ಕನುಗುಣವಾಗಿ ವಿಭೂತಿ, ಭಸಿತ, ಭಸ್ಮ, ಕ್ಷಾರ ಮತ್ತು ರಕ್ಷಾ ಎಂದು ಐದು ಹೆಸರುಗಳಿಂದ ಕರೆಯಲ್ಪಟ್ಟಿದೆ. ಸಿದ್ಧಾಂತಶಿಖಾಮಣಿಯಲ್ಲಿ ಅಷ್ಟೈಶ್ವರ್ಯಗಳಿಗೆ ಕಾರಣವಾಗಿರುವುದರಿಂದ ವಿಭೂತಿ ಎಂದೂ, ಶಿವತತ್ತ್ವವನ್ನು ಪ್ರಕಾಶಗೊಳಿಸುವುದರಿಂದ ಭಸಿತವೆಂದೂ, ಪಾಪಗಳನ್ನು ನಾಶಪಡಿಸುವುದರಿಂದ ಭಸ್ಮವೆಂದೂ, ವಿಪತ್ತುಗಳನ್ನು ಕ್ಷಯಗೊಳಿಸುವುದರಿಂದ ಕ್ಷಾರವೆಂದೂ ಭೂತಪಿಶಾಚಾದಿಗಳಿಂದ ಕಾಪಾಡುವುದರಿಂದ 'ರಕ್ಷೆ'ಯೆಂದೂ ಕರೆಯಲ್ಪಟ್ಟಿದೆ. ತಂತ್ರಶಾಸ್ತ್ರದಲ್ಲಿ ವಿಭೂತಿಯನ್ನು ಕಲ್ಪ, ಅನುಕಲ್ಪ, ಉಪಕಲ್ಪ ಮತ್ತು ಆಕಲ್ಪ ಎಂದು ನಾಲ್ಕು ಪ್ರಕಾರಗಳಾಗಿ ವಿಂಗಡಿಸಲಾಗಿದೆ. ಅಲ್ಲದೆ ವಿಭೂತಿಯನ್ನು ಸಿದ್ಧಗೊಳಿಸುವ ವಿಧಾನಗಳನ್ನು ಬಹುವಿಸ್ತಾರವಾಗಿ ನಿರೂಪಿಸಲಾಗಿದೆ. ಹೀಗೆ ಸಿದ್ಧಗೊಂಡ ಭಸ್ಮವನ್ನು ಧರಿಸುವ ಸ್ಥಳ ಹಗೂ ಕ್ರಮಗಳನ್ನು ವಿವರವಾಗಿ ಹೇಳಿದ್ದಾರೆ. ಅಲ್ಲದೆ ದೀಕ್ಷಾಭಸಿತ, ಶಿಕ್ಷಾಭಸಿತ, ಕ್ರಿಯಾಭಸಿತವೆಂದೂ ವಿಭೂತಿಯ ವಿಭಾಗವನ್ನು ಕಲ್ಪಿಸಲಾಗಿದೆ.

ಶಾಂತಿ, ಪುರಾಣ, ಆಗಮಸಮ್ಮತವಾದ ಶ್ರೀ ವಿಭೂತಿಯನ್ನು ಶರಣರು ತಮ್ಮದೇ ಆದ ರೀತಿಯಲ್ಲಿ ಬಣ್ಣಿಸಿದ್ದಾರೆ. ಅಕ್ಕಮಹಾದೇವಿಯವರು ಹೇಳುವಂತೆ ಹಿತವಿದೆ ಸಕಲ ಲೋಕದ ಜನಕ್ಕೆ', ಬಸವಣ್ಣನವರು ಹೇಳುವಂತೆ 'ಭಸ್ಮವು ಸಕಲಾಚಾರದ ಕವಚ, ಸಕಲ ವಶ್ಯದ ತಿಲಕ, ಸಕಲಸುಖದ ಮುಕುರ!' ಅಲ್ಲಮಪ್ರಭುಗಳ ಮಾತಿನಲ್ಲಿ ಹೇಳುವುದಾದರೆ 'ನಮ್ಮ ಗುಹೇಶ್ವರ ಲಿಂಗವ ಕಾಬಡೆ ಆ ಮಹಾವಸ್ತುವಿನ ಪರಮಪ್ರಕಾಶದಿಂದೊದಗಿದ ಭಸಿತವೇ ಮುಖ್ಯ ಕಾಣಿರಣ್ಣಾ !'. ಆ ಪರಾತ್ಪರವಸ್ತುವೂ, ಪರಬ್ರಹ್ಮಸ್ವರೂಪನೂ ಆದ, ಆ ಪರಶಿವನ ಪರಮಪ್ರಕಾಶದಿಂದ ಉಂಟಾದ ಭಸಿತದ ಮೂಲಕವೇ, ಸಾಧಕನು ತಾನು ಕಾಣಬೇಕಾದ, ಕಾಣಹೊರಟ ಆ ಪರಬ್ರಹ್ಮನನ್ನು ಕಾಣುತ್ತಾನೆ. ಚನ್ನಬಸವಣ್ಣ ನವರು ಭಸಿತವನ್ನು ಕುರಿತು–

....

ಚಿದ್ವಿಭೂತಿಯನೆ ತಂದು, ಪಟ್ಟವನೆ ಕಟ್ಟಿದಡೆ
ಭಾವಕ್ಕೆ ಗುರುವಾಯಿತ್ತು : ಪ್ರಾಣಕ್ಕೆ ಲಿಂಗವಾಯಿತ್ತು ;
ಶ್ರೋತ್ರಕ್ಕೆ ಶಿವಮಂತ್ರವಾಯಿತ್ತು; ನಾಸಿಕಕ್ಕೆ ಸುಗಂಧವಾಯಿತ್ತು,
ಇಂತು ಪೂರ್ವಗುಣಂಗಳೆಲ್ಲವ ಕಳೆದು ಪುನರ್ಜಾತನಾದ ಕಾರಣ ಸ್ಥಾನ ಶುದ್ಧವಾಯಿತ್ತು. ೧೨

ಮಾನವನು ತನ್ನಲ್ಲಿರುವ ಭವಿಗುಣಗಳನ್ನು ಕಳೆದುಕೊಂಡು, ಶಿವಮಂತ್ರವನ್ನು ಶ್ರೋತ್ರಕ್ಕೆ ಕೇಳಿಸುತ್ತ, ಸುಗಂದವನ್ನು ಹೊಂದಿ, ಗುರುಲಿಂಗಜಂಗಮಕೃಪೆಗೆ ಪಾತ್ರನಾಗಿ ಪುನರ್ಜಾತನಾಗುವುದು, ಈ ಚಿದ್ವಿಭೂತಿಯಿಂದ ಎನ್ನುತ್ತಾರೆ.

ನಿರವಯ ಸಮಾದಿಯನ್ನು ದೊರಕಿಸಿಕೊಡುವ ಶ್ರೀ ವಿಭೂತಿ, ನೋಟಕ್ಕೆ ಬಹಿರಾವರಣದಂತೆ ಕಂಡುಬಂದರೂ, ಅದು ಸಾಧಕನಿಗೆ ಅತ್ಯಂತ ಮಹತ್ವದ ಆಚರಣೆಯ ವಸ್ತುವಾಗಿದೆ. ಹೀಗೆ ದೊರೆತ ವಿಭೂತಿಯನ್ನು ಧರಿಸುವ ಸ್ಥಳಗಳನ್ನು ತಮ್ಮೊಂದು ವಚನದಲ್ಲಿ ಚನ್ನಬಸವಣ್ಣನವರು ಹೀಗೆ ಹೇಳುತ್ತಾರೆ. ಅಂದೆಂದರೆ ಸಹಜಲಿಂಗಧಾರಕನು ಎಂಟು ಸ್ಥಳಗಳಲ್ಲಿಯೂ, ಕ್ರಿಯಾದೀಕ್ಷಾನ್ವಿತರಾದ ಉಪಾಧಿಭಕ್ತರು ಹದಿನಾರು ಸ್ಥಳಗಳಲ್ಲಿಯೂ, ಕ್ರಿಯಾ ಹಾಗೂ ಮಂತ್ರದೀಕ್ಷಾಯುಕ್ತರಾದ ನಿರುಪಾಧಿಭಕ್ತರು ಮೂವತ್ತೆರಡು ಸ್ಥಾನ ಗಳಲ್ಲಿಯೂ,

ಕ್ರಿಯಾ, ಮಂತ್ರ, ವೇಧಾ, ಸಚ್ಚಿದಾನಂದ ದೀಕ್ಷಾಯುಕ್ತರಾದ ನಿರ್ವಂಚಕ ಭಕ್ತರು ನಾಲ್ವತ್ತನಾಲ್ಕು ಸ್ಥಾನಗಳಲ್ಲಿಯೂ ಧರಿಸಬೇಕೆನ್ನುತ್ತಾರೆ. ಅಲ್ಲದೆ ಕ್ರಿಯಾ, ಮಂತ್ರ, ವೇಧಾ, ಸಚ್ಚಿದಾನಂದ, ನಿರ್ಮಾಣಪದ ದೀಕ್ಷಾಯುಕ್ತರಾದವರು ಅಪಾದ ಮಸ್ತಕಪರಿಯಂತ ಸ್ನಾನಧೂಳವಮಾಡಿ, ನಾಲ್ವತ್ತೆಂಟು ಸ್ಥಾನಗಳಲ್ಲಿ ಮಂತ್ರಪುರಸ್ಸರ ವಾಗಿ ತ್ರಿಪುಂಡ್ರಧಾರಣೆ ಮಾಡುವುದಾಗಿ ಹೇಳುತ್ತಾರೆ. ಹೊರವೇಷದಲ್ಲಿ ವಿಭೂತಿ ರುದ್ರಾಕ್ಷಿಗಳನ್ನಳವಡಿಸಿಕೊಂಡ ನಂತರ ಅರಿವುಳ್ಳವರಾಗಿರಬೇಕು. ಒಮ್ಮೆ ವಿಭೂತಿಯಿಂದ ಲಲಾಟವನ್ನು ಅಲಂಕರಿಸಿದ ಬಳಿಕ ಮತ್ತೊಂದನ್ನು ಧರಿಸಕೂಡದು. ಪುಣ್ಯಪ್ರದವೂ, ಸರ್ವೈಶ್ವರ್ಯಕಾರಣವೂ ಸರ್ವಸಿದ್ಧಿಪ್ರದವೂ ಆದ ಶ್ರೀ ವಿಭೂತಿಯನ್ನು ಸಾಧಕನು ಅನವರತ ಧರಿಸಿ, ಆ ಮಹಾದೇವನ ಕೃಪೆಗೆ ಪಾತ್ರರಾಗಬೇಕೆನ್ನುತ್ತಾರೆ ಶರಣರು.

ರುದ್ರಾಕ್ಷಿ: ವಿಭೂತಿಯಂತೆ ರುದ್ರಾಕ್ಷಿಯೂ ಸಾಧನಾಮಾರ್ಗದಲ್ಲಿ ಧರಿಸಲ್ಪಡುವ ಒಂದು ಬಹಿರಾವರಣ. ರುದ್ರನ ನೇತ್ರಗಳಿಂದ ಉದುರಿದ ಜಲಬಿಂದುಗಳೇ ಭೂಮಿಗೆ ಬಿದ್ದು, ಅವು ಬೀಜಗಳಾಗಿ ಮೊಳೆತು, ಮರವಾಗಿ, ಅದರಿಂದ ದೊರಕುವ ಕಾಯಿಗಳೇ ರುದ್ರಾಕ್ಷಿಗಳೆಂದು ಹೇಳಲ್ಪಡುತ್ತದೆ.

ವೀರಶೈವಾಮೃತ ಮಹಾಪುರಾಣವು 'ರುದ್ರಾಕ್ಷಂ ಮುಕ್ತಿಮೂಲಂಚ, ರುದ್ರಾಕ್ಷಂ ಜ್ಞಾನಮುಚ್ಯತೆ' ಎಂದು ಹೇಳಿದರೆ, ಬಸವಣ್ಣನವರ ಪ್ರಕಾರ ಅದು 'ಸರ್ವಪಾವನ, ಸರ್ವಸಿದ್ಧಿ'. ಅದು ಶಿವನ ಪಂಚವಕ್ತ್ರಗಳಿಂದಾದುದರಿಂದ 'ಮುಕ್ತಿಪಥಕ್ಕೆಕೊಂಡೊಯ್ಯುವ ಸಾಧನ'. ಚನ್ನಬಸವಣ್ಣನವರು ಕೇವಲ ಹೊರವೇಷದಲ್ಲಿ ವಿಭೂತಿ ರುದ್ರಾಕ್ಷಿಯನಳವಡಿಸಿ ಕೊಂಡರೆ ಸಾಲದು. ಅದನ್ನು ಧರಿಸಿದ ನಂತರ 'ಅರಿವುಳ್ಳವರಾಗಿರಬೇಕು' ಎನ್ನುತ್ತಾರೆ. ರುದ್ರಾಕ್ಷಿಯನ್ನು ಸಂಸ್ಕರಿಸಿ, ಅದರ ಪೂರ್ವಾಶ್ರಯವನ್ನು ಕಳೆದು, ಗುರುಲಿಂಗಜಂಗಮಕ್ಕೆ ಸಮರ್ಪಿಸಿ ಅಭಿನ್ನರೂಪಾಗಿ ಮಾಡಿಕೊಂಡು, ಅವುಗಳನ್ನು ಜ್ಞಾನಪ್ರಕಾಶವೆಂದು ಭಾವಿಸಿ ಮಂತ್ರಧ್ಯಾನಾರೂಢನಾಗಿ ಆಯಾಯಸ್ಥಳಗಳಲ್ಲಿ ಧರಿಸಬೇಕೆನ್ನುತ್ತಾರೆ ಚನ್ನಬಸವಣ್ಣ. ಹೀಗೆ ಒಮ್ಮೆ ಧರಿಸಿದ ನಂತರ ಅವು ಆತನ ಸಾಧನಾಮಾರ್ಗಕ್ಕೆ ವಜ್ರಕವಚಗಳೆನಿಸಿ ಆತನನ್ನು ರಕ್ಷಿಸುತ್ತವೆ. ಇಂತಹ ರುದ್ರಾಕ್ಷಿಯನ್ನು ನಿತ್ಯಧರಿಸಿ ಸಾಧಕನು, ಷಟ್ಸ್ಥಲವನ್ನೇರುವ ಸಾಧನಾಮಾರ್ಗದಲ್ಲಿ ಮುನ್ನಡೆದದ್ದೇ ಆದರೆ, ಆತನನ್ನು 'ಪಶುಪತಿಯ ಹೃತ್ಕಮಲಕರ್ಣಿಕಾಪೀಠದಲ್ಲಿ ಬೆಸುಗೆ ಬಿಡದಿರ್ಪ' ರಿತಿಯಲ್ಲಿ ಒಂದುಗೂಡಿಸುತ್ತವೆ ಎಂದಿದ್ದಾರೆ ಚನ್ನಬಸವಣ್ಣ.

ಮಂತ್ರ : ಮಂತ್ರದ ಹಿರಿಮೆ ಅಪಾರ. ಎಲ್ಲ ಧರ್ಮಗಳೂ ಇದರ ಹಿರಿಮೆಯನ್ನು ಎತ್ತಿಹಿಡಿದಿವೆ. ಯಾವಾಗಲೂ ಮನಸ್ಸಿನಲ್ಲಿ ಅನುಸಂಧಾನ ಮಾಡಲ್ಪಡುವುದರಿಂದ ಇದು ಮಂತ್ರವೆನಿಸಿದೆ. ಅಷ್ಟಾವರಣಗಳಲ್ಲಿ ಕೊನೆಯದಾದ ಮಂತ್ರವು, ಷಟ್ಸ್ಥಲ ಸಾಧನೆಗೆ ಬಹುಮುಖ್ಯವಾದ ಸೋಪಾನ. ಮಾನವರಿಗೆ ದೀಕ್ಷಾಕಲದಲ್ಲಿ ಗುರುಮುಖೇನ ಲಭಿಸುತ್ತದೆ. ಜಪಯೋಗ್ಯವಾದ ಅನೇಕ ಮಂತ್ರಗಳಿದ್ದರೂ ಶರಣರು ಶಿವಮಂತ್ರವೇ ಸಂಜೀವನ ಎಂದಿದ್ದಾರೆ. ಏಕೆಂದರೆ 'ಸಕಲವೇದಂಗಳ ಮೂಲವಿದು. ಸಕಲಶಾಸ್ತ್ರಂಗಳ ಸಾರವಿದು, ಸಕಲಾಗಮಂಗಳ ಅರುಹಿಮು, ಸಕಲಮಂತ್ರಗಳ ಮಾತೆಯಿದು' ಗತಿಮತಿ ಚೈತನ್ಯತ್ಮಕ ವಾದುದು.

ಶರಣರು 'ನಮಃ ಶಿವಾಯ' ಎಂಬ ಪಂಚಾಕ್ಷರೀ ಮಂತ್ರಕ್ಕೆ ಮಹತ್ವಕೊಟ್ಟಿದ್ದಾರೆ. ಇದಕ್ಕೆ 'ಓಂ' ಕಾರ ಸೇರಿದರೆ ಅದು ಷಡಕ್ಷರಮಂತ್ರವೆನಿಸುತ್ತದೆ. ಚನ್ನಬಸವಣ್ಣನವರು

'ಓಂಕಾರದಿಂದತ್ತತ್ತನೂ, ನಾದಬಿಂದುಕಳೆಗಳಿಂದತ್ತನೂ ಆದ ಆ ಕೂಡಲಚನ್ನ ಸಂಗಯ್ಯನನ್ನು 'ಓಂ ನಮಃಶಿವಾಯ' ಎಂದು ಧ್ಯಾನಿಸುವುದಾಗಿ ಹೇಳಿದ್ದಾರೆ. ಏಕೆಂದರೆ ಆ ಶಿವಮಂತ್ರವು. 'ಯಾತ್ರಿಕನ ಯಂತ್ರಮಂತ್ರ ಸಂಬಂಧದಿಂದ ಪಿಶಾಚಗ್ರಸ್ತನಲ್ಲಿದ್ದ ಪಿಶಾಚಿಯು ಪಲಾಯನಪ್ಪತೆರನಂತೆ, ಶ್ರೀಗುರುವಿನ ಶಿವಮಂತ್ರ ಶಿವಲಿಂಗ ಸಂಬಂಧ ದಿಂದ ಮನುಜನ ಮಾಯಾಗ್ರಹವು ತೊಲಗುವುದಯ್ಯಾ' ಎನ್ನುತ್ತಾರೆ. ಇಂತಹ ಮಾಯಾಗ್ರಹನಿವಾರಕವಾದ ಈ ಶಿವಮಂತ್ರವು. ಸಾಧಕನ ಕಾಯಕವನ್ನು ಶುದ್ಧವನ್ನಾಗಿ ಮಾಡುತ್ತದೆ, ಶ್ರೀಗುರುವು ಆತನ ಆತ್ಮದಲ್ಲಿ ಪ್ರಣವ ಪಂಚಾಕ್ಷರಿಯ ನಿರವಿಸಿ ಶಿವಾತ್ಮನ್ನಾಗಿ ಮಾಡಿ. ಆತ್ಮಶುದ್ಧಿ ಮಾಡುತ್ತಾನೆ. ಏಕೆಂದರೆ ಮಾನವನ ಸರ್ವೇಂದ್ರಿಯಗಳೂ ಈ ಶಿವಮಂತ್ರ ನಿರ್ಮಿತವಾದವು.

ಆದುದರಿಂದ ಈ ಪ್ರಣವ ಪಂಚಾಕ್ಷರಿಯೇ, ಪರಮೇಶ್ವರ, ಪರತತ್ತ್ವ, ಪರಮ ಯೋಗ, ಪರಂಜ್ಯೋತಿ, ಪಾಪಾಂತಕ, ಇಂತಹ ಪಾಪಾಂತಕವಾದ ಮಂತ್ರದ 'ನ' ಕಾರದಲ್ಲಿ ದೇವರ ಚರಣವೂ, 'ಮ'ಕಾರದಲ್ಲಿ ಒಡಲೂ, 'ಶಿ' ಕಾರದಲ್ಲಿ ಹಸ್ತವೂ, 'ವಾ' ಕಾರದಲ್ಲಿ ನಾಸಿಕವೂ, 'ಯ' ಕಾರದಲ್ಲಿ ನೇತ್ರವೂ ಅಡಗಿರುವುದಾಗಿ ಅರುಹುತ್ತಾರೆ. ಅಲ್ಲದೆ ಈ ಪಂಚಾಕ್ಷರೀ ಮಂತ್ರದಲ್ಲಿ ಪೃಥ್ವಿ, ಅಪ್ಪು, ಅಗ್ನಿ, ವಾಯು, ಆಕಾಶಗಳು ಹುದುಗಿರುವುದಾಗಿಯೂ, ಬ್ರಹ್ಮ, ವಿಷ್ಣು, ರುದ್ರ, ಶಕ್ತಿ, ಲಿಂಗಗಳು ಏಕೀಭವಿಸಿರುವುದಾಗಿಯೂ ಅರುಹುತ್ತಾರೆ ಚನ್ನಬಸವಣ್ಣ. ಷಡಕ್ಷರ ಹಗೂ ಪಂಚಾಕ್ಷರ ಮಂತ್ರಗಳೆರಡರ ಹಿರಿಮೆಯನ್ನೂ ನಿರೂಪಿಸಿದ್ದಾರೆ. ಇಂತಹ ಈ ಮಹಾಮಂತ್ರವನ್ನು ಸ್ವಾಯತ್ತವ ಮಾಡಿ ಕೊಂಡು, ಮಂತ್ರವನ್ನೇ ಪ್ರಾಣವನ್ನಾಗಿ ಮಾಡಿಕೊಳ್ಳುತ್ತಾನೆ ಸಾಧಕ, ಎಂದಿದ್ದಾರೆ ಚನ್ನಬಸವಣ್ಣನವರು. ಮಂತ್ರದ ಮಹತಿಯನ್ನು ಶರಣರೆಲ್ಲರೂ ಕೊಂಡಾಡಿದ್ದಾರೆ.

ಶರತಣರ ದೃಷ್ಟಿಯಲ್ಲಿ ಈ ಅಷ್ಟಾವರಣಗಳು ಕೇವಲ ಬಹಿರಂಗ ಸಾಧನಗಳಾಗಿ ಉಳಿಯದೆ ಅರಿವಿನ ಸಂಕೇತವಾಗಿ ಬಳಸಲ್ಪಟ್ಟು, ಆ ಮೂಲಕ ಸಾಧಕನ ಜೀವನದ ಸಾರ್ಥಕತೆಗೆ ಸಹಕಾರಿಯಾಗಿವೆ. ಚನ್ನಬಸವಣ್ಣನವರು ಷಟ್ಸ್ಥಲಮಾರ್ಗದಲ್ಲಿ ನಡೆಯಲು ಈ ಅಷ್ಟಾವರಣ ಅವಶ್ಯಕ ಎಂದು ಹೇಳಿ, 'ಗುರುವ ಪ್ರತ್ಯಕ್ಷ ಮಾಡಿಮ ಆ ಗುರುವಿನಿಂದ ಚಿದ್ಘನ ಮಹಾಲಿಂಗವ ಪಡೆದು, ಆ ಲಿಂಗಸಹಿತವಾಗಿ ಭಕ್ತಿ, ಜ್ಞಾನ, ವೈರಾಗ್ಯ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ ಮೊದಲಾದ ಅಷ್ಟಾವರಣಗಳ ನೆರವಿನಿಂದ ಮಾನವನು ದೇವನಾಗಲು ಯತ್ನಿಸಿ ಪರಮಸುಖಿಯಾಗಬೇಕು', ಎಂದು ಇಚ್ಛಿಸಿದ್ದಾರೆ.

ಭಕ್ತನ ಮನವೇ ಲಿಂಗ, ತನ್ಮನದ ಜ್ಞಾನವೇ ಜಂಗಮ
ಆ ಜ್ಞಾನದ ಪರಿಪೂರ್ಣವೇ ಗುರು, ತದ್ಭಕ್ತನೇ ಶೇಷ
ಆ ಜ್ಞಾನದ ಸಾರವೇ ಪಾದೋದಕ
ಆ ಜ್ಞಾನದ ಪ್ರಕಾಶವೇ ವಿಭೂತಿ
ಆ ಮಾಯಾಕರಣಂಗಳ ಮೇಲೆ ಕರೆದ
ಜ್ಞಾನಸಾರಾಮೃತವೃಷ್ಟಿಯೇ ರುದ್ರಾಕ್ಷಿ
ಆ ಭಕ್ತನ ನಾಮವೇ ಮಂತ್ರ
ಇಂತಹ ಭಕ್ತನೇ ಪರಬ್ರಹ್ಮವೆಂದು ಶರಣೆಂದವರೇ ಧನ್ಯರು ನೋಡಾ. [೧೩]

ಇಂತಹ ಧನ್ಯಾತ್ಮರಾಗಬೇಕೆಂಬುದೇ ಶರಣರ ಆಶಯ. ಅಲ್ಲಮಪ್ರಭು, ಬಸವಣ್ಣ, ಚನ್ನಬಸವಣ್ಣ ಮೊದಲಾದ ಶರಣರು ಸಮಾಜದ ಒಳಿತಿಗಾಗಿ ಶ್ರಮಿಸಿದವರು. ಚನ್ನ

ಬಸವಣ್ಣನವರು ಅವಿರಳಜ್ಞಾನಿ, ಷಟ್ಸ್ಥಲಚಕ್ರವರ್ತಿ ಮೊದಲಾಗಿ ಕೀರ್ತಿಸಲ್ಪಟ್ಟರೂ ಅವರ ವಚನಗಳು ಜನಸಾಮಾನ್ಯರ ಬದುಕಿಗೂ ಬೇಕಾದ ತತ್ತ್ವಗಳನ್ನೊಳಗೊಂಡು, ಸಾರ್ವಕಾಲಿಕ ಸತ್ಯವನ್ನು ನಿರೂಪಿಸುವ ಆಧಾರಸ್ತಂಭಗಳಾಗಿ ನಿಂತಿವೆ. ಧಾರ್ಮಿಕ ಸಾಧನೆ ಕೇವಲ ಅಂಧಶ್ರದ್ಧೆಯಾಗದೆ, ವೈಚಾರಿಕ ನೆಲೆಗಟ್ಟಿನ ಮೇಲೆ ನಿಲ್ಲಬೇಕೆಂಬುದೇ ಅವರ ಮುಖ್ಯ ಆಶಯ ಹಾಗೂ ಗುರಿ.

ಅರ್ಚನೆ ಪೂಜನೆ ನೇಮವಲ್ಲ; ಮಂತ್ರ ತಂತ್ರ ನೇಮವಲ್ಲ;
ಧೂಪ ದೀಪಾರತಿ ನೇಮವಲ್ಲ,
ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪದೆ ನೇಮ

ಗ್ರಂಥಸೂಚಿ

೧. ಪ್ರಭುದೇವರ ವಚನಗಳು, ವ. ೧೦೮೧
೨. ಚನ್ನಬಸವಣ್ಣನವರ ವಚನಗಳು, ವ. ೪೦೧
೩. ಚನ್ನಬಸವಣ್ಣನವರ ವಚನಗಳು, ವ. ೧೧೫೩.
೪. ಅದೇ, ವ. ೮೧೦.
೫. ಚನ್ನಬಸವಣ್ಣನವರ ವಚನಗಳು, ವ. ೯೩೨
೬. ಚನ್ನಬಸವಣ್ಣನವರ ವಚನಗಳು, ವ. ೧೬೧
೭. ಚನ್ನಬಸವಣ್ಣನವರ ವಚನಗಳು, ವ. ೨೫೫
೮. ಚನ್ನಬಸವಣ್ಣನವರ ವಚನಗಳು, ವ. ೧೩೮,
೯. ಚನ್ನಬಸವಣ್ಣನವರ ವಚನಗಳು, ವ. ೬೯೫
೧೦. ಅದೇ.ವ. ೭೨೬
೧೧. ಚನ್ನಬಸವಣ್ಣ ನವರ ವಚನಗಳು. ವ. ೨೫೮
೧೨. ಚನ್ನಬಸವನ್ಣ ನವರ, ವಚನಗಳು, ವ. ೫೬
೧೩. ವಚನಗಳಲ್ಲಿ ವೀರಶೈವಧರ್ಮ. ಪು. ೧೯೭ – ೯೮.

❐

* ಚೆನ್ನಬಸವಣ್ಣನವರು ಸಂ. ಜಗದಾಂಬಾ ಮಲ್ಲೇದೇವರು, ಪ್ರ. ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ, ರಾಮಾನುಜ ರಸ್ತೆ, ಮೈಸೂರು–೫೭೦ ೦೦೪, ಪು. ೬೬ ರಿಂದ ೮೧, ೧೯೯೧

ಪಂಚಾಚಾರ

●

ಪ್ರೊ. ಜಿ.ಎಸ್. ರೇಚಣ್ಣ

"ತತ್ತ್ವಶಾಸ್ತ್ರವು ಸತ್ಯವನ್ನು ಅರಸುವ ಒಂದು ಬೌದ್ಧಿಕ ಪ್ರಯತ್ನವಾದರೆ, ಧರ್ಮವು ಸತ್ಯಸಾಕ್ಷಾತ್ಕಾರದ ಸಾಧನವಾಗಿದೆ. ಆತ್ಮೋದ್ಧಾರವು ಧರ್ಮದ ಗುರಿಯಾದರೆ, ಸತ್ಯವನ್ನು ಕಂಡುಕೊಳ್ಳುವುದು ತತ್ತ್ವಶಾಸ್ತ್ರದ ಉದ್ದೇಶವಾಗಿದೆ" ಎಂದಿದ್ದಾರೆ ಡಾ॥ ಎಸ್. ರಾಧಾಕೃಷ್ಣನ್.[೧]

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ತತ್ತ್ವಶಾಸ್ತ್ರವನ್ನು ಧರ್ಮಗಳ ಸಂಬಂಧ ಅನ್ಯೋನ್ಯಾಶ್ರಯವಾಗಿದ್ದು, ಒಂದು ಇನ್ನೊಂದನ್ನು ಶ್ರೀಮಂತಗೊಳಿಸುತ್ತಾ ಬಂದಿವೆ. ತತ್ತ್ವಶಾಸ್ತ್ರವಿಲ್ಲದ ಧರ್ಮ ಬರಡು, ಧರ್ಮವಿಲ್ಲದ ತತ್ತ್ವಶಾಸ್ತ್ರ ಕುರುಡು, ಇವೆರಡೂ ಸಾಮರಸ್ಯದಿಂದಿರುವ ಭಾರತೀಯ ದರ್ಶನಗಳಲ್ಲಿ ವೀರಶೈವ ದರ್ಶನವೂ ಒಂದು.

ವೀರಶೈವದರ್ಶನಕ್ಕೆ ಶಕ್ತಿವಿಶಿಷ್ಟಾದ್ವೈತ, ಶಿವಾದ್ವೈತ, ಷಟ್‌ಸ್ಥಲ ಸಿದ್ಧಾಂತಗಳೆಂಬ ಅಭಿಧಾನಗಳಿವೆ. ವೀರಶೈವಧರ್ಮದ ಪ್ರಾಚೀನತೆಯ ವಿಷಯವಾಗಿ ಇದುವರೆಗೆ ಲಭ್ಯವಾಗಿರುವ ಆಧಾರಗಳಿಂದ ಏನನ್ನೂ ನಿಶ್ಚಿತವಾಗಿ ಹೇಳಲು ಸಾಧ್ಯವಿಲ್ಲ. ವೀರಶೈವ ಧರ್ಮವು ೧೨ನೆಯ ಶತಮಾನದಲ್ಲಿ ಶಿವಶರಣರ ಆಗಮನಕ್ಕಿಂತ ಮೊದಲೇ ಇದ್ದಿರ ಬಹುದಾದರೂ, ಅದು ಬಸವೇಶ್ವರನ ಮುಂದಾಳತ್ವದಲ್ಲಿ ಶರಣರಿಂದ ಪುನರುತ್ಥಾನ ಗೊಂಡು, ವಿಶ್ವಧರ್ಮದ ಲಕ್ಷಣಗಳನ್ನು ಹೊಂದಿ, ಕ್ರಾಂತಿಕಾರಕಸ್ವರೂಪವನ್ನು ಪಡೆದು, ಜನಜೀವನದ ಎಲ್ಲಾ ರಂಗಗಳಲ್ಲಿ ನವಜಾಗೃತಿಯನ್ನುಂಟುಮಾಡುವ ಒಂದು ಪ್ರಬಲ ಶಕ್ತಿಯಾಗಿ ಪರಿಣಮಿಸಿತು. ಶಿವಶರಣರ ವಚನಸಾಹಿತ್ಯ ಈ ನವಜಾಗೃತಿಯ ಮಾಧ್ಯಮವಾಯಿತು. ಆದುದರಿಂದ "ವೀರಶೈವ ಧರ್ಮದ ಆಧಾರಸ್ತಂಭಗಳು"[೨] ಎಂದೂ, "ಕನ್ನಡದ ಉಪನಿಷತ್ತು"[೩] ಗಳು ಎಂದೂ ಬಣ್ಣಿಸಲ್ಪಟ್ಟಿರುವ ವಚನಗಳು ವೀರಶೈವ ಧರ್ಮದ ವೈಶಿಷ್ಟ್ಯವನ್ನು ತಿಳಿಯಲು ಅತ್ಯಂತ ಅಮೂಲ್ಯವಾದ ಮೂಲವೆನ್ನಬಹುದು.

ವೀರಶೈವಧರ್ಮದ ವೈಶಿಷ್ಟ್ಯವು ಷಟ್‌ಸ್ಥಲ, ಅಷ್ಟಾವರಣ ಮತ್ತು ಪಂಚಾಚಾರಗಳಲ್ಲಿ ಸ್ಫುಟವಾಗಿ ಎದ್ದು ಕಾಣುವಂತೆ, ಅದರ ಸೈದ್ಧಾಂತಿಕ ಭಾಗದಲ್ಲಿ ಕಾಣುವುದಿಲ್ಲ. ಷಟ್‌ಸ್ಥಲ, ಅಷ್ಟಾವರಣ ಮತ್ತು ಪಂಚಾಚಾರಗಳು, ವೀಶೈವಧರ್ಮದ ವಿಶ್ವವ್ಯಾಪಕವೂ ಮತ್ತು ವ್ಯಾವಹಾರಿಕವೂ ಆದ ಸರ್ವಸಮಾನತೆ, ಭ್ರಾತೃಭಾವ, ಕಾಯಕನಿಷ್ಠೆ ಮುಂತಾದ ಮೌಲ್ಯಗಳನ್ನು

ಪ್ರಕಟಿಸುವ ಮಾಧ್ಯಮಗಳಾಗಿವೆ. ವೀರಶೈವಧರ್ಮಕ್ಕೆ ಕ್ರಾಂತಿಕಾರಕ ಸ್ವರೂಪವನ್ನು ಕೊಟ್ಟು, ತನ್ಮೂಲಕ ಕೃತಕವಾಗಿದ್ದ ಉಚ್ಚ–ನೀಚ, ಬಡವ–ಬಲ್ಲಿದ, ಸ್ತ್ರೀ–ಪುರುಷ, ಪಂಡಿತ–ಪಾಮರ, ಅಸ್ಪೃಶ್ಯ–ಸ್ಪೃಶ್ಯ ಭಾವನೆಗಳಿಂದ ಮುಕ್ತವಾದ ಆದರ್ಶಸಮಾಜದ ನಿರ್ಮಾಣಕಾರ್ಯದಲ್ಲಿ ಚನ್ನಬಸವಣ್ಣನು ವಹಿಸಿದ ಪಾತ್ರ, ಬಸವಣ್ಣ, ಅಲ್ಲಮಪ್ರಭು ಮತ್ತು ಸಿದ್ಧರಾಮ ಇವರುಗಳ ಪಾತ್ರದಂತೆ ಅಮರವಾದುದು.

ವಚನಕಾರರಲ್ಲಿ ಚನ್ನಬಸವಣ್ಣನ ವ್ಯಕ್ತಿತ್ವ ಬಹುಮುಖವಾದದ್ದು. ವಯಸ್ಸಿನಲ್ಲಿ ಕಿರಿಯನಾದರೂ, ಆತನು ಜ್ಞಾನದಲ್ಲಿ ಹಿರಿಯನಾಗಿದ್ದ.

ಬಸವೇಶ್ವರನಿಂದ ವ್ಯವಸ್ಥಾಪಕನಾಗಿ, ಷಟ್‌ಸ್ಥಲಸಿದ್ಧಾಂತಪ್ರತಿಪಾದಕನಾಗಿ, ಶರಣತತ್ತ್ವ ಪ್ರಚಾರಕನಾಗಿ, ವಚನಕಾರನಾಗಿ ಶರಣರ ಧ್ಯೇಯದ ಸಾರ್ಥಕತೆಗೆ ಶ್ರಮಿಸಿದ ಮಹಾನ್‌ವ್ಯಕ್ತಿ ಚನ್ನಬಸವಣ್ಣ. ಚನ್ನಬಸವಣ್ಣನು ತೀಕ್ಷ್ಣಮತಿ. ಲೋಕದಿಚ್ಛೆಗೆ ನುಡಿಯದ ಮತ್ತು ನಡೆಯದ ಖಂಡಿತವಾದಿ, ಹಾಗೂ ಪಂಡಿತ. ವೀರಶೈವ ಸಿದ್ಧಾಂತಗಳನ್ನು ಕುರಿತು ವಿಮರ್ಶಾತ್ಮಕವಾಗಿಯೂ ಮತ್ತು ಅಧಿಕಾರವಾಣಿಯಿಂದಲೂ, ಸುಲಭವಾಗಿ ಅರ್ಥವಾಗುವಂತೆ ಮಾತನಾಡಬಲ್ಲ ಮೇಧಾವಿಯಾಗಿದ್ದನೆಂಬುದನ್ನು ಆತನ ವಚನಗಳಿಂದಲೇ ನಾವು ಕಂಡುಕೊಳ್ಳಬಹುದು. ಎಂ.ಆರ್.ಶ್ರೀಯವರ ಪ್ರಕಾರ "ಸ್ಪಷ್ಟೋಕ್ತಿ, ಅರ್ಥಗರ್ಭಿತವಾಗಿ ಮಿತಪದಗಳಿಂದ ಕೂಡಿದ ಸೂತ್ರೋಕ್ತಿ–ಇವು ಚನ್ನಬಸವನ ವಚನಗಳ ಲಕ್ಷಣಗಳಾಗಿವೆ. ಆದರೆ ಅವುಗಳಿಗೆ ಅಲ್ಲಮನ ವಚನಗಳಿಗೆ ಬೇಕಾಗಿರುವಂತೆ ವ್ಯಾಖ್ಯಾನಗಳು ಬೇಕಾಗಿಲ್ಲ. ಕೇಳುವ ಭಕ್ತರಿಗೆ ಸುಲಭದಲ್ಲಿ ಅರ್ಥವಾಗಿ, ಚನ್ನಬಸವನು ದೊಡ್ಡ ಮೇಧಾವಿ ಯೆಂದು ಥಟ್ಟನೆ ಹೊಳೆಯುತ್ತದೆ."[೫]

ಶಬ್ದಗಳ ನೈಜಅರ್ಥಗಳನ್ನು ಅರಿತು ಅವುಗಳನ್ನು ಬಳಸಬೇಕ, ಮತ್ತು ಅವುಗಳಂತೆ ಆಚರಿಸಬೇಕು. ಇಲ್ಲದಿದ್ದರೆ ಅದರಿಂದ ಧರ್ಮ, ವ್ಯಕ್ತಿ, ಸಮಾಜಕ್ಕೆ ಹಾನಿಯೆಂಬುದನ್ನು ಮನಗಂಡು, ಪ್ರತಿಯೊಬ್ಬನೂ ಪದಪ್ರಯೋಗಕ್ಕಿಂತ ಮೊದಲೇ ಅದರ ಅರ್ಥವನ್ನು ತಿಳಿದುಕೊಳ್ಳಬೇಕಾದುದು ಅತ್ಯವಶ್ಯಕವೆಂಬುದನ್ನು ಚನ್ನಬಸವಣ್ಣ ಒತ್ತಿ ಹೇಳಿದ್ದಾನೆ.

ಪದಾರ್ಥ ಪದಾರ್ಥವೆಂದೆಂಬಿರಿ:
ಪದವಾವುದು ಅರ್ಥವಾವುದೆಂದರಿಯಿರಿ.
ಪದವೆ ಲಿಂಗ, ಅರ್ಥವೇ ಭಕ್ತ.
ಇದನರೆದು ಪದಾರ್ಥವ ತಂದು ಅರ್ಪಿತವ ಮಾಡಬಲ್ಲಡೆ,
ಕೂಡಿಕೊಂಡಿಪ್ಪ ನಮ್ಮ ಕೂಡಲ ಚನ್ನಸಂಗಮದೇವ. [೬]

ಮಾನವಜೀನದ ಪರಮಗುರಿ ಮುಕ್ತಿಯೆಂಬುದನ್ನು ಎಲ್ಲಾ ಧರ್ಮಗಳೂ ಒಪ್ಪಿವೆ. ಮನುಷ್ಯನ ಪರಮ ಆದರ್ಶವಾದ ಮುಕ್ತಿಯನ್ನು, ವೀರಶೈವ ಪರಿಭಾಷೆಯಲ್ಲಿ 'ಲಿಂಗಾಂಗ ಸಾಮರಸ್ಯ' ವೆಂದೂ, ಮತ್ತು ಅದರ ಸಿದ್ಧಿಗಾಗಿ ಅನುಸರಿಸಬೇಕಾದ ಮಾರ್ಗವನ್ನು 'ಷಟ್‌ಸ್ಥಲಮಾರ್ಗ' ವೆಂದೂ ಕರೆಯಲಾಗಿದೆ. ಜೀವಾತ್ಮನನ್ನು ಪರಮಾತ್ಮನೊಡನೆ ಒಗ್ಗೂಡಿಸುವ ಪಥವೇ ಷಟ್‌ಸ್ಥಲ. ಈ ಸಾಧನಾಮಾರ್ಗದ ವೈಶಿಷ್ಟ್ಯವೇನೆಂದರೆ ಕರ್ಮ, ಭಕ್ತಿ, ಜ್ಞಾನ, ಇಹ–ಪರ, ಪ್ರವೃತ್ತಿ ಇವುಗಳ ಸಮನ್ವಯ. ಪ್ರೊ॥ ಸ.ಸ.ಮಾಳವಾಡರ ಮಾತಿನಲ್ಲಿ : "ಧಾರ್ಮಿಕ ಜೀವನದ ಸಾಧನೆ, ನೈತಿಕ ಜೀವನದ ಪಾವಿತ್ರ್ಯ, ಪರಿಶುದ್ಧವಾದ ಜ್ಞಾನ, ತ್ಯಾಗದ ದೃಷ್ಟಿಯಿಂದ ಕೂಡಿದ ಭೋಗ, ಸರ್ವಾರ್ಪಣ ಭಾವದ ಭಕ್ತಿ, ಮಾನಸಿಕ

ಮಹೊನ್ನತೀಕರಣದಿಂದ ದಿವ್ಯಜೀವನದ ಪಥ–ಇವೆಲ್ಲಾ ಷಟ್‌ಸ್ಥಲ ಸಿದ್ಧಾಂತದಲ್ಲಿ ಸಮಾವೇಶಗೊಂಡಿವೆ."[೫]

ಈ ಪಥದಲ್ಲಿ ಅಂಗನು ಲಿಂಗದಲ್ಲಿ ಬೆರೆಯಲು ಏರಿ ಹೋಗಬೇಕಾದ ಹಂತಗಳನ್ನು ಶೀವಶರಣರು ಗುರುತಿಸಿದ್ದಾರೆ. ಇವೇ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಹಾಗೂ ಐಕ್ಯಸ್ಥಲಗಳು. ಆದುದರಿಂದಲೇ ಈ ಮಾರ್ಗಕ್ಕೆ ಷಟ್‌ಸ್ಥಲವೆಂಬ ಹೆಸರು. ಷಟ್‌ಸ್ಥಲೋಪಾಸನೆಯಲ್ಲಿ ತೊಡಗಿದ ಸಾಧಕನ ಮೇಲೆ ಅನೇಕ ದುಷ್ಟಶಕ್ತಿಗಳು ಧಾಳಿ ಮಾಡುತ್ತವೆ. ಅಂತಹ ಧಾಳಿಯಿಂದ ತನ್ನನ್ನು ರಕ್ಷಿಸಿಕೊಳ್ಳಲು ಸಾಧಕನು ಅಷ್ಟಾವರಣಗಳೆಂಬ ರಕ್ಷಾಕವಚಗಳ ಸಹಾಯವನ್ನು ಪಡೆಯಬೇಕು. ಡಾ॥ ಎಚ್. ತಿಪ್ಪೇರುದ್ರಸ್ವಾಮಿಯವರು ಅಷ್ಟಾವರಣಗಳನ್ನು "ಲೌಕಿಕ ಉಪಹತಿಯ ಬಾಣದೇಟಿನಿಂದ ರಕ್ಷಿಸುವ ವಜ್ರ ಕವಚಗಳು" ಎಂದು ವರ್ಣಿಸಿದ್ದಾರೆ.

ಎಂ.ಆರ್. ಶ್ರೀಯವರ ಅಭಿಪ್ರಾಯದಂತೆ ವಚನಧರ್ಮವು ಒಂದು 'ಸದಾಚಾರ ಸ್ಮೃತಿ.'[೬] ಶರಣರ ಜೀವನದ ವೈಶಿಷ್ಟ್ಯವನ್ನು ಅವರು ಬಳಸುವ 'ಆಚಾರ' ಪದವು ಪ್ರತಿಬಿಂಬಿಸುತ್ತದೆ. ಆದಕಾರಣ 'ಆಚಾರ'ದ ಅರ್ಥವನ್ನು ನಾವು ಅರಿತರೆ ಅವರ ಜೀವನದ ವೈಶಿಷ್ಟ್ಯವನ್ನು ನಾವು ಅರಿತಂತೆಯೇ ಸರಿ. ಶರಣರ ಆಚಾರಕ್ಕೆ ಎರಡು ಮುಖ ಗಳಿವೆ: ಒಂದು ಜ್ಞಾನ ಮತ್ತೊಂದು ಕ್ರಿಯೆ. ಕ್ರಿಯೆಯು ಜ್ಞಾನದ ವ್ಯಕ್ತರೂಪವಾದರೆ, ಜ್ಞಾನವು ಕ್ರಿಯೆಯ ಅವ್ಯಕ್ತರೂಪ. ಇವೆರಡು ಪರಸ್ಪರ ಪೂರಕಗಳು. ಈ ಅಂಶವನ್ನು ಪುಷ್ಟೀಕರಿಸಲು ಚನ್ನಬಸವಣ್ಣ ಈ ಕೆಳಗಿನ ವಚನವೇ ಸಾಕು–

ಕ್ರಿಯೆಯೆ ಜ್ಞಾನ, ಆ ಜ್ಞಾನವೆ ಕ್ರಿಯೆ
ಜ್ಞಾನವೆಂದೆಡೆ ತಿಳಿಯುವುದು.
ಕ್ರಿಯೆ ಎಂದಡೆ ತಿಳಿದಂತೆ ಮಾಡುವುದು.
ಪರಸ್ತ್ರೀಯ ಭೋಗಿಸಬಾರದೆಂಬುದೆ ಜ್ಞಾನ.
ಅದರಂತೆ ಆಚರಿಸದಿದ್ದಡೆ, ಅದೆ ಅಜ್ಞಾನ ನೋಡಾ.
ಕೂಡಲಚನ್ನ ಸಂಗಮದೇವಾ.[೭]

ಶರಣರು ತಿಳಿದಂತೆ ನುಡಿದವರು, ನುಡಿದಂತೆ ನಡೆದವರು, ಮತ್ತು ತಮ್ಮಂತೆಯೇ ಪ್ರತಿಯೊಬ್ಬ ಮನುಷ್ಯನೂ ತಿಳಿದು, ನುಡಿದು ನಡೆದು ಲಿಂಗಗುಣಗಳನ್ನು ಬೆಳೆಸಿಕೊಳ್ಳಬೇಕೆಂಬ ಅಪೇಕ್ಷೆಯಿಂದ ಆಚಾರಗಳನ್ನು ಬೋಧಿಸಿದವರು. ಚನ್ನಬಸವಣ್ಣನಾದರೋ ತಮ್ಮ ವಚನ 'ಐವತ್ತು' [೮] ಆಚಾರಗಳ ದೊಡ್ಡ ಪಟ್ಟಿಯನ್ನೇ ಕೊಟ್ಟಿದ್ದಾರೆ. ಇವುಗಳನ್ನು ನಾವು ಚನ್ನಬಸವಣ್ಣನ ಐವತ್ತು ಕಟ್ಟಳೆಗಳು (Commandments) ಎನ್ನಬಹುದು. ಈ ಕಟ್ಟಳೆಗಳಲ್ಲಿ ಕೆಲವು ವಿಧಿ, ಇನ್ನುಳಿದವುಗಳು ನಿಷೇಧಗಾಳಗಿರುತ್ತವೆ. ಉದಾ: "ಸರ್ವರಿಗೆ ಹಿತವ ಮಾಡುವುದೇ ಹದಿನೈದನೆಯ ಆಚಾರ" ಎಂಬುದು ವಿಧಿಯಾದರೆ, "ಕೆಟ್ಟವರ ಸಹವಾಸ ಮಾಡದಿರುವುದೇ ಒಂಬತ್ತನೆಯ ಆಚಾರ" ಎಂಬುದು ನಿಷೇಧವಾಗಿರುತ್ತದೆ. ಇವೆಲ್ಲವನ್ನು ಪಂಚಾಚಾರದ ಕೆಳಗೆ ವರ್ಗೀಕರಿಸಬಹುದು.

ಚನ್ನಬಸವಣ್ಣನವರ ಪ್ರಕಾರ ಲಿಂಗಾಚಾರ, ಸಮಯಾಚಾರ, ಶಿವಾಚಾರ, ಗಣಾಚಾರ ಮತ್ತುಭೃತ್ಯಾಚಾರ ಇವುಗಳೇ ಪಂಚಾಚಾರಗಳು.[೯] ಇವುಗಳಲ್ಲಿ ಸದಾಚಾರಕ್ಕೆ ಪ್ರತಿಯಾಗಿ ಸಮಯಾಚಾರವನ್ನು ಚೆನ್ನಬಸವಣ್ಣನವರು ಸೇರಿಸಿರುತ್ತಾರೆ.

ಈ ಐದು ಆಚಾರಗಳಿಗೆ ಚನ್ನ ಬಸವಣ್ಣನ ಸಪ್ತಾಚಾರಗಳಾದ ೧. ಕ್ರಿಯಾಚಾರ, ೨. ಜ್ಞಾನಾಚಾರ, ೩. ಭಾವಾಚಾರ, ೪. ಸತ್ಯಾಚಾರ, ೫. ನಿತ್ಯಾಚಾರ ೬. ಧರ್ಮಾಚಾರ ಮತ್ತು ೭. ಸರ್ವಾಚಾರಗಳನ್ನು ಕೂಡಿಸಿದರೆ ಹನ್ನೆರಡು ಆಚಾರಗಳಾಗುತ್ತವೆ. ಆದರೆ ಇಲ್ಲಿ ಪಂಚಾಚಾರಗಳನ್ನು ಮಾತ್ರ ಕುರಿತು ಚರ್ಚಿಸಲಾಗಿದೆ.

ಲಿಂಗಾಚಾರ : ಪಂಚಾಚಾರಗಳಲ್ಲಿ ಮೊದಲನೆಯದು. ಇಲ್ಲಿ ಲಿಂಗವೆಂದರೆ ಇಷ್ಟಲಿಂಗ. ಮೋಕ್ಷಾಕಾಂಕ್ಷಿಯಾದ ಶಿಷ್ಯನಿಗೆ ಗುರು ಅನುಗ್ರಹಿಸಿಕೊಟ್ಟ ಪರಶಿವನ ವ್ಯಕ್ತರೂಪ ಅಥವಾ ಕುರುಹು. ಸಕಲ ಇಷ್ಟಾರ್ಥಸಿದ್ಧಿಗಳು ಇಷ್ಟಲಿಂಗಪೂಜೆಯಿಂದಲೇ ಸಿದ್ಧಿಸುತ್ತವೆ. ಆದ್ದರಿಂದ ವೀರಶೈವನು ಇಷ್ಟಲಿಂಗವನ್ನೇ ಪೂಜಿಸಬೇಕು. "ಲಿಂಗವನ್ನಲ್ಲದೇ ಅನ್ಯವನರಿಯದಿಹುದೇ ಲಿಂಗಾಚಾರ"[೧೦] ಎಂದಿದ್ದಾನೆ ಚನ್ನಬಸವಣ್ಣ. ವಿಗ್ರಹಾದಿ ಸ್ಥಾವರಲಿಂಗಗಳ ಪೂಜೆಯನ್ನು ವೀರಶೈವನು ಮಾಡಬಾರದು. ಲಿಂಗ ಪ್ರಾಣಿಯಾಗಿ, ಲಿಂಗಪ್ರೇಮಿಯಾಗಿ. ಲಿಂಗವೇ ತನ್ನ ಪ್ರಾಣವೆಂದು ತಿಳಿಯುವುದು ಲಿಂಗಾಚಾರ. "ಕರಸ್ಥಲದಲ್ಲಿ ಲಿಂಗವ ಧರಿಸಿ, ಅನ್ಯದೈವಕ್ಕೆ ತಲೆಬಾಗದಾತ ಲಿಂಗ ವಂತನಯ್ಯ"[೧೧] ಎಂದು ಲಿಂಗವಂತನ ಲಕ್ಷಣವನ್ನು ಚನ್ನಬಸವಣ್ಣನು ತಿಳಿಸಿದ್ದಾನೆ. ಗುರು ಜಂಗಮಗಳು ಲಿಂಗರೂಪವೇ.[೯] ಆದಕಾರಣ ಗುರು ಜಂಗಮರಲ್ಲಿಯೂ ಭಕ್ತಿಪುರಸ್ಸರವಾಗಿ ನಡೆದುಕೊಳ್ಳುವುದು ಲಿಂಗಾಚಾರ. "ಅಯ್ಯಾ ಶ್ರೀಗುರು ಕರುಣಿಸಿಕೊಟ್ಟ ಲಿಂಗಜಂಗಮವಲ್ಲದೆ ಅನ್ಯದೈವಂಗಳ ತ್ರಿಕರಣದಲ್ಲಿ ಅರ್ಚಿಸದಿರ್ಪುದೆ ಲಿಂಗಾಚಾರ[೧೨]".

ಲಿಂಗಾಚಾರವು ಅನೇಕ ಮಹತ್ವಪೂರ್ಣವಾದ ಅಂಶಗಳನ್ನು ಒಳಗೊಂಡಿದೆ. ಆದರೆ ತಾತ್ವಿಕವಾಗಿ, ಧಾರ್ಮಿಕವಾಗಿ ಮಹತ್ವಪೂರ್ಣವಾದ ಅಂಶಗಳೆಂದರೆ ಚನ್ನಬಸವಣ್ಣ ಪ್ರತಿಪಾದಿಸಿದ ಏಕೇಶ್ವರವಾದ ಮತ್ತು ಇಷ್ಟಲಿಂಗ ನಿಷ್ಠಾಚಾರ. ಲಿಂಗಾಚಾರವು ಭಕ್ತನಿಗೂ ಮತ್ತು ಶಿವನಿಗೂ ನೇರವಾದ ಸಂಬಂಧವಿರಬೇಕೆಂಬುದನ್ನು ಸೂಚಿಸುತ್ತದೆ.

ಸದಾಚಾರ : ಇದು ನೀತಿಪ್ರದಾನವಾದ ಆಚಾರ. ಆದ್ದರಿಂದ ಇದು ಲಿಂಗಾಚಾರಕ್ಕೆ ಪೂರಕವಾಗಿದೆ. ಲಿಂಗಾಚಾರದಲ್ಲಿ ಸಾಧಕನ ಪ್ರಗತಿ ಸದಾಚಾರವನ್ನು ಅವಲಂಬಿಸಿದೆ. ವೀರಶೈವನು ಸದ್ಗುಣಿಯಾಗಿ, ಸಚ್ಚಾರಿತ್ರ್ಯಭರಿತನಾಗಿರುವುದೇ ಸದಾಚಾರ, ಲೋಕದ ಇಚ್ಛೆಗೆ ತಕ್ಕಂತೆ ನುಡಿ, ಒಳ್ಳೆಯ ನಡೆ ಇರುವವನು ಸದಾಚಾರಿ, ಕಾಯಕದಿಂದ ಗುರು ಲಿಂಗ ಜಂಗಮಕ್ಕೆ ಮಾಡಿ ಸತ್ಯನಾಗಿಹುದೇ ಸಮಯಾಚಾರ[೧೩] ವೆಂದು ಚನ್ನಬಸವಣ್ಣನು ಸದಾಚಾರ ಲಕ್ಷಣವನ್ನು ತಿಳಿಸಿದ್ದಾನೆ. ಸಮಯಾಚಾರವೆಂಬ ಪದವು ಸದಾಚಾರಕ್ಕೆ ಬದಲಾಗಿ ಇಲ್ಲಿ ಉಪಯೋಗಿಸಲ್ಪಟ್ಟಿದೆ. ಈ ವ್ಯಾಖ್ಯೆಯಲ್ಲಿ ಮುಖ್ಯವಾಗಿ ಎರಡು ತತ್ತ್ವಗಳಿವೆ. ೧. ಕಾಯಕತತ್ತ್ವ, ೨. ದಾಸೋಹ, ಶಿವಭಕ್ತ ಒಂದಲ್ಲ ಒಂದು ಕಾಯಕವನ್ನು ಮಾಡಬೇಕು. ಸತ್ಯಶುದ್ಧಕಾಯದಿಂದ ಗಳಿಸಿದ ಹಣದಲ್ಲಿ ಸ್ವಲ್ಪ ಭಾಗ ವನ್ನು ಗುರುಲಿಂಗಜಂಗಮ ಸೇವೆಗೆ (ದಾಸೋಹಕ್ಕೆ) ವಿನಿಯೋಗಿಸಬೇಕು. ಕಾಯಕ ವೆಂದರೆ ಜೀವನೋಪಾಯಕ್ಕೆ ಕೈಗೊಂಡ ವೃತ್ತಿ. ಶಿವಶರಣರ ಪ್ರಕಾರ ಎಲ್ಲಾ ವೃತ್ತಿಗಳು ಗೌರವಯುತವಾದವುಗಳು. ಅವುಗಳಲ್ಲಿ ಹೆಚ್ಚು ಕಡಿಮೆಗಳಿಲ್ಲ. ಗುರು, ಜಂಗಮ ಇವರುಗಳೂ ಕಾಯಕತತ್ತ್ವಪಾಲನೆಯಿಂದ ಹೊರತಾಗಿಲ್ಲ ಎಂಬುದು ಗಮನಾರ್ಹವಾದ ಅಂಶ.

ಆದರೆ ಬಸವಣ್ಣನು ಮತ್ತೊಂದು ಕಡೆ ಹೇಳಿರುವಂತೆ ಭಕ್ತನಾದವನು ಸತ್ಯಶುದ್ಧ ಕಾಯಕವನ್ನು ಮಾಡಬೇಕು. ಮಹೇಶನಾದನು ಸತ್ಯಶುದ್ಧ ಭಿಕ್ಷೆಯ ಮಾಡಿ

ಪರಹಿತಾರ್ಥಿಯಾಗಿರಬೇಕು. "ಭಕ್ತನಾದಡೆ ಸತ್ಯಶುದ್ಧ ಕಾಯಕವ ಮಾಡಿ , ಮಹೇಶ್ವನಾದಡೆ ಸತ್ಯಶುದ್ಧ ಭಿಕ್ಷವ ಬೇಡಿ, ಸಮಸ್ತ ಪ್ರಾಣಿಗಳಲ್ಲಿ ಪಾತ್ರಾಪಾತ್ರವ ತಿಳಿದು ಹಸಿವು, ತೃಷೆ, ಶೀತಕ್ಕೆ ಪರಹಿತಾರ್ಥಿಯಾಗಿರ್ಪುದೆ ಸದಾಚಾರವೆಂಬೆನಯ್ಯಾ".

ಪರಹಿತಸಾಧನೆಗೆ ಮೂಲ ದಯೆ ಅಥವಾ ಅನುಕಂಪೆ. ಆದಕಾರಣ ಸದಾಚಾರಿ ಯಾದವನಲ್ಲ ಸಕಲ ಜೀವಾತ್ಮರ ಬಗ್ಗೆ ಅನುಕಂಪವಿರಬೇಕು.

ಸದಾಚಾರದಲ್ಲಿ ಎಂಟು ಭಾಗಗಳಿವೆ, ಅವುಗಳು: ೧. ಉತ್ಪನ್ನಶೀಲ ೨. ಆಚಾರಶೀಲ, ೩. ಉದ್ಯೋಗಶೀಲ, ೪. ಉತ್ಕುಲಶೀಲ, ೫. ಸಂಬಂಧಶೀಲ ೬. ಪ್ರಸನ್ನಶೀಲ, ೭. ಉತ್ತಮಶೀಲ, ೮. ಜ್ಞಾನಶೀಲ. [೧೪] ಎಂ.ಆರ್. ಶ್ರೀಯವರ ಪ್ರಕಾರ "ಸದಾಚಾರದಲ್ಲಿ ಕಾಯಕಕ್ಕೆ ಹೆಚ್ಚು ಪ್ರಾಶಸ್ತ್ಯವುಂಟು. ಪ್ರತಿಯೊಬ್ಬ ವೀರಶೈವನು ಒಂದಲ್ಲ ಒಂದು ಉದ್ಯೋಗವನ್ನು ಪ್ರಾಮಾಣಿಕವಾಗಿ ಸತ್ಯಶುದ್ಧ ಮನಸ್ಸಿನಿಂದ ಮಾಡತಕ್ಕದ್ದು, ಭಕ್ತನ ವೃತ್ತಿ ಯಾವುದೇ ಇರಲಿ, ಅವನು ಲಿಂಗಧಾರಿಯಾಗಿ ಆಗುವ ಮುನ್ನ ಯಾವ ಜಾತಿ ಅಥವಾ ಕುಲದವನೇ ಆಗಿದ್ದಿರಲಿ, ಅದನ್ನು ಲೆಕ್ಕಿಸದೆ, ಅವರ ಮನೆಯಲ್ಲಿ ಊಟೋಪಚಾರ ಗಳನ್ನು ಮಾಡಬೇಕು, ಸಂಬಂಧಗಳನ್ನು ಬೆಳೆಸಬೇಕು.

ಶಿವಾಚಾರ : ಸಾಧಕ ಅಥವಾ ಭಕ್ತನು, ಅನ್ಯರು ಲಿಂಗಧಾರಿಗಳಾಗುವ ಮುನ್ನ ಯಾವ ಜಾತಿ, ವರ್ಗದವರೆ ಆಗಿದ್ದರೂ, ಅದಾವುದನ್ನೂ ಗಣನೆಗೆ ತೆಗೆದುಕೊಳ್ಳದೆ, ಲಿಂಗಧಾರಿಯಾದ ನಂತರ ಅವರು ಶಿವನ ರೂಪವೆಂದು ತಿಳಿದು. ಅದಕ್ಕನುಗುಣವಾದ ನಡೆನುಡಿಗಳನ್ನು ಹೊಂದಿರುವುದು ಶಿವಾಚಾರ. ದಾಸೀಪುತ್ರನಾಗಲೀ, ವೇಶ್ಯಾಪುತ್ರನಗಲೀ, ಶಿದೀಕ್ಷೆಯಾದ ಬಳಿಕ, ಸಾಕ್ಷಾತ್ ಶಿವನೆಂದು ವಂದಿಸಿ, ಪೂಜಿಸಿ, ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ[೧೫].

ಸಕಲ ಚರಾಚರವಸ್ತುಗಳಲ್ಲಿ ಶಿವನನ್ನು ಕಾಣುವುದು ಶಿವಾಚಾರದ ಮುಖ್ಯಲಕ್ಷಣ. ಭಕ್ತನಲ್ಲಿ ಲಿಂಗಾಚಾರ ಮತ್ತು ಸದಾಚಾರಗಳು ಅಳವಟ್ಟಿದ್ದಲ್ಲಿ ಮಾತ್ರ ಇದು ಸಾಧ್ಯ. ಇದಲ್ಲದೆ ಜಾತಿಭೇದಗಳ ನಿರಾಕರಣೆಗೆ ಶಿವಾಚಾರವು ಒಂದು ದಿವ್ಯ ಸೂತ್ರ. ಲಿಂಗವನ್ನು ಧರಿಸಿ ಲಿಂಗಾಚಾರದಂತೆ ನಡೆದುಕೊಳ್ಳುವವರೆಲ್ಲರೂ ಸಮಾನರೆಂದು, ಮತ್ತು ಒಂದೇ ಕುಲದವರೆಂದು ತಿಳಿದು, ಅವರೊಡನೆ ಉಂಬುದು, ಕೊಡುವುದು, ಕೊಂಬುವುದನ್ನು ಮಾಡಬೇಕು. ಚನ್ನಬಸವಣ್ಣನವರು ಹೇಳಿರುವಂತೆ "ಶಿವಭಕ್ತರಲ್ಲಿ ಜಾತಿ ವರ್ಣಾಶ್ರಮ ವನರಸದೆ ಅವರೊಕ್ಕುದ ಕೊಂಬುದೆ ಶಿವಾಚಾರ".

ಗಣಾಚಾರ : ಶಿವಶರಣರ ಕಾಲದಲ್ಲಿ ವೀರಶೈವಧರ್ಮದ ಏಳಿಗೆಯನ್ನು ಸಹಿಸದ ಕೆಲವರು, ಅದರ ಆಚಾರ ವಿಚಾರಗಳನ್ನು ನಿಂದಿಸುವುದು ಶರಣರ ಗಮನಕ್ಕೆ ಬಂದಿದ್ದಿರ ಬೇಕು. ಆದಕಾರಣ ಅದಕ್ಕೆ ಪ್ರತಿಯಾಗಿ ನಿಂದಕರನ್ನು ಪ್ರತಿಭಟಿಸಿ, ಹಿಮ್ಮೆಟ್ಟಿಸಲು ಶಿವಶರಣರು ಗಣಚಾರವನ್ನು ರೂಪಿಸಿರಬಹುದು.

ಗಣಾಚಾರದ ಪ್ರಕಾರ ಶಿವನಿಂದೆ, ಗುರುನಿಂದೆ, ಶಿವಾಚಾರದ ನಿಂದೆ ಮುಂತಾದವುಗಳನ್ನು ಕೇಳಿದ ಭಕ್ತನು ಆ ಸ್ಥಳವನ್ನು ಬಿಡಬೇಕು. ನಾವು ನಂಬಿ, ನೆಚ್ಚಿ ಆಚರಿಸುತ್ತಿರುವ ಧರ್ಮಕ್ಕೆ ಚ್ಯುತಿ ಬಂದಾಗ, ಪ್ರಾಣದ ಆಸೆಯನ್ನು ಬಿಟ್ಟು ಅದರ ರಕ್ಷಣೆಗಾಗಿ ನಿಲ್ಲಬೇಕು. ಗಣಾಚಾರದ ನಿಜವಾದ ತಿರುಳು ಏನೆಂದರೆ, ಶಿವ, ಅವನ ಭಕ್ತರು ಮತ್ತು ವೀರಶೈವರ ಆಚಾರ ವಿಚಾರಗಳಲ್ಲಿ, ವೀರಶೈವನು ಅಚಲವಾದ ನಿಷ್ಠೆಯನ್ನು ಹೊಂದಿರಬೇಕೆಂಬುದು.

ಭೃತ್ಯಾಚಾರ : ಭೃತ್ಯಾಚಾರವು ಪಂಚಾಚಾರಗಳಲ್ಲಿ ಐದನೆಯದು ಮತ್ತು ಕೊನೆಯದು, ಆದರೂ ಅದು ಮೊದಲು ನಾಲ್ಕು ಆಚಾರಗಳಷ್ಟೇ ಮುಖ್ಯವಾದುದು. ಭೃತ್ಯನೆಂದರೆ 'ಸೇವಕ' ಅಥವಾ 'ದಾಸ'. ಭಕ್ತನು ಸದಾ ನಡೆ–ನುಡಿಗಳಲ್ಲಿಯ–ವಿನಯಗಳನ್ನಿಟ್ಟುಕೊಂಡು. ಗುರು, ಲಿಂಗ, ಜಂಗಮ ಮತು ಸಮಾಜದ ಸೇವೆಯನ್ನು ಮಾಡಬೇಕು. ವ್ಯಕ್ತಿ ಅಧ್ಯಾತ್ಮಸಾಧನೆಯ ಯಾವ ಹಂತದಲ್ಲೇ ಇದ್ದರೂ, ಅವನು ಭೃತ್ಯಾಚಾರಿ ಯಾಗಿರಬೇಕು. ಇಲ್ಲದಿದ್ದರೆ, ಅಹಂಭಾವ ಅಂಕುರಿಸಿ, ಸಾಧಕನಿಗೆ ಲಿಂಗಾಂಗಸಾಮರಸ್ಯ ಸಾಧನೆಗೆ ದೊಡ್ಡ ಅಡ್ಡಿಯಾಗಿ ನಿಲ್ಲುವುದು. ಭಕ್ತನಾಗಲಿ, ಗುರುವಾಗಲಿ, ನಿರಹಂಭಾವದಿಂದ, ದಾಸೋಹಂಭಾವದಿಂದ ಕಿಂಕರನಂತೆ ವರ್ತಿಸಬೇಕು. "ಶಿವಶರಣರೆ ಹಿರಿಯರಾಗಿ, ತಾನೆ ಕಿರಿಯನಾಗಿ, ಭಯಭಕ್ತಿಯಿಂದ ಆಚರಿಸುವುದು ಭೃತ್ಯಾಚಾರ"[೧೬] ಎಂದು ಚನ್ನಬಸವಣ್ಣನು ಭೃತ್ಯಾಚಾರದ ವ್ಯಾಖ್ಯೆಯನ್ನು ಕೊಟ್ಟಿದ್ದಾನೆ.

ಭೃತ್ಯಾಚಾರದ ಪ್ರಕಾರ ಪ್ರತಿಯೊಬ್ಬ ವೀರಶೈವನು ತಾನೊಬ್ಬ ಸಮಾಜಸೇವಕ ನೆಂದರಿತು. ತ್ರಿಕರಣಶುದ್ಧಿಯಿಂದ, ತನು ಮನ ಧನಗಳಿಂದ, ಅರ್ಪಣಾಭಾವದಿಂದ, ಶಿವಶರಣರ ಹಾಗೂ ಸಮಾಜದ ಸೇವೆ ಮಾಡಬೇಕು. ಶಿವಶರಣರು ತಮ್ಮ ಜೀವನದಲ್ಲಿ ಭೃತ್ಯಾಚಾರವನ್ನು ಅಳವಡಿಸಿಕೊಂಡು ವ್ಯಷ್ಟಿ ಮತು ಸಮಷ್ಟಿಗಳೆರಡರ ಉದ್ಧರವನ್ನು ಸಾಧಿಸಿ ವಿಶ್ವಕ್ಕೆ ಮಾರ್ಗದರ್ಶಕರಾಗಿದ್ದಾರೆ.

ಆಸೆಯೆಂಬ ಸ್ತ್ರೀಗೆ ಮನಸೋತವರೆಲ್ಲಾ ಕೆಟ್ಟ ಕೇಡನೇನೆಂಬೆನಯ್ಯಾ
ಯತಿಗಳಾಗಲಿ ವೇದಾಧ್ಯಾಯಿಗಳಾಗಲಿ ವ್ರತಿಗಳಾಗಲಿ
ಸರ್ವ ವಿದ್ಯಾಕಲಾವಂತರಾಗಲಿ, ನರರೊಳಗಾಗಲಿ ಸುರರೊಳಗಾಗಲಿ, ಇವರೆಲ್ಲರ
ಧನವುಳ್ಳವರ ಬಾಗಿಲ ಕಾಯಿಸಿದಳು ನೋಡಾ
ಇವಳಿಗಾರಾರು ಮರುಳಾಗದಿರರು ?
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು ಶರಣರಲ್ಲದವರ
ಕಿವಿಯಹಿಡಿದು ಕುಣಿಸಿದಳು ನೋಡಾ !

–ಸ್ವತಂತ್ರಸಿದ್ಧಲಿಂಗೇಶ್ವರ

ಲಿಂಗವೆನ್ನ ಲಿಂಗೈಕ್ಯವೆನ್ನೆ ಸಂಗವೆನ್ನೆ ನಿಸ್ಸಂಗವೆನ್ನೆ
ಆಯಿತ್ತೆನ್ನೆ ಆಗದೆನ್ನೆ, ನೀನೆನ್ನೆ ನಾನೆನ್ನೆ.
ಚನ್ನಮಲ್ಲಿಕಾರ್ಜುನಯ್ಯಾ,
ಲಿಂಗೈಕ್ಯವಾದ ಬಳಿಕ, ಏನೂ ಎನ್ನೆ.

–ಅಕ್ಕಮಹಾದೇವಿ

ಗ್ರಂಥಸೂಚಿ

1. The Reign of Religion in Contemporary Philosophy,page 5, Dr. S. Radhakrishnan.
2. ವಚನಗಳಲ್ಲಿ ವೀರಶೈವಧರ್ಮ, ಪುಟ 70. ಡಾ॥ ಎಚ್. ತಿಪ್ಪೇರುದ್ರಸ್ವಾಮಿ.
3. ವೀರಶೈವ ಸಾಹಿತ್ಯ, ಪುಟ 10. ಡಾ॥ ಬಿ. ಶಿವಮೂರ್ತಿಶಾಸ್ತ್ರಿ.
4. ವಚನಧರ್ಮಸಾರ, ಪುಟ 67–68. ಎಂ.ಆರ್. ಶ್ರೀ
5. ಚನ್ನಬಸವಣ್ಣನವರ ವಚನಗಳು, ಪುಟ 350.
6. ಬಸವಣ್ಣನವರ ವಚನಸಂಗ್ರಹ, ಪುಟ 15. ಪ್ರೊ ॥ ಸ.ಸ. ಮಾಳವಾಡ.

7. ವಚಧರ್ಮಸಾರ, ಪುಟ 178. ಎಂ.ಆರ್.ಶ್ರೀ.
8. ಚನ್ನಬಸವಣ್ಣನವರ ವಚನಗಳು. ಪುಟ 511.
9. ಚನ್ನಬಸವಣ್ಣನವರ ವಚನಗಳು, ಪುಟ 46–47
10. ವಚನಗಳಲ್ಲಿ ವೀರಶೈವಧರ್ಮ, ಡಾ॥ ಎಚ್. ತಿಪ್ಪೇರುದ್ರಸ್ವಾಮಿ, ಪುಟ 275–276
11. ಚನ್ನಬಸವಣ್ಣನ ವಚನಗಳು, ಪುಟ 44
12. ಅದೇ, ಪುಟ 93
13 ಹರ ತನ್ನ ರೂಪವ ತೋರಬೇಕೆಂದು, ಶ್ರೀಗುರುವಾಗಿ ಮರ್ತ್ಯಕ್ಕೆ ಬಂದು ಮನಸ್ಥಲಕ್ಕೆ ಮಂತ್ರವಾಗಿ..... ಕರಸ್ಥಲಕ್ಕೆ ಲಿಂಗವಾದ...... ಕೂಡಲಚನ್ನಸಂಗನಲ್ಲಿ ಬಸವಣ್ಣನು. ಚನ್ನಬಸವಣ್ಣನವರ ವಚನಗಳು, ಪುಟ. 24
14. ಅದೇ, ಪುಟ 607.
15. ಚನ್ನಬಸವಣ್ಣನವರ ವಚನಗಳು, ವ. 1410.
16. ಪಂಚಾಚಾರ ಪ್ರಕಾಶಿಕೆ, ಪುಟ 48. ವೈ॥ ನಾಗೇಶಶಾಸ್ತ್ರಿ.
17. ವಚನಧರ್ಮಸಾರ, ಪುಟ 214.
18. ಚನ್ನಬಸವಣ್ಣನವರ ವಚನಗಳು, ವ. 110.

* ಚೆನ್ನಬಸವಣ್ಣನವರು ಸಂ. ಜಗದಾಂಬಾ ಮಲ್ಲೇದೇವರು, ಪ್ರ. ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ, ರಾಮಾನುಜ ರಸ್ತೆ, ಮೈಸೂರು–೫೭೦ ೦೦೪, ಪು. ೮೨ ರಿಂದ ೮೮, ೧೯೯೧

ಚೆನ್ನಬಸವಣ್ಣನವರ ವಚನಗಳಲ್ಲಿ ತಾತ್ತ್ವಿಕ ನೆಲೆ

●

ಡಾ. ಬಸವರಾಜ ಸಬರದ

ಅಸಮಾನತೆಯ ವ್ಯವಸ್ಥೆ ಬೆಳೆಯಲು ಕಾರಣವಾಗಿದ್ದ ಅನೇಕ ಸ್ಥಾಪಿತ ನಿಲುವುಗಳನ್ನು ವಚನ ಚಳುವಳಿ ತಾತ್ತ್ವಿಕ ನೆಲೆಗಳಿಂದ ಧಿಕ್ಕರಿಸಿದೆ. ಅಂತಹ ತಾತ್ತ್ವಿಕ ನೆಲೆಗಟ್ಟೊಂದು ಚಿಂತನಶೀಲ ಜನಸಮೂಹದಿಂದ ಹುಟ್ಟಿಕೊಂಡದ್ದು ಭಾರತದ ಸಂದರ್ಭದಲ್ಲಿ ತೀರಾ ಪ್ರಮುಖವೆನಿಸುತ್ತದೆ. ಅನುಭವದ ಅನೇಕ ಅಪರಿಚಿತ ಕ್ಷೇತ್ರಗಳು ಮೊದಲಬಾರಿಗೆ ಇಲ್ಲಿ ಬಿಚ್ಚಿಕೊಂಡದ್ದನ್ನು ಕಾಣಬಹುದಾಗಿದೆ. ವಚನ ಚಳುವಳಿಗೆ ತಾತ್ತ್ವಿಕ ನೆಲೆಗಟ್ಟನ್ನು ಹಾಕುವಲ್ಲಿ ಚೆನ್ನಬಸವಣ್ಣನ ಪಾತ್ರ ಅತ್ಯಂತ ಮಹತ್ವದ್ದಾಗಿದೆ.

ಜಾತಿ–ಲಿಂಗದಂತಹ ಅನೇಕ ಸ್ಥಾಪಿತ ನಿಲುವುಗಳ ಜತೆಗೆ ವಯಸ್ಸಿನಿಂದಲೇ ಶ್ರೇಷ್ಠ ಕವಿತೆಯನ್ನು ಅಳೆಯುವ ಸ್ಥಾಪಿತ ನಿಲುವು ತುಂಬಾ ಅಪಾಯಕಾರಿಯಾದುದು. ವಯಸ್ಸೊಂದನ್ನೇ ಮಾನದಂಡವನ್ನಾಗಿಟ್ಟುಕೊಂಡು ಆ ಮೂಲಕ ಹಿರಿಯರು, ಕಿರಿಯರು ಎಂದು ವಿಂಗಡಿಸುವ ನಿಲುವು ತೀರಾ ಅತಾರ್ಕಿಕವಾದುದು. ವಚನ ಚಳುವಳಿ ಇಂತಹ ಅನೇಕ ಅತಾರ್ಕಿಕ ನಿಲುವುಗಳನ್ನು ಮೊದಲಬಾರಿಗೆ ಪುಡಿ ಮಾಡಿದೆ.

ವಚನ ಚಳುವಳಿಯಲ್ಲಿ ಭಾಗವಹಿಸಿದವರಲ್ಲಿ ಚೆನ್ನಬಸವಣ್ಣ ವಯಸ್ಸಿನಿಂದ ಅತ್ಯಂತ ಕಿರಿಯ ವಚನಕಾರ. ಆದರೆ ವಚನ ಚಳುವಳಿಯಲ್ಲಿ ಚೆನ್ನಬಸವಣ್ಣ ಮಹಾಜ್ಞಾನಿಯಾಗಿ, ಮೇಧಾವಿಯಾಗಿ ಗುರುತಿಸಲ್ಪಟ್ಟ. ವಯಸ್ಸಿನಿಂದ ಕಿರಿಯನಾದವನೊಬ್ಬ ತನ್ನ ಜ್ಞಾನದ ಬಲದಿಂದ ಮಾತ್ರ ಹಿರಿಯ ಸ್ಥಾನವನ್ನು ಪಡೆದದ್ದು ವಚನ ಚಳುವಳಿಯ ಸಂದರ್ಭದಲ್ಲಿ ಮಾತ್ರವೆಂದು ಹೇಳಬಹುದು. ಚಿಂತನೆ–ಆಲೋಚನೆ–ಚರ್ಚೆಗೆ ಹೆಚ್ಚು ಮಹತ್ವ ಕೊಟ್ಟ ಈ ಚಳುವಳಿ ಕರ್ನಾಟಕ ಕಂಡ ನಿಜವಾದ ತಾತ್ತ್ವಿಕ ಚಳುವಳಿಯಾಗಿದೆ. ಸಮಾಜ ವ್ಯವಸ್ಥೆಯ ಅಸಮಾನತೆಯ ಬಗೆಗೆ, ಶತಮಾನಗಳ ನಿರಂತರ ಶೋಷಣೆಯ ಬಗೆಗೆ ಇಲ್ಲಿ ದ್ವೇಷವಿಲ್ಲ, ಚಿಂತನೆಯಿದೆ. ಬರೀ ಪ್ರತಿಭಟನೆಯಿಲ್ಲ, ಸಿದ್ಧಾಂತವಿದೆ. ಹೊರನೋಟದ ಸಪ್ಪಳದ ಜತೆಗೆ ಒಳನೋಟದ ಸೂಕ್ಷ್ಮತೆಗಳೂ ಇಲ್ಲಿವೆ. ಅಂತೆಯೇ ಇಲ್ಲಿ ಅಂಬಿಗರ ಚೌಡಯ್ಯ, ನುಲಿಯ ಚಂದಯ್ಯರ ವಿಚಾರಗಳಿಗೆ ಪ್ರಾಮುಖ್ಯತೆ ಇರುವಂತೆ, ಬಸವಣ್ಣ–ಚೆನ್ನಬಸವಣ್ಣನವರ ವಿಚಾರಗಳಿಗೂ ಪ್ರಾಮುಖ್ಯತೆ ಇದೆ.

ವಯಸ್ಸಿನ ಬೇಧವನ್ನು ಮೊದಲಬಾರಿಗೆ ತಿರಸ್ಕರಿಸಿ. ಕಿರಿಯ ವಯಸ್ಸಿನ ಚೆನ್ನಬಸವಣ್ಣನನ್ನು ಜ್ಞಾನಿಯೆಂದು ಸ್ವೀಕರಿಸಿದ್ದು ಈ ಚಳುವಳಿಯ ವೈಶಿಷ್ಟ್ಯಗಳಲೊಂದಾಗಿದೆ.

ವಚನ ಚಳುವಳಿಯ ತಾತ್ತ್ವಿಕ ನೆಲೆಗಟ್ಟು ನಿಂತಿರುವುದೇ ಜ್ಞಾನ ಮತ್ತು ಕ್ರಿಯೆಗಳ ಸಂಯೋಜನೆಯಲ್ಲಿ. ಒಬ್ಬೊಬ್ಬ ವಚನಕಾರ ಒಂದೊಂದು ಗುಣ ವಿಶಿಷ್ಟತೆಯನ್ನು ಪಡೆದಿದ್ದರೂ ಅವರು ವಚನ ಚಳುವಳಿಯ ತಾತ್ತ್ವಿಕ ನಿಲುವನ್ನು ಮುರಿದು ಹೋಗಲಾರರು.

ಯಾವುದೇ ಒಂದು ಸಿದ್ಧಾಂತ–ತತ್ತ್ವ ಜನಪರವಾಗಬೇಕಾದರೆ ಅದು ಜನರ ಮೂಲಕ ಬರಲಿ ಅಥವಾ ಒಬ್ಬ ವ್ಯಕ್ತಿಯ ಅನುಭವದ ಮೂಲಕ ಬರಲಿ ಅದು ಮುಖ್ಯವಾಗಿ ಜನಹಿತವನ್ನು ತನ್ನ ಒಡಲಲಿಟ್ಟುಕೊಳ್ಳಬೇಕಾಗುತ್ತದೆ. ಸಿದ್ಧಾಂತ ಎಲ್ಲಿಂದ ಬಂತು ಎಂಬುದಕ್ಕಿಂತ ಅದು ಏನು ಹೇಳುತ್ತದೆ, ಅದರ ವ್ಯಾಪ್ತಿಯೆಂತಹದು ಎಂಬುದು ತೀರಾ ಮುಖ್ಯವಾಗುತ್ತದೆ. ಕೇವಲ ಜನಸಮೂಹದಿಂದ ಬಂದ ಮಾತ್ರಕ್ಕೆ ಅದು ಜನಪರವಾಗುತ್ತದೆಂದು ಭಾವಿಸಬೇಕಾಗಿಲ್ಲ. ಶೋಷಣೆಗೊಳಗಾದ ಜನಸಮೂಹಕ್ಕೆ, ಅಸಮಾನತೆಯಡಿಯಲ್ಲಿ ಸಿಕ್ಕು ನರಳುತ್ತಿರುವ ಸಾಮಾನ್ಯ ಜನತೆಗೆ ಸಮಾನತೆಯನ್ನು ಕಲ್ಪಿಸುವ ಆಶಯವೇ ಜನಪರವಾಗುತ್ತದೆ. ಅಂತಹ ಸಂದರ್ಭದಲ್ಲಿ 'ಜನಪರ'ದಲ್ಲಿ ಪ್ರತಿಭಟನೆಯ ಅಂಶ ಇದ್ದೇ ಇರುತ್ತದೆ. ತಾತ್ತ್ವಿಕವಾದ ಪ್ರತಿಭಟನೆಗೆ ಹೆಚ್ಚು ಬೆಲೆಯಿದೆ. ಅಂತಹ ತಾತ್ತ್ವಿಕ ಪ್ರತಿಭಟನೆಯ ಮೂಲಕ ನಿಜವಾದ ಜನಪರ ಆಶಯವನ್ನು ಹೊಂದಿದ ವಚನ ಚಳುವಳಿಯ ಸಂದರ್ಭದಲ್ಲಿ ಚೆನ್ನಬಸವಣ್ಣನಂಥವರು ಸಹಜವಾಗಿ ಮಹತ್ವದ ಸ್ಥಾನ ಪಡೆಯುತ್ತಾರೆ.

ಚೆನ್ನಬಸವಣ್ಣನ ವಚನಗಳಲ್ಲಿ ಅನೇಕ ಹೊಸ ತತ್ತ್ವಗಳು ಪ್ರಕಟವಾಗಿವೆ. ಕರಣ–ಹಸಗೆಯಲ್ಲಿ ದೇಹ–ಮನಸ್ಸು–ಇಂದ್ರಿಯಗಳಿಗೆ ಸಂಬಂಧಿಸಿದ ವಿಚಾರಗಳಿವೆ. ಒಟ್ಟಿನಲ್ಲಿ ಆತ್ಮಸ್ವರೂಪವನ್ನು ತಿಳಿಯುವಲ್ಲಿ, ನೀತಿ–ಅನೀತಿಗಳನ್ನು ಅರಿಯುವಲ್ಲಿ, ಆಧ್ಯಾತ್ಮದ ಪರಿಗಳನ್ನು ಪರಿಶೀಲಿಸುವಲ್ಲಿ, ಬದುಕಿನ ನೆಲೆಗಳನ್ನು ಗುರುತಿಸುವಲ್ಲಿ ಚೆನ್ನಬಸವಣ್ಣನ ತಾತ್ತ್ವಿಕ ವಿಚಾರಗಳು ಹೆಚ್ಚು ಅಧಿಕೃತವೆನಿಸುತ್ತವೆ.

ಸಿದ್ಧಾಂತ ಮತ್ತು ಸಾಹಿತ್ಯ ಎರಡೂ ಬೇರೆ ಬೇರೆಯಾದ ಶಿಸ್ತನ್ನೊಳಗೊಂಡಿವೆ. ಸಿದ್ಧಾಂತವೇ ನೇರವಾಗಿ ಸಾಹಿತ್ಯವಾಗಲಾರದು. ಸಾಹಿತ್ಯವೆಲ್ಲಾ ಸಿದ್ಧಾಂತಗಳಿಂದ ಕೂಡಿರಬೇಕೆಂಬುದೂ ಸರಿಯಲ್ಲ. ಸಿದ್ಧಾಂತ ಲೇಖಕನಲ್ಲಿ ಜೀರ್ಣವಾಗಿ ಅದು ಅನುಭವದ ಮೂಲಕ ಬಂದಾಗ, ಕಲಾತ್ಮಕ ಶಿಸ್ತನ್ನಳವಡಿಸಿಕೊಂಡಾಗ ಮಾತ್ರ ಸಾಹಿತ್ಯವಾಗಲು ಸಾಧ್ಯ. ವಚನ ಚಳುವಳಿಯಲ್ಲಿ ಸಿದ್ಧಾಂತಗಳನ್ನು ಹೇಳುವುದಕ್ಕಾಗಿಯೇ ಸಾಹಿತ್ಯ ಮಾಧ್ಯಮವನ್ನು ಬಳಸಿಕೊಂಡವರಿದ್ದಾರೆ. ಅನುಭವವನ್ನು ಸಾಹಿತ್ಯವಾಗಿಸಿ ಆ ಮೂಲಕ ಸೈದ್ಧಾಂತಿಕ ನೆಲೆಗಟ್ಟನ್ನೊದಗಿಸಿದವರೂ ಇದ್ದಾರೆ. ಬಸವಣ್ಣ–ಅಕ್ಕಮಹಾದೇವಿಯರಲ್ಲಿರುವ ಸಾಹಿತ್ಯಕ ಗುಣ ಚೆನ್ನಬಸವಣ್ಣ–ಅಂಬಿಗರ ಚೌಡಯ್ಯನಂಥವರಲ್ಲಿ ಕಾಣಲಾಗದು. ಚೆನ್ನಬಸವಣ್ಣನ ಸೈದ್ಧಾಂತಿಕ ಶಿಸ್ತು ಅದರ ಆಳವಾದ ನೆಲೆಗಳನ್ನು ಉಳಿದ ವಚನಕಾರರಲ್ಲಿ ಕಾಣಲಾಗದು. ಬಸವಣ್ಣನದು ಸಾಹಿತಿಯ ಮನಸ್ಸಾದರೆ, ಚೆನ್ನಬಸವಣ್ಣನದು ಸಿದ್ಧಾಂತಿಯ ತರ್ಕವೆನಿಸುತ್ತದೆ.

ಬಸವಣ್ಣನ ಸಾಹಿತ್ಯ ಮೌನವಾದ ಕಡೆ ಚೆನ್ನಬಸವಣ್ಣನ ಸಿದ್ಧಾಂತ ಮಾತನಾಡುತ್ತದೆ; ಚೆನ್ನಬಸವಣ್ಣನ ಸಿದ್ಧಾಂತ ಸಪ್ಪೆಯಾದಲ್ಲಿ ಬಸವಣ್ಣನ ಸಾಹಿತ್ಯ ಅರಳಿ ನಿಲ್ಲುತ್ತದೆ. ವಚನ ಚಳುವಳಿಯಲ್ಲಿ ಸಿದ್ಧಾಂತವನ್ನು ಬಿಟ್ಟು ಸಾಹಿತ್ಯವಿರದಿದ್ದರೂ ಅದೆಂದಿಗೂ ಸಾಹಿತ್ಯದ ಶಿಸ್ತಿಗೆ

ಧಕ್ಕೆ ತಂದಿಲ್ಲ. ಇದು ವಚನಕಾರರ ಸಾಮರ್ಥ್ಯ-ಸತ್ವವನ್ನು ಹೇಳುವುದರ ಜತೆಗೆ ವಚನ ಚಳುವಳಿಯ ವೈಶಿಷ್ಟ್ಯತೆಯನ್ನು ಹೇಳುತ್ತದೆ.

ಮನುಷ್ಯನ ಅಂತರಂಗ, ನಡತೆ, ನಡೆ-ನುಡಿ, ಭವಿ-ಭಕ್ತ, ಬದುಕಿನ ಸತ್ಯ, ಮಾಯೆ, ಕಾಯ, ಅಸ್ತಿತ್ವ, ಆಧ್ಯಾತ್ಮ, ಆಚರಣೆ, ಸಾವು, ಮೋಹ, ಮುಕ್ತಿ ಈ ಮುಂತಾದ ಅನೇಕ ವಿಚಾರಗಳಿಗೆ ಸಂಬಂಧಿಸಿದಂತೆ ಚೆನ್ನಬಸವಣ್ಣನ ವಚನಗಳಲ್ಲಿ ತಾತ್ತ್ವಿಕವಾದ ನೆಲೆಗಳಿವೆ. ಚೆನ್ನಬಸವಣ್ಣನ ವಚನಗಳಲ್ಲಿರುವ ಸ್ಪಷ್ಟತೆ, ನಿಖರತೆ, ತಾರ್ಕಿಕತೆ ಇವುಗಳನ್ನೆಲ್ಲ ಗಮನಿಸಿದಾಗ, ಆತನ ಮನಸ್ಸಿನಲ್ಲಿ ಸಾಹಿತಿಗಿಂತ ಸಿದ್ಧಾಂತಿಯೇ ತೀವ್ರವಾಗಿ ನೆಲೆಯೂರಿರುವುದು ವಚನಗಳ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಆದರೆ ವಚನಗಳು ಅಂದಿನ ವಿಷಮ ವ್ಯವಸ್ಥೆಯಲ್ಲರಳಿದವುಗಳಾಗಿರುವುದರಿಂದ ಅವುಗಳ ಮೌಲ್ಯನಿರ್ಣಯವನ್ನು ಅಂದಿನ ಸಾಮಾಜಿಕ-ಧಾರ್ಮಿಕ ಸಂದರ್ಭಗಳ ಹಿನ್ನೆಲೆಯಲ್ಲಿಯೇ ಮಾಡ ಬೇಕಾಗುತ್ತದೆ.

ವಚನ ಚಳುವಳಿಯ ಸಂದರ್ಭದಲ್ಲಿ ಚೆನ್ನಬಸವಣ್ಣ ಅನೇಕ ಸಿದ್ಧಾಂತಗಳನ್ನು ಕಟ್ಟಿಕೊಟ್ಟರೂ ತಾನೇ ಇದಕ್ಕೆ ಕಾರಣನೆಂಬ ಧಾರ್ಷ್ಟ್ಯತೆಯಿಲ್ಲ. ತನ್ನಿಂದಲೇ ಆಯಿತೆಂಬ ಹಮ್ಮು-ಬಿಮ್ಮುಗಳಿಲ್ಲ. ತಾನು ಕಿರಿಯನೆಂಬ ಕೈಂಕರ್ಯತೆಯ ಅಳುಕೂ ಇಲ್ಲ. ಇವೆಲ್ಲವನ್ನೂ ಮೀರಿದ ವಿನಯ-ನಮ್ರತೆ-ಸರಳತೆಗಳನ್ನು ಆತನ ಬದುಕಿನಲ್ಲಿ ಕಾಣಲು ಸಾಧ್ಯ. ತಾನು ದೊಡ್ಡ ಜ್ಞಾನಿಯಾಗಿದ್ದರೂ ಸ್ವತಃ ಪ್ರಭು-ಬಸವಣ್ಣ ಮುಂತಾದ ಹಿರಿಯರು ತನ್ನನ್ನು ಕೊಂಡಾಡಿದರೂ ನಮೋ ನಮೋ ಎಂದು ನಮಿಸಿದರೂ ಚೆನ್ನಬಸವಣ್ಣ ಎಂದೂ ಮೇರೆ ಮೀರಿದವನಲ್ಲ. ಬಸವಣ್ಣನೇ ತನಗೆ ಗುರುವೆಂದು, ಅಲ್ಲಮಪ್ರಭುವೇ ತನಗೆ ಮಾರ್ಗದರ್ಶಿಯೆಂದು ಅನೇಕ ಕಡೆ ಹೇಳಿಕೊಂಡಿದ್ದಾನೆ. ಕಿರಿಯನಾದ ತನಗೆ ಹಿರಿಯಸ್ಥಾನ ದೊರೆತಾಕ್ಷಣ ಆತನ ವ್ಯಕ್ತಿತ್ವದಲ್ಲಿ ಯಾವ ಬದಲಾವಣೆಯೂ ಕಾಣುವುದಿಲ್ಲ. ಹಾಗೆಂದು ಹಿರಿಯರು ಹೇಳಿದ್ದನ್ನೆಲ್ಲ ಆತ ಕಣ್ಣು-ಕಿವಿ ಮುಚ್ಚಿಕೊಂಡು ಕೇಳುವುದಿಲ್ಲ. ತನ್ನ ಸಿದ್ಧಾಂತಗಳೊಂದಿಗೆ ರಾಜಿ ಮಾಡಿಕೊಳ್ಳದೆಯೇ ಹಿರಿಯರನ್ನು ಗೌರವಿಸುವ ಪರಿ ಚೆನ್ನಬಸವಣ್ಣನ ವ್ಯಕ್ತಿ ವೈಶಿಷ್ಟ್ಯತೆಗೆ ಸಾಕ್ಷಿಯಾಗಿದೆ.

ಗುರು-ಲಿಂಗ-ಅರಿವುಗಳಿಗೆ ಸಂಬಂಧಿಸಿದಂತೆ ಪ್ರಭು ಚೆನ್ನಬಸವಣ್ಣನೊಡನೆ ನಡೆಸುವ ಚರ್ಚೆ ತುಂಬಾ ಅರ್ಥಪೂರ್ಣವಾಗಿದೆ. ಪ್ರಭುವಿನ ವಿಚಾರವನ್ನು ಒಪ್ಪದ ಚೆನ್ನಬಸವಣ್ಣ ಅದನ್ನು ಮಂಡಿಸುವ ರೀತಿ, ಬೆಂಬಲಿಸುವ ಪರಿ ಅತ್ಯಂತ ಖಚಿತವಾಗಿದೆ.

"ಲಿಂಗವಿಡಿದು ಅರಿದರಿವು ಅರಿವಲ್ಲ. ಗುರುವಿಡಿದು ಅರಿದರಿವು ಅರಿವಲ್ಲ. ಗುರುವಿಡಿದು ಲಿಂಗ ಉಂಟೆಂಬುದು ಕಲ್ಪಿತ. ತನ್ನಿಂದ ತಾನಹುದಲ್ಲದೆ, ಗುಹೇಶ್ವರಲಿಂಗದಲ್ಲು ಹಂಗು ಹರಿಯದನ್ನಕ್ಕರ ತಾನಾಗಬಾರದು ಕಾಣಾ ಚೆನ್ನ ಬಸವಣ್ಣಾ!"[೧]

"ಗುರುವಿಲ್ಲದ ಲಿಂಗ ನಿನಗೆಲ್ಲಿಯದಯ್ಯಾ? ಕೊಂದೆ ನಿಮ್ಮಯ್ಯನ, ಕೊಂಡೆ ಲಿಂಗವನು! ಅಂದು ನಿನಗೆ ಅನಿಮಿಷ ಗುರುವಾದುದನರಿಯಾ! ಕೂಡಲ ಚೆನ್ನಸಂಗಯ್ಯನಲ್ಲಿ ಮೂರು ಲೋಕವರಿಯೆ ಅಲ್ಲಮ ವೃತಗೇಡಿ."[೨]

ಇಲ್ಲಿ ಮುಖ್ಯವಾಗಿ ಎರಡು ತತ್ವಗಳಿವೆ. ಎಲ್ಲ ಹಂಗುದೊರೆದು ಬೆಳೆಯುವ ಸ್ವತಂತ್ರಮಾರ್ಗವನ್ನು ಪ್ರಭು ಹೇಳಿದರೆ, ಕಾರ್ಯ-ಕಾರಣ ಸಂಬಂಧದ ನೆಲೆಯಲ್ಲಿ ಬೆಳಗುವ ಪರಿಯನ್ನು ಚೆನ್ನಬಸವಣ್ಣ ತಿಳಿಸುತ್ತಾನೆ. 'ಹಂಗು ಹರಿಯುವ' ವಿಷಯವೇ ಇಲ್ಲಿಯ ಮುಖ್ಯ ಚರ್ಚೆಗೆ ಕಾರಣವಾಗಿದೆ. 'ಗುರುವಿಲ್ಲದ ಲಿಂಗ ನಿನಗೆಲ್ಲಿಯದಯ್ಯ?' ಎಂದು

ಕೇಳುವ ಚೆನ್ನಬಸವಣ್ಣನ ಪ್ರಶ್ನೆಯಲ್ಲಿಯೇ, ನೀನು ಗುರುವನ್ನು ಕೊಂದ ವ್ರತಗೇಡಿಯೆಂಬ ತೀವ್ರವಾದ ಮೊನಚಿದೆ. ಅನುಭವಮಂಟಪದಲ್ಲಿ ಅತ್ಯಂತ ಉನ್ನತಸ್ಥಾನದಲ್ಲಿ ನಿಂತಿರುವ ಅಲ್ಲಮಪ್ರಭುವಿನೊಡನೆ, ಚೆನ್ನಬಸವಣ್ಣನಂತಹ ವಚನಕಾರರು ನಡೆಸುವ ಮುಕ್ತ ಸಂವಾದವೇ ವಚನಚಳುವಳಿಯ ಜನಪರ ನಿಲುವಿಗೆ ಸಾಕ್ಷಿಯಾಗಿದೆ. ಅಲ್ಲಮನನ್ನು 'ವ್ರತಗೇಡಿ' ಎಂದು ಚೆನ್ನಬಸವಣ್ಣ ಕರೆಯುವುದು, ಅಲ್ಲಮ ಅದನ್ನು ನಗುತ್ತಲೇ ಸ್ವೀಕರಿಸಿ ಸಂವಾದವನ್ನು ಮುಂದುವರೆಸುವುದು ನಿಜಕ್ಕೂ ಆ ಚಳುವಳಿಯ ತಾತ್ತ್ವಿಕ ಬೆಳವಣಿಗೆಗೆ ಸಹಾಯಕವಾಗಿದೆ.

"ಗುರುವಿನ ಪ್ರಾಣಲಿಂಗದಲ್ಲಿ ಲೀಯವಾದ ಬಳಿಕ ಆ ಲಿಂಗವೆನ್ನ ಕರಸ್ಥಲಕ್ಕೆ ಬಂದಿತ್ತು ನೋಡಾ! ಇದ್ದಾನೆ ನೋಡಾ, ಎನ್ನ ಗುರುವು ಅನುಮಿಷನೆನ್ನ ಕರಸ್ಥಲದಲ್ಲಿ ಇದ್ದಾನೆ ನೋಡಾ, ಎನ್ನ ಗುರು ಅನಿಮಿಷನೆನ್ನ ಜ್ಞಾನದೊಳಗೆ ಇದ್ದಾನೆ ನೋಡಾ, ಎನ್ನ ಗುರುವಿನ ಗುರು ಬಸವಣ್ಣನೆನ್ನ ಕಂಗಳ ಮುಂದೆ! ಗುಹೇಶ್ವರ ಸಾಕ್ಷಿಯಾಗಿ ಎನ್ನಮೇಲೆ ಗುರುದ್ರೋಹವಿಲ್ಲ ಕಾಣಾ ಚೆನ್ನಬಸವಣ್ಣ."[೩]

"ನೋಡುವುದೊಂದು ನೋಡಿಸಿಕೊಂಬುದೊಂದು. ಇನ್ನೂ ನಿನ್ನಲ್ಲಿ ಎರಡುಂಟಲ್ಲಾ! ಕರಸ್ಥಲದಲ್ಲಿ ಒಂದು, ಮನಸ್ಥಲದಲ್ಲಿ ಒಂದು. ಇನ್ನೂ ನಿನ್ನಲ್ಲಿ ಎರಡುಂಟಲ್ಲಾ! ಕೂಡಲ ಚೆನ್ನಸಂಗಯ್ಯನಲ್ಲಿ ಗುಹೇಶ್ವರನೆಂಬ ಲಿಂಗವು ನಿನಗೆಂತು ಸಾಧ್ಯವಾಯಿತ್ತು ಹೇಳಾ ಪ್ರಭುವೆ?"[೪]

ಇಂತಹ ನಿರ್ಭಿಡೆಯ, ಮುಖಾಮುಖಿಯಾದ, ಆಳವಾದ ತಾತ್ತ್ವಿಕ ನಿಲುವುಗಳಿಂದ ಕೂಡಿದ ಮುಕ್ತ ಚರ್ಚೆ ವಚನ ಚಳುವಳಿಯ ಸಂದರ್ಭದಲ್ಲಿ ಸಾಧ್ಯವಾದದ್ದು ಕರ್ನಾಟಕದ ಸಂಸ್ಕೃತಿಗೆ ಸಂಬಂಧಿಸಿದಂತೆ ನಿಜಕ್ಕೂ ಹೆಮ್ಮೆಯನ್ನುಂಟುಮಾಡುತ್ತದೆ. ಗುರುವಿನ ಜೀವ-ದೇಹಗಳಿಗೆ ಪ್ರಾಮುಖ್ಯತೆ ನೀಡದ ಪ್ರಭು ಆ ಗುರುವನ್ನು ತನ್ನ ಕರಸ್ಥಲದಲ್ಲಿ, ಜ್ಞಾನದಲ್ಲಿ, ಬಸವಣ್ಣನಲ್ಲಿ ಕಾಣುವ ಪರಿಯೇ ಅತ್ಯಂತ ವೈಜ್ಞಾನಿಕವಾಗಿದೆ. ಸತ್ಯದ ನಿರಂತರತೆಯನ್ನು, ಸಾಕ್ಷಾತ್ಕಾರದ ಒಳನೋಟಗಳನ್ನು ಚಲನಶೀಲ ಕ್ರಿಯೆಗಳಲ್ಲಿ ಕಂಡರಿಸಿ ಅದನ್ನು ಅನುಭಾವದ ನೆಲೆಯಲ್ಲಿ ವಿಶ್ಲೇಷಿಸುವ ಪ್ರಭುವಿನ ನುಡಿಗಳಲ್ಲಿ ಆಳವಾದ ತತ್ತ್ವಗಳಿದ್ದರೆ, ಅನುಭಾವದ ನೆಲೆಯನ್ನು ಮೂಲಭೂತವಾಗಿ ಪ್ರಶ್ನಿಸುತ್ತ, ಕಾರ್ಯ-ಕಾರಣಗಳ ನಡುವೆ ಸಂಘರ್ಷವನ್ನೇರ್ಪಡಿಸುತ್ತ, ತತ್ತ್ವದ ನೆಲೆಯನ್ನು ಶೋಧಿಸುವ ಗುಣ ಚೆನ್ನಬಸವಣ್ಣನಲ್ಲಿದೆ. ಹೊರನೋಟಕ್ಕೆ ಪ್ರಭು-ಚೆನ್ನಬಸವಣ್ಣ ವಾದ ಮಾಡುತ್ತಿದ್ದಾರೆಂದೆನಿಸಿದರೂ ಅದು ಒಣ ವಾದವಾಗಿರದೆ ಸೈದ್ಧಾಂತಿಕ ಸಂವಾದವಾಗಿದೆ. ಕೇವಲ ತರ್ಕವಾಗಿರದೆ, ತಾತ್ತ್ವಿಕ ನೆಲೆಯ ಬೆಳವಣಿಗೆಯಾಗಿದೆ.

ಕರಸ್ಥಲದಿಂದ ಮನಸ್ಥಲಕ್ಕೆ, ಮನಸ್ಥಲದಿಂದ ಮಹಾಸ್ಥಲಕ್ಕೆ, ಮಹಾಸ್ಥಲವೇ ಸರ್ವಾಂಗವೇದ್ಯವಾದ ಬಳಿಕ ಭಿನ್ನಭಾವವೆಂಬುದಿಲ್ಲವೆಂದು ಪ್ರಭು ಹೇಳಿದರೆ, ಮುಟ್ಟದ ಮುನ್ನ ಗುರುಲಿಂಗ-ಜಂಗಮ-ಪ್ರಸಾದವಿಲ್ಲವೆಂದಾಯಿತಲ್ಲಾ ಎಂದು ಚೆನ್ನಬಸವಣ್ಣ ಕೇಳುತ್ತಾನೆ. ಆಗ ಪ್ರಭು "ಮನ ಮನ ಬೆರೆಸಿದನು ಭಾವ ಘನಕ್ಕೆ ಘನ ಒಂದಾಯಿತ್ತು ಗುಹೇಶ್ವರಲಿಂಗದಲ್ಲಿ ಚೆನ್ನಬಸವಣ್ಣನಿಂದ ಸುಖಿಯಾದೆನು" ಎಂದು ಹೇಳಿದಾಗ ಚೆನ್ನಬಸವಣ್ಣ ಪ್ರಭುದೇವರ ನಿಲುವನ್ನು ಒಪ್ಪಿಕೊಳ್ಳುತ್ತಾನೆ.

ಆಗ ಆತ ಹೇಳುವ ನುಡಿ ಗಮನಾರ್ಹವಾಗಿದೆ:

"ಅರಿವಿನ ತೃಪ್ತಿಗೆ ಅನುಭಾವವಾಶ್ರಯ. ಲಿಂಗದ ಅನುಭಾವದಿಂದ ನಿಮ್ಮ ಕಂಡೆನು. ನಿಮ್ಮ ಕಂಡೆನ್ನ ಮರೆದೆ ಕಾಣಾ ಪ್ರಭುವೆ, ಕೂಡಲ ಚೆನ್ನಸಂಗಮದೇವಾ."[೫]

ಚೆನ್ನಬಸವಣ್ಣನ ಈ ನುಡಿಯನ್ನು ಕೇಳಿ ಪ್ರಭು ಸಂತುಷ್ಟನಾಗಿ, ಇಂತಹ ಒಂದು ಸಂವಾದದ ಹುಟ್ಟಿಗೆ ಕಾರಣನಾದ ಚೆನ್ನಬಸವಣ್ಣನಿಗೆ ಕೃತಜ್ಞತೆ ಹೇಳುತ್ತಾನೆ. ಇಂತಹ ಮುಕ್ತ ಚರ್ಚೆ ಕರ್ಪೂರದ ಕರಡಗೆಯನ್ನು ಘಾಸಿ ಮಾಡಿದಂತಾಯಿತ್ತೆಂದು ವಿವರಿಸುತ್ತಾನೆ. ಲಿಂಗಾನುಭವಿಗಳ ಸಂಗದಿಂದ ಕಣ್ದೆರೆದನು ಎಂದು ಸ್ಪಷ್ಟಪಡಿಸುತ್ತಾನೆ.

ಹೀಗೆ ಒಬ್ಬರನ್ನೊಬ್ಬರು ತಿಳಿದುಕೊಳ್ಳುವ, ತಿಳಿದುಕೊಂಡಿದ್ದನ್ನು ಒರೆಗೆ ಹಚ್ಚುವ, ಹಾಗೆ ನಡೆದ ಸಂವಾದದಲ್ಲಿ ಬಂದ ತಾತ್ತ್ವಿಕ ಕೆನೆಯನ್ನು ಸಮನಾಗಿ ಸ್ವೀಕರಿಸುವ, ಹಾಗೆ ಸ್ವೀಕರಿಸಿದ್ದನ್ನು ಶಿಸ್ತಿನಿಂದ ಪ್ರಸಾರಗೊಳಿಸುವ ವಚನ ಚಳುವಳಿಯ ಕಲಾಪಗಳು ಇಂದಿಗೂ ಪ್ರಸ್ತುತವಾಗಿವೆ. ಪ್ರತಿಯೊಬ್ಬ ವಚನಕಾರರೂ ಅಲ್ಲಿ ತಮ್ಮ ಅನುಭವದ ಮೂಲಕವೇ ತಾತ್ತ್ವಿಕ ನೆಲೆಗಟ್ಟನ್ನು ಬೆಳೆಸುತ್ತಾರೆ.

ಚೆನ್ನಬಸವಣ್ಣ ಎತ್ತುವ ತಾತ್ತ್ವಿಕ ಪ್ರಶ್ನೆಗಳು, ತರ್ಕಬದ್ಧ ನುಡಿಗಳು ಚಳುವಳಿ ಒಮ್ಮುಖದತ್ತ ವಾಲದೆ ಸಮಗ್ರವಾಗಿ ಬೆಳೆದು ನಿಲ್ಲಲು ಸಹಕಾರಿಯಾಗುತ್ತವೆ. ವಚನ ಚಳುವಳಿಯ ಅನೇಕ ಸಂದರ್ಭಗಳಲ್ಲಿ ಚೆನ್ನಬಸವಣ್ಣ ತಾತ್ತ್ವಿಕ ವಿಷಯಗಳಿಗೆ ಸಂಬಂಧಿಸಿದಂತೆ ಬಹುಮುಖ್ಯವಾದ ಪಾತ್ರವಹಿಸುತ್ತಾನೆ.

ಸಿದ್ಧರಾಮನಿಗೆ ಲಿಂಗದೀಕ್ಷೆಯ ಅಗತ್ಯವನ್ನು ಕುರಿತು ನಡೆದ ಚರ್ಚೆಯಲ್ಲಿ, ಪ್ರಭು ತುಂಬಾ ವಿನೋದದ ಶೈಲಿಯಲ್ಲಿಯೇ ಚರ್ಚೆಯನ್ನು ಪ್ರಾರಂಭಿಸಿ ಪರಿಸ್ಥಿತಿ ಬಿಗಡಾಯಿಸಿದಾಗ, ಚೆನ್ನಬಸವಣ್ಣನ ಮೇಲೆ ಹಾಕಿ ಕುಳಿತುಬಿಡುತ್ತಾನೆ. ಆಗ ಚೆನ್ನಬಸವಣ್ಣ ಆ ಸಂದರ್ಭ ವನ್ನೆದುರಿಸುವ ಪರಿ ಕೇವಲ ತಾರ್ಕಿಕವಾಗಿರದೆ ತಾತ್ತ್ವಿಕವಾಗಿದೆ. ಬರಿ ಪ್ರಶ್ನೆಗಾಗಿ ಇರುವ ಉತ್ತರವಾಗಿರದೆ ಸೈದ್ಧಾಂತಿಕ ಬದ್ಧತೆಗೆ ಸಂಬಂಧಿಸಿದ ನಿಲುವಾಗಿದೆ.

"ನಿಮ್ಮನರಿದ ಶರಣಂಗೆ ಶಿವಪೂಜೆಯ ಹಂಗೇಕೊ? ಮಿಸುನಿಯ ಚಿನ್ನಕ್ಕೆ ಒರೆಗಲ್ಲ ಹಂಗೇಕೊ? ಆಕಾಶವನಡರುವಂಗೆ ಅಟ್ಟಗೋಲ ಹಂಗೇಕೊ? ಸಮುದ್ರವ ದಾಟುವಂಗೆ ಹರಿಗೋಲ ಹಂಗೇಕೊ? ಗುಹೇಶ್ವರಲಿಂಗದಲ್ಲಿ ನಿಸ್ಸೀಮ ಸಿದ್ಧರಾಮಯ್ಯಂಗೆ ಲಿಂಗವೆಂದೇನು ಹೇಳು ಚೆನ್ನಬಸವಣ್ಣ?"[೬] ಎಂದು ಪ್ರಭು ಪ್ರಶ್ನೆಗಳ ಸುರಿಮಳೆಗಳನ್ನೇ ಸುರಿಸಿದಾದ ಚೆನ್ನಬಸವಣ್ಣ ಕೊಡುವ ಉತ್ತರ ತಾರ್ಕಿಕ ರೀತಿಯಲ್ಲಿ ತಾತ್ತ್ವಿಕ ನೆಲೆಯನ್ನೊಳಗೊಂಡಿದೆ.

"ಆಕಾಶದಲ್ಲಾಡುವ ಪಟಕ್ಕಾದರು ಮೂಲ ಸೂತ್ರವಿರಬೇಕು. ಕಲಿಯಾದಡು ಕಜ್ಜವಿಲ್ಲದೆಯಾಗದು. ಭೂಮಿ ಇಲ್ಲದೆ ಬಂಡಿ ನಡೆವುದೆ? ಅಂಗಕ್ಕೆ ಲಿಂಗಸಂಗವಲ್ಲದೆ ನಿಸ್ಸಂಗವಾಗಬಾರದು. ಪಟವಾಕಾಶವನಡರಿತ್ತೆಂದೆಡೆ ಪಟ ಸೂತ್ರದ ಸಂಚ ಕೆಳಗಿಪ್ಪುದು ನೋಡಾ! ವ್ಯೋಮದಲ್ಲಿ ಚರಿಸುವ ಸೋಮ ಸೂರ್ಯರೆಂದಡೆ ಹೇಮಗಿರಿಯ ಸಂಚ ತಪ್ಪದು ನೋಡಾ! ಭೂಮಿಯನೊಲ್ಲದೆ ಗಗನಕ್ಕೆ ಹಾರಿದವಂಗೆ ಆ ವ್ಯೋಮದಲ್ಲಿ ನಿಲುವುದಕ್ಕೆ ಒಂದೆಡೆಯುಂಟೆ? ಮಣ್ಣ ಮರನನುಳಿದು ತೋರುವ ಹಣ್ಣು ರುಚಿಯುಂಟೆ? ನಮ್ಮ ಕೂಡಲ ಚೆನ್ನಸಂಗನ ಶರಣರೊಳಗಿರ್ದು ಸೀಮೆಯ ಮೀರಿದ ನಿಸ್ಸೀಮನು ಸಿದ್ಧರಾಮಯ್ಯನೆಂಬ ಮಾತು ಅಂತಿರಲಯ್ಯಾ ಪ್ರಭುವೆ."[೭]

ಚೆನ್ನಬಸವಣ್ಣ ತನ್ನ ಈ ವಚನದಲ್ಲಿ ಕ್ರಮಬದ್ಧವಾದ ವಿವರಣೆ ನೀಡುತ್ತಾ ಹೋಗುತ್ತಾನೆ. ಪಟ ಆಕಾಶದಲ್ಲಾಡುತ್ತಿದ್ದರೂ ಅದರ ಸೂತ್ರ ಮಾತ್ರ ಕೆಳಗಡೆ ಎನ್ನುತ್ತಾನೆ. ಈ ಮಾತಿನ ಅರ್ಥ ಬಿಡಿಸುತ್ತಾ ಹೋದಂತೆ ಗಹನವಾಗುತ್ತದೆ. ಎದ್ದು ಕಾಣುವುದು ಪಟ, ಎದ್ದು

ಕಾಣದೇ ಇರುವುದು ಸೂತ್ರ. ಮೇಲೆ ಹಾರುವ ಪಟ ಮೇಲೇರುವ ಯಶಸ್ಸಿಗೆ ಪ್ರತೀಕವಾದರೆ ಕೆಳಗಿರುವ ಸೂತ್ರ ಕಾಣದೇ ಸಾಧಿಸುವ ಸಿದ್ಧಿಗೆ ಸಂಕೇತವಾಗುತ್ತದೆ. ಸೂತ್ರ ಪಟಗಳ ಸಾವಯವ ಸಂಬಂಧ ಬೆಳೆದು ನಿಲ್ಲುವುದು ಹಾರುವ ಕ್ರಿಯೆಯಲ್ಲಿ ಮಾತ್ರ. ಹೀಗೆ ಇಲ್ಲಿ ಮೂರು ತತ್ತ್ವಗಳಿವೆ. ಸಾಧನೆ–ಸಾಧಕ–ಸಿದ್ಧಿ ಈ ಮೂರು ತತ್ತ್ವಗಳಲ್ಲಿ ಒಂದಕ್ಕೊಂದು ಮೇಲಾಗಲಿ, ಒಂದನ್ನೊಂದು ಬಿಟ್ಟಾಗಲಿ ಇರಲಾರವು. 'ಮಣ್ಣು ಮರನನುಳಿದು ಹಣ್ಣು ರುಚಿಯುಂಟೆ?' ಎನ್ನುವ ಮಾತಂತೂ ತುಂಬಾ ಪಕ್ವವಾಗಿದೆ. ಹೀಗೆ ಪ್ರಭುವಿನ ವಿನೋದ ರೀತಿಯ ಈ ತರ್ಕಕ್ಕೆ ಚೆನ್ನಬಸವಣ್ಣ ತಾತ್ತ್ವಿಕ ನೆಲೆಗಟ್ಟು ತೊಡಿಸುತ್ತಾನೆ. ಚೆನ್ನಬಸವಣ್ಣ ಈ ವಚನದ ಕೊನೆಗೆ ಹೇಳುವ ಮಾತಂತೂ ವಚನ ಚಳುವಳಿಯ ಸಂದರ್ಭದಲ್ಲಿ ತುಂಬಾ ಮುಖ್ಯವೆನಿಸುತ್ತದೆ: "ಕೂಡಲ ಚೆನ್ನಸಂಗನ ಶರಣರೊಳಗಿರ್ದು ಸೀಮೆಯ ಮೀರಿದ ನಿಸ್ಸೀಮನು ಸಿದ್ಧರಾಮಯ್ಯನೆಂಬ ಮಾತು ಅಂತಿರಲಯ್ಯಾ ಪ್ರಭುವೆ." ಈ ಮಾತು ಮೇಲು–ಕೀಳುಗಳನ್ನು ಬೆಳೆಸದಂತೆ, ಹಿರಿಯ–ಕಿರಿಯ ಎಂಬುದನ್ನು ಭಾವಿಸದಂತೆ ಮಾಡುತ್ತದೆ. ಎಲ್ಲ ಶರಣರೊಂದಿಗೆ ಸಿದ್ಧರಾಮನೂ ಇರುವಾಗ ಆತ ಸೀಮೆ ಮೀರಿದ ನಿಸ್ಸೀಮನ್ಹೇಗೆ ಆಗುತ್ತಾನೆ? ಎಂಬುದು ಚೆನ್ನಬಸವಣ್ಣನ ಪ್ರಶ್ನೆಯಾದರೂ ಆತ ಅದನ್ನು ಹಾಗೆ ಕೇಳಲಾರ. 'ಆ ಮಾತು ಅಂತಿರಲಿ' ಎಂದು ಹೇಳುವುದರ ಮೂಲಕ ನಿಸ್ಸೀಮೆಯ ಪದದ ಅರ್ಥ ವ್ಯಾಪ್ತಿಯನ್ನೇ ನಿರ್ಲಕ್ಷಿಸುತ್ತಾನೆ. ಸ್ಪಷ್ಟ ಮಾತುಗಳ ಮೂಲಕ ಸಮಾನತೆಯ ತತ್ತ್ವ ಸಾರುತ್ತಾನೆ.

ನುಲಿಯ ಚಂದಯ್ಯನ ಪ್ರಸಂಗದಲ್ಲೂ ಹೀಗೆ ಆಗುತ್ತದೆ. ಲಿಂಗವನ್ನು ನಿರ್ಲಕ್ಷಿಸಿದ ಚಂದಯ್ಯನಿಗೆ ಲಿಂಗದ ನಿಜವ ತಿಳಿಸಿಕೊಡೆಂದು ಪ್ರಭು ಬಸವಣ್ಣನಿಗೆ ಹೇಳಿದಾಗ, 'ನಾನೇನು ಬಲ್ಲೆನು ನನಗೆ ನಿಜವ ತಿಳುಹಿದಾತ ಚೆನ್ನಬಸವಣ್ಣ, ಆದ್ದರಿಂದ ಆತನನ್ನೇ ಕೇಳಿ' ಎಂದಾಗ ಚೆನ್ನಬಸವಣ್ಣ ಮತ್ತೆ ಈ ಲಿಂಗದ ಮಹತ್ವವನ್ನು ತಾತ್ತ್ವಿಕ ನೆಲೆಯಲ್ಲಿ ಕಟ್ಟಿ ಕೊಡುತ್ತಾನೆ.

ಶ್ರೀ ಗುರುಕರಣವೆ ಲಿಂಗ. ಲಿಂಗದ ನಿಜವೆ ಜಂಗಮ. ಇಂತು ಇದು ಬಹಿರಂಗದ ವರ್ತನೆ. ಇನ್ನು ಅಂತರಂಗದ ಸುಜ್ಞಾನವೆ ಜಂಗಮ. ಆ ಜಂಗಮದ ನಡೆವ ಸತ್‌ಕ್ರಿಯೆ ಲಿಂಗ. ಆ ಉಭಯದ ಏಕತ್ವ ಸಿದ್ಧಿಯೆ ಗುರು. ಇದು ಕಾರಣ ಅಂಗತ್ರಯದಲ್ಲಿ ಲಿಂಗತ್ರಯ ಸಂಬಂಧವಾದಲ್ಲಿ ಜಂಗಮ ದಾಸೋಹ ಎಂದು ಸ್ಪಷ್ಟಪಡಿಸಿದ ಚೆನ್ನಬಸವಣ್ಣ ಮುಂದೆ ತನ್ನ ವಚನದಲ್ಲಿ ಅನೇಕ ಉಪಪ್ರಶ್ನೆಗಳನ್ನೆತ್ತುವುದರ ಮೂಲಕ ಈ ವಿಚಾರಕ್ಕೆ ತಾತ್ತ್ವಿಕ ಬುನಾದಿ ಹಾಕುತ್ತಾನೆ.

"ಜಂಗಮವೆ ಪರವೆಂದರಿದಡೇನು? ಆ ಜಂಗಮದಂಗವಲ್ಲವೆ ಲಿಂಗ? ಆ ಲಿಂಗ ಚೈತನ್ಯದರಿವೆಲ್ಲವು ಜಂಗಮವಲ್ಲವೆ? ಅಂಗವಿಲ್ಲದ ಜೀವ, ಆತ್ಮನಿಲ್ಲದಂಗಕ್ಕೆ ಸರ್ವಭೋಗದ ಸುಖ ಉಂಟೆ? ಮಣ್ಣಿಲ್ಲದ ಮರನುಂಟೆ? ಮರನಿಲ್ಲದ ಹಣ್ಣುಂಟೆ? ಹಣ್ಣಿಲ್ಲದ ಸ್ವಾದ ಉಂಟೆ? ಹೀಂಗರಿವುದಕ್ಕೆ ಕ್ರಮ. ಅಂಗವೆ ಮಣ್ಣು, ಲಿಂಗವೆ ಮರನು, ಫಲವೆ ಜಂಗಮ, ರುಚಿಯೆ ಪ್ರಸಾದ"[೮] ಎಂದು ವಿವರಿಸುತ್ತ ಗುರು–ಲಿಂಗ–ಜಂಗಮದ ಒಟ್ಟು ಸ್ವರೂಪವನ್ನು ಅದರ ಮೂಲ ನೆಲೆಗಳಲ್ಲಿ ಗುರುತಿಸಿ ಕಂಡರಿಸುತ್ತಾನೆ.

ಚೆನ್ನಬಸವಣ್ಣನ ಈ ಅನುಭಾವದ ನುಡಿಗಳನ್ನು ಕೇಳಿ ನುಲಿಯ ಚಂದಯ್ಯ ತನ್ನ ಇಷ್ಟಲಿಂಗವನ್ನು ಧರಿಸಿಕೊಂಡು ಲಿಂಗಕ್ಕೆ ವಚನಕಾರರು ಕೊಟ್ಟಿರುವ ತಾತ್ತ್ವಿಕ ಸ್ವರೂಪವನ್ನು ಅರ್ಥೈಸಿಕೊಳ್ಳುತ್ತಾನೆ. ಅಂತೆಯೇ ಆತ 'ಎನ್ನ ಲಿಂಗದ ಸತ್‌ಕ್ರಿಯೆ ಚೆನ್ನಬಸವಣ್ಣ' ಎಂದು ಹೇಳುತ್ತಾನೆ.

ಚೆನ್ನಬಸವಣ್ಣ ಹೇಳುವ ಎಲ್ಲ ವಿಚಾರಗಳನ್ನು ಇಂದು ಒಪ್ಪದೇ ಇರಬಹುದು. ಆದರೆ ವಚನ ಚಳುವಳಿಯ ಸಂದರ್ಭದಲ್ಲಿ ತಾತ್ತ್ವಿಕ ನೆಲೆಗಟ್ಟಿನ ಹಿನ್ನೆಲೆಯಲ್ಲಿ ಮೂಡಿಬಂದ ಅವುಗಳನ್ನು ತಿರಸ್ಕರಿಸುವುದು ಸುಲಭವಂತೂ ಖಂಡಿತಾ ಅಲ್ಲ. ಅಲ್ಲಮಪ್ರಭು–ಬಸವಣ್ಣ–ಸಿದ್ಧರಾಮ ಮುಂತಾದ ಅನೇಕ ವಚನಕಾರರು ಚೆನ್ನಬಸವಣ್ಣನ ವ್ಯಕ್ತಿತ್ವವನ್ನು ತಿಳಿದುಕೊಂಡವರಾಗಿದ್ದರು. ಅಂತೆಯೇ ಅವರು ಚೆನ್ನಬಸವಣ್ಣನನ್ನು ತಮಗಿಂತ ಕಿರಿಯವ ಎಂದು ಎಂದೂ ಭಾವಿಸಿರಲಿಲ್ಲ. ಪ್ರತಿಯೊಬ್ಬ ವಚನಕಾರರೂ ಚೆನ್ನಬಸವಣ್ಣನ ಅಗಾಧ ಪಾಂಡಿತ್ಯಕ್ಕೆ, ಅನುಪಮ ಜ್ಞಾನಕ್ಕೆ ತಲೆಬಾಗಿದ್ದಾರೆ. ಇಂತಹ ಸಮಾನತೆಯಿದ್ದಾಗ, ಮುಕ್ತ ವಾತಾವರಣವಿದ್ದಾಗ ಜ್ಞಾನದ ಪ್ರಸಾರ ಸಹಜ ಸಾಧ್ಯವೆಂಬುದನ್ನು ವಚನ ಚಳುವಳಿ ತೋರಿಸಿಕೊಟ್ಟಿದೆ.

"ಅಂಗವೆಂಬ ಸಂಸಾರದೊಳಗೆ ಸವೆದವರೆಲ್ಲರೂ ಶಿವನನರಿವರೆ? ಮನವೆಂಬ ಸಂಕಲ್ಪದ ಕುಣಿಗೆ ಒಳಗಾದವರೆಲ್ಲರೂ ಮಾಯದ ಹೊಡೆಗಿಚ್ಚ ಗೆಲಬಲ್ಲರೆ? ಗುಹೇಶ್ವರಲಿಂಗದಲ್ಲಿ ಸರ್ವಸಂದೇಹವ ಕಳೆದಿಪ್ಪ ಚೆನ್ನಬಸವಣ್ಣಂಗೆ ನಮೋನಮೋ ಎಂಬೆ!"[೯]

"ಇಂದ್ರ ವ್ಯಾಸ ಉಪೇಂದ್ರನ ಓಲಗ ಚಂದ್ರಮೌಳಯನರಿಯದೆ ಹೋಯಿತ್ತು. ಬಂಧಮೋಕ್ಷದ ಭವಬಂಧನ ಬಿಡದನ್ನಕ್ಕರ ಮತ್ತೊಂದರ ಸುಖ ಜನಿಸಿತ್ತಲ್ಲಾ! ಕೂಡಲಸಂಗಮದೇವಾ, ಚೆನ್ನಬಸವಣ್ಣನ ಸನ್ನಿಧಿಯಿಂದಲಾನು ಬದುಕಿದೆನು."[೧೦]

"ಶುದ್ಧವನರಿದೆ ಚೆನ್ನಬಸವಣ್ಣಾ ನಿಮ್ಮಿಂದ. ಸಿದ್ಧವನರಿದೆ ಚೆನ್ನಬಸವಣ್ಣಾ ನಿಮ್ಮಿಂದ. ಪ್ರಸಿದ್ಧವನರಿದೆ ಚೆನ್ನಬಸವಣ್ಣಾ ನಿಮ್ಮಿಂದ. ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ, ಚೆನ್ನಬಸವಣ್ಣಾ ಗುರುವಾಗಿ ಬಂದು, ಎನ್ನ ಜನ್ಮ ಕರ್ಮವ ನಿವೃತ್ತಿಯ ಮಾಡಿದನಯ್ಯಾ."[೧೧]

ಈ ಮೂರೂ ವಚನಗಳಲ್ಲಿ ಅಲ್ಲಮಪ್ರಭು, ಬಸವಣ್ಣ, ಸಿದ್ಧರಾಮ ಇವರು ಚೆನ್ನಬಸವಣ್ಣನ ವ್ಯಕ್ತಿತ್ವದ ಬಗೆಗೆ, ಆತನ ಸಾಧನೆಯ ಬಗೆಗೆ ಕೊಂಡಾಡಿದ್ದಾರೆ. 'ಕಿರಿಯರಾದಡೇನು? ಹಿರಿಯರಾದಡೇನು? ಅರಿವಿಂಗೆ ಹಿರಿದು ಕಿರಿದುಂಟೆ?', ಎಂಬು ಕೇಳಿದ ಪ್ರಭು, ಚೆನ್ನಬಸವಣ್ಣನೊಬ್ಬನನ್ನೇ ಮಹಾಜ್ಞಾನಿಯೆಂದು ಕರೆದಿದ್ದಾನೆ.

"ಚೆನ್ನಬಸವನನ್ನು ಬರಿಯ ಸಾಹಿತ್ಯದ ದೃಷ್ಟಿಯಿಂದ ನೋಡಿ ವಿಮರ್ಶಿಸುವುದು ಅವನಿಗೆ ಅನ್ಯಾಯ ಮಾಡಿದಂತೆ. ಅವನಲ್ಲಿ ಅಂತಹ ಕಾವ್ಯವಿಲ್ಲವೆಂಬ ಮಾತೇನೋ ನಿಜ. ಆದರೆ ಅವನ ಒಂದೂವರೆ ಸಹಸ್ರದಷ್ಟು ವಚನಗಳು ನಿಜವಾಗಿಯೂ ವಿಷಯಗಳ ಗಣಿ. ತನ್ನ ಕಾಲದ ಸಾಮಾಜಿಕ ವ್ಯವಹಾರಗಳು, ಮತಗಳು, ಪ್ರಾದೇಶಿಕ ಆಚಾರಗಳು ಇವುಗಳ ಚಿತ್ರ ಅಲ್ಲಿ ದೊರಕುತ್ತದೆ. ವಚನಕಾರರು ಸಾಮಾಜಿಕವಾಗಿ ಏನು ಸಾಧಿಸಿದರು ಎಂಬುದರ ವಿಚಾರಗಳನ್ನು ತಿಳಿಯಬಯಸುವವರು ಅವನನ್ನು ಎಚ್ಚರಿಕೆಯಿಂದ ಅಭ್ಯಾಸ ಮಾಡಬೇಕು" ಎನ್ನುವ ಡಾ॥ ಎಂ. ಚಿದಾನಂದಮೂರ್ತಿಯರ ಮಾತುಗಳಲ್ಲಿ[೧೨] ಸತ್ಯವಿದೆ. ವಚನ ಚಳುವಳಿಯನ್ನು ಕೇವಲ ಸಾಹಿತ್ಯಕ ದೃಷ್ಟಿಯಿಂದ ಮಾತ್ರ ನೋಡದೆ, ಅದರ ಇತರ ಮಗ್ಗುಲುಗಳನ್ನು ಸೈದ್ಧಾಂತಿಕ ಹಿನ್ನೆಲೆಯಲ್ಲಿ ನೋಡಿದಾಗ ಈ ಮಾತಿನ ಮಹತ್ವ ಸ್ಪಷ್ಟವಾಗುತ್ತದೆ. ಸಾಹಿತ್ಯದ ದೃಷ್ಟಿಯಿಂದ ಚೆನ್ನಬಸವಣ್ಣನಲ್ಲಿ ಅಂತಹ ಸೂಕ್ಷ್ಮತೆಗಳಿಲ್ಲವೆಂದಾಕ್ಷಣ ಆತನ ವ್ಯಕ್ತಿತ್ವಕ್ಕೆ ಖಂಡಿತಾ ಕುಂದಬಾರದು. ಒಂದು ವ್ಯಕ್ತಿತ್ವಕ್ಕೆ ಸಾಹಿತ್ಯಕ ಮುಖವಿರುವಂತೆ, ತಾತ್ತ್ವಿಕ ಮುಖವೂ ಬಹಳ ಮಹತ್ವದ್ದೆಂದು ತೋರಿಸಿದ ವಚನಕಾರ ಚೆನ್ನಬಸವಣ್ಣ.

ಸಾಹಿತಿಗೆ ಸೌಂದರ್ಯವೇ ಸತ್ಯವಾದರೆ, ತಾತ್ತ್ವಿಕ ಬದ್ಧತೆ ಉಳ್ಳವನಿಗೆ ಸತ್ಯದಲ್ಲಿಯೇ ಸೌಂದರ್ಯ ಕಾಣಿಸುತ್ತದೆ. ಹಾಗೆ ಸತ್ಯವನ್ನು ಮಾತ್ರ ಸೌಂದರ್ಯವೆಂದು ತಿಳಿದುಕೊಂಡ ಚೆನ್ನಬಸವಣ್ಣ ಬದುಕಿನ ಪ್ರತಿಯೊಂದು ವಿಷಯವನ್ನು ಅನುಭವದ ಮೂಲಕ ಪರಿಶೋಧಿಸುತ್ತಾ ಅದಕ್ಕೊಂದು ತಾತ್ತ್ವಿಕ ರೂಪ ನಿರ್ಮಿಸಿ ಕೊಟ್ಟದ್ದು, ವಚನ ಚಳುವಳಿಗೆ ಆತನಿಂದ ಸಂದ ಮಹತ್ತರವಾದ ಕಾಣಿಕೆಯೆಂದು ತಿಳಿಯಬಹುದಾಗಿದೆ. ❒

---

೧. ಸಂ. ಶಿ. ಭೂಸನೂರಮಠ (ಸಂ.) : ಪ್ರಭುದೇವರ ಶೂನ್ಯಸಂಪಾದನೆ, ಪು.೧೮೩, ವ.೬೪
೨. ಅದೇ, ಪು.೧೮೪, ವ.೬೫
೩. ಅದೇ, ಪು.೧೮೪, ವ.೬೬
೪. ಅದೇ, ವ.೬೭
೫. ಅದೇ, ಪು.೧೮೬, ವ.೭೭
೬. ಅದೇ, ಪು.೨೧೩, ವ.೧೧
೭. ಅದೇ, ವ. ೧೩
೮. ಅದೇ, ಪು.೩೦೩, ವ.೪೭
೯. ಅದೇ, ಪು.೭೯, ವ.೫೨
೧೦. ಅದೇ, ಪು. ೨೫೨, ವ. ೩೭
೧೧. ಅದೇ, ಪು. ೨೨೬, ವ. ೫೪
೧೨. ವಚನ ಸಾಹಿತ್ಯ, ಪು ೯೫

ಲೇಖಕರ ವಿಳಾಸ

೧. **ಟಿ.ಎನ್. ಮಲ್ಲಪ್ಪ**

೨. **ಎಂ. ಎನ್. ಶ್ರೀನಿವಾಸಮೂರ್ತಿ**

೩. **ಡಾ. ಆರ್.ಸಿ. ಹಿರೇಮಠ**

೪. **ಡಾ. ಬಿ.ವ್ಹಿ. ಮಲ್ಲಾಪುರ**
ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

೫. **ಪ್ರೊ. ಟಿ.ಎಸ್. ಪಾಟೀಲ**
ಪ್ರಾಧ್ಯಾಪಕರು
ಆರ್.ಎಲ್. ಕಾನೂನು ಕಾಲೇಜು
ದಾವಣಗೆರೆ, ಚಿತ್ರದುರ್ಗ ಜಿಲ್ಲೆ

೬. **ಡಾ. ಬಿ.ನಂ. ಚಂದ್ರಯ್ಯ**
ಪ್ರಾಧ್ಯಾಪಕರು
ಕನ್ನಡ ವಿಭಾಗ, ಯುವರಾಜ ಕಾಲೇಜು
ಮೈಸೂರು

೭. **ಡಾ. ಸಿದ್ಧಯ್ಯ ಪುರಾಣಿಕ್**

೮. ಡಾ. ಎಸ್. ವಿದ್ಯಾಶಂಕರ್
ನಂ. ೧೩೮, ೭ನೇ ಸಿ ಮುಖ್ಯರಸ್ತೆ
ವಿಜಯನಗರ ಪೂರ್ವ
ಬೆಂಗಳೂರು – ೫೬೦ ೦೪೦
ದೂ.: ೨೩೩೦ ೨೪೧೭
ಮೊ: ೯೪೮೬೦ ೫೦೦೦೧

೯. **ಹೆಚ್. ಗಂಗಾಧರನ್**
ಪ್ರಾಚಾರ್ಯರು
ಜೆ.ಎಸ್.ಎಸ್. ಕಾನೂನು ಕಾಲೇಜು
ಮೈಸೂರು

೧೦. **ಡಾ. ಅನ್ನದಾನಯ್ಯ ಪುರಾಣಿಕ್**

೧೧. **ಡಾ. ಪರಮೇಶ್ವರಯ್ಯ ಸೊಪ್ಪಿಮಠ**

೧೨. **ಡಾ. ಎಚ್.ಎಂ. ಚೆನ್ನಯ್ಯ**

೧೩. **ಡಾ. ಟಿ.ಆರ್. ಚಂದ್ರಶೇಖರ್**
ಪ್ರಾಧ್ಯಾಪಕರು
ಡೀನ್ ಸಮಾಜವಿಜ್ಞಾನ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

೧೪. **ಡಾ. ಎಚ್. ತಿಪ್ಪೇರುದ್ರಸ್ವಾಮಿ**

೧೫. **ಡಾ. ಮಳಲಿ ವಸಂತಕುಮಾರ್**

೧೬. **ಡಾ. ಪಿ.ಎಸ್. ಶಂಕರ್**

೧೭. **ರುದ್ರೇಶ ಗಂಗಾಧರ ಕಿತ್ತೂರ**
ಮುದ್ದೇಬಿಹಾಳ ಅಂಚೆ
ವಿಜಾಪುರ ಜಿಲ್ಲೆ

೧೮. **ರುದ್ರೇಶ ಗಂಗಾಧರ ಕಿತ್ತೂರ**
ಮುದ್ದೇಬಿಹಾಳ ಅಂಚೆ
ವಿಜಾಪುರ ಜಿಲ್ಲೆ

೧೯. **ಡಾ. ಜಗದಾಂಬಾ ಮಲ್ಲೇದೇವರು**
ಕನ್ನಡ ಅಧ್ಯಾಪಕಿ
ಜೆ.ಎಸ್.ಎಸ್. ಮಹಿಳಾ ಕಾಲೇಜು
ನಂಜನಗೂಡು, ಮೈಸೂರು ಜಿಲ್ಲೆ

೨೦. **ಪ್ರೊ. ಜಿ.ಎನ್. ರೇಚಣ್ಣ**
ಪ್ರಾಧ್ಯಾಪಕರು, ಕನ್ನಡ ವಿಭಾಗ
ಯುವರಾಜ ಕಾಲೇಜು
ಮೈಸೂರು



ಗುಲಬರ್ಗಾ ವಿಶ್ವವಿದ್ಯಾಲಯವು ಕಳೆದ ಮೂರು ದಶಕಗಳಿಂದ ಬೋಧನೆ, ಸಂಶೋಧನೆ ಮತ್ತು ಪ್ರಕಟಣೆಗಳ ಮೂಲಕ ಗಮನ ಸೆಳೆದಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ, ಬೋಧನೆ ಮತ್ತು ಸಂಶೋಧನೆ. ಇವು ಆಕರಗೊಳ್ಳುವುದು ಪ್ರಕಟಣೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಅಪೂರ್ವ ಪ್ರಕಟಣೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆಯುತ್ತಿದೆ.

ಕರ್ನಾಟಕ ಸರಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕರ್ನಾಟಕ ಸಂಸ್ಕೃತಿ, ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿವಿಧ ಬಗೆಯ ಮಹತ್ವದ ಯೋಜನೆಗಳನ್ನು ಹಮ್ಮಿಕೊಂಡಿದೆ. ನಮ್ಮ ವಿಶ್ವವಿದ್ಯಾಲಯಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿವಿಧ ಯೋಜನೆಗಳಿಗೆ ಅನುದಾನವನ್ನು ನೀಡಿದೆ. ಇದರ ಅಂಗವಾಗಿ ಕನ್ನಡ ಅಧ್ಯಯನ ಸಂಸ್ಥೆಯು ಕನ್ನಡ ಭಾಷಾಭಿವೃದ್ಧಿಯ ಯೋಜನೆಯ ಅಡಿಯಲ್ಲಿ **ಶರಣ ಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣಾ ಯೋಜನೆ**ಯನ್ನು ಕೈಗೆತ್ತಿಗೊಂಡು ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ, ಚೆನ್ನಬಸವಣ್ಣ, ಶೂನ್ಯಸಂಪಾದನೆ, ವಚನಕಾವ್ಯ ಚಿಂತನೆ, ಜಾಗತಿಕ ಚಿಂತಕರು ಮತ್ತು ಬಸವಣ್ಣ, ಸಿದ್ಧರಾಮ, ವಚನಕಾರ್ತಿಯರು, ದಲಿತ ವಚನಕಾರರು, ಇತರ ವಚನಕಾರರು ಹಾಗೂ ವಚನ: ಜಾನಪದ ಹೀಗೆ ಒಟ್ಟು ಹನ್ನೆರಡು ಸಂಪುಟಗಳನ್ನು ಹೊರತರುತ್ತಿದೆ.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರು ಬಹು ಶ್ರಮವಹಿಸಿ **ಚೆನ್ನಬಸವಣ್ಣ** ಸಂಪುಟವನ್ನು ಸಿದ್ಧಪಡಿಸಿದ್ದಾರೆ. ಈ ಸಂಪುಟದ ಲೇಖನಗಳು ಶತಮಾನದ ವಿಮರ್ಶಾ ಚಿಂತನೆಯನ್ನು ಸಾದರ ಪಡಿಸುತ್ತಲೆ ಹೊಸ ಆವಿಷ್ಕಾರ ಮತ್ತು ಚಿಂತನೆಗಳಿಗೆ ಉತ್ತಮ ಹಾದಿಯನ್ನು ನಿರ್ಮಿಸಿಕೊಡುತ್ತಿವೆ. ಈ ಸಂಪುಟವನ್ನು ಶ್ರಮವಹಿಸಿ ಸಿದ್ಧಪಡಿಸಿದ ಸಂಪಾದಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರಿಗೂ ಯೋಜನೆಯ ಪ್ರಧಾನ ಸಂಚಾಲಕರಾದ ಡಾ. ಎಚ್.ಟಿ. ಪೋತೆ ಅವರಿಗೂ ಕನ್ನಡ ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಜಯರಾಮರಾಜೇ ಅರಸ್ ಅವರಿಗೂ ಹಾಗೂ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರಿಗೂ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ.ಟಿ. ಪುಟ್ಟಯ್ಯ



ಬೆಲೆ : ರೂ. ೨೦೦/-

ISBN 81921O363-3
9788192103631

ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ - ೫೮೫ ೧೦೬